

ಬಹುಮುಖಿ

ಡಿ.ಎಸ್. ನಾಗಭೂಷಣ



ಬಹುಮುಖ

(ರಾಜಕೀಯ–ಸಾಹಿತ್ಯಿಕ–ಸಾಂಸ್ಕೃತಿಕ ಬರಹಗಳ ಸಂಗ್ರಹ)

ಡಿ.ಎಸ್. ನಾಗಭೂಷಣ

ರೂಪ
ಪ್ರಕಾಶನ
ಮೈಸೂರು

Bahumukha

Political and cultural write ups, notes and dialogues

by...: D.S.Nagabushana
HIG-5, 'Nudi', KHB Colony, Kalahalli badavane
Vinobha Nagar, Shimoga-577204 Ph: 94492 42284

Published by : Roopa Prakashana, No. 2406,2407/K-1
1st Cross, Hosabandikeri K.R.Mohalla, Mysore - 570 004
Mob: 93422 74331 roopaprakashana@gmail.com

Inner Pages: Maplitho
Size: 1/8th Demmy
First Impression : 2018
Pages: 352+iv = 356 Price : ₹ 300

ISBN: 978-93-81885-52-9

ಬಹುಮುಖ

ಮೊದಲನೇ ಮುದ್ರಣ: ೨೦೧೮
ಪುಟಗಳು: ೩೫೨+iv= ೩೫೬
ಬೆಲೆ: ₹ ೩೦೦
ಮುಖಪುಟ ವಿನ್ಯಾಸ : ಶ್ರೀಕಂಠಮೂರ್ತಿ
ಪ್ರಕಾಶನ: ರೂಪ ಪ್ರಕಾಶನ
ನಂ.೨೪೦೬, ೨೪೦೭/ಕೆ-೧, ೧ನೇ ಕ್ರಾಸ್, ಹೊಸಬಂಡಿಕೇರಿ
ಕೆ.ಆರ್.ಮೊಹಲ್ಲಾ, ಮೈಸೂರು - ೫೭೦ ೦೦೪
ಮೊಬೈಲ್: ೯೩೪೨೨ ೭೪೩೩೧
ಮುದ್ರಣ: ಧರಣಿ ಪ್ರಿಂಟರ್ಸ್, ಬೆಂಗಳೂರು.

ಅರ್ಪಣೆ

ನನ್ನೂರು
ತ್ಯಾಮಗೊಂಡ್ಲುವಿನ
ನೆಲ–ನೀರು–ಗಾಳಿಗಳಿಗೆ

ಲೇಖಕರ ಮಾತು

ಇದು ನನ್ನ ಹೊಸ ಲೇಖನಗಳ ಸಂಗ್ರಹ. ಪ್ರವಾಸ ಕಥನ ಮತ್ತು ಪ್ರತಿಕ್ರಿಯೆಗಳನ್ನು ಬಿಟ್ಟರೆ ಬಹುತೇಕ ಮಿಕ್ಕೆಲ್ಲವೂ ಕಳೆದ ಒಂದು ವರ್ಷದಲ್ಲಿ ಬರೆದವು. ಮೊದಲ ಭಾಗದ ರಾಜಕೀಯ ಲೇಖನಗಳಲ್ಲಿ ಬಹುಪಾಲನ್ನು 'ವಿಜಯ ಕರ್ನಾಟಕ'ಕ್ಕಾಗಿ ಬರೆದವು. ಪತ್ರಿಕೆಗಳಿಗೆ ಬರೆಯುವುದು ಇಕ್ಕಟ್ಟಿನ ಕೆಲಸವೆನ್ನಿಸಿದಾಗ 'ಫೇಸ್‌ಬುಕ್' ಪ್ರವೇಶಿಸಿ ಅಲ್ಲೊಂದಿಷ್ಟು ಲೇಖನಗಳನ್ನು ಬರೆದೆ. ನಂತರ ಅದೂ ಏಕತಾನತೆಯ ಪ್ರತಿಸ್ಪಂದನದ ಜಾಗ ಎನ್ನಿಸಿ ಅಲ್ಲಿಂದಲೂ ನಿವೃತ್ತಿಯಾಗಿ ಈಗ ನನ್ನದೇ ಪತ್ರಿಕೆ 'ಹೊಸ ಮನುಷ್ಯ' ಮಾಸಿಕಕ್ಕೆ ಮಾತ್ರ ಬರೆಯುವುದಕ್ಕೆ ಸೀಮಿತನಾಗಿದ್ದೇನೆ. ಆದರೆ ಅಲ್ಲಿನ ಬರಹಗಳನ್ನೇನೂ ಈ ಸಂಗ್ರಹದಲ್ಲಿ ಸೇರಿಸಿಲ್ಲ. ನನ್ನ ಈ ಹಿಂದಿನ 'ಕಾಲಕ್ರಮ' ಮತ್ತು 'ನೀರೆಲ್ಲವೂ ತೀರ್ಥ' ಸಂಪುಟಗಳಂತೆ ಅವು ಪ್ರತ್ಯೇಕ ಸಂಪುಟಗಳಲ್ಲಿ ಸೇರಲಿವೆ.

ನನ್ನ ಇತ್ತೀಚಿನ ಎಲ್ಲ ಪುಸ್ತಕಗಳಂತೆ ಇದೂ ನನ್ನ ಎಲ್ಲ ಆಸಕ್ತಿಗಳ ವೇದಿಕೆಯಾಗಿದೆ. ಒಂದೇ ಹಲವಾಗುವುದು ಮತ್ತು ಅದೇ ಲೋಕ ಸೃಷ್ಟಿಯ ಚಮತ್ಕಾರವು ಎಂದು ನಂಬಿರುವ ನಾನು ನನ್ನ ಹಲವು ಆಸಕ್ತಿಗಳನ್ನು ಪ್ರತಿಬಿಂಬಿಸುವ ಎಲ್ಲ ಲೇಖನಗಳನ್ನೂ, ನಮ್ಮ ಎಲ್ಲ ಅಂಗಗಳೂ ಒಂದೇ ದೇಹವಾಗಿರುವಂತೆ; ಇಲ್ಲಿ ಒಗ್ಗೂಡಿಸಿ ಪ್ರಸ್ತುತಪಡಿಸಿದ್ದೇನೆ. ಇವು ಒಂದೇ ಮನಸ್ಸಿನ ಹಲವು ಟಿಸಿಲುಗಳಷ್ಟೆ. ಇಲ್ಲಿರುವ ಐದೂ ಭಾಗಗಳಲ್ಲಿನ ಲೇಖನಗಳ ನಡುವೆ ಅಂತರ್‌ಸಂಬಂಧದ ಸಂಕೀರ್ಣ ಸ್ವರೂಪವನ್ನು ಓದುಗರು ಗುರುತಿಸುವಂತಾಗಲಿ ಎಂಬುದೂ ನನ್ನ ಇಚ್ಛೆ. ಇದರ ಮೂಲಕ ನನ್ನ ಒಳಗು ಇನ್ನಷ್ಟು ಶೋಧಗೊಳ್ಳುವ ಬಯಕೆ ನನ್ನದು. ಈ ಸಂಗ್ರಹದಲ್ಲಿ ಮೊದಲ ಬಾರಿಗೆ ನನ್ನ ಕುಟುಂಬದ ಅಗಲಿದ ಇಬ್ಬರು ಸದಸ್ಯರ ಬಗ್ಗೆ ಆಪ್ತವಾಗಿ ಬರೆದ ಎರಡು ಲೇಖನಗಳಿರುವುದೂ ಇದಕ್ಕೆ ಕಾರಣವಿರಬಹುದು. ಇವು ನಾನು ನನ್ನ ಸಾಮಾನ್ಯ ಸ್ವಭಾವಕ್ಕೆ ತದ್ವಿರುದ್ಧವಾಗಿ ಪೂರ್ಣ ಅಂತರ್ಮುಖಿಯಾಗಿ ಬರೆದ ಲೇಖನಗಳು.

ಸಾಹಿತ್ಯ ಪರಿಷತ್ತಿನ ಬಗ್ಗೆ ನನ್ನ ಒಲವು-ಆಸಕ್ತಿಗಳು ಅಷ್ಟಕ್ಕಷ್ಟೇ. ಆದರೆ ನನ್ನೂರು ತ್ಯಾಮಗೊಂಡ್ಲುವಿನ ಜನ ಕರೆದರೆಂದು ನಾನು ಅಲ್ಲಿನ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಬಂದೆ. ಅದೊಂದು ಖಂಡಿತ ಸಾಹಿತ್ಯಕ್ಕೆ ಸಂಬಂಧಿಸಿದ ಅನುಭವವಾಗಿರಲಿಲ್ಲ. ಬದಲಿಗೆ ಒಂದು ಬೆಚ್ಚನೆಯ ವೈಯಕ್ತಿಕ ಅನುಭವ. ಸಾಮಾನ್ಯ ಕುಟುಂಬವೊಂದರ ಹುಡುಗನಾಗಿ ಬೆಳೆದಿದ್ದ ಆ ಊರಿನ ತುಂಬ ಅಂದಿನ ಮಟ್ಟಿಗಾದರೂ ಮುಖ್ಯ ವ್ಯಕ್ತಿಯಾಗಿ ಕೊಂಬು ಕಹಳೆ ಪರಿವಾರದೊಂದಿಗೆ

'ರಥ'ವೇರಿ ಮೆರವಣಿಗೆಯಲ್ಲಿ ಒಯ್ಯಲ್ಪಡುವುದೆಂದರೆ ಬದುಕಿನ ಒಂದು ಅಪರೂಪದ ರೋಮಾಂಚನದ ಘಳಿಗೆ-ಸಂಗತಿಗಳೇ ಹೌದು. ಸಣ್ಣ ಊರುಗಳ ಜನರಿಗೆ ಮಾತ್ರ ದಕ್ಕುವ ಸೌಭಾಗ್ಯವದು. ನಮ್ಮ ಮನೆಯಿದ್ದೆಡೆಯೂ ಸೇರಿ ಮೂರ್‍ನಾಲ್ಕು ಕಡೆ ಹಿರಿಯರು ನನ್ನ ಬಳಿ ಬಂದು 'ನೀನು ಪೇಟದ ಮೇಷ್ಟ್ರು ಸೂರಾಚಾರ್ರ ಮಗನಲ್ವೇನಪ್ಪ?' ಎಂದು ಕೈ ಹಿಡಿದು ಮಾತಾಡಿಸಿದ; ಮೈಮನಗಳನ್ನೆಲ್ಲ ಆರ್ದ್ರಗೊಳಿಸಿದ ಘಳಿಗೆಗಳನ್ನು ನಾನು ಜೀವನಪೂರ್ತಿ ಮರೆಯಲಾರೆ. ಅಂದು ನಾನು ಐವತ್ತು ವರ್ಷಗಳ ನಂತರ ಊರ ಹುಡುಗನೇ ಆಗಿದ್ದೆ. ಜೊತೆಗೆ ಐವತ್ತು ವರ್ಷಗಳ 'ವಿರಹ ವೇದನೆ'ಯ ವಿಚಿತ್ರ ಸುಖ! ಅಂದು ನನ್ನ ಅಶ್ರುಧಾರೆ ನನ್ನೊಳಕ್ಕೇ ಸುರಿಯುತ್ತಿದ್ದ ಸಂಕಟ-ಸಂಭ್ರಮಗಳ ಅನುಭವವದು. ಅಂದಿನ ಸಹಜ ಸಂಭ್ರಮದ ಜೊತೆಗೆ ಅಲ್ಲಿ ಆಗ ನನ್ನ ತಂದೆ-ತಾಯಿ ಇರಬಾರದಿತ್ತೇ ಎಂಬ ಸಂಕಟ. ಇಂತಹ ಈ ಸಾಹಿತ್ಯ ಸಮ್ಮೇಳನವೇ ನೆಪವಾಗಿ ನಾನು ಬರೆದ ಎರಡು ಬರಹಗಳು ಮತ್ತು ನೀಡಿದ ಒಂದು ಸಂದರ್ಶನ ಇಲ್ಲಿವೆ. ಹಾಗಾಗಿ, ಸಹಜವೆಂಬಂತೆ ನನ್ನ ಈ ಪುಸ್ತಕ ನನ್ನೂರು ತ್ಯಾಮಗೊಂಡ್ಲುವಿನ ಮಣ್ಣು-ನೀರು-ಗಾಳಿಗಳಿಗೆ ಅರ್ಪಿತವಾಗಿದೆ.

ಮಿಕ್ಕ ಬರಹಗಳ ಬಗ್ಗೆ ಹೇಳಲು ಹೆಚ್ಚೇನೂ ಇಲ್ಲ. ಪೇಜಾವರ ಶ್ರೀಗಳಿಗೆ ಸಂಬಂಧಿಸಿದ ಎರಡು ಬರಹಗಳ ಬಗ್ಗೆ ಎರಡು ಮಾತು ಹೇಳಬೇಕು. ಈ ಲೇಖನವೊಂದರಲ್ಲಿ ಚರ್ಚಿಸಲಾಗಿರುವ ಅವರೊಡನೆಯ ಸಂದರ್ಶನದ ಕೆಲವು ಸಂಗತಿಗಳು ಮತ್ತು ಇಫ್ತಾರ್ ಕೂಟದ ಸಂಬಂಧವಾಗಿ ಅವರ ಮೇಲೆ ವಾಗ್ದಾಳಿ ಮಾಡಿದ ಮಾಧ್ವ ಶ್ರೇಷ್ಠರೊಬ್ಬರ ವಾದದಲ್ಲಿನ ಹಲವು ಸಂಗತಿಗಳು, ಉಡುಪಿ ಅಷ್ಟಮಠಗಳಲ್ಲಿ ಒಂದಾಗಿರುವ ಶಿರೂರು ಮಠದ ಸ್ವಾಮಿಯೊಬ್ಬರ 'ಕೊಲೆ'ಯೆಂದು ಕೆಲವು ವಲಯಗಳಲ್ಲಿ ನಂಬಲಾಗಿರುವ ಸಾವಿನ ಸಂದರ್ಭದಲ್ಲಿ ಹೊರಬಿದ್ದ ಸಂಗತಿಗಳಿಂದೆಷ್ಟು ಹಾಸ್ಯಾಸ್ಪದವಾಗಿ ಕಾಣತೊಡಗಿವೆ ಎಂಬುದನ್ನು ಓದುಗರು ಗಮನಿಸಬಹುದು. ನನ್ನನ್ನು ಕೆಲವರು 'ಜಗಳಗಂಟ' ಎಂದು ಕರೆದು ಆನಂದಿಸುತ್ತಾರೆ. ಅದನ್ನು ನಾನೂ ಆನಂದಿಸುತ್ತೇನೆ. ಏಕೆಂದು ಇಲ್ಲಿರುವ ಎರಡು ಮೂರು ಸಂವಾದ ಮತ್ತು ಪತ್ರಗಳನ್ನು ಓದಿದರೆ ಗೊತ್ತಾಗುತ್ತದೆ.

ಇನ್ನು ಇಲ್ಲಿನ ಪ್ರತಿಕ್ರಿಯೆಗಳ ಭಾಗದ ಬಗ್ಗೆ ಹೇಳುವುದಾದರೆ, ಇವೆಲ್ಲವೂ ನನ್ನ ನೆಚ್ಚಿನ ಪತ್ರಿಕೆ 'ಪ್ರಜಾವಾಣಿ'ಗೆ ಬರೆದವು. ಕೆಲವು ಪ್ರಕಟವಾದವುಗಳು, ಕೆಲವು ಪ್ರಕಟವಾಗದವು. ಪ್ರಕಟವಾಗದವನ್ನು ಇಲ್ಲಿ ಪ್ರಕಟಿಸಲು ಒಂದು ಕಾರಣ, ಆ ಪತ್ರಿಕೆಯ ಕತ್ತಲ ಭಾಗಗಳ ಮೇಲೆ ಬೆಳಕು ಚೆಲ್ಲುವುದು. ನಮ್ಮ 'ಪ್ರಜಾವಾಣಿ' ಇನ್ನಷ್ಟು ತೆರೆದುಕೊಳ್ಳಬೇಕು ಮತ್ತು ಧೀಮಂತವಾಗಬೇಕೆಂಬುದು ನನ್ನ ಆಸೆ. ಏಕೆಂದರೆ ಸಾರ್ವಜನಿಕ ಜೀವನದಲ್ಲಿ ಸುತ್ತಲೂ ಕತ್ತಲು ಕವಿಯುತ್ತಿರುವಂತೆ ತೋರುತ್ತಿರುವ ಈ ದಿನಗಳಲ್ಲಿ 'ಪ್ರಜಾವಾಣಿ'ಯಂತಹ ಪತ್ರಿಕೆಗಳೇ ನಮಗೆ ಕೈದೀವಿಗೆಯಾಗಬಲ್ಲವು. ಈ ಕುರಿತು ನಾನು ಅದರ (ಕಾರ್ಯನಿರ್ವಾಹಕ) ಸಂಪಾದಕರೊಬ್ಬರೊಂದಿಗೆ ಮಾಡಿದ ಪತ್ರ ಜಗಳದ ಒಂದು ಝಲಕ್ ಹೀಗಿದೆ : 'ನ್ಯಾಯಾಂಗ ನೇಮಕಾತಿಗಳಿಗೂ ಅಖಿಲ ಭಾರತ ಪರೀಕ್ಷೆ ಎಂಬ ಸುದ್ದಿಯ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಕನ್ನಡಿಗರ

ಉದ್ಯೋಗಾವಕಾಶಗಳನ್ನು ಸಂಕುಚಿತಗೊಳಿಸುತ್ತಿರುವ ಪ್ರಯತ್ನಗಳ ಬಗ್ಗೆ ನೀವು (ಅಂದರೆ 'ಪ್ರಜಾವಾಣಿ') ಏನಾದರೂ ಮಾಡಿ ಎಂದು ಬರೆದರೆ ನೀವು ನನ್ನ ಅ-ಸುಖದ ಬಗ್ಗೆ ಬರೆದಿದ್ದೀರಿ. ಇದು ಅಸಭ್ಯತೆ. ಪ್ರಮುಖ ಪತ್ರಿಕೆಯೊಂದರ ಸಂಪಾದಕರಿಂದ ಇಂತಹ ಅಸಭ್ಯತೆಯನ್ನು ಯಾರೂ ನಿರೀಕ್ಷಿಸಿರಲಾರರು. ನನ್ನ ಸುಖ-ಅಸುಖಗಳ ಉಸಾಬರಿ ನಿಮಗೆ ಬೇಡ. ಕನ್ನಡದ ಒಂದು ಪ್ರಮುಖ ಪತ್ರಿಕೆಯ (ಸಹ) ಸಂಪಾದಕರಾಗಿ ಕನ್ನಡಿಗರ ಸುಖ-ಅಸುಖಗಳ ಕಡೆ ಗಮನ ಕೊಡಿ ಸಾಕು.... ನಿಮ್ಮ ಪತ್ರಿಕೆಯ ಓರ್ವ ಓದುಗನಾಗಿ ನನಗೆ ಬರೆಯಬೇಕೆನಿಸಿದ್ದನ್ನು ಬರೆದು ಕಳಿಸುವ ಸ್ವಾತಂತ್ರ್ಯ ನನಗಿದೆ ಎಂದು ನಾನು ಭಾವಿಸಿದ್ದೇನೆ. ಅದನ್ನು ಪ್ರಕಟಿಸುವುದು ಬಿಡುವುದು ನಿಮ್ಮ ಸ್ವಾತಂತ್ರ್ಯ. ಎಂದಾದರೂ ನಾನು ನನ್ನ ಲೇಖನವನ್ನು ಪ್ರಕಟಿಸಿ ಎಂದು ನಿಮಗಾದರೂ, ನಿಮ್ಮ ಸಿಬ್ಬಂದಿಗಾದರೂ ದುಂಬಾಲು ಬಿದ್ದಿದ್ದೇನೆಯೇ? ಅಥವಾ ಏಕೆ ಪ್ರಕಟಿಸಿಲ್ಲ ಎಂದು ಒಮ್ಮೆಯಾದರೂ ಕೇಳಿದ್ದೇನೆಯೇ? ಅಂತಹ ದರ್ದು ನನಗೇನಿಲ್ಲ. ನಿಮಗೆ ಪತ್ರಿಕಾ ವೃತ್ತಿಯೊಂದೇ ಬದುಕಿನ ಆಸಕ್ತಿ ಇರಬಹುದು. ಅದೃಷ್ಟವಶಾತ್ ನನಗೆ ಬೇರೆ ಕೆಲವು ಆಸಕ್ತಿಗಳೂ ಇವೆ. ನೀವಾರೂ ನನ್ನ ಬರಹಗಳನ್ನು ಪ್ರಕಟಿಸದಿದ್ದರೂ, ನನ್ನ ಬದುಕನ್ನು ಸುಖವಾಗಿ ನಡೆಸಬಲ್ಲ ಆಸಕ್ತಿಗಳು ಅವು.'

ಇಷ್ಟು ಸಾಕು ಈ ಪುಸ್ತಕದ ಬಗ್ಗೆ ನನ್ನ ಮಾತು. ನನ್ನ ಇಂತಹ ಪುಸ್ತಕಗಳನ್ನು ಹೊರತರಲೆಂದೇ ಪ್ರಕಾಶನ ಮಾಡಿರುವಂತೆ ತೋರುವ ರೂಪ ಪ್ರಕಾಶನದ ಯು.ಎಸ್. ಮಹೇಶ್‌ಗೆ ನನ್ನ ಪ್ರೀತಿಯ ನಮನಗಳು. ಇಲ್ಲಿನ ಹಲವು ಬರಹಗಳನ್ನು ಪ್ರಕಟಿಸಿದ 'ಪ್ರಜಾವಾಣಿ', 'ವಿಜಯ ಕರ್ನಾಟಕ' ಮತ್ತು 'ಉದಯವಾಣಿ' ಪತ್ರಿಕೆಗಳ ಸಂಪಾದಕೀಯ ಸಿಬ್ಬಂದಿಗೆ, ವಿಶೇಷವಾಗಿ ನನ್ನ ಬಗ್ಗೆ ಅಭಿಮಾನವಿಟ್ಟು ನನ್ನಿಂದ ಕೆಲವು ಸಾಮಯಿಕ ಲೇಖನಗಳನ್ನು ಬರೆಸಿದ 'ವಿಜಯ ಕರ್ನಾಟಕ'ದ ಕೆ. ವೆಂಕಟೇಶ್ ಅವರಿಗೆ ನನ್ನ ವಂದನೆಗಳು. ಹಾಗೇ ಈ ಪುಸ್ತಕದ ಪುಟ ವಿನ್ಯಾಸ ಮಾಡಿರುವ ಕುಮಾರಿ ಕೆ. ಅವರಿಗೂ ಮತ್ತು ರಕ್ಷಾಪುಟ ವಿನ್ಯಾಸ ಮಾಡಿರುವ ಶ್ರೀಕಂಠಮೂರ್ತಿ ಅವರಿಗೂ ನನ್ನ ಕೃತಜ್ಞತೆಗಳು. ಇನ್ನು ಪ್ರೀತಿ-ಅಭಿಮಾನಗಳಿಂದ ಈ ಪುಸ್ತಕದ ಕರಡು ತಿದ್ದಿದವರು ನನ್ನ ಕಿರಿಯ ಗೆಳೆಯ ಚಳ್ಳಕೆರೆಯ ಶ್ರೀನಿವಾಸರಾಜು. ಅವರು ಕರಡನ್ನು ಮಾತ್ರ ತಿದ್ದಿಲ್ಲ, ಕೆಲವೆಡೆ ಅವರಿಗೆ ತಪ್ಪಾಗಿ ಕಂಡ ನನ್ನ ಭಾಷಾ 'ವೈಖರಿ'ಯನ್ನೂ ತಿದ್ದಿದ್ದಾರೆ. ಅವರ ಹುರುಪನ್ನು ಗೌರವಿಸಿ - ಅವರ ಹಲವು ತಿದ್ದುಪಡಿಗಳನ್ನು ಒಪ್ಪಲಾರೆನಾದರೂ - ಅವನ್ನು ಈ ಪುಸ್ತಕದ ಮಟ್ಟಿಗಾದರೂ ಒಪ್ಪಿಕೊಂಡಿದ್ದೇನೆ. ಅವರಿಗೂ ನನ್ನ ನಮನಗಳು. ಎಂದಿನಂತೆ ನನ್ನ ಪತ್ನಿ ಸವಿತಾ ಈ ಪುಸ್ತಕವನ್ನು ಸಿದ್ಧಪಡಿಸುವಲ್ಲಿ ಎಲ್ಲ ರೀತಿಯಲ್ಲೂ ಸಹಕರಿಸಿದ್ದಾಳೆ, ಅವಳನ್ನೂ ಇಲ್ಲಿ ನೆನೆಯಬೇಕು. ನನ್ನ ಇತರೆಲ್ಲ ಪುಸ್ತಕಗಳಂತೆ ಈ ಪುಸ್ತಕವನ್ನೂ ಓದುಗರು ಕೊಂಡು ಓದಿ ಸ್ಪಂದಿಸುತ್ತಾರೆಂದು ನಾನು ಭಾವಿಸುವೆ.

ಶಿವಮೊಗ್ಗ **ಡಿ.ಎಸ್. ನಾಗಭೂಷಣ**

೫. ೯. ೨೦೧೮

ಪರಿವಿಡಿ

ಭಾಗ–೧ : ರಾಜಕೀಯ ಬರಹಗಳು

ಭಾಗ–೨ : ಸಾಹಿತ್ಯ–ಸಂಸ್ಕೃತಿ–ಪ್ರವಾಸ

ಭಾಗ-೩ : ಕೆಲವು ಶ್ರದ್ಧಾಂಜಲಿ ಬರಹಗಳು

ಭಾಗ-೪ : ಕೆಲ ಪತ್ರ ಸಂವಾದಗಳು

ಭಾಗ–೫ : ಕೆಲವು ಪ್ರತಿಕ್ರಿಯೆಗಳು

ಭಾಗ–೧

(ರಾಜಕೀಯ ಬರಹಗಳು)

ನಿತೀಶ್ ನಡೆ ಸರಿಯಾಗಿಯೇ ಇದೆ. ಏಕೆಂದರೆ...

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಎರಡು ವರ್ಷಗಳ ಹಿಂದೆ ರಾಜ್ಯಮಟ್ಟದಲ್ಲಿ ತಾವೇ ರೂಪಿಸಿದ್ದ ತಮ್ಮ ಜೆಡಿಯು, ಲಾಲೂ ಪ್ರಸಾದ್ ಯಾದವ್ ಅವರ ಆರ್‌ಜೆಡಿ ಮತ್ತು ಕಾಂಗ್ರೆಸ್ ಪಕ್ಷಗಳ ಮೈತ್ರಿಕೂಟವನ್ನು ತೊರೆದು ಮತ್ತೆ ತನ್ನ ಈ ಹಿಂದಿನ ಮೈತ್ರಿ ಪಕ್ಷ ಬಿಜೆಪಿ ಜೊತೆ ಕೈಜೋಡಿಸಿ ಸರ್ಕಾರ ರಚಿಸಿಕೊಂಡಿರುವ ಬಗ್ಗೆ ರಾಷ್ಟ್ರಾದ್ಯಂತ ಬಿಸಿಬಿಸಿ ಚರ್ಚೆ ನಡೆಯುತ್ತಿದೆ. ಈ ಬೆಳವಣಿಗೆ ಬಿಹಾರ ರಾಜ್ಯದ ಮಟ್ಟಿಗೆ ಮಾತ್ರ ಪ್ರಸ್ತುತವಾದ ಚರ್ಚೆಯಾಗಿ ಉಳಿಯದೆ ರಾಷ್ಟ್ರವ್ಯಾಪಿಯಾಗಿ ಹರಡಲು ನಿತೀಶ್ ಕುಮಾರ್ ತಮ್ಮ ವ್ಯಕ್ತಿತ್ವದ ಸ್ವಚ್ಛತೆ ಮತ್ತು ಮುಖ್ಯಮಂತ್ರಿತ್ವದ ದಕ್ಷತೆಗಳ ಮೂಲಕ ರಾಷ್ಟ್ರದ ವಿಶೇಷ ಗಮನ ಸೆಳೆದಿರುವ ನಾಯಕರಾಗಿರುವುದೇ ಕಾರಣವಾಗಿದೆ.

ನಿತೀಶ್ ಕುಮಾರ್ ಈಗ ಆರನೆಯ ಬಾರಿ ಬಿಹಾರದ ಮುಖ್ಯಮಂತ್ರಿಯಾಗಿ ಪ್ರಮಾಣ ಸ್ವೀಕರಿಸಿದ್ದಾರೆ ಎಂಬುದೇ ಅವರ ಅನುಸರಿಸಿಕೊಂಡು ಬಂದ ರಾಜಕಾರಣದಲ್ಲಿ ಒಂದು ವಿಶಿಷ್ಟತೆ ಇದೆ ಎಂಬುದನ್ನು ಸೂಚಿಸುತ್ತದೆ. ೨೦೦೫ರಲ್ಲಿ ಮೊದಲ ಬಾರಿಗೆ ಬಿಹಾರದ ಮುಖ್ಯಮಂತ್ರಿಯಾದ ನಂತರದ ಹನ್ನೆರಡು ವರ್ಷಗಳ ಉದ್ದಕ್ಕೂ– ಎರಡು ಬಾರಿ ಅವರೇ ನೈತಿಕ ಕಾರಣಗಳ ಮೇಲೆ ರಾಜೀನಾಮೆ ನೀಡಿ ಅಧಿಕಾರದಿಂದ ಹಿಂದೆ ಸರಿದಿದ್ದ ಕೆಲ ತಿಂಗಳುಗಳನ್ನು ಬಿಟ್ಟರೆ–ಅವರು ಆ ರಾಜ್ಯದ ಮುಖ್ಯಮಂತ್ರಿಯಾಗಿ ಆಡಳಿತ ನಡೆಸುತ್ತಾ ಬಂದಿದ್ದಾರೆ. ಇದರಲ್ಲಿ ೨೦೧೫ರ ನಂತರದ ಈ ಎರಡೂವರೆ ವರ್ಷಗಳ ಅವಧಿಯ ಹೊರತಾಗಿ ಅವರು ಮುಖ್ಯಮಂತ್ರಿಯಾಗಿದ್ದುದು ಬಿಜೆಪಿಯೊಂದಿಗಿನ ಎನ್‌ಡಿಎ ಮೈತ್ರಿಕೂಟದಲ್ಲಿ. ಅಷ್ಟೇ ಅಲ್ಲ, ಅವರು ಮುಖ್ಯಮಂತ್ರಿಯಾಗುವ ಮುಂಚಿನ ಏಳು ವರ್ಷಗಳ ಕಾಲವೂ ವಿವಿಧ ಅಧಿಕಾರ ಹುದ್ದೆಗಳಲ್ಲಿದ್ದುದು ಬಿಜೆಪಿಯ ಮೈತ್ರಿಕೂಟದ ರಾಜಕಾರಣದಲ್ಲೇ ಎಂಬುದನ್ನೂ ನಾವು ಗಮನಿಸಬೇಕು.

ಇದಕ್ಕೂ ಮುಖ್ಯವಾಗಿ, ಅವರ ರಾಜಕಾರಣದ ಸಂಬಂಧವಾಗಿ ಗಮನಿಸಬೇಕಾದ ಇನ್ನೊಂದು ಸಂಗತಿ ಎಂದರೆ ಅವರು ತಮ್ಮ ರಾಜಕಾರಣವನ್ನು ಆರಂಭಿಸಿದ್ದು

೧೯೭೭ರಲ್ಲಿ ಓರ್ವ ಯುವ ಸಮಾಜವಾದಿಯಾಗಿ, ಜಯಪ್ರಕಾಶ್ ನಾರಾಯಣರ 'ಸಂಪೂರ್ಣ ಕ್ರಾಂತಿ ಆಂದೋಲನದ ಮೂಲಕ. ಆ ನಂತರದ ಇಪ್ಪತ್ತು ವರ್ಷಗಳ ಕಾಲ ಅವರು ರಾಜಕಾರಣ ಮಾಡಿದ್ದು ಸದ್ಯದ ಅವರ ಎದುರಾಳಿಯಾಗಿರುವ ಲಾಲು ಪ್ರಸಾದ್ ಯಾದವ್ ಅವರ ಜೊತೆಗೇ. ಹಾಗಾಗಿ ನಿತೀಶ್ ಕುಮಾರ್ ಅವರ ಸದ್ಯದ ಮೈತ್ರಿ ಬದಲಾವಣೆಯನ್ನು ಸರಳವಾಗಿ ಅವಕಾಶವಾದಿ ಎಂದು ಕರೆಯಲಾಗದು. ಏಕೆಂದರೆ, ಈ ಮೈತ್ರಿ ಬದಲಾವಣೆಗೆ ಅಧಿಕಾರ ಲಾಲಸೆಯೇ ಕಾರಣವೆಂದೂ ಕೆಲವರು ವ್ಯಾಖ್ಯಾನಿಸುತ್ತಿರುವುದಕ್ಕೆ ಯಾವುದೇ ಆಧಾರಗಳಿಲ್ಲ. ಸರಳ ಮತ್ತು ಇನ್ನೂ ಮಧ್ಯಮ ವರ್ಗದ ಸೀಮೆಗಳನ್ನು ದಾಟದ ಬದುಕಿನ ಅವರ ಮೇಲೆ ಭ್ರಷ್ಟಾಚಾರ, ಸ್ವಜನ ಪಕ್ಷಪಾತಗಳ ಅಥವಾ ಕುಟುಂಬ ರಾಜಕಾರಣದ ಯಾವುದೇ ಆರೋಪಗಳಾಗಲೀ, ನಿದರ್ಶನಗಳಗಲೀ ಇಲ್ಲ. ಹಾಗಾಗಿ ತಾವು ಮೈತ್ರಿ ಬದಲಾಯಿಸಿದ್ದು ಬಿಹಾರ ಜನತೆಯ ಹಿತದೃಷ್ಟಿಯಿಂದ ಎಂಬ ಅವರ ಹೇಳಿಕೆಯನ್ನು ನಂಬದಿರಲು ಯಾವುದೇ ಕಾರಣಗಳು ಇದ್ದಂತಿಲ್ಲ.

ಜೊತೆಗೆ, ನಿತೀಶ್ ಅವರು ಈ ಮೊದಲು ಹೆಚ್ಚೂಕಡಿಮೆ ಎರಡು ಪೂರ್ಣಾವಧಿಗಳಲ್ಲಿ (೨೦೦೫ರಿಂದ ೨೦೧೫) ಮುಖ್ಯಮಂತ್ರಿ ಆಗಿದ್ದಾಗ ಅವರು ಬಿಹಾರದ ಬಿಂಬವನ್ನು ಸಂಪೂರ್ಣ ಬದಲಾಯಿಸಿದ್ದನ್ನು ರಾಷ್ಟ್ರ ನೋಡಿದೆ. ಆ ಮುನ್ನ ಕಾನೂನು ಮತ್ತು ಶಿಸ್ತಿನ ಸಾರ್ವತ್ರಿಕ ಅಧೋಗತಿಯಲ್ಲಿ 'ಅರಾಜಕ ರಾಜ್ಯ' ಎನಿಸಿಕೊಂಡು ಯಾವ ಕ್ಷೇತ್ರದಲ್ಲೂ ಅಭಿವೃದ್ಧಿಯನ್ನು ಸಾಧಿಸಲಾಗದೆ ಹಿಂದುಳಿದಿರುವಿಕೆಗೆ ಇನ್ನೊಂದು ಹೆಸರಿನಂತಿದ್ದ ಬಿಹಾರವನ್ನು ತಮ್ಮ ಮೊದಲ ಅಧಿಕಾರಾವಧಿಯಲ್ಲೇ ಸರ್ವರಂಗಗಳಲ್ಲೂ ಅಭೂತಪೂರ್ವ ಅಭಿವೃದ್ಧಿಯ ಹಾದಿಗೆ ತಂದು ರಾಷ್ಟ್ರದ ರಾಜಕೀಯ ವೀಕ್ಷಕರನ್ನೆಲ್ಲ ಬೆಕ್ಕಸ ಬೆರಗಾಗಿಸಿದವರು ನಿತೀಶ್‌ಕುಮಾರ್ ಅವರು. ಅವರ ಈ ಅವಧಿಯಲ್ಲಿ ರಾಜ್ಯದ ಪ್ರಗತಿಯ ದರ, ಆಗ ಪ್ರಗತಿಯ ಉಜ್ವಲ ಉದಾಹರಣೆಯಾಗಿ ಎಲ್ಲರ ಗಮನ ಸೆಳೆದಿದ್ದ ಗುಜರಾತ್ ರಾಜ್ಯವೂ ಸೇರಿದಂತೆ, ರಾಷ್ಟ್ರದ ಇತರೆಲ್ಲ ರಾಜ್ಯಗಳ ಪ್ರಗತಿ ದರವನ್ನು ಮೀರಿ ಬೆಳೆಯಿತು. ಆ ಸಂದರ್ಭದಲ್ಲೇ ನಿತೀಶ್ ಸಹಜವಾಗಿಯೇ ರಾಷ್ಟ್ರದ ಗಮನ ಸೆಳೆಯುವಂತಾಗಿ ಆಗಿನ ಕಾಂಗ್ರೆಸ್ ವಿರುದ್ಧದ ಪ್ರತಿಪಕ್ಷಗಳ ಮುಖವಾಗಿ ಮುಂದಿನ ಪ್ರಧಾನಮಂತ್ರಿ ಅಭ್ಯರ್ಥಿಯಾಗುವ ಅವರ ಸಾಮರ್ಥ್ಯ ಮತ್ತು ಸಾಧ್ಯತೆಗಳು ಚರ್ಚಿತವಾದದ್ದು ಎಂಬುದನ್ನೂ ಇಲ್ಲಿ ಗಮನಿಸಬೇಕು.

ಆದರೆ ನಿತೀಶ್ ಕುಮಾರ್ ಅವರ ಇತ್ತೀಚಿನ ರಾಜಕೀಯ ವರ್ತನೆಯನ್ನು ಖಂಡಿಸುತ್ತಿರುವ ಬಹುತೇಕ ಎಲ್ಲರೂ ಈಗ ಪ್ರಬಲವಾಗಿ, ಸರ್ವಾಧಿಕಾರಿಯಾಗಿ ಬೆಳೆಯುತ್ತಿರುವಂತೆ ತೋರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರೆದುರು ಮುಂದಿನ ಚುನಾವಣೆಯ ಹೊತ್ತಿಗಾದರೂ ಪ್ರತಿಪಕ್ಷಗಳು ಒಂದು ವಿಶ್ವಾಸಾರ್ಹ ಸವಾಲನ್ನು ಒಡ್ಡಲು ನಡೆಸಲಾಗುತ್ತಿರುವ ಪ್ರಯತ್ನಗಳನ್ನು ಭಂಗಗೊಳಿಸುವ ಮೂಲಕ ಪ್ರಜಾಸತ್ತೆಯನ್ನು ಉಳಿಸುವ ಹೋರಾಟವನ್ನು ನಿತೀಶ್ ಘಾಸಿಗೊಳಿಸಿದ್ದಾರೆ ಎನ್ನುತ್ತಿದ್ದಾರೆ. ಜೊತೆಗೆ ನರೇಂದ್ರ ಮೋದಿಯವರ ನಾಯಕತ್ವಕ್ಕೆ ಒಂದು ವಿಶ್ವಾಸಾರ್ಹ

ಸವಾಲು ಒಡ್ಡಬಲ್ಲ ನಾಯಕರಾಗಿ ಮೂಡಬಲ್ಲವರಾಗಿದ್ದ ನಿತೀಶ್‌ರ ಈ ನಿರ್ಧಾರ ೨೦೧೯ರ ಚುನಾವಣೆಯಲ್ಲಿ ನರೇಂದ್ರ ಮೋದಿಯವರ ಮತ್ತೊಂದು ದಿಗ್ವಿಜಯವನ್ನು ಖಚಿತಗೊಳಿಸಿಬಿಟ್ಟಿದೆ ಎಂದೂ ಹೇಳುತ್ತಿದ್ದಾರೆ. ಇನ್ನು ಕೆಲವರು ನಿತೀಶ್ ಕಳೆದ ಎರಡೂವರೆ ವರ್ಷಗಳ ಹೊರತಾಗಿ ಆ ಹಿಂದಿನ ಎರಡು ದಶಕಗಳ ಕಾಲ ಬಿಜೆಪಿಯೊಂದಿಗೇ ಮೈತ್ರಿಯಲ್ಲಿದ್ದರು ಎಂಬುದನ್ನೇ ಮರೆತವರಂತೆ ಅವರ ಮೇಲೆ ಕೋಮುವಾದಿ ರಾಜಕಾರಣವನ್ನು ಪೋಷಿಸಲು ಹೊರಟಿರುವ ಆರೋಪವನ್ನೂ ಹೊರಿಸುತ್ತಿದ್ದಾರೆ.

ಇದೆಲ್ಲವೂ ಒಂದು ಘಟನೆಯನ್ನು ಕೇವಲ ಒಬ್ಬ ಬಿಡಿ ವ್ಯಕ್ತಿಯ ನಿರ್ಧಾರವಾಗಿ ನೋಡುವ ಮತ್ತು ಘಟನೆಯ ಒಂದು ಬದಿಯಿಂದ ಮಾತ್ರ ನೋಡುವ ದೃಷ್ಟಿದೋಷದ ಪರಿಣಾಮವೇ ಆಗಿದೆ. ನಿತೀಶ್‌ಕುಮಾರ್ ಅವರ ನಿರ್ಧಾರ ಇಷ್ಟೆಲ್ಲ ನಿರ್ಣಾಯಕ ರಾಜಕೀಯ ಪರಿಣಾಮಗಳನ್ನು ಉಂಟುಮಾಡುವುದು ನಿಜವೆಂದು ಇವರೆಲ್ಲ ಭಾವಿಸಿದ್ದರೆ, ನಿತೀಶ್ ತುಂಬ ಮಹತ್ವದ, ಇತರ ಪ್ರತಿಪಕ್ಷಗಳ ನಾಯಕರಿಗೆ ಹೋಲಿಸಿದರೆ ಹೆಚ್ಚಿನ ಗುಣಮಟ್ಟದ ರಾಜಕಾರಣಿಯೇ ಆಗಿರಬೇಕಾಗುತ್ತದೆ. ಹಾಗಿದ್ದಲ್ಲಿ ಅಂತಹ ನಾಯಕ ತಮಗೆ ಆಘಾತವನನ್ನುಂಟು ಮಾಡುವ ನಿರ್ಧಾರ ತೆಗೆದುಕೊಳ್ಳಬೇಕಾದರೆ ಏನು ಕಾರಣ ಎಂಬ ಪ್ರಶ್ನೆಯೇಕೆ ಇವರನ್ನು ಕಾಡಿಲ್ಲ ಎಂದು ಕೇಳಬೇಕಾಗುತ್ತದೆ. ಹಾಗೇ ಇದು ಈ ರಾಜಕೀಯ ನಾಯಕರ, ವಿಶ್ಲೇಷಣಾಕಾರರ ಮತ್ತು ವ್ಯಾಖ್ಯಾನಕಾರರ ಏಕಪಕ್ಷೀಯ ಆಲೋಚನಾ ಕ್ರಮವನ್ನಷ್ಟೇ ಸೂಚಿಸುತ್ತದೆ ಎಂದು ಹೇಳಬೇಕಾಗುತ್ತದೆ. ಇನ್ನೂ ಮುಖ್ಯವಾಗಿ, ಇವರಾರೂ ಈ ರಾಜಕೀಯ ಬೆಳವಣಿಗೆಗೆ ಮೂಲ ಕಾರಣವನ್ನೊದಗಿಸಿದ ಲಾಲೂ ಪ್ರಸಾದರ ಹಠಮಾರಿತನವನ್ನೇಕೆ ಪ್ರಶ್ನಿಸುತ್ತಿಲ್ಲ ಎಂದೂ ಕೇಳಬೇಕಾಗುತ್ತದೆ.

ದೇಶದಲ್ಲಿ ಕೋಮುವಾದಿ ರಾಜಕಾರಣದ ವಿರುದ್ಧದ ಹೋರಾಟವನ್ನೇ ತಮ್ಮ ರಾಜಕಾರಣದ ಮುಖ್ಯ ಧ್ಯೇಯವೆಂದು ಘೋಷಿಸಿಕೊಂಡಿರುವ ಲಾಲೂ ಪ್ರಸಾದ್ ಯಾದವ್ ಈ ಹೋರಾಟಕ್ಕೆ ತಮ್ಮ ನಿಷ್ಠೆ ನಿಜವಾದುದೇ ಆಗಿದ್ದರೆ, ನಿತೀಶ್ ರಾಜೀನಾಮೆ ನೀಡಲು ಮತ್ತು ಆನಂತರ ಬಿಜೆಪಿ ಮೈತ್ರಿಕೂಟವನ್ನು ಸೇರಲು ಕಾರಣವಾದ ಪರಿಸ್ಥಿತಿ ನಿರ್ಮಾಣವಾಗದಂತೆ, ರಾಜ್ಯದ ಉಪಮುಖ್ಯಮಂತ್ರಿಯೂ, ತಮ್ಮ ಹಿರಿಮಗನೂ ಆಗಿದ್ದ ತೇಜಸ್ವಿ ಯಾದವ್‌ರಿಂದ ರಾಜೀನಾಮೆಯನ್ನೇಕೆ ಕೊಡಿಸಲಿಲ್ಲ? ಕೊಡುವಂತೆ ತಮ್ಮ ಪಕ್ಷದ ವತಿಯಿಂದ ಒತ್ತಡವನ್ನಾದರೂ ಏಕೆ ಹೇರುವ ಪ್ರಯತ್ನ ಮಾಡಲಿಲ್ಲ? ನಿತೀಶ್ ಮೇಲೆ ನೈತಿಕತೆಯ ಆಧಾರಗಳ ಮೇಲೆ ದಾಳಿ ಮಾಡುತ್ತಿರುವ ನಾಯಕರಾಗಲೀ, ರಾಜಕೀಯ ವಿಶ್ಲೇಷಣಕಾರರಾಗಲೀ ಈ ಪ್ರಶ್ನೆಯನ್ನೇ ಕೇಳುತ್ತಿಲ್ಲ ಏಕೆ?

ಹಾಗೆ ನೋಡಿದರೆ ನಿತೀಶ್, ತೇಜಸ್ವಿ ಯಾದವ್ ಅವರ ರಾಜೀನಾಮೆಯನ್ನೇನೂ ಕೇಳಿರಲಿಲ್ಲ. ಅಥವಾ ಲಾಲೂ ಪ್ರಸಾದ್ ಯಾದವ್ ಅವರ ಇಡೀ ಕುಟುಂಬದ ಮೇಲೆ ಕವಿದಿರುವ ಹೊಸ ಭಾರಿ ಭ್ರಷ್ಟಾಚಾರದ ಆರೋಪಗಳ ಸುದ್ದಿಗೂ ಹೋಗಿರಲಿಲ್ಲ.

ಅವರು ಕೇಳಿದ್ದುದು, ತನ್ನ ವಿರುದ್ಧ ಅಧಿಕೃತವಾಗಿ ದಾಖಲಾಗಿರುವ ಆರೋಪ ಪಟ್ಟಿ ಕೇವಲ ಸೇಡಿನ ರಾಜಕಾರಣವಾಗಿದ್ದು ಅದರಲ್ಲೇನೂ ಹುರುಳಿಲ್ಲ ಎಂದು ತೇಜಸ್ವಿ ಹೇಳಿರುವುದನ್ನು ವಿವರವಾಗಿ ವಿಷದೀಕರಿಸಬೇಕೆಂದು ಮಾತ್ರ. ಅದನ್ನೂ ಮಾಡಲಾಗದು ಎಂದರೆ ಏನರ್ಥ? ಈ ಕೋಮುವಾದಿ ವಿರೋಧಿಯಾದ ಧರ್ಮನಿರಪೇಕ್ಷ ರಾಜಕಾರಣದ ಬೆಂಬಲಿಗರೆಂದು ಹೇಳಿಕೊಂಡು ನಿತೀಶ್ ಅವರನ್ನು ಖಂಡಿಸುತ್ತಿರುವ ಮಹನೀಯರಲ್ಲಿ ಯಾರಾದರೂ ಲಾಲೂ ತಮ್ಮ ಪಕ್ಷದ ಪರವಾಗಿ ತನ್ನ ಇಬ್ಬರು ಗಂಡು ಮಕ್ಕಳನ್ನು ಬಿಹಾರ ಸರ್ಕಾರದ ಮಂತ್ರಿಗಳನ್ನಾಗಿ ಮತ್ತು ಒಬ್ಬ ಮಗಳನ್ನು ರಾಜ್ಯಸಭೆಯ ಸದಸ್ಯರನ್ನಾಗಿ ಮಾಡಿದ ಲಜ್ಜೆಗೆಟ್ಟ ಕುಟುಂಬ ರಾಜಕಾರಣದ ವಿರುದ್ಧ ಸೊಲ್ಲೆತ್ತಿದ ದಾಖಲೆ ಇದೆಯೇ? ಇವರೆಲ್ಲ ಕೋಮುವಾದಿ ರಾಜಕಾರಣವನ್ನು ಭ್ರಷ್ಟ ಮತ್ತು ಕುಟುಂಬ ರಾಜಕಾರಣದ ಕತ್ತಿ ಗುರಾಣಿಗಳೊಂದಿಗೆ ಹೋರಾಡಿ ಸೋಲಿಸಲು ಹೊರಟಿದ್ದಾರೆಯೇ? ಹಾಗಿದ್ದಲ್ಲಿ ಇದಕ್ಕಿಂತ ಹಾಸ್ಯಾಸ್ಪದ, ಅನುಮಾನಾಸ್ಪದ ಮತ್ತು ಬುದ್ಧಿಹೀನ ರಾಜಕಾರಣ ಇನ್ನೊಂದಿರಲಾರದು. ಹಾಗಾಗಿಯೇ ನಮ್ಮ ಕೋಮುವಾದಿ ವಿರೋಧಿ ರಾಜಕಾರಣ ಮತ್ತೆ ಮತ್ತೆ ಸೋಲುತ್ತಿರುವುದು. ಈ ಸೋಲುಗಳು ತಮ್ಮ ಈ ರಾಜಕಾರಣದ ಮಾದರಿಯಲ್ಲೇ ಏನೋ ಐಬಿರಬಹುದು ಎಂಬ ಅನುಮಾನವನ್ನೂ ಇದರ ಪ್ರತಿಪಾದಕರಲ್ಲಿ ಹುಟ್ಟಿಸಿಲ್ಲ ಎಂದರೆ ಏನು ಹೇಳುವುದು? ಅದಕ್ಕೆ ಬಿಜೆಪಿ ವಿರೋಧವೊಂದೇ ಅದರ ರಾಜಕಾರಣದ ತತ್ವ ಮತ್ತು ಕಾರ್ಯಸೂಚಿಯಾಗಿಬಿಟ್ಟಿದೆ.

ಇನ್ನು ಈ ವಿವಾದನ್ನು ನಿತೀಶ್ ಕುಮಾರ್ ಕಡೆಯಿಂದ ನೋಡುವುದಾದದರೆ, ಅಲ್ಲಿಯೂ ಅನೇಕ ಪ್ರಶ್ನೆಗಳು ಏಳುತ್ತವೆ. ಮೊಟ್ಟಮೊದಲ ಪ್ರಶ್ನೆ ಎಂದರೆ ಅವರು ೨೦೧೩ರಲ್ಲಿ ಬಿಜೆಪಿ ಸಖ್ಯವನ್ನೇಕೆ ಬಿಟ್ಟರು ಎಂಬುದು. ಎಲ್ಲರಿಗೂ ಗೊತ್ತಿರುವಂತೆ ನರೇಂದ್ರ ಮೋದಿ ನಾಯಕತ್ವವನ್ನು ಬಿಜೆಪಿ ಸದ್ದಿಲ್ಲದೆ ಒಪ್ಪಿಕೊಂಡಾಗ ಅವರು ಆ ಪಕ್ಷದಲ್ಲಿಯೂ ಗುರುತಿಸಿದ್ದ ಉದಾರವಾದಿ ಗುಂಪು ದಮನವಾಯಿತೆಂದೂ ಮತ್ತು ಅದರೊಂದಿಗೆ ತಾವು ಕಾಂಗ್ರೆಸ್ಸೇತರ ಪ್ರಧಾನಮಂತ್ರಿ ಅಭ್ಯರ್ಥಿಯಾಗುವ ಸಾಧ್ಯತೆ ಇಲ್ಲವೆಂದೂ ಅವರು ಭಾವಿಸಿದರೆಂಬುದು ಈ ಪ್ರಶ್ನೆಗೆ ಉತ್ತರ. ಆದರೆ ೨೦೧೪ರ ಚುನಾವಣೆಗಳಲ್ಲಿ ನರೇಂದ್ರ ಮೋದಿ ನಾಯಕತ್ವದ ಬಿಜೆಪಿಯನ್ನು ರಾಜ್ಯ ಮಟ್ಟದಲ್ಲಾದರೂ ತಾವು ಏಕಾಕಿಯಾಗಿ ಸೋಲಿಸುವುದು ಅಸಾಧ್ಯವೆಂದು ಗೊತ್ತಾದಾಗ ಅವರು ಆರ್‌ಜೆಡಿ ಸೇರಿದಂತೆ ಎಲ್ಲ ಪ್ರತಿಪಕ್ಷಗಳ ಮೈತ್ರಿಕೂಟವನ್ನು ರಚಿಸಿಕೊಂಡು ೨೦೧೫ರ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿಯನ್ನು ಸಂಪೂರ್ಣ ಮಣ್ಣುಮುಕ್ಕಿಸಿ ನರೇಂದ್ರ ಮೋದಿ ಕಣ್ಣು ಕಣ್ಣು ಬಿಡುವಂತೆ ಮಾಡಿದರು.

ಆಗ ನಿತೀಶ್‌ಗೆ ಲಾಲೂ ಪ್ರಸಾದ್ ಭ್ರಷ್ಟರು ಎಂದು ಗೊತ್ತಿರಲಿಲ್ಲವೇ ಎಂದು ಈಗ ಕೆಲವರು ಕೇಳುತ್ತಿದ್ದಾರೆ. ಆದರೆ ಅವರು ಮೈತ್ರಿ ಮಾಡಿಕೊಂಡದ್ದು ವೈಯಕ್ತಿಕವಾಗಿ ಲಾಲೂ ಅವರೊಂದಿಗಲ್ಲ; ಆರ್‌ಜೆಡಿ ಎಂಬ ಪಕ್ಷದೊಂದಿಗೆ ಮತ್ತು ಆಗ ಲಾಲೂ ಭ್ರಷ್ಟಾಚಾರದ ಮೊಕದ್ದಮೆಯ ಸಂಬಂಧವಾಗಿ ಚುನಾವಣಾ ರಾಜಕಾರಣದಿಂದ

ಬಹಿಷ್ಕೃತರಾಗಿದ್ದರು ಹಾಗೂ ಇದರಿಂದ ಲಾಲೂ ಪಾಠ ಕಲಿತಿರುವರೆಂದು ನಿತೀಶ್ ಭಾವಿಸಿರಲೂಬಹುದು. ಆದರೆ ಲಾಲೂ ತಮ್ಮ ಪಕ್ಷದ ವತಿಯಿಂದ ಸರ್ಕಾರದ ಮೇಲೆ ತಮ್ಮ ಇಬ್ಬರು ಮಕ್ಕಳನ್ನು-ಅದೂ ಒಬ್ಬರನ್ನು ಉಪಮುಖ್ಯಮಂತ್ರಿಯನ್ನಾಗಿ-ಹೇರಿದ್ದನ್ನು ನಿತೀಶ್ ನಿರೀಕ್ಷಿಸಿರಲಾರರು. ತಮ್ಮ ರಾಜಕೀಯ ಜೀವನದುದ್ದಕ್ಕೂ ಭ್ರಷ್ಟಾಚಾರ ಅಥವಾ ಸ್ವಜನ ಪಕ್ಷಪಾತವನ್ನು ಸಹಿಸದ ದಾಖಲೆ ಇರುವ ನಿತೀಶ್ ಬಹುಶಃ ಅಂದಿನಿಂದಲೇ ಲಾಲೂ ಅವರ ಈ ರಿಪೇರಿಯಾಗದ ಪಾಳೇಗಾರಿ ರಾಜಕಾರಣವನ್ನು ಹೇಗಾದರೂ ನಿವಾರಿಸಿಕೊಳ್ಳುವ ಅವಕಾಶಕ್ಕಾಗಿ ಕಾಯುತ್ತಿದ್ದರೆಂದು ಕಾಣುತ್ತದೆ. ಅದು ಒದಗಿಬಂದ ಕೂಡಲೇ ಅದನ್ನು ಸಾಕಷ್ಟು ನಾಜೂಕಾಗಿಯೇ ನಿರ್ವಹಿಸಿ ಸ್ವಚ್ಛ ರಾಜಕಾರಣದ ತಮ್ಮ ಬದ್ಧತೆಯನ್ನು ಮತ್ತೆ ಮೆರೆದಿದ್ದಾರೆ. ಇದಕ್ಕೆ ಮುನ್ನ ಅವರು ಲಾಲೂ ಬಹುವಾಗಿ ಅವಲಂಬಿಸಿರುವ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿಯವರನ್ನೂ, ಉಪಾಧ್ಯಕ್ಷ ರಾಹುಲರನ್ನೂ ಭೇಟಿಯಾಗಿ ತಮ್ಮ ಮುಂದಿರುವ ಅನಿವಾರ್ಯ ಆಯ್ಕೆಯನ್ನು ಹೇಳಿಕೊಂಡಿದ್ದಾರೆ. ಆದರೆ ಸ್ವತಃ ಕುಟುಂಬದ ಮತ್ತು ಭ್ರಷ್ಟಾಚಾರಗಳ ರಾಜಕಾರಣದ ದೀರ್ಘ ಇತಿಹಾಸ ಉಳ್ಳ ಮತ್ತು ಅದರ ಫಲಾನುಭವಿಗಳೂ ಆದ ಇವರು ಲಾಲೂಗೆ ಏನು ಉಪದೇಶ ಮಾಡಿಯಾರು?

ನಿತೀಶ್ ಬಿಜೆಪಿ ಸಖ್ಯವನ್ನು ಆರಿಸಿಕೊಳ್ಳುವ ಬದಲಾಗಿ ತೇಜಸ್ವಿಯನ್ನು ಸಂಪುಟದಿಂದ ಹೊರಹಾಕಬಹುದಿತ್ತು ಎಂದು ಅಮಾಯಕವಾಗಿ ವಾದಿಸುವವರೂ ಇದ್ದಾರೆ. ಹಾಗೆ ಮಾಡಿದ್ದರೆ ಏನಾಗುತ್ತಿತ್ತು ಎಂಬುದನ್ನು ಯಾರಾದರೂ ಸುಲಭವಾಗಿ ಊಹಿಸಬಹುದಾಗಿದೆ. ಲಾಲೂ ತಮ್ಮ ಆರ್‌ಜೆಡಿ ಪಕ್ಷದ ನೆರವಿನಿಂದ ಸರ್ಕಾರವನ್ನು ಉರುಳಿಸುತ್ತಿದ್ದರು. ಬಹುಶಃ ಈ ಸಾಧ್ಯತೆಯನ್ನು ಖಚಿತಪಡಿಸಿಕೊಂಡೇ ನಿತೀಶ್ ತಾವೇ ರಾಜೀನಾಮೆ ನೀಡಿ, ಬಿಜೆಪಿಯ ಮೈತ್ರಿಯನ್ನು ಆಯ್ಕೆ ಮಾಡಿಕೊಂಡರೆಂದು ಕಾಣುತ್ತದೆ. ನಿತೀಶ್‌ಗೆ ಮತ್ತಾವ ಆಯ್ಕೆ ಇತ್ತು? ನಿತೀಶ್ ರಾಜಕಾರಣ ಮಾಡಲು ಬಂದವರು. ಅಧಿಕಾರದ ಮೂಲಕ ಜನತೆಗೆ ಒಂದಿಷ್ಟು ಒಳಿತು ಮಾಡಬಹುದು ಎಂದು ನಂಬಿದವರು. ಲೋಹಿಯಾ ಅವರ ಹೆಸರನ್ನು ತಮ್ಮ ಭ್ರಷ್ಟ ಮತ್ತು ಅನೈತಿಕ ರಾಜಕಾರಣದ ಮೂಲಕ ದೇಶಾದ್ಯಂತ ಚಿಂದಿ ಚಿಂದಿ ಮಾಡುತ್ತಿರುವ ಅನೇಕ ಪಥಭ್ರಷ್ಟ ರಾಜಕಾರಣಿಗಳ ನಡುವೆ ಅವರ ಸಮಾಜವಾದಿ ಚಿಂತನೆಯ ನಿಜವಾದ ಜನಪರತೆಯನ್ನು ತಮ್ಮ ಮೌಲ್ಯಯುತ ಮತ್ತು ದಕ್ಷತೆಯ ರಾಜಕಾರಣದ ಮೂಲಕ ಸಾಬೀತುಮಾಡಿ ಅದರ ಘನತೆ-ಗೌರವಗಳನ್ನು ಕಾಪಾಡಿರುವ ಅಪರೂಪದ ವ್ಯಕ್ತಿ ಇವರು. ಹಾಗಾಗಿಯೇ ಇವರು ತಮ್ಮ ರಾಜ್ಯದಲ್ಲಿ 'ಸುಶಾಸನ ಬಾಬು', 'ವಿಕಾಸ್ ಪುರುಷ್' ಎಂದೂ ಹೆಸರಾಗಿರುವುದು. ಆದುದದರಿಂದ ಇವರು ಈಗ ಅನಿವಾರ್ಯವೆಂಬಂತೆ ಮಾಡಿಕೊಂಡಿರುವ ರಾಜಕೀಯ ಆಯ್ಕೆಯನ್ನು ಅವಕಾಶವಾದಿ ಅಥವಾ ಕೋಮುವಾದಿ ಪರ ರಾಜಕೀಯ ನಡೆಯೆಂದು ವ್ಯಾಖ್ಯಾನಿಸುವುದು ರಾಷ್ಟ್ರದ ಇಂದಿನ ಸಂಕೀರ್ಣ ರಾಜಕೀಯ ಸಂದರ್ಭದ ಸರಳ ಗ್ರಹಿಕೆ ಮಾತ್ರವಾಗುತ್ತದೆ.

ಹೀಗೆ ಸರಳೀಕರಣ ಮಾಡುವವರು, ನಿತೀಶ್ ಕಳೆದ ಎರಡೂವರೆ ವರ್ಷಗಳಲ್ಲಿ ಕೋಮುವಾದಿ ಮತ್ತು ಬಲಪಂಥೀಯ ರಾಜಕಾರಣದ ವಿರುದ್ಧ ಪ್ರತಿಪಕ್ಷಗಳನ್ನು ಒಗ್ಗೂಡಿಸಲು ತಮ್ಮದೇ ಮಿತಿಯಲ್ಲಿ ಮತ್ತು ಶೈಲಿಯಲ್ಲಿ ಮಾಡಿದ ಪ್ರಯತ್ನಗಳನ್ನು ಮರೆತಿದ್ದಾರೆ. ಬಿಜೆಪಿಯನ್ನು ಸೋಲಿಸಲು ಅದರ ಕೋಮುವಾದಿ ರಾಜಕಾರಣದ ಪರಿಗಣನೆ ಮಾತ್ರ ಸಾಲದು. ಅದರ ರಾಜಕಾರಣ ರಾಷ್ಟ್ರದ ರಾಜಕಾರಣದ ದಿಕ್ಕನ್ನು ಕುರಿತಂತೆ ಒಂದು ಹೊಸ ಪ್ರಮೇಯವನ್ನೇ ಮಂಡಿಸಿದ್ದು, ಅದೇ ಅದರ ಯಶಸ್ಸಿನ ಗುಟ್ಟಾಗಿದೆ. ಹಾಗಾಗಿ ಪ್ರತಿಪಕ್ಷಗಳು ಅದನ್ನೆದುರಿಸಲು ಕೇವಲ ಕೋಮುವಾದದ ಕೂಗು ಹಾಕುವ ಕ್ಲೀಷೆಗಳ ಭಾಷೆಗೆ ಹೊರತಾದ ಹೊಸ ನುಡಿಗಟ್ಟಿನಲ್ಲಿ ರಾಷ್ಟ್ರಕ್ಕೆ ಪರ್ಯಾಯ ದಿಕ್ಕನ್ನು ತೋರುವ ಹೊಸ ಪ್ರಮೇಯವನ್ನು (A new Narrative) ಮಂಡಿಸಬೇಕಾಗಿದೆ ಎಂದು ನಿತೀಶ್ ಪ್ರತಿಪಾದಿಸಿದರು. ಆದರೆ ವಾಸ್ತವವಾದರೂ ಏನು?

ಇಂದಿನ ರಾಜಕಾರಣದ ಮುಖ್ಯ ನೆಲೆಗಳನ್ನು ನಿರ್ಧರಿಸುವ ಆರ್ಥಿಕ ನೀತಿಯ ವಿಷಯದಲ್ಲಿ ಬಿಜೆಪಿಗೂ, ಪರ್ಯಾಯ ರಾಜಕಾರಣದ ನೇತೃತ್ವ ವಹಿಸಬೇಕಾದ ಕಾಂಗ್ರೆಸ್ಸಿನ ಅಥವಾ ಅದರ ಇತರ ಬಹುತೇಕ ಮಿತ್ರಪಕ್ಷಗಳಿಗೂ ಏನು ವ್ಯತ್ಯಾಸ? ಏನೂ ಇಲ್ಲ! ಹಾಗೆ ನೋಡಿದರೆ ಮನಮೋಹನ್ ಸಿಂಗ್ ನೇತೃತ್ವದ ಕಾಂಗ್ರೆಸ್ ಸರ್ಕಾರದ ಆರ್ಥಿಕ ನೀತಿಯನ್ನೇ ಮೋದಿ ಸರ್ಕಾರವೂ ಮುಂದುವರೆಸಿರುವುದು ಮತ್ತು ವಿಸ್ತರಿಸುತ್ತಿರುವುದು. ಈ ಬಗ್ಗೆ ಕಾಂಗ್ರೆಸ್ಸಾಗಲೀ ಅಥವಾ ಅದರ ಮಿತ್ರ ಪಕ್ಷಗಳಾಗಲೀ ಒಂಚೂರು ಮಿಸುಕಾಡದೆ, ನಿತೀಶ್‌ರತ್ತ ಪರ್ಯಾಯ ನಾಯಕತ್ವದ ಸಾಧ್ಯತೆಗಾಗಿ ಒಮ್ಮೆಯೂ ಕಣ್ಣು ಮಿಟುಕಿಸದೇ ಇದ್ದಾಗ ಅವರಾದರೂ ಒಂಟಿಯಾಗಿ ಏನು ಮಾಡಿಯಾರು? ಕುಟುಂಬ ರಾಜಕಾರಣವನ್ನೇ ತನ್ನ ಉಳಿವಿನ ಏಕೈಕ ಅಸ್ತ್ರವಾಗಿ ನಂಬಿ, ರಾಹುಲರ ನಾಯಕತ್ವದ ಗುಂಡನ್ನು ಕುತ್ತಿಗೆಗೆ ಕಟ್ಟಿಕೊಂಡು ಭಾರತದ ರಾಜಕೀಯ ಸಮುದ್ರದಲ್ಲಿ ಕೊನೆಗೂ ಮುಳುಗಿಹೋಗಲು ಸನ್ನದ್ಧವಾಗಿರುವಂತೆ ತೋರುವ ಕಾಂಗ್ರೆಸ್ ಒಂದು ಪಕ್ಷವಾಗಿ ನಿತೀಶರ ಮೋದಿ ವಿರುದ್ಧದ ಪರ್ಯಾಯ ರಾಜಕಾರಣದ ನಾಯಕತ್ವವನ್ನು ಒಪ್ಪಲು ಮತ್ತು ಹಲವಾರು ತಿಮಿಂಗಿಲಗಳಿರುವ ತನ್ನ ಮಿತ್ರಪಕ್ಷಗಳನ್ನು ಒಪ್ಪಿಸಲು ಸಾಧ್ಯವೇ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ನಿತೀಶ್ ಕುಮಾರ್ ಏನು ಮಾಡಬೇಕಿತ್ತು?

ಹಿಂದೂ ಕೋಮುವಾದದ ವಿರುದ್ಧದ ರಾಜಕಾರಣವನ್ನೇ ತಮ್ಮ ಇಡೀ ರಾಜಕೀಯ ದೃಷ್ಟಿಕೋನವನ್ನಾಗಿ ರೂಪಿಸಿಕೊಂಡಿರುವ ಮಹನೀಯರುಗಳಿಗೆ ನಿತೀಶ್ ಕುಮಾರ್‌ರ ಇತ್ತೀಚಿನ ನಿರ್ಧಾರ ನಿರ್ಣಾಯಕ ತಪ್ಪಾಗಿ ಕಾಣುವುದು ಸಹಜವೇ ಆಗಿದೆ. ಏಕೆಂದರೆ ಇಂತಹವರ ಕಣ್ಣಿಗೆ ಹಿಂದೂ ಕೋಮುವಾದವೆನ್ನುವುದು ನಾವೆಲ್ಲರೂ–ವಿಶೇಷವಾಗಿ ಕಾಂಗ್ರೆಸ್ಸಿಗರು–ಭಾಗಿಯಾಗಿ ರೂಪಿಸಿದ ವರ್ತಮಾನದ ಒಂದು ಸಂಕೀರ್ಣ ರಾಜಕೀಯ ರಚನೆಯ ಪರಿಣಾಮವಾಗಿದೆ ಎಂಬ ಸತ್ಯ ಕಾಣುವುದಿಲ್ಲ. ಹಾಗಾಗಿ, ಅದನ್ನು ಪ್ರತ್ಯೇಕತೆಯಲ್ಲಿ ಎದುರಿಸುವುದು ಅಸಾಧ್ಯವೆಂದು ಅವರಿಗೆ ಹಲವು ಸೋಲುಗಳ ನಂತರವೂ ಅರಿವಾಗಿಲ್ಲ. ಹಾಗಾಗಿ, ನಿತೀಶ್ ಬಿಜೆಪಿ ಸಖ್ಯದೊಂದಿಗೆ ಇದ್ದೂ ಎಂತಹ

ರಾಜಕಾರಣ ಮಾಡುತ್ತಾರೆ ಮತ್ತು ಅದು ರಾಷ್ಟ್ರ ಮಟ್ಟದ ರಾಜಕಾರಣದ ಮೇಲೆ, ನಿರ್ದಿಷ್ಟವಾಗಿ ಸದ್ಯದ ಬಿಜೆಪಿ ರಾಜಕಾರಣದ ಮೇಲೆ ಏನಾದರೂ ಸಕರಾತ್ಮಕ ಪರಿಣಾಮಗಳನ್ನು ಉಂಟು ಮಾಡಲಿದೆಯೇ ಎಂಬುದನ್ನು ಸ್ವಲ್ಪ ಕಾಲ ಕಾದು ನೋಡಿಯೇ ಈ ವಿಷಯವಾಗಿ ಅಂತಿಮ ತೀರ್ಪು ನೀಡಬೇಕಾಗುತ್ತದೆ. ಏಕೆಂದರೆ ನಿತೀಶ್ ಕುಮಾರ್ ಇತ್ತೀಚಿನ ವರ್ಷಗಳಲ್ಲಿ ಭಾರತ ಕಂಡ ವಿಭಿನ್ನ ಸತ್ವದ-ಗುಂಪಿನಲ್ಲಿ ಗೋವಿಂದ ಎನ್ನಲೊಲ್ಲದ ಸ್ವತಂತ್ರ ನಿರ್ಧಾರಗಳ-ಅನುಭವಿ ಮತ್ತು ಜಾಣ ರಾಜಕೀಯ ನಾಯಕ. ಕೇಜ್ರಿವಾಲ್‌ರಂತೆ ಎಳೆ ನಿಂಬೆಕಾಯಿಯಲ್ಲ.

('ವಿಜಯ ಕರ್ನಾಟಕ' : ಆಗಸ್ಟ್ ೧೦, ೨೦೧೭)

ಕೂಗುಮಾರಿಯಾಗುತ್ತಿರುವ
ಕೋಮುವಾದ ವಿರೋಧಿ ರಾಜಕಾರಣ

ಮೋದಿಯವರನ್ನು ಪತ್ರಿಕೆಗಳಲ್ಲೋ, ಸಾಮಾಜಿಕ ಮಾಧ್ಯಮಗಳಲ್ಲೋ ಮನಬಂದಂತೆ ಟೀಕಿಸುವ ದಂಡನ್ನು ನೋಡಿದಾಗಲೆಲ್ಲ ನನಗೆ ಆಶ್ಚರ್ಯವೂ ಮರುಕವೂ ಒಟ್ಟಿಗೆ ಉಂಟಾಗುತ್ತದೆ. ಆಶ್ಚರ್ಯ ಏಕೆಂದರೆ, ಸೋತು ಸುಣ್ಣವಾಗಿದ್ದರೂ ಈ ದಂಡು ತನ್ನ ರಾಜಕೀಯ ಸ್ಥೈರ್ಯವನ್ನು ಒಂದಿಷ್ಟು ಕಳೆದುಕೊಂಡಿಲ್ಲವಲ್ಲ ಎಂದು. ಮರುಕ ಏಕೆಂದರೆ ಇಂತಹ ಸ್ಥೈರ್ಯ ಅವರೊಂದಿಗೆ ಈಗಾಗಲೆ ಕೂಗುಹಾಕುತ್ತಿರುವ ದಂಡನ್ನು ಬಿಟ್ಟರೆ ಇನ್ನೊಂದು ಹುಳುವನ್ನೂ ತನ್ನೆಡೆಗೆ ಸೆಳೆಯಲಾಗಿಲ್ಲ ಎಂದು. ಬಹುಶಃ ಇದೇ ಮೋದಿ ದಿಗ್ವಿಜಯದ ನಿಜವಾದ ಗುಟ್ಟಾಗಿದೆ. ಮತ್ತು ಇದೇ ತಥಾಕಥಿತ ಸೆಕ್ಯುಲರಿಸ್ಟರು ಈಗ ಎದುರಿಸುತ್ತಿರುವ ನಿರಂತರ ಸೋಲುಗಳ ಹಿಂದಿರುವ ಕಾರಣವೂ ಆಗಿದೆ. ಆದುದರಿಂದ ಈ ಸೆಕ್ಯುಲರಿಸ್ಟರು ಮಾಡಬೇಕಾದ ಮೊದಲ ಕೆಲಸವೆಂದರೆ, ತಮ್ಮ ಮೋದಿ ಮತ್ತು ಹಿಂದೂ ಕೋಮುವಾದ ವಿರೋಧಿ ಅರಣ್ಯ ರೋದನವನ್ನು ಕೆಲಕಾಲವಾದರೂ ನಿಲ್ಲಿಸಿ, ಮೋದಿ ಆಡಳಿತಕ್ಕೆ ಬರಲು ಮತ್ತು ಹಿಂದೂ ಕೋಮುವಾದ ಹರಡಲು ಕಾರಣಗಳೇನು ಎಂದು ಕೊಂಚ ತಣ್ಣಗೆ ಯೋಚಿಸುವುದು.

ಈ ದೇಶದಲ್ಲಿ ಇತ್ತೀಚಿನ ವರ್ಷಗಳಲ್ಲಿ ಹಿಂದೂ ಕೋಮುವಾದ ತಲೆ ಎತ್ತಿದ ಬಗೆ ಯಾವುದು? ಹಿನ್ನೆಲೆ ಏನು? ಯೋಚಿಸಬೇಕು. ನಿಜ, ಸ್ವಾತಂತ್ರ್ಯಪೂರ್ವದಲ್ಲೇ ಗಾಂಧಿಯವರ ಹಿಂದೂ-ಮುಸ್ಲಿಂ ಐಕ್ಯತೆಯ ರಾಜಕಾರಣದ ವಿರುದ್ಧ ಹಿಂದೂ ಮಹಾಸಭಾ ಮತ್ತು ಆರೆಸ್ಸೆಸ್ ರೂಪಗಳಲ್ಲಿ ಅದು ಆರಂಭವಾಯಿತು. ಹಾಗೆ ಆರಂಭವಾದ ಹಿಂದೂ ಕೋಮುವಾದ ಜನರ ಮನ್ನಣೆ ಗಳಿಸುವ ಮುನ್ನವೇ, ಅದು ಪ್ರಚೋದಿಸಿದ ಗಾಂಧಿ ಹತ್ಯೆಯ ವಿರುದ್ಧ ಇಡೀ ದೇಶ ಎದ್ದು ನಿಂತಾಗ ತಲೆಮರೆಸಿಕೊಂಡು ಹೋಯಿತು. ಹಾಗೆ ತಲೆಮರೆಸಿಕೊಂಡಿದ್ದ ಶಕ್ತಿಗಳು ಚುರುಕಾಗತೊಡಗಿ, ಸಂಘ ಪರಿವಾರವೆಂಬ ಹತ್ತು ತಲೆಗಳ ದೈತ್ಯನಾಗಿ ಬೆಳೆಯತೊಡಗಿದ್ದು ಯಾವಾಗ ಎಂಬುದನ್ನು ನಾವು ಸರಿಯಾಗಿ ನೆನಪಿಸಿಕೊಳ್ಳಬೇಕಾದ ಕಾಲವಿದು.

ಅದು ೧೯೮೬ರಲ್ಲಿ. ಷಾಬಾನು ಪ್ರಕರಣ ರಾಷ್ಟ್ರದ ಆತ್ಮಸಾಕ್ಷಿಯನ್ನು ಕೆಣಕಿದಾಗ. ಷಾಬಾನು ಎಂಬ ವಯಸ್ಸಾದ ಮುಸ್ಲಿಂ ಮಹಿಳೆ ತನ್ನ ಗಂಡ ನೀಡಿದ ವಿವಾಹ ವಿಚ್ಛೇದನಕ್ಕೆ ಮುಸ್ಲಿಂ ನ್ಯಾಯಾಲಯ ಪರಿಹಾರ ನಿರಾಕರಿಸಿದ್ದರಿಂದ ಆಕೆ ಸರ್ವೋಚ್ಛ ನ್ಯಾಯಾಲಯದಲ್ಲಿ ಅದನ್ನು ಪ್ರಶ್ನಿಸಿ ಅದರಿಂದ ಯೋಗ್ಯ ಪರಿಹಾರ ಪಡೆದಾಗ, ಅದರ ವಿರುದ್ಧ ಒಂದಾದ ಮುಸ್ಲಿಂ ಪುರೋಹಿತಶಾಹಿ ಆಗಿನ ಪ್ರಧಾನಿ ರಾಜೀವ್ ಗಾಂಧಿ ಅವರ ಮೇಲೆ ಒತ್ತಡ ಹೇರಿ ಆ ಪರಿಹಾರ ಆಕೆಗೆ ಸಿಗದಂತೆ ಕಾನೂನನ್ನೇ ತಿದ್ದುಪಡಿ ಮಾಡಿದಾಗ. ರಾಜೀವ್ ಗಾಂಧಿ ಮಾಡಿದ್ದನ್ನು ಒಂದು ವೈಯಕ್ತಿಕ ನಿರ್ಧಾರದ ರಾಜಕಾರಣ ಎಂದು ಹೇಳಲಾಗದು. ಏಕೆಂದರೆ ಇದು ಜನರ ಕಣ್ಣಿಗೆ, ರಾಷ್ಟ್ರ ಮಧ್ಯಕಾಲೀನ ನಂಬಿಕೆ-ಕಟ್ಟಲೆಗಳನ್ನು ಹಿಂದೆಬಿಟ್ಟು ಆಧುನಿಕತೆಯತ್ತ ಸಾಗುತ್ತಿದ್ದರೆ, ಜನಸಮುದಾಯದ ಒಂದು ನಿರ್ದಿಷ್ಟ ವರ್ಗ ಅದಕ್ಕೆ ವಿರುದ್ಧವಾಗಿ ತನ್ನ ಮಧ್ಯಯುಗೀನ ಮತೀಯ ಕಾನೂನುಗಳನ್ನು ಪುನಃಸ್ಥಾಪಿಸಿಕೊಳ್ಳಲು ಮಾಡಿದ ಪ್ರಯತ್ನವನ್ನು ಅಂದಿನ ಸರ್ಕಾರ ತನ್ನ ಮತಬ್ಯಾಂಕ್ ರಾಜಕಾರಣಕ್ಕಾಗಿ ಪ್ರೋತ್ಸಾಹಿಸಿದ್ದರ ಸೂಚನೆಯಾಗಿ ಕಂಡಿತು. ಆಗಲೇ ಆವರೆಗೆ ತಲೆ ಮರೆಸಿಕೊಂಡಂತಿದ್ದ ಹಿಂದೂ ಕೋಮುವಾದ ಜನಮನ್ನಣೆ ಗಳಿಸಲು ಇದೇ ಸುಸಂದರ್ಭವೆಂದು ತನ್ನ ರಾಜಕಾರಣವನ್ನು ಚುರುಕುಗೊಳಿಸಿಕೊಂಡದ್ದು.

ದೇಶದ ದುರದೃಷ್ಟವೆಂದರೆ, ಆ ಪ್ರಧಾನಿಯ ಪೆದ್ದುತನ ಇಲ್ಲಿಗೇ ಮುಗಿಯಲಿಲ್ಲ. ತನ್ನ ಕ್ರಮ ಬಹುಸಂಖ್ಯಾತರನ್ನು ಸಿಟ್ಟಿಗೆಬ್ಬಿಸಿದೆಯೆಂದು ಭಾವಿಸಿ (ಅಥವಾ ತನ್ನ ಪಕ್ಷದಿಂದ ಹಾಗೆ ಉಪದೇಶಿಸಲ್ಪಟ್ಟು), ಅವರ ಮನ ಗೆಲ್ಲಲು ಕೂಡಲೇ, ಆವರೆಗೆ ವಿವಾದಿತ ಜಾಗವಾಗಿ ಬೀಗ ಜಡಿದುಕೊಂಡಿದ್ದ ಅಯೋಧ್ಯೆಯ ಬಾಬ್ರಿ ಮಸೀದಿಯ ಬೀಗ ತೆಗೆಸಿ ಅದರೊಳಗೆ ರಾಮಲಲ್ಲಾನ ಪೂಜೆಗೆ ಅವಕಾಶ ಮಾಡಿಕೊಟ್ಟರು. ಇದು ರಾಷ್ಟ್ರದಲ್ಲಿ ಕೋಮುವಾದಿ ರಾಜಕಾರಣದ ಹೆಬ್ಬಾಗಿಲೇ ತೆರೆದ ಕ್ಷಣ. ಆವರೆಗೆ ಹಿಂದೂ ಕೋಮುವಾದದ ಮೃದು ಮುಖವಾಗಿ ಅಧಿಕಾರಕ್ಕಾಗಿ ಹವಣಿಸುತ್ತಾ ಇತರ ಪಕ್ಷಗಳೊಂದಿಗೆ ಚೌಕಾಶಿ ರಾಜಕಾರಣ ಮಾತ್ರ ಮಾಡುವ ಸ್ಥಿತಿಯಲ್ಲಿದ್ದ ಬಿಜೆಪಿ(ಮೂಲದಲ್ಲಿ ಜನಸಂಘ) ಈ ರಾಮಲಲ್ಲಾನನ್ನೇ ಮುಂದಿಟ್ಟುಕೊಂಡು, ಆ ಹೊತ್ತಿಗಾಗಲೇ ಅನುಮಾನಾಸ್ಪದವೆನಿಸತೊಡಗಿದ್ದ ಪೆದ್ದು ಪ್ರಧಾನಮಂತ್ರಿಯ ನಾಯಕತ್ವದ ಕಾಂಗ್ರೆಸ್ ವಿರುದ್ಧ ನೇರ ಸ್ಪರ್ಧೆಯ ರಾಜಕಾರಣವನ್ನು ಆರಂಭಿಸಿತು. ಅದು ಕಳೆದುಹೋದ ಹಿಂದೂ ಅಸ್ಮಿತೆಯ ಪುನಃಸ್ಥಾಪನೆಯ ಹುಯ್ಲು ಎಬ್ಬಿಸುವ ಆಂದೋಲನವಾಗಿ ಮಾರ್ಪಟ್ಟು, ಅದರ ಪ್ರತೀಕವಾಗಿ ಮಸೀದಿಯ ಸ್ಥಳದಲ್ಲಿ ರಾಮಮಂದಿರ ನಿರ್ಮಿಸುವ ಗುರಿಯನ್ನು ಘೋಷಿಸಿತು. ಇದರಿಂದ ಮತ್ತಷ್ಟು ಪೆದ್ದುತನಕ್ಕೆ ಒಳಗಾದ ಆ ಪ್ರಧಾನಿ ಬಾಬ್ರಿ ಮಸೀದಿಯ ಆವರಣದಲ್ಲಿ ರಾಮಮಂದಿರವಾದಿಗಳು ತಮ್ಮ ಶ್ರೀರಾಮನಿಗಾಗಿ 'ಕರಸೇವೆ' ಮಾಡಲೂ ಅವಕಾಶ ಮಾಡಿಕೊಟ್ಟರು! ಅಂದೇ ಆವರೆಗೆ ಬಾಬ್ರಿ ಮಸೀದಿ ಎನಿಸಿದ್ದ ಜಾಗ ರಾಮಜನ್ಮಭೂಮಿಯೂ ಆಗಿಹೋಯಿತು! ಈ ಪೆದ್ದು ರಾಜಕಾರಣವೇ

ನರಸಿಂಹರಾಯರ ಪ್ರಧಾನಮಂತ್ರಿತ್ವದಲ್ಲಿ 'ಜಾಣ' ರಾಜಕಾರಣವಾಗಿ ಮಾರ್ಪಟ್ಟು ಅದರ ಫಲವಾಗಿ ಬಾಬ್ರಿ ಮಸೀದಿ ಉರುಳಿ ಬಿತ್ತು.

ಆಗಲೇ ವಕ್ರ ನೋಟದ ಭಾರತದ ಸೆಕ್ಯುಲರಿಸಂನ ಆವೃತ್ತಿಯೂ ಆರಂಭವಾದದ್ದು. ಬಾಬ್ರಿ ಮಸೀದಿ ಉರುಳಿದ್ದರ ವಿರುದ್ಧ ಮುಸ್ಲಿಮರಿಗಿಂತ ಹೆಚ್ಚು ಕೂಗಾಡತೊಡಗಿದವರು ಇವರೇ! ನಿಜ, ಕೆಟ್ಟದ್ದರ ವಿರುದ್ಧ ಕೂಗಬೇಕು. ಇಲ್ಲದಿದ್ದರೆ ಕೆಟ್ಟದ್ದರಲ್ಲಿ ನಾವೂ ಪಾಲ್ಗೊಂಡಂತಾಗುತ್ತದೆ. ಆದರೆ ಆ ಕೂಗು ಕೆಟ್ಟದ್ದನ್ನು ಮಾಡಿದವರ ವಿರುದ್ಧ ಮಾತ್ರವಲ್ಲ, ಅದಕ್ಕೆ ಕಾರಣರಾದವರ ವಿರುದ್ಧವೂ ಇರಬೇಕು. ಆಗಲೇ ಅದನ್ನು ಕೇಳಿದ ಜನ ಅದಕ್ಕೆ ಸಹಾನುಭೂತಿಯಿಂದ ಓಗೊಡುವುದು. ಆದರೆ ಹಾಗೆ ಕೂಗಿದವರಲ್ಲಿ ಹೆಚ್ಚಿನವರು ನಿಜವಾಗಿ ಬಾಬ್ರಿ ಮಸೀದಿ ಬಿದ್ದುದದಕ್ಕಾಗಿ ಕೂಗಿದರೋ ಅಥವಾ 'ಪ್ರಗತಿಪರ'ವೆಂದು ಕರೆದುಕೊಳ್ಳಲಾಗುವ ತಮ್ಮ ಹಳೆಯ ಕಾಂಗ್ರೆಸ್ ವಿರೋಧಿ ಎಡಪಂಥೀಯ ರಾಜಕಾರಣದ ಜಾಗವನ್ನು ಹಿಂದೂ ಕೋಮುವಾದಿ ರಾಜಕಾರಣ ಆಕ್ರಮಿಸಿಕೊಳ್ಳುತ್ತಿದೆ ಎಂಬ ಆತಂಕದಿಂದ ಕೂಗಿದರೋ ತಿಳಿಯದು!

ಈ ಮಧ್ಯೆ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿ ಜಟಿಲಗೊಳಿಸುವ ಇನ್ನೊಂದು ಬೆಳವಣಿಗೆಯೂ ನಡೆದಿತ್ತು. ಅದು ಮುಸ್ಲಿಂ ಸಮುದಾಯದಲ್ಲಿ ಹೆಚ್ಚತೊಡಗಿದ್ದ ಮೂಲಭೂತವಾದ. ಸೌದಿ ಅರೇಬಿಯಾದ ಹಣದ ಪ್ರಭಾವದಲ್ಲಿ ಪ್ರಾಯೋಜಿತವಾದ ಭಾರತದ ಮುಸ್ಲಿಮರ ವಹಾಬೀಕರಣ ದೇಶದ ಬಹುಸಂಖ್ಯಾತ ಜನಸಮೂಹದ ಆತಂಕವನ್ನು ಹೆಚ್ಚಿಸಿದ್ದಂತೂ ನಿಜ. ಮುಸ್ಲಿಂ ಮಹಿಳೆಯರ ನಡುವೆ ಹೆಚ್ಚಿದ ಬುರ್ಖಾ ಪದ್ಧತಿ, ಮುಸ್ಲಿಂ ಪುರುಷರಲ್ಲಿ ಹೆಚ್ಚಿದ ಮೀಸೆ ತೆಗೆದು ಗಡ್ಡ ಬಿಡುವ ಪ್ರವೃತ್ತಿ ಹಾಗೂ ತಲೆಗಂಟಿಕೊಂಡ ಟೋಪಿ ಧಾರಣೆ, ಮದ್ರಾಸಾಗಳ ಬಗ್ಗೆ ಈ ಸಮುದಾಯದಲ್ಲಿ ಹೆಚ್ಚಿನ ಉತ್ಸಾಹ ಎದ್ದು ಕಾಣತೊಡಗಿತ್ತು. ಆದರೆ ಈ ವಿಷಯದಲ್ಲಿ ಮುಸ್ಲಿಂ ಬುದ್ಧಿಜೀವಿ ವರ್ಗ ಮತ್ತು ರಾಜಕೀಯ ನಾಯಕತ್ವ ತೋರಿದ ಔದಾಸೀನ್ಯ ಬಹುಸಂಖ್ಯಾತ ಜನರನ್ನು ಮತ್ತಷ್ಟು ರೇಗಿಸಿತೆಂದೇ ಹೇಳಬೇಕು.

ಆದರೆ ನಮ್ಮ ಜನ ಸುಲಭವಾಗಿ ಕೋಮು ಆವೇಶಕ್ಕೆ ಒಳಗಾಗುವವರಲ್ಲ. ನಮ್ಮ ಪರಂಪರೆಯೇ ಅದಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ನಿಜ, ಈ ಸಂದರ್ಭದಲ್ಲಿ ಹಿಂದೂ ಕೋಮುವಾದ ಬಿಜೆಪಿ ರೂಪದಲ್ಲಿ ಭಾರತದ ರಾಜಕಾರಣದ ಪ್ರಧಾನ ವೇದಿಕೆಗೆ ಪ್ರವೇಶ ಪಡೆಯಲು ಸಾಧ್ಯವಾಯಿತಾದರೂ, ಪ್ರಧಾನ ರಾಜಕೀಯ ಶಕ್ತಿಯಾಗಲು ಜನ ಅದಕ್ಕೆ ಅವಕಾಶ ಕೊಡಲಿಲ್ಲ. ಜನತೆ ಆಗಲೂ ಎರಡು ಬಾರಿ ಸೋನಿಯಾ ಗಾಂಧಿಯವರನ್ನೇ ಬೆಂಬಲಿಸಿತು. ಆದರೆ ಈ ಅವಧಿಗಳಲ್ಲಿ ಆದದ್ದಾದರೂ ಏನು? ಅಣ್ಣಾ ಹಜಾರೆ ಆಂದೋಲನದ ರೂಪದಲ್ಲಿನ ಜನತೆಯ ಹಲವು ಎಚ್ಚರಿಕೆಗಳ ಹೊರತಾಗಿಯೂ, ಅದು ಎಷ್ಟು ಮೈಮರೆತು, ಖೂಳತನದಿಂದ ನಡೆದುಕೊಂಡಿತೆಂದರೆ, ಅದು ಜನ ಜಿಗುಪ್ಸೆಪಟ್ಟುಕೊಳ್ಳುವಷ್ಟು ಬೃಹತ್ ಪ್ರಮಾಣದ ಭ್ರಷ್ಟಾಚಾರದ ಹಗರಣಗಳನ್ನು ತನ್ನ ಕುತ್ತಿಗೆಗೆ ಸುತ್ತಿಕೊಂಡಿತು.

ಕಾಮನ್‌ವೆಲ್ತ್ ಕ್ರೀಡಾಕೂಟ, ೨ಜಿ, ಕಲ್ಲಿದ್ದಲು, ಟೆಲಿಕಾಂ, ರೈಲ್ವೇ... ಒಂದೇ ಎರಡೇ? ಆ ಹೊತ್ತಿಗೆ, ಸಾಟಿ ಇಲ್ಲದಂತಹ ಮುಂದಾಲೋಚನೆಗೆ ಹೆಸರಾದ ಆರೆಸ್ಸೆಸ್ ಬಳಗ ಈ ಸಂದರ್ಭಕ್ಕೆ ತಕ್ಕ ನಾಯಕನನ್ನೂ ರೂಪಿಸಿಕೊಂಡು ಕಾಯುತ್ತಿತ್ತು. ಜನ ಕಾಂಗ್ರೆಸ್ ವಿರುದ್ಧ ಎಷ್ಟು ರೋಷಗೊಂಡಿದ್ದರೆಂದರೆ ೨೦೦೨ರ ಗುಜರಾತ್ ನರಮೇಧವನ್ನೂ ಮರೆತು ಮೋದಿಯವರನ್ನು ತನಗೆ ಸೂಕ್ತ ನಾಯಕನೆಂದು ಆರಿಸಿಕೊಂಡಿತು. ಇದು ಜನ ಬೇರೆ ಪರ್ಯಾಯವಿಲ್ಲದೆ ಅನಿವಾರ್ಯವಾಗಿ ಮಾಡಿಕೊಂಡ ಆಯ್ಕೆ. ಮೋದಿಯವರನ್ನು ಫ್ಯಾಸಿಸ್ಟ್ ಎಂದು ಕರೆಯಬಯಸುವವರು, ಜನರ ಆಯ್ಕೆಯಾದ ಅವರನ್ನು ಪ್ರಜಾಸತ್ತಾತ್ಮಕ ಮೌಲ್ಯಪಾಲನೆಯ ದೃಷ್ಟಿಯಿಂದಲಾದರೂ ಸಹಿಸದಿರುವ ಮೂಲಕ ಸ್ವತಃ ತಾವೇನು ಆಗುತ್ತಿದ್ದೇವೆ ಎಂಬುದರ ಬಗ್ಗೆ ಯೋಚಿಸಬೇಕು.

ಮೋದಿಯವರನ್ನು ವಿರೋಧಿಸಬಾರದೆಂದು ಯಾರೂ ಹೇಳುವುದಿಲ್ಲ. ಆದರೆ ಆತ ಜನರ ಆಯ್ಕೆ ಎಂಬ ಅರಿವಿನಲ್ಲಿ ವಿರೋಧಿಸಬೇಕು. ಅಂದರೆ ಜನ ಈತನನ್ನು ಆಯ್ಕೆ ಮಾಡಿ ತಪ್ಪು ಮಾಡಿದ್ದಾರೆ ಎನ್ನುವುದಾದರೆ, ಆ ತಪ್ಪಿನ ಹಿಂದೆ ನಾವೂ ಇದ್ದೇವೆ ಎಂಬ ಅರಿವಿನೊಂದಿಗೆ ವಿರೋಧಿಸಬೇಕು. ಆಗ ಆ ವಿರೋಧಕ್ಕೆ ಒಂದು ಆತ್ಮಾವಲೋಕನದ ಆಯಾಮ ಸಿಕ್ಕು ಕೆಲವಾದರೂ ಪಶ್ಚಾತ್ತಾಪಗಳು ನಮ್ಮಿಂದ ಹೊಮ್ಮಿ ಅವುಗಳ ಆರ್ದ್ರತೆಯಲ್ಲಿ ನಮ್ಮ ದೃಷ್ಟಿ ಸ್ವಲ್ಪವಾದರೂ ಸ್ವಚ್ಛವಾಗಿ, ನೇರವಾಗಬಹುದು. ಆಗ ನಮ್ಮ ಹೋರಾಟದ ಭಾಷೆಯೂ ಸ್ವಚ್ಛವಾಗಿ ಪಾರದರ್ಶಕವಾಗಬಹುದು. ಆಗ ಹಿಂದೂ ಕೋಮುವಾದದ ಸದ್ಯದ ಜಯಕ್ಕೆ ಅವರ ಸಂಘಟನಾ ಶಕ್ತಿ, ತತ್ವಬದ್ಧತೆಯಷ್ಟೇ ನಾವು ಮುಸ್ಲಿಂ ವೋಟ್‌ಬ್ಯಾಂಕ್ ರಾಜಕಾರಣ, ಹೆಚ್ಚಿದ ಮುಸ್ಲಿಂ ಮೂಲಭೂತವಾದ ಮತ್ತು ಅನಿಯಂತ್ರತವೆನಿಸಿದ್ದ ಭ್ರಷ್ಟಾಚಾರವನ್ನು ಕ್ಷಮಾರ್ಹಗೊಳಿಸಿದ್ದೂ ಕಾರಣವೆಂದು ಗೊತ್ತಾಗುತ್ತದೆ.

ಈಗಿನ ಪರಿಸ್ಥಿತಿಗೆ, ಹಿಂದೂ ಕೋಮುವಾದವನ್ನು ಹಿಂದೂ ಪುರೋಹಿತಶಾಹಿಯ ರಾಜಕಾರಣವೆಂದು ಸರಳೀಕರಿಸಿ ಅದನ್ನು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಶೂದ್ರ ಜಾತಿ ರಾಜಕಾರಣದ ಮೂಲಕ ಎದುರಿಸುವ ಮೂರ್ಖ ಪ್ರಯತ್ನ ಮಾಡಿದ್ದೂ ಕಾರಣವಿರಬಹುದು. ಹಾಗಾಗಿಯೇ ಸಿದ್ದರಾಮಯ್ಯನವರ 'ಅಹಿಂದ' ರಾಜಕಾರಣದ ಪರಿಯನ್ನು ಟೀಕಿಸಿದವರನ್ನು ಬಿಜೆಪಿ ಬೆಂಬಲಿಗರೆಂದು ಕೂಗಾಡುವ ಮೂರ್ಖರನ್ನು ನಾವು ಕಾಣುತ್ತಿದ್ದೇವೆ. ಹಾಗಾಗಿಯೇ ಡಿಕೆಶಿ ವಿರುದ್ಧ ವರಮಾನ ತೆರಿಗೆ ಇಲಾಖೆ ದಾಳಿ ನಡೆದರೆ ಅದನ್ನು ಸೇಡಿನ ರಾಜಕಾರಣವೆಂದಷ್ಟೇ ಕರೆಯುತ್ತೇವೆ. ಎಲ್ಲ ದುಷ್ಟ ಶಕ್ತಿಗಳನ್ನೂ ಕ್ಷಮಿಸಿ ಹಿಂದೂ ಕೋಮುವಾದದ ವಿರುದ್ಧ ಮಾತ್ರ ಹೋರಾಡಬೇಕೆನ್ನುವುದು ಯಾವ ರೀತಿಯಲ್ಲೂ 'ಪ್ರಗತಿಪರ' ರಾಜಕಾರಣ ಎನ್ನಿಸಿಕೊಳ್ಳುವುದಿಲ್ಲ. ಅದೂ ಒಂದು ರೀತಿಯ 'ಪಟ್ಟಭದ್ರ' ರಾಜಕಾರಣವೇ. ಇದು ಜನಕ್ಕೆ ಗೊತ್ತಾಗಿದೆ. ಆದರೆ 'ಪ್ರಗತಿಪರ'ರಿಗೆ ಗೊತ್ತಾಗಿಲ್ಲ, ಅವರ ಸ್ವಯಂಘೋಷಿತ 'ಪ್ರಗತಿಪರತೆ'ಯ ಹುಯ್ಲಿನಲ್ಲಿ.

ಹಾಗಾಗಿಯೇ ಇಂದಿನ ಮೋದಿ ವಿರೋಧಿ ಹೋರಾಟ ಬರೀ ಬೈಯ್ಗುಳಗಳ ಹೋರಾಟವಾಗುತ್ತಿದೆ. ಅದಕ್ಕೊಂದು ಚೂಪಾದ ಗುರಿಯೇ ಇಲ್ಲವಾಗಿದೆ. ಸುಲಭ

ಭಾಷಣಗಳ ದದ್ದು ಬಿದ್ದ ರಾಜಕಾರಣದ ಚಾಳಿ ಬಿಟ್ಟು ಹೊರಬರಲಾಗದಂತಹ ವಿಷವ್ಯೂಹದಲ್ಲಿ ಸಿಕ್ಕಿಹಾಕಿಕೊಂಡಿರುವ ವಿದೇಶಿ ಬ್ಯಾಂಕುಗಳಲ್ಲಿರುವ ಭಾರತೀಯರ ಕಪ್ಪುಹಣವನ್ನು ವಾಪಸ್ ತರುವ ವಾಗ್ದಾನವನ್ನು ಈಡೇರಿಸುವಲ್ಲಿನ ಮೋದಿಯ ವೈಫಲ್ಯವನ್ನಾಗಲೀ, ಅನಾಣ್ಯೀಕರಣದಿಂದ ಗ್ರಾಮಾಂತರ ಆರ್ಥಿಕತೆಗೆ ಆದ ಆಘಾತವನ್ನಾಗಲೀ, ರಾಷ್ಟ್ರದ ವಿವಿಧ ಭಾಗಗಳಲ್ಲಿ ಸಂಭವಿಸುತ್ತಿರುವ ರೈತರ ಆತ್ಮಹತ್ಯೆಗಳ ಹಿಂದಿನ ಆರ್ಥಿಕ ವಿಕ್ಷಿಪ್ತತೆಯ ನೀತಿಯನ್ನಾಗಲೀ ಜನಪರ ರಾಜಕಾರಣದ ಪರವಾಗಿ ಬಳಸಿಕೊಳ್ಳುವ ಕಲ್ಪನಾಶಕ್ತಿಯನ್ನೇ ಕಳೆದುಕೊಂಡಿರುವ ಕಾಂಗ್ರೆಸ್ಸನ್ನು ನಂಬಿಕೊಂಡು ಮಾಡುವ ಕೋಮುವಾದ ವಿರೋಧಿ ರಾಜಕಾರಣ ನಮ್ಮನ್ನು ಎಲ್ಲಿಗೆ ತಲುಪಿಸೀತು? ಯೋಚಿಸಬೇಕಾದ ಕಾಲವೀಗ ಬಂದಿದೆ.

('ವಿಜಯ ಕರ್ನಾಟಕ' : ಆಗಸ್ಟ್ ೨೫, ೨೦೧೭)

ರಾಂರಹೀಮನೂ ಭಾರತದ ರಾಜಕಾರಣವೂ...

ರಾಂರಹೀಮನ ಅನುಯಾಯಿಗಳ ಪುಂಡಾಟಿಕೆಯ ಆಳ ಅಗಲ ಮತ್ತು ಅದಕ್ಕೆ ಹರ್ಯಾಣ ಸರ್ಕಾರ ಮಣಿದಿದ್ದ ಪರಿಯನ್ನು ದೇಶ ನೋಡಿದೆ; ಗಾಬರಿಗೊಂಡಿದೆ. ೩೬ ಸಾವು; ೩೦೦ ಜನರಿಗೆ ಗಂಭೀರ ಗಾಯ; ಕೋಟ್ಯಂತರ ರೂಪಾಯಿಗಳ ಆಸ್ತಿಪಾಸ್ತಿ ನಷ್ಟ. ಎರಡು ರೈಲುಗಳ ರದ್ದತಿ, ಶಾಲಾ ಕಾಲೇಜುಗಳ ಬಂದ್, ಜನಜೀವನ ಅಸ್ತವ್ಯಸ್ತ... ಎಲ್ಲ ಗುರುಮೀತ್‌ಸಿಂಗ್ ರಾಂರಹೀಂ ಎಂಬ ಒಬ್ಬ ಅತ್ಯಾಚಾರಿ ಮತ್ತು ಕೊಲೆಪಾತಕಿಯಾದ ಸ್ವಯಂಘೋಷಿತ 'ದೇವ ಮಾನವ' ಮತ್ತು ಆತನ ಪುಂಡುಪಡೆಯ ಮುಂದೆ ಮೊಣಕಾಲೂರಿ ಕೂತ ರಾಜ್ಯ ಸರ್ಕಾರವೊಂದು ಸಕಾಲದಲ್ಲಿ ಏಳಲು ಸಾಧ್ಯವಾಗದ ಕಾರಣದಿಂದಾಗಿ! ಇದು ಭಾರತ! ಬಲಿಷ್ಠ ಮತ್ತು ಜಾಗತಿಕ ಶಕ್ತಿಯಾಗಲು ಹವಣಿಸುತ್ತಿರುವ ನಮ್ಮ ಭಾರತ!!

ಈ ರಾಂರಹೀಂ ಪ್ರಕರಣ ಈ ದೇಶದ ಮೂರು ಮುಖ್ಯ ಸಮಸ್ಯೆಗಳಾದ ಮತಮೌಢ್ಯ, ಜಾತೀಯತೆ ಮತ್ತು ತತ್ವಹೀನ ರಾಜಕಾರಣದ ಫಲವಾಗಿದೆ. ಪಂಜಾಬ್-ಹರ್ಯಾಣಾ-ರಾಜಸ್ಥಾನಗಳಲ್ಲಿ ವ್ಯಾಪಕ ಪ್ರಭಾವವಿರುವ 'ಡೇರಾ'ಗಳೆಂದು ಕರೆಯಲಾಗುವ ಪಂಥಾಧಿಪತ್ಯಗಳು (ಹೆಚ್ಚೂಕಡಿಮೆ ನಮ್ಮಲ್ಲಿನ ಮಠಗಳಂತೆ) ಲಕ್ಷಾಂತರ ಅನುಯಾಯಿಗಳನ್ನು ಹೊಂದಿ ಈ ರಾಜ್ಯಗಳಲ್ಲಿ ಸಮಾನಾಂತರ ಸರ್ಕಾರಗಳಂತೆ ಮೆರೆಯುತ್ತಿವೆ. ಹಿಂದೂ ಮತದಲ್ಲಿ ಗೌರವ-ರಕ್ಷಣೆ ಇಲ್ಲವೆಂದು ಸಿಖ್ ಮತ ಸೇರಿದ ಅಸ್ಪೃಶ್ಯರು ಮತ್ತು ಆಸುಪಾಸಿನ ಅತಿ ಕೆಳಜಾತಿಗಳ ಜನರೇ ಹೆಚ್ಚಾಗಿ ಈ ಪಂಥಗಳ ಅನುಯಾಯಿಗಳು.

ಈ ಜನರ ಸಾಮಾಜಿಕ ಅಭದ್ರತೆ ಮತ್ತು ಧಾರ್ಮಿಕತೆಯ ಹಂಬಲಗಳನ್ನು ಪೂರೈಸುವ ಭರವಸೆಗಳನ್ನು ನೀಡುವ ಈ ಡೇರಾಗಳ ಅಧಿಪತಿಗಳು ಹೆಚ್ಚಾಗಿ ನೆಚ್ಚಿರುವುದು ಮಧ್ಯಕಾಲೀನ ಪಾಳೇಗಾರಿಕೆ ಮೌಲ್ಯಗಳನ್ನೇ. ಆ ಜನ ತಮಗೆ ಮಾನ್ಯತೆ

ಇರುವ ಒಂದು ಮತಾಶ್ರಯದ ತೀವ್ರ ಅಗತ್ಯವನ್ನು ಈ ಡೇರಾಗಳ ಒಡೆಯರು ಪೂರೈಸುವ ವ್ಯವಸ್ಥೆ ಮಾಡುತ್ತಿರುವುದರಿಂದ ಪಾಳೇಗಾರಿಕೆಯ ಮೌಲ್ಯಗಳು ಅವರಿಗೆ ಪ್ರಿಯವೇ ಆಗಿವೆ ಮತ್ತು ಇಂತಹ ಮೌಲ್ಯಗಳೇ ಇತರ 'ಸಮುದಾಯ'ಗಳ ಸಾಂಸ್ಕೃತಿಕ ಆಕ್ರಮಣಶೀಲತೆಯಿಂದ ತಮ್ಮನ್ನು ರಕ್ಷಿಸಬಲ್ಲವು ಎಂಬ ನಂಬಿಕೆಯನ್ನೂ ಅವರು ಬೆಳಸಿಕೊಂಡಿದ್ದಾರೆ. ಜನ ಮತ್ತು ನಂಬಿಕೆ ಸೇರಿ ಅಸುರಕ್ಷತೆಯ ಭಾವನೆಯಲ್ಲಿ ಒಂದು ಪ್ರತ್ಯೇಕ ಪಂಥವಾಗಿ ರೂಪುಗೊಳ್ಳುವಾಗ ಅಗಬಹುದಾದ ಅನಾಹುತಗಳೆಲ್ಲವೂ ರಾಂರಹೀಂ ಡೇರಾದಲ್ಲೂ ಆಗಿವೆ.

ಈ ಡೇರಾಗಳು ತಮ್ಮ ಮತಾಧಿಪತ್ಯಕ್ಕಾಗಿ ಸ್ಫೂರ್ತಿ ಪಡೆದದ್ದು ಸಿಖ್ ಮತ ಬೋಧಿಸುವ ಹಿಂದೂ-ಮುಸ್ಲಿಂ ತತ್ವಗಳ ಬೆಸುಗೆಯ ವಿಶಿಷ್ಟ ದೈವ-ರೂಪಕವನ್ನು. ಹಾಗಾಗಿಯೇ ಇದು ರಾಂ-ರಹೀಂ ಎಂಬ ಮೇಲ್ನೋಟಕ್ಕೆ ಹಳೆಯ ಮಡಿ-ನಿಷೇಧಗಳಿಲ್ಲದ ಆಧುನಿಕ ಧಾರ್ಮಿಕ ತತ್ವವೆನಿಸಿ ಬಹುಜನ ಸಮಾಜವನ್ನು ಆಕರ್ಷಿಸಲು ಸಾಧ್ಯವಾಗಿದೆ. ಮಧ್ಯಕಾಲೀನ ಪಾಳೇಪಟ್ಟುಗಳ ಎಲ್ಲ ಲಕ್ಷಣಗಳನ್ನೂ ಹೊಂದಿದ ಈ ಪಂಥಾಧಿಪತ್ಯಗಳು ಮತಾಚಾರಗಳಿಗೆ ಅಳವಡಿಸಿಕೊಂಡದ್ದು ಅತ್ಯಾಧುನಿಕ ತಾಂತ್ರಿಕ ಪರಿಕರ ಮತ್ತು ಮಾರ್ಗಗಳನ್ನು. ಪಾಶ್ಚಾತ್ಯ ಶೈಲಿಯ ರಭಸ ಸಂಗೀತದ ಸ್ತೋತ್ರ ಗೀತೆಗಳು, ಘೋಷಣೆಗಳು, ಡೇರೆಯ ರಕ್ಷಣೆಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಸಜ್ಜಾದ ಖಾಸಗಿ ಪಡೆಗಳು...

ಹಣ, ಆಸ್ತಿ, ಅಸ್ತ್ರ ಮತ್ತು ಅಮಲು ತರಿಸುವಂತಹ ಮತಾಚಾರಗಳು ತುದಿ ಮುಟ್ಟಿದಾಗ ಸಹಜವಾಗಿ ಹೆಣ್ಣೂ ಆಧಿಪತ್ಯದ ಆಕರ್ಷಣೆ ಮತ್ತು ರಕ್ಷಣಾ ಅಸ್ತ್ರವಾಗುವುದು ಅನಿವಾರ್ಯವೇ. ಹಾಗಾಗಿ ಈ ಆಧುನಿಕ ಅರಮನೆಯಲ್ಲಿ ಅಂತಃಪುರಗಳೂ ಸ್ಥಾಪಿತವಾದವು. ಅವನ್ನು ಕಾಯಲು ಹಲವು ಕುಂಟಣಿಯರೂ ಮುಂದೆ ಬಂದರು. ಅವರು ಸಾಲದಾದಾಗ ಹಲವು ಪುರುಷರ ಬೀಜ ಒಡೆದ ಖೋಜಾಗಳ ವಿಶೇಷ ಪಡೆಯೂ ಸಿದ್ಧವಾಯಿತು. ನೂರಾರು ಅಮಾಯಕ ಯುವತಿಯರೂ, ಮಹಿಳೆಯರೂ ಆ ಚಕ್ರವ್ಯೂಹ ಸೇರಿ ಹೊರಬರದಾದರು.

ಆಧಿಪತ್ಯ ಭದ್ರವಾಗಿ ಬೇರೂರಲು ಈಗ ಬೇಕಾಗಿದ್ದ ಒಂದೇ ಅಗತ್ಯವೆಂದರೆ ಪ್ರಜಾಪ್ರಭುತ್ವದ ಔಪಚಾರಿಕ ಚೌಕಟ್ಟಿನಲ್ಲಿ ಜಾಗ ಗಿಟ್ಟಿಸಿಕೊಳ್ಳುವುದು. ಅದಕ್ಕಾಗಿ ಅದು ಮಾಡಿದ್ದು, ಪ್ರಮುಖ ರಾಜಕೀಯ ಪಕ್ಷಗಳ ನಾಯಕರ ಓಲೈಕೆ. ಆದರೆ ಇದರಿಂದ ಆದದ್ದೇನೆಂದರೆ, ಈ ಆಧಿಪತ್ಯದಲ್ಲಿ ಒಟ್ಟಿಗೇ ಬೃಹತ್ ಪ್ರಮಾಣದ ಖಚಿತ ವೋಟ್ ಬ್ಯಾಂಕ್ ಇರುವುದನ್ನು ಕಂಡ ರಾಜಕೀಯ ಪಕ್ಷಗಳೇ ಈ ಆಧಿಪತ್ಯವನ್ನು ಓಲೈಸತೊಡಗಿದ್ದು! ಇದರ ಪರಿಣಾಮವೆಂದರೆ ಅಧಿಕಾರಶಾಹಿ ಮತ್ತು ಇಡೀ ಪೋಲೀಸ್ ವ್ಯವಸ್ಥೆಗಳಿಂದಲೂ ಈ ಆಧಿಪತ್ಯಗಳಿಗೆ ಸಮಾನಾಂತರ ಸರ್ಕಾರದ ಮಾನ್ಯತೆ ದೊರಕಿದ್ದು. ಹಾಗಾಗಿಯೇ ಈ ರಾಂರಹೀಂ ಹೀನ ಅಪರಾಧಿ ಎಂದು ನ್ಯಾಯಾಲಯದಿಂದ ಘೋಷಿತವಾದ ಮೇಲೂ, ಅವನಿಗೆ ಅಧಿಕಾರಶಾಹಿ ಮತ್ತು ಪೊಲೀಸರು ರಾಜಾತಿಥ್ಯ ನೀಡಿ ಅನಿವಾರ್ಯವೆಂಬಂತೆ ಸೆರೆಮನೆಗೆ ಕಳಿಸಿದ್ದು.

ಇದೆಲ್ಲವನ್ನೂ ಅಸಹಾಯಕವಾಗಿ ನೋಡುವುದೊಂದೇ ಇಂತಹ ಸಂದರ್ಭಗಳಲ್ಲಿ ಜನರ ಆಯ್ಕೆಯಾಗಿರುತ್ತದೆ.

ಈ ನಾಚಿಕೆಗೆಟ್ಟ ಓಲೈಕೆ ರಾಜಕಾರಣಕ್ಕೆ ಯಾವ ಪಕ್ಷವೂ–ಮುಖ್ಯವಾಗಿ ಕಾಂಗ್ರೆಸ್, ಭಾಜಪ, ಅಕಾಲಿ ದಳ–ಹೊರತಾಗಿಲ್ಲ. ೨೦೧೪ರ ಲೋಕಸಭೆ ಮತ್ತು ೨೦೧೫ರ ರಾಜ್ಯ ವಿಧಾನಸಭಾ ಚುನಾವಣೆಗಳಲ್ಲಿ ಈ ಡೇರಾ ಭಾಜಪಗೆ ತನ್ನ ಬೆಂಬಲ ಘೋಷಿಸಿತ್ತು. ಅದಕ್ಕೆ ಮುನ್ನ ಅದರ ಬೆಂಬಲ ಇದ್ದದು ಕಾಂಗ್ರೆಸ್‌ಗೆ. ಅಷ್ಟೇ ಅಲ್ಲ, ೨೦೧೭ರ ಪಂಜಾಬ್ ಚುನಾವಣೆಗಳಲ್ಲಿ ಅದು ಬೆಂಬಲಿಸಿದ್ದು ಕಾಂಗ್ರೆಸ್ಸನ್ನು. ಡೇರಾ ಯಾವಾಗಲೂ ಚಾಣಾಕ್ಷ ರಾಜಕೀಯ ಆಯ್ಕೆಗಳನ್ನೇ ಮಾಡಿಕೊಂಡು ಬಂದಿದೆ. ಯಾವ ಪಕ್ಷ ಗೆಲ್ಲುವ ಸೂಚನೆಗಳು ದಟ್ಟವಾಗಿವೆಯೋ ಆ ಪಕ್ಷವನ್ನು ಅದು ಬೆಂಬಲಿಸುತ್ತಾ ಬಂದಿದೆ. ಆದರೆ ಜಿಗುಪ್ಸೆ ತರುವ ಸಂಗತಿ ಎಂದರೆ ನಮ್ಮ ರಾಜಕೀಯ ಪಕ್ಷಗಳು ವೋಟುಗಳಿಗಾಗಿ ಡೇರಾಗಳಂತಹ ಮಹಾ ದುಷ್ಟ ಪಾಳೆಪಟ್ಟುಗಳಿಗೆ ಮಣಿಯುತ್ತಾ ಹೋದದ್ದು. ಅದರ ಫಲವನ್ನು ಈಗ ಹರ್‍ಯಾಣ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಅನುಭವಿಸುತ್ತಿವೆ. ಇದಕ್ಕಾಗಿ ಬಿಜೆಪಿಯೊಂದನ್ನೇ ದೂಷಿಸುವವರು ದೊಡ್ಡ ತಪ್ಪೊಂದನ್ನು ಮಾಡುತ್ತಿದ್ದಾರೆ. ತಮಗೆ ತಾವೇ ಮೋಸ ಮಾಡಿಕೊಂಡು ನಮ್ಮ ಇಡೀ ರಾಜಕೀಯ ವ್ಯವಸ್ಥೆಗೇ ಹತ್ತಿರುವ ಭೀಕರ ರೋಗವನ್ನು ನಿರ್ಲಕ್ಷಿಸುತ್ತಿದ್ದಾರೆ.

ಅದೇನೇ ಇರಲಿ, ಈ ಇಡೀ ಪ್ರಕರಣ ಹೊರಬಂದು ಡೇರಾದ ಅಧಿಪತಿ ಜೈಲು ಸೇರಲು ಕಾರಣರಾದ ನಾಲ್ಕೈದು ಜನರಿಗೆ ನಾವು ಎದ್ದುನಿಂತು ಗೌರವ ವಂದನೆಗಳನ್ನು ಸಲ್ಲಿಸಬೇಕಿದೆ. ಮೊದಲಿಗೆ, ಹತ್ತು ವರ್ಷಗಳಿಗೂ ಹೆಚ್ಚು ಕಾಲ ಎಳೆದುಕೊಂಡು ಹೋದ ಈ ವಿಚಾರಣೆಯ ದೀರ್ಘ ಅವಧಿಯಲ್ಲಿ ಬಹಳಷ್ಟು ಸಾಕ್ಷಿಗಳು ಪ್ರಾಣಭಯದಿಂದ ಹೆದರಿ ಹಿಂಜರಿದರೂ, ತಲೆ ಮರೆಸಿಕೊಂಡರೂ, ಧೈರ್ಯಗೆಡದೆ ಪಟ್ಟಾಗಿ ನಿಂತು ಈ ಡೇರಾದ ಅನಾಚಾರಗಳಿಗೆ ಸಾಕ್ಷಿಯಾದ ಇಬ್ಬರು ಮಹಿಳೆಯರಿಗೆ. ಎರಡನೆಯದಾಗಿ, ಎಷ್ಟೇ ಬೆದರಿಕೆ, ಒತ್ತಡ ಆತಂಕಗಳ ಮಧ್ಯೆಯೂ ವಿಚಲಿತರಾಗದೆ, ಯಾವ ಆಮಿಷಗಳಿಗೂ ಒಳಗಾಗದೆ ಈ ಪರಮ ದುಷ್ಟನ ವಿರುದ್ಧ ಇಂದಿನ ದಿನಮಾನಗಳಲ್ಲಿ ಅಪರೂಪವೆನಿಸುವ ನೈತಿಕ ಸ್ಥೈರ್ಯ ಮೆರೆದು ದಿಟ್ಟ ತೀರ್ಪು ನೀಡಿದ ಸಿ.ಬಿ.ಐ. ನ್ಯಾಯಾಲಯದ ನ್ಯಾಯಾಧೀಶರಿಗೆ. ಮೂರನೆಯದಾಗಿ, ಈ ನ್ಯಾಯಾಧೀಶನಿಗೆ ನೈತಿಕ ಬೆಂಬಲವಾಗಿ ನಿಂತು ತೀರ್ಪಿನ ಹಿನ್ನೆಲೆಯಲ್ಲಿ ಕಾನೂನು–ಶಿಸ್ತನ್ನು ಕಾಪಾಡುವ ಹೊಣೆಯ ಬಗ್ಗೆ ಸೂಚನೆಯ ಜೊತೆಗೆ ಪರಿಸ್ಥಿತಿ ಕೈಮೀರಿ ಪ್ರಾಣ ಮತ್ತು ಆಸ್ತಿಪಾಸ್ತಿ ಹಾನಿಯಾದರೆ ಅದಕ್ಕೆ ರಾಂರಹೀಂನ ಡೇರಾದ ಆಸ್ತಿಪಾಸ್ತಿಯನ್ನು ಹರಾಜು ಹಾಕಿ ಅದರಿಂದ ಪರಿಹಾರ ನೀಡುವಂತೆ ಹರ್ಯಾಣದ ಸರ್ಕಾರಕ್ಕೆ ಆದೇಶ ನೀಡಿ ಪಂಜಾಬ್ ಮತ್ತು ಹರ್‍ಯಾಣಾ ಉಚ್ಚ ನ್ಯಾಯಾಲಯದ ಅಪೂರ್ವ ಜನಪರತೆಗೆ. ಈ ಸೂಚನೆಯನ್ನು ರಾಜ್ಯ ಸರ್ಕಾರ ಪಾಲಿಸಲಿಲ್ಲ ಮತ್ತು ಅದರ ಫಲವನ್ನು ಅದೀಗ ಅನುಭವಿಸುತ್ತಿದೆ ಎಂಬುದು ಬೇರೆ ವಿಚಾರ.

ಕಳೆದ ವಾರ ನಮ್ಮ ಸರ್ವೋಚ್ಚ ನ್ಯಾಯಾಲಯ ನೀಡಿದ ಎರಡು ತೀರ್ಪುಗಳು ಮತ್ತು ಈಗ ಚಂಡೀಗಢದ ಸಿ.ಬಿ.ಐ ನ್ಯಾಯಾಲಯ ನೀಡಿರುವ ತೀರ್ಪನ್ನು ಗಮನಿಸಿದರೆ,

ನ್ಯಾಯದಾನ ವಿಳಂಬ ಮಾಡುತ್ತಿರುವ ಅನಾಹುತಗಳ ನಡುವೆಯೂ, ಈ ದೇಶದ ಪ್ರಜೆಯ ಆತ್ಯಂತಿಕ ರಕ್ಷಣೆಗೆ ಈಗ ಉಳಿದಿರುವ ಏಕೈಕ ವೇದಿಕೆ ನ್ಯಾಯಾಲಯವೇ ಎಂದು ಬಹಳ ಜನಕ್ಕೆ ಅನ್ನಿಸಿದ್ದರೆ ಆಶ್ಚರ್ಯವಿಲ್ಲ.

ಇಲ್ಲಿ ಗಮನಿಸಬಹುದಾದ ಇನ್ನೊಂದು ಸಂಗತಿ ಎಂದರೆ, ಈ ರಾಂರಹೀಂನ ಗೂಂಡಾ ಪಡೆಯನ್ನು ಎದುರಿಸಲು ಕೊನೇ ಕ್ಷಣದವರೆಗೂ ನಿರಾಕರಿಸಿದ ಹರ್‍ಯಾಣ ಸರ್ಕಾರದ ಮುಖ್ಯಮಂತ್ರಿ ಕಟ್ಟರ್ ಆರೆಸ್ಸೆಸ್ ಗರಡಿಯ ಪೈಲ್ವಾನ ಎಂಬುದು. ಈ ಆರೆಸ್ಸೆಸ್ ಬೋಧಿಸುವ ಧರ್ಮಾಚರಣೆ ಎಷ್ಟು ಟೊಳ್ಳಾದದ್ದು ಎಂಬುದೀಗ ಸಾರ್ವಜನಿಕವಾಗಿದೆ. ಇಷ್ಟೆಲ್ಲ ಅನಾಹುತದ ನಂತರವೂ ಈತನನ್ನು ಮುಖ್ಯಮಂತ್ರಿ ಸ್ಥಾನದಿಂದ ಕಳಗಿಳಿಸಲು ಪಕ್ಷಕ್ಕೆ ಆಗಿಲ್ಲ. ಕಾರಣ, ಮತ್ತೆ ಆರೆಸ್ಸೆಸ್ಸೇ. ಆರೆಸ್ಸೆಸ್ ಬಗ್ಗೆ ನಮ್ಮ ಯಾವುದೇ ದೂರಿದ್ದರೂ ಈ ಪ್ರಾಥಮಿಕ ನೈತಿಕತೆಯ ಕುರುಡನ್ನು ಅದರಿಂದ ಯಾರೂ ನಿರೀಕ್ಷಿಸಿರಲಿಲ್ಲ. ಅದಕ್ಕೆ ಈ ಅಧಿಕಾರ ರೋಗ ಇಷ್ಟು ದಾರುಣವಾಗಿ ಅಂಟಿಕೊಳ್ಳುವುದೆಂದು ಸ್ವತಃ ಆರೆಸ್ಸೆಸ್ ಸಾಮಾನ್ಯ ಕಾರ್ಯಕರ್ತರೇ ನಿರೀಕ್ಷಿಸಿರಲಾರರು.

ಕೊನೆಯದಾಗಿ ಹೇಳಬಹುದಾದ ಮಾತೆಂದರೆ, ಊರಿಗೊಂದು ಮಠವಿದ್ದು ಮಠಗಳ ಸಂಖ್ಯೆಯಲ್ಲಿ ವಿಶ್ವ ದಾಖಲೆ ಹೊಂದಿರುವ ಕರ್ನಾಟಕದಲ್ಲೂ ರಾಂರಹೀಮರು ಇದ್ದಾರೆ. ಕೆಲವರು ಹಳೆಯ ಮಠಗಳ ಅಧಿಪತಿಗಳಾಗಿ ಮತ್ತು ಕೆಲವರು ಈಗ ಹೊಸ ಮಠಗಳ ಸ್ಥಾಪಕರಾಗುವ ಉತ್ಸಾಹದಲ್ಲಿ. ಅವರೆಲ್ಲ ತಮ್ಮದೇ ರೀತಿಯಲ್ಲಿ ಮಠಾಧಿಪತ್ಯದ ಸಂಘಟನೆಯ ಕಾರ್ಯಗಳಲ್ಲಿ ತೊಡಗಿದ್ದಾರೆ. ಜನ ಈಗಲೇ ಎಚ್ಚರ ವಹಿಸುವುದು ಅಗತ್ಯ. ಸರಕಾರವನ್ನಾಗಲೀ, ಪೊಲೀಸರನ್ನಾಗಲೀ ನಂಬಿ ಕೂತರೆ ಮೋಸ ಹೋಗುವುದು ಖಂಡಿತ. ಏಕೆಂದರೆ ಮತಾಂಧ ಮತ್ತು ಜಾತ್ಯಂಧ ಸಂಘಟನೆಗಳು ಯಾವಾಗ ಎಂತಹ ಬಾಂಬುಗಳಾಗಿ ಸ್ಫೋಟಿಸುವವೋ ಹೇಳಲಾಗುವುದಿಲ್ಲ.

(ಫೇಸ್‌ಬುಕ್ ಬರಹ : ೨೭ ಆಗಸ್ಟ್, ೨೦೧೭)

ಸಂಪುಟ ಪುನಾರಚನೆಯ ಹಿಂದಿನ ಸತ್ಯಗಳು

ಪ್ರಧಾನಿ ನರೇಂದ್ರ ಮೋದಿಯವರು ಬಹಳ ತುರ್ತಿನಲ್ಲಿದ್ದಂತೆ, (ಕಳೆದ ಭಾನುವಾರ) ತಮ್ಮ ಸಚಿವ ಸಂಪುಟವನ್ನು ಪುನಾರಚಿಸಿದ್ದಾರೆ. ಎಷ್ಟು ತುರ್ತಿನಲ್ಲಿ ಎಂದರೆ ಚೀನಾದಲ್ಲಿನ ಬ್ರಿಕ್ಸ್ ಸಮ್ಮೇಳನಕ್ಕೆ ಹೋಗುವ ತರಾತುರಿಯ ಮಧ್ಯೆಯೇ ಈ ಕಸರತ್ತಿಗೂ ಸಮಯ ಮಾಡಿಕೊಂಡು ಅದನ್ನು ನೆರವೇರಿಸಿಕೊಂಡೇ ಅಲ್ಲಿಗೆ ತೆರಳಿದ್ದಾರೆ. ಈ ಪುನಾರಚನೆ ಬರಲಿರುವ ಗುಜರಾತ್, ರಾಜಸ್ಥಾನ, ಹಿಮಾಚಲ ಪ್ರದೇಶ ಮತ್ತು ಕರ್ನಾಟಕ ರಾಜ್ಯ ವಿಧಾನಸಭಾ ಚುನಾವಣೆಗಳಿಗೆ ಮತ್ತು ಆನಂತರದಲ್ಲೇ ಎದುರಾಗುವ ಲೋಕಸಭಾ ಚುನಾವಣೆಗಳಿಗೆ ಪಕ್ಷ ಮತ್ತು ಸರ್ಕಾರಗಳನ್ನು ಸಜ್ಜುಗೊಳಿಸುವ ದೃಷ್ಟಿಯಿಂದ ಅನಿವಾರ್ಯವಾಗಿದೆ ಎಂದು ಹೇಳಲಾಗುತ್ತಿತ್ತು. ಆದರೆ ಆ ಲಕ್ಷಣಗಳೇನೂ ಈ ಪುನಾರಚನೆಯಲ್ಲಿ ಕಾಣುತ್ತಿಲ್ಲ ಮತ್ತು ಮಿತ್ರ ಪಕ್ಷಗಳ ಸದಸ್ಯರಿಗೆ ಇದರಲ್ಲಿ ಅವಕಾಶ ಮಾಡಿಕೊಡಲಾಗಿಲ್ಲ. ಹಾಗಾದರೆ ಈ ಪುನಾರಚನೆಯ ಉದ್ದೇಶವಾದರೂ ಏನು? ಮತ್ತು ಇದಕ್ಕೆ ಇದ್ದ ತುರ್ತಾದರೂ ಏನು?

ಈ ಪುನಾರಚನೆಯ ಸಂದರ್ಭದಲ್ಲಿ ಕೈಬಿಡಲಾಗಿರುವ ಮತ್ತು ಹೊಸದಾಗಿ ಸೇರಿಸಿಕೊಳ್ಳಲಾಗಿರುವ ಸದಸ್ಯರ ವಿವರಗಳನ್ನು ನೋಡಿದರೆ ಈ ತುರ್ತಿನ ಒಂದು ಕಾರಣ ಸ್ಪಷ್ಟವಾಗುತ್ತದೆ. ಹೊಸದಾಗಿ ಸೇರಿಸಿಕೊಳ್ಳಲಾಗಿರುವ ಒಂಬತ್ತು ಸಚಿವರಲ್ಲಿ ನಾಲ್ಕು ಜನ ಪಕ್ಷದ ಮೂಲ ತತ್ವಪರಂಪರೆಗೆ ಅಪರಿಚಿತರಾಗಿರುವವರು ಮತ್ತು ವಿವಿಧ ವೃತ್ತಿಪರ ಪರಿಣಿತಿಯ ಹಿನ್ನಲೆ ಹೊಂದಿದವರು. ಹರದೀಪ್ ಸಿಂಗ್ ಮತ್ತು ಸತ್ಯಪಾಲ್ ಸಿಂಗ್ ಕ್ರಮವಾಗಿ ಭಾರತೀಯ ವಿದೇಶಾಂಗ ಸೇವೆ ಮತ್ತು ಭಾರತೀಯ ಪೋಲೀಸ್ ಸೇವೆಗೆ ಸೇರಿದ್ದ ಅಧಿಕಾರಿಗಳಾಗಿದ್ದರೆ, ಭಾರತೀಯ ಆಡಳಿತ ಸೇವೆಗೆ ಸೇರಿದ ಆರ್.ಕೆ.ಸಿಂಗ್ ಮತ್ತು ಆಲ್ಫೋನ್ಸೊ ಕಳೆದ ಲೋಕಸಭಾ ಚುನಾವಣೆಗಳ ಸಂದರ್ಭದಲ್ಲಷ್ಟೇ ಬಿಜೆಪಿಗೆ ಸೇರಿದವರು. ಇವರಲ್ಲಿ ಆರ್.ಕೆ.ಸಿಂಗ್, ಬಿಹಾರದಲ್ಲಿ ಜಿಲ್ಲಾಧಿಕಾರಿಯಾಗಿದ್ದಾಗ ಭಾಜಪದ ಹಿರಿಯ ನಾಯಕರಲ್ಲೊಬ್ಬರಾದ ಎಲ್.ಕೆ. ಅಡ್ವಾಣಿಯವರ ರಥಯಾತ್ರೆಯನ್ನು

ತಡೆಯುವ ಭಾಗವಾಗಿ ಅವರನ್ನು ಬಂಧಿಸುವ ಆಜ್ಞೆ ನೀಡಿದವರು ಮತ್ತು ಕೇಂದ್ರ ಗೃಹ ಕಾರ್ಯದರ್ಶಿಯಾಗಿ ಇತ್ತೀಚಿನ ಮಾಲೇಗಾಂವ್ ಸ್ಫೋಟ ಪ್ರಕರಣದಲ್ಲಿ ಆರೆಸ್ಸೆಸ್‌ನ ಕೈವಾಡವಿದೆ ಎಂದು ಸಾರ್ವಜನಿಕ ಹೇಳಿಕೆ ನೀಡಿದ್ದವರು. ಇನ್ನು ಆಲ್ಫೋನ್ಸೊ ಅವರಾದರೋ ಈ ಹಿಂದೆ ಕೇರಳ ವಿಧಾನಸಭೆಗೆ ಎಡರಂಗದ ಬೆಂಬಲ ಪಡೆದು ಆಯ್ಕೆಯಾಗಿದ್ದವರು. ಆದರೆ ಇದನ್ನೆಲ್ಲ ಲಕ್ಷಿಸದೆ ಪ್ರಧಾನಿಯವರು ಈ ನಾಲ್ಕೂ ಜನರ ವೃತ್ತಿ ಸಾಧನೆಗಳನ್ನಷ್ಟೇ ಗಮನಿಸಿ ತಮ್ಮ ಸರ್ಕಾರದ ಸಚಿವರನ್ನಾಗಿ ಮಾಡಿಕೊಂಡಿದ್ದಾರೆ. ಇನ್ನು ಬಿಹಾರದ ಅಶ್ವಿನಿ ಕುಮಾರ್ ಚೌಬೆಯವರು ದಲಿತರ ವಸತಿ ಶೌಚಾಲಯ ಆಂದೋಲನದಲ್ಲಿ ಭಾಗವಹಿಸಿ ಹನ್ನೊಂದು ಸಾವಿರ ಮನೆಗಳಿಗೆ ಶೌಚಾಲಯಗಳನ್ನು ಒದಗಿಸುವಲ್ಲಿ ಯಶಸ್ವಿಯಾಗಿರುವವರು.

ಹೀಗೆ ಮೋದಿಯವರು ತಮ್ಮ ಸಚಿವ ಸಂಪುಟಕ್ಕೆ ರಾಜಕೀಯ ಪರಿಗಣನೆಯ ಹೊರತಾಗಿ ಜನರ ಕಣ್ಣಿಗೆ ಎದ್ದು ಕಾಣುವಂತಹ ವೃತ್ತಿಶೀಲತೆಯನ್ನು ಪ್ರದಾನ ಮಾಡಲು ಯತ್ನಿಸಿದ್ದಾರೆ. ಆದರೆ ಇದನ್ನು ಬ್ರಿಕ್ಸ್ ಸಮ್ಮೇಳನಕ್ಕೆ ಹೋಗಿ ಬಂದ ನಂತರ ವ್ಯವಧಾನದಲ್ಲಿ ಮಾಡಬಹುದಿತ್ತಲ್ಲವೆ? ಎರಡು-ಮೂರು ದಿನಗಳಲ್ಲಿ ಜಗತ್ತು ತಲೆಕೆಳಗಾಗುತ್ತಿತ್ತೇ? ಆದರೆ ರಾಜಕಾರಣದ ಆಟದಲ್ಲಿ ಬಹುಸೂಕ್ಷ್ಮಮತಿಗೆ ಹೆಸರಾದ ಮೋದಿ ಮತ್ತು ಅಷ್ಟೇ ಚತುರಮತಿಯಾದ ಬಿಜೆಪಿಯ ಅಧ್ಯಕ್ಷ ಅಮಿತ್‌ಶಾ, ಕಳೆದ ಒಂದು ವಾರದಿಂದ ಒಂದೇ ಸಮನೆ ತಮ್ಮ ಪಕ್ಷ ಮತ್ತು ಸರ್ಕಾರಗಳ ಮೇಲೆ ಎರಗುತ್ತಿರುವ ಆರೋಪ-ದಾಳಿಗಳ ಸಾರ್ವಜನಿಕ ವಿಶ್ವಾಸಾರ್ಹತೆ ಹೆಚ್ಚುತ್ತಿದ್ದು ಅದರ ಪರಿಣಾಮವಾಗಿ ಪಕ್ಷ ಮತ್ತು ಸರ್ಕಾರಗಳ ಮೇಲೆ ನಿಧಾನವಾಗಿ ದಟ್ಟೈಸತೊಡಗಿರುವ ಕರಿಮೋಡಗಳ ಬಗ್ಗೆ ಕಳವಳಪಟ್ಟಿರುವುದು ಸಹಜವೇ ಆಗಿದೆ. ಇದಕ್ಕೆ ತುರ್ತು ಪರಿಹಾರವಾಗಿ ಕೈಗೊಂಡ ಕ್ರಮವೇ- ಸರ್ಕಾರ ಮೈಮರೆತಿಲ್ಲ; ಬದಲಿಗೆ ಎಚ್ಚರದಿಂದಿದ್ದು, ತನ್ನ ಕ್ರಿಯಾಶೀಲತೆಯಲ್ಲಿ ಹೆಚ್ಚು ವೃತ್ತಿಪರವಾಗಲು ಹೊರಟಿದೆ ಎಂಬ ತುರ್ತು ಸಂದೇಶವನ್ನು ಒಂದು ದಿನವೂ ತಡ ಮಾಡದೆ ಜನರಿಗೆ ನೀಡುವುದು. ಇದೇ ಈ ಸಂಪುಟ ಪುನಾರಚನೆಯ ಉದ್ದೇಶವಾಗಿದೆ ಎಂದು ಕಾಣುತ್ತದೆ.

ಇನ್ನು ಖಾಸಗಿತನ ಕುರಿತ ಸುಪ್ರೀಂ ಕೋರ್ಟಿನ ತೀರ್ಪಿನಿಂದಾಗಿ ಸರ್ಕಾರಕ್ಕೆ ಮುಖಭಂಗವಾಯಿತಾದರೂ, ಸಾರ್ವಜನಿಕರಲ್ಲಿ ಅದರ ಪ್ರತಿಕೂಲ ಪರಿಣಾಮ ದಾಖಲಾಗಿದ್ದು ಕೆಲವೇ ಕೆಲವರಲ್ಲಿ, ಕೇವಲ ಪ್ರಜ್ಞಾವಂತ ವರ್ಗದಲ್ಲಿ ಎಂಬುದೂ ನಿಜ. ಆದರೆ ಕಳೆದ ಚುನಾವಣೆಗಳಲ್ಲಿ ಬಿಜೆಪಿಗೆ ಮತ ಹಾಕಿದವರಲ್ಲಿ ಅದರ ಹಿಂದೂತ್ವಕ್ಕಾಗಿ ಮತ ಹಾಕಿದವರಷ್ಟೇ, ಕಾಂಗ್ರೆಸ್ಸಿನ ಭ್ರಷ್ಟ ಆಡಳಿತಕ್ಕೆ ಪ್ರತಿಯಾಗಿ ವ್ಯಕ್ತಿಯ ಘನತೆಯನ್ನು ಸಂರಕ್ಷಿಸುವ ಒಂದು ಸಭ್ಯ ಸಮಾಜ ನಿರ್ಮಾಣದ ನಿರೀಕ್ಷೆ ಇಟ್ಟುಕೊಂಡವರೂ ಇದ್ದರು. ಆದರೆ ಸರ್ಕಾರ ಪ್ರಜೆಯ ಖಾಸಗಿತನವೆಂಬುದು ಸಂವಿಧಾನಕ್ಕೆ ಹೊರತಾದ ಕಲ್ಪನೆ ಎಂದು ತನ್ನ (ಮಾಜಿ) ಅಡ್ವೋಕೇಟ್ ಜನರಲ್ ಮೂಲಕ ಸರ್ವೋಚ್ಚ ನ್ಯಾಯಾಲಯದಲ್ಲಿ ವಾದಿಸಿದಾಗಲೇ ಈ ಬಗ್ಗೆ ಈ ವರ್ಗದ ಹುಬ್ಬೇರಿತ್ತು. ಕೊನೆಗೂ ನ್ಯಾಯಾಲದಿಂದ ಈ ವಾದ ತಳ್ಳಿಹಾಕಲ್ಪಡುತ್ತಿದ್ದಂತೆ ಈ ವರ್ಗ ನಿಟ್ಟುಸಿರಿಟ್ಟಿತು. ಆ ನಿಟ್ಟುಸಿರಿನ ಝಳ ಮೋದಿಯವರಿಗೆ ತಾಕಿದಂತಿದೆ.

ಇನ್ನು ರಾಂರಹೀಂ ಪ್ರಕರಣದ ತೀರ್ಪಿನ ಸಂದರ್ಭವನ್ನು ಹರ್ಯಾಣದ ಬಿ.ಜೆ.ಪಿ ಸರ್ಕಾರ ನಿರ್ವಹಿಸಿದ ರೀತಿ ಮತ್ತು ಮುವ್ವತ್ತಾರು ಜನರನ್ನು ಬಲಿತೆಗೆದುಕೊಂಡ ಒಂದು ದಿನದ ಆ ಸಾಮೂಹಿಕ ಹಿಂಸಾಚಾರವನ್ನು ಕೇಂದ್ರ ಸರ್ಕಾರ ಕೆಲವು ಔಪಚಾರಿಕ ಆಡಳಿತಾತ್ಮಕ ಹೇಳಿಕೆಗಳ ಹೊರತಾಗಿ ಮೌನವಾಗಿ ಸಹಿಸಿದ್ದರ ಹಿಂದಿನ ಗುಟ್ಟು ಇಡೀ ರಾಷ್ಟ್ರವನ್ನೇ ಬೆಚ್ಚಿಬೀಳಿಸಿತು. ಅಂತಹ ಗುಟ್ಟುಗಳಲ್ಲಿ ಹೆಚ್ಚಿನ ದುಷ್ಪರಿಣಾಮವನ್ನು ಉಂಟುಮಾಡಿದ್ದೆಂದರೆ, ಬಿಜೆಪಿ ಪಕ್ಷದ ನಾಯಕರೇ ಅಲ್ಲದೆ ಜನರ ಕಣ್ಣಲ್ಲಿ ಪರಿಶುದ್ಧ ರಾಜಕಾರಣದ ಪ್ರತಿಮೂರ್ತಿಯಂತೆ ಬಿಂಬಿತವಾಗಿದ್ದ ಪ್ರಧಾನಮಂತ್ರಿ ಮೋದಿಯವರೇ ಚುನಾವಣಾ ಉದ್ದೇಶಗಳಿಗಾಗಿ ಆ ರಾಂರಹೀಮನ ಓಲೈಕೆ ಮಾಡಿದ್ದರೆಂಬುದು. ಈ ಘಟನೆಯ ಸ್ವಲ್ಪ ಹಿಂದಷ್ಟೇ ತಾವೇ ಕೈಯಾರೆ ಉತ್ತರಪ್ರದೇಶದ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿ ಕಳಿಸಿದ್ದ ಮಹಾ ಉಗ್ರ ಹಿಂದೂವಾದಿ ನಾಯಕ ಯೋಗಿ ಆದಿತ್ಯನಾಥರ ಕ್ಷೇತ್ರ ಗೋರಖಪುರದ ಜಿಲ್ಲಾ ಆಸ್ಪತ್ರೆಯಲ್ಲಿ ಆಡಳಿತ ನಿರ್ಲಕ್ಷ್ಯದಿಂದಾಗಿ ನಾಲ್ಕು ದಿನಗಳಲ್ಲಿ ಅರವತ್ತಕ್ಕೂ ಹೆಚ್ಚು ಮಕ್ಕಳು ಅಸುನೀಗಿದ ದುರಂತದ (ಈ ದುರಂತ ಈಗಲೂ ಮುಂದುವರಿದೇ ಇದೆ) ರಾಜಕೀಯ ದುಷ್ಪರಿಣಾಮಗಳಿಂದ ಹೇಗೋ-ಕೆಳ ಹಂತದ ಅಧಿಕಾರಿಗಳನ್ನು ಹೊಣೆ ಮಾಡಿ-ಪಾರಾಗಿದ್ದ ಮೋದಿಯವರ ಪಕ್ಷ ಮತ್ತು ಸರ್ಕಾರಕ್ಕೆ ಈ ರಾಂರಹೀಂ ಪ್ರಕರಣದ ಕುಪ್ರಸಿದ್ಧಿಯಿಂದ ಮುಕ್ತವಾಗುವುದು ದುಸ್ಸಾಧ್ಯವಾಯಿತು.

ಈ ಗಾಯದ ಮೇಲೆ ಬರೆ ಎಳೆದಂತೆ ಬಂದದ್ದು, ಅನಾಣ್ಯೀಕರಣ ಕಾರ್ಯಕ್ರಮದ ಬಗ್ಗೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಕೊನೆಗೂ ಬಿಡುಗಡೆ ಮಾಡಿದ ಅಂಕಿ-ಅಂಶಗಳು ಮತ್ತು ಅದರ ಬೆನ್ನಲ್ಲೇ ಸರ್ಕಾರಿ ಮೂಲಗಳೇ ಬಿಡುಗಡೆ ಮಾಡಿದ ಕಳೆದ ಎರಡು ತ್ರೈಮಾಸಿಕಗಳ ಪ್ರಗತಿ ದರದ ಅಂಕಿ-ಅಂಶಗಳು! ಈ ಎರಡೂ ಅಂಕಿ-ಅಂಶಗಳು ಅನಾಣ್ಯೀಕರಣವು ಬಡವರ ಪರವಾಗಿ ಅಕ್ರಮ ಹಣ ಸಂಪಾದಿಸಿಟ್ಟುಕೊಂಡಿರುವ ಶ್ರೀಮಂತರ ವಿರುದ್ಧ ಸರ್ಕಾರ ನಡೆಸಿರುವ ದಿಟ್ಟ ಕಾರ್ಯಚರಣೆ ಎಂದು ಮೋದಿಯವರು ಮಾಡಿದ್ದ ಘೋಷಣೆ ಎಷ್ಟು ಹುಸಿಯಾಗಿದೆ ಎಂಬುದನ್ನು ಬಹಿರಂಗಪಡಿಸಿದವು. ಇದು ಕೇವಲ ಉತ್ತರಪ್ರದೇಶದ ವಿಧಾನಸಭಾ ಚುನಾವಣೆಗಳನ್ನು ಗೆಲ್ಲಲು ಮಾಡಿದ ಕಣ್ಕಟ್ಟೇ ಎಂಬ ಅನುಮಾನವೂ ಹುಟ್ಟಿತು. ಮೂರು ತಿಂಗಳುಗಳ ಕಾಲ ಎಲ್ಲ ಜನವರ್ಗಗಳೂ ದಿನ ನಿತ್ಯದ ಬದುಕಿಗೆ ಬೇಕಾದ ಹಣಕಾಸಿಗೂ ಪರದಾಡುವಂತೆ ಮಾಡಿದ ಈ ಅನಾಣ್ಯೀಕರಣ, ಕಪ್ಪುಹಣವನ್ನು ಪತ್ತೆ ಮಾಡುವುದರಲ್ಲಿ ಸಂಪೂರ್ಣ ಸೋತು, ಅದರ ಇತರ ಘೋಷಿತ ಗುರಿಗಳಾದ ಭಯೋತ್ಪಾದನೆ ಮತ್ತು ನಕ್ಸಲೀಯ ಚಟುವಟಿಕೆಗಳನ್ನು ನಿಯಂತ್ರಿಸುವಲ್ಲಿ ವಿಫಲವಾಗಿದೆಯಲ್ಲದೆ ರಾಷ್ಟ್ರದ ಅಭಿವೃದ್ಧಿ ದರವನ್ನೂ ಗಮನಾರ್ಹವಾಗಿ ಕುಂಠಿತಗೊಳಿಸಿದೆ ಎಂಬುದು ಬಯಲಾಯಿತು. ನಮ್ಮ ಆರ್ಥಿಕತೆಯಲ್ಲಿ ಕಾಣಿಸಿಕೊಂಡಿರುವ ಕೈಗಾರಿಕಾ ಉತ್ಪಾದನೆಯ ಇಳಿಕೆ, ನಿರುದ್ಯೋಗ ದರದ ಏರಿಕೆ, ಗ್ರಾಮೀಣ ಆರ್ಥಿಕತೆಯ ಅಸ್ತವ್ಯಸ್ತತೆಗಳು ಅನಾಣ್ಯೀಕರಣದ ಸಾರಾಸಗಟು ವೈಫಲ್ಯದ ಸುದ್ದಿಯ ಜೊತೆಗೆ ಸೇರಿಕೊಂಡು ಇಂದು ಸಾರ್ವಜನಿಕ

ವಲಯದಲ್ಲಿ ವ್ಯಾಪಕವಾಗಿ ಚರ್ಚೆಗೆ ವಸ್ತುವಾಗಿವೆ. ಇದಕ್ಕೆ ವಿರುದ್ಧವಾಗಿ ಸರ್ಕಾರ, ಅನಾಣ್ಯೀಕರಣದ ತನ್ನ ಉದ್ದೇಶಗಳನ್ನೇ ಪೂರ್ವಾನ್ವಯವಾಗಿ ಬದಲಿಸಿ, ಇದರಿಂದ ಕಪ್ಪುಹಣದ ಖಾತೆದಾರರನ್ನು ಗುರುತಿಸಲು ಸುಲಭವಾಗಿದೆ, ನಗದು ವಹಿವಾಟನ್ನು ಕಡಿಮೆ ಮಾಡಿ, ಅದನ್ನು ಹೆಚ್ಚಾಗಿ ಡಿಜಿಟಲೀಕರಣಕ್ಕೆ ಒಳಪಡಿಸಿ ಭ್ರಷ್ಟಾಚಾರ ಮತ್ತಿತರ ಹಣಕಾಸಿನ ಅಕ್ರಮಗಳನ್ನು ತಹಬಂದಿಗೆ ತರಲಾಗಿದೆ ಎಂಬ ವಾದಗಳನ್ನು ತೇಲಿಬಿಡುತ್ತಿದೆಯಾದರೂ, ಅವನ್ನು ಯಾರೂ ಗಂಭೀರವಾಗಿ ಪರಿಗಣಿಸುತ್ತಿಲ್ಲ.

ಮೋದಿ ಸರ್ಕಾರ ಮೊದಲ ಮೂರು ವರ್ಷಗಳ ಕಾಲ ಹಿಂದೂವಾದಿ ಗಲಭೆ–ಹಿಂಸಾಚಾರಗಳನ್ನು ಹುಟ್ಟುಹಾಕಿದ್ದನ್ನು ಬಿಟ್ಟರೆ ಘನವಾದುದೇನನ್ನೂ ಮಾಡಲಾಗಿಲ್ಲ. ಅವರ ಪಾಕಿಸ್ತಾನ ನೀತಿ, ವಿದೇಶಗಳಲ್ಲಿರುವ ಕಪ್ಪು ಹಣದ ವಾಪಸಾತಿ, ವರ್ಷಕ್ಕೆ ಎರಡು ಕೋಟಿ ಉದ್ಯೋಗಗಳ ನಿರ್ಮಾಣ, 'ಮೇಕ್ ಇನ್ ಇಂಡಿಯಾ', 'ಸ್ಟಾರ್ಟ್ ಅಪ್' ಕೌಶಲ್ಯ ಅಭಿವೃದ್ಧಿ ಮುಂತಾದ ಯೋಜನೆಗಳೆಲ್ಲ ಜನರ ಕಣ್ಣಲ್ಲಿ ಮಾತಿನ ಬಡಾಯಿಗಳಾಗಿ ಕಾಣತೊಡಗಿವೆ. ಜನ ನಂಬಿದಂತೆ ಮೋದಿ ಪ್ರಧಾನಿಯಾಗಿ ನಿಜವಾದ ಕೆಲಸಗಾರರಾಗಲು ವಿಫಲರಾಗಿ, ಬರೀ ಮಾತಿನ ಮಾಟಗಾರರಾಗಿದ್ದಾರಷ್ಟೆ ಎಂಬ ಅಭಿಪ್ರಾಯ ನಿಧಾನವಾಗಿ ಮೂಡುತ್ತಾ, ಸರ್ಕಾರದ ವಿಶ್ವಾಸಾರ್ಹತೆಗೆ ನಿರ್ಣಾಯಕವಾದ ಧಕ್ಕೆ ಒದಗಲಾರಂಭಿಸಿರುವ ಭಯ ಈ ಮೂರು ವರ್ಷಗಳಲ್ಲಿ ಮೊದಲ ಬಾರಿಗೆ ಮೋದಿ ಮತ್ತು ಅವರ ಸಹಚರರಲ್ಲಿ ಉಂಟಾಗಿರುವಂತಿದೆ. ಸರ್ಕಾರವನ್ನು ಕುರಿತ ವಿಶ್ವಾಸಾರ್ಹತೆ ಒಮ್ಮೆ ನಿರ್ಣಾಯಕವಾಗಿ ಪ್ರಶ್ನಿತವಾಗತೊಡಗಿತೆಂದರೆ ಮತ್ತು ವಿರೋಧ ಪಕ್ಷಗಳು ಅದನ್ನು ಬಂಡವಾಳ ಮಾಡಿಕೊಂಡು ಚೇತರಿಸಿಕೊಳ್ಳಲಾರಂಭಿಸಿದವೆಂದರೆ, ಇತ್ತೀಚಿನವರೆಗೂ ಬಹು ಖಚಿತವೆನಿಸಿದ್ದ ೨೦೧೯ರ ಚುನಾವಣಾ ವಿಜಯ ಅನುಮಾನಾಸ್ಪದ ವಲಯಕ್ಕೆ ಜಾರೀತೆಂಬ ಮುನ್ನೆಚ್ಚರಿಕೆಯಿಂದಲೇ–ವಿರೋಧ ಪಕ್ಷಗಳಿಗೆ ತಮ್ಮ ರಾಜಕೀಯ ಆಟವಾಡಲು ಯಾವುದೇ ಅವಕಾಶ ಸಿಗದಂತೆ–ಮೋದಿ ಮತ್ತು ಅಮಿತ್ ಶಾ ಜೋಡಿ ತಮ್ಮ ಮೈತ್ರಿಕೂಟದ ಮಿತ್ರ ಪಕ್ಷಗಳನ್ನೂ ಲೆಕ್ಕಿಸದೆ ತರಾತುರಿಯಲ್ಲಿ ಸಾರ್ವಜನಿಕರ ಕಣ್ಣಿಗೆ ಹೊಡೆಯುವಂತಹ ರೀತಿಯಲ್ಲಿ ಸಂಪುಟ ಪುನಾರಚನೆ ಮಾಡಿದೆ.

ಕಣ್ಣಿಗೆ ಹೊಡೆಯುವುದೇಕೆಂದರೆ, ದಕ್ಷತೆ ತೋರದ ಮಂತ್ರಿಗಳನ್ನು ನಿರ್ದಾಕ್ಷಿಣ್ಯವಾಗಿ ಹೊರಹಾಕಿರುವುದಾಗಿ ಸಂದೇಶ ನೀಡುತ್ತಾ, ರಾಜಕೀಯ ಪರಿಗಣನೆಗಳನ್ನು ಮೀರಿ ಮಾಡಿರುವ ವೃತ್ತಿಪರರ ಆಯ್ಕೆ. ಇದನ್ನು ಬಹು ನಾಟಕೀಯವಾಗಿ ನಡೆಸಿದಾಗಲೇ ಅದರ ಪರಿಣಾಮ ಹೆಚ್ಚೆಂದು ತಿಳಿದಿರುವ, ರಾಜಕೀಯ ತಂತ್ರಗಾರಿಕೆಯನ್ನು ಒಂದು ಕಲೆಯ ಮಟ್ಟಕ್ಕೆ ಏರಿಸಿರುವ ಮೋದಿ–ಶಾ ಜೋಡಿ ಇದನ್ನೊಂದು ಭಾನುವಾರದ 'ಪ್ರದರ್ಶನ'ವಾಗಿ ('ಸಂಡೇ ಷೋ') ಪ್ರಸ್ತುತಪಡಿಸಿದೆ. ವೃತ್ತಿಪರರ ಸೇರ್ಪಡೆಯ ಜೊತೆಗೆ ದಕ್ಷತೆಯ ಕಾರಣದಿಂದಾಗಿ ಸಂಪುಟದಿಂದ ಕೈಬಿಡಲಾಗುವವರೆಂದು ಹೇಳಲಾದವರ ಪಟ್ಟಿಯಲ್ಲಿ ಕಾಣಿಸಿಕೊಂಡಿದ್ದ ನಿರ್ಮಲಾ ಸೀತಾರಾಮನ್ ಅವರಿಗೆ ಬಹು ಮಹತ್ವದ ರಕ್ಷಣಾ ಖಾತೆ ಕೊಟ್ಟು ಇಡೀ ಪ್ರದರ್ಶಕ್ಕೆ ಒಂದು ಅನಿರೀಕ್ಷಿತ

ರೋಚಕತೆಯನ್ನು ಪ್ರದಾನ ಮಾಡಲೂ ಆ ಜೋಡಿ ಮರೆತಿಲ್ಲ. ತ್ರಿವಳಿ ತಲಾಕ್ ರದ್ದತಿಗೆ ಕ್ರಮ ಕೈಗೊಂಡು ಮುಸ್ಲಿಂ ಮಹಿಳಾ ಸಮಾಜದ ಕನಿಷ್ಠ ಗಣ್ಯ ವರ್ಗದ ಬೆಂಬಲವನ್ನು ಸಂಪಾದಿಸಿಕೊಂಡಿರುವ ಬಿಜೆಪಿ, ಈ ನಿರ್ಮಲಾ ಸೀತಾರಾಮನ್ ನೇಮಕದಿಂದ–ಅದು ಉಳಿದ ಇಪ್ಪತ್ತು ತಿಂಗಳುಗಳಲ್ಲಿ ಎಷ್ಟು ಯಶಸ್ವಿಯಾಗುವುದೋ ಕಾದು ನೋಡಬೇಕಾಗಿದೆಯಾದರೂ–ಭಾರತದ ಇಡೀ ಮಹಿಳಾ ವರ್ಗದ ಒಂದು ಗಣನೀಯ ಭಾಗದ ಮತಗಳನ್ನು ಗಟ್ಟಿಗೊಳಿಸಿಕೊಂಡಿದ್ದರೆ ಆಶ್ಚರ್ಯವಿಲ್ಲ.

ಹಾಗಾದರೆ ಈ ಪುನಾರಚನೆ ಮೋದಿ ಆವೃತ್ತಿಯ ಬಿಜೆಪಿ ರಾಜಕಾರಣವೂ ಈಗ ತನ್ನ ಸಾಂಪ್ರದಾಯಿಕ ಹಿಂದುತ್ವದ ದಾರಿಯನ್ನು ಬಿಟ್ಟು ಹೊರಳಲಾರಂಭಿಸಿದೆ ಎಂದು ಸೂಚಿಸುತ್ತಿದೆಯೇ? ಆದರೆ ಹಾಗೆ ಯೋಚಿಸಲೂ ಆಗದು. ಯಾಕೆಂದರೆ ರಚನಾತ್ಮಕ ಕೆಲಸಗಳಿಗಿಂತ ಹೆಚ್ಚಾಗಿ ಕೋಮು ಸಾಮರಸ್ಯ ಕೆಡಿಸುವಂತಹ ಭಾಷಣಗಳು ಮತ್ತು ಗಲಭೆ–ಗೊಂದಲಗಳಿಗೇ ಈವರೆಗೆ ಹೆಸರುವಾಸಿಯಾದ ನಮ್ಮ ಕಾರವಾರದ ಅನಂತಕುಮಾರ ಹೆಗಡೆಯವರನ್ನು ಮೋದಿಯವರು ತಮ್ಮ ಮೆಚ್ಚಿನ ಕೌಶಲ್ಯ ಅಭಿವೃದ್ಧಿ ಇಲಾಖೆಯ ಮಂತ್ರಿಯನ್ನಾಗಿ ನೇಮಕ ಮಾಡಿದ್ದಾರೆ. ಅವರಿಂದ ಮೋದಿ ಯಾವ ತರಹದ ಕೌಶಲ್ಯ ಅಭಿವೃದ್ಧಿಯನ್ನು ನಿರೀಕ್ಷಿಸಿದ್ದಾರೋ ಕಾದು ನೋಡಬೇಕು!

ಅಂದಹಾಗೆ, ರಾಜ್ಯ ವಿಧಾನಸಭಾ ಚುನಾವಣೆಗಳಿಗೆ ಸಿದ್ಧತೆಯಾಗಿ ಮತ್ತು ಮಿತ್ರ ಪಕ್ಷಗಳ ಪ್ರತಿನಿಧಿಗಳ ಸೇರ್ಪಡೆಗಾಗಿ ಇಷ್ಟರಲ್ಲೇ ಮತ್ತೊಂದು ಸಂಪುಟ ಪುನಾರಚನೆ ಆದರೆ ಆಶ್ಚರ್ಯವಿಲ್ಲ. ಆದರೆ ಮುಖ್ಯ ಪ್ರಶ್ನೆ: ಇದನ್ನೆಲ್ಲ ವಿರೋಧ ಪಕ್ಷಗಳು– ಮುಖ್ಯವಾಗಿ ಕಾಂಗ್ರೆಸ್ ಪಕ್ಷ– ಹೇಗೆ ಎದುರಿಸಿ ತನ್ನ ರಾಜಕಾರಣವನ್ನು ರೂಪಿಸಿಕೊಳ್ಳುವವೋ ಎಂಬುದು. ಈವರೆಗೆ ಅವುಗಳಿಂದ ವೀರಾವೇಶದ ಮಾತಿನ ಬಾಣಗಳ ಹೊರತಾಗಿ ಇನ್ನಾವ ರಾಜಕೀಯ ಕ್ರಿಯಾಶೀಲತೆಯ ಸೂಚನೆಗಳೂ ಕಂಡುಬಂದಿಲ್ಲ. ಮೊನ್ನೆಯ ನಮ್ಮ ರಾಜ್ಯ ಸಚಿವ ಸಂಪುಟದ ಪುನಾರಚನೆಯ ಕಸರತ್ತನ್ನು ನೋಡಿದೆವಲ್ಲ? ಅಲ್ಲಿ ಜಾತಿ ಮತ್ತು ಪ್ರದೇಶಗಳ ಪರಿಗಣನೆಯ ಹೊರತಾಗಿ ಇನ್ನಾವ ರಚನಾತ್ಮಕ ರಾಜಕೀಯ ಮಾನದಂಡಗಳ ಸುದ್ದಿಯೂ ಇಲ್ಲ. ಈಗಾಗಲೇ ಸೂಚಿತವಾಗುತ್ತಿರುವಂತೆ ಈ ಸಂಕುಚಿತ ಪರಿಗಣನೆಗಳೇ ಆತ್ಯಂತಿಕವಾಗಿ ಅದಕ್ಕೆ ಮುಳುವಾದರೆ ಆಶ್ಚರ್ಯವಿಲ್ಲ.

('ವಿಜಯ ಕರ್ನಾಟಕ' : ಸೆಪ್ಟಂಬರ್ ೧೨, ೨೦೧೭)

ಎಪ್ಪತ್ತೊಂದನೇ ಸ್ವಾತಂತ್ರ್ಯೋತ್ಸವದ ಹೊಸ್ತಿಲಲ್ಲಿ ನಿಂತು ಗಾಂಧಿ ವಾರಸುದಾರಿಕೆಯನ್ನು ಕುರಿತು ಚಿಂತಿಸುತ್ತಾ...

ನಾವೀಗ ಸ್ವತಂತ್ರ ಭಾರತದ ಎಪ್ಪತ್ತೊಂದನೇ ವರ್ಷಕ್ಕೆ ಕಾಲಿಟ್ಟಿದ್ದೇವೆ. ಕಳೆದ ಎಪ್ಪತ್ತು ಸ್ವಾತಂತ್ರ್ಯ ದಿನಾಚರಣೆಗಳ ದಿನಗಳಂದೂ ನಾವು ನಮ್ಮ ನಾಯಕರ ಮನವಿ, ಸೂಚನೆ ಅಥವಾ ಕರೆಯ ಮೇರೆಗೆ ಹಿಂದಿನ ವರ್ಷಗಳ ಅವಲೋಕನ ಮಾಡಿಕೊಳ್ಳುತ್ತಾ ಬಂದಿದ್ದೇವೆ. ಸಾಧನೆಗಳನ್ನು ಮೆಚ್ಚಿಕೊಂಡಿದ್ದೇವೆ. ಆಗಬೇಕಾದ ಕೆಲಸಗಳ ಬಗ್ಗೆ ಆಲೋಚಿಸಿದ್ದೇವೆ. ಈ ಎಲ್ಲ ಅವಲೋಕನ–ಆಲೋಚನೆಗಳ ಒಟ್ಟು ಮೊತ್ತವಾಗಿ ಇಂದು ನಿಂತು ನಮ್ಮ ನೋಟವನ್ನು ಕೀಲಿಸಿದಾಗ ಅನಿಸುವುದು, ಪ್ರಜಾಪ್ರಭುತ್ವ ರಾಷ್ಟ್ರವಾಗಿ, ಅದರೆಲ್ಲ ಮಾನವೀಯ ಮತ್ತು ರಾಜಕೀಯ ಉದಾರವಾದಿ ಮೌಲ್ಯಗಳನ್ನು ಸಾಕಷ್ಟು ಜತನದಿಂದಲೇ ಕಾಪಾಡಿಕೊಂಡು ಈ ೭೦ ವರ್ಷಗಳ ಕಾಲ ಉಳಿದಿರುವುದೇ ಒಂದು ದೊಡ್ಡ ಸಾಧನೆ. ನಮ್ಮ ಜೊತೆಗೇ ಸ್ವಾತಂತ್ರ್ಯ ಪಡೆದ ಅನೇಕ ದೇಶಗಳು ಹಾದು ಹೋದ ಮತ್ತು ಹೋಗುತ್ತಿರುವ ರಾಜಕೀಯ ಏಳುಬೀಳುಗಳನ್ನು ನೋಡಿದಾಗ ಈ ನಮ್ಮ ಸಾಧನೆ ಎಷ್ಟು ದೊಡ್ಡದೆಂದು ಗೊತ್ತಾಗುತ್ತದೆ. ಅದರ ಜೊತೆಗೇ ಈ ದೇಶ ತನ್ನ ಜನರ ಲೌಕಿಕ ನೆಮ್ಮದಿಗಾಗಿ ಮಾಡಿರುವ ಪ್ರಯತ್ನಗಳೂ ಮತ್ತು ಪಡೆದಿರುವ ಯಶಸ್ಸೂ ವಿಮರ್ಶೆಗೆ ಅರ್ಹವಾದದ್ದಾದರೂ, ಕಡಿಮೆ ಮಹತ್ವದ್ದೇನಲ್ಲ. ನಮ್ಮ ಆರೋಗ್ಯ, ಆಯಸ್ಸು, ಅಕ್ಷರತೆ, ವಸತಿ, ನೀರಿನ ಸೌಲಭ್ಯ, ಕೈಗಾರಿಕಾ ಬೆಳವಣಿಗೆ, ಕೃಷಿಯಲ್ಲಿ ಆಗಿರುವ ಸುಧಾರಣೆ ಇತ್ಯಾದಿ ಕ್ಷೇತ್ರಗಳ ಅಭಿವೃದ್ಧಿ ಸೂಚ್ಯಂಕಗಳಲ್ಲಿ ಕಳೆದ ಎಪ್ಪತ್ತು ವರ್ಷಗಳಲ್ಲಿ ಆಗಿರುವ ಏರಿಕೆ ಹೆಮ್ಮೆ ಪಡುವಂತಹದಲ್ಲದಿದ್ದರೂ ಸಮಾಧಾನಕರವೇ ಆಗಿದೆ. ಈ ದೃಷ್ಟಿಯಿಂದ ಸದ್ಯದ ಕೇಂದ್ರ ಸರ್ಕಾರ ಭಾರತದ ಪ್ರಗತಿ ಪರಿಸ್ಥಿತಿ ಬಗ್ಗೆ ಹೇಳುತ್ತಿರುವ ಮಾತುಗಳು ಅತ್ಯಂತ ಅಪ್ಪಟ ಕೃತಘ್ನತೆಯ ಮಾತುಗಳೇ ಆಗಿವೆ. ಈ ಸರ್ಕಾರ ಇಂದೇನಾದರೂ ಜನ ಕಲ್ಯಾಣ ಕಾರ್ಯಕ್ರಮಗಳನ್ನು ಮಾಡುತ್ತಿದ್ದರೆ, ಅದಕ್ಕೆ

ಆಧಾರವಾಗಿರುವುದು ಹಿಂದಿನ ಸರ್ಕಾರಗಳು ಮಾಡಿರುವ ಕೆಲಸ ಎಂಬುದನ್ನೂ ಇಲ್ಲಿ ಹೇಳಬೇಕಾಗಿದೆ.

ಇವೆಲ್ಲ ವಾಸ್ತವಾಂಶಗಳ ನಡುವೆ ನಾವು ಈ ವರ್ಷ, ಈ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಗುರುತಿಸಬೇಕಾದ ಒಂದು ದೊಡ್ಡ ಬದಲಾವಣೆಯೂ ಇದೆ. ಅದು ಭಾರತದ ಭವಿಷ್ಯದ ದೃಷ್ಟಿಯಿಂದಲೂ ಬಹು ಮಹತ್ವದ್ದು ಮತ್ತು ಬಹುಸೂಕ್ಷ್ಮ ಮತ್ತು ಸ್ವೋಪಜ್ಞ ಚರ್ಚೆಗೆ ಒಳಗಾಗಬೇಕಾಗುವಂತಹದ್ದು. ಈ ಚರ್ಚೆಯ ಬಳಿಗೆ ಕೂಗುಮಾರಿಗಳನ್ನು ಬಿಟ್ಟುಕೊಂಡರೆ ಚರ್ಚೆ ರೂಕ್ಷವಾಗಿ ನಮ್ಮನ್ನು ಎಲ್ಲಿಗೂ ಕೊಂಡೊಯ್ಯದು ಮತ್ತು ಪರಿಸ್ಥಿತಿಯನ್ನು ಇನ್ನಷ್ಟು ಹಾಳುಗೆಡಹಬಲ್ಲುದು. ಈ ಸ್ವಾತಂತ್ರ್ಯ ದಿನದಂದು ನಾವು ಗಮನಿಸಲೇಬೇಕಾದ ಆ ಹೊಸ ಬೆಳವಣಿಗೆ ಎಂದರೆ, ನಮ್ಮ ರಾಷ್ಟ್ರದ ಮೂರು ಅತ್ಯುನ್ನತ ಅಧಿಕಾರ ಸ್ಥಾನಗಳಾದ ರಾಷ್ಟ್ರಪತಿ, ಉಪರಾಷ್ಟ್ರಪತಿ ಮತ್ತು ಪ್ರಧಾನಮಂತ್ರಿ ಈ ಮೂರೂ ಹುದ್ದೆಗಳನ್ನೂ ಇಂದು ನಮಗೆ ಸ್ವಾತಂತ್ರ್ಯ ಗಳಿಸಿಕೊಟ್ಟ ರಾಷ್ಟ್ರೀಯ ಹೋರಾಟದಿಂದ ಹೊರಗಿದ್ದ ಒಂದು ಜನಸಮೂಹದ ರಾಜಕೀಯ ಪ್ರತಿನಿಧಿಗಳೇ ಅಲಂಕರಿಸಿದ್ದಾರೆ ಎಂಬುದು. ಅಷ್ಟೇ ಮುಖ್ಯವಾದ ಇನ್ನೊಂದು ಸಂಗತಿ ಎಂದರೆ ಈ ಮೂರೂ ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳ ಮೂಲಕವೇ ಆದ ಆಯ್ಕೆಗಳಾಗಿವೆ ಎಂಬುದು. ಇದರ ಜೊತೆಗೇ ನಾವು ಗುರುತಿಸಬೇಕಾದ ಇನ್ನೊಂದು ವಿದ್ಯಮಾನವೆಂದರೆ, ಇದಕ್ಕೆಲ್ಲ ಕಾರಣವಾಗಿರುವ ಮತ್ತು ರಾಷ್ಟ್ರೀಯ ಹೋರಾಟದ ಮುಂಚೂಣಿಯಲ್ಲಿದ್ದ ಕಾಂಗ್ರೆಸ್ ಪಕ್ಷದ ನಿರ್ಣಾಯಕ ಅವನತಿಯ ಸ್ಥಿತಿ.

ಹಾಗಾಗಿ ಈ ಸ್ವಾತಂತ್ರ್ಯ ದಿನದಂದು ನಮ್ಮ ನಾಯಕರ ಕರೆಯ ಗೊಡವೆ ಇಲ್ಲದೆ ನಾವು ಸಾಮಾನ್ಯ ಜನ ಮಾಡಬೇಕಾದ ಪೂರ್ವಾವಲೋಕನದಲ್ಲಿ ಈ ಬೆಳವಣಿಗೆಯ ಬಗ್ಗೆಯೂ ಆಲೋಚಿಸಬೇಕಲ್ಲವೇ? ಈ ಬೆಳವಣಿಗೆಯ ಬಗ್ಗೆಯೂ ಏನು, ಈ ಬೆಳವಣಿಗೆಯ ಬಗ್ಗೆಯೇ ಮುಖ್ಯವಾಗಿ ಆಲೋಚಿಸುವ ಅಗತ್ಯವಿದೆಯಲ್ಲವೆ? ಹಾಗೆ ಆಲೋಚಿಸುವಾಗ ಈ ನಿರ್ದಿಷ್ಟ ಕಾಲಘಟ್ಟವನ್ನು ರಾಷ್ಟ್ರಜೀವನದ ಮೌಲ್ಯ ವ್ಯವಸ್ಥೆಯಲ್ಲಿ ಆಗಿರುವ ಒಂದು ಮುಖ್ಯವೂ ನಿರ್ಣಾಯಕವೂ ಆದ ಒಂದು ಪಲ್ಲಟವೆಂದು ಗುರುತಿಸಬಹುದಲ್ಲವೇ? ಹಾಗೇ ಇದು ನಮ್ಮ ರಾಷ್ಟ್ರಜೀವನದ ದಿಕ್ಕನ್ನು ನಿರ್ಣಾಯಕವಾಗಿ ಬದಲಿಸಬಲ್ಲದೇ ಮತ್ತು ಬದಲಿಸುವುದಾರೆ ಎತ್ತ ಕಡೆಗೆ ಮತ್ತು ಅದು ಸರಿಯಾದ ದಿಕ್ಕೇ? ಹಾಗಿಲ್ಲದಿದ್ದರೆ ಅದರ ದಿಕ್ಕು ಬದಲಿಸುವ ಮಾರ್ಗವಾದರೂ ಯಾವುದು ಇತ್ಯಾದಿ ಪ್ರಶ್ನೆಗಳನ್ನೂ ನಾವು ಎದುರಿಸಬೇಕಾಗುತ್ತದಲ್ಲವೇ?

ನನಗೆ ಈ ಎಲ್ಲ ಬೆಳವಣಿಗೆಗಳ ಮಧ್ಯೆ ಎದ್ದು ಕಾಣುವ ಮುಖ್ಯ ಬದಲಾವಣೆ ಎಂದರೆ, ನಾನು ಮೇಲೆ ಹೆಸರಿಸಿದ ರಾಷ್ಟ್ರದ ಮೂರು ಮುಖ್ಯ ಅಧಿಕಾರ ಸ್ಥಾನಗಳಲ್ಲಿ ಕೂತಿರುವವರಲ್ಲಿ ಕನಿಷ್ಠ ಇಬ್ಬರು, ಈ ರಾಷ್ಟ್ರದ ನಿರ್ಮಾಣಕ್ಕೆ ಕಾರಣವೆಂದು ಭಾವಿಸಿ ಈಗಲೂ ರಾಷ್ಟ್ರಪಿತರೆಂದು ಕರೆಯುವ ಮಹಾತ್ಮ ಗಾಂಧಿಯವರ ಕೊಲೆಗೆ ಪೂರಕವಾದ ಮತೀಯ ವಾತಾವರಣ ನಿರ್ಮಿಸಿದ್ದ ಸಂಘಟನೆಯ ಹಿನ್ನೆಲೆಯಿಂದ ಬಂದವರು. ಆ ಕೊಲೆಯ ಪಿತೂರಿಗಾರರಲ್ಲಿ ಒಬ್ಬರಾಗಿ ನ್ಯಾಯಾಂಗ ವಿಚಾರಣೆಯಲ್ಲಿ ತಾಂತ್ರಿಕ

ಕಾರಣಗಳಿಂದ ಬಚಾವಾದ ವ್ಯಕ್ತಿಯೊಬ್ಬನನ್ನು ಈಗಲೂ ತನ್ನ ಆದರ್ಶ ನಾಯಕನೆಂದು ಆರಾಧಿಸುತ್ತಿರುವವರು. ನಿಜ, ಈಗ ಇವರು ಔಪಚಾರಿಕವಾಗಿ ಗಾಂಧಿಯ ಹೆಸರು ಹೇಳುವರು ಮತ್ತು ಅವರ ಮೂರ್ತಿಗೆ ಗೌರವ ನಮನ ಸಲ್ಲಿಸುವರು. ಆದರೆ ಅವರಿಗೆ ಹಾಗೆ ಸಲ್ಲಿಸದೆ ವಿಧಿಯಿಲ್ಲ. ಏಕೆಂದರೆ ರಾಷ್ಟ್ರ ಇನ್ನೂ ಗಾಂಧಿಯನ್ನು ರಾಷ್ಟ್ರಪಿತನನ್ನಾಗಿ ನಿರಾಕರಿಸುವ ಹಂತ ತಲುಪಿಲ್ಲ. ಭಾರತವು ಗಾಂಧಿಯ ಬಗ್ಗೆ ಇನ್ನೂ ಪ್ರೀತಿ-ಅಭಿಮಾನವನ್ನು ಉಳಿಸಿಕೊಂಡಿದೆ ಮತ್ತು ಜನಸಾಮಾನ್ಯರ ದೊಡ್ಡ ಸಮೂಹಗಳಲ್ಲಿ ಗಾಂಧಿ ಸುಪ್ತವಾಗಿಯಾದರೂ ಇನ್ನೂ ಜೀವಂತವಾಗಿದ್ದಾರೆ ಎಂಬುದು ಅವರಿಗೆ ಗೊತ್ತು.

ಆದರೆ ಇವರ ಆಡಳಿತದಲ್ಲಿ ತೆರೆಯ ಮುಂದೆಯೂ ಹಿಂದೆಯೂ ನಡೆದಿರುವ ಗಾಂಧಿ ಮೌಲ್ಯಗಳ ದಮನ, ರಾಷ್ಟ್ರಜೀವನದಲ್ಲಿ ವ್ಯಾಪಕವಾಗಿ ನಡೆದಿರುವ ವಿವಿಧ ತೆರನ ಕೋಮು ಹಿಂಸಾಚಾರ ಮತ್ತು ಜಾತಿ ದೌರ್ಜನ್ಯ, ಹಾಗೂ ಅವನ್ನು ಔಪಚಾರಿಕವಾಗಿ ಮಾತ್ರ ಖಂಡಿಸಿ, ಅವು ಮುಂದುವರೆಯುವಂತೆ ಸಹ-ಸಂಘಟನೆಗಳ ಮೂಲಕ ಪರೋಕ್ಷ ಕುಮ್ಮಕ್ಕನ್ನು ನೀಡುವಂತಹ ರಾಜಕಾರಣ ಜರುಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇದರ ಜೊತೆಗೇ, ಮತವನ್ನು ಧರ್ಮವೆಂದು ನಿರೂಪಿಸಿ, ಅದನ್ನು ಮಧ್ಯಕಾಲೀನ ಸ್ಥಗಿತ ರೂಪದಲ್ಲಿ ಒಂದು ವರ್ತಮಾನ ಜೀವನಕ್ರಮವಾಗಿ ಎಲ್ಲರ ಮೇಲೆ ಹೇರುವ ಗಂಭೀರ ಪ್ರಯತ್ನಗಳು ನಡೆದಿವೆ. ಇದರ ಪರಿಣಾಮವಾಗಿಯೇ ದಲಿತರು, ಮಹಿಳೆಯರು ಮತ್ತು ಅನ್ಯಧರ್ಮೀಯರ ಮೇಲೆ ಆಕ್ರಮಣಗಳು ಹೆಚ್ಚುತ್ತಿವೆ. ಇತ್ತೀಚಿನ ಇನ್ನೊಂದು ಅಪಾಯಕಾರಿ ಬೆಳವಣಿಗೆಯೆಂದರೆ, ಈವರೆಗೆ ಅ-ರಾಜಕೀಯವಾಗಿದ್ದ ಸೇನೆಯನ್ನು ರಾಜಕೀಯ ಚರ್ಚೆಗಳ ಮಧ್ಯೆ ಎಳೆದು ತಂದು ಅದನ್ನು ವೈಭವೀಕರಿಸತೊಡಗಿರುವುದು. ಈ ಎಲ್ಲ ಉಪಕ್ರಮಗಳ ಮೂಲಕ ರಾಷ್ಟ್ರೀಯತೆಯನ್ನು ಮತ ರಾಜಕಾರಣದೊಂದಿಗೆ ಜೋಡಿಸಿ ಪುನರ್ವ್ಯಾಖ್ಯಾನ ಮಾಡುವ ಅನಾಹುತಕಾರಿ ಕೆಲಸ ನಡೆದಿದೆ. ಈ ಎಲ್ಲ ಬೆಳವಣಿಗೆಗಳಿಗೆ ಕಿರೀಟವಿಟ್ಟಂತೆ ದಾಖಲಾದ ಅತಿ ಅಸಭ್ಯ ವರ್ತನೆಯೆಂದರೆ ಉತ್ತರ ಪ್ರದೇಶ ಸರ್ಕಾರ ಮದರಸಾಗಳಲ್ಲಿ ಈ ವರ್ಷದ ಸ್ವಾತಂತ್ರ್ಯ ದಿನಾಚರಣೆಯನ್ನು ವೀಡಿಯೊ ಕ್ಯಾಮರಾದಲ್ಲಿ ಚಿತ್ರೀಕರಿಸಿ ತನ್ನ ಪರಿಶೀಲನೆಗೆ ಸಲ್ಲಿಸಬೇಕೆಂದು ಹೊರಡಿಸಿರುವ ಆಜ್ಞೆ. ಇದು ಈ ವರ್ಷದ ಸ್ವಾತಂತ್ರ್ಯ ದಿನಾಚರಣೆಗಳ ರುಚಿಯನ್ನೇ ಕೆಡಿಸಿಬಿಟ್ಟಿದೆ.

ಈ ರಾಜಕಾರಣಕ್ಕೆ ಇಂದು ವಿರೋಧವೆಂಬುದೇ ಇಲ್ಲವಾಗಿದೆ. (ಮದರಸಾಗಳಿಗೆ ಸಂಬಂಧಿಸಿದ ವರ್ತನೆಯ ಬಗ್ಗೆ ರಾಷ್ಟ್ರ ತೋರಿದ ಮೌನ ಪ್ರತಿಕ್ರಿಯೆ ಇದಕ್ಕೊಂದು ಇತ್ತೀಚಿನ ಉದಾಹರಣೆ.) ಇಲ್ಲ ಎಂದರೆ ಇಲ್ಲವೆಂದಲ್ಲ. ಒಂದು ರೂಢಿಗತ ಔಪಚಾರಿಕ ಮತ್ತು ತಮ್ಮ ರಾಜಕೀಯ ಸ್ವಾರ್ಥ ಸಾಧನೆಗಾಗಿ ವಿರೋಧವನ್ನು ಇವರಿಗೆ ವ್ಯಕ್ತಪಡಿಸುವವರು ಇದ್ದಾರೆ. ಆದರೆ ಅವರ ವಿಶ್ವಾಸಾರ್ಹತೆ ನೆಲ ಕಚ್ಚಿಹೋಗಿದೆ. ಏಕೆಂದರೆ ಅವರೂ ಗಾಂಧಿಯನ್ನು ಕೈಬಿಟ್ಟು, ಅವರ ಮೌಲ್ಯಗಳನ್ನು ಗಾಳಿಗೆ ತೂರಿ ಬಹಳ ವರ್ಷಗಳೇ ಆಗಿವೆ. ಹಾಗಾಗಿ ಇಂದಿನ ರಾಜಕೀಯ ಮೌಲ್ಯ ಪಲ್ಲಟವನ್ನು

ಗಾಂಧಿ ಯುಗದ ಅಂತ್ಯದ ಆರಂಭ ಎಂದು ಗುರುತಿಸಬಹುದೇ ಎಂಬುದು ನಾನು ಈ ಹಿಂದೆ ಮುಖ್ಯವೆಂದು ಉಲ್ಲೇಖಿಸಿದ ಚರ್ಚೆಯ ವಿಷಯವಾಗಬೇಕಾಗಿದೆ. ಈ ಚರ್ಚೆ ಮಾತ್ರ ಇಂದಿನ ರಾಜಕೀಯ ಪಲ್ಲಟದ ಹಿಂದಿನ ರಾಜಕೀಯ ಚಲನಶೀಲತೆಯನ್ನು ಅರ್ಥಮಾಡಿಕೊಳ್ಳಲು ಮತ್ತು ಈ ಪಲ್ಲಟ ಸೂಚಿಸುವ ಭೀಕರ ಅಪಾಯಗಳ ಪರಿಣಾಮಗಳನ್ನು ಎದುರಿಸಲು ಸಾಧ್ಯವಾಗಬಹುದೆಂಬುದು ನನ್ನ ಅಭಿಪ್ರಾಯ.

ಈ ಚರ್ಚೆಯನ್ನು ಆರಂಭಿಸಲು ಅಗತ್ಯವಿರುವ ಸೂಚನೆಗಳನ್ನಷ್ಟೇ ನೀಡಿ ನಾನು ಈ ಚರ್ಚೆ ಸಾರ್ವಜನಿಕವಾಗಿ ಮುಂದುವರೆಯಲು ಬಿಟ್ಟುಬಿಡುತ್ತೇನೆ. ಈ ಚರ್ಚೆಗಾಗಿ ನಾನು ಎತ್ತುವ ಮೂಲ ಪ್ರಶ್ನೆ ಎಂದರೆ, ಮೊದಲನೆಯದಾಗಿ ನಮ್ಮ ರಾಷ್ಟ್ರಜೀವನದಲ್ಲಿ ಗಾಂಧಿ ವಾರಸುದಾರಿಕೆ ಎಂಬುದು ನಿಜವಾಗಿ ಗಟ್ಟಿಯಾಗಿ ಬೇರೂರಿತ್ತೆ? ಬೇರೂರಲು ಬಿಡದೆ ತಡೆದವರಾರು? ಇದಕ್ಕೇ ಸಂಬಂಧಿಸಿದ ಈ ಕೆಲವು ಉಪಪ್ರಶ್ನೆಗಳು : ಜಿನ್ನಾರೇ ಈ ದೇಶದ ಪ್ರಧಾನ ಮಂತ್ರಿಯಾಗಲಿ ಎಂಬ ಗಾಂಧಿ ಸಲಹೆಯನ್ನಾಗಲೀ, ರಾಷ್ಟ್ರ ವಿಭಜನೆಯ ಚರ್ಚೆ ಮುಗಿಲುಮುಟ್ಟಿ ಕೋಮು ಹಿಂಸೆ ಶುರುವಾದ ಸಂದರ್ಭದಲ್ಲಿ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಒತ್ತಾಯಿಸದೆ ಇನ್ನೂ ಒಂದೆರಡು ವರ್ಷ ಗಾಂಧಿ ಮಾರ್ಗದರ್ಶನದಲ್ಲೇ ರಚನಾತ್ಮಕ ಚಳುವಳಿ ಕೈಗೊಂಡು ದೇಶವನ್ನು ಸ್ವಾತಂತ್ರ್ಯಕ್ಕೆ ಸಜ್ಜುಗೊಳಿಸೋಣ ಎಂಬ ಕಾಂಗ್ರೆಸ್ ಸಮಾಜವಾದಿಗಳ ಸಲಹೆಯನ್ನಾಗಲೀ ಪರಿಗಣನೆಗೇ ಬಾರದಂತೆ ತಡೆದ ಮತ್ತು ಆ ಮೂಲಕ ಗಾಂಧಿ ಹತ್ಯೆಯಾಗುವಂತಹ ರಾಜಕೀಯ ಪರಿಸ್ಥಿತಿ ನಿರ್ಮಿಸಿದವರಾರು, ಏಕೆ? ಈ ರಾಜಕೀಯ ಅಲ್ಲೋಲಕಲ್ಲೋಲಗಳಲ್ಲಿ ಗಾಂಧಿ ವಾರಸುದಾರಿಕೆಯ ನಿಜ ಪಠ್ಯವಾದ 'ಹಿಂದ್ ಸ್ವರಾಜ್' ಹೇಳಹೆಸರಿಲ್ಲದೆ ಕಣ್ಮರೆಯಾದ ಬಗೆ ಹೇಗೆ?

ಈ ಪ್ರಶ್ನೆಗಳಿಗೆ ವಸ್ತುನಿಷ್ಠ ಉತ್ತರ ಹುಡುಕುವ ಪ್ರಕ್ರಿಯೆಯಲ್ಲೇ ಗಾಂಧಿ ವಾರಸುದಾರಿಕೆ ಎಂಬುದು ಆರಂಭದಿಂದಲೇ ಹೇಗೆ ದುರ್ಬಲಗೊಳ್ಳುತ್ತಾ, ವ್ಯಂಗ್ಯಕ್ಕೊಳಪಡುತ್ತಾ ಬಂತು ಎಂಬುದರ ಕತೆಯೂ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಆ ಕತೆಯೊಂದಿಗೇ ನೆಹರೂ-ಇಂದಿರಾ ಗಾಂಧಿ ಕಾಲದಿಂದಲೇ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಕುಟುಂಬ ರಾಜಕಾರಣದ ಮತ್ತು ರಾಜೀವ್ ಗಾಂಧಿ ಕಾಲಕ್ಕೆ ಮುಸ್ಲಿಂ-ಹಿಂದೂ ಎರಡೂ ತೆರನ ಮೃದು ಕೋಮುವಾದಿ ರಾಜಕಾರಣದ ಮತ್ತು ನರಸಿಂಹರಾವ್ ಮತ್ತು ಮನಮೋಹನಸಿಂಗ್‌ರ ಕಾಲಕ್ಕೆ ನಂಬಿದವರ ಕತ್ತು ಕುಯ್ಯುವಂತಹ ಮೋಸದ ಕೋಮುವಾದ (ಬಾಬ್ರಿ ಮಸೀದಿ ಉರುಳಿಸಿದ್ದು) ಮತ್ತು ಹಲವು ಎಚ್ಚರಿಕೆಗಳ ಹೊರತಾಗಿಯೂ ನಡೆದ ನಿರ್ಲಜ್ಜ ಬ್ರಹ್ಮಾಂಡ ಭ್ರಷ್ಟಾಚಾರಗಳ ಹಗರಣಗಳ ಉಪಕಥೆಗಳ ಇತಿಹಾಸವೂ ಬಿಚ್ಚಿಕೊಳ್ಳುತ್ತಾ ಬಂದಿದೆ. ಇವುಗಳಲ್ಲಿ ಮನಮೋಹನ ಸಿಂಗ್ ಸಂಸತ್ತನ್ನು (ರಾಜ್ಯಸಭೆ) ಪ್ರವೇಶಿಸಿದ್ದೇ ತಾವು ಗೌಹಾತಿಯ ನಿವಾಸಿ ಎಂಬ ಅಪ್ಪಟ ಸುಳ್ಳು ಅಫಿಡವಿಟ್ ಸಲ್ಲಿಸಿ ಸಂವಿಧಾನಕ್ಕೇ ಟೋಪಿ ಹಾಕುವ ಮೂಲಕ ಮತ್ತು ಆ ಟೋಪಿಗೆ ನಮ್ಮ ಸರ್ವೋಚ್ಚ ನ್ಯಾಯಾಲಯದ ಮಾನ್ಯತೆಯೂ ಸಿಕ್ಕಿಬಿಟ್ಟಿತು ಎಂಬ-ನಮ್ಮ ರಾಜಕೀಯ ಮುತ್ಸದ್ದಿಗಳೂ ಸೇರಿದಂತೆ- ಯಾರೂ ಅಷ್ಟಾಗಿ

ಗಂಭೀರವಾಗಿ ಪರಿಗಣಿಸದ ದುರಂತ ಕಥೆಯೂ ಸೇರಿದೆ. ಈ ಕತೆ-ಉಪಕತೆಗಳ ನಡುವೆ ಈ ಬೆಳವಣಿಗೆಗಳಿಗೆ ತಮ್ಮ ಮಿತಿಗಳಲ್ಲೇ ಪ್ರತಿರೋಧ ಒಡ್ಡಿದ ವಿವಿಧ ತೆರನ ಗಾಂಧಿವಾದಿ ವಾರಸುದಾರಿಕೆಯ ಸಣ್ಣಪುಟ್ಟ ಧಾರೆಗಳ ಉಪಕತೆಗಳೂ ಇವೆ. ಆದರೆ ಅವುಗಳ ಪರಿಣಾಮ ಕೇವಲ ಆನುಷಂಗಿಕ ಅಥವಾ ಈ ಕತೆ-ಉಪಕತೆಗಳ ಲೇಖಕರು ಅದನ್ನು ಆನುಷಂಗಿಕ ಮಾಡಿದರು.

ಇದು ಕಳೆದ ೭೦ ವರ್ಷಗಳಲ್ಲಿ ಗಾಂಧಿ ಮತ್ತು ಅವರ ಸಹಚರರು ಕಳೆದುಹೋಗುತ್ತಾ ಬಂದ ದೊಡ್ಡ ದುರಂತ ಕತೆ. ಹಾಗೇ ಆ ಕಳೆದುಹೋದ ಜಾಗದಲ್ಲಿ ಸಹಜವಾಗಿಯೇ, ಗಾಂಧಿ ಮೌಲ್ಯಗಳ ಬಗ್ಗೆ ಗಂಭೀರ ಆಕ್ಷೇಪಣೆಗಳ ಇತಿಹಾಸವೇ ಇರುವ ಶಕ್ತಿಗಳು ಬಂದು ಕೂತ ಕತೆಯೂ ಇದೆ. ಹಾಗಾಗಿ ನಾವು ಇಂದು ಗಾಂಧಿ ಯುಗದ ಅಂತ್ಯ ಆರಂಭವಾಗಿದೆಯೇ ಅಥವಾ ಗಾಂಧಿ ವಾರಸುದಾರಿಕೆ ಮುಗಿಯುತ್ತಾ ಬಂದಿದೆಯೇ ಎಂಬ ಪ್ರಶ್ನೆ ಕೇಳಿಕೊಂಡಾಗ ಈ ಮೇಲಿನ ಕತೆ-ಉಪಕತೆಗಳನ್ನೂ ಮತ್ತು ಅವುಗಳೊಂದಿಗೆ ಹೆಣೆದುಕೊಂಡು ಬಂದ ಕತೆಯನ್ನೂ ವಿವರವಾಗಿ ಪರಿಶೀಲಿಸಬೇಕಾಗುತ್ತದೆ. ಅಂತಹ ಪರಿಶೀಲನೆಯ ಪರಿಪ್ರೇಕ್ಷ್ಯದಲ್ಲಿ ಕೇಳಬೇಕಾದ ಮತ್ತು ಕೇಳಿಕೊಳ್ಳಬೇಕಾದ ಎಲ್ಲ ಪ್ರಶ್ನೆಗಳನ್ನು ಕೇಳದೆ, ಕೇಳಿಕೊಳ್ಳದೆ, ಒಂದು ಕತೆಯ ಚರಿತ್ರೆಯನ್ನೋ ಅದರ ನಾಯಕರನ್ನೋ ಖಂಡಿಸುತ್ತಲೋ, ಬಾಯಿಗೆ ಬಂದಂತೆ ಬೈಯುತ್ತಾ ಹೋಗುವುದು (ಈಗ ಆರೆಸ್ಸೆಸ್ ಮತ್ತು ಮೋದಿ ಮುಂತಾದವರ ವಿರುದ್ಧ ನಡೆದಿರುವ ಟೀಕೆ-ಬೈಗುಳಗಳ ಮಹಾಪೂರ ನೋಡಿ) ಕೆಲ ಸಮುದಾಯಗಳಲ್ಲಿ ಶವಸಂಸ್ಕಾರದ ಹೊತ್ತಲ್ಲಿ ನಡೆಯುವ ಬಾಯಿ ಬಾಯಿ ಬಡಿದುಕೊಳ್ಳುವ ಕ್ರಿಯಾಚರಣೆಯನ್ನು ನೆನಪಿಸುತ್ತದೆ ಅಷ್ಟೆ. ಇಂತಹವರು ಗಾಂಧಿ ವಾರಸುದಾರಿಕೆಯ ಶವಸಂಸ್ಕಾರವನ್ನು ಮಾಡುತ್ತಿಲ್ಲವಷ್ಟೆ!

ಗಾಂಧಿ ವಾರಸುದಾರಿಕೆ ಕಳೆದುಹೋಗುತ್ತಿದೆಯೆಂದು ದುಃಖಿಸುತ್ತಿರುವವರಲ್ಲಿ ನಮ್ಮ ಬಹಳಷ್ಟು ಪ್ರಗತಿಪರ ಅಥವಾ ಎಡಪಂಥೀಯ ಎಂದು ಗುರುತಿಸಲ್ಪಡುವ ಲೇಖಕ- ಬುದ್ಧಿಜೀವಿಗಳು ಸೇರಿದ್ದಾರೆ. ಆದರೆ ಇವರು ದುಃಖಿಸುತ್ತಿರುವುದು ಆ ವಾರಸುದಾರಿಕೆಯ ಅಂತ್ಯದ ಸೂಚನೆಗಳ ಬಗ್ಗೆಯೋ ಅಥವಾ ಆ ವಾರಸುದಾರಿಕೆಯ ರಾಜಕಾರಣದಿಂದಾಗಿ ತಮಗೆ ಸಿಗುತ್ತಿದ್ದ ರಾಜಸೌಲಭ್ಯಗಳು ಕಳೆದುಹೋಗುತ್ತಿರುವ ಬಗ್ಗೆಯೋ ಎಂದು ಅನುಮಾನಪಡುವಂತಾಗಿದೆ. ಏಕೆಂದರೆ, ಇವರು ಇಷ್ಟು ವರ್ಷ ಮಾಡಿದ್ದೇನು? ಭ್ರಷ್ಟಗೊಳ್ಳುತ್ತಿದ್ದ ತಥಾಕಥಿತ ಗಾಂಧಿ ವಾರಸುದಾರಿಕೆಯ ಕೃಪಾಶ್ರಯದ ಎಲ್ಲ ಸುಖ-ಸೌಲಭ್ಯಗಳನ್ನು ಬಳಸಿಕೊಳ್ಳುತ್ತಾ ಹೋದದ್ದು. ಹಾಗೆ ಬಳಸಿಕೊಳ್ಳುತ್ತಾ, ಸ್ವ-ತಿರಸ್ಕಾರದ ಲೋಕಾಭಿರಾಮದಲ್ಲಿ ತಾವು ಕಲಿತ ಪಾಶ್ಚಿಮಾತ್ಯ ಪ್ರಮೇಯಗಳನ್ನು ಸ್ವ-ರಾಜ್ಯ ಬೋಧಿಸಿದ ಗಾಂಧಿಯನ್ನು ನಂಬಿದ್ದ ಜನಸಾಮಾನ್ಯರಾರಿಗೂ ಅರ್ಥವಾಗದ ನುಡಿಗಟ್ಟಿನಲ್ಲಿ ಒಂದಾದರಮೇಲೊಂದು ಮಂಡಿಸುತ್ತಾ ಬೌದ್ಧಿಕ ಸುಖಲೋಲುಪತೆಯಲ್ಲಿ ಮುಳುಗಿ, ಜನರ ಕಣ್ಣಲ್ಲಿ 'ಪ್ರತಿಷ್ಠಿತ' ವರ್ಗವಾಗಿ ಮೆರೆಯಲು ಯತ್ನಿಸಿದ್ದು. ಯಾವ ಪಶ್ಚಿಮದ ಆಧುನಿಕತೆಯ ಪ್ರಮೇಯಗಳ ವಿರುದ್ಧ ಅವುಗಳ ಅಶ್ಲೀಲ ಭೌತವಾದಿತ್ವದ ಕಾರಣದಿಂದಾಗಿ ಗಾಂಧಿ ಎಚ್ಚರಿಕೆ ನೀಡಿದ್ದರೋ ಅವೇ ಅಪ್ಪಟ ನಾಸ್ತಿಕವಾದಿ

ಪ್ರಮೇಯಗಳ ಬಾಲಂಗೋಚಿಗಳನ್ನು ಹಿಡಿದು ಪುಂಖಾನುಪುಂಖವಾಗಿ ಸಕಲು ಪಾಠಗಳನ್ನು- ಕೇಳಬೇಕಾದವರು ಕೇಳುತ್ತಿದ್ದಾರೋ ಇಲ್ಲವೋ ಎಂಬ ಪರಿವೆಯೇ ಇಲ್ಲದೆ- ಆಧುನಿಕ ಶ್ಲೋಕಗಳಂತೆ ಪಠಿಸುತ್ತಾ ಹೋದದ್ದು. ಈ ಅಸಂಬದ್ಧ ನಾಟಕದ ರಚನೆಯ ಹಿಂದೆ ಇದ್ದದ್ದು ಗಾಂಧಿಯ ದೇಸಿ ಬಂಡಾಯವನ್ನು ಪಶ್ಚಿಮದ ಆಧುನಿಕತೆಯ ನುಡಿಗಟ್ಟಿನಲ್ಲಿ ನಿರೂಪಿಸುವ ಸರ್ಕಾರಿ ಗಾಂಧಿವಾದದ ರಾಜಕಾರಣ. ಇವರ ಪ್ರಕಾರ ಬಂಡಾಯ ಎಂಬುದು ಪಶ್ಚಿಮದ ಆಧುನಿಕತೆಯ ಎರಕದಲ್ಲಷ್ಟೇ ಸಂಭವಿಸಬಹುದಾದ ಸಂಗತಿಯಾಗಿತ್ತು. ದೇಸಿ ಎಂದರೇ ಯಥಾಸ್ಥಿತಿ! ಇದು ಆಧುನಿಕತೆ ಎಂಬ ಶಬ್ದದ ಅರ್ಥಗ್ರಹಿಕೆಯ ಮಿತಿಯೂ ಆಗಿತ್ತು. ಗಾಂಧಿಯೋತ್ತರ ಭಾರತದ ಅಸಂಬದ್ಧ ದುರಂತ (ಈ ಜೋಡಿ ಶಬ್ದವನ್ನು ನಾನು ಉದ್ದೇಶಪೂರ್ವಕವಾಗಿಯೇ ಬಳಸಿದ್ದೇನೆ) ಕತೆಯ ಕಾಲುಗಳು ಇಲ್ಲಿಯೇ ಇದ್ದಂತಿವೆ.

ಜನ ಈ ಅಸಂಬದ್ಧ ದುರಂತ ಕತೆಯನ್ನು ಕೇಳಿ ಕೇಳಿ ಸುಸ್ತಾಗಿ ಸಹನೆಯನ್ನು ಕಳೆದುಕೊಂಡು ಬುದ್ಧಿಜೀವಿ ಎಂಬ ಶಬ್ದ ಕೇಳಿದೊಡನೆ ತಿರುಗಿಬೀಳತೊಡಗಿದಾಗ ನಮ್ಮ ಬುದ್ಧಿಜೀವಿಗಳಲ್ಲಿ ಹಲವರಾದರೂ ತಡವಾಗಿಯಾದರೂ ಎಚ್ಚೆತ್ತುಕೊಂಡು ಭಾರತೀಯ ತತ್ವ ಮೀಮಾಂಸೆಯ ಕಡೆ ಬಂದರೆಂಬುದು ನಿಜ. ಆದರೆ ಹಾಗೆ ಬಂದವರು ಮಾಡಿದ್ದಾದರೂ ಏನು? ಅದನ್ನು ವೈದಿಕ-ಅವೈದಿಕ, ಶಿಷ್ಟ-ಜಾನಪದವೆಂದು ಬೇಕೆಂದೇ ಒಡೆದು ಅದಕ್ಕೆ ಜಾತಿ ದ್ವೇಷಗಳ ಖಾರ ಹಚ್ಚಿ ಮತ್ತಷ್ಟು ಸುಖ ಸೌಲಭ್ಯಗಳ ಕೃಪಾಶ್ರಯಕ್ಕೆ ದಾರಿ ಮಾಡಿಕೊಳ್ಳುವ ದುಷ್ಟ ಚಾಣಾಕ್ಷತನವನ್ನು ಇವರು ತೋರಿದರಷ್ಟೇ. ಅದಕ್ಕೆ ಇವರಿಗೆ ಸುಲಭವಾಗಿ ದೊರೆತದ್ದು ಅಂಬೇಡ್ಕರ್ ವಾಙ್ಮಯದ ಆಶ್ರಯ ಮತ್ತು ಅದರ ಕುರುಡು ಅನುಯಾಯಿಗಳ ಕೂಗುಮಾರಿತನದ ರಕ್ಷಣೆ. ಕನಿಷ್ಠ ಅಂಬೇಡ್ಕರ್ ಅವರು ವಸಾಹತುಶಾಹಿ ರಾಜಕಾರಣದ ಪ್ರಭಾವದಲ್ಲಿ ಕಟ್ಟಿಕೊಂಡ ಜಾತಿಪದ್ಧತಿಯನ್ನು ಕುರಿತ ಸಂಕಥನಕ್ಕೆ ಅಂಬೇಡ್ಕರ್‌ರೇ ನಿರೂಪಿಸಿದ್ದೆಂದು ಹೇಳಲಾಗುವ ಸಂವಿಧಾನದ ಪ್ರಕಾರವೇ ಕಟ್ಟಲ್ಪಟ್ಟಿರುವ ಸ್ವತಂತ್ರ ಭಾರತವೆಂಬ ವಾಸ್ತವದ ಸಂಕೀರ್ಣ ಅನುಭವಗಳ ಹಿನ್ನೆಲೆಯಲ್ಲಾದರೂ ಪುನರ್‌ಭೇಟಿ ನೀಡಬೇಕೆಂದು ಇವರಾರಿಗೂ ಅನ್ನಿಸಲಿಲ್ಲವೇಕೋ ತಿಳಿಯದಾಗಿದೆ.

ನಮ್ಮ ಬಹಳಷ್ಟು ವಿಶ್ವವಿದ್ಯಾಲಯಗಳು ಮತ್ತು ಸಂಶೋಧನಾ-ಅಧ್ಯಯನ ಸಂಸ್ಥೆಗಳು ಇಂತಹವರ ಕೃಪಾಛತ್ರಗಳಾಗಿವೆ. ಹಾಗಾಗಿಯೇ ಅವೀಗ ನಿಧಾನವಾಗಿ ಬಲಪಂಥೀಯ ದುಷ್ಟಶಕ್ತಿಗಳ ಪ್ರವೇಶ ಮತ್ತು ಸ್ವಾಗತಕ್ಕೆ ಅಣಿಯಾಗತೊಡಗಿವೆ. ಈ ಸ್ವಾರ್ಥದಾಟದ ಒಂದು ಅರ್ಧ ತಮಾಷೆಯ-ಅರ್ಧ ದುರಂತದ ಒಂದು ನಿದರ್ಶನವಾಗಿ, ಗೋರಖನಾಥನದು ಅವೈದಿಕ-ಅನಾತ್ಮವಾದಿ ಪರಂಪರೆಯೆಂದು ತಮ್ಮ ನಾಥ ಅಧ್ಯಯನದ ಪುಸ್ತಕವೊಂದರಲ್ಲಿ ನಮ್ಮ ಕನ್ನಡದ ಬುದ್ಧಿಜೀವಿಯೊಬ್ಬರು ವಾದಿಸಿರುವುದನ್ನು ಇದೇ ಪರಂಪರೆಯ ವಾರಸುದಾರ ಎಂದು ಹೇಳಿಕೊಳ್ಳುವ ಉ.ಪ್ರ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥರ ರಾಜಕಾರಣದ ಹಿನ್ನೆಲೆಯಲ್ಲಿ ನೋಡಿ ಆನಂದಿಸಬಹುದು. (ಈ ಆದಿತ್ಯನಾಥರು ತಮ್ಮೂರ ಸರ್ಕಾರಿ ಆಸ್ಪತ್ರೆಯಲ್ಲಿ ಒಂದು

ವಾರದಲ್ಲಿ ಎಪ್ಪತ್ತು ಮಕ್ಕಳು ಸತ್ತಿದ್ದನ್ನೂ ಲೆಕ್ಕಿಸದೆ ಇಡೀ ರಾತ್ರಿ ವೈಭವೋಪೇತ ಕೃಷ್ಣ ಜನ್ಮಾಷ್ಟಮಿ ಆಚರಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರಂತೆ.

(ಗಾಂಧಿ ಒಬ್ಬ ವ್ಯಕ್ತಿಯಾಗಿರಲಿಲ್ಲ; ಅವರೊಂದು ಸದಾ ಬೆಳೆಯುತ್ತಾ ಹೋಗುವ ಪ್ರಕ್ರಿಯೆಯಲ್ಲಿ ಮಾತ್ರ ಜೀವಂತವಾಗಿ ಉಳಿಯಬಲ್ಲ ಚಲನಶೀಲ ಸತ್ವವಾಗಿದ್ದರು.) ಈ ಲೇಖಕ-ಬುದ್ಧಿಜೀವಿಗಳು ನಿಜವಾಗಿಯೂ ಗಾಂಧಿ ವಾರಸುದಾರಿಕೆಯಲ್ಲಿ ನಂಬಿಕೆ ಇರಿಸಿದ್ದಿದ್ದಲ್ಲಿ ಕಳೆದ ಎಪ್ಪತ್ತು ವರ್ಷಗಳಲ್ಲಿ ಮಾಡಬೇಕಿದ್ದ ಕೆಲಸವೆಂದರೆ, ಗಾಂಧಿ-ನೆಹರೂ, ಗಾಂಧಿ-ಟ್ಯಾಗೋರ್, ಗಾಂಧಿ-ಸುಭಾಷ್, ಗಾಂಧಿ-ಸಮಾಜವಾದಿಗಳು ಮತ್ತು ಗಾಂಧಿ-ಅಂಬೇಡ್ಕರ್ ಸಂವಾದಗಳನ್ನು ಬೆಳೆಸಿ ವ್ಯಾಖ್ಯಾನ ಮಾಡಬೇಕಿದ್ದುದು. ಆ ಮೂಲಕ ಗಾಂಧಿ ಸಂಕಥನವನ್ನು ಪುನರ್ ನಿರೂಪಿಸಬೇಕಿದ್ದುದು. ಆ ಹಿನ್ನೆಲೆಯಲ್ಲಿ ಭಾರತವೆಂಬ ರಾಷ್ಟ್ರ ಸಾಗಿರುವ ಲೌಕಿಕ ಮತ್ತು ಸಾಂಸ್ಕೃತಿಕ ಪ್ರಗತಿಯ ಸ್ವರೂಪದ ನಿಷ್ಠುರ ಮೌಲ್ಯವಿಮರ್ಶೆ ನಡೆಯಬೇಕಿತ್ತು. ಅದೇ ನಿಜವಾದ ಗಾಂಧಿ ವಾರಸುದಾರಿಕೆಯ ಬೇರುಗಳನ್ನು ಗಟ್ಟಿಗೊಳಿಸುವ ಕೆಲಸವಾಗಿರುತ್ತಿತ್ತು. ಈ ಕೆಲಸವನ್ನು ಧರ್ಮಪಾಲ್, ಭಿಕು ಪಾರೇಖ್, ಸುದಿಪ್ತ ಕವಿರಾಜ್, ತ್ರಿದಿಪ್ ಸುಹೃದ್, ರಜನಿ ಭಕ್ಷಿ, ಆಶೀಶ್ ನಂದಿ ಮುಂತಾದ ನಾಲ್ಕಾರು ಜನ ಬಿಡಿ ಬಿಡಿಯಾಗಿ ಮಾಡಿದ್ದಾರಾದರೂ, ಅದೊಂದು ಗಾಂಧಿಯೋತ್ತರ ಅಖಂಡ ಸಂಕಥನವಾಗಿ ಪ್ರಧಾನ ಧಾರೆಯ ಚರ್ಚೆಗೆ ಬರುವಂತಹ ಪ್ರಮೇಯವಾಗಿ ಕಟ್ಟುವ ಸಂಘಟಿತ ಪ್ರಯತ್ನವಾಗಲಿಲ್ಲ. ಅಂತಹ ರಾಜಕೀಯ ವಾತಾವರಣವನ್ನೂ ನಮ್ಮ ರಾಜಕಾರಣಿಗಳೂ ನಿರ್ಮಿಸಲಿಲ್ಲ ಎಂಬುದು ಬೇರೆ ವಿಚಾರ.

ಹಾಗಾಗಿಯೇ ನಾವು ನಮ್ಮ ೭೧ನೇ ಸ್ವಾತಂತ್ರ್ಯೋತ್ಸವದ ಹೊಸ್ತಿಲಲ್ಲಿ ನಿಂತು ಗಾಂಧಿ ಪರಂಪರೆಯ ಅಂತ್ಯದ ಆರಂಭದ ತಲ್ಲಣವನ್ನು ಅನುಭವಿಸುತ್ತಿದ್ದೇವೆ.

('ಸಂವಾದ': ಸೆಪ್ಟಂಬರ್, ೨೦೧೭)

ನಮ್ಮ ರಾಷ್ಟ್ರ ಕಲ್ಪನೆಯ ವಿರೋಧಾಭಾಸಗಳು

ನಮ್ಮ ರಾಜ್ಯದಲ್ಲಿನ ಖಾಸಗಿ ಕಂಪನಿಗಳಲ್ಲಿನ ಕನಿಷ್ಠ ಕೆಳ ದರ್ಜೆಯ ಹುದ್ದೆಗಳಿಗಾದರೂ ಕನ್ನಡಿಗರನ್ನು ನೇಮಿಸಿಕೊಳ್ಳಬೇಕೆಂಬ ಸರ್ಕಾರದ ಸೂಚನೆಗೆ ನಮ್ಮ ರಾಜ್ಯ ಸರ್ಕಾರದ ಕಾನೂನು ಇಲಾಖೆಯೇ, ಇದು ಆಜ್ಞೆಯಾದರೆ ಸಂವಿಧಾನಬಾಹಿರವಾಗುತ್ತದೆ ಎಂಬ ಮುನ್ನೆಚ್ಚರಿಕೆಯನ್ನು ನೀಡಿದೆ ಎಂಬ ಸುದ್ದಿ ಬಂದಿದೆ. ಈ ರಾಷ್ಟ್ರದಲ್ಲಿ ಇತ್ತೀಚೆಗೆ ಹಿಂದಿಯೇತರ ರಾಜ್ಯಗಳ ಜನರ ಭಾಷೆಗಳ, ಅವರ ಸಾಂಸ್ಕೃತಿಕ ಅಸ್ಮಿತೆಗಳಿಗೆ ಒದಗಿರುವ ಸಂಕಟಗಳ ಈ ಚರಿತ್ರೆಯನ್ನು ನೋಡಿದಾಗ ಇದೇನೂ ಆಶ್ಚರ್ಯದ ಸಂಗತಿಯಲ್ಲ. ಉದಾಹರಣೆಗೆ ಈ ಸಂಬಂಧವಾಗಿ ನಮ್ಮ ಕರ್ನಾಟಕದ ಇತ್ತೀಚಿನ ಈ ಚರಿತ್ರೆಯನ್ನೇ ನೋಡಿ:

ನಮ್ಮ ರಾಜ್ಯದ ಶಾಲೆಗಳಲ್ಲಿ ಕನ್ನಡವನ್ನು ಪ್ರಾಥಮಿಕ ಶಾಲಾ ಶಿಕ್ಷಣ ಮಾಧ್ಯಮವನ್ನಾಗಿ ಕಡ್ಡಾಯ ಮಾಡುವ ರಾಜ್ಯ ಸರ್ಕಾರದ ಆಜ್ಞೆ ನ್ಯಾಯಾಂಗದಿಂದ ಸಂವಿಧಾನಬಾಹಿರವೆಂದು ಘೋಷಿಸಲ್ಪಟ್ಟಿತು. ಹಾಗೇ ನಮ್ಮ ರಾಜ್ಯದಲ್ಲಿನ ಎಲ್ಲ ಖಾಸಗಿ ಸಂಸ್ಥೆಗಳ, ಅಂಗಡಿ ಮುಂಗಟ್ಟುಗಳ ನಾಮಫಲಕಗಳಲ್ಲಿ ಕನ್ನಡ ಪ್ರಧಾನ ಭಾಷೆಯಾಗಿರಬೇಕೆಂಬ ರಾಜ್ಯ ಸರ್ಕಾರದ ಆದೇಶ ಮತ್ತೆ ನ್ಯಾಯಾಂಗದಿಂದಲೇ ಅಸಿಂಧುಗೊಂಡಿತು.

ರಾಜ್ಯದ ರೈಲು ನಿಲ್ದಾಣಗಳಲ್ಲಿ ನೀಡುವ ರೈಲ್ವೇ ಟಿಕೆಟ್ ಮೇಲಿಂದ ಆಯಾ ರಾಜ್ಯಗಳ ಅಧಿಕೃತ ಭಾಷೆಗಳಲ್ಲಿರುತ್ತಿದ್ದ ಪ್ರಯಾಣದ ಮಾಹಿತಿ ಮಾಯವಾಗಿದೆ. ನಮ್ಮ ರಾಜ್ಯದ ರೈಲು ಮತ್ತು ರೈಲ್ವೇ ನಿಲ್ದಾಣಗಳಲ್ಲಿ ಮತ್ತು ಬ್ಯಾಂಕುಗಳಲ್ಲಿ ಕನ್ನಡ ಬಾರದವರ ನೇಮಕಾತಿ ಈಗ ಎಗ್ಗಿಲ್ಲದೆ ನಡೆದಿದೆ. ನಮ್ಮ ರಾಜ್ಯದ ವೈದ್ಯಕೀಯ ಕಾಲೇಜುಗಳಿಗೆ ರಾಜ್ಯ ಸರ್ಕಾರ ನಡೆಸುತ್ತಿದ್ದ ಪ್ರವೇಶ ಪರೀಕ್ಷೆಗಳಿಗೆ ಬದಲಾಗಿ ಈಗ ರಾಷ್ಟ್ರ ಮಟ್ಟದ ಪ್ರವೇಶ ಪರೀಕ್ಷೆ ಆರಂಭವಾಗಿ ನಮ್ಮ ಕಾಲೇಜುಗಳಲ್ಲಿನ ಸೀಟುಗಳು ಅನ್ಯ ರಾಜ್ಯಗಳ

ಪಾಲಾಗತೊಡಗಿವೆ. ಇನ್ನೇನು ನಮ್ಮ ರಾಜ್ಯದಲ್ಲಿನ ಅಧೀನ ನ್ಯಾಯಾಲಯಗಳಿಗೆ ನಡೆಯುವ ನ್ಯಾಯಾಧೀಶರ ನೇಮಕಾತಿ ಪರೀಕ್ಷೆಯು ಅಖಿಲ ಭಾರತ ಮಟ್ಟದ್ದಾಗಿ ಪರಿವರ್ತಿತವಾಗಲಿದ್ದು, ನಮ್ಮ ನ್ಯಾಯಾಲಯಗಳಿಗೆ ಕನ್ನಡೇತರ ನ್ಯಾಯಾಧೀಶರ ನೇಮಕಾತಿ ಆಗುವ ಎಲ್ಲ ಸಾಧ್ಯತೆಗಳಿವೆ ಎಂಬ ಸುದ್ದಿ ಕೇಳಿಬಂದಿದೆ.

ನಮ್ಮ ರಾಜ್ಯದ ಅನೇಕ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಕನ್ನಡವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲು ಮತ್ತು ಸರಾಗವಾಗಿ ಮಾತಾಡಲು ಬರುವುದಿಲ್ಲ.

ಇನ್ನು, ರಾಜ್ಯಸಭೆಗೆ ರಾಜ್ಯ ವಿಧಾನಸಭೆಯೊಂದರಿಂದ ಆಯ್ಕೆಯಾಗಲು ಆ ರಾಜ್ಯದ ನಿವಾಸಿಗಳೇ ಅಗಿರಬೇಕೆಂಬ ಕಾನೂನನ್ನು ಹದಿನೈದು ವರ್ಷಗಳ ಹಿಂದೆಯೇ ಸಂವಿಧಾನ ತಿದ್ದುಪಡಿಯೊಂದರ ಮೂಲಕ ರದ್ದು ಮಾಡಲಾಯಿತು.

ಏನಿದೆಲ್ಲ? ಯಾರ ದೇಶದಲ್ಲಿ ನಾವಿದ್ದೇವೆ? ನಿಜವಾಗಿ ನಾವು ವಸಾಹತುಶಾಹಿಯಿಂದ ಪೂರ್ಣಾರ್ಥದಲ್ಲಿ ಬಿಡುಗಡೆಗೊಂಡಿದ್ದೇವೆಯೇ? ಈ ಪ್ರಶ್ನೆಗಳು ಇಂದು ನಮ್ಮನ್ನು ಹೆಚ್ಚು ಹೆಚ್ಚು ಕಾಡತೊಡಗಿವೆ. ಕಾಡತೊಡಗಬೇಕು ಕೂಡ, ನಾವಿರುವ ವ್ಯವಸ್ಥೆ ನಿಜವಾಗಿ ಪ್ರಜಾಪ್ರಭುತ್ವವಾಗಿದೆ ಎಂದು ನಾವು ನಂಬಬೇಕಾದರೆ.

ಹಾಗೆ ಕಾಡಲ್ಪಟ್ಟಾಗ ನಮಗೆ ಗೊತ್ತಾಗುವುದು, ಈ ಪ್ರಶ್ನೆಗಳ ಮೂಲ ಇರುವುದು ಎರಡು ಸಂಗತಿಗಳಲ್ಲಿ ಎಂದು. ಒಂದು, ರಾಷ್ಟ್ರೀಯ ಐಕ್ಯತೆ ಕುರಿತ ತಪ್ಪು ಕಲ್ಪನೆ ಅಥವಾ ಈಗ ಕಂಡುಬರುತ್ತಿರುವ ರಾಷ್ಟ್ರೀಯತೆ ಕುರಿತ ಹೊಸ ಉತ್ಸಾಹ. ಎರಡು, ನಮ್ಮ ಸಂವಿಧಾನ. ಇದು ಮತ್ತೆ ಎರಡು ಪ್ರಶ್ನೆಗಳನ್ನು ಎತ್ತುತ್ತದೆ. ಒಂದು, ರಾಷ್ಟ್ರ ಎಂದರೇನು ಮತ್ತು ರಾಷ್ಟ್ರೀಯ ಐಕ್ಯತೆ ಎಂದರೇನು? ಎರಡು, ರಾಷ್ಟ್ರವೊಂದರ ಸಂವಿಧಾನದ ಉದ್ದೇಶವಾದರೂ ಏನು? ಹಾಗೆ ನೋಡಿದರೆ ರಾಷ್ಟ್ರ ಎಂದರೇನು ಮತ್ತು ರಾಷ್ಟ್ರೀಯ ಐಕ್ಯತೆ ಎಂದರೇನು ಎಂಬ ಪ್ರಶ್ನೆಗಳಿಗೆ ಉತ್ತರ ಸಂವಿಧಾನದಲ್ಲೇ ಇದೆ. ಆದರೆ, ರಾಜ್ಯ ಭಾಷೆಗಳಿಗೆ ಮೇಲೆ ಸೂಚಿಸಿದಂತೆ ಒದಗುತ್ತಿರುವ ದುರ್ಗತಿಯ ಹಿಂದೆ ನಮ್ಮ ಸಂವಿಧಾನದ ಪಾತ್ರವೂ ಇದೆ ಎಂಬುದನ್ನು ಈ ಸಂಬಂಧದ ಕೆಲವು ತೀರ್ಪುಗಳು ಸೂಚಿಸುತ್ತಿವೆ. ಇದು ಮೇಲಿನ ಎಲ್ಲ ಪ್ರಶ್ನೆಗಳನ್ನು ಹೆಚ್ಚು ಸಂಕೀರ್ಣಗೊಳಿಸುತ್ತದೆ.

ನಮ್ಮ ರಾಷ್ಟ್ರವನ್ನು ಅದರ ಸಂವಿಧಾನ ವ್ಯಾಖ್ಯಾನಿಸುವಂತೆ ಅರೆ ಒಕ್ಕೂಟ ರಾಷ್ಟ್ರ (Quasi federal State) ಎಂದು ಗುರುತಿಸಲಾಗುತ್ತದೆ. ಅಂದರೆ ಇದೊಂದು ಪೂರ್ಣ ಏಕಾತ್ಮಕ (Unitary) ರಾಷ್ಟ್ರ ಅಲ್ಲ. ಹಾಗೇ ಪೂರ್ಣ ಒಕ್ಕೂಟ ರಾಷ್ಟ್ರವೂ ಅಲ್ಲ. ಅಂದರೆ ರಾಷ್ಟ್ರಾಡಳಿತದ ಅಧಿಕಾರಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಹಂಚಿಹೋಗಿವೆ. ಆದರೆ ಈ ಅಧಿಕಾರಗಳ ಹಂಚಿಕೆಯ ಸಮತೋಲನ ಕೇಂದ್ರ ಸರ್ಕಾರದ ಕಡೆ ಹೆಚ್ಚು ವಾಲಿದಂತಿರುವುದರಿಂದಾಗಿಯೇ ಇದು ಅರೆ ಒಕ್ಕೂಟ ಎಂಬ ಸಂದಿಗ್ಧಾರ್ಥದ ರಾಷ್ಟ್ರ ಸ್ವರೂಪವನ್ನು ಪಡೆದಿದೆ. ಇದಕ್ಕೆ ರಾಷ್ಟ್ರದ ಈ ಸ್ವರೂಪವನ್ನು ನಿರ್ಧರಿಸುವ ನಮ್ಮ ಸಂವಿಧಾನವನ್ನು ರೂಪಿಸುವಾಗ ಜನರ ಮನಸ್ಸನ್ನು ಆಳುತ್ತಿದ್ದ ಮೌಲ್ಯಗಳ ಪ್ರಾಧಾನ್ಯವೇ ಕಾರಣವಿರಬಹುದು. ಪರದೇಶವೊಂದರ ಆಡಳಿತದ (ಅಂದರೆ ವಸಾಹತುಶಾಹಿಯ) ವಿರುದ್ಧ ಒಟ್ಟು ಜನಸಮುದಾಯ ತನ್ನೆಲ್ಲ ಸಾಂಸ್ಕೃತಿಕ

ವ್ಯತ್ಯಾಸಗಳನ್ನು ಮೀರಿ ನಡೆಸಿದ ರಾಜಕೀಯ ಹೋರಾಟದ ಸಂದರ್ಭವದು. ಹಾಗಾಗಿಯೇ ನಮ್ಮ ಸಂವಿಧಾನದಲ್ಲಿ ರಾಜಕೀಯ ಕಾಳಜಿಗಳಿಗೇ ಪ್ರಾಧಾನ್ಯ. ಸಾಂಸ್ಕೃತಿಕ ಕಾಳಜಿಗಳೇನಿದ್ದರೂ ರಾಜಕೀಯ ಕಾಳಜಿಗಳ ಪರಿಣಾಮ ರೂಪಗಳಲ್ಲಷ್ಟೇ ಕಾಣುತ್ತವೆ.

ಇದಕ್ಕೆ ಮತ್ತೊಂದು ಕಾರಣವೆಂದರೆ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಡುವಣ ಅಧಿಕಾರ ಹಂಚಿಕೆ ನಿರೂಪಿಸುವ ರಾಷ್ಟ್ರ ಮತ್ತು ರಾಷ್ಟ್ರೀಯತೆಗಳ ಅರ್ಥವನ್ನು ಮೀರಿ ನಮ್ಮ ಸಂವಿಧಾನಕರ್ತರು ಆ ಕಾಲದ ವಿಶ್ವಾತ್ಮಕ ಮೌಲ್ಯಗಳಿಗೆ ಪರಮೋನ್ನತ ಸ್ಥಾನವನ್ನು ನೀಡಿ ಅದನ್ನು ವಿಸ್ತರಿಸಿದ್ದು. ಅ ಮೌಲ್ಯಗಳೇ ನಮ್ಮ ಸಂವಿಧಾನದ ಅನುಲ್ಲಂಘನೀಯ ಮೂಲ ರಚನೆಯನ್ನು ನಿರ್ಧರಿಸುವ ಪ್ರಜೆಗಳ ಮೂಲಭೂತ ಹಕ್ಕುಗಳೆನಿಸಿವೆ. ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗಳೆಂಬ ಉದಾತ್ತ ಆದರ್ಶಗಳಿಂದ ಪ್ರೇರಿತವಾದ ಈ ಹಕ್ಕುಗಳು ಭಾರತದ ಪ್ರಜೆಗೆ ಗರಿಷ್ಠ ಪ್ರಮಾಣದ ವ್ಯಕ್ತಿ ಸ್ವಾತಂತ್ರ್ಯ ನೀಡುವ ಉನ್ನತ ಧ್ಯೇಯವನ್ನು ಹೊಂದಿದೆ. ಆದರೆ ಈ ಉನ್ನತ ಧ್ಯೇಯ ಸಾಧನೆಯ ಮಾರ್ಗದಲ್ಲಿ ರಾಷ್ಟ್ರದ ಮೂಲ ಕಲ್ಪನೆಯೇ ತಲೆಕೆಳಗಾಗಿರುವಂತೆ ತೋರುತ್ತಿದೆ. ಅಂದರೆ ನಮ್ಮ ರಾಷ್ಟ್ರಕಲ್ಪನೆಯ ಮೂಲ ಘಟಕಗಳಾದ ರಾಜ್ಯಗಳ ಭಾಷೆ, ಸಂಸ್ಕೃತಿ, ಅಸ್ಮಿತೆಗಳನ್ನು ರಕ್ಷಿಸಿಕೊಳ್ಳುವ ಜನರ ಆಶೋತ್ತರಗಳಿಗೆ ತೊಡಕುಗಳನ್ನುಂಟು ಮಾಡುವ ರೀತಿಯಲ್ಲಿ ಈ ಹಕ್ಕುಗಳ ವ್ಯಾಖ್ಯಾನಗೊಳ್ಳುವ ಅವಕಾಶವನ್ನು ಸಂವಿಧಾನದಲ್ಲಿ ಮಾಡಿಕೊಡಲಾಗಿದೆ.

ವ್ಯಕ್ತಿ–ರಾಜ್ಯ–ರಾಷ್ಟ್ರಗಳ ಪರಸ್ಪರ ಸಂಬಂಧದ ಸಮೀಕರಣದಲ್ಲಿನ ಈ ವಿರೋಧಾಭಾಸಕ್ಕೆ ಕಾರಣ, ಈ ಸಮೀಕರಣದಲ್ಲಿ ವ್ಯಕ್ತಿ, ರಾಜ್ಯ ಮತ್ತು ರಾಷ್ಟ್ರ ಕಲ್ಪನೆಗಳಿಗೆ ಒಂದು ಜೀವಂತಿಕೆ ನೀಡುವ ಸಂಸ್ಕೃತಿಯ ಪರಿಕಲ್ಪನೆಗೆ ಸ್ಥಾನವಿಲ್ಲದಿರುವುದೇ ಆಗಿದೆ. ಇಲ್ಲದಿದ್ದರೆ, ಸಂವಿಧಾನಾತ್ಮಕವಾಗಿಯೇ ರಾಷ್ಟ್ರಭಾಷೆಗಳೆಂದು ಕರೆಯಲ್ಪಟ್ಟಿರುವ; ಬಾಹ್ಯ ಒತ್ತಡಗಳಿಂದಾಗಿ ಉಂಟಾಗುತ್ತಿರುವ ರಾಜ್ಯದ ಭಾಷೆಗಳ ಹಿನ್ನಡೆಯನ್ನು ತಡೆಯುವ, ಆ ಮೂಲಕ ರಾಜ್ಯದ ಜನರ ಚೈತನ್ಯಶೀಲತೆಯ ಕೋಶವಾದ ಅವರ ಸಾಂಸ್ಕೃತಿಕ ಅಸ್ಮಿತೆಯನ್ನು ಪೋಷಿಸುವ ರಾಜ್ಯದ ಕ್ರಮಗಳು ಸಂವಿಧಾನಬಾಹಿರವಾಗುವುದಾದರೂ ಹೇಗೆ? ಹೀಗೆ ಸಂವಿಧಾನಬಾಹಿರವಾಗುವ ಮೂಲಕ ರಾಜ್ಯದ ಜನರ ಸಾಂಸ್ಕೃತಿಕ ಅಸ್ಮಿತೆಯ ಪ್ರಶ್ನೆ ರಾಷ್ಟ್ರದ ಹಿತಕ್ಕೆ ವಿರುದ್ಧವಾಗುವಂತಹ ಪ್ರಶ್ನೆಯಾಗುವುದಾದರೆ, ಭಾರತವೆಂಬ ರಾಷ್ಟ್ರ ಎಂದರೇನು? ಅದು ಯಾರ, ಎಂತಹ ಹಿತ ಕಾಯಲು ಇದೆ? ಎಂಬ ಪ್ರಶ್ನೆ ಏಳುತ್ತದೆ. ಇದರ ಜೊತೆಗೇ ಏಳುವ ಇನ್ನೆರಡು ಪ್ರಶ್ನೆಗಳೆಂದರೆ, ರಾಷ್ಟ್ರವೆಂಬುದು ರಾಜ್ಯಗಳ (ಮತ್ತು ವಾಸ್ತವ ಮಟ್ಟದಲ್ಲಿ ಕಿರು 'ರಾಜ್ಯ'ಗಳೇ ಆಗಿರುವ ಕೇಂದ್ರಾಡಳಿತ ಪ್ರದೇಶಗಳ) ಹೊರತಾಗಿ ಇನ್ನಾವ ಘಟಕಗಳಿಂದ ಸಂಯೋಜಿತಗೊಂಡಿದೆ? ರಾಷ್ಟ್ರದ (ಅರೆ) ಒಕ್ಕೂಟ ಮತ್ತು ಏಕಾತ್ಮಕ ಸ್ವರೂಪಗಳು ಪರಸ್ಪರ ವಿರುದ್ಧವಾಗಿ ರಾಷ್ಟ್ರ ಕಲ್ಪನೆಯನ್ನು ಘಾಸಿಗೊಳಿಸುತ್ತಿವೆಯಲ್ಲವೇ?

ಈ ಪ್ರಶ್ನೆಗಳಿಗೆ ಉತ್ತರ ೧೯೫೬ರ ರಾಜ್ಯ ಪುನರ್‌ವಿಂಗಡಣಾ ಕಾಯಿದೆಯನ್ನು ಸಂಸತ್ತು ಅಂಗೀಕರಿಸಿದ ರೀತಿ–ನೀತಿಗಳಲ್ಲಿದೆ ಎಂದು ನನಗನ್ನಿಸುತ್ತದೆ. ರಾಷ್ಟ್ರ ಸ್ವತಂತ್ರವಾದ ನಂತರದ ವರ್ಷಗಳಲ್ಲಿ, ಅದು ರಾಜಕೀಯವಾಗಿ ಸಂಯೋಜಿತವಾಗಿದ್ದ

ಸ್ವರೂಪದಲ್ಲಿ ವಸಾಹತುಶಾಹಿಯ ಕಾರಣದಿಂದಾಗಿ ಉಂಟಾಗಿದ್ದ ಭಾರತದ ಸಾಂಸ್ಕೃತಿಕ ಚರಿತ್ರೆಯ ವಿಕೃತಿಗಳನ್ನು ಹಾಗೇ ಉಳಿಸಿಕೊಳ್ಳಲಾಗಿರುವ ಸಂಗತಿ ಸ್ವಲ್ಪ ತಡವಾಗಿಯಾದರೂ–ಐವತ್ತರ ದಶಕದ ಮಧ್ಯಭಾಗದ ಹೊತ್ತಿಗೆ–ಜನರ ಗಮನಕ್ಕೆ ಬಂತು. ಇದರ ವಿರುದ್ಧ ಜನ ಭಾಷಾವಾರು ರಾಜ್ಯಗಳ ರಚನೆಗಾಗಿ ರೂಪಿಸಿದ ಜನಾಂದೋಲನಗಳ ಪರಿಣಾಮವಾಗಿ ಭಾರತ ಸರ್ಕಾರ ರಾಜ್ಯ ಪುನರ್‌ವಿಂಗಡಣಾ ಆಯೋಗ ರಚಿಸಿತು. ಅದರ ಶಿಫಾರ್ಸುಗಳ ಆಧಾರದ ಮೇಲೆ ೧೯೫೬ರ ರಾಜ್ಯ ಪುನರ್‌ವಿಂಗಡಣಾ ಕಾಯಿದೆಯನ್ನು ಅಂಗೀಕರಿಸಿ ಭಾಷಾವಾರು ಪ್ರಾಂತ್ಯಗಳ ರಚನೆಗೆ ಸಂವಿಧಾನದ ಮಾನ್ಯತೆ ನೀಡಲಾಯಿತು. ಆದರೆ ಈ ಮಾನ್ಯತೆ ಒಂದು ಬರಡು ಶಾಸನಾತ್ಮಕ ಮಾನ್ಯತೆಯಾಗಿತ್ತೇ ಹೊರತು, ಅದಕ್ಕೆ ಕಾರಣವಾದ ಜನಾಂದೋಲನದ ಮುಖ್ಯ ಧ್ಯೇಯವಾಗಿದ್ದ ಜನರ ಭಾಷಾಮೂಲ ಸಾಂಸ್ಕೃತಿಕ ಆಶೋತ್ತರಗಳ ಈಡೇರಿಕೆಗೆ ಅದರಲ್ಲಿ ಅವಕಾಶವನ್ನೇ ಕಲ್ಪಿಸಲಾಗಿರಲಿಲ್ಲ. ಅಂದರೆ ಭಾಷಾವಾರು ರಾಜ್ಯಗಳ ರಚನೆ ಎಂಬುದು ಒಂದು ತಾಂತ್ರಿಕ ರಚನೆಯಾಯಿತೇ ಹೊರತು, ಅದಕ್ಕೆ ಕಾರಣವಾಗಿದ್ದ– ಆದರೆ ಅಖಿಲ ಭಾರತೀಯತೆಯ ಸಾರಾಸಗಟುತನದಲ್ಲಿ ದಮನಿತವಾಗಿದ್ದ– ಭಾರತದ ರಾಷ್ಟ್ರೀಯತೆಯ ಮೂಲ ನೆಲೆಗಳಾಗಿದ್ದ ಭಾಷಾ (ಉಪ)ರಾಷ್ಟ್ರೀಯತೆಗಳ ಸ್ಪಂದನಗಳನ್ನು ಅದು ಗುರುತಿಸಲೂ ಇಲ್ಲ, ಮಾನ್ಯ ಮಾಡಲೂ ಇಲ್ಲ. ಜನ ಕೂಡ ಅಲ್ಪತೃಪ್ತರಾಗಿಯೋ ಅಥವಾ ಅಂದಿನ ರಾಜಕೀಯ ನಾಯಕತ್ವದ ಮುತ್ಸದ್ದಿತನದಲ್ಲಿ ನಂಬಿಕೆ ಇಟ್ಟು, ಮುಂದೆ ಸಂಭವಿಸಬಹುದಾದ ಸಾಂಸ್ಕೃತಿಕ ಅನಾಹುತಗಳನ್ನು ಮುನ್ನೋಡಲಾಗದೆಯೋ ಸುಮ್ಮನಾದರು. ಈ ಲೋಪ ಇಂದಿನ ಪೀಳಿಗೆಯ ಸಾಂಸ್ಕೃತಿಕ ಅಸ್ತಿತ್ವಕ್ಕೆ ದೊಡ್ಡ ಸಂಕಟವನ್ನು ತಂದೊಡ್ಡಿದೆ.

ಭಾಷಾವಾರು ರಾಜ್ಯ ರಚನೆಗಾಗಿ ನಡೆದ ಆಂದೋಲನ ತನ್ನ ತಾತ್ವಿಕತೆಯ ತಾರ್ಕಿಕ ಅಂತ್ಯವನ್ನು ಮುಟ್ಟಿದ್ದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಣ ಅಧಿಕಾರ ಹಂಚಿಕೆ ಮತ್ತು ಅವುಗಳ ಸಂಬಂಧದ ಸಮೀಕರಣದ ಪಾತಳಿಗಳೇ ಬದಲಾಗಿ ನಮ್ಮ ಸಂವಿಧಾನಕ್ಕೆ ಸಾಂಸ್ಕೃತಿಕವಾಗಿ ಮಹತ್ವವುಳ್ಳ ಹಲವು ತಿದ್ದುಪಡಿಗಳು ಅನಿವಾರ್ಯವಾಗುತ್ತಿದ್ದವು. ಆಗ ರಾಜ್ಯದ ನಿಜ ಬದುಕಿನ ಒಂದು ನಾಡಿಮಿಡಿತವನ್ನೂ ಆಲಿಸದ ಸಂಪೂರ್ಣ ಹೊರಗಿನವರೆಲ್ಲ ನಮ್ಮ ವಿಧಾನಸಭೆಯಿಂದ ರಾಜ್ಯಗಳ ಸಭೆ ಎನಿಸಿ ರಾಷ್ಟ್ರದ ಒಕ್ಕೂಟ ಸ್ವರೂಪವನ್ನು ನಿರೂಪಿಸುವ ರಾಜ್ಯಸಭೆಗೆ ಆಯ್ಕೆಯಾಗಿ ಹೋಗಿ ಒಕ್ಕೂಟ ತತ್ವವನ್ನು ಅಣಕಿಸುವ ದೃಶ್ಯ ನಿರ್ಮಾಣವಾಗುತ್ತಿರಲಿಲ್ಲ. ಹಾಗೇ, ರಾಷ್ಟ್ರೀಯತೆ ಎಂಬುದಕ್ಕೆ ರಾಜ್ಯಗಳು ಪ್ರತಿನಿಧಿಸುವ ಭಾಷಾ ಉಪರಾಷ್ಟ್ರೀಯತೆಗಳ ಸಂಯೋಜನೆಗಿಂತ ಹೆಚ್ಚಿನ ಅರ್ಥವಿಲ್ಲದಾಗಿರುತ್ತಿತ್ತು. ಆಗ ರಾಜ್ಯಗಳ ಅಧಿಕಾರಗಳು ಸಾಂಸ್ಕೃತಿಕ ಬಲದ ವಿಸ್ತರಣೆಗಳಾಗಿ ಆಯಾ ರಾಜ್ಯಗಳ ಭಾಷೆ ಮತ್ತು ಸಂಸ್ಕೃತಿಗಳ ಹಿತ ಕಾಯುವ ಶಾಸನಗಳನ್ನು ಪ್ರಜೆಗಳ ಮೂಲಭೂತ ಹಕ್ಕುಗಳ ಉಲ್ಲಂಘನೆಯ ಆತಂಕವಿಲ್ಲದೆ ರೂಪಿಸಿ ಜಾರಿ ಮಾಡಲು ಸಾಧ್ಯವಾಗಿರುತ್ತಿತ್ತು. ಏಕೆಂದರೆ, ಆಗ ಮೂಲಭೂತ ಹಕ್ಕುಗಳ ವ್ಯಾಖ್ಯಾನ ಸಾಂಸ್ಕೃತಿಕ ಒತ್ತಾಯಗಳ ಅರಿವಿನ ಸೀಮೆಗಳಿಗೆ ಬದ್ಧವಾಗಿರುವ ವಿಧಿಗಳನುಸಾರವಾಗಿ ಮಾತ್ರ ಜರುಗುತ್ತಿರುತ್ತಿತ್ತು.

ಆದರೆ ಯಾವುದಕ್ಕೂ ಕಾಲ ಮಿಂಚಿಲ್ಲ. ಏಕೆಂದರೆ ರಾಜ್ಯ ನಮ್ಮದಾಗಿರುವಂತೆಯೇ ರಾಷ್ಟ್ರವೂ ನಮ್ಮದೇ. ಅದರ ಸಂವಿಧಾನವೂ ನಾವೇ ಮಾಡಿಕೊಂಡು ನಮಗೆ ಅರ್ಪಿಸಿಕೊಂಡಿರುವಂತಹದ್ದು. ಹಾಗಾಗಿ ರಾಜ್ಯ ನಾಯಕತ್ವಕ್ಕೆ ತನ್ನದೇ ಆದ ಸಾಂಸ್ಕೃತಿಕ ಆತ್ಮಶ್ರೀ ಎಂಬುದೊಂದಿದ್ದರೆ, ಅದು ಹಿಂದೆ ಆದ ಲೋಪಗಳನ್ನು ಸರಿ ಮಾಡುವ ಪ್ರಯತ್ನವನ್ನು ಈಗಲೂ ಮಾಡಬಹುದು. ಕರ್ನಾಟಕದ ಸಾಮಾನ್ಯ ಜನ ತನ್ನ ರಾಜ್ಯದಲ್ಲೇ ಸಾಂಸ್ಕೃತಿಕ ಪರಕೀಯತೆಯನ್ನು ಅನುಭವಿಸುವಂತಾಗುವ ದುರಂತವನ್ನು ತಪ್ಪಿಸಲು ಅದು ತನ್ನ ಅಖಿಲ ಭಾರತ ರಾಜಕಾರಣದ ಅಡಿಯಾಳುತನವನ್ನು ಬಿಟ್ಟು ತನ್ನ ರಾಜಕಾರಣವೇ ಅದರ ಅಡಿಗಲ್ಲು ಎಂಬ ಸ್ಪಷ್ಟ ರಾಜಕೀಯ ಗ್ರಹಿಕೆಯೊಂದಿಗೆ ಬೆನ್ನು ನೆಟ್ಟಗೆ ಮಾಡಿಕೊಂಡು ನಿಲ್ಲುವ ಸಂಕಲ್ಪ ಮಾಡಬೇಕಷ್ಟೆ. ಆಗ ಜನರಲ್ಲೂ ಹೊಸ ಹುರುಪು ಉಂಟಾಗಿ ಅದರ ಹಿಂದೆ ನಿಲ್ಲುತ್ತದೆ. ಹೊಸ ಸಾಂಸ್ಕೃತಿಕ ಭಾರತದ ಕಲ್ಪನೆ ಅರಳುತ್ತದೆ. ಅದರ ಬಲದಿಂದ ಸಂವಿಧಾನವು ಪ್ರತಿ ರಾಜ್ಯಕ್ಕೂ ಅದರ ಸಾಂಸ್ಕೃತಿಕ ಸ್ವಾಯತ್ತತೆಗೆ ಭಂಗ ಉಂಟಾಗದಂತಹ ರಾಜಕೀಯ ಅಧಿಕಾರದ ಪಾಲನ್ನು ಒದಗಿಸಿ ಭಾರತ ಒಂದು ವಿಶಿಷ್ಟ ರಾಜಕೀಯ ವಿದ್ಯಮಾನ ಮಾತ್ರವಲ್ಲದೆ ಒಂದು ವಿಶಿಷ್ಟ ಸಾಂಸ್ಕೃತಿಕ ವಿದ್ಯಮಾನ ಕೂಡ ಹೌದು ಎಂದು ಗುರುತಿಸಬೇಕಾದ ಅನಿವಾರ್ಯತೆ ಉಂಟಾಗುತ್ತದೆ. ಆ ಮೂಲಕ ರಾಷ್ಟ್ರದ ಕಲ್ಪನೆ ನಿಜ ಮತ್ತು ಸದೃಢ ನೆಲೆಗಳ ಮೇಲೆ ನಿಲ್ಲುವಂತಾಗುತ್ತದೆ. ಇದು ಆಗಬಲ್ಲುದಾದ ಮಾತ್ರವಲ್ಲ, ಆಗಬೇಕಾದ ರಾಷ್ಟ್ರೀಯ ಸಾಹಸವೇ ಆಗಿದೆ. ಆಗ ಮಾತ್ರ ಕರ್ನಾಟಕದ ಮಕ್ಕಳು ಕನ್ನಡದ ಮಣ್ಣಿನಲ್ಲಿ ಬೇರಿಳಿಸಿಯೇ ಭಾರತದ, ವಿಶ್ವದ ಪ್ರಜೆಗಳಾಗಿ ಘನತೆಯೊಂದಿಗೆ ಬಾಳಲು ಸಾಧ್ಯವಾಗುತ್ತದೆ.

ಆದರೆ ಇಂದಿನ ಪರಿಸ್ಥಿಯ ವ್ಯಂಗ್ಯವೆಂದರೆ ಪ್ರಧಾನಿ ಮೋದಿಯವರರು ಸಹಕಾರಿ ಒಕ್ಕೂಟ ತತ್ವವನ್ನು ಪ್ರತಿಪಾದಿಸುತ್ತಿರುವಾಗಲೇ, ಇಡೀ ದೇಶಕ್ಕೆ ಸಾರಾಸಗಟಾದ ಜಿ.ಎಸ್.ಟಿ ಛೂ ಮಂತ್ರ ಹಾಕುತ್ತಾ ಎಲ್ಲ ಕಡೆ ಹಿಂದಿ ಹೇರಿಕೆಯ ವ್ಯವಸ್ಥಿತ ಪ್ರಯತ್ನ ಮಾಡುತ್ತಾ ಅಖಿಲ ಭಾರತ ಪ್ರವೇಶ ಪರೀಕ್ಷೆ ಮತ್ತು ನೇಮಕಾತಿ ವ್ಯವಸ್ಥೆಗಳನ್ನು ಬಲಗೊಳಿಸುತ್ತಿದ್ದರೆ, ಇದೆಲ್ಲದರ ಮಧ್ಯೆ ಇನ್ನೊಂದು ಕಡೆ ನಮ್ಮ ಸಿದ್ದರಾಮಯ್ಯನವರು ಅಮಾಯಕರಂತೆ ನಟಿಸುತ್ತಾ ನಾಡಧ್ವಜ ರೂಪಿಸಿ ಮೆರೆಯಲು ಹೊರಟಿರುವುದು!

('ವಿಜಯ ಕರ್ನಾಟಕ' : ೨೯ ಸೆಪ್ಟಂಬರ್, ೨೦೧೭)

ಸೃಜನಶೀಲ ರಾಜಕೀಯ ನಾಯಕ ಲೋಹಿಯಾ

ಇಂದಿಗೆ (ಅಕ್ಟೋಬರ್ ೧೨, ೨೦೧೭) ರಾಮಮನೋಹರ ಲೋಹಿಯಾ ನಿಧನರಾಗಿ ಸರಿಯಾಗಿ ಐವತ್ತು ವರ್ಷಗಳು. ತೀವ್ರ ಅನಾರೋಗ್ಯದ ನಡುವೆಯೂ ತನಗೆ ಈ ದೇಶದ ಸಾಮಾನ್ಯನಿಗೆ ಸಿಗುವ ವೈದ್ಯಕೀಯ ಸೌಲಭ್ಯಗಳೇ ಸಾಕೆಂದು ಹಠ ಮಾಡಿ ಸರ್ಕಾರಿ ಆಸ್ಪತ್ರೆಗೇ ದಾಖಲಾಗಿ, ಅಲ್ಲಿಯೇ ಚಿಕಿತ್ಸೆ ಪಡೆದು, ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದ ಮಹನೀಯರವರು. ಅವರು ನಿಧನರಾದಾಗ ಅವರ ಹೆಸರಲ್ಲಿ ಒಂದು ಬ್ಯಾಂಕ್ ಖಾತೆಯಾಗಲೀ, ಮನೆಯಾಗಲೀ, ಬಿಡಿಗಾಸಿನ ಆಸ್ತಿಯಾಗಲೀ ಇರಲಿಲ್ಲ! ಅವರು ನಮ್ಮ ಸ್ವಾತಂತ್ರ್ಯ ಹೋರಾಟದ ಮಹಾ ಯೋಧರಲ್ಲೊಬ್ಬರಾಗಿದ್ದರು. ಭಾರತದ ಬಡವರ ನಿಜವಾದ ದನಿಯಾಗಬಯಸಿದ್ದ ಸಮಾಜವಾದಿ ಪಕ್ಷದ ಸ್ಥಾಪಕ ಸದಸ್ಯರೂ, ಸಮಾಜವಾದಕ್ಕೊಂದು ಭಾರತೀಯ ನೆಲಗಟ್ಟು ಒದಗಿಸಿದ ಮಹಾ ತಾತ್ವಿಕರೂ ಆಗಿದ್ದರು. ಆ ಕಾಲದ ದೇಶದ ಆರಾಧ್ಯ ದೈವವೇ ಆಗಿದ್ದ ಪ್ರಧಾನ ಮಂತ್ರಿ ಜವಾಹರಲಾಲ್ ನೆಹರೂ ಅವರ ರಾಜಕರಣದ ವೈಖರಿಯ ವಿರುದ್ಧ ಸರ್ವ ದಿಕ್ಕುಗಳಿಂದಲೂ ಧಿಕ್ಕಾರ ಕೂಗಿ, ದೇಶಕ್ಕೆ ಗಾಂಧಿಯನ್ನು ಮತ್ತೆ ಮತ್ತೆ ನೆನಪಿಸಿಕೊಡುವ ಸಾಹಸ ಮಾಡಿದವರು. ಹಾಗೆ ಗಾಂಧಿಯನ್ನು ಸ್ವಾತಂತ್ರ್ಯೋತ್ತರ ಭಾರತದ ವಾಸ್ತವಕ್ಕೆ ಪುನರ್‌ವ್ಯಾಖ್ಯಾನ ಮಾಡಿದವರು ಅವರು. ಈ ಸಾಹಸ ಯಾತ್ರೆಯ ಭಾಗವಾಗಿ ಸ್ವತಂತ್ರ ಭಾರತದ ಸೆರೆಮನೆಗಳಲ್ಲಿ ಅತ್ಯಂತ ಹೆಚ್ಚು ಕಾಲ ಕಳೆಯಬೇಕಾಗಿ ಬಂದ ರಾಜಕೀಯ ದುರಂತ ನಾಯಕರೂ ಅವರಾಗಿದ್ದರು. ಅವರು ನಿಧನರಾದಾಗ ಎದುರು ಪಕ್ಷದಲ್ಲಿದ್ದ ಖ್ಯಾತ ಸಂಸದೆ ತಾರಕೇಶ್ವರಿ ಸಿನ್ಹಾ ಉದ್ಗರಿಸಿದ್ದು ಹೀಗೆ: 'ಮಜ್ನೂ ಇಲ್ಲವಾದ; ಕಾಡು ಗೋಳ್ಗರೆಯುತ್ತಿದೆ!' ಇನ್ನು ರಾಷ್ಟ್ರದ ಪ್ರಮುಖ ಪತ್ರಿಕೆಗಳು ಅವರ ನಿಧನವನ್ನು ಸಾರಿದ್ದು ಹೀಗೆ: 'ಶ್ರೀಮಾನ್ ವಿರೋಧ ಪಕ್ಷ ಇನ್ನಿಲ್ಲ!'

ಇಂದು ತಮ್ಮದು ಸಮಾಜವಾದಿ ಪಕ್ಷವೆಂದೂ, ಸಮಾಜವಾದದ ಒಸ್ಲೈಲೆಯ ಪಕ್ಷವೆಂದೋ ಕರೆದುಕೊಳ್ಳುವ ಭಂಡ ನಾಯಕರನೇಕರಿದ್ದಾರೆ. ಅವರು ಲೋಹಿಯಾ ಬಿಂಬದ ಮೇಲಿನ ದೃಷ್ಟಿ ಚುಕ್ಕೆ ಇದ್ದಂತೆ. ಕುಟುಂಬ ಮತ್ತು ಊಳಿಗಮಾನ್ಯಶಾಹಿ ರಾಜಕಾರಣದ ಅಧ್ವರ್ಯುಗಳಾಗಿರುವ ಇವರಿಗೂ ಲೋಹಿಯಾಗೂ, ಅವರ ವಿಚಾರಗಳಿಗೂ ಯಾವುದೇ ಸಂಬಂಧವಿಲ್ಲ. ಏಕೆಂದರೆ ಲೋಹಿಯಾ ಪಶ್ಚಿಮದ ಬದುಕಿನ ಆದರ್ಶವಾದ ಸದಾ ಏರುತ್ತಾ ಹೋಗುವ ಜೀವನಮಟ್ಟಕ್ಕೆ ಪ್ರತಿಯಾಗಿ ಭಾರತಕ್ಕೆ ಸರ್ವರಿಗೂ ಸಾಧ್ಯವಾಗಬಹುದಾದ ಸರಳ ಸಭ್ಯ ಜೀವನಮಟ್ಟವನ್ನು ತಮ್ಮ ಸಮಾಜವಾದದ ಚಾಲಕಶಕ್ತಿಯನ್ನಾಗಿ ಪ್ರತಿಪಾದಿಸಿದರು. ಅವರ ಪ್ರಕಾರ ಸಮಾನತೆ ಎಂದರೆ ಆಂತರಿಕ ಶಾಂತಿ ಮತ್ತು ಬಾಹ್ಯ ಬಂಧುತ್ವದ ಪ್ರತೀಕ. ಆದರೆ ಅವರ ಉತ್ತರಾಧಿಕಾರಿಗಳೆಂದು ಹೇಳಿಕೊಳ್ಳುವವರೆಲ್ಲ ಅವರ ಜಾತಿವಿನಾಶ ನೀತಿಯನ್ನು ಹಿಂದುಳಿದ ಜಾತಿವಾದವಾಗಿ ಪರಿವರ್ತಿಸಿಕೊಂಡು, ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಸಮಾಜವನ್ನು ಜಾತಿಗಳಾಗಿ ಒಡೆದು ಅದರ ಸಂದಿಗಳಲ್ಲಿ ರಾಶಿ ರಾಶಿ ಹಣ ಮತ್ತು ಆಸ್ತಿಗಳ ಒಡೆಯರಾಗಿ ಮೆರೆಯುತ್ತಾ, ಸೆರೆಮನೆಗಳ ಕಂಬಿಗಳನ್ನೆಣಿಸುವ ಭಯದಲ್ಲಿ ರಾಜಿಕಬೂಲಿ ರಾಜಕಾರಣವನ್ನು ಮಾಡುತ್ತಾ ಲೋಹಿಯಾ ಹೆಸರಿಗೆ ಕೆಸರೆರಚುವ ಕೆಲಸಗಳಲ್ಲಿ ತೊಡಗಿದ್ದಾರೆ.

ಲೋಹಿಯಾ ವಾರಸುದಾರಿಕೆಯ ರಾಜಕಾರಣ ಏಕೆ ಹೀಗಾಯಿತು? ಅದರ ಹಿಂದೆ ಒಂದು ದೊಡ್ಡ ಕತೆಯೇ ಇದೆ. ಆದರೆ ಅದನ್ನು ಸರಳವಾಗಿ ಹೇಳುವುದಾದರೆ, ಅವರು ಪ್ರತಿಪಾದಿಸಿದ ಸಮಾಜವಾದ ದೀರ್ಘಕಾಲೀನ ಹೋರಾಟದ ರಾಜಕಾರಣದಲ್ಲಿ ಮಾತ್ರ ಮಾಗಿ ಸಾಕಾರವಾಗುವಂತಹ ಸಂಕೀರ್ಣ ತತ್ವವಾಗಿತ್ತು. ಅದು ಮಾರ್ಕ್ಸ್‌ವಾದದಿಂದಲೂ, ಗಾಂಧಿ ವಿಚಾರಗಳಿಂದಲೂ ಸ್ಫೂರ್ತಿ ಪಡೆದು ಮನುಷ್ಯನನ್ನು ಒಳಗಿನಿಂದಲೂ ಹೊರಗಿನಿಂದಲೂ ಪಳಗಿಸಿ ಅವನನ್ನು ಹೊಸ ಸಮಾಜವಾದಿ ನಾಗರಿಕತೆಯ ಪ್ರಜೆಯನ್ನಾಗಿ ಪರಿವರ್ತಿಸುವ ಹೊಸ ತೆರನ ಸೃಜನಶೀಲ ರಾಜಕೀಯ ಸಾಹಸಕ್ಕೆಳಸಿತ್ತು. ನೆಹರೂ ಅವರ ಜನಪ್ರಿಯ ಮತ್ತು ವ್ಯಾವಹಾರಿಕ ರಾಜಕಾರಣದೆದುರು ಇದೊಂದು ದುಸ್ಸಾಹಸವೇ ಆಗಿತ್ತು. ಹಾಗಾಗಿಯೇ ಅವರ ಪಕ್ಷ ಸಂಸತ್ತಿನಲ್ಲಾಗಲೀ, ರಾಜ್ಯ ವಿಧಾನಸಭೆಗಳಲ್ಲಾಗಲೀ ದೊಡ್ಡ ಪಕ್ಷವಾಗಿ ಬೆಳೆದಿರಲಿಲ್ಲ.

ಆದರೂ, ಲೋಹಿಯಾ ಹೆಸರೇಕೆ ಅವರು ಕೊನೆಯುಸಿರೆಳೆದ ಐವತ್ತು ವರ್ಷಗಳ ನಂತರವೂ ರಾಷ್ಟ್ರದ ರಾಜಕಾರಣದಲ್ಲಿ ಪದೇ ಪದೇ ಮಾರ್ದನಿಸುತ್ತಿದೆ? ಇದಕ್ಕೆ ಎರಡು ನೆಲೆಗಳ ಕಾರಣವುಂಟು. ಒಂದು, ಅವರು ಪ್ರತಿಪಾದಿಸಿದ ರಾಜಕೀಯ ತತ್ವ ಬಹು ಸ್ಪಂದನಶೀಲವಾಗಿದ್ದು, ಅದರ ಸ್ಪಂದನೆಗಳು ಸ್ವತಂತ್ರ ಭಾರತದ ರಾಜಕೀಯ ಚರಿತ್ರೆಯಲ್ಲಿ ಉಳಿದುಹೋಗಿರುವ ಅವರನ್ನು ಕುರಿತ ಹಲವು ಸಂಕಥನಗಳಲ್ಲಿ ಅನುರಣಿಸುತ್ತಾ, ಒಂದಲ್ಲ ಒಂದು ರಚನಾತ್ಮಕ ರೂಪದಲ್ಲಿ ಸಾಕಾರಗೊಳ್ಳಲು ಹವಣಿಸುತ್ತಿರುವುದು. ಆಮ್ ಆದ್ಮಿ ಪಕ್ಷ ಮತ್ತು ಇತ್ತೀಚಿನ ಸ್ವರಾಜ್ ಇಂಡಿಯಾ

ಪಕ್ಷಗಳು ಈ ಹವಣಿಕೆಯ ಇತ್ತೀಚಿನ ರೂಪಗಳು. ಇನ್ನೊಂದು ಕಾರಣವೆಂದರೆ, ಅವರು ಪ್ರತಿಪಾದಿಸಿದ ಸಮಾಜವಾದಿ ರಾಜಕಾರಣವು ಆವರೆಗೆ ಜಗತ್ತಿನ ಯಾವ ರಾಜಕೀಯ ಸಂಪ್ರದಾಯವೂ ಹೊಂದಿಲ್ಲದಂತಹ ಸಾಂಸ್ಕೃತಿಕ ಆಯಾಮವನ್ನು ಹೊಂದಿದ್ದುದು. ಲೋಹಿಯಾ ಅವರ ರಾಜಕೀಯ ಪಕ್ಷ ಸಂಸದೀಯ ರಾಜಕಾರಣದಲ್ಲಿ ಸಣ್ಣದಾಗಿಯೇ ಉಳಿದಿದ್ದರೂ, ಅವರ ಸಮಕಾಲೀನ ಭಾರತದ ಬಹುತೇಕ ಸಾಂಸ್ಕೃತಿಕ ವ್ಯಕ್ತಿತ್ವಗಳ ಸಮೂಹ ಅವರ ಹಿಂದೆ ಸಾಲು ಸಾಲಾಗಿ ನಿಂತಿತ್ತು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿಗಳಾದ ಹಿಂದಿಯ ಆಗ್ಗೇಯ, ಧರ್ಮವೀರ ಭಾರತಿ, ರಘುವೀರ ಸಹಾಯ್, ಅಸ್ಸಾಮಿಯ ಬೀರೇಂದ್ರ ಕುಮಾರ ಭಟ್ಟಾಚಾರ್ಯ, ಜಾಗತಿಕ ಖ್ಯಾತಿ ಚಿತ್ರಕಾರ ಎಂ.ಎಫ್. ಹುಸೇನ್ ಈ ಕಿಂದರಜೋಗಿಯ ಹಿಂದೆ ಸಾಲುಗಟ್ಟಿ ನಿಂತಿದ್ದ ರಾಷ್ಟ್ರಮಟ್ಟದ ಕಲಾಭಿಜ್ಞರಲ್ಲಿ ಕೆಲವರಾಗಿದ್ದರೆ, ಕರ್ನಾಟಕದಲ್ಲಿ ನೋಡಿ: ಕುವೆಂಪು, ಪುತಿನ, ಜಿ.ಎಸ್.ಶಿವರುದ್ರಪ್ಪ, ಪಿ. ಕಾಳಿಂಗರಾವ್, ಪೂರ್ಣಚಂದ್ರ ತೇಜಸ್ವಿ, ಲಂಕೇಶ್, ಅನಂತಮೂರ್ತಿ, ಕೆ.ವಿ. ಸುಬ್ಬಣ್ಣ, ಶ್ರೀಕೃಷ್ಣ ಆಲನಹಳ್ಳಿ, ಬೆಸಗರಹಳ್ಳಿ ರಾಮಣ್ಣ, ಚಂಪಾ, ದೇವನೂರ ಮಹಾದೇವ ಇವರೆಲ್ಲ ಒಂದಲ್ಲ ಒಂದು ನೆಲೆಯಲ್ಲಿ ಲೋಹಿಯಾ ವಿಚಾರ ಅಥವಾ ರಾಜಕಾರಣದೊಂದಿಗೆ ಹೆಮ್ಮೆಯಿಂದ ಗುರುತಿಸಿಕೊಂಡವರೇ.

ಇನ್ನು ಕರ್ನಾಟಕದ ಸಮಾಜವಾದಿ ರಾಜಕಾರಣದ ಪಿತಾಮಹರೆನಿಸಿ, ಕಾಗೋಡು ಭೂ ಸತ್ಯಾಗ್ರಹಕ್ಕೆ ಲೋಹಿಯಾ ಅವರನ್ನು ಕರೆಸಿ ಅದಕ್ಕೊಂದು ಐತಿಹಾಸಿಕ ಮಹತ್ವ ಒದಗಿಸಿದ ಶಾಂತವೇರಿ ಗೋಪಾಲಗೌಡರ ಹೆಸರು ಕೇಳಿದರೆ ಈಗಲೂ ರೋಮಾಂಚನಗೊಳ್ಳುವ ಒಂದು ಜನಸಮೂಹವೇ ಇಂದೂ ಕರ್ನಾಟದಲ್ಲಿ ಜೀವಂತವಿದೆ. ಅವರ ಕೆಲ ಶಿಷ್ಯರು ನಂತರದ ದಿನಗಳ ರಾಜಕಾರಣದ ಸಾರ್ವತ್ರಿಕ ಅವನತಿಯೊಂದಿಗೆ ತಾವೂ ರಾಜಕೀಯ ಅವನತಿಯನ್ನು ಕಂಡಿದ್ದು ನಿಜವಾದರೂ ಸಮಾಜವಾದಿ ಪಕ್ಷಕ್ಕೆ ಸಮಾನಾಂತರವಾಗಿ ಕಟ್ಟಿಕೊಂಡ ಸಮಾಜವಾದಿ ಯುವಜನ ಸಭಾ ಮೂಲಕ ಬೆಳಕಿಗೆ ಬಂದ ಎಂ.ಡಿ. ನಂಜುಂಡಸ್ವಾಮಿ, ಕಡಿದಾಳು ಶಾಮಣ್ಣ, ಪ್ರೊ. ಬಿ.ಕೃಷ್ಣಪ್ಪ, ಕೆ. ರಾಮದಾಸ್ ಎನ್.ಡಿ. ಸುಂದರೇಶ ಉಂತಾದ ಹೋರಾಟಗಾರರ ದಂಡು ಕರ್ನಾಟಕದ ಪ್ರಜ್ಞೆಯನ್ನು ಹಲವು ನೆಲೆಗಳಲ್ಲಿ ವಿಸ್ತರಿಸಿದ ಕತೆಯನ್ನು ಮರೆಯುವಂತಿಲ್ಲ.

ಲೋಹಿಯಾ ಸಾಂಸ್ಕೃತಿಕ ಲೋಕವನ್ನು ಹೀಗೆ ದಟ್ಟವಾಗಿ ಆಕರ್ಷಿಸಲು ಕಾರಣವೆಂದರೆ ಈ ಮೊದಲೇ ತಿಳಿಸಿದ ಅವರ ರಾಜಕೀಯ ತತ್ವದ ಅವಿಭಾಜ್ಯ ಅಂಗವಾಗಿ ಮೂಡಿದ್ದ ಸಾಂಸ್ಕೃತಿಕ ಮೀಮಾಂಸೆಯು ಮನುಷ್ಯನ ಬದುಕನ್ನು ಗ್ರಹಿಸಿದ ಸೃಜನಶೀಲ ಬಗೆ. ಅವರು ಮನುಷ್ಯ, ಕ್ರಾಂತಿಯ ಅಥವಾ ಪರಿವರ್ತನೆಯ ಸಾಧನ ಮಾತ್ರವಲ್ಲ ಗುರಿಯೂ ಹೌದೆಂದು ಗ್ರಹಿಸುವ ಸೂಕ್ಷ್ಮಜ್ಞರಾಗಿದ್ದರು. ಮನುಷ್ಯನು ಪ್ರಜ್ಞಾಪೂರ್ವಕವಾಗಿ ಒಂದು ಗುರಿಯತ್ತ ಕೆಲಸ ಮಾಡುತ್ತಿರುವಾಗಲೇ ಅದರ ಪರಿಣಾಮವಾಗಿ ಮತ್ತು ಆ ಪರಿಣಾಮ ಅವನೊಳಗೆ ಎಬ್ಬಿಸುವ ಪ್ರಜ್ಞೆಯ ನಿಗೂಢ

ಅಲೆಗಳಿಂದಾಗಿ ಸದಾ ಅವನು ಹೊಸದಾಗುತ್ತಿರುತ್ತಾನೆ ಎಂದು ಅವರು ಹೇಳಿದರು. ಇದು ಅವರು ಗಾಂಧಿಯಿಂದ ಪಡೆದುಕೊಂಡ ಒಳನೋಟವಾದರೂ ಅದನ್ನು ಅವರು ಸಾರ್ತ್ರ್‌ನ ಅಸ್ತಿತ್ವವಾದದ ಹಿನ್ನೆಲೆಯಲ್ಲಿ ಅಭಿವ್ಯಕ್ತಿಸಿದ ಕ್ರಮ ಮತ್ತು ಭಾಷೆ, ಕಲೆ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಹೊಸ ಸಂಚಲನವನ್ನೇ ಉಂಟುಮಾಡಿತು. ಕರ್ನಾಟಕದಲ್ಲಿ ಅರವತ್ತರ ದಶಕದ ಆರಂಭದ ವರ್ಷಗಳಲ್ಲಿ ಯು.ಆರ್. ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿಯ ಮೂಲಕ ಆರಂಭವಾದ ಈ ಸಂಚಲನ ಒಂದು ಸಾಹಿತ್ಯಕ ಆಂದೋಲನವಾಗಿ, ಮುಖ್ಯವಾಗಿ ಹೇಳುವುದಾದದರೆ, ಲಂಕೇಶ್, ತೇಜಸ್ವಿ, ದೇವನೂರ ಮಹಾದೇವ ಅವರಂತಹ ಅಸಲಿ ಅನುಭವದ ಲೇಖಕರನ್ನು ತಾಗಿ ಕನ್ನಡ ಸಮಾಜದ ಹೊಸ ನೆಲೆಯ ಶೋಧಗಳಿಗೆ ಕಾರಣವಾಯಿತು. ಅಭಿವ್ಯಕ್ತಿಯನ್ನೇ ಕಾಣದೆ ಸುಪ್ತವಾಗಿದ್ದ ಶೂದ್ರ ಜಗತ್ತು ತನ್ನ ಭಾಷೆಯನ್ನು ಕಂಡುಕೊಂಡ ರೋಮಾಂಚನದಲ್ಲಿ ಕನ್ನಡ ಸಾಹಿತ್ಯವನ್ನು ಒಂದು ಉತ್ಸವದಂತೆ ಆಚರಿಸಿದ ಕಾಲಮಾನವನ್ನೂ ಎಪ್ಪತ್ತರ ದಶಕದ ಆರಂಭದಲ್ಲಿ ನಾವು ಕಾಣುವಂತಾಯಿತು. ಕನ್ನಡದ ಮೊದಲ ನಿಜ ದಲಿತ ಲೇಖಕ ದೇವನೂರ ಮಹಾದೇವ ಮೂಡಿದ್ದು ಆಗಲೇ.

ಹಾಗಾಗಿ ಇದು ಮೇಲುನೋಟಕ್ಕೆ ಸಾಂಸ್ಕೃತಿಕ ಆಂದೋಲನವಾಗಿದ್ದರೂ ಅಂತರ್ಯದಲ್ಲಿ ಒಂದು ಸಾಮಾಜಿಕ ಆಂದೋಲನವಾಗಿಯೂ ಕೆಲಸ ಮಾಡಿತ್ತು. ಇದರ ಪರಿಣಾಮವಾಗಿ ಮೇಲ್ವರ್ಗ ಹಾಗೂ ಮೇಲ್ಜಾತಿಗಳ ಬದುಕಿನ ಸಾಮಾನ್ಯ ಸವಾಲುಗಳ ಸುತ್ತಲೇ ಗಿರಕಿ ಹೊಡೆಯುತ್ತಿದ್ದ ಕನ್ನಡ ಸಾಹಿತ್ಯ, ಗ್ರಾಮಾಂತರ ಪ್ರದೇಶದ ಹಲವು ಸ್ತರಗಳ ವೈವಿಧ್ಯಮಯ ಬದುಕಿನ ಶೋಧಗಳತ್ತ ಚಲಿಸಿತು. 'ಸಂಸ್ಕಾರ'ದ ಮಾಲೇರ ಪುಟ್ಟ ತೇಜಸ್ವಿಯವರ 'ಕರ್ವಾಲೋ'ದ ಮಂದಣ್ಣನಾಗಿ ಮತ್ತು ದೇವನೂರ ಮಹಾದೇವ ಅವರ ಕಥೆಯ 'ಅಮಾಸ'ನಾಗಿ ಆಳದ ತಾತ್ವಿಕತೆಯೊಂದಿಗೆ ಅಪ್ರತಿಮ ಕಲಾಭಿಜ್ಞತೆಯೊಂದಿಗೆ ಅರಳಿಕೊಂಡ ಕತೆಯೇ ಆಧುನಿಕ ಕನ್ನಡಸಾಹಿತ್ಯದ ಕತೆಯಾಗಿ ಪರಿವರ್ತಿತವಾಯಿತು. ನಿಜ, ಇದೆಲ್ಲ ರೂಪಾಂತರದ ಹಿಂದೆ ದೊಡ್ಡ ಮೂರ್ತಿಯಾಗಿ ಆಧುನಿಕ ಕನ್ನಡದ 'ಶೂದ್ರ ತಪಸ್ವಿ' ಎನಿಸಿದ್ದ ಕುವೆಂಪು ಅವರು ಏಕಾಂಗಿಯಾಗಿ ಕಟ್ಟಿದ್ದ ಒಂದು ವಿಶಿಷ್ಟ ಪರಂಪರೆಯ ನಂಬಿಕೆಯ ಬಲವೂ ಇತ್ತು. ಆದರೆ ಕಳೆದು ಹೋಗತೊಡಗಿದ್ದ ಆ ಮಹಾಮೂರ್ತಿಯನ್ನು ತಮ್ಮ ಹೊಸ ಬೆಳಕಿನ ಕಾಂತಿಯಲ್ಲಿ ಪುನರುಜ್ಜೀವಗೊಳಿಸಿದ್ದು ಈ ಲೋಹಿಯಾ ಪ್ರಣೀತ ಸಾಂಸ್ಕೃತಿಕ ಮೀಮಾಂಸೆಯೇ ಎಂಬುದನ್ನು ನಾವು ಮರೆಯಬಾರದು. ಕುವೆಂಪು ನೇತೃತ್ವದಲ್ಲೇ ಅಲ್ಲವೇ ಈ ಮೀಮಾಂಸೆಯ ಫಲವಾಗಿ ಕನ್ನಡದಲ್ಲಿ ಮೊದಲ ಜಾತಿ ವಿನಾಶ ಸಮ್ಮೇಳನ ಮತ್ತು ಆನಂತರ ಕನ್ನಡ ಸಾಹಿತ್ಯದ ದಿಕ್ಕನ್ನೇ ಬದಲಿಸಿದ ಸಾಹಿತ್ಯ ಮೀಮಾಂಸೆಯನ್ನು ಮಂಡಿಸಿದ ಕರ್ನಾಟಕ ಲೇಖಕ ಮತ್ತು ಕಲಾವಿದರ ಬಳಗದ ಸಮಾವೇಶ ನಡೆದದ್ದು? ಇವು ಹುಟ್ಟಿಸಿದ ಕಾವಿನಲ್ಲಿಯೇ ಅಲ್ಲವೆ, ರಾಜ್ಯಾದ್ಯಂತ 'ಮಂತ್ರ ಮಾಂಗಲ್ಯ', ಸರಳ ವಿವಾಹ ಮತ್ತು ಅಂತರ್ಜಾತಿ ವಿವಾಹಗಳ ಒಂದು ಜನಾಂದೋಲನವೇ

ಆರಂಭವಾದದ್ದು? ಇವೆಲ್ಲ ಕನ್ನಡ ಜನಮನದೊಳಗೆ ಮಥನಗೊಂಡೇ ಅಲ್ಲವೇ ಆಧುನಿಕ ಕರ್ನಾಟಕದ ಎರಡು ಮುಖ್ಯ ಚಳುವಳಿಗಳೆನಿಸಿದ ದಲಿತ ಮತ್ತು ರೈತ ಚಳುವಳಿಗಳು ಮೂಡಿ ನಿಂತದ್ದು?

ಇವೆಲ್ಲ ಈಗ ಕನಸುಗಳಂತೆ ದೂರದಲ್ಲಿ ಕಾಣುತ್ತಿವೆಯಾದರೂ, ಲೋಹಿಯಾ ತತ್ವದ ಮತ್ತು ಸತ್ವದ ಬೀಜ ಈ ನಾಡಿನ ಮಣ್ಣಿನ ಆಳದಲ್ಲಿ ಮಲಗಿದೆ. ಅದು ಚಿಗುರೊಡೆದು ಮತ್ತೆ ಜನರ ಮಧ್ಯೆ ಬೆಳೆಯಲು ತನ್ನ ಕಾಲಕ್ಕಾಗಿ ಕಾಯುತ್ತಿದೆ. ಲೋಹಿಯಾ ಅವರದ್ದೇ ಆದ ಈ ಮಾತು ಈಗ ಮತ್ತೆ ಮತ್ತೆ ನೆನಪಿಗೆ ಬರುತ್ತಿದೆ:

'ಜನ ನನ್ನ ಮಾತನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ... ಬಹುಶಃ ನಾನು ಕಾಲದ ಜೊತೆಗೆ ಹೆಜ್ಜೆ ಹಾಕುವಾಗ ಒಂದೆರಡು ಹೆಜ್ಜೆ ಮುಂದೆ ಹೋಗಿಬಿಟ್ಟಿರುವೆನೇನೋ! ಆದರೆ ಒಂದು ದಿನ ಅವರು ಅರ್ಥ ಮಾಡಿಕೊಳ್ಳಲೇಬೇಕು ನಾನು ಸತ್ತ ಮೇಲಾದರೂ...'

('ವಿಜಯ ಕರ್ನಾಟಕ': ೧೨ ಅಕ್ಟೋಬರ್, ೨೦೧೭)

ದಿಕ್ಕೆಟ್ಟಿರುವ ಮೋದಿಯೂ, ರಿಪೇರಿಯಾಗದ ಕಾಂಗ್ರೆಸ್ಸೂ...

ಭಾರತದ ರಾಜಕಾರಣದಲ್ಲಿ ತಿರುವುಗಳು ಯಾವಾಗಲೂ ಅನಿರೀಕ್ಷಿತವೇ. ಮೂರು ತಿಂಗಳ ಹಿಂದೆ ಕೂಡ ಮೋದಿ ಅಲೆ ಇಳಿಮುಖವಾಗುವುದೆಂದು ಯಾರೂ ಮುನ್ನೋಡಿರಲಾರರು. ಆದರೆ ಆ ಅಲೆ ಮೋದಿ ವಿರೋಧಿಯಾಗಿ ಪರಿವರ್ತಿತವಾಗಿದೆಯೆಂದು ಈಗಲೂ ಹೇಳಲಾಗದಿದ್ದರೂ, ಮೋದಿ ಆಡಳಿತದ ಬಗ್ಗೆ ಒಂದು ವರ್ಗದ ಜನರಲ್ಲಂತೂ ನಿರಾಸೆ ಆರಂಭವಾಗಿದೆ ಎಂಬುದಂತೂ ದಿಟ. ಇದರ ಪರಿಣಾಮವಾಗಿಯೋ ಏನೋ, ಗುಜರಾತ್‌ನಲ್ಲಿ ಮೋದಿಯವರ ಚುನಾವಣಾ ಸಿದ್ಧತೆಯ ಭಾಷಣದ ಧ್ವನಿ ಏರಿದೆ. ಅದು ಕೃತಕವಾಗಿ ಏರಿದ ಕೀರಲು ಧ್ವನಿಯಾಗಿ ಜನರಿಗೆ ಕೇಳಿಸಿತು. ಜೊತೆಗೆ ಗುಜರಾತ್ ಚುನಾವಣಾ ದಿನಾಂಕಗಳನ್ನು ಪ್ರಕಟಿಸುವಲ್ಲಿ ಚುನಾವಣಾ ಆಯೋಗ ಬೇಕೆಂದೇ–ಈಗ ಆಗಿರುವಂತೆ ಆ ರಾಜ್ಯಕ್ಕಾಗಿ ೨ ಸಾವಿರ ಕೋಟಿ ರೂಪಾಯಿಗಳ ಕೊಡುಗೆ ಪ್ರಕಟಿಸಲು ಅವಕಾಶ ಮಾಡಿಕೊಡುವಂತೆ–ತಡ ಮಾಡಿದ್ದರಲ್ಲೂ ಮೋದಿಯವರಲ್ಲಿ ಆರಂಭವಾಗಿರುವ ರಾಜಕೀಯ ಅಳುಕಿನ ಸೂಚನೆಗಳು ಇದ್ದಂತಿವೆ.

ಹೌದು, ಈಗ ಕಳೆದ ಐದು ವರ್ಷಗಳಲ್ಲಿ–ನರೇಂದ್ರ ಮೋದಿಯವರನ್ನು ಭಾರತೀಯ ಜನತಾ ಪಕ್ಷ ತನ್ನ ಪ್ರಧಾನ ಮಂತ್ರಿ ಅಭ್ಯರ್ಥಿಯೆಂದು ಘೋಷಿಸಿದಾಗಿನಿಂದ–ಮೊದಲ ಬಾರಿಗೆ ಮೋದಿಯವರ ಜನಪ್ರಿಯತೆಯ ಅಲೆ ಒಂದಿಷ್ಟಾದರೂ ಇಳಿಮುಖವಾದ ಸೂಚನೆಗಳು ಕಾಣತೊಡಗಿವೆ. ಅದು ಈ ಬಾರಿ ರಾಷ್ಟ್ರ ದೀಪಾವಳಿಯನ್ನು ಆಚರಿಸಿದ ರೀತಿ–ನೀತಿಗಳಲ್ಲೂ ಕಾಣಬಹುದಾಗಿತ್ತು. ಕಾರಣ, ಜನಸಾಮಾನ್ಯರ ಬಳಿ–ರೈತರಿರಲಿ, ಮಧ್ಯಮ ಸ್ತರದ ವ್ಯಾಪಾರಿ ವರ್ಗದವರಲ್ಲೂ–ಹಣದ ಕೊರತೆ ಎದ್ದು ಕಾಣುತ್ತಿತ್ತು. ಜೊತೆಗೆ, ಏನೋ ಹತಾಶೆ, ನಿರಾಶೆ; ಅವರ ವೃತ್ತಿ ಜೀವನದ ಬಗ್ಗೆ ಅನಿಶ್ಚಿತತೆಯ, ಆತಂಕದ ಭಾವನೆ.

ಇದರ ಹಿಂದೆ ಇದ್ದುದು ರಾಷ್ಟ್ರದ ಆರ್ಥಿಕ ಪರಿಸ್ಥಿತಿಯ ನಿರಾಶಾದಾಯಕ ಚಿತ್ರ. ರೈತರ ಸರಣಿ ಆತ್ಮಹತ್ಯೆಗಳನ್ನು ಕಂಡ ಕೃಷಿ ವಲಯದ ನಿರುತ್ತೇಜಕ ಚಿತ್ರ ಮತ್ತು ಕೈಗಾರಿಕೆಯ ಹಲವು ಕ್ಷೇತ್ರಗಳಲ್ಲಿ ಇಳಿಮುಖವಾದ ಉತ್ಪಾದನೆ, ಖಾಸಗಿ ವಲಯದಲ್ಲಿ ಬಂಡವಾಳ ಹೂಡಿಕೆಯ ಕೊರತೆ, ಬ್ಯಾಂಕುಗಳಲ್ಲಿನ ಅನುತ್ಪಾದಕ ಸಾಲಗಳ ಮೊತ್ತದ ಏರಿಕೆ, ಇದೆಲ್ಲದರ ಒಟ್ಟು ಪರಿಣಾಮವಾಗಿ ರಾಷ್ಟ್ರದ ಒಟ್ಟು ಉತ್ಪಾದನೆಯ ಮಟ್ಟದಲ್ಲಿ ಗಣನೀಯ ಇಳಿಕೆ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ, ಸರ್ಕಾರದ ಬಿಂಬವನ್ನು ನಿರ್ಣಾಯಕವಾಗಿ ಹದಗೆಡಿಸಿರುವ ಉದ್ಯೋಗ ನಿರ್ಮಾಣದಲ್ಲಿನ ವೈಫಲ್ಯ.

ರಾಷ್ಟ್ರದ ಸದ್ಯದ ಈ ಪ್ರತಿಕೂಲ ಆರ್ಥಿಕ ಚಿತ್ರದ ಹಿಂದೆ ಇರುವುದು ಮೋದಿಯವರು ಹೆಚ್ಚೂ ಕಡಿಮೆ ಒಂದು ವರ್ಷದ ಹಿಂದೆ ಬಹು ಸಂಭ್ರಮದಿಂದ ಮಹಾನ್ ಜನಪರ ಕಾರ್ಯಕ್ರಮವೆಂದು ಘೋಷಿಸಿದ ಅನಾಣ್ಯೀಕರಣದ (ನೋಟು ರದ್ದತಿ) ದುಷ್ಪರಿಣಾಮಗಳೆಂದೂ, ಇದರ ಜೊತೆಗೆ ಗಾಯದ ಮೇಲೆ ಉಪ್ಪು ಸುರಿದಂತೆ ಅಷ್ಟೇ ಸಂಭ್ರಮದಿಂದ ಜಾರಿಗೆ ತಂದ ಜಿ.ಎಸ್.ಟಿ ಎಂಬ ಏಕರೂಪದ ತೆರಿಗೆ ಪದ್ಧತಿಯೆಂದೂ ನಮ್ಮ ಆರ್ಥಿಕ ತಜ್ಞರ ಒಂದು ವರ್ಗ ಹೇಳುತ್ತಿದ್ದರೆ, ಇದೆಲ್ಲವೂ ಬರಲಿರುವ ಆರ್ಥಿಕ ಮುನ್ನಡೆಯ ಮುನ್ನಾ ದಿನಗಳ ತಾತ್ಕಾಲಿಕ ಹಿನ್ನಡೆಯ ಚಿತ್ರ ಮಾತ್ರವೆಂದೂ, ಸಾಲಗಳ ಮೇಲಿನ ಬಡ್ಡಿ ದರವನ್ನು ಭಾರತದ ರಿಸರ್ವ್ ಬ್ಯಾಂಕ್ ಇಳಿಸದೆ ಹಠ ಮಾಡುತ್ತಿರುವುದೇ ನಮ್ಮ ಒಟ್ಟಾರೆ ಆರ್ಥಿಕತೆಯ ಈ ಎಲ್ಲ ಪ್ರತಿಕೂಲ ಲಕ್ಷಣಗಳಿಗೆ ಕಾರಣವೆಂದು ಇನ್ನೊಂದು ವರ್ಗ ಹೇಳುತ್ತಿದೆ. ಆದರೆ ಅನಾಣ್ಯೀಕರಣ ಸಂಬಂಧವಾಗಿ ಸರ್ಕಾರದ ಸಲಹೆಯನ್ನು ನಿರ್ಯೋಚನೆಯಿಂದ ಅನುಮೋದಿಸಿ ಕೆಟ್ಟ ಹೆಸರು ಪಡೆಯುವ ಮೂಲಕ ಒಮ್ಮೆ ಕೈ ಸುಟ್ಟುಕೊಂಡಿರುವ ರಿಸರ್ವ್ ಬ್ಯಾಂಕ್ ಮತ್ತೊಮ್ಮೆ ಸರ್ಕಾರದ ಮಾತು ಕೇಳಿ ಕೈಸುಟ್ಟುಕೊಳ್ಳಲು ತಯಾರಿಲ್ಲವೆಂದು ಕಾಣುತ್ತದೆ.

ಇದರಿಂದ ಅಸಹಾಯಕವಾಗಿರುವಂತೆ ತೋರಿದ ಸರ್ಕಾರ ತನ್ನ ಆರ್ಥಿಕ ಸಲಹೆಗಾರರ ತಂಡವನ್ನು ಪುನಾರಚಿಸಿದೆ. ಆ ತಂಡವೋ ಮೋದಿವರ ಮಹತ್ವಾಕಾಂಕ್ಷೆಯ, ಆದರೆ ಮೇಲಕ್ಕೇ ಏಳದಂತೆ ತೋರುವ 'ಮೇಕ್ ಇನ್ ಇಂಡಿಯಾ' ಯೋಜನೆಯ ಆಶಯಗಳಿಗೆ ತದ್ವಿರುದ್ಧವಾಗಿ, ದಿಢೀರ್ ಅನಾಣ್ಯೀಕರಣದಿಂದಾಗಿ ಬಂಡವಾಳದ ಕೊರತೆಯಿಂದ ತತ್ತರಿಸಿದ್ದ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳಿಗೆ ವಿಶೇಷ ಆದ್ಯತೆ ನೀಡುವಂತೆ ಮತ್ತು ಕೆಲವು ಕ್ಷೇತ್ರಗಳ ಜಿ.ಎಸ್.ಟಿ ದರಗಳನ್ನು ಪರಿಷ್ಕರಿಸುವಂತೆ ಶಿಫಾರ್ಸು ಮಾಡಿ ಮೋದಿ ಅಭಿವೃದ್ಧಿ ನೀತಿಯ ಬಗ್ಗೆ ಒಂದು ರೀತಿಯ ವಾರೆಗಣ್ಣಿನ ಟೀಕೆಯನ್ನೇ ಮಾಡಿದೆ. ಇದಕ್ಕೆ ತಕ್ಕಂತೆ ಸರ್ಕಾರವೂ ಬ್ಯಾಂಕುಗಳ ನಷ್ಟವನ್ನು ತುಂಬಿಕೊಟ್ಟು ಅವುಗಳ ಆರ್ಥಿಕತೆಯನ್ನು ಭದ್ರಗೊಳಿಸಲು ಮೊನ್ನೆ ಅವಕ್ಕೆ ಎರಡು ಲಕ್ಷ ಕೋಟಿ ರೂಪಾಯಿಗಳ ಬಂಡವಾಳ ನೀಡುವುದಾಗಿ ಘೋಷಿಸಿದೆ.

ಒಟ್ಟಾರೆಯಾಗಿ ಮೂರೂವರೆ ವರ್ಷಗಳ ಹಿಂದೆ ಮೋದಿಯವರು ಪ್ರಧಾನಿಯಾಗಿ ಹುಟ್ಟಿಸಿದ್ದ ಆಸೆಗಳೆಲ್ಲ, ಅವುಗಳ ಜೊತೆಗೇ ಹುಟ್ಟಿಸಿದ್ದ ಹೊಸ ಹುರುಪು–ಉಮೇದುಗಳೆಲ್ಲ ಈಗ ತಣ್ಣಗಾಗತೊಡಗಿವೆ. ಮುಖ್ಯವಾಗಿ ವಿದೇಶಿ ಬ್ಯಾಂಕುಗಳಲ್ಲಿರುವ ರಾಶಿ ರಾಶಿ

ಕಪ್ಪು ಹಣವನ್ನು ವಾಪಸ್ ತಂದು ಎಲ್ಲರಿಗೂ ಹಂಚುವ ಮತ್ತು ವರ್ಷಕ್ಕೆ ೬೦ ಲಕ್ಷ ಉದ್ಯೋಗ ನಿರ್ಮಾಣ ಮಾಡಿ ಜನಸಾಮಾನ್ಯರ ಬದುಕಿಗೆ 'ಅಚ್ಛೇ ದಿನ'ಗಳನ್ನು ತರುವ ಭರವಸೆ ಹುಸಿಯಾಗಿದೆ. ಇದಲ್ಲದೆ, ಮೋದಿಯವರು ಅನಾಣ್ಯೀಕರಣ ನೀತಿಯನ್ನು ಸೂಕ್ತ ಸಿದ್ಧತೆ ಇಲ್ಲದೆ ಜನಸಾಮಾನ್ಯರ ದಿನನಿತ್ಯದ ಬದುಕಿಗೆ ಮಾರಕವಾಗುವಂತೆ ಮತ್ತು ಅದರ ಉದ್ದೇಶಗಳಾಗಿ ಘೋಷಿಸಿದ್ದ ಕಪ್ಪುಹಣದ ಪತ್ತೆ, ಭಯೋತ್ಪಾದನೆ ಮತ್ತು ನಕ್ಸಲೀಯ ಚಟುವಟಿಕೆಗಳ ನಿಗ್ರಹ ಇತ್ಯಾದಿಗಳು ಈಡೇರದೆ ಹೋಗಿರುವ ಸಂಗತಿಯಿಂದ, ಈ ನೀತಿಯು ಒಂದು ಆರ್ಥಿಕ ಮುತ್ಸದ್ದಿತನದ ಉಪಕ್ರಮವಾಗಿರದೆ ಉ.ಪ್ರ. ಚುನಾವಣೆಗಳನ್ನು ಗೆಲ್ಲಲು ರೂಪಿಸಿದ ರಾಜಕೀಯ ತಂತ್ರ ಮಾತ್ರವಾಗಿತ್ತೇನೋ ಎಂಬ ಸಂದೇಹ ಜನರಲ್ಲಿ ಉಂಟಾಗಿದ್ದಲ್ಲಿ ಆಶ್ಚರ್ಯವಿಲ್ಲ.

ಇದರ ಜೊತೆಗೇ ಅನಾಣ್ಯೀಕರಣದ ದುಷ್ಪರಿಣಾಮಗಳು ಕಣ್ಣೆದುರಿಗೆ ಇದ್ದರೂ, ಆ ದುಷ್ಪರಿಣಾಮಗಳಿಗೆ ಬಲಿಯಾಗಿದ್ದ ಸಣ್ಣ ವ್ಯಾಪಾರಿ ಸಮುದಾಯ ಮತ್ತು ಅದರ ಗ್ರಾಹಕ ವರ್ಗಕ್ಕೆ ಇನ್ನಷ್ಟು ತೊಂದರೆಗಳನ್ನು ಉಂಟು ಮಾಡುವ ರೀತಿಯಲ್ಲಿ ಜಿ.ಎಸ್.ಟಿಯನ್ನು ಜಾರಿಗೆ ತಂದ ಆರ್ಥಿಕ ಮತ್ತು ರಾಜಕೀಯ ಅಪ್ರಬುದ್ಧತೆ ಮೋದಿ ಸರ್ಕಾರದ ಮೇಲೆ ಜನರಿಟ್ಟಿದ್ದ ವಿಶ್ವಾಸದ ಅಡಿಪಾಯವನ್ನೇ ಅಲುಗಾಡಿಸಿದೆ ಎಂದು ಹೇಳಬೇಕು. ಇದು ಸಾಲದೆಂಬಂತೆ, ಬಿಜೆಪಿ ಅಧ್ಯಕ್ಷ ಅಮಿತ್ ಷಾ ಪುತ್ರ ಜಯ್ ಷಾನ ನಷ್ಟದಲ್ಲಿದ್ದ ವ್ಯಾಪಾರ ವಹಿವಾಟು ಮೋದಿ ಸರ್ಕಾರ ಬಂದ ನಂತರ ೧೬ ಸಾವಿರ ಪಟ್ಟು ಹೆಚ್ಚಲು ಕಾರಣವಾಗಿರುವುದೆಂದು ಹೇಳಲಾದ ಭಾರಿ ಹಣಕಾಸು ಅಕ್ರಮಗಳ ಸುದ್ದಿ ಬೇರೆ ಸ್ಫೋಟಿಸಿ, ಮೋದಿ ಸರ್ಕಾರ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ಅದರ ಭ್ರಷ್ಟಾಚಾರಮುಕ್ತ ಬಿಂಬದ ಮೇಲೆ ಕೆಸರೆರಚಿದೆ. ಇನ್ನು ಆರಂಭದಿಂದಲೂ ನಿಯಂತ್ರಣವಿಲ್ಲದೆ ನಡೆದಿರುವ ಹಿಂದುತ್ವದ ಹೆಸರಿನಲ್ಲಿನ ಗೋರಕ್ಷಣೆಯಿಂದ ಹಿಡಿದು ಇತ್ತೀಚಿನ ತಾಜ್‌ಮಹಲ್ ಕುರಿತ ತರಲೆಯವರೆಗಿನ ಕೋಮು ಪ್ರಚೋದಕ ಕಾರ್ಯಕ್ರಮಗಳು ಮುಂದುವರೆದೇ ಇರುವುದು ಈ ಸರ್ಕಾರದ ಮುಖ್ಯ ಉದ್ದೇಶವಾದರೂ ಏನು ಎಂಬುದರ ಬಗ್ಗೆ ಜನರಲ್ಲಿ ಗೊಂದಲ ಮೂಡಿಸಿದೆ.

ಈ ಎಲ್ಲ ಹಿನ್ನೆಲೆಯಲ್ಲಿ ಬರಲಿರುವ ಗುಜರಾತ್ ವಿಧಾನಸಭಾ ಚುನಾವಣೆಗಳು ಮೋದಿಯವರ ಸದ್ಯದ ವಿಶ್ವಾಸಾರ್ಹತೆಯ ನಿರ್ಣಾಯಕ ಪರೀಕ್ಷೆಯಾಗಲಿವೆ. ಅದು ಮೋದಿಯವರಿಗೂ ಗೊತ್ತಾಗಿ ಅವರು ತಮ್ಮ ಈ ತವರು ರಾಜ್ಯಕ್ಕೆ ವಾರಕ್ಕೊಮ್ಮೆಯಾದರೂ ಭೇಟಿ ನೀಡಿ 'ಕೊಡುಗೆ'ಗಳನ್ನು ಪ್ರಕಟಿಸುತ್ತಾ ಮತದಾರರನ್ನು ಒಲಿಸಿಕೊಳ್ಳುವ ಮತ್ತು ಪಕ್ಷವನ್ನು ಹುರಿದುಂಬಿಸುವ ಕೆಲಸವನ್ನು ಸಮರೋಪಾದಿಯಲ್ಲಿ ಆರಂಭಿಸಿದ್ದಾರೆ. ಆದರೆ ಇಂತಹ ಸಂದರ್ಭದಲ್ಲಿ ಅಲ್ಲಿನ ಮುಖ್ಯ ವಿರೋಧ ಪಕ್ಷವಾದ ಕಾಂಗ್ರೆಸ್ ಏನು ಮಾಡುತ್ತಿದೆ? ಮೋದಿ ಅಲೆ ಇಷ್ಟು ದಿಢೀರನೆ ಮತ್ತು ಇಷ್ಟು ಬೇಗ ಇಳಿಮುಖವಾಗಬಹುದಾದ ಸಂದರ್ಭವನ್ನು ಕನಸು ಮನಸ್ಸಿನಲ್ಲಿಯೂ ಕಲ್ಪಿಸಿಕೊಳ್ಳುವ ಸ್ಥಿತಿಯಲಿಲ್ಲದಿದ್ದ ಕಾಂಗ್ರೆಸ್, ಈಗ ದಿಢೀರನೆ ಎಚ್ಚೆತ್ತುಕೊಂಡಂತೆ ರಾಜ್ಯದಲ್ಲಿ ತತ್ಕಾಲೀನ ರಾಜಕೀಯ ಹೊಂದಾಣಿಕೆಗಳ ಕಸರತ್ತು ಆರಂಭಿಸಿದೆ. ಜಾತಿ ಮೀಸಲಾತಿ ವಿರೋಧಿಸಿ

ಕೊನೆಗೆ ಬಲಿಷ್ಠ ಜಾತಿಯಾದ ಪಟೇಲರಿಗೆ ಮೀಸಲಾತಿಗಾಗಿ ಆಗ್ರಹಿಸಿದ ಹಾರ್ದಿಕ್ ಪಟೇಲ್ ಎಂಬ ಜಾತಿ ನಾಯಕನ ಜೊತೆಗೆ ಅಲ್ಪೇಶ್ ಠಾಕೂರ್ ಮತ್ತು ಜಿಗ್ನೇಶ್ ಮೇವಾನಿ ಎಂಬ ಹಿಂದುಳಿದ ಮತ್ತು ದಲಿತ ಜಾತಿಗಳ ನಾಯಕ ಜೋಡಿಯನ್ನೂ ಚುನಾವಣಾ ಉದ್ದೇಶಗಳಿಗಾಗಿ ತನ್ನೆಡೆಗೆ ಸೆಳೆದುಕೊಳ್ಳುವ ಪ್ರಯತ್ನಗಳನ್ನು ಮಾಡಿದೆ; ಅಲ್ಪೇಶ್ ಈಗಾಗಲೇ ಕಾಂಗ್ರೆಸ್ ಸೇರಿದ್ದಾರೆ.

ಕೇವಲ ಜಾತಿ ಲೆಕ್ಕಾಚಾರವನ್ನು ಆಧರಿಸಿದ ಈ ತೇಪೆ ರಾಜಕಾರಣ ಜನರಲ್ಲಿ ಎಂತಹ ವಿಶ್ವಾಸವನ್ನು ಹುಟ್ಟಿಸುತ್ತದೆಂದು ಕಾಂಗ್ರೆಸ್‌ನ ಉನ್ನತ ನಾಯಕರು ಭಾವಿಸಿದ್ದಾರೋ ಗೊತ್ತಾಗದು. ೨೦೧೯ರ ಲೋಕಸಭಾ ಚುನಾವಣೆಗಳತ್ತ ಮೋದಿಯವರ ಮುನ್ನಡೆಗೆ ತಡೆಯೊಡ್ಡುವ ತಕ್ಷಣದ ಪ್ರಯತ್ನವಾಗಿ ಇದು ಸಾಧುವೆನಿಸಬಹುದಾದರೂ, ಮೋದಿಯವರ ಒಟ್ಟಾರೆ ರಾಜಕಾರಣವನ್ನು ನಿರ್ಣಾಯಕವಾಗಿ ಪ್ರತಿರೋಧಿಸಬಲ್ಲ ಒಂದು ಪರ್ಯಾಯ ರಾಜಕೀಯ ಸಂಕಥನವನ್ನು ಕಟ್ಟಬಲ್ಲ ರಾಜಕೀಯ ಯೋಜನೆಯ ಭಾಗವಾಗಿ ಇದು ೨೦೧೯ರವರೆಗಾದರೂ ಉಳಿಯಬಲ್ಲುದೇ ಎಂಬುದು ಇಲ್ಲಿನ ಮುಖ್ಯ ಪ್ರಶ್ನೆ. ಏಕೆಂದರೆ ಸ್ವತಃ ಜಾತಿ ಆಧರಿತ ವ್ಯಾಪಕ ಒಳಜಗಳ, ನಾಯಕತ್ವದ ಕಚ್ಚಾಟಗಳಿಂದ ಅರಾಜಕವಾಗಿದೆಯೆಂದು ಹೇಳಲಾಗುವ ಗುಜರಾತ್ ರಾಜ್ಯದ ಕಾಂಗ್ರೆಸ್, ಹೊರಗಿನ ಈ ಜಾತಿ ರಾಜಕಾರಣದ ಒತ್ತಡಗಳನ್ನು ತಾಳಿಕೊಳ್ಳಬಲ್ಲುದೇ ಎಂಬ ಬಗ್ಗೆ ಅನುಮಾನಗಳಿವೆ. ಏನಾದರೂ ಈ ಹೊಂದಾಣಿಕೆ ಮುರಿಯಿತೆಂದರೆ ೨೦೧೯ರ ಚುನಾವಣೆಗಳಲ್ಲಿ ಪ್ರತಿಪಕ್ಷಗಳಿಗೆ ಅದೊಂದು ದೊಡ್ಡ ಹೊಡೆತವೇ ಆಗಿ ಪರಿಣಮಿಸಬಲ್ಲುದು.

ಈ ಎಲ್ಲ ವಿಶ್ಲೇಷಣೆಯ ಮೂಲಕ ನಾನು ಇಲ್ಲಿ ಸೂಚಿಸಬಯಸುತ್ತಿರುವ ಒಂದು ರಾಜಕೀಯ ದುರಂತದ ಸಂಗತಿಯೆಂದರೆ, ಕಾಂಗ್ರೆಸ್ ಒಂದು ರಾಜಕೀಯ ಪಕ್ಷವಾಗಿ ಹೆಚ್ಚೂಕಡಿಮೆ ನೆಲಕಚ್ಚಿ ಹೋಗಿರುವ ದುಃಸ್ಥಿತಿ ತಲುಪಿದ್ದರೂ ಮತ್ತು ರಾಷ್ಟ್ರ ಪ್ರಜಾಸತ್ತೆಯ ಮೌಲ್ಯಗಳನ್ನು ಕಳೆದುಕೊಳ್ಳುವ ಆತಂಕದ ಸ್ಥಿತಿಗೆ ತಲುಪಿದ್ದರೂ, ೨೦೧೪ರ ಲೋಕಸಭಾ ಚುನಾವಣೆಗಳಿಂದ ಆರಂಭವಾದಂತೆ ಇತ್ತೀಚಿನ ವರ್ಷಗಳಲ್ಲಿ ತಾನು ಸತತವಾಗಿ–ಪಂಜಾಬ್‌ವೊಂದರ ಹೊರತಾಗಿ–ಎದುರಿಸುತ್ತಿರುವ ಚುನಾವಣಾ ಸೋಲುಗಳಿಗೆ ಕಾರಣಗಳೇನು ಎಂಬುದರ ಬಗ್ಗೆ ಒಂದು ಆತ್ಮಾವಲೋಕನದ ಪ್ರಯತ್ನವನ್ನೂ ಮಾಡದೆ, ತನ್ನ ತಪ್ಪುಗಳಿಗಾಗಿ ಒಂದು ಸಾಲಿನ ಪಶ್ಚಾತ್ತಾಪವನ್ನೂ ದಾಖಲಿಸದೆ ತೋರಿರುವ ಬೇಜವಾಬ್ದಾರಿತನ. ಇದು ಅದರ ಪಾರಂಪರಿಕ ರಾಜಕೀಯ ಯಜಮಾನಿಕೆಯ ಪಳೆಯುಳಿಕೆಯ ಗುಣವೂ ಇರಬಹುದು.

ಅಂದರೆ ಈ ಪಕ್ಷ ಯಾವ ಹೊಸ ರಾಜಕೀಯ ಪಾಠವನ್ನೂ ಕಲಿಯಲು, ತನ್ನನ್ನು ಹೊಸ ಕಾಲದ ಹೊಸ ತಲೆಮಾರುಗಳ ನಿರೀಕ್ಷೆಗಳಿಗೆ ತಕ್ಕಂತೆ ಪುನರ್ನ್ವೇಷಿಸಿಕೊಳ್ಳಲು ನಿರಾಕರಿಸುತ್ತಿದೆ ಎಂದರ್ಥವೇ? ಅದು ಮೋದಿ ಜನಪ್ರಿಯತೆಯ ಇಳಿಮುಖತೆಯ ಸಂದರ್ಭವನ್ನು, ಯಾವ ಭರವಸೆಯನ್ನೂ ತೋರದೆ ಆ ಪಕ್ಷದ ಒಂದು ನಿರ್ಣಾಯಕ ಅವಲಕ್ಷಣವೆನಿಸಿರುವ ವಂಶ ರಾಜಕಾರಣದ ಪ್ರತೀಕವೇ ಆಗಿಹೋಗಿರುವ

ರಾಹುಲ್‌ಗಾಂಧಿಯವರ ಸಾರ್ವಜನಿಕ ಬಿಂಬದ ಪುನರುಜ್ಜೀವನಕ್ಕೆ ಬಳಸಿಕೊಳ್ಳುವ ಪ್ರಯತ್ನ ಮಾಡುತ್ತಿರುವುದನ್ನು ನೋಡಿದರೆ ಹೌದೆನ್ನಿಸುತ್ತದೆ. ಇದು ಹೊಸ ತಲೆಮಾರಿನ ಕಣ್ಣಿಗೆ ಕಾಂಗ್ರೆಸ್ಸನ್ನು ಆತ್ಮಗೌರವವೆಂಬುದೇ ಇಲ್ಲದ ನಾಯಕರಿಂದ ಕೂಡಿದ ಮತ್ತು ಸಂಪೂರ್ಣ ಬೌದ್ಧಿಕ ದಾರಿದ್ರ್ಯದಿಂದ ನರಳುತ್ತಿರುವ ಪಕ್ಷದಂತೆ ಕಾಣಿಸಬಲ್ಲುದು ಎಂಬ ಸಂಗತಿಯೇ ಅದಕ್ಕೆ ಹೊಳೆಯುತ್ತಿಲ್ಲ ಎಂದರೆ ಏನು ಹೇಳುವುದು? ಹೀಗಾಗಿ ಈ ಅನಿರೀಕ್ಷಿತ ರಾಜಕೀಯ ಸುಸಂದರ್ಭವನ್ನು ಬಳಸಿಕೊಂಡು, ಹಿಂದೊಮ್ಮೆ ನಿತೀಶ್‌ಕುಮಾರ್ ಅವರು ಪ್ರಸ್ತಾಪಿಸಿದ್ದ ಬಿಜೆಪಿ ರಾಜಕಾರಣಕ್ಕೆ ಪರ್ಯಾಯವಾದ ಹೊಸ ರಾಜಕೀಯ ಸಂಕಥನವನ್ನು ದೇಶದ ಮುಂದಿರಿಸಿ ಮೋದಿಯವರಿಗೆ ನಿಜವಾದ ಸವಾಲೊಡ್ಡುವ ಅವಕಾಶ ಕಳೆದುಹೋಗುತ್ತಿದೆ ಎನಿಸುತ್ತಿದೆ. ಹೇಗೂ ರಾಹುಲ್ ಗಾಂಧಿಯವರಿಗೆ ಅಡ್ಡಿಯಾಗುವರೆಂದು ನಿತೀಶ್‌ಕುಮಾರ್‌ರನ್ನು ಪ್ರತಿಪಕ್ಷ ಒಕ್ಕೂಟದಿಂದಲೇ ನಿರ್ಗಮಿಸುವಂತಹ ಪರಿಸ್ಥಿತಿಯನ್ನು ಕಾಂಗ್ರೆಸ್ ನೇತೃತ್ವದ ಯು.ಪಿ.ಎ ಇತ್ತೀಚೆಗೆ ನಿರ್ಮಿಸುವಲ್ಲಿ ಯಶಸ್ವಿಯಾಗಿದೆ!

(ಫೇಸ್‌ಬುಕ್ ಬರಹ : ನವೆಂಬರ್ ೧೫, ೨೦೧೭)

ತ್ರಿಪುರ ಫಲಿತಾಂಶ : 'ಪ್ರಗತಿಪರತೆ' ಕುರಿತ ಮರುಚಿಂತನೆಗೆ ಆಹ್ವಾನ

ಮೋದಿಯವರ ಆಡಳಿತದ 'ನಾಗಾಲೋಟ'ವನ್ನು ನೋಡಿ ಅವರ ನೇತೃತ್ವದ ಬಿಜೆಪಿಯನ್ನು ಸದ್ಯಕ್ಕಂತೂ ಮಣಿಸಲಾಗುವುದಿಲ್ಲ ಎಂದು ನಂಬಿದ್ದ ನಮ್ಮ 'ಪ್ರಗತಿಪರ'ರು ರಾಜಸ್ಥಾನ, ಮಧ್ಯಪ್ರದೇಶ, ಒರಿಸ್ಸಾ ಮತ್ತು ಪಶ್ಚಿಮ ಬಂಗಾಳಗಳಲ್ಲಿನ ಇತ್ತೀಚಿನ ಉಪಚುನಾವಣೆಗಳಿಂದ ಹಿಗ್ಗಿ ಹೀರೇಕಾಯಾಗಿದ್ದರು. ಆದರೆ ಮೊನ್ನೆ ಈಶಾನ್ಯ ಭಾರತದ ಮೂರು ರಾಜ್ಯಗಳ ಚುನಾವಣಾ ಫಲಿತಾಂಶಗಳು ಅವರ ಹಿಗ್ಗಿನ ಮೇಲೆ ತಣ್ಣೀರು ಎರಚಿದಂತೆ ಬಂದು ಅಪ್ಪಳಿಸಿವೆ. ಹಾಗೆ ನೋಡಿದರೆ ನಾಗಾಲ್ಯಾಂಡ್ ಮತ್ತು ಮೇಘಾಲಯಗಳ ಫಲಿತಾಂಶಗಳಲ್ಲಿ ಕಳೆದ ಕೆಲವು ವರ್ಷಗಳಿಂದ ಕಾಣಲಾಗುತ್ತಿರುವ ಕಾಂಗ್ರೆಸ್ ಪಕ್ಷದ ಅವನತಿಯ ಪ್ರವೃತ್ತಿ ಮುಂದುವರೆದಿರುವುದರ ಹೊರತಾಗಿ ಅಂತಹ ವಿಶೇಷವೇನೂ ಇಲ್ಲ. (ಅಂತೆಯೇ ಈಗ ಅಲ್ಲಿ ಎರಡೂ ಕಡೆ ಕಾಂಗ್ರೆಸ್ಸೇತರ ಸರ್ಕಾರಗಳು ರಚನೆಯಾಗಿವೆ.) ಆದರೆ ಪ್ರಗತಿಪರರು ತಮ್ಮ ಕೊನೆಯ ಭದ್ರಕೋಟೆಯೆಂದು ನಂಬಿದ್ದ ತ್ರಿಪುರಾದ ಫಲಿತಾಂಶ ಮಾತ್ರ ಎಲ್ಲರನ್ನೂ ಬೆಚ್ಚಿಬೀಳಿಸಿದೆ ಎಂದೇ ಹೇಳಬೇಕು. ಅಲ್ಲಿ ೨೫ ವರ್ಷಗಳ ಕಾಲ ಸತತವಾಗಿ ಆಡಳಿತ ನಡೆಸಿದ್ದ ಮಾಣಿಕ್ ಸರ್ಕಾರ್ ಅವರ ನೇತೃತ್ವದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ತನ್ನ ಮೂರನೇ ಎರಡು ಭಾಗದಷ್ಟು ಸ್ಥಾನಗಳನ್ನು ಕಳೆದುಕೊಂಡು ಅಧಿಕಾರದಿಂದ ಕೆಳಗಿಳಿಯಬೇಕಾಗಿದೆ. ಅದೂ ಯಾವುದೇ ಭ್ರಷ್ಟಾಚಾರದ ಕಳಂಕವಿರದೆ, ಅತ್ಯಂತ ಸರಳ ಜೀವನ ನಡೆಸುವ ಒಬ್ಬ ಆದರ್ಶ ರಾಜಕಾರಣಿಯೆಂದು ಬಿಂಬಿಸಲ್ಪಟ್ಟಿದ್ದ ಮುಖ್ಯಮಂತ್ರಿಯ ಆಡಳಿತವನ್ನು ಜನತೆ ಬಹು ನಿರ್ಣಾಯಕವಾಗಿ ತಿರಸ್ಕರಿಸಿದೆ. ಪ್ರಗತಿಪರತೆಯ ಲಾಂಛನವಿದ್ದ ಕೊನೆಯ ಕೋಟೆಯೂ ಬಿದ್ದು ಹೋಗಿದೆ. (ಅರ್ಧಂಬರ್ಧ ಉಳಿದಿರುವ ಕೇರಳದ ಕೋಟೆಯೂ ಈಗ ಶತ್ರು ಸೈನಿಕರಿಂದ ಸುತ್ತುವರಿಲ್ಪಟ್ಟು ಸಂಪೂರ್ಣ ಪತನದ ಎಲ್ಲ ಲಕ್ಷಣಗಳೂ ಕಾಣುತ್ತಿವೆ.) ಇದು ಈ ಚುನಾವಣಾ ಫಲಿತಾಂಶಗಳಲ್ಲಿ ನಾವು ಗಮನಿಸಬೇಕಾದ ಮತ್ತು ಯೋಚಿಸಬೇಕಾದ ಬಹು ಮುಖ್ಯ ಅಂಶಗಳಲ್ಲಿ ಒಂದಾಗಿದೆ.

ತ್ರಿಪುರಾ ಚುನಾವಣಾ ಫಲಿತಾಂಶಗಳ ಇಷ್ಟೇ ಮುಖ್ಯವಾದ ಇನ್ನೊಂದು ಅಂಶವೆಂದರೆ, ಈ ರಾಜ್ಯದಲ್ಲಿ ಕಳೆದ ಚುನಾವಣೆಗಳಲ್ಲಿ ಹೇಳಹೆಸರಿಲ್ಲದ ಪಕ್ಷವಾಗಿ, ತಾನು ಸ್ಪರ್ಧಿಸಿದ ೫೦ ವಿಧಾನಸಭಾ ಕ್ಷೇತ್ರಗಳಲ್ಲಿ ೪೯ರಲ್ಲಿ ಠೇವಣಿ ಕಳೆದುಕೊಂಡು ಶೇ. ೨ಕ್ಕಿಂತ ಕಡಿಮೆ ಮತದಾರರ ಬೆಂಬಲ ಪಡೆದಿದ್ದ ಭಾರತೀಯ ಜನತಾ ಪಕ್ಷ ತನ್ನ ಒಂದು ಪುಟ್ಟ ಸ್ಥಳೀಯ ಮಿತ್ರ ಪಕ್ಷದೊಂದಿಗೆ ಶೇ.೫೦ಕ್ಕೂ ಹೆಚ್ಚು ಮತ ಪಡೆದು, ಹೆಚ್ಚೂಕಡಿಮೆ ಮೂರನೇ ಎರಡರಷ್ಟು ಬಹುಮತದೊಂದಿಗೆ ಜಯಭೇರಿ ಬಾರಿಸಿರುವುದು. ನಾವು 'ಪ್ರಗತಿಪರ'ರೆನ್ನಿಸಿಕೊಂಡವರು ಬಿಜೆಪಿಯನ್ನು ಹಿಂದೂ ಕೋಮುವಾದಿ ಮತ್ತು ಪಟ್ಟಭದ್ರ ಹಿತಾಸಕ್ತಿಗಳ ಯಥಾಸ್ಥಿತಿವಾದಿ ಪಕ್ಷವೆಂದು ಗುರುತಿಸುತ್ತೇವೆ. ಆದರೆ ಮೂರನೇ ಒಂದು ಭಾಗದಷ್ಟು ಬುಡಕಟ್ಟು ಜನರಿಂದ ಕೂಡಿದ ಈ ಬಡ ರಾಜ್ಯ ಶೋಷಿತರ ಪರವಾದ 'ಪ್ರಗತಿಪರ' ಪಕ್ಷವೆನಿಸಿದ ಕಮ್ಯೂನಿಸ್ಟ್ ಪಕ್ಷವನ್ನು ತಿರಸ್ಕರಿಸಿ ಈ ಬಿಜೆಪಿಯನ್ನು ಆಡಳಿತಕ್ಕಾಗಿ ಆರಿಸಿಕೊಂಡಿದೆ! ಇದರರ್ಥವೇನು? ಪ್ರಗತಿಪರತೆ ಎಂದರೇನೆಂಬುದನ್ನು ಪ್ರಗತಿಪರರೆಂದು ಕರೆದುಕೊಳ್ಳುವವರು ಅರ್ಥ ಮಾಡಿಕೊಂಡಿರುವುದಕ್ಕೂ ಪ್ರಗತಿಗಾಗಿ ಕಾತರಿಸುತ್ತಿರುವ ಜನ ಅರ್ಥ ಮಾಡಿಕೊಂಡಿರುವುದಕ್ಕೂ ಬಹಳ ವ್ಯತ್ಯಾಸವಿದೆ ಎಂಬುದೇ ಇದರರ್ಥವಲ್ಲವೆ? ಹಾಗಿದ್ದಲ್ಲಿ ಅರ್ಥಗಳ ಈ ಅಂತರಕ್ಕೆ ಕಾರಣವೇನು?

ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ನಾವು ಮೊದಲು 'ಪ್ರಗತಿಪರ' ಎಂಬ ಶಬ್ದದ ಮೂಲಾರ್ಥವೇನು ಎಂಬುದನ್ನು ನೋಡಬೇಕು. ೧೮-೧೯ನೇ ಶತಮಾನಗಳ ಕೈಗಾರಿಕಾ ಕ್ರಾಂತಿ ನಂತರದ ಸಾಮಾಜಿಕ ವಿಷಮತೆಗಳನ್ನು ಪರಿಹರಿಸುವ ವಿವಿಧ ರೀತಿಯ ರಾಜಕೀಯ ಪ್ರಯತ್ನಗಳ ಮೂಸೆಯಲ್ಲಿ ಹುಟ್ಟಿದ ಈ ಶಬ್ದಕ್ಕೆ 'ಒಂದು ಕಾಲದ ವ್ಯವಸ್ಥೆಯನ್ನು ನಿಯಂತ್ರಿಸುವ ಪಟ್ಟಭದ್ರ ಹಿತಾಸಕ್ತಿಗಳನ್ನು ಮಣಿಸಿ ದುರ್ಬಲರ ಪರವಾಗಿ ಹೊಸ ವ್ಯವಸ್ಥೆಯನ್ನು ನಿರ್ಮಿಸುವ ರಾಜಕಾರಣದಲ್ಲಿನ ನಂಬಿಕೆ' ಎಂಬ ಅರ್ಥ ಕಲ್ಪಿಸಬಹುದಾಗಿದೆ. ಆದರೆ ಈ ಶಬ್ದ ಹುಟ್ಟಿಕೊಂಡ ಕಾಲ ಮುಗಿದು ಒಂದು ಶತಮಾನವೇ ಆಗಿದೆ. ಪಟ್ಟಭದ್ರ ಹಿತಾಸಕ್ತಿಗಳು ಎಂಬ ಜೋಡಿ ಶಬ್ದದ ಪರಿಪ್ರೇಕ್ಷ್ಯವೂ ಇಂದು ಬದಲಾಗಿದೆ. ಏಕೆಂದರೆ, ಈ ಒಂದು ಶತಮಾನದಲ್ಲಿ–ವಿಶೇಷವಾಗಿ ಕಳೆದ ಕಾಲು ಶತಮಾನದಲ್ಲಿ–ನಮ್ಮ ಬದುಕಿನ ಆಶೋತ್ತರಗಳೇ ಬದಲಾಗಿವೆ. 'ದುರ್ಬಲ'ರು ಎಂಬ ಶಬ್ದ ಬಳಸಿದಾಗ ಯಾರು ಅಂದು ಪ್ರಗತಿಪರರ ಕಣ್ಣಮುಂದೆ ಬರುತ್ತಿದ್ದರೋ ಆ 'ದುರ್ಬಲ'ರು ಈಗ ಇಲ್ಲ. ದುರ್ಬಲರ ಸಬಲೀಕರಣ, ಪ್ರಗತಿಪರರೂ ಸೇರಿದಂತೆ ಎಲ್ಲ ರಾಜಕೀಯ ಶಕ್ತಿಗಳಿಂದಲೂ ಬೇರೆ ಬೇರೆ ಪ್ರಮಾಣಗಳಲ್ಲಾದರೂ ನಡೆದು ಅವರ ಆಶೋತ್ತರಗಳೂ ಈ ಕಾಲಾಂತರದಲ್ಲಿ ಬದಲಾಗಿವೆ. ಏಕೆಂದರೆ ಕಳೆದ ಶತಮಾನದ ಒಟ್ಟಾರೆ ರಾಜಕಾರಣದ–ಅದು ಯಾವ ಬಣ್ಣದ್ದೇ ಆಗಿರಲಿ–ಮುಖ್ಯ ಆಶಯ ಸಮಾನತೆಯೇ ಆಗಿದ್ದು, ಅದು ಒಂದಲ್ಲ ಒಂದು ರೀತಿಯಲ್ಲಿ ದುರ್ಬಲರ ಸಬಲೀಕರಣವನ್ನು ಅನಿವಾರ್ಯವಾಗಿಸಿತ್ತು.

ಹೀಗಾಗಿ ಕಳೆದ ಕೆಲವು ವರ್ಷಗಳಲ್ಲಿ ಪ್ರಗತಿಪರವೆಂದೋ, ನಿರ್ದಿಷ್ಟವಾಗಿ ಎಡಪಂಥೀಯವೆಂದೋ ಕರೆಯಲ್ಪಡುತ್ತಿದ್ದ ರಾಜಕಾರಣದ ವಿಶಿಷ್ಟ ಗುರುತು ಮಸುಕಾಗುತ್ತಾ, ಇದರ ವ್ಯಾಪ್ತಿಯ ರಾಜಕೀಯ ಪಕ್ಷಗಳು ಕ್ರಮೇಣ

ಕಣ್ಮರೆಯಾಗಿಹೋಗಿವೆ. ಇದಕ್ಕೆ ಮುಖ್ಯ ಕಾರಣ, ಈ ಶಕ್ತಿಗಳು ಸಮಾಜದ ಮತ್ತು ಅದನ್ನು ನಿರ್ವಹಿಸುವ ರಾಜಕಾರಣದ ಚಲನಶೀಲತೆಗಳನ್ನು ಗ್ರಹಿಸದೇ ಹೋದದ್ದು. ಮುಖ್ಯವಾಗಿ, ಎಡಪಂಥೀಯತೆಯ ಆಧಾರ ತತ್ವಗಳಾಗಿದ್ದ ಉತ್ಪಾದನಾ ಶಕ್ತಿ (Forces of production) ಮತ್ತು ಉತ್ಪಾದನಾ ಸಂಬಂಧ (Relations of production) ಗಳಲ್ಲಿ ಆಗಿರುವ ನಿರ್ಣಾಯಕ ಬದಲಾವಣೆಗಳು. ಮತ್ತು ಇದರಿಂದಾಗಿರುವ ದುಡಿಮೆ–ಶ್ರಮ–ಆದಾಯಗಳ ಸಂಬಂಧದಲ್ಲಿ ಆಗಿರುವ ಏರುಪೇರು. ಇದರಿಂದಾಗಿ ವರ್ಗಗಳು ತಾತ್ವಿಕ ಗ್ರಹಿಕೆಗಳ ವೇಗವನ್ನೂ ಮೀರಿದ ವೇಗದಲ್ಲಿ ಮಿಶ್ರಗೊಂಡು ವರ್ಗಗಳ ನಡುವಣ ಗೆರೆಗಳು ಮಸುಕಾಗುತ್ತಿವೆ. ಜೊತೆಗೆ ಭಾರತದ ಜಾತಿವ್ಯವಸ್ಥೆ ಈ ಕ್ಷಿಪ್ರ ಬದಲಾವಣೆಯ ವೇಗಕ್ಕೆ ಸಿಕ್ಕ ಆತಂಕದಲ್ಲಿ ತನ್ನ ಗೋಡೆಗಳನ್ನು ಇನ್ನಷ್ಟು ಭದ್ರಗೊಳಿಸಿಕೊಳ್ಳುತ್ತಿದೆ. ಹಾಗೆ ನೋಡಿದರೆ ಇಂದಿನ ಆರ್ಥಿಕತೆ, ಉತ್ಪಾದನೆಯ ಆರ್ಥಿಕತೆಯಷ್ಟೇ ನಿರ್ವಹಣೆ ಮತ್ತು ಸೇವೆಗಳ ಆರ್ಥಿಕತೆಯೂ ಆಗಿ ಪರಿವರ್ತಿತಗೊಂಡು ಅಂದಿನ 'ಪ್ರಗತಿಪರತೆ'ಯ ಬೆನ್ನೆಲುಬಾಗಿದ್ದ ರಾಜಕೀಯ ಆರ್ಥಿಕತೆ (Political economy) ಎಂಬ ಪರಿಕಲ್ಪನೆಯೇ ತಲೆಕೆಳಗಾಗಿದೆ.

ಇದಾವುದನ್ನೂ ಗಮನಕ್ಕೇ ತೆಗೆದುಕೊಳ್ಳದಂತೆ ತೋರುವ 'ಪ್ರಗತಿಪರ'ರು ಸಹಜವಾಗಿಯೇ ಒಂದು ಕಾಲದ ಪ್ರಗತಿಪರತೆಯು ಚಲಾವಣೆಗೆ ತಂದಿದ್ದ ಸಾಮಾಜಿಕ ಗ್ರಹಿಕೆಗಳು ಮತ್ತು ಅವನ್ನು ವಿವರಿಸಲು ರೂಢಿಸಿಕೊಳ್ಳಲಾಗಿದ್ದ ಸೂತ್ರ ಮತ್ತು ನುಡಿಗಟ್ಟುಗಳ ಬಂಧನಗಳಿಂದ ಬಿಡುಗಡೆ ಹೊಂದದೇ ಹೋಗಿದ್ದಾರೆ. ಇನ್ನೂ ವರ್ಗವೈಷಮ್ಯ, ವರ್ಗಸಂಘರ್ಷ, ಶೋಷಿತ–ಶೋಷಕ, ಬಡವ–ಶ್ರೀಮಂತ ಎಂಬ ಶಬ್ದಾವಳಿಯನ್ನು ಬಡಬಡಿಸುತ್ತಿದ್ದಾರೆ. ಈ ಶಬ್ದಾವಳಿ ನಿನ್ನೆಯ ಶೋಷಿತನೇ ಇಂದಿನ ಶೋಷಕನಾಗಬಲ್ಲ ನೀತಿ–ನಿರ್ಲಿಪ್ತ ಸಮಾಜವನ್ನು ನಿರ್ಮಿಸಿದೆ ಎಂಬ ಸತ್ಯವೇ ಅವರಿಗೆ ಕಾಣದಾಗಿದೆ. ಇದಕ್ಕೆ ಪ್ರಗತಿಪರತೆ ಎಂಬುದರಲ್ಲೇ ಅಂತರ್ಗತವಾಗಿರುವ ಚಾರಿತ್ರಿಕವಾದ ಅಹಮ್ಮೇ ಕಾರಣವೆಂದು ಹೇಳಬಹುದು. ಇದು ಎದ್ದು ಕಾಣುವುದು ಭೌತವಾದದಲ್ಲಿನ ಇವರ ಅಚಲ ನಂಬಿಕೆ ಹಾಗೂ ಅದರಿಂದ ಹುಟ್ಟಿದ ಧರ್ಮ ಕುರಿತ ಅವರ ಸ್ಥಾವರ ನಿಲುವುಗಳಲ್ಲಿ.

ಅಳಿದುಳಿರುವ ಇಂತಹ ಜನ ಮತ್ತು ಗುಂಪುಗಳು ಸಹಜವಾಗಿಯೇ ಸಮಾಜ ಬದಲಾಗಿ ಅದರ ಆಶೋತ್ತರಗಳೂ ಯುಗಪಲ್ಲಟವಾಗಿರುವುದನ್ನು ಗುರುತಿಸಲಾಗದೆ, ಕನಿಷ್ಠ ತಮ್ಮ ಗುರುತನ್ನಾದರೂ ಉಳಿಸಿಕೊಳ್ಳಲು ರಚನಾತ್ಮಕವಾಗಿ ಏನು ಮಾಡಲೂ ಅವರ ಬಳಿ ಏನೆಂದೂ ಇರದೆ, ಶತ್ರುಪಕ್ಷವೊಂದನ್ನು ಗುರುತಿಸಿಕೊಂಡು ಅದರ ವಿರುದ್ಧದ ಹೋರಾಟದಲ್ಲಿ ತನ್ನ ಅಸ್ತಿತ್ವದ ಸಾರ್ಥಕತೆಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡುತ್ತಿವೆ. ಹಾಗಾಗಿಯೇ ಇಂದು ಭಾರತದಲ್ಲಿ ಪ್ರಗತಿಪರತೆ ಎಂದರೆ ಬಿಜೆಪಿ ವಿರೋಧ ಎಂಬ ಸ್ಥಿತಿ ಬಂದಿದೆ! ಹೀಗಾಗಿ, ಅರ್ಥಪೂರ್ಣತೆಯನ್ನೂ, ಆ ಮೂಲಕ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿರುವ ಪ್ರಗತಿಪರತೆಯ ಎದುರು ಬಿಜೆಪಿಗೆ ಪರಿಸ್ಥಿತಿ ಅನುಕೂಲಕರವಾಗಿಯೇ ಪರಿಣಮಿಸಿದೆ. ಏಕೆಂದರೆ ಬಿಜೆಪಿ ತನ್ನ ಹುಟ್ಟಿನ ಆದಿರೂಪದ ಕಾಲದಿಂದಲೂ 'ಪ್ರಗತಿಪರತೆ'ಯ ಮೂಲಾಧಾರಗಳನ್ನು

ಪ್ರಶ್ನಿಸುತ್ತಲೇ ಬೆಳೆದುಬಂದಿರುವ ಪಕ್ಷವಾಗಿದ್ದು, ಈಗ ಈ ಪ್ರಗತಿಪರತೆ ಎಂಬುದು ಕ್ರಮೇಣ ತುಕ್ಕುಹಿಡಿದು ಅದರ ಭಾಷೆ ದದ್ದುಬಿದ್ದು ಹೋಗುತ್ತಿರುವ ಈ ಕಾಲ ಅದಕ್ಕೆ ಸುವರ್ಣಯುಗವೇ ಆಗಿದೆ.

ಈ ಎಲ್ಲ ಹಿನ್ನೆಲೆಯಲ್ಲಿ ನಾವು ತ್ರಿಪುರಾ ಚುನಾವಣಾ ಫಲಿತಾಂಶಗಳನ್ನು ಅರ್ಥ ಮಾಡಿಕೊಂಡರೆ ಪ್ರಗತಿಪರ ರಾಜಕಾರಣದ ದುರಂತವನ್ನು ಹೆಚ್ಚು ಆಳವಾಗಿ ಗ್ರಹಿಸಬಹುದೆಂದು ಕಾಣುತ್ತದೆ. ಆರಂಭದಲ್ಲಿ ಎಲ್ಲ ರಾಜ್ಯಗಳಲ್ಲಿದ್ದಂತೆ ಇಲ್ಲಿಯೂ ತನ್ನ ಪ್ರಾಬಲ್ಯ ಮರೆದಿದ್ದ ಕಾಂಗ್ರೆಸ್ ಈಗ ಯುವಶಕ್ತಿಯನ್ನು ಸೆಳೆಯಬಲ್ಲ ಆದರ್ಶಗಳನ್ನೆಲ್ಲ ಕಳೆದುಕೊಂಡು ಮುದಿಯಾಗಿ ಮೂಲೆ ಸೇರಿರುವುದರಿಂದ, ಕಳೆದ ೨೫ ವರ್ಷಗಳಲ್ಲಿ ಪ್ರಗತಿಪರತೆಯ ಗಿಳಿಪಾಠದ ಹೊರತಾಗಿ ಬೇರೆ ಯಾವುದೇ ರಾಜಕೀಯ ಪರ್ಯಾಯದ ಸಾಧ್ಯತೆಯನ್ನೂ ಕಾಣಲಾಗದಿದ್ದ ತ್ರಿಪುರಾದ ಜನತೆ ಬಿಜೆಪಿ ಎಂಬ ಹೊಸ ನುಡಿಗಟ್ಟು ಮತ್ತು ಹೊಸ ಕನಸು-ಉತ್ಸಾಹಗಳ ಪಡೆಯನ್ನು ಕಂಡು ಮರುಳಾಗಿದ್ದಲ್ಲಿ ಆಶ್ಚರ್ಯವಿಲ್ಲ. ಚುನಾವಣಾ ಫಲಿತಾಂಶವನ್ನು ಅಲ್ಲಿನ ಜನಸಾಮಾನ್ಯರು 'ಬಿಡುಗಡೆ' 'ಮುಕ್ತಿ' ಎಂದೆಲ್ಲ ಬಣ್ಣಿಸುತ್ತಿರುವುದು ೨೫ ವರ್ಷಗಳ 'ಪ್ರಗತಿಪರ' ರಾಜಕಾರಣ ಅಲ್ಲಿ ಏನು ಮಾಡಿತ್ತು ಎಂಬುದನ್ನು ಸೂಚಿಸುತ್ತದೆ. ಅಲ್ಲಿ ಪ್ರಗತಿಪರತೆ ಎಂಬುದು ಜಡತೆ ಎಂಬ ಅರ್ಥವನ್ನು ಪಡೆದಿತ್ತು ಎಂಬುದರಲ್ಲಿ ಸಂಶಯವಿರಲಾರದು.

ಹಾಗೆ ನೋಡಿದರೆ ತ್ರಿಪುರಾದಲ್ಲಿ ಮಾತ್ರವಲ್ಲ, ಇಡೀ ಭಾರತದಲ್ಲಿ ಪ್ರಗತಿಪರತೆಗೆ ಜಡತೆ ಎಂಬ ದೊಡ್ಡರೋಗ ಬಡಿದುಕೊಂಡಿದೆ. ಅಂದರೆ ಅದು ಆಲೋಚಿಸುವ ಶಕ್ತಿಯನ್ನೇ ಕಳೆದುಕೊಂಡಿದೆ. ಹಾಗಾಗಿಯೇ ಪುನರುಜ್ಜೀವನದ ಯಾವ ಇಚ್ಛೆಯನ್ನೂ ಪ್ರಕಟಿಸದೆ ಪರಮ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಸಂಕುಚಿತ ಸಾಮಾಜಿಕ ಓಲೈಕೆ ತಂತ್ರ, ವಂಶ ರಾಜಕಾರಣ ಇತ್ಯಾದಿ ಹಲವು ಹಳೆಯ ರೋಗಗಳಿಂದ ಬಳಲುತ್ತಾ ರಾಷ್ಟ್ರವನ್ನು ಇಂದು ಹೊಸ ರಾಜಕೀಯ ಭಾಷೆ ಮತ್ತು ಹೊಸ ಉತ್ಸಾಹದ ಪ್ರತೀಕವಾಗಿರುವ ಬಿಜೆಪಿಗೆ ಒಪ್ಪಿಸಿ ಆತಂಕ ಹುಟ್ಟಿಸಿರುವ ಕಾಂಗ್ರೆಸ್ ಇಂದು ಎಲ್ಲ ಪ್ರಗತಿಪರರ ಆಶ್ರಯದಾಣವಾಗಿದೆ. ಅದನ್ನು ಊರುಗೋಲು ಮಾಡಿಕೊಂಡು ಈ ಪ್ರಗತಿಪರರು ಬಿಜೆಪಿಯ ವಿರುದ್ಧ ಸಮರ ಸಾರಹೊರಟಿದ್ದಾರೆ! ಅವರಿಗೆ ಗೊತ್ತಿಲ್ಲದ ವಿಷಯವೆಂದರೆ, ತ್ರಿಪುರಾದಲ್ಲಿ ಗೆದ್ದಿರುವ ಬಿಜೆಪಿಯ ಬಹುಭಾಗ ಕಾಂಗ್ರೆಸ್ಸಿಗರಿಂದ ತುಂಬಿದೆ ಎಂಬುದು. ಕಾಂಗ್ರೆಸ್‌ನಲ್ಲಿ ಪುನರುಜ್ಜೀವನದ ಮೂಲಗಳನ್ನೇ ಕಾಣದ ಕಾಂಗ್ರೆಸ್ಸಿಗರು ಈಗ ಬಿಜೆಪಿಯಲ್ಲಿ ಪುನರುಜ್ಜೀವಿತರಾಗಿದ್ದಾರೆ. ಅದೇ ಅಲ್ಲಿ-ಹಾಗೆ ನೋಡಿದರೆ ಅಸ್ಸಾಂನಿಂದ ಆರಂಭವಾಗಿ, ಇಡೀ ಈಶಾನ್ಯ ಭಾರತದಲ್ಲಿ-ಬಿಜೆಪಿಯ ಮುನ್ನಡೆಗೆ ಕಾರಣವಾಗಿರುವುದು.

ಆದುದರಿಂದ ಇಂದು ಪ್ರಗತಿಪರರು ಬಿಜೆಪಿಯನ್ನು ಈಗಾಗಲೇ ತುಕ್ಕು ಹಿಡಿದಿರುವ ತಮ್ಮ ಹಳೆಯ ಪಾರಿಭಾಷಿಕಗಳ ಮೂಲಕ ಶಪಿಸುವುದನ್ನು ನಿಲ್ಲಿಸಿ, ಅದರ ಹೊಸ ಭಾಷೆ ಮತ್ತು ಉತ್ಸಾಹಗಳ ಹಿಂದಿರುವ ಅಪಾಯಗಳನ್ನು ಜನತೆಗೆ ಮನಗಾಣಿಸುವ ಹೊಸ ಭಾಷೆಯನ್ನು ಕಂಡುಕೊಳ್ಳಬೇಕಿದೆ. ಅದಕ್ಕಾಗಿ ಅವರು ಮೊದಲು ತಮ್ಮದೇ ಪುನರುಜ್ಜೀವನದ ಮೂಲಗಳನ್ನು ಕಂಡುಕೊಳ್ಳಬೇಕಾಗಿದೆ. ಅದು ಸಾಧ್ಯವಾಗಲು ಅವರು

ಮೊದಲು ತಮ್ಮ ಪಾರಂಪರಿಕವಾದ ತಾತ್ವಿಕ ಶ್ರೇಷ್ಠತೆಯ ಅಹಂಕಾರವನ್ನು ತೊರೆದು ತಾವು ನಡೆದ ಬಂದ ಹಾದಿಯ ಮತ್ತು ಯೋಚಿಸಿದ ಕ್ರಮಗಳ ಮತ್ತು ಅವು ಉಂಟು ಮಾಡಿರುವ ಪರಿಣಾಮಗಳ ಬಗ್ಗೆ ಒಂದು ನಿಷ್ಠುರ ಪುನರಾವಲೋಕನ ಮಾಡಬೇಕಿದೆ. ಇಂದು ಜನರ ಕಣ್ಣಿನಲ್ಲಿ ತಮಗಿಂತ ಬಿಜೆಪಿ ಏಕೆ ಹೆಚ್ಚು 'ಪ್ರಗತಿಪರ'ವಾಗಿ ಕಾಣತೊಡಗಿದೆ ಎಂದು ಯೋಚಿಸಬೇಕಿದೆ. ಆಗ ಇಂದು 'ಪ್ರಗತಿಪರತೆ' ಎಂಬ ಪರಿಕಲ್ಪನೆಯ ಅರ್ಥವನ್ನೇ ಬದಲಾಯಿಸಬೇಕಾದ ಅಗತ್ಯವನ್ನು ಅವರು ಮನಗಾಣಬಹುದು. ತಾವು ಪ್ರತಿಪಾದಿಸುತ್ತಾ ಬಂದ ಪ್ರಗತಿಪರತೆ ಕಳೆದ ಕೆಲವು ವರ್ಷಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಎಂಬ ಅವಳಿ ಜವಳಿಯ ಪಾಲಾದದ್ದು ಏಕೆ ಮತ್ತು ಹೇಗೆ ಎಂಬುದರ ಬಗ್ಗೆಯೂ ಮತ್ತು ಇದು ಹೇಗೆ ಆತ್ಯಂತಿಕವಾಗಿ ಅಮಾನವೀಕರಣಗೊಂಡ ಒಂದು ಹಿಂಸಾತ್ಮಕ ಸಮಾಜವನ್ನು ನಿರ್ಮಿಸತೊಡಗಿದೆ ಮತ್ತು ಕೋಮುವಾದದ ಜೊತೆಗೆ ಹೆಣ್ಣು ಮತ್ತು ಭೂಮಿಯ ಮೇಲಿನ ಅತ್ಯಾಚಾರಗಳು ಹೇಗೆ ಇದರ ಸ್ಫೂರ್ತಿ ತತ್ವಗಳಾಗಿವೆ ಎಂಬುದರ ಬಗ್ಗೆಯೂ ಅವರು ಯೋಚಿಸಬಲ್ಲರಾದರೆ, ಇಂದು ಪ್ರಸ್ತುತವಾಗಬಹುದಾದ 'ಪ್ರಗತಿಪರತೆ'ಯ ಹೊಸ ಅರ್ಥ ಮತ್ತು ಅದನ್ನು ವಿವರಿಸುವ ಹೊಸ ಭಾಷೆಯ ಹೊಳಹು ಅವರಿಗೆ ಸಿಗಬಹುದು.

ಇಲ್ಲಿ ಅವರ ಚಿಂತನೆಯ ನೆರವಿಗೆ ಬರಬಹುದಾದ ಯುಗದ್ರಷ್ಟಾರತೆಯ ಮಾತೊಂದನ್ನು ಉಲ್ಲೇಖಿಸಿ, ಅದರ ಮಹತ್ವವನ್ನು ಸೂಚಿಸಿ ನನ್ನ ಈ ಬರಹವನ್ನು ಮುಗಿಸಬಯಸುವೆ. ಅದು 'ಪ್ರಗತಿ' ಮತ್ತು 'ಪ್ರಗತಿಪರತೆ' ಎಂಬ ಕಲ್ಪನೆಗಳು ನವೋತ್ಸಾಹಗಳೊಂದಿಗೆ ಚಾಲ್ತಿಗೆ ಬರತೊಡಗಿದ್ದ ಸುಮಾರು ಒಂದು ಶತಮಾನದಷ್ಟು ಹಿಂದೆ ಮತ್ತು ಈ 'ಪ್ರಗತಿಪರ'ರಿಂದ 'ಗೊಡ್ಡು ಸಂಪ್ರದಾಯವಾದಿ' ಎಂದು ಮೂದಲಿಸಲ್ಪಟ್ಟಿದ್ದ ಮಹಾತ್ಮ ಗಾಂಧಿ ಎಂಬ ಮನುಷ್ಯ ಹೇಳಿದ ಮಾತು : 'ಈ ಭೂಮಿ ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲುದೇ ಹೊರತು ಎಲ್ಲರ ಆಸೆಗಳನ್ನಲ್ಲ'. ಈ ಮಾತು ನಮಗೆ ನಾಟಬೇಕಾದ ಜಾಗವೆಂದರೆ ಇದರಲ್ಲಿನ ಆಸೆ ಎಂಬ ಶಬ್ದವೇ ಹಿಂದಿನ ಮತ್ತು ಇಂದಿನ ಪ್ರಗತಿಪರತೆಯ ಸ್ಫೂರ್ತಿ ಶಕ್ತಿಯಾಗಿದೆ ಮತ್ತು ಇದರ ವೈವಿಧ್ಯಮಯ ರೂಪಗಳೇ ಇಂದಿನ ಸಮಾಜದಲ್ಲಿನ ಹಿಂಸಾಚಾರ, ಅತ್ಯಾಚಾರ, ಕೋಮುವಾದ ಮತ್ತು ಭೂಮಿಯ ಹತ್ಯೆಗೆ ನಮ್ಮನ್ನು ಗೊತ್ತಿದ್ದೋ ಗೊತ್ತಿಲ್ಲದೆಯೋ ದೂಡಿದೆ ಎಂಬ ಅರಿವು. ಆದುದದರಿಂದ ಇಂದು ನಿಜವಾದ ಪ್ರಗತಿಪರತೆ ಎಂದರೆ ಈ ಪ್ರವೃತ್ತಿಗಳಿಗೆ ತಡೆ ಹಾಕುವಂತಹ ರಾಜಕಾರಣ ಮಾಡುವುದೇ ಆಗಿದೆ. ಅದೇ ಆಳದ ಅಹಿಂಸೆಯಲ್ಲಿನ ನಂಬಿಕೆ ಮಾತ್ರ ಸೃಷ್ಟಿಸಬಲ್ಲ ಪರಿಸರದೊಂದಿಗೆ ಸಮರಸದಲ್ಲಿರುವ, ಮಿತಿಗಳುಳ್ಳ ಬದುಕಿನ ಮಾದರಿಯೊಂದನ್ನು ಎತ್ತಿ ಹಿಡಿಯುವ ರಾಜಕಾರಣ. ಇದು ಗಾಂಧಿಯನ್ನು ಇಂದಿಗೆ ಅರ್ಥೈಸಿಕೊಳ್ಳುವ ಮತ್ತು ಪ್ರಸ್ತುತ ಮಾಡಿಕೊಳ್ಳುವ ರಾಜಕಾರಣವೇ ಆಗಿರುತ್ತದೆ.

('ಉದಯವಾಣಿ' : ಮಾರ್ಚ್ ೬, ೨೦೧೮)

ಉ. ಪ್ರ. ಮತ್ತು ಬಿಹಾರದ ಫಲಿತಾಂಶಗಳು ಏನು ಹೇಳುತ್ತಿವೆ?

ಕೆಲ ದಿನಗಳ ಹಿಂದೆ ಉತ್ತರಪ್ರದೇಶ ಮತ್ತು ಬಿಹಾರಗಳಿಂದ ಬಂದಿರುವ ಉಪಚುನಾವಣೆಗಳ ಫಲಿತಾಂಶಗಳು ರಾಷ್ಟ್ರದ ರಾಜಕಾರಣದಲ್ಲಿ ಒಂದು ಸಂಚಲನವನ್ನೇ ಉಂಟುಮಾಡಿವೆ ಎಂದು ಹೇಳಬೇಕು. ಈಶಾನ್ಯ ಭಾರತವನ್ನು ಗೆದ್ದುಕೊಂಡ, ಅದಕ್ಕಿಂತ ವಿಶೇಷವಾಗಿ ತ್ರಿಪುರಾದಲ್ಲಿನ ಕಮ್ಯೂನಿಸ್ಟ್ ಭದ್ರಕೋಟೆಯನ್ನು ಛಿದ್ರ ಮಾಡಿದ ಸಂಭ್ರಮೋತ್ಸಾಹದಲ್ಲಿದ್ದ ಸಂಘ ಪರಿವಾರದವರನ್ನು ಈ ಫಲಿತಾಂಶಗಳು ಬೆಚ್ಚಿಬೀಳಿಸಿರಲೂ ಸಾಕು. ಇನ್ನು ಕಾಂಗ್ರೆಸ್ಸೇತರ ವಿರೋಧ ಪಕ್ಷಗಳಿಗೆ ಬಿಜೆಪಿಯ ಇತ್ತೀಚೆಗೆ ಮಿತಿ ಮೀರಿದ್ದ ಸೊಕ್ಕನ್ನು ಮುರಿದ ತೃಪ್ತಿಯಲ್ಲದೆ, ತಮಗೂ ಮುಂದಿನ ಚುನಾವಣೆಗಳ ಹೊತ್ತಿಗೆ ಒಂದು ಆಶಾಕಿರಣ ಕಂಡ ಖುಷಿಯೂ ಉಂಟಾಗಿರಬಹುದು.

ಉತ್ತರಪ್ರದೇಶದಲ್ಲಿ ಅದರ ಮುಖ್ಯಮಂತ್ರಿ ಯೋಗಿ ಆದಿತ್ಯನಾಥರು ಐದು ಬಾರಿ ಸತತವಾಗಿ ಗೆದ್ದು ಅವರ ಭದ್ರಕೋಟೆ ಎನಿಸಿದ್ದ ಗೋರಖ್‌ಪುರ ಕ್ಷೇತ್ರವನ್ನು ಸಮಾಜವಾದಿ-ಬಿಎಸ್ಪಿ ಮೈತ್ರಿ ವಶಪಡಿಸಿಕೊಂಡಿರುವುದು ಹಲವು ದೃಷ್ಟಿಗಳಿಂದ ಗಮನಾರ್ಹವಾದ ಫಲಿತಾಂಶವಾಗಿದೆ. ಮೊದಲನೆಯದಾಗಿ ಹಿಂದುತ್ವದ ಹೆಂಡ ಕುಡಿದಂತೆ ಅಸಂಬದ್ಧ ಹೇಳಿಕೆಗಳನ್ನು ನೀಡುತ್ತಾ ಅನಾಹುತಕಾರಿಯಾಗಿ ವರ್ತಿಸುತ್ತಿದ್ದ ಈ ಯೋಗಿಗೆ ಜನ ಕೊನೆಗೂ ಛೀಮಾರಿ ಹಾಕಿದಂತಾಗಿದೆ. ಇನ್ನು ದೂರದ ಫೂಲ್‌ಪುರದಲ್ಲೂ (ಇದು ಜವಾಹರಲಾಲ್ ನೆಹರೂ ಅವರ ಸಾಂಪ್ರದಾಯಿಕ ಕ್ಷೇತ್ರವೂ ಆಗಿತ್ತು) ಈ ಮೈತ್ರಿ ಬಿಜೆಪಿಯನ್ನು ಸಾಕಷ್ಟು ಅಂತರದಿಂದಲೇ ಸೋಲಿಸಿರುವುದನ್ನು ನೋಡಿದರೆ ಜನ ನಿಜವಾಗಿ ಕೇಂದ್ರದ ಮೋದಿ ಮತ್ತು ಲಕ್ನೋದ ಯೋಗಿ ಸರ್ಕಾರಗಳೆರಡರ ಬಗ್ಗೆಯೂ ಭ್ರಮನಿರಸನ ಹೊಂದಿರುವುದು ನಿಚ್ಚಳವಾಗಿ ಕಾಣುತ್ತದೆ. ಇದು ಮೋದಿಯ ಗಂಟಲಿನ ಅಬ್ಬರಕ್ಕೆ ಸ್ವಲ್ಪಕಾಲವಾದರೂ ತಡೆಯೊಡ್ಡಬಹುದೆಂದು ಆಶಿಸಿ ಜನ ಸಮಾಧಾನಪಟ್ಟುಕೊಳ್ಳಬಹುದು!

ಆದರೆ ಈ ಫಲಿತಾಂಶಗಳ ಬಗ್ಗೆ ವಿರೋಧ ಪಕ್ಷಗಳೇನೂ ನಿರ್ಣಾಯಕ ಖುಷಿ ಪಡುವ ಪರಿಸ್ಥಿತಿ ಇಲ್ಲ ಎಂದೂ ಇಲ್ಲಿ ಹೇಳಬೇಕು. ಏಕೆಂದರೆ, ಉ.ಪ್ರ. ದಲ್ಲಿನ ಸಮಾಜವಾದಿ–ಬಿಎಸ್ಪಿ ಮೈತ್ರಿ ಇತ್ತೀಚಿನ ವರ್ಷಗಳ ರಾಜಕೀಯ ಇತಿಹಾಸದಲ್ಲಿ ಪರಸ್ಪರ ವಿರುದ್ಧವಿದ್ದ ಸಾಮಾಜಿಕ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಜಾತಿ–ವರ್ಗಗಗಳ ನಡುವೆ ಆಗಿರುವಂತಹದ್ದು. ಇದು ಆಗಿರುವುದು ಮೋದಿ ಅಬ್ಬರದ ಎದುರು ಈ ಇಬ್ಬರ ಸರ್ವನಾಶದ ಆತಂಕದಿಂದಾಗಿ. ಹಾಗಾಗಿ ಈ ಮೈತ್ರಿಯು ರಾಜ್ಯದಲ್ಲಿ ರಾಜಕೀಯ ಕಾವು ಏರುತ್ತಿದ್ದಂತೆ, ಅಧಿಕಾರ ರಾಜಕಾರಣದ ಅವಕಾಶಗಳು ಬಿಚ್ಚಿಕೊಳ್ಳುತ್ತಿದ್ದಂತೆ ಬಿಗುವುಗಳನ್ನು ಎದುರಿಸುವುದು ಖಂಡಿತ. ಹಾಗೆ ನೋಡಿದರೆ ಅರವತ್ತು–ಎಪ್ಪತ್ತರ ದಶಕದಲ್ಲಿ ಲೋಹಿಯಾ ವ್ಯಕ್ತಿತ್ವದ ಪ್ರಖರತೆಯಲ್ಲಿ ಸಮಾಜವಾದಿ ರಾಜಕಾರಣ ತಾತ್ವಿಕವಾಗಿ ತನ್ನ ಸಮಗ್ರತೆಯನ್ನು ಉಳಿಸಿಕೊಂಡಿದ್ದಾಗ ಈ ಎರಡೂ ಜಾತಿ–ವರ್ಗಗಳು ಸಮಾಜವಾದಿ ತತ್ವದ ಪ್ರಭಾವದಡಿಯಲ್ಲಿ ಒಂದಾಗಿಯೇ ಇದ್ದವು. ಆದರೆ ಎಪ್ಪತ್ತರ ದಶಕದ ಹೊತ್ತಿಗೆ ಲೋಹಿಯಾ ಜೊತೆಗೆ ಅವರ ಪ್ರಭಾವವೂ ಕ್ರಮೇಣ ಮಸುಕಾಗತೊಡಗಿ ಸಮಾಜವಾದಿ ರಾಜಕಾರಣ ಎಂದರೆ ದ್ವಿಜೇತರ ಜಾತಿಗಳ ಪ್ರಾಬಲ್ಯದ ರಾಜಕಾರಣವೆಂದು ನಿರೂಪಿತವಾಗಿ ಕುಬ್ಜಗೊಂಡಿತು. ಸಮಾಜವಾದದ ಮುಸುಕು ತೊಟ್ಟ ಈ ಊಳಿಗಮಾನ್ಯ ಜಾತಿ ರಾಜಕಾರಣದ ಬಿಸಿ ತಾಳಲಾರದೆ ದಲಿತ ಮತ್ತು ಅತಿ ಹಿಂದುಳಿದ ಜಾತಿಗಳು ಅದರಿಂದ ಪ್ರತ್ಯೇಕಗೊಂಡವು. ಈ ಜಾತಿ–ವರ್ಗವೇ ಮುಂದೆ ಕಾನ್ಶಿರಾಂ ಅವರ ಪ್ರಬುದ್ಧ ಮತ್ತು ಸಮರ್ಥ ನಾಯಕತ್ವದಲ್ಲಿ ಬಿಎಸ್ಪಿ ಪಕ್ಷವಾಗಿ ತಲೆ ಎತ್ತಿದ್ದು. ಹಾಗಾಗಿ ಲೋಹಿಯಾ ಕಾಲದ ಹಲವು ಸಮಾಜವಾದಿ ಯುವನಾಯಕರು ನಂತರ ಬಿಎಸ್ಪಿಯಲ್ಲಿ ಕಾಣಿಸಿಕೊಂಡಿದ್ದರಲ್ಲಿ ಆಶ್ಚರ್ಯವೇನಿಲ್ಲ. ಆದರೆ ನಂತರದಲ್ಲಿ ಇದು ಮಾಯಾವತಿ ಎಂಬ ಅತಿ ದುರಭಿಮಾನದ ಆತ್ಮಘಾತುಕ ವ್ಯಕ್ತಿತ್ವದ ಹಿಡಿತಕ್ಕೆ ಸಿಕ್ಕಿ ಕ್ರಮೇಣ ಅವಸಾನದ ಹಂತ ತಲುಪಿದ್ದು ಇತ್ತೀಚಿನ ಇತಿಹಾಸ.

ಅದೇನೇ ಇರಲಿ, ಈಗ ಈ ಎರಡೂ ಸಾಮಾಜಿಕ–ರಾಜಕೀಯ ಗುಂಪುಗಳು ಮೋದಿಯವರ ಹಿಂದುತ್ವದ ಬುಲ್‌ಡೋಜರ್ ರಾಜಕಾರಣದ ಅಡಿ ಸಿಕ್ಕಿ ಅಪ್ಪಚ್ಚಿಯಾಗಿರುವ ಹೊತ್ತಿನಲ್ಲಿ ಈ ಎರಡೂ ಗುಂಪುಗಳ ನಾಯಕರಾದ ಅಖಿಲೇಶ್ ಯಾದವ್ ಮತ್ತು ಮಾಯಾವತಿ 'ಕೆಟ್ಟ ಮೇಲೆ ಬುದ್ಧಿ ಬಂತು' ಎಂಬಂತೆ ಪಾಠ ಕಲಿತಿರುವ ಹಾಗೆ ತೋರುತ್ತದೆ. ಹಾಗಾಗಿಯೇ ಎಂದೂ ಯಾರಿಗೂ ಮಣಿಯದಿದ್ದ ಮಾಯಾವತಿ ತಮ್ಮ ರಾಜಕೀಯ ಸ್ಥಿತಿಯ ನಿಷ್ಠುರ ವಿಮರ್ಶೆ ಮಾಡಿಕೊಂಡಂತೆ ಎರಡೂ ಕ್ಷೇತ್ರಗಳಲ್ಲಿ ಅಖಿಲೇಶರ ಸಮಾಜವಾದಿ ಪಕ್ಷಕ್ಕೆ ಬೇಷರತ್ ಬೆಂಬಲ ಘೋಷಿಸಿದರು. ಅಷ್ಟು ಮಾತ್ರವಲ್ಲದೆ ಈ ಕ್ಷೇತ್ರಗಳಲ್ಲಿ ತಮ್ಮ ಬೆಂಬಲಿಗರು ಇಡಿಯಾಗಿ ಸಮಾಜವಾದಿ ಪಕ್ಷಕ್ಕೆ ಮತ ಹಾಕುವಂತೆ ನೋಡಿಕೊಂಡರು. ಆದುದರಿಂದಲೇ ಎರಡೂ ಕಡೆ–ವಿಶೇಷವಾಗಿ ಗೋರಖಪುರದಲ್ಲಿ– ಸಮಾಜವಾದಿ ಪಕ್ಷ ನಿರ್ಣಾಯಕ ಗೆಲುವು ಸಾಧಿಸಲು ಸಾಧ್ಯವಾದದ್ದು. ಇದನ್ನು ಗಮನಿಸಿಯೇ ಅಖಿಲೇಶ್ ಯಾದವ್ ಫಲಿತಾಂಶ

ಪ್ರಕಟವಾಗುತ್ತಿದ್ದಂತೆಯೇ ಮಾಯಾವತಿಯವರ ಮನೆಗೆ ಹೋಗಿ ಧನ್ಯವಾದಗಳನ್ನು ಹೇಳಿ ಬಂದದ್ದು.

ಈ ಸ್ನೇಹವು ದೀರ್ಘಕಾಲ ಉಳಿಯಬಹುದಾದ ಸಾಧ್ಯತೆಗಳಿಗೆ ಸದ್ಯಕ್ಕಾದರೂ ಮುಖ್ಯವಾಗಿ ಎರಡು ಕಾರಣಗಳಿವೆ. ಒಂದು ಈ ಎರಡೂ ಪಕ್ಷಗಳಿಗೆ–ನಿರ್ದಿಷ್ಟವಾಗಿ ಬಿಎಸ್ಪಿಗೆ– ಇದು ಸಾವು ಬದುಕಿನ ಪ್ರಶ್ನೆ. ಕಳೆದ ಚುನಾವಣೆಗಳಲ್ಲಿನ ಅನಿರೀಕ್ಷಿತ ಹೀನಾಯ ಸೋಲುಗಳು ಎರಡೂ ಕಡೆ ತಮ್ಮ ರಾಜಕೀಯ ನಡೆ ನುಡಿಗಳ ಬಗ್ಗೆ ನಿಷ್ಠುರ ಆತ್ಮ ನಿರೀಕ್ಷೆಯನ್ನು ಹುಟ್ಟಿಸಿರುವಂತೆ ತೋರುತ್ತಿದೆ. ಮೊದಲ ಬಾರಿಗೆ ದೊಡ್ಡ ಬಾಯಿಯ ಮಾಯಾವತಿಯವರು ಹೆಚ್ಚು ಮಾತಾಡದೆ ಮೆದುವಾಗಿದ್ದಾರೆ; ಮೌನವಾಗಿದ್ದಾರೆ. ಇನ್ನು ಸಮಾಜವಾದಿ ಪಕ್ಷದ ನಾಯಕತ್ವ ಈಗ ನಿರ್ಣಾಯಕವಾಗಿ ಊಳಿಗಮಾನ್ಯ ಮಾನಸಿಕತೆಯ ಮುಲಾಯಂಸಿಂಗ್ ಯಾದವ್ ಎಂಬ ಅರಳುಮರುಳು ಮುದುಕನಿಂದ ಅಖಿಲೇಶ್ ಯಾದವ್ ಎಂಬ ಹೊಸಕಾಲದ ಮೌಲ್ಯಗಳಲ್ಲಿ ಬೆಳೆದ ಯುವಕನ ಕೈಗೆ ವರ್ಗಾಯಿಸಲ್ಪಟ್ಟಿದೆ. ಈತ ಲೋಹಿಯಾರನ್ನು ತನ್ನ ಅಪ್ಪನ ರಾಜಕಾರಣದ ಹಂಗಿಲ್ಲದೆ ಓದಿಕೊಂಡ ಹುಡುಗ. ಹಾಗಾಗಿ ಈ ಯುವ ಯಾದವ ಲೋಹಿಯಾ ವಿಚಾರಗಳ ನಿಜ ಪ್ರಭಾವದಲ್ಲಿ ಸಮಾಜದ ಇತರೆಲ್ಲ ಜಾತಿ ವರ್ಗಗಳಂತೆಯೇ, ಬಿಎಸ್‌ಪಿ ಅಡಿಯ ಅತಿಶೂದ್ರ ಮತ್ತು ದಲಿತ ಜಾತಿ–ವರ್ಗಗಳೊಂದಿಗೆ ಆತ್ಮೀಯವಾಗಿ ಗುರುತಿಸಿಕೊಳ್ಳುವ ಎಲ್ಲ ಸಾಧ್ಯತೆಗಳಿವೆ. ಈ ಸಾಧ್ಯತೆ ನಿಜವೇ ಆಗಿ ಹೋದರೆ ೨೦೧೯ರ ಚುನಾವಣೆಗಳಲ್ಲಿ ಮೋದಿ–ಅಮಿತ್ ಶಾ ಆಟ ಕಳೆದ ಚುನಾವಣೆಗಳಲ್ಲಿ ಆದಂತೆ ದೊಡ್ಡಾಟವಾಗಿ ಜನಮನ ಗೆಲ್ಲಲಾರದು. ಹೇಗೂ ಈ ಜೋಡಿಯ 'ಅದ್ಭುತ' ಮಾತುಗಾರಿಕೆಯ ಆಟಕ್ಕೆ ಸುಲಭದ ಎದುರಾಳಿಯಾಗಿ ಒದಗಿದ್ದ ತುಕ್ಕು ಹಿಡಿದ ಕಾಂಗ್ರೆಸ್ಸಿನ ಸುಳಿವೇ ಇಲ್ಲಿ ಇಲ್ಲವಲ್ಲ! ಭ್ರಷ್ಟಾಚಾರದ ಕೂಸನ್ನು ಕಂಕುಳಲ್ಲಿಟ್ಟುಕೊಂಡು ಕೋಮುವಾದವನ್ನು ಎದುರಿಸಲಾದೀತೆ?

ಇನ್ನು ಬಿಹಾರ ಉಪಚುನಾವಣೆಗಳ ವಿಷಯಕ್ಕೆ ಬಂದರೆ ಅಲ್ಲಿ ಜೆಡಿಯು–ಬಿಜೆಪಿ ಮೈತ್ರಿಕೂಟ ಭಾರಿ ಮುಖಭಂಗ ಅನುಭವಿಸಿದೆ, ನಿಜ. ಆದರೆ ಉತ್ತರಪ್ರದೇಶದಲ್ಲಾದಂತೆ ಅಲ್ಲ. ಏಕೆಂದರೆ ಇಲ್ಲಿ ಲಾಲೂ ಪ್ರಸಾದರ ಆರ್‌ಜೆಡಿ ಮತ್ತು ಬಿಜೆಪಿಗಳು ತಮ್ಮ ಸ್ಥಾನಗಳನ್ನು ಉಳಿಸಿಕೊಂಡಿವೆ. ಒಂದೇ ವಿಶೇಷವೆಂದರೆ ಲಾಲೂ ಅವರ ಆರ್‌ಜೆಡಿ ಪಕ್ಷದ ಜಯದ ಅಂತರ ಹೆಚ್ಚಾಗಿದೆ. ಇದಕ್ಕೆ ಕಾರಣ ಈ ಚುನಾವಣೆಗಳಲ್ಲಿ ಮೈತ್ರಿಕೂಟಗಳ ಸಾಮಾಜಿಕ ಸ್ವರೂಪ ಸಂಪೂರ್ಣ ಬದಲಾಗಿರುವುದೇ ಇರಬಹುದು.

ಆರ್‌ಜೆಡಿ ಅರಾರಿಯಾ ಲೋಕಸಭಾ ಮತ್ತು ಜಹಾನಾಬಾದ್‌ನ ವಿಧಾನಸಭಾ ಕ್ಷೇತ್ರಗಳಲ್ಲಿ ಜಯ ಗಳಿಸಿದ್ದರೆ, ಭಬುವಾ ವಿಧಾನಸಭಾ ಕ್ಷೇತ್ರ ಬಿಜೆಪಿ ಪಾಲಾಗಿದೆ. ಲಾಲೂ ಭ್ರಷ್ಟಾಚಾರದ ಪ್ರಕರಣವೊಂದರಲ್ಲಿ ಶಿಕ್ಷೆಗೊಳಗಾಗಿ ಸೆರೆಮನೆಯಲ್ಲಿದ್ದರೂ ಅವರ ಪಕ್ಷ ಗೆದ್ದಿರುವುದರ ಬಗ್ಗೆ ಮಾಧ್ಯಮಗಳಲ್ಲಿ ಭಾರಿ ಹುಯ್ಲೆಬ್ಬಿಸಲಾಗುತ್ತಿದೆ. ಆದರೆ ಈ ಹುಯ್ಲಿಗೆ ಕಾರಣವೇನೂ ಇಲ್ಲ. ಏಕೆಂದರೆ ಲಾಲೂ ಸೆರೆಮನೆ ಸೇರಿರುವುದು ಇದು ಮೊದಲೇನಲ್ಲ ಮತ್ತು ಈ ಎರಡೂ ಕ್ಷೇತ್ರಗಳು ಸಾಕಷ್ಟು ಕಾಲದಿಂದ ಆರ್‌ಜೆಡಿಯ

ಭದ್ರಕೋಟೆಯಾಗಿವೆ. ಹೆಚ್ಚೆಂದರೆ ಲಾಲೂ ಸೆರೆಮನೆಯಲ್ಲಿದ್ದೂ ಇಲ್ಲಿ ತಮ್ಮ ಪ್ರಾಬಲ್ಯವನ್ನು ಉಳಿಸಿಕೊಂಡಿದ್ದಾರೆ ಎನ್ನಬಹುದಷ್ಟೆ. ಇದಕ್ಕೆ ಅವರ ಮಗ ತೇಜಸ್ವಿ ಯಾದವ್‌ರ (ಇವರೂ ಭ್ರಷ್ಟಾಚಾರದ ಪ್ರಕರಣದಲ್ಲಿ ಶೀಘ್ರದಲ್ಲೇ ಬಂಧನಕ್ಕೊಳಗಾಗುವ ಎಲ್ಲ ಸೂಚನೆಗಳೂ ಇವೆ) ನಾಯಕತ್ವ ಗುಣವನ್ನು ಮಾಧ್ಯಮಗಳ ಕೆಲ ವಲಯಗಳಲ್ಲಿ ಶ್ಲಾಘಿಸಲಾಗುತ್ತಿದೆ. ಆದರೆ ಚುನಾವಣಾ ಗೆಲುವು ನಮ್ಮ ರಾಜಕಾರಣದ ಮೂಲ ಆಧಾರಗಳನ್ನೇ–ಅದರ ಶೀಲವನ್ನೇ–ಹಾಳು ಮಾಡಿರುವ ಭ್ರಷ್ಟಾಚಾರವನ್ನು ಕ್ಷಮಾರ್ಹಗೊಳಿಸಬಲ್ಲುದೇ ಎಂಬ ಪ್ರಶ್ನೆಯನ್ನೂ ಇಲ್ಲಿ ನಾವು ಕೇಳಿಕೊಳ್ಳಬೇಕಾಗಿದೆ. ಇದು ಈ ಫಲಿತಾಂಶಗಳು ಎತ್ತಿರುವ ದೊಡ್ಡ ಪ್ರಶ್ನೆ.

ಬಿಹಾರದಲ್ಲಿ (ಹಾಗೆ ನೋಡಿದರೆ ಉ.ಪ್ರ.ದಲ್ಲೂ!) ಸೆರೆಮನೆಗಳಿದ್ದುಕೊಂಡೇ ಎಷ್ಟು ಜನ ಕಳ್ಳ–ಖದೀಮರು–ಕೊಲೆಗಾರರು–ಗೂಂಡಾಗಳು ಚುನಾವಣೆಗಳನ್ನು ಭಾರಿ ಅಂತರದಿಂದ ಗೆದ್ದಿಲ್ಲ? ಅದಕ್ಕೊಂದು ಇತಿಹಾಸವೇ ಇದೆ. ಹಾಗಿರುವಾಗ ಲಾಲೂ ಕೋಮುವಾದಿ ಬಿಜೆಪಿಯನ್ನು ವಿರೋಧಿಸುತ್ತಾರೆ ಎಂಬೊಂದೇ ಕಾರಣಕ್ಕೆ ಅವರ ಮತ್ತು ತೇಜಸ್ವಿ ಸೇರಿದಂತೆ ಅವರ ಕುಟುಂಬದ ಸಾಬೀತಾದ ಭ್ರಷ್ಟಾಚಾರವನ್ನು ಒಪ್ಪಿಕೊಳ್ಳಬೇಕೆ? ಹಾಗಾದರೆ ನಮಗೆ ನ್ಯಾಯಾಂಗವಾದರೂ ಏಕೆ ಬೇಕು? ಕೋಮುವಾದವನ್ನು ಭ್ರಷ್ಟಾಚಾರದ ಸಮರ್ಥನೆಯ ಮೂಲಕ ಎದುರಿಸಹೊರಡುವುದು ಎಷ್ಟು ಸರಿ? ಸಂಪೂರ್ಣ ಜಾತಿಮಯವಾಗಿರುವ ಬಿಹಾರದ ಕೆಲವೆಡೆ ಇದು ನಡೆಯಬಹುದು. ಆದರೆ ರಾಷ್ಟ್ರದ ಇತರೆಡೆ? ಇಂತಹ ಲಜ್ಜೆಗೆಟ್ಟ ರಾಜಕಾರಣವೇ ಅಲ್ಲವೇ ನಿತೀಶ್ ಕುಮಾರ್‌ರಂತಹ ದಕ್ಷ ಮತ್ತು ಸ್ವಚ್ಛ ಸಮಾಜವಾದಿ ರಾಜಕಾರಣಿಯನ್ನು ಎರಡನೆಯ ಬಾರಿಗೆ ಬಿಜೆಪಿ ತೆಕ್ಕೆಗೆ ದೂಡಿದ್ದು? ಆ ಮೂಲಕ ಬಿಜೆಪಿಯನ್ನು ಬಿಹಾರದಲ್ಲಿ ಮತ್ತೆ ಜೀವಂತಗೊಳಿಸಿದ್ದು? ನಿತೀಶ್ ಅವರು ಲಾಲೂ ಮತ್ತು ಅವರ ಮಕ್ಕಳ ಭ್ರಷ್ಟಾಚಾರವನ್ನು ಸಹಿಸಿಕೊಂಡು ಮುಖ್ಯಮಂತ್ರಿ ಆಗಿ ಮುಂದುವರೆಯಬೇಕಿತ್ತೇ? ಏಕೆ ಸೋನಿಯಾ–ರಾಹುಲ್ ಸೇರಿದಂತೆ ಸೆಕ್ಯುಲರ್ ರಾಜಕೀಯ ನಾಯಕರು ಲಾಲೂಗೆ, ಆರೋಪಿಯಾಗಿದ್ದ ತಮ್ಮ ಮಗನನ್ನು ರಾಜ್ಯ ಸಚಿವ ಸಂಪುಟದಿಂದ ಹಿಂತೆಗೆದುಕೊಳ್ಳುವಂತೆ ಹೇಳಲಾಗದಾದರು? ಅದೂ ಲಾಲೂ ತಾವು ಸೋನಿಯಾ ಭಕ್ತರೆಂದು ಹೇಳಿಕೊಳ್ಳುತ್ತಿರುವಾಗ? ಸೆಕ್ಯುಲರ್‌ವಾದಿಗಳ ಪ್ರಕಾರ ಹಾಗಾದರೆ ಲಾಲೂ ತಮ್ಮ ಮಗನನ್ನು ಸಚಿವ ಸಂಪುಟದಿಂದ ಹಿಂತೆಗೆದುಕೊಳ್ಳಲು ನಿರಾಕರಿಸಿದ ನಂತರ ನಿತೀಶ್ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ರಾಜಕೀಯ ಆತ್ಮಹತ್ಯೆ ಮಾಡಿಕೊಳ್ಳಬೇಕಿತ್ತೇ? ನಿತೀಶ್ ತಮ್ಮ ರಾಜ್ಯದಲ್ಲಿ ಎಂದೂ ಕೋಮುವಾದಿ ರಾಜಕಾರಣಕ್ಕೆ ಅವಕಾಶ ನೀಡಿಲ್ಲ ಎಂಬುದನ್ನೂ ನಾವು ಗಮನಿಸಬೇಕು.

ನಿತೀಶ್ ಹಾಳಾಗಿ ಹೋಗಲಿ. ಅವರ ದಕ್ಷ ಮತ್ತು ಸ್ವಚ್ಛ ರಾಜಕಾರಣವೇ ಅವರಿಗೆ ಮುಳುವಾಗುವುದಾದದರೆ ಆಗಲಿ. ಅವರಿಗೆ ಕಲಿಯಲು ಅದೂ ಒಂದು ಪಾಠವೇ. ಆದರೆ ಕೋಮವಾದಿ ವಿರೋಧಿ ಹೋರಾಟಕ್ಕೊಂದು ಘನತೆ, ವಿಶ್ವಾಸಾರ್ಹತೆ ಬೇಡವೇ? ಭ್ರಷ್ಟಾಚಾರವನ್ನು ಬಗಲಲ್ಲಿಟ್ಟುಕೊಂಡು ಕೋಮುವಾದವನ್ನು ವಿರೋಧಿಸ

ಹೊರಡುವುದು ಕೋಮುವಾದಿಗಳ ಕೈಗೊಂದು ಪ್ರಬಲ ಅಸ್ತ್ರ ಕೊಟ್ಟು ಅವರನ್ನು ಬಲಪಡಿಸಿದಂತೆಯೇ ಅಲ್ಲವೆ? ಕಾಂಗ್ರೆಸ್ ಇತ್ತೀಚಿನ ವರ್ಷಗಳಲ್ಲಿ ರಾಷ್ಟ್ರಾದ್ಯಂತ ಬಿಜೆಪಿ ಎದುರು ಸತತವಾಗಿ ಮುಖಭಂಗವನ್ನನುಭವಿಸುತ್ತಾ ನಾಮಾವಶೇಷದ ಹಂತ ತಲುಪಿರುವುದು ಇದೇ ಕಾರಣದಿಂದ ಅಲ್ಲವೆ? ಜನಕ್ಕೆ ಇತ್ತೀಚೆಗೆ ಕಾಂಗ್ರೆಸ್ಸಿನ ಭ್ರಷ್ಟಾಚಾರಕ್ಕಿಂತ ಬಿಜೆಪಿಯ ಕೋಮುವಾದ ಸಹನೀಯ ಅನ್ನಿಸತೊಡಗಿದೆ ಎಂಬುದರಿಂದಲಾದರೂ ಸೆಕ್ಯುಲರ್‌ವಾದಿಗಳು ಪಾಠ ಕಲಿಯಬೇಡವೇ? ಆದರೆ ಪ್ರಜಾಪ್ರಭುತ್ವ, ಧರ್ಮನಿರಪೇಕ್ಷತೆ ಮತ್ತು ಒಳಗೊಳ್ಳುವ ರಾಜಕಾರಣದ ತತ್ವಗಳ ದೀರ್ಘ ಪರಂಪರೆಯುಳ್ಳ ಕಾಂಗ್ರೆಸ್‌ನಂತಹ ರಾಷ್ಟ್ರೀಯ ಪಕ್ಷವೊಂದು ಕೋಮುವಾದಿ ವಿರೋಧಿ ಹೋರಾಟದ ಇಂತಹ ಭೋಳೆತನಕ್ಕೆ ಸಿಕ್ಕಿ ನಿರ್ನಾಮವಾಗಲು ಬಿಡಬೇಕೆ? ಅದು ಪುನರುಜ್ಜೀವನಗೊಳ್ಳಲು ಪ್ರೇರಕವಾಗುವಂತಹ ಒತ್ತಡವನ್ನು ಸಾರ್ವತ್ರಿಕವಾಗಿ ನಾವು ನಿರ್ಮಾಣ ಮಾಡಬೇಕಲ್ಲವೆ?

ಇಂದಿನ ಭಾರತದ ರಾಜಕಾರಣದಲ್ಲಿ ಎಲ್ಲ ರೀತಿಯ ಕೋಮುವಾದವನ್ನು ಎದುರಿಸುವುದು ಯಾವುದೇ ಆರೋಗ್ಯಕರ ರಾಜಕಾರಣದ ಬಹುಮುಖ್ಯ ಕಾರ್ಯಕ್ರಮವಾಗಿರಬೇಕು, ನಿಜ. ಆದರೆ ಹಾಗೆಂದು ರಾಜಕಾರಣದ ಶೀಲವನ್ನೇ ಹಾಳುಗೆಡುವಂತಹ ಬೆಳವಣಿಗೆಗಳನ್ನು ಬೆಂಬಲಿಸುತ್ತಾ ಈ ಹೋರಾಟಕ್ಕೆ ಹೊರಡುವುದು ಆತ್ಮಘಾತುಕವೇ ಸರಿ. ಹಾಗಾಗಿ ಉ.ಪ್ರ. ದ ಜೊತೆ ಬಿಹಾರದ ಫಲಿತಾಂಶಗಳು ನಮ್ಮ ಮುಂದಿಡಬೇಕಾದ ಪ್ರಶ್ನೆ, ನಾವು ಇಂದು ರಾಜಕಾರಣದಲ್ಲಿ ಉಳಿಸಿಕೊಳ್ಳಬೇಕಾದದ್ದು ಲಾಲೂ ಅವರಂತಹವರನ್ನೋ ಅಥವಾ ನಿತೀಶ್ ಅವರಂತಹವರನ್ನೋ? ಏಕೆಂದರೆ, ವಿರೋಧ ಪಕ್ಷಗಳು ತಮ್ಮದೇ ಉಡಾಫೆ ರಾಜಕಾರಣದಿಂದಾಗಿ ನಿತೀಶ್ ಅವರನ್ನು ಕಳೆದುಕೊಂಡ ಮೇಲೆ ಬರಲಿರುವ ೨೦೧೯ರ ಚುನಾವಣೆಗಳಲ್ಲಿ ಬಿಜೆಪಿಯನ್ನು ಅದರ ಕೋಮುವಾದವೂ ಸೇರಿದಂತೆ ಅದರ ಸಮಗ್ರ ರೂಪದಲ್ಲಿ ಎದುರಿಸುವ ವಿಶ್ವಾಸಾರ್ಹತೆ ಇಂದು ರಾಷ್ಟ್ರಮಟ್ಟದಲ್ಲಿ ಯಾರಿಗಿದೆ? ರಾಹುಲ್ ಗಾಂಧಿಯವರೇ ಗತಿಯಾದರೆ, ಅದು ನಮ್ಮ ರಾಜಕೀಯ ಇತಿಹಾಸ ಚಕ್ರವನ್ನು ಹಿಂದಕ್ಕೆ ಸರಿಸಿದಂತೆಯೇ ಸರಿ. ಹಾಗೂ ಸೆಕ್ಯುಲರಿಸಂ ಹೆಸರಿನ ರಾಜಕಾರಣ ಎದುರಿಸುತ್ತಿರುವ ದುರ್ಗತಿಯೇ ಸರಿ.

ಈ ಹಿನ್ನೆಲೆಯಲ್ಲಿ ಈಗ ತೆಲಂಗಾಣದ ಮುಖ್ಯಮಂತ್ರಿ ಚಂದ್ರಶೇಖರರಾವ್ ಪ್ರಸ್ತಾಪಿಸಿ ಪ. ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರು ಅನುಮೋದಿಸಿರುವ ಮತ್ತು ಉ.ಪ್ರ. ದಲ್ಲಿ ಅಖಿಲೇಶ್-ಮಾಯಾವತಿ ಮೈತ್ರಿ ಆಸೆ ಹುಟ್ಟಿಸಿರುವ ೨೦೧೯ರ ಚುನಾವಣೆ ಸಂದರ್ಭದ ಕಾಂಗ್ರೆಸ್-ಬಿಜೆಪಿಯೇತರ ಮೈತ್ರಿಕೂಟವನ್ನು. ರಾಷ್ಟ್ರದ ಜನ ಗಂಭೀರವಾಗಿ ಪರಿಗಣಿಸಬೇಕಿದ್ದಲ್ಲಿ ಅದು ಬಿಜೆಪಿ ಮತ್ತು ಕಾಂಗ್ರೆಸ್‌ಗಳು ಅವಳಿ-ಜವಳಿಗಳಂತೆ ರಾಷ್ಟ್ರ ರಾಜಕಾರಣವನ್ನು ಕಲುಷಿತಗೊಳಿಸಿರುವ ಭ್ರಷ್ಟಾಚಾರ ಮತ್ತು ಕೋಮುವಾದಗಳೆರಡನ್ನೂ ಪರಿಣಾಮಕಾರಿಯಾಗಿ ಎದುರಿಸಬಲ್ಲ ಹಾಗೂ ದಕ್ಷತೆ ಮತ್ತು ರಾಜಕೀಯ ಸ್ವಚ್ಛತೆಗಳೆರಡನ್ನೂ ರಾಷ್ಟ್ರಕ್ಕೆ ಸಾಬೀತುಪಡಿಸುವ ನಾಯಕತ್ವವನ್ನು, ಅದು ನವ ಉದಾರವಾದಿ ಮುಕ್ತ ಮಾರುಕಟ್ಟೆ ಆರ್ಥಿಕತೆಗೆ ಪ್ರತಿಯಾಗಿ ಒಂದು

ಮಧ್ಯಮ ಮಾರ್ಗದ ಸಮಾಜವಾದಿ ಆರ್ಥಿಕ ನೀತಿಯನ್ನು ಕಂಡುಕೊಂಡಿರುವ ನಿತೀಶ್‌ರಂತಹವರನ್ನು ಬಿಜೆಪಿಯ ಸಹವಾಸದಿಂದ ಬಿಡಿಸಿಕೊಂಡು ಬರದೆ ಸಾಧ್ಯವಿಲ್ಲ. ಇಂತಹ ಪ್ರಯತ್ನಗಳು ಭ್ರಷ್ಟಾಚಾರ ಮತ್ತು ಕುಟುಂಬ ರಾಜಕಾರಣಗಳೆರಡಕ್ಕೂ ಕುಪ್ರಸಿದ್ಧವಾಗಿರುವ ಕಾಂಗ್ರೆಸ್ ಮತ್ತು ಆರ್‌ಜೆಡಿಗಳಿಗೆ ತಮ್ಮೊಳಗನ್ನೂ ಒಮ್ಮೆ ನೋಡಿಕೊಂಡು ಸುಧಾರಿಸಿಕೊಳ್ಳಲು ಒತ್ತಡಗಳನ್ನು ಹೇರೀತು. ಕಾಂಗ್ರೆಸ್‌ನ ದೊಡ್ಡಣ್ಣನ ಪಾತ್ರವೂ ತಹಬಂದಿಗೆ ಬಂದೀತು. ಆದರೆ ಇದೆಲ್ಲ ಈ ಮೈತ್ರಿಕೂಟದ ನಾಯಕರ ಅಹಂ ಬಿಟ್ಟ ನಿಸ್ವಾರ್ಥ, ದೂರದೃಷ್ಟಿ ಮತ್ತು ಪರಸ್ಪರ ಉದಾರ ಹೊಂದಾಣಿಕೆಯ ರಾಜಕೀಯ ಮುತ್ಸದ್ದಿತನದ ಗುಣಗಳನ್ನು ಬೇಡುತ್ತದೆ. ನಮ್ಮ ವಿರೋಧ ಪಕ್ಷಗಳ ಇತಿಹಾಸವನ್ನು ಗಮನಿಸಿದಾಗ ಇದು ದೊಡ್ಡ ಆಸೆಯೇ ಎನಿಸದಿರದು ಎಂಬುದು ಬೇರೆಯೇ ವಿಷಯ.

('ಸಮಾಜಮುಖಿ' : ಏಪ್ರಿಲ್, ೨೦೧೮)

ನಮ್ಮ ನ್ಯಾಯಾಂಗದ ಸದ್ಯದ ಬಿಕ್ಕಟ್ಟು : ಕೆಲವು ಆಲೋಚನೆಗಳು

ಸರ್ವೋನ್ನತ ನ್ಯಾಯಾಲಯದ ನಾಲ್ವರು ನ್ಯಾಯಾಧೀಶರು ಮುಖ್ಯ ನ್ಯಾಯಾಧೀಶರ ವಿರುದ್ಧ ಬಂಡೆದಿದ್ದಾರೆ. ಅವರು ಇದನ್ನು ಬಂಡಾಯ ಎಂದು ಕರೆಯಲು ನಮ್ಮ ನ್ಯಾಯಾಂಗ ಸತ್ಸಂಪ್ರದಾಯದ ಹಿನ್ನೆಲೆಯಲ್ಲಿ ನಿರಾಕರಿಸಿರುವರಾದರೂ, ಅವರು ಈ ಮುನ್ನ ಪತ್ರಿಕಾಗೋಷ್ಠಿ ಕರೆದು ನೀಡಿರುವ ಹೇಳಿಕೆಗಳು ಮತ್ತು ದಾಖಲಿಸಿರುವ ಅಸಮಾಧಾನಗಳು ಈ ಸತ್ಸಂಪ್ರದಾಯಕ್ಕೇನೂ ಅನುಗುಣವಾಗಿಲ್ಲವಾದ್ದರಿಂದ ಇದನ್ನು ತಾಂತ್ರಿಕವಾಗಿಯಾದರೂ ಬಂಡಾಯವೆಂದು ಕರೆದರೆ ತಪ್ಪಾಗಲಾರದು. ನಾಳೆ, ಅಂದರೆ ಸೋಮವಾರ ಸರ್ವೋನ್ನತ ನ್ಯಾಯಾಲಯದ ಬಾಗಿಲುಗಳು ತೆರೆದಾಗ ಎಲ್ಲವೂ ಎಂದಿನಂತೆ ಸಾಮಾನ್ಯ ರೀತಿಯಲ್ಲಿ ನಡೆಯುವ ಸಾಧ್ಯತೆಗಳೇ ಹೆಚ್ಚಿದ್ದರೂ, ಅದು ತೋರಿಕೆಯ ಸಾಮಾನ್ಯತೆಯಾಗಿರುವ ಸಂಭವವೇ ಹೆಚ್ಚು ಎಂದು ಹೇಳಬೇಕಾಗುತ್ತದೆ. ಏಕೆಂದರೆ ನಾಲ್ವರು ನ್ಯಾಯಾಧೀಶರು ನಮ್ಮ ನ್ಯಾಯಾಡಳಿತದ ವೈಖರಿಯ ಬಗ್ಗೆ ಎತ್ತಿರುವ ಪ್ರಶ್ನೆಗಳು ಇಂದು ನಿನ್ನೆಯ ಬಿಡಿ ಪ್ರಕರಣಗಳೊಂದಿಗೆ ಹೊಂದಿರುವ ಸಂಬಂಧಗಳನ್ನು ಮೀರಿ, ನಮ್ಮ ನ್ಯಾಯಾಂಗವು ನಮಗೆ ಕಟ್ಟಿಕೊಟ್ಟಿರುವ ನ್ಯಾಯದ ಕಲ್ಪನೆಯ ಬಗ್ಗೆ ಹಲವು ಪ್ರಶ್ನೆಗಳನ್ನು ಎತ್ತುವಂತಿದೆ. ಆದರೆ ಈ ಪ್ರಶ್ನೆಗಳು ಎಷ್ಟು ಮೂಲಭೂತವಾದುವುಗಳೆಂದರೆ ಸದ್ಯದ ನ್ಯಾಯಾಂಗ ವ್ಯವಸ್ಥೆಯ ಯಾವ ಅಂಗವೂ ಅವನ್ನು ಎದುರಿಸುವುದಿರಲಿ, ಕೇಳಿಕೊಳ್ಳುವ ಸ್ಥಿತಿಯಲ್ಲೂ ಇಲ್ಲ. ಹಾಗಾಗಿಯೇ ನ್ಯಾಯಾಂಗದ ಘನತೆ–ಪಾವಿತ್ರ್ಯಗಳನ್ನು ಕಾಪಾಡುವ ಹೆಸರಿನಲ್ಲಿ ಎರಡು ವಕೀಲರ ಸಂಘಗಳು ಸಂಧಾನ–ರಾಜಿ ಪ್ರಯತ್ನಗಳಿಗೆ ಮುಂದಾಗಿವೆ. ಇವುಗಳ ಜೊತೆಗೆ ಸರ್ಕಾರವೂ ಸೇರಿದಂತೆ ನ್ಯಾಯಾಂಗ ಮತ್ತು ಅದಕ್ಕೆ ಆಧಾರವಾಗಿರುವ ಮತ್ತು ಅದನ್ನು ಆಧರಿಸಿರುವ ಇತರ ವ್ಯವಸ್ಥೆಗಳು ತೆರೆಮರೆಯಲ್ಲಿ ಇಂತಹ ಪ್ರಯತ್ನಗಳನ್ನು ನಡೆಸುತ್ತಿದ್ದರೆ ಆಶ್ಚರ್ಯವಿಲ್ಲ. ಅದೇನೇ ಇರಲಿ, ಈ ಪ್ರಕರಣದ ರಾಜಕೀಯ

ಆಯಾಮವನ್ನು ಅತ್ತ ಇರಿಸಿ (ಏಕೆಂದರೆ ಅದಿನ್ನೂ ಪೂರ್ಣವಾಗಿ ಬಿಚ್ಚಿಕೊಳ್ಳಬೇಕಿದೆ), ಇದರ ತಾತ್ವಿಕ ಆಯಾಮಗಳನ್ನು ಪರಿಶೀಲಿಸೋಣ.

ನಾಲ್ವರು ನ್ಯಾಯಾಧೀಶರು ಒಂದು ಪ್ರಕರಣದ ವಿಚಾರಣೆಗೆ ಯಾವ ನ್ಯಾಯಾಧೀಶರನ್ನು ನೇಮಿಸಬೇಕು ಎಂಬ ವಿಷಯದಲ್ಲಿ ಮುಖ್ಯ ನ್ಯಾಯಾಧೀಶರು ಹೊಂದಿರುವ ವಿವೇಚನಾಧಿಕಾರದ ದುರ್ಬಳಕೆಯ ಬಗ್ಗೆ ಬೊಟ್ಟು ಮಾಡಿದ್ದಾರೆ ಹಾಗೂ ರಾಜ್ಯ ಉನ್ನತ ನ್ಯಾಯಾಲಯಗಳಿಗೆ ಮತ್ತು ಸರ್ವೋನ್ನತ ನ್ಯಾಯಾಲಯಕ್ಕೆ ಕೆಳಗಿನ ಹಂತಗಳಿಂದ ನ್ಯಾಯಾಧೀಶರನ್ನು ಆಯ್ಕೆ ಮಾಡುವ 'ಕೊಲಿಜಿಯಂ' ವಿಧಾನದ ಅಪಾರದರ್ಶಕತೆಯ ಹಿಂದಿನ ಅಪಾಯಗಳ ಬಗ್ಗೆಯೂ ಬೊಟ್ಟು ಮಾಡಿದ್ದಾರೆ. ಇವೆರೆಡೂ ನಮ್ಮ ನ್ಯಾಯಾಲಯಗಳು ತಮ್ಮ ತೀರ್ಪುಗಳ ಪ್ರಕಾರ ವಿತರಿಸುವ ನ್ಯಾಯವನ್ನು ನಿಜವಾಗಿಯೂ ನಾವು ನ್ಯಾಯವೆಂದು ಕರೆಯಬಹುದೇ ಎಂಬ ಪ್ರಶ್ನೆಯನ್ನು ಎತ್ತುತ್ತವೆ. ಉದಾಹರಣೆಗೆ, ಯಾವುದೇ ಒಂದು ಪ್ರಕರಣದ ವಿಚಾರಣೆಗೆ ನ್ಯಾಯಾಧೀಶರ ನೇಮಕದ ವಿಷಯದಲ್ಲಿ ಈಗ ಬೊಟ್ಟು ಮಾಡಲಾಗುತ್ತಿರುವಂತೆ ಅನುಮಾನಗಳು ಹುಟ್ಟುವಂತಾದರೆ, ನ್ಯಾಯ ಎಂಬುದು ವಿಚಾರಣಾ ಪ್ರಕ್ರಿಯೆಯ ವಿವರಗಳನ್ನು ಮೀರಿ, ಸಂಬಂಧಿತ ನ್ಯಾಯಾಧೀಶರ ವ್ಯಕ್ತಿನಿಷ್ಠ ದೃಷ್ಟಿಕೋನವನ್ನು ಅವಲಂಬಿಸಿರಬಹುದು ಎಂದಾಗುತ್ತದೆ. ಆದರೆ ಇಂತಹ ಸೂಚನೆಯೇ ಮೂಲತಃ ನ್ಯಾಯ ವಿರುದ್ಧವಾದುದು ಅಲ್ಲವೆ?

ಇದೇನೂ ನಮ್ಮ ಜನಕ್ಕೆ ಗೊತ್ತಿಲ್ಲದ ವಿಷಯವೇನಲ್ಲ. ಅದರಂತೆ ಅವರು ತಮ್ಮ ವಕೀಲರ 'ಮಾರ್ಗದರ್ಶನ'ದಲ್ಲಿ ದಾವೆ ಹೂಡುವುದಕ್ಕೆ 'ಸೂಕ್ತ' ನ್ಯಾಯಾಧೀಶರಿಗಾಗಿ 'ತಕ್ಕ' ದಿನವನ್ನು ಆಯ್ಕೆಮಾಡಿಕೊಂಡು ತಮ್ಮ 'ಅದೃಷ್ಟ'ವನ್ನು ಪರೀಕ್ಷಿಸಿಕೊಳ್ಳುವ ಪರಿಪಾಠವೂ ಇದೆ! ನಮ್ಮ ನ್ಯಾಯಾಧೀಶರುಗಳೂ ಕೆಲವು ಪ್ರಕರಣಗಳಿಂದ ಆರಂಭದಿಂದಲೋ ಅಥವಾ ಒಂದು ಹಂತದ ನಂತರವೋ ವಿಚಾರಣೆಯ ಜವಾಬ್ದಾರಿಯಿಂದ ಯಾವುದೇ ವಿವರಣೆ ನೀಡದೆ ಹಿಂದಕ್ಕೆ ಸರಿಯುವ ವರ್ತನೆ ಸೂಚಿಸುವುದೂ ಇದನ್ನೇ. ವಸ್ತುನಿಷ್ಠ ನ್ಯಾಯ ಎಂಬುದು ಒಂದು ಕಾನೂನಾತ್ಮಕ ಪರಿಕಲ್ಪನೆ ಅಥವಾ ಹೆಚ್ಚೆಂದರೆ ಒಂದು ಸಾಧ್ಯತೆಯೇ ಹೊರತು ಅದು ನಮ್ಮ ನ್ಯಾಯಾಂಗದಲ್ಲಿ ಸ್ವಯಂ ಸಿದ್ಧವಾಗಿರುವಂತಹುದಲ್ಲ. ಕೆಳ ನ್ಯಾಯಾಲಯ ಕೊಟ್ಟ ನ್ಯಾಯವನ್ನು ಮೇಲಿನ ನ್ಯಾಯಾಲಯಗಳು ಪರಿಶೀಲಿಸಿ ಅದನ್ನು ರದ್ದುಪಡಿಸುವ ಅವಕಾಶವಿರುವುದೂ ಮತ್ತು ಅಂತಹ ಸಂದರ್ಭದಲ್ಲಿ ರದ್ದಾದ ತೀರ್ಪು ನೀಡಿದ ಕೆಳ ನ್ಯಾಯಾಲಯದ ನ್ಯಾಯಾಧೀಶರಿಂದ ಒಂದು ವಿವರಣೆಯನ್ನೂ ಕೇಳುವಂತಿಲ್ಲ ಎಂಬ ಸಂಗತಿ ಸೂಚಿಸುವುದೂ ಇದನ್ನೇ ಅಲ್ಲವೆ? ನ್ಯಾಯ ಎಂಬುದು ನಾವು ಹೇಗೆ ನ್ಯಾಯಾಂಗದ ಪರಿಕರಗಳನ್ನು 'ನಿರ್ವಹಿಸು'ವೆವೋ ಹಾಗೆ ದೊರೆಯುವ ವಸ್ತು!

ಕೊಲಿಜಿಯಂ ವಿಧಾನದ ಅಪಾರದರ್ಶಕತೆ ಕುರಿತ ಅಸಮಾಧಾನದ ಮಾತುಗಳೂ ನ್ಯಾಯದ ಈ ಕಲ್ಪಿತ ಪರಿಕಲ್ಪನೆಯ ದೋಷಗಳಿಂದಲೇ ಹೊಮ್ಮಿದವು. ಯಾವ

ನ್ಯಾಯಾಧೀಶರನ್ನು ಏಕೆ ಆಯ್ಕೆ ಮಾಡಲಾಯಿತು ಅಥವಾ ಆಯ್ಕೆ ಮಾಡಲಾಗದು ಎಂಬ ಕಾರಣಗಳನ್ನು ದಾಖಲಿಸಿದರೆ ಆಗಬಹುದಾದ ತೊಂದರೆಗಳಿಗೆ ಇರುವ ಕಾರಣಗಳಾದರೂ ಏನು? ಆ ದಾಖಲೆಗಳು ಬರವಣಿಗೆಯಲ್ಲಿರುವುದರಿಂದ, ಬರವಣಿಗೆಯಲ್ಲಿ ಮೂರ್ತರೂಪ ಪಡೆದಿರುವ ಅಭಿಪ್ರಾಯಗಳನ್ನು ಒಬ್ಬೊಬ್ಬರೂ ತಮ್ಮದೇ ವ್ಯಕ್ತಿನಿಷ್ಠ ರೀತಿಯಲ್ಲಿ ಅರ್ಥೈಸಿ, ಪ್ರಶ್ನೆ ಮಾಡಿ, ರಂಪ ಎಬ್ಬಿಸಿ, ನ್ಯಾಯಾಂಗದ ವಿಶ್ವಾಸಾರ್ಹತೆಯನ್ನೇ ಹಾಳು ಮಾಡಬಹುದೆಂಬ ಆತಂಕವೇ ತಾನೆ ಅವನ್ನು ದಾಖಲಿಸದೆ ಇರಲು ಕಾರಣ? ವ್ಯಕ್ತಿನಿಷ್ಠ ಅರ್ಥೈಸುವಿಕೆಗೆ ಕಾನೂನು ಮಾರ್ಗದರ್ಶಕವಾಗಿರುವುದಿಲ್ಲವೆ ಎಂಬ ಪ್ರಶ್ನೆಯನ್ನು ಯಾರಾದರೂ ಕೇಳಬಹುದು. ಆದರೆ ಕಾನೂನು ಕೂಡ ಬರವಣಿಗೆಯ ರೂಪದಲ್ಲೇ ಇರುವುದಲ್ಲವೆ? ಹಾಗಾಗಿ ಅದನ್ನು ಕೂಡ ಭಾಷಾಪಾಂಡಿತ್ಯದಿಂದ, ವಾಕ್ಚಾತುರ್ಯದಿಂದ ವ್ಯಕ್ತಿನಿಷ್ಠ ನಿರೂಪಣೆಗೆ ಒಗ್ಗಿಸಬಹುದಲ್ಲವೆ? ಒಂದು ನ್ಯಾಯಾಲಯದ ತೀರ್ಪನ್ನು ಮೇಲಿನ ಇನ್ನೊಂದು ನ್ಯಾಯಾಲಯ ರದ್ದು ಪಡಿಸಲು ಅಥವಾ ಮಾರ್ಪಡಿಸಲು ಸಾಧ್ಯವಾಗುವುದು, ಕಾನೂನೂ ಸೇರಿದಂತೆ ನ್ಯಾಯಾಂಗ ಪರಿಕರಗಳ ವೈವಿಧ್ಯಮಯ 'ನಿರ್ವಹಣೆ'ಗೆ ಅವಕಾಶವಿರುವುದೇ ಕಾರಣವಲ್ಲವೇ?.

ಹಾಗಾದರೆ ಇದನ್ನೆಲ್ಲ ನ್ಯಾಯ ಎಂದು ಕರೆಯಬಹುದೆ? ಬ್ರಿಟಿಷ್ ಪ್ರಭುತ್ವದ ಮೂಲಕ ನಾವು ಪಡೆದ ಅದ್ಭುತ ಉಡುಗೊರೆ ಎಂದು ಕರೆಯಲಾಗುವ ಈ ಆಂಗ್ಲೋ-ಸ್ಯಾಕ್ಸನ್ ನ್ಯಾಯಪದ್ಧತಿಯನ್ನು ಗಾಂಧಿ ಕಟುವಾಗಿ ಟೀಕಿಸಿದ್ದರು. ಸೂಕ್ಷ್ಮಮತಿಗಳಿಗೆ ಮಾತ್ರ ತಟ್ಟಬಲ್ಲ ಈ ಸಂಬಂಧದ ಅವರ ಈ ಮಾತು ನಮ್ಮ ನ್ಯಾಯಪದ್ಧತಿಯ ಮೂಲ ಅಸಂಬದ್ಧತೆಯ ಬಗ್ಗೆ ಎಲ್ಲವನ್ನೂ ಹೇಳುತ್ತದೆ: 'ಸಾರ್ವಜನಿಕವಾಗಿ ಇಬ್ಬರು ಜಗಳವಾಡುವುದೇ ಅಸಭ್ಯ. ಅದನ್ನು ಅದಕ್ಕೆ ಸಂಬಂಧವೇ ಇರದ ಮೂರನೆಯ ಮತ್ತು ನಾಲ್ಕನೆಯವರ ಮೂಲಕ (ವಕೀಲರು ಮತ್ತು ನ್ಯಾಯಾಧೀಶರು) ಬಗೆಹರಿಸಿಕೊಳ್ಳುವುದು ಇನ್ನೂ ಅಸಭ್ಯ'. ಸಂಬಂಧಪಡದವರು ಎಂಬುದರ ಮೂಲಕ ಗಾಂಧಿ ಹೇಳುತ್ತಿರುವುದೇನೆಂದರೆ, ವ್ಯಾಜ್ಯವನ್ನು ಎರಡೂ ಪಕ್ಷದವರು ವ್ಯಾಜ್ಯಕ್ಕೆ ಸಾವಯವವಾಗಿ/ಜೀವಂತವಾಗಿ ಸಂಬಂಧಪಡದವರ ಮುಂದೆ ತಮಗೆ ಅನುಕೂಲವಾಗುವಂತೆ ಹೇಗಾದರೂ ಪ್ರಸ್ತುತಪಡಿಸಿ 'ನ್ಯಾಯ' ಪಡೆಯಲು ಪ್ರಯತ್ನಿಸಬಹುದು. ಸಾಕ್ಷ್ಯ ಎಂಬುದು ಇಲ್ಲಿ ವ್ಯಾಜ್ಯದ ಸಂದರ್ಭದ ಜೀವಂತಿಕೆಯನ್ನು ಕಳೆದುಕೊಂಡು, ವಾದ ಚಾತುರ್ಯಗಳ ಮೂಲಕ ಹೇಗೆ ಬೇಕಾದರೂ ಅರ್ಥ ಪಡೆಯುವಷ್ಟು ಹಳಸಲೂ, ದುರ್ಬಲವೂ, ವಿರೂಪಿಯೂ ಆಗಿರಬಲ್ಲುದು. ಇನ್ನು ವರ್ಷಗಟ್ಟಲೆ ಎಳೆಯುವ ಮೊಕದ್ದಮೆಗಳಲ್ಲಂತೂ ಈ ಅಪಾಯ ಇನ್ನೂ ಹೆಚ್ಚು. ಹಾಗಾಗಿ ಆಂಗ್ಲೋ ಸ್ಯಾಕ್ಸನ್ ನ್ಯಾಯಪದ್ಧತಿಯಲ್ಲಿ ನ್ಯಾಯದಾನ ಎಂಬುದು ಹೊರಗಣ ಮಧ್ಯವರ್ತಿಗಳ ನ್ಯಾಯದಾನವೇ ಆಗಿದೆ. ಆದರೂ ನಾವೇಕೆ ಇದನ್ನು ಪವಿತ್ರಗೋವಿನಂತೆ ರಕ್ಷಿಸಿಕೊಂಡು ಬರುತ್ತಿದ್ದೇವೆ? ಇದು ಪರ್ಯಾಯವೇ ಇಲ್ಲದಷ್ಟು ಅನಿವಾರ್ಯವಾಗಿಬಿಟ್ಟಿದೆಯೇ?

ಗೆದ್ದವನು ಸೋತ.... ಸೋತವನು ಸತ್ತ...

ನ್ಯಾಯ ಕೇಳಿ ನ್ಯಾಯಾಲಯಗಳಿಗೆ ಹೋದವರ ಬಗ್ಗೆ ನಮ್ಮಲ್ಲಿ ಸಾಕಷ್ಟು ಹಳೆಯದಾದ ಒಂದು ನಾಣ್ಣುಡಿ ಇದೆ. ಅದು 'ಗೆದ್ದವನು ಸೋತ, ಸೋತವನು ಸತ್ತ' ಎಂದು. ಬಹುಜನರ ಅನುಭವದ ಆಧಾರವಿಲ್ಲದೆ ಇಂತಹ ನಾಣ್ಣುಡಿಯೊಂದು ಚಾಲ್ತಿಗೆ ಬರಲಾರದು. ಈ ನಾಣ್ಣುಡಿ ಇಂದೂ ಚಾಲ್ತಿಯಲ್ಲಿದೆ. ಹಾಗೇ ಈ ನಾಣ್ಣುಡಿ ಸಾರಾಂಶದಲ್ಲಿ ಹೇಳುವುದಾದರೂ ಏನು? ನಮ್ಮ ನ್ಯಾಯಾಂಗ ಪದ್ಧತಿಯಲ್ಲಿ ನಾವು ಅಂತಿಮವಾಗಿ ಅನುಭವಿಸುವುದು ಸೋಲು ಅಥವಾ ಸಾವು ಎಂದಲ್ಲವೆ? ಹಾಗಾದರೆ ನ್ಯಾಯಾಲಯ ನೀಡುವ ನ್ಯಾಯದ ಮೌಲಿಕತೆಯಾದರೂ ಏನು? ಮೌಲ್ಯವಲ್ಲದ ಇಂತಹ ನ್ಯಾಯ ನಿಜಾರ್ಥದಲ್ಲಿ, ಅಂದರೆ ಒಂದು ಸಾಮಾಜಿಕ ಆವರಣದಲ್ಲಿ ಯಾವ ನ್ಯಾಯಪ್ರಜ್ಞೆಯನ್ನು ಹುಟ್ಟಿಸೀತು? ಹಾಗಾಗಿಯೇ ನಮ್ಮ ನ್ಯಾಯಾಲಯಗಳಿಂದ ನ್ಯಾಯದಾನದ ಹೆಸರಿನಲ್ಲಿ ಪುಂಖಾನುಪುಂಖವಾಗಿ ತೀರ್ಪುಗಳು ಬರುತ್ತಿದ್ದರೂ. ಅನ್ಯಾಯಗಳ ಸಂಖ್ಯೆಯೇನೂ ಕಡಿಮೆಯಾಗುತ್ತಿಲ್ಲ. ಬದಲಿಗೆ ಒಂದೇ ಸಮನೆ ಹೆಚ್ಚುತ್ತಲೇ ಇವೆ. ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳಿರುವಂತೆ ತೋರುತ್ತದೆ. ಒಂದು: ಅನ್ಯಾಯ ಮಾಡಿದವನೂ ತನ್ನದೇ ನ್ಯಾಯ ಎಂದು ವಾದಿಸಲು ಈ ವ್ಯವಸ್ಥೆಯಲ್ಲಿ ಅವಕಾಶವಿದ್ದು, ಆತನಿಗೆ ತಾನು ಮೊಕದ್ದಮೆಯನ್ನು ಗೆಲ್ಲುವ ಸಾಧ್ಯತೆಯೂ ಇದೆ ಎಂದು ಭಾವಿಸಲು ಅವಕಾಶವಿರುವುದು. ಇನ್ನೊಂದು: ನ್ಯಾಯದ ಕಲ್ಪನೆ, ನೀತಿಯ ಕಲ್ಪನೆಯಿಂದ ಬೇರ್ಪಟ್ಟು ಕಾನೂನು ಸಂಬಂಧಿತ ಪರಿಕಲ್ಪನೆಯಾಗಿ ಮಾರ್ಪಟ್ಟಿರುವುದರಿಂದ ಮತ್ತು ಆಡಳಿತಕ್ಕಾಗಿ ಎಂದು ನಾವು ಒಂದು ಕಾನೂನಿನ ಅರಣ್ಯವನ್ನೇ ಸೃಷ್ಟಿಸಿಕೊಂಡಿರುವುದರಿಂದ ನ್ಯಾಯಾನ್ಯಾಯಗಳ ಕಲ್ಪನೆಯೇ ಅಸ್ಪಷ್ಟವಾಗಿದೆ. ನ್ಯಾಯವು ಕಾನೂನು ಪಂಡಿತರ ವ್ಯಾಖ್ಯಾನಗಳ ಮೂಲಕ ಅಭಿವ್ಯಕ್ತಿಗೊಳ್ಳುವ ಒಂದು ಸಾಪೇಕ್ಷ ಮೌಲ್ಯವಾಗಿಬಿಟ್ಟಿದೆ.

ಹಾಗೆ ನೋಡಿದರೆ ಈ ಎರಡೂ ಕಾರಣಗಳು ಒಂದೇ ಮೂಲದವು. ಕಾನೂನುಗಳ ವ್ಯಾಖ್ಯಾನದ ಪೈಪೋಟಿಯಲ್ಲಿ ನ್ಯಾಯ ಹುಟ್ಟುವಂತಾಗಿರುವುದರಿಂದ ಅನ್ಯಾಯ ಎಸಗಿದವನೂ ನ್ಯಾಯದ ಆಸೆ ಇಟ್ಟುಕೊಳ್ಳುವುದು ಸಾಧ್ಯವಿದೆ. ಅಂದರೆ ಅನ್ಯಾಯವೆಂಬುದು ಆಗುವಂತಹುದಲ್ಲ; ಹೊಸದಾಗಿ ಹುಟ್ಟುವಂತಹದ್ದು. ಈ ವಿಪರ್ಯಾಸದ ಮೂಲವಿರುವುದು ನಾವು ನಮ್ಮ ರಾಷ್ಟ್ರವನ್ನು, ಆ ಮೂಲಕ ನಮ್ಮ ಸಮಾಜವನ್ನು ಕಟ್ಟಿಕೊಂಡಿರುವ ಬಗೆಯಲ್ಲಿ. ರಾಷ್ಟ್ರವೆಂಬ ಆಧುನಿಕ ಪರಿಕಲ್ಪನೆ ಮೂಡಿಬಂದದ್ದೇ ಹಾಗೆ, ಕೆಲವು ನಿರ್ದಿಷ್ಟ ಸಾಮಾನ್ಯ ಅಂಶಗಳುಳ್ಳ (ಉದಾ: ಭಾಷೆ, ಪರಂಪರೆ, ಇತಿಹಾಸ, ಧರ್ಮ ಇತ್ಯಾದಿ) ಎಲ್ಲ ಭೂಭಾಗಗಳನ್ನೂ ಒಂದು ಆಡಳಿತ ಕೇಂದ್ರಕ್ಕೆ ಕಟ್ಟಿಹಾಕಿ ಭಾವೈಕ್ಯತೆಯನ್ನು ಕಾಪಾಡಿಕೊಳ್ಳುವುದರ ಮೂಲಕ. ಈ ಭಾವೈಕ್ಯತೆ ಎಂಬುದೂ ಒಂದು ಹೊಸ ಮಾನಸಿಕ ರಚನೆಯೇ. ಅದು ಪ್ರಾಚೀನವೇ ಆಗಿದ್ದರೆ ಈಗ ರಾಷ್ಟ್ರವಾಗಿರುವ ವಿವಿಧ ಭೂಭಾಗಗಳೆಲ್ಲ ಏಕೆ ಬೇರೆ ಬೇರೆಯಾಗಿರುತ್ತಿದ್ದವು? ಒಂದು ಸಂದರ್ಭದ ಒಂದು ರೀತಿಯ ಅಧಿಕಾರ ರಾಜಕಾರಣದ ಒತ್ತಡಗಳು ಅವನ್ನು ಬೇರೆ

ಬೇರೆಯಾಗಿಟ್ಟಿದ್ದರೆ ಇನ್ನೊಂದು ರೀತಿಯ ಅಧಿಕಾರದ ರಾಜಕಾರಣ ಅವನ್ನೆಲ್ಲ ಒಂದು ಕೇಂದ್ರಕ್ಕೆ ತಂದಿದೆಯಷ್ಟೆ.

ಆಧುನಿಕ ಕಾಲದ ಯುದ್ಧಗಳು ಸಾಮೂಹಿಕ ಪ್ರಾಣ ಮತ್ತು ಆಸ್ತಿನಾಶಗಳ ವಿವಿಧ ಶಸ್ತ್ರಾಸ್ತ್ರ ಸಾಧನ-ಸಲಕರಣೆಗಳನ್ನು ಕಂಡುಕೊಂಡಿದ್ದರಿಂದ, ಸಣ್ಣ ಸಣ್ಣ ಭೂಭಾಗಗಳು ಸಾಮೂಹಿಕ ಸರ್ವನಾಶದ ಆತಂಕಗಳನ್ನು ತಡೆಯಲಾಗದೆಂಬ ಅರಿವಿನಲ್ಲಿ ತಮ್ಮ ಪರಸ್ಪರ ಹಳೆಯ ಸಂಬಂಧಗಳನ್ನು ನೆನಪಿಸಿಕೊಂಡು ಒಗ್ಗೂಡುವ ಪ್ರವೃತ್ತಿ ಸಾಮೂಹಿಕ ನಾಶದ ಶಸ್ತ್ರಾಸ್ತ್ರಗಳ ತವರಾದ ಯೂರೋಪ್‌ನಲ್ಲಿ ಆರಂಭವಾಗಿ ಅದು ರಾಷ್ಟ್ರದ ಪರಿಕಲ್ಪನೆಗೆ ನಾಂದಿ ಹಾಡಿತು. ಈ ಒಗ್ಗೂಡುವಿಕೆ ಸರ್ವನಾಶದ ಭಯದಲ್ಲಿ ಆದುದರಿಂದ ಆ ಒಗ್ಗೂಡುವಿಕೆ ಸುಲಭವಾಗಿ ಒಡೆದುಹೋಗದಂತೆ ಅದನ್ನು ಬಲವಾಗಿ ಬಂಧಿಸುವ ಉಪಾಯಗಳ ಬಗೆಗೆ ಆಲೋಚನೆ ಶುರುವಾಗಿ ಅಂತಹ ಆಲೋಚನೆಗಳ ಫಲಗಳೇ ಭಾವೈಕ್ಯತೆಯ ಮಂತ್ರ ಮತ್ತು ಈ ಮಂತ್ರಕ್ಕೆ ಶಬ್ದ-ವ್ಯಾಕರಣ ಒದಗಿಸಬಲ್ಲ ಕಾನೂನುಗಳ ಜಾಲ ಮತ್ತು ಅದಕ್ಕೆ ಒಂದು ದೀಕ್ಷೆ ನೀಡಬಲ್ಲ ಸಂವಿಧಾನ ರಚನೆ.

ಇದು ರಾಷ್ಟ್ರದ ಹೆಸರಿನಲ್ಲಿ ಆಧುನಿಕ ಮನುಷ್ಯ ತನ್ನನ್ನು ತಾನೇ ಕಾನೂನುಗಳ ಬಲೆಯಲ್ಲಿ ಬಂಧಿಸಿಕೊಂಡ ದುರಂತ ಕಥೆ. ಇಲ್ಲಿ ಹಿಂದೆ, ರಾಜಪ್ರಭುತ್ವಗಳ, ಪಾಳೇಗಾರರ ಕಾಲದಲ್ಲಿ ಕಾನೂನುಗಳು ಇರಲಿಲ್ಲವೇ ಎಂದು ಕೇಳಬಹುದು. ಆದರೆ ಆಗ ಪ್ರಭುತ್ವ ಹೀಗೆ ಪ್ರಜಾಪ್ರಭುತ್ವದ ಹೆಸರಿನಲ್ಲಿ ಜನರ ಬದುಕಿನ ಪ್ರತಿ ವಿವರಕ್ಕೂ ಪ್ರವೇಶ ಪಡೆದಿರಲಿಲ್ಲ ಮತ್ತು ಆ ಪ್ರಭುತ್ವಕ್ಕೆ ಇಷ್ಟೊಂದು ವಿಶಾಲವಾದ ಭೂವ್ಯಾಪ್ತಿಯೂ ಇರುತ್ತಿರಲಿಲ್ಲ. ಈಗ ಜನ ತಮ್ಮ ಬದುಕಿನ ಪ್ರತಿಯೊಂದು ವಿವರಕ್ಕೆ ಸಂಬಂಧಿಸಿಯೂ ಪ್ರಭುತ್ವದ ಮೇಲೆ ಎಷ್ಟು ಅವಲಂಬಿತರಾಗಿದ್ದಾರೆಂದರೆ, ಪ್ರಭುತ್ವ ಎಂದರೆ ಅನುಕೂಲಕ್ಕಿಂತ ಪ್ರತಿಕೂಲ ವ್ಯವಸ್ಥೆಯೇ ಆಗಿಬಿಟ್ಟಿದೆ. ಇದಕ್ಕೆ ಮುಖ್ಯ ಕಾರಣ, ರಾಷ್ಟ್ರ ಉಳಿದುಕೊಳ್ಳಬೇಕಾದ ಜಾಗತಿಕ ಪೈಪೋಟಿಯಲ್ಲಿ ಸ್ಪರ್ಧಾತ್ಮಕವಾಗಿ ಬಲಿಷ್ಠಗೊಳ್ಳಲು ತನ್ನ ಆರ್ಥಿಕತೆಯನ್ನು ವೃದ್ಧಿಸಿಕೊಳ್ಳುವ ಉದ್ದೇಶದಿಂದ ಪ್ರತಿ ಪ್ರಜೆಗೂ ಆ ಅಭಿವೃದ್ಧಿ ಸುಖದ ಹುಚ್ಚು ಹತ್ತಿಸಿರುವುದೇ ಆಗಿದೆ. ಈ ಹುಚ್ಚು, ಸಾಮಾಜಿಕ ಅಸ್ತವ್ಯಸ್ತತೆಗಳನ್ನು ಉಂಟು ಮಾಡುವುದನ್ನು ತಡೆಯಲು ಕಾನೂನುಗಳು ಬೇಡವೇ? ಬೇಕು. ಆದರೆ ಇವೆಲ್ಲ ಹೊಮ್ಮುವುದು ಆಡಳಿತ ಕೇಂದ್ರದ ಪ್ರಜ್ಞೆಯಿಂದ ಮತ್ತು ವಿಶಾಲ ಭೂಪ್ರದೇಶದ ಎಲ್ಲ ಜನಸಮುದಾಯಗಳಿಗೂ ಅನ್ವಯವಾಗುವಂತಹ 'ಪರಿ-ಭಾಷೆ'ಯಲ್ಲಿ. (ಅರ್ಥವಾಗುವ ಭಾಷೆಯಲ್ಲಿ ಅಲ್ಲ ಎಂಬರ್ಥದಲ್ಲಿ) ಹಾಗಾಗಿ ಈ 'ಪರಿ' ಮತ್ತು 'ಭಾಷೆ'ಗಳ ಅರ್ಥೈಸುವಿಕೆಗೆ ಆಡಳಿತ ಕೇಂದ್ರದ ಪ್ರಜ್ಞೆಯ ಮಾತುಗಳಲ್ಲಿ ತರಬೇತು ಹೊಂದಿದ ಮಧ್ಯವರ್ತಿಗಳ ಅಗತ್ಯ ಬೀಳುತ್ತದೆ. ಇವರೇ ನಮ್ಮ ಆಧುನಿಕ ನ್ಯಾಯಾಂಗದ ಆಧಾರ ಸ್ತಂಭಗಳು: ನ್ಯಾಯಾಧೀಶರು ಮತ್ತು ವಕೀಲರು!

ಈ ಆಧುನಿಕ ನ್ಯಾಯದಾನ ಪದ್ಧತಿಯ ತೊಂದರೆ ಇದಷ್ಟೇ ಅಲ್ಲ. ವಿಶಾಲ ಭೂಪ್ರದೇಶವನ್ನೊಳಗೊಂಡ ಈ ರಾಷ್ಟ್ರ ವ್ಯವಸ್ಥೆಯ ಆಡಳಿತ ಕೇಂದ್ರಗಳು ಕೆಲವೇ ಕೆಲವು: ನಿರ್ಣಾಯಕ ಅಧಿಕಾರದ ದೃಷ್ಟಿಯಿಂದ ಮುಖ್ಯವಾಗಿ ಎರಡೇ: ರಾಷ್ಟ್ರ

ರಾಜಧಾನಿ ಮತ್ತು ರಾಜ್ಯ ರಾಜಧಾನಿ. ಅಂದರೆ ನಮ್ಮ ನ್ಯಾಯ ಪದ್ಧತಿಯಲ್ಲಿ ಪ್ರಜೆಗೆ ಎದುರಾಗುವ ತೊಂದರೆಗಳು ಮೂರು ನೆಲೆಗಳಲ್ಲಿವೆ: ಕಾನೂನಿನ ಪರಿ, ಭಾಷೆ, ವಿಶೇಷಜ್ಞ ಮಧ್ಯವರ್ತಿಗಳ ಅಗತ್ಯ (ಹಾಗೂ ವೆಚ್ಚ) ಮತ್ತು ಭೌತಿಕ ದೂರ. ಈ ಎಲ್ಲ ಕಾರಣಗಳಿಂದಾಗಿ ಯಾವುದೇ ವಿವಾದ, ವ್ಯಾಜ್ಯ ಅಥವಾ ಅಪರಾಧವು ನ್ಯಾಯ ನಿರ್ಣಯದ ಮೊದಲ ಹಂತಕ್ಕೆ ಹೋಗುವಷ್ಟರಲ್ಲೇ ಅಸ್ಪಷ್ಟತೆಗೆ, ಸ್ಥೂಲತೆಗೆ, ಹಲವು ಅನಿರ್ದಿಷ್ಟತೆಗಳಿಗೆ ಸಿಕ್ಕಿ ನ್ಯಾಯ ಬೇಡುವವನು ನ್ಯಾಯ ಪಡೆಯುವ ಖಚಿತ ಭರವಸೆಯನ್ನು ಕಳೆದುಕೊಂಡು ಪರಿತಪಿಸುವಂತಾಗುತ್ತದೆ. ನ್ಯಾಯ ಎನ್ನುವುದು ಒಂದು ಅಸ್ಪಷ್ಟ ಪರಿಕಲ್ಪನೆಯಾಗಿ ಇವೆಲ್ಲವೂ ಬಹುಬಾರಿ ಸಾಮಾನ್ಯ ಪ್ರಜೆಗೆ ಬಹು ಭಾರ ಎನ್ನಿಸಿ, ಆತ ನ್ಯಾಯ ಪಡೆಯುವ ತಂಟೆಗೇ ಹೋಗದೆ ಅನ್ಯಾಯವನ್ನು ನುಂಗಿಕೊಂಡು ಅಶಾಂತನಾಗುವುದು ಸಾಮಾನ್ಯವೇ ಆಗಿದೆ. ಇಂದು ನಾವು ದೇಶದಲ್ಲಿ ಕಾಣುತ್ತಿರುವುದು ಈ ಪರಿಸ್ಥಿತಿಯನ್ನೇ. ಇತ್ತೀಚೆಗೆ ನಾಲ್ವರು ನ್ಯಾಯಾಧೀಶರು ಪತ್ರಿಕಾ ಗೋಷ್ಠಿ ಕರೆದು ವ್ಯಕ್ತಪಡಿಸಿರುವ ಆತಂಕಗಳ ನಿಜಮೂಲವಿರುವುದು ಇಲ್ಲಿಯೇ. ಹಾಗೇ ಈ ನ್ಯಾಯಾಧೀಶರು ಏನನ್ನೂ ಸ್ಪಷ್ಟವಾಗಿ ಹೇಳದೆ ಬೇಜವಾಬ್ದಾರಿತನ ಪ್ರದರ್ಶಿಸಿದ್ದಾರೆ ಎಂದು ಕೆಲವು ವಲಯಗಳಲ್ಲಿ ಅಭಿಪ್ರಾಯ ಮೂಡಿರಲೂ ಇದೇ ಕಾರಣವಾಗಿದೆ. ಈ ನ್ಯಾಯಾಧೀಶರು ನಮ್ಮ ನ್ಯಾಯದಾನ ಪದ್ಧತಿ ರಚಿತವಾಗಿರುವ ರೀತಿ-ನೀತಿಗಳ ಮತ್ತು ಅವು ಆಧಾರಗೊಂಡಿರುವ ಸಾಂಸ್ಥಿಕ ರಚನೆಗಳ ದೌರ್ಬಲ್ಯಗಳ ಕಡೆ ಗಮನ ಕೊಡದೆ ಅವನ್ನು ಸಾರಾಸಗಟಾಗಿ ಒಪ್ಪಿಕೊಂಡು, ಇರುವ ಈ ಅನ್ಯಾಯಜನಕ ವ್ಯವಸ್ಥೆಯಲ್ಲೇ ರಿಪೇರಿ ಕೆಲಸಕ್ಕೆ ಮುಂದಾಗಿದ್ದಾರೆ. ಇದಕ್ಕೆ ಆಧುನಿಕತೆ ಎಲ್ಲ ಕ್ಷೇತ್ರಗಳಲ್ಲೂ ಹುಟ್ಟಿಸಿರುವ ಬೇರೆ ಪರ್ಯಾಯವಿಲ್ಲ (TINA : There Is No Alternative) ಎಂಬ ಭ್ರಮಾ ಕಲ್ಪನೆಯೇ ಕಾರಣವೆನಿಸುತ್ತದೆ.

ಇಂದು ನಮಗೆ ಬೇಕಾದ ನ್ಯಾಯಾಂಗದ ರೂಪುರೇಷೆಗಳು

ಹಾಗಾದರೆ ಈ ಎಲ್ಲ ತೊಂದರೆಗಳನ್ನು ನಿವಾರಿಸಲು ಯಾವುದು ಪರ್ಯಾಯ?

ಈ ತೊಂದರೆಗಳನ್ನು ಉಂಟು ಮಾಡಿರುವ ಕಾರಣಗಳ ನಿವಾರಣೆಯೇ ನಮಗೆ ಪರ್ಯಾಯದ ಒಂದು ಕಲ್ಪನೆಯನ್ನು ಒದಗಿಸುತ್ತದೆ. ಮೊದಲನೆಯದಾಗಿ ನಾವು ನಮ್ಮ ರಾಷ್ಟ್ರ ಕಲ್ಪನೆಯನ್ನು ಕಟ್ಟಿಕೊಂಡಿರುವ ರೀತಿ ನೀತಿಗಳೇ ಎಲ್ಲ ತೊಂದರೆಗಳ ಮೂಲ. ಇಷ್ಟು ವೈವಿಧ್ಯಮಯ ಪರಂಪರೆ, ಸಂಪ್ರದಾಯ, ಭಾಷೆ, ಸ್ಮೃತಿಗಳಿರುವ ಇಷ್ಟು ವಿಶಾಲ ಜನಸ್ತೋಮವನ್ನು ಒಂದು ಅಧಿಕಾರ ಕೇಂದ್ರಕ್ಕೆ ಇಷ್ಟು ಬಿಗಿಯಾಗಿ ಬಂಧಿಸಿ ರೂಪಿಸಿರುವ ರಾಷ್ಟ್ರದ ರಾಜಕಾರಣ ಮೂಲತಃ ಅಧಿಕಾರದಾಹಿ ಮಾತ್ರ ಆಗಿರಬಲ್ಲುದು. ಇದು ಹೊರರೂಪದಲ್ಲಿ ಪ್ರಜಾತಾಂತ್ರಿಕವಾಗಿ ಕಂಡರೂ ಒಳಗೆ ಅದು ಒಂದಲ್ಲ ಒಂದು ತತ್ವದ ಹೆಸರಿನಲ್ಲಿ ಸರ್ವಾಧಿಕಾರಿಯೇ ಆಗಿರಬಲ್ಲುದು. ಜೊತೆಗೆ ಈಗ ಭಾರತವೆಂದು ರಾಜಕೀಯವಾಗಿ ರಚಿಸಲ್ಪಟ್ಟಿರುವ ಈ ಭೂಭಾಗ ಎಂದೂ

ಏಕಕೇಂದ್ರಿತವಾಗಿರಲಿಲ್ಲ. ಹಾಗಾಗಿ ಈ ರಾಷ್ಟ್ರ ಕಲ್ಪನೆ ನಮ್ಮ ಜನರ ಜಾಯಮಾನಕ್ಕೇ ವಿರುದ್ಧವಾದದ್ದು. ಇದು ರಚಿತವಾದ ಸಂದರ್ಭದ ಹೊಸ ಹುರುಪಿನಲ್ಲಿ ಮತ್ತು ಇದರ ರಚನೆಗೆ ಕಾರಣರಾದ ನಾಯಕರ ವ್ಯಕ್ತಿತ್ವಗಳ ಉದಾರತೆ ಮತ್ತು ಘನತೆಗಳಲ್ಲಿ ನಂಬಿಕೆ ಇಟ್ಟ ಜನ ನಮ್ಮ ರಾಷ್ಟ್ರ ಸ್ವರೂಪವನ್ನು ಸ್ವಾಗತಿಸಿದರು ಮತ್ತು ಒಪ್ಪಿಕೊಂಡರು. ಆದರೆ ಕಳೆದ ಆರು ದಶಕಗಳಿಗೂ ಹೆಚ್ಚಿನ ಕಾಲದ ಅವಧಿಯಲ್ಲಿ ಈ ರಾಷ್ಟ್ರ ವ್ಯವಸ್ಥೆ ಜಾಗತಿಕವಾಗಿ ಭದ್ರವೂ, ಬಲಿಷ್ಠವೂ ಆಗುವ ಅನಿವಾರ್ಯತೆಯಲ್ಲಿ ತನ್ನ ಹೊಸ ಹೊಸ ಆಶೋತ್ತರಗಳಿಗೆ ತಕ್ಕಂತೆ ಬೆಳೆದ ಜಟಿಲ ರೀತಿಯಲ್ಲಿ ಪ್ರಜೆಯೇ ಕಾಣದಂತಾಗಿ ಅನೇಕ ತೊಂದರೆಗಳನ್ನೂ, ಸಂಕಷ್ಟಗಳನ್ನೂ ನಮಗೆ ಕಾಣಿಸತೊಡಗಿದೆ.

ಇಂತಹ ಗೊಂದಲಮಯ ಪರಿಸ್ಥಿತಿಯಲ್ಲಿ ಒಂದು ರಾಷ್ಟ್ರದ ಸ್ಥಿರತೆ ನಿಂತಿರುವುದು ಅದರ ನ್ಯಾಯದಾನ ಪದ್ಧತಿಯ ದಕ್ಷತೆಯ ಮೇಲೆ. ಆದರೆ ಅದೇ ಈಗ–ಮೊನ್ನೆಯ ನಾಲ್ವರು ನ್ಯಾಯಾಧೀಶರ ಪತ್ರಿಕಾ ಗೋಷ್ಠಿ ಸೂಚಿಸಿದಂತೆ– ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ರಾಷ್ಟ್ರಜೀವನದ ಇಂದಿನ ಎಲ್ಲ ಆರ್ಥಿಕ–ರಾಜಕೀಯ–ಸಾಮಾಜಿಕ–ಸಾಂಸ್ಕೃತಿಕ ಸಮಸ್ಯೆಗಳ ಮೂಲ ಕೂಡ ಇಲ್ಲಿಯೇ ಇದ್ದಂತಿದೆ.

ಈ ರಾಷ್ಟ್ರದ ರಚನೆಗೆ ನಾಂದಿ ಹಾಡಿದ ರಾಷ್ಟ್ರೀಯ ಹೋರಾಟದ ನೇತೃತ್ವ ವಹಿಸಿದ್ದ ಮಹಾತ್ಮ ಗಾಂಧಿ ಬಹುಶಃ ಇದನ್ನೆಲ್ಲ ಮುನ್ನೋಡಬಲ್ಲವರಾಗಿದ್ದರಿಂದಲೇ ಅವರು ಗ್ರಾಮಸ್ವರಾಜ್ಯದ ಕಲ್ಪನೆ ನೀಡಿ ಸಂಪೂರ್ಣ ವಿಕೇಂದ್ರೀಕತ ರಾಷ್ಟ್ರ ಕಲ್ಪನೆಯ ಕನಸು ನೀಡಿದ್ದರು. ಆದರೆ ನಗರೀಕರಣದ ರೂಪದ ಆಧುನಿಕತೆಯ ಹುಚ್ಚಿನಲ್ಲಿ, ಪ್ರಗತಿಯ ದಾಪುಗಾಲಿನ ಭ್ರಮೆಯಲ್ಲಿ ವಿವಿಧತೆಯಲ್ಲಿ ಏಕತೆ ಎಂಬ ಜನಪ್ರಿಯ ಘೋಷಣೆಯ ಅಡಿಯಲ್ಲಿ ನಾವು ಬಿಗಿ ಬಂಧದ, ಜಟಿಲ ಕಾನೂನೂಗಳ ಬೃಹತ್ ರಾಷ್ಟ್ರವನ್ನು ಕಟ್ಟಿಕೊಂಡೆವು. ಈ ಭವ್ಯ ಬೃಹತ್ ನೋಟಕ್ಕೆ ಸಿಕ್ಕಿಕೊಂಡು ರಾಷ್ಟ್ರದ ಹಿತ, ರಾಷ್ಟ್ರಭಕ್ತಿ ಎಂಬ ಕಲ್ಪನಗಳನ್ನು ಕಟ್ಟಿಕೊಂಡು ಈ ರಾಷ್ಟ್ರ ಯಾರಿಗಾಗಿ ರಚನೆಯಾಗಿದೆಯೋ ಆ ಬಿಡಿ ಪ್ರಜೆಯ ಹಿತವನ್ನು ಮರೆತೆವು. ಅವನು ನ್ಯಾಯಕ್ಕಾಗಿ ದಿಕ್ಕಿಲ್ಲದೆ, ಕಾಲಮಿತಿಯಿಲ್ಲದೆ ಅಲೆದಾಡುವಂತೆ ಮಾಡಿದೆವು. ಇಂದು ರಾಷ್ಟ್ರದ ಹಿತ ಎಂದರೆ ಸಂಖ್ಯೆಯಲ್ಲೋ, ಆರ್ಥಿಕವಾಗಿಯೋ ಬಲಶಾಲಿಗಳಾದ ಹಿತಾಸಕ್ತ ಗುಂಪುಗಳ ಹಿತ ಎಂಬಂತಾಗಿದೆ. ಬಿಡಿ ಪ್ರಜೆ ಅಥವಾ ಅಲ್ಪಸಂಖ್ಯಾತ ಗುಂಪು ಈ ಯಾವುದಾದರೂ ಗುಂಪಿಗೆ ಸೇರಿಕೊಳ್ಳದಿದ್ದರೆ ಅವನಿಗೆ ಅಥವಾ ಅದಕ್ಕೆ ನ್ಯಾಯ ದುಸ್ತರವೆನ್ನಿಸತೊಡಗಿದೆ. ಸಾಮಾನ್ಯ ಪ್ರಜೆಗಳಿಗೆ ರಾಷ್ಟ್ರ ಭಾವನಾತ್ಮಕವಾಗಿ ಹತ್ತಿರವೆನಿಸಿದರೂ ಭೌತಿಕವಾಗಿ ಬಹುದೂರವೆನಿಸಿ ಅವನ/ಅವರ ಧ್ವನಿ ಜೈ ಹಿಂದ್ ಅಥವಾ ಭಾರತ್ ಮಾತಾ ಕಿ ಜೈ ಎಂಬ ಘೋಷಣೆಗಳ ಭಾಗವಾಗಿ ಮಾತ್ರ ಪ್ರಸ್ತುತವಾಗುವಂತಾಗಿದೆ. ಭಾರತವೆಂಬ ರಾಷ್ಟ್ರವನ್ನು ನಾವು ರಚಿಸಿಕೊಂಡದ್ದು ಇಷ್ಟಕ್ಕೆ ಮಾತ್ರವೇ? ಜನಕ್ಕಾಗಿ ರಾಷ್ಟ್ರವಲ್ಲವೆ?

ಹಾಗಾದರೆ ಈ ಭಾರತವನ್ನು ಜನರ ರಾಷ್ಟ್ರವಾಗಿ ಮಾಡುವುದು ಹೇಗೆ? ಒಂದೇ ಮಾರ್ಗ: ರಾಷ್ಟ್ರವನ್ನು ಕಟ್ಟಿರುವ ಬಿಗಿ ಬಂಧವನ್ನು ಸ್ವಲ್ಪ ಸಡಿಲಿಸಿ. ಅಧಿಕಾರ ಕೇಂದ್ರಗಳು ಹೆಚ್ಚಲಿ. ಅಧಿಕಾರ ಜಾಲದ ಸರ್ವಜ್ಞ ಸಂಖ್ಯೆ ಕಡಿಮೆಯಾಗಲಿ. ಜನ ಸುಲಭವಾಗಿ

ಪರಸ್ಪರ ಬೆರೆಯುವ, ಕಷ್ಟ ಸುಖಗಳನ್ನು ಹಂಚಿಕೊಳ್ಳಲು ಸಾಧ್ಯವಾಗುವಂತಹ ಸಾಮೀಪ್ಯ ಆಧರಿತ (ಇದನ್ನು ಗಾಂಧಿ 'ನೆರೆಹೊರೆ' ಎಂದು ಕರೆದರು) ಸಮುದಾಯಗಳಾಗಿ ಸಂಘಟಿತಗೊಂಡು ತಮ್ಮನ್ನು ತಾವೇ ಆಳಿಕೊಳ್ಳಲು (ಅಂದರೆ ತಮ್ಮ ಬೇಕು ಬೇಡಗಳನ್ನು ನಿರ್ಧರಿಸಿಕೊಳ್ಳಲು ಮತ್ತು ಅವನ್ನು ನಿರ್ವಹಿಸಿಕೊಳ್ಳಲು) ಅವಕಾಶವಾಗಲಿ. ಆಗ ಕಾನೂನುಗಳೆಂಬುವೂ ವಿಕೇಂದ್ರಿತಗೊಂಡು ಸಂಖ್ಯೆಯಲ್ಲಿ ಕಡಿಮೆಯಾಗಿ, ಉದ್ದೇಶದಲ್ಲಿಯೂ, ಭಾಷೆಯಲ್ಲಿಯೂ ನಿರ್ದಿಷ್ಟಗೊಂಡು ಮತ್ತು ಸ್ಪಷ್ಟಗೊಂಡು ಜನಸ್ನೇಹಿಯಾಗುತ್ತವೆ. ವ್ಯಾಖ್ಯಾನಕಾರರು ಬೇಕಾಗದೆ ಆಗ ನ್ಯಾಯ ಸುಲಭಸಾಧ್ಯ ಸಮೀಪದಲ್ಲೇ, ತನ್ನ ಕಣ್ಣ ಮುಂದೆಯೇ, ಹೊರಗಣ ಮಧ್ಯವರ್ತಿಗಳ ಹಸ್ತಕ್ಷೇಪವಿಲ್ಲದೆ, ತಾನೂ ಭಾಗವಹಿಸಬಹುದಾದ ಸರಳ ಪ್ರಕ್ರಿಯೆಯ ಮೂಲಕ ತನಗೆ ಅರ್ಥವಾಗುವ ಪರಿ ಮತ್ತು ಭಾಷೆಯಲ್ಲಿ ದೊರೆಯುತ್ತದೆ. ಆಗ ನ್ಯಾಯ ನೇರ ಸರಳವಾಗಿದ್ದು ಅನುಮಾನಗಳಿಲ್ಲದ ಕಾರಣ ಮೇಲ್ಮನವಿಗಳ ಸಾಧ್ಯತೆ ಕಡಿಮೆಯಾಗುತ್ತದೆ. ಆಗ ಪ್ರಜಾಸತ್ತೆ ಎಂಬುದರಲ್ಲಿ ಪ್ರಜೆ ಎಂಬುದು ಕೇಂದ್ರಕ್ಕೆ ಬರುವಂತಾಗುತ್ತದೆ. ಇದು ಸ್ಥಳೀಯ ಜನಸಮುದಾಯಗಳೇ ಅನೌಪಚಾರಿಕವಾಗಿ, ಆದರೆ ಪ್ರಜಾಸತ್ತಾತ್ಮಕವಾಗಿ ರಚಿಸಿಕೊಳ್ಳುವ ಸರ್ವರೀತಿಯಲ್ಲೂ ಪ್ರಾತಿನಿಧಿಕವಾದ ಹಿರಿಯರ ನ್ಯಾಯ ಪಂಚಾಯ್ತಿಗಳ ರೂಪ ಪಡೆಯಬಹುದು.

ಈಗಿರುವ ಪಂಚಾಯತ್ ರಾಜ್ ಇದೇ ಅಲ್ಲವೆ ಎಂದು ಕೇಳಬಹುದು. ಆದರೆ ಇದರಲ್ಲಿ ನ್ಯಾಯದಾನ ಸಂಸ್ಥೆ ಇಲ್ಲ. ಇದಕ್ಕೆ ಕಾರಣ, ಈ ಪಂಚಾಯತ್ ರಾಜ್, ಏಕಕೇಂದ್ರಿತವಾದ ಬೃಹತ್ ರಾಷ್ಟ್ರ ಕಲ್ಪನೆಯ ಅಡಿಯಾಳಾದ ಒಂದು ಸಾಂಸ್ಥಿಕ ರಚನೆಯಾಗಿರುವುದು. ಹಾಗಾಗಿ ಇಲ್ಲಿ ನ್ಯಾಯ ಸ್ಥಳೀಯವಾಗಿರುವ ಸಾಧ್ಯತೆ ಕಡಿಮೆ. ಅಲ್ಲದೆ ಇದು ಸಂಸತ್ತಿನಲ್ಲಿ ಬಹು ತಡವಾಗಿ ಹುಟ್ಟಿದ ಶಿಶು. ಹಾಗಾಗಿ ರಾಷ್ಟ್ರದ ಎಲ್ಲ ಕಾನೂನುಗಳ ಭಾರ ಹೊರಬೇಕು. ಆದಾಯ-ಖರ್ಚುಗಳ ಅಂತಿಮ ಪಟ್ಟಿ ಮೇಲಿನವರ ಮರ್ಜಿಗೆ ಒಳಗಾದದ್ದು. ರಾಷ್ಟ್ರದ ಆದಾಯ-ಖರ್ಚುಗಳ ಪಟ್ಟಿಯೇ ವಿಶ್ವಬ್ಯಾಂಕು, ಅಂತಾರಾಷ್ಟ್ರೀಯ ಹಣಕಾಸು ನಿಧಿಯ ಮರ್ಜಿಗೆ ಒಳಗಾಗಿರುವಾಗ ಇದೇನೂ ಆಶ್ಚರ್ಯವಲ್ಲ ಎನ್ನಬಹುದು. ಹಾಗೇ ನಮ್ಮ ರಾಷ್ಟ್ರ ಏಕೆ ಕ್ರಮೇಣ ಹೆಚ್ಚೆಚ್ಚು ಕೇಂದ್ರೀಕೃತ ರಾಷ್ಟ್ರವಾಗುತ್ತಿದೆ (ಕನ್ನಡ ಶಿಕ್ಷಣ ಮಾಧ್ಯದ ವಿರುದ್ಧದ ಸರ್ವೋನ್ನತ ನ್ಯಾಯಾಲಯದ ತೀರ್ಪು, ಜಿ.ಎಸ್.ಟಿ., ಆಧಾರ್ ಉಪಟಳ, ಸಾಮಾನ್ಯ ಪ್ರವೇಶ ಪರೀಕ್ಷೆಗಳ ಹೆಚ್ಚಳ, ಹಿಂದಿಯ ಆಟಾಟೋಪ ಇತ್ಯಾದಿಗಳನ್ನು ನೆನಪಿಸಿಕೊಳ್ಳಿ) ಎಂಬುದರ ಮರ್ಮವನ್ನೂ ಇದು ಬಿಟ್ಟುಕೊಡಬಹುದು.

ಇದು ಈಗಿರುವ ಸಮಸ್ಯಾತ್ಮಕ ರಾಷ್ಟ್ರ ಕಲ್ಪನೆಯ ಪರಿಣಾಮವೇ ಎಂಬುದು ನಮಗೆ ಅರ್ಥವಾದರೆ ಸಾಕು. ಆಗ ಅದಷ್ಟು ಬೇಗ ನಮ್ಮ ರಾಷ್ಟ್ರ ಕಲ್ಪನೆಯನ್ನು ಈ ರಾಷ್ಟ್ರದ ಭೂಭಾಗದ ಪ್ರತಿ ಬಿಂದುವೂ ರಾಷ್ಟ್ರದ ಜೀವಂತಿಕೆಯು ಪ್ರಜಾತಂತ್ರ ಪ್ರಕ್ರಿಯೆಯಲ್ಲಿ ಜನ ನೇರ ಭಾಗವಹಿಸುವಿಕೆಯ ಮೂಲಕ ಮಿಡಿಯುವಂತೆ ಪುನಾರಚಿಸುವುದು ಅಗತ್ಯ ಎಂಬುದು ಗೊತ್ತಾಗುತ್ತದೆ. ಮತ್ತು ಆಗ ಮಾತ್ರ ಭಾರತವೆಂಬುದು ಹೆಚ್ಚು ಜೀವಂತ

ರಾಷ್ಟ್ರವಾಗಿ ಭದ್ರವಾಗಿರುತ್ತದೆ ಎಂಬುದು ಮನವರಿಕೆಯಾಗಬಹುದು. ಇದನ್ನು ಬಿಡಿಸಿ ಹೇಳುವುದಾದದರೆ, ರಕ್ಷಣೆ, ವಿದೇಶಾಂಗ ವ್ಯವಹಾರ, ಅಂಚೆ ಮತ್ತು ಸಾರಿಗೆ ಸಂಪರ್ಕ, ಅಂತರರಾಜ್ಯ ವ್ಯಾಜ್ಯ ಪರಿಹಾರದ ಅಧಿಕಾರಗಳ ಹೊರತಾಗಿ ಮಿಕ್ಕೆಲ್ಲವನ್ನೂ ರಾಜ್ಯಗಳಿಗೂ, ರಾಜ್ಯಗಳು ಅವಲ್ಲಿ ತನ್ನ ಕೆಳಗಿನ ಆಡಳಿತ ಘಟಕಗಳಿಗೂ ಹಂಚಬೇಕು. ಅದು ಗಾಂಧಿ ಅಂದೇ ಹೇಳಿದ ಗ್ರಾಮಸ್ವರಾಜ್ಯವಾಗಿಲ್ಲದೇ ಇರಬಹುದು. ಅದು ಈಗ ಬೇಕಿಲ್ಲ ಅಥವಾ ಸಾಧ್ಯವಿಲ್ಲದೇ ಇರಬಹುದು. ಆದರೆ ಇಂದಿಗೆ ಬೇಕಾದ ನಿಜ ಸ್ವರಾಜ್ಯವಂತೂ ಆಗಿರುತ್ತದೆ.

ಇದಕ್ಕೆ ಬೇಕಾದುದು ದೊಡ್ಡದರ, ಬಲಿಷ್ಠತೆಯ, ಮಿತಿ ಇಲ್ಲದ ಸ್ಪರ್ಧಾತ್ಮಕ ಕಲ್ಪನೆಗಳನ್ನು ತ್ಯಜಿಸಿ, ಜನಸಮುದಾಯಗಳ ನೆಮ್ಮದಿಯಲ್ಲಿ ನಮ್ಮ ನೆಮ್ಮದಿಯನ್ನೂ ಕಂಡುಕೊಳ್ಳುವ ಮಾರ್ಗದಲ್ಲಿ ಎಷ್ಟು ಲಭ್ಯವೋ ಅಷ್ಟು ಸುಖ-ಸೌಲಭ್ಯಗಳಿಗೆ ತೃಪ್ತರಾಗುವ ಮನೋಭೂಮಿಕೆಯನ್ನು ರೂಢಿಸಿಕೊಳ್ಳಬೇಕು. ಇದೊಂದು ಕನಸು, ಭ್ರಮೆಯೆಂದು ಕೆಲವರು ಹೇಳಬಹುದು. ಸದ್ಯಕ್ಕೆ ಆಗುವಂತಹ ಕೆಲಸವಲ್ಲ ಎಂದು ಇನ್ನು ಕೆಲವರು ಹೇಳಬಹುದು. ಸದ್ಯದ ವ್ಯವಸ್ಥೆ ಸಂಪೂರ್ಣ ಕುಸಿದಾಗ ಮಾತ್ರ ಇದು ಜನರಿಗೆ ಅರ್ಥವಾಗಬಹುದೆಂದು ಮತ್ತೆ ಕೆಲವರು ಹೇಳಬಹುದು. ಆದರೆ ಜಾಗತಿಕ, ರಾಷ್ಟ್ರೀಯ, ಸಾಮಾಜಿಕ ಮತ್ತು ವೈಯಕ್ತಿಕ ಈ ಎಲ್ಲ ನೆಲೆಗಳಲ್ಲಿ ಬಿರಿಯುತ್ತಿರುವ ಬಿಕ್ಕಟ್ಟುಗಳನ್ನು, ಅವು ಬೀರುತ್ತಿರುವ ಒತ್ತಡಗಳನ್ನು ಗ್ರಹಿಸಬಲ್ಲ ಸೂಕ್ಷ್ಮಮತಿಗಳು ಇದಕ್ಕೆ ತಕ್ಕ ರಾಜಕಾರಣವನ್ನು ತಾವಿದ್ದಲ್ಲಿಯೇ ರೂಢಿಸತೊಡಗಿದರೆ, ಪರ್ಯಾಯ ಈಗಲೇ ಸಾಧ್ಯ ಎನ್ನಿಸಬಹುದು.

(ಫೇಸ್‌ಬುಕ್ ಬರಹ: ಜನವರಿ ೧೩-೧೪-೧೫, ೨೦೧೮)

ಸದರಿ ಚುನಾವಣೆಯೂ, ಸುಂದರನಾಯ್ಕನ ಜೀವನದರ್ಶನವೂ...

ನಾಲ್ಕು ದಿನಗಳ ಹಿಂದೆ ತಿಂಗಳೆಗೆರಡು ಬಾರಿ ಬಂದು ನಮ್ಮ ಮನೆಯನ್ನು ಸ್ವಚ್ಛಗೊಳಿಸಿಕೊಟ್ಟು ಹೋಗುವ ಸುಂದರನಾಯ್ಕನಿಗೆ ನನ್ನ ಹೆಂಡತಿ ಕೆಲಸಕ್ಕೆ ಕರೆ ಮಾಡಿದಾಗ ಆತ ಕರೆಗೆ ಓಗೊಡಲಿಲ್ಲ. ಆದರೆ ಮಾರನೆಯ ದಿವಸ ಬೆಳಿಗ್ಗೆಯೇ ಧಿಗ್ಗನೆ ಮನೆಯ ಮುಂದೆ ಹಾಜರಾದ. ನಾನು 'ಯಾಕಯ್ಯಾ ನಿನ್ನೆ ಫೋನೇ ತೆಗೆಯಲಿಲ್ಲ?' ಎಂದು ಕೇಳಿದರೆ ಆತ 'ಈ ಮನೆಹಾಳ ಮಕ್ಕಳು ನಮ್ಮಂಥ ಬಡವರನ್ನು ಸುಲಿಗೆ ಮಾಡುವುದನ್ನು ಇನ್ನೂ ಬಿಟ್ಟಿಲ್ಲ ಸ್ವಾಮಿ' ಎಂದು ನಿಗೂಢವಾಗಿ ಮಾತಾಡಿ ನನ್ನ ಎದೆಯೂ ಒಮ್ಮೆ ಝುಲ್ಲೆನ್ನುವಂತೆ ಮಾಡಿದ. ನಾನು ಸುಧಾರಿಸಿಕೊಂಡು 'ಅದೇನೂಂತ ನೇರವಾಗಿ ಹೇಳಯ್ಯ' ಎಂದೆ. ಅದಕ್ಕವನು 'ಮೊನ್ನೆ ಇಲ್ಲಿ ಮೋದಿ ಭಾಷಣ ಇತ್ತಲ್ಲಾ ಸ್ವಾಮೀ, ಅದಕ್ಕೆ ೫೦೦ ರೂಪಾಯಿ ಮತ್ತೆ ಊಟ ಅಂತ ಬೆಳಿಗ್ಗೇನೇ ಕರಕೊಂಡು ಹೋದ ಸೂ... ಮಕ್ಕಳು ಸಾಯಂಕಾಲಕ್ಕೆ ೧೫೦ ರೂ. ಕೈಗೆ ಕೊಟ್ಟು ನಡಿ ಅಂತಾರಲ್ಲ ಸ್ವಾಮಿ. ಇವರಿಗೆ ದೇವರು ಒಳ್ಳೇದು ಮಾಡ್ತಾನಾ ನೀವೇ ಹೇಳಿ?' ಎಂದು ನನ್ನನ್ನೇ ಪ್ರಶ್ನಿಸಿದ. ನಾನು 'ಅಲ್ಲಯ್ಯಾ ನೀನು ಕೂಲಿ ಕೆಲಸ ಬಿಟ್ಟು ಕಾಸಿನ ಆಸೆಗೆ ಯಾರದೋ ಭಾಷಣ ಕೇಳೋಕೆ ಹೋಗಿ, ಅದರಲ್ಲಿ ದೇವರನ್ನ ಬೇರೆ ಭಾಗಿ ಮಾಡ್ತಿದೀಯಲ್ಲ' ಎಂದು ದಬಾಯಿಸುತ್ತಿದ್ದಂತೆ ಅವನು 'ಸ್ವಾಮಿ ನೀವೇನೂ ನನಗೆ ದಿನಾಲೂ ಕೂಲಿ ಕೊಡ್ತೀರಾ? ನಮಗೂ ದುಡಿದು ದುಡಿದೂ ಸಾಕಾಗಿ ಯಾರೋ ಪುಣ್ಯಾತ್ಮರು ಆರಾಮಾಗಿ ಕೂತು ಒಂದು ಗಂಟೆ ಭಾಷಣ ಕೇಳಿದ್ರೆ ೫೦೦ ರೂಪಾಯಿ ಕೊಡ್ತೀನಂದ್ರೆ ಬ್ಯಾಡ ಅನ್ನೋಕೆ ನಾನೂ ನಿಮ್ಮಂಗೆ ಕೂತು ಉಣ್ಣೋ ಜನವಾ?' ಎಂದು ನನ್ನ ಬುಡಕ್ಕೆ ಬರತೊಡಗಿದ! ಏಕೋ ಇವನ ಮಾತು ಹಳಿ ತಪ್ಪುತ್ತಿದೆ ಎಂದೆನಿಸಿ ಅವನನ್ನು ಹಳಿಗೆ ತರಲು, 'ಅಂತೂ ನಿನಗೂ ಕೂತು ಉಣ್ಣುವ ಕನಸು! ಕೂತು ಉಂಡು ದಕ್ಷಿಣೇನೂ ತಗೊಂಡು ಬಂದೆಯಲ್ಲ ಬಿಡು! ನಡಿ ಕೆಲಸ ಶುರು ಮಾಡು' ಎಂದೆ.

ಅವನು ಕೆಲಸವನ್ನೇನೋ ಶುರು ಮಾಡಿದ. ಆದರೆ ಮಾತು ನಿಲ್ಲಿಸಲಿಲ್ಲ. 'ಉಣ್ಣಾಕ? ಬರೀ ಮುಷ್ಟಿಯಷ್ಟು ಚಿತ್ರಾನ್ನ! ಅದು ಹಾಳಾಗಿ ಹೋಗ್ಲಿ. ಬಿಸಿಲೋ ಬಿಸಲು. ಹನಿ ನೀರು ಗತಿ ಇಲ್ಲ ಸೋಮಿ...! ಇಡೀ ದಿನ ಬಿಸಲಲ್ಲಿ ಕೂತು ಸಾಕಾಗಿ ಹೋಗಿ ನಿನ್ನೆ

ಪೂರ್ತಾ ರೆಸ್ಟ್ ತಂಗಬೇಕಾಯ್ತು. ಜೊತೆಗೆ ಮೋಸ! ೫೦೦ ರೂಪಾಯಿ ಕೊಡ್ತೀನಿ ಅಂತ ಹೇಳಿ ೧೫೦ ರೂಪಾಯಿ ಕೊಟ್ರು. ಯಾವನೋ ಏಜೆಂಟು ಚೆನ್ನಾಗಿ ಗಂಟು ಮಾಡ್ಕೊಂಡ ಅಷ್ಟೆ.'

'ಹೋಗ್ಲಿ ಮೋದಿ ಏನು ಮಾತಾಡಿದ್ರು? ಇಷ್ಟ ಆಯ್ತಾ ನಿಂಗೆ? ಹಂಗಾದರೆ ನಿನ್ನ ವೋಟು ಕಮಲಕ್ಕೇ!' ಅಂದೆ ನಾನು.

ಅದಕ್ಕವನು 'ಅದೇನೂ ಮಾತಾಡದ್ರೋ ಯಾರಿಗೆ ಗೊತ್ತು ಸೋಮಿ? ಆ ಬಿಸಿಲ್ನಲ್ಲಿ ನಮ್ಮ ಪಾಡು ನಮಗೆ' ಎಂದವನು, 'ಈ ಸಲ ಒಂದು ವೋಟ್‌ಗೆ ಸಾವ್ರ ಅಂತಲ್ಲ ಸ್ವಾಮಿ? ನಮ್ಕಡೆ ಇನ್ನೂ ಹಂಚಿಲ್ಲ. ನಿಮಗೇನಾದ್ರೂ ಸಂದಾಯವಾಯ್ತಾ?' ಎಂದು ಮತ್ತೆ ನನ್ನ ಬುಡಕ್ಕೇ ಕೈ ಹಾಕಿದ. ಅವನ ಮಾತಿನ ವರಸೆಯೇ ಹಾಗೆಂದು ಅರಿತಿದ್ದ ನಾನು, 'ಇನ್ನೂ ಈ ಕಡೆ ಯಾರೂ ಬಂದಿಲ್ಲ ಕಣಯ್ಯ. ಅದಿರ್ಲಿ ನಿನ್ನ ವೋಟು ಯಾರಿಗೆ?' ಎಂದು ಕೇಳಿದೆ. ಅದಕ್ಕೆ ಅವನು ಅರೆಕ್ಷಣವೂ ಯೋಚಿಸದೆ ನನ್ನನ್ನೇ ಏಜೆಂಟನನ್ನಾಗಿ ಮಾಡಿಕೊಂಡವನಂತೆ 'ನೀವು ಯಾರ ಕೈಲಿ ಹೆಚ್ಚಿಗೆ ಕೊಡಿಸ್ತೀರೋ ಅವರ್ಗೇ, ದೇವರಾಣೆ ಸ್ವಾಮಿ. ಬಡವ್ರು ಮೋಸ ಮಾಡಾಕಿಲ್ಲ' ಎಂದ.

ನಾನು ಅವನನ್ನು ಕೆದಕಿದೆ : 'ಅಲ್ಲಯ್ಯಾ, ನಿನ್ನ ವೋಟನ್ನ ಹಿಂಗೆ ಹರಾಜಿಗಟ್ರೆ ನಿಮ್ಮಂತ ಬಡವರನ್ನ ಉದ್ಧಾರ ಮಾಡಕ್ಕೇಂತ ಕೆಲಸ ಮಾಡ್ತಿರೋ ಪಾರ್ಟಿಗಳ ಗತಿ ಏನಯ್ಯ?'

'ಬಡವರ ಉದ್ಧಾರಾನಾ? ಅವರ ಮಾತುಗಳ್ನ ನಂಬೋಂಗಿದ್ರೆ ನನ್ನ ಸಂಸಾರ ಇಷ್ಟೊತ್ತಿಗೆ ಹತ್ತು ಸಲ ಉದ್ಧಾರ ಆಕ್ತಿತ್ತು ಬಿಡಿ. ಮೊದ್ಲು ನನ್ನ ವೋಟಿಗೆ ಗ್ಯಾರಂಟಿ ದುಡ್ಡು ಕೊಡಿಸೋ ಕಡೆ ನೋಡಿ ಸೋಮಿ' ಅಂದ.

ಹಂಗಾರೆ 'ನಿಮ್ಮಂತ ಬಡವ್ರಿಗೆ ಅಕ್ಕಿ ಕೊಟ್ಟವ್ರನ್ನ ಮರೆಯೋದು ನ್ಯಾಯವಾ?' ಎಂದೆ

ಅದಕ್ಕವನು, 'ಅಂಗಾರೆ ಪುಕ್ಕಟೆ ಗ್ಯಾಸ್ ಕೋಟ್ಟೋರ್ನ ಎಲ್ಲಿಗೆ ತಳ್ಳೋದು? ನೋಡಿ ಸೋಮಿ, ಯಾವ ನನ್ನ ಮಗನೂ ಏನನ್ನೂ ಯಾರಿಗೂ ಜೇಬಿಂದ ತಗದು ಕೊಡ್ತೋನಲ್ಲ. ನಂನಿಮ್ಮಂತೋರತ್ರ ವಸೂಲು ಮಾಡಿದ ಕಾಸನ್ನೇ ನಮಗೂ ತಿರ್ಗಿ ಹಂಚಿ ಅವರೂ ಒಂದಷ್ಟು ಜೇಬು ತುಂಬಿಸ್ಕೋತಾರೆ ಅಷ್ಟೆ!' ಅಂದ.

ನಾನು ಅವನ ರಾಜಕೀಯ ಶಿಕ್ಷಣದ ಗುಣಮಟ್ಟ ಕಂಡು ಗಾಬರಿ ಬಿದ್ದು, ಅದನ್ನು ತೋರಿಸಿಕೊಳ್ಳದೆ, 'ಹಂಗಾರೆ ನೀನು ಈ ಜನ್ಮದಲ್ಲಿ ಉದ್ಧಾರ ಆಗೋ ನಂಬಿಕೆ ಇಟ್ಕಂಡಿಲ್ಲ ಅನ್ನು!' ಎಂದು ಕಿಚಾಯಿಸಿದೆ.

ತಕ್ಷಣವೇ ಅವನು ಬಹಳ ಒಳಗಿಂದ ಅಸಮಾಧಾನಿತನಾದಂತೆ, 'ಯಾಕ್ಸೋಮಿ ಅಂಗಂತೀರಾ? ಈ ಪಾರ್ಟಿ ಗೀರ್ಟಿಗಳಂತ ಹುಟ್ಟಿದೋರ್ನ ನಾನು ನಂಬಿಲ್ಲ. ನಾನೇ ಹುಟ್ಟಿಸ್ದ ನನ್ನ ಮಗನ ಮೇಲೆ ನಂಬಿಕೆ ಇಟ್ಗಂಡಿದೀನಿ. ಅವನು ಹೆಂಗವ್ನೆ ಗೊತ್ತಾ ಸೋಮಿ? ಒಳ್ಳೆ ಫಿಲ್ಮಿ ಈರೋ ಇದ್ದಂಗವನೆ. ಯಾವಗ್ಲೂ ಕಿವಿಯಾಗೆ ಪೋನ್

ಇಟ್ಕಂಡು ಇಂಗ್ಲಿಷ್‌ನಾಗೇ ಮಾತಾಡ್ತಿರ್ತಾನೆ! ಆದರೆ ಮಗ ನೋಡಿ ಸ್ವಾಮಿ, ನಾನು ಆರು ಗಂಟೆಗೇ ಎದ್ದು ಟೀ ಕುಡ್ದು ನಿಮ್ಮ ಮನೆ ಕಡೀಕೆ ಎರಡು ಮೈಲಿ ನಡಕಂಡು ಬಂದಿದೀನಿ, ಇನ್ನೂ ಬಿದ್ಕಂಡವನೆ. ಸಾಕಾಗಿ ಹೋಗದೆ ಸ್ವಾಮಿ. ಒಬ್ನೇ ದುಡಿದೂ ದುಡಿದೂ' ಎಂದು ನಿಟ್ಟುಸಿರು ಬಿಡುವ ಹೊತ್ತಿಗೆ ನನ್ನ ಹೆಂಡತಿ ತಟ್ಟೆಯಲ್ಲಿ ತಿಂಡಿ ತಂದು, 'ಕೈ ತೊಳ್ಕೊಂಡು ಬಾ. ತಿಂಡಿ ತಿನ್ನುವಂತೆ' ಎಂದು ಕರೆದಳು.

ನಮ್ಮ ಪುಸ್ತಕಗಳ ಶೆಲ್ಫ್‌ನ ಧೂಳು ಹೊಡೆಯುತ್ತಿದ್ದ ಸುಂದರನಾಯಕ ಕೈನ ಬಟ್ಟೆಯನ್ನು ಅತ್ತ ಇಟ್ಟು, ನನ್ನ ಕಡೆ ನೋಡಿ, 'ಈಯಮ್ಮ ಒಬ್ರೇ ಸೋಮಿ ನನ ಕಂಡ್ರೆ ಪ್ರೀತಿ ತೋರಸೋರು! ಈಯಮ್ಮನ್ನ ದೇವ್ರು ತಣ್ಣಗಿಟ್ಟಿರ್ಲಿ' ಎಂದು ಕೈತೊಳೆಯಲು ಹೋದ.

ಅವನು ಕೈ ತೊಳೆಯುತ್ತಿರುವಂತೆ 'ನನಗೇನೂ ನಿನ್ನ ಆಶೀರ್ವಾದ ಇಲ್ಲವಾ?' ಎಂದೆ. ಅದಕ್ಕವನು ಅಲ್ಲಿಂದ್ಲೇ 'ಅವರು ತಣ್ಣಗಿದ್ರೇ ನೀವೂ ತಣ್ಣಗಿರೋದು ಅಲ್ವಾ?' ಅಂತ ಒಂದು ಜಾಣ ಮಾತು ಎಸೆದು ತಿಂಡಿಯ ತಟ್ಟೆ ತೆಗೆದುಕೊಂಡ. ನಾನು 'ಈಗ ವೋಟು ಕೇಳೋರು ಒಂದು ಸಾವಿರ ಕೊಟ್ಟರು ಅನ್ನು. ಏನ್ ಮಾಡ್ತೀಯಾ ಅದ್ನ?' ಎಂದೆ. ಒಂದರೆ ಕ್ಷಣ ಸ್ತಬ್ಧನಾದ ಅವನು 'ಒಂದು ತಿಂಗಳಿಂದ ನನ್ನ ಮಗನ ಹೊಡ್ತ ತಾಳಕ್ಕಾಗ್ತಿಲ್ಲ ಸೋಮಿ. ಅದೇನೋ ಜೀನ್ಸಿ ಅಂತೆ, ಅದೇ ನೀಲಿ ಬಟ್ಟೆ ಪ್ಯಾಂಟು. ಎಲ್ಡು ಸಾವಿರ ಅಂತೆ ಅದಕ್ಕೆ. ನನ್ನೆಲ್ಲ ಫ್ರೆಂಡ್ಸು ಆಕ್ಕೊಂಡು ಬರ್ತಾರೆ, ನನಗೆ ಅವಮಾನ, ಅದನ್ನ ತಗೋಬೇಕು ಅಂತ ಒಂದೆ ಸಮ ಹಠ. ನನ್ನೆಂಡ್ತಿ ಬ್ಯಾರೆ ಅವನಿಗೆ ಸಪೋರ್ಟ್ರು. ಅತ್ತ ಅದನ್ನ ಅವನಿಗೇ ಬಿಸಾಡಾಣಾಂತ ಇದೀನಿ. ಎಂಗೂ ನಂ ಕೈಕಾಲು ಬಿದ್ದೋದಾಗ ಅವನೇ ತಾನೇ ಆಗೋನು?' ಎಂದು ನಿಟ್ಟುಸಿರಿಟ್ಟ. ಈಗ ಅವನ ಕಣ್ಣಂಚಿನಲ್ಲಿ ನನಗೆ ನೀರಿನ ಪಸೆ ಕಂಡಂತಾಯಿತು. ನಂತರ ಒಂದು ತುತ್ತು ಬಾಯಿಗಿಟ್ಟುಕೊಂಡು ನುಂಗಿ ತನ್ನನ್ನು ತಾನೇ ಕೇಳಿಕೊಂಡಂತೆ ಮೆಲುದನಿಯಲ್ಲಿ ನನ್ನನ್ನು ಕೇಳಿದ: 'ಈ ಬದುಕು ಯಾಕೆ ಸ್ವಾಮಿ? ಯಾವ ಮಗ ಇದನ್ನೆಲ್ಲ ನಡಿಸ್ತಿರೋನು? ಯಾರ ...ಕ ತೊಳ್ಯೋಕೇ ಅಂತ? ನಮ್ಮಂತೋರಿಗೇನಾದ್ರೂ ಮುಕ್ತಿ ಐತಾ? ಹೇಳಿ!'

ನಾನೇನು ಹೇಳಲಿ? ನನ್ನ ಪ್ರಶ್ನೆಯೂ ಅದೇ ಆಗಿತ್ತು. ನಾನು ಅವನಗಿಂತ ತುಂಬ ಹೆಚ್ಚು 'ಸುಖ'ವಾಗಿದ್ದರೂ!

ಆದರೆ ಅವನಿಗಾದರೂ ಸದ್ಯಕ್ಕೆ ಒಂದು ಉತ್ತರ ಕೊಡುವಂತೆ ಧ್ವನಿವರ್ಧಕದಿಂದ ಸಜ್ಜಾದ ಆಟೋ ರಿಕ್ಷಾವೊಂದು 'ನಿಮ್ಮ ಬದುಕು ಬಂಗಾರವಾಗಲು ಮರೆಯದೆ ಇವರಿಗೆ ನಿಮ್ಮ ಮತ ಹಾಕಿ' ಎಂದು ಒದರುತ್ತಾ ಬಂತು.

ಒಂದರೆ ಕ್ಷಣ ಸುಂದರನಾಯ್ಕನ ಮುಖ ಅರಳಿತು. ಆದರೆ ಅಷ್ಟೇ ಬೇಗ ಅದು ಮುದುಡಿಕೊಂಡದ್ದನ್ನು ನಾನು ಗಮನಿಸದಿರಲಿಲ್ಲ.

(ಫೇಸ್‌ಬುಕ್ ಬರಹ : ಮೇ ೧೦, ೨೦೧೮)

ಎಲ್ಲ ಮುಗಿಯಿತು; ಕಸ ಗುಡಿಸುವ ಕೆಲಸ ಮತ್ತೆ ಆರಂಭಿಸಬೇಕು...

ಯಾವಾಗ ಸರ್ವೋನ್ನತ ನ್ಯಾಯಾಲಯ, ರಾಜ್ಯಪಾಲರು ನೀಡಿದ್ದ ಹದಿನೈದು ದಿನಗಳ ಕಾಲಾವಕಾಶವನ್ನು ಮೊಟಕುಗೊಳಿಸಿ ಮಾರನೆಯ ದಿವಸವೇ ಬಹುಮತ ಸಾಬೀತುಪಡಿಸಬೇಕೆಂಬ ಆಜ್ಞೆ ಹೊರಡಿಸಿತೋ ಆಗಲೇ ಬಿಜೆಪಿ ಸರ್ಕಾರದ ಭವಿಷ್ಯ ತೀರ್ಮಾನವಾಗಿತ್ತು. ಹಾಗಾಗಿ ಬಹು ಜನರ ನಿರೀಕ್ಷೆಯಂತೆಯೆ ಬಿ.ಎಸ್. ಯಡಿಯೂರಪ್ಪನವರು ವಿಶ್ವಾಸಮತ ಯಾಚನೆಯ ಮುನ್ನವೇ ರಾಜೀನಾಮೆ ನೀಡಿ ೫೫ ತಾಸುಗಳ ಮುಖ್ಯಮಂತ್ರಿಯ ಅಧಿಕಾರ ಸ್ಥಾನ ಅನುಭವಿಸಿ ನಿರ್ಗಮಿಸಿದ್ದಾರೆ. ಇದರಿಂದಾಗಿ ಅವರು ಚುನಾವಣಾಪೂರ್ವದಲ್ಲಿ ಮತ ಎಣಿಕೆ ಮುಗಿದ ನಂತರದ ದಿನದಲ್ಲೇ ತಾವು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವುದು ಶತಃಸಿದ್ಧ ಎಂದು ಆಡಿದ್ದ ಮಾತನ್ನು ನೆಪಮಾತ್ರಕ್ಕೆ ಸಾಕಾರ ಮಾಡಿಕೊಂಡು ನೆಪಮಾತ್ರಕ್ಕೆ ಗೌರವ ಉಳಿಸಿಕೊಂಡಿದ್ದಾರೆ. ಯಡಿಯೂರಪ್ಪನವರಿಗೆ ನಮ್ಮ ಸಹಾನುಭೂತಿಗಳು.

ಬಿಜೆಪಿ ಮಾಡಬಾರದ್ದನ್ನೆಲ್ಲ ಮಾಡಹೋಗಿ ಆಗಬಾರದ್ದನ್ನೆಲ್ಲ ಆಗಿಸಿಕೊಂಡು ಮುಖಭಂಗ ಅನುಭವಿಸಿದೆ. ಜನಾದೇಶವನ್ನು ಹೆಚ್ಚೆಂದರೆ ಬಿಜೆಪಿ ಅಧಿಕಾರಕ್ಕೆ ಬರದಂತೆ ತಾಂತ್ರಿಕವಾಗಿ ತಡೆಯಲಾಗಿದೆ ಎಂದು ವ್ಯಾಖ್ಯಾನ ಮಾಡಬಹುದಾದರೂ ಅದನ್ನು ಕಾಂಗ್ರೆಸ್ ಅಥವಾ/ಮತ್ತು ಜೆಡಿಎಸ್ ಅಧಿಕಾರಕ್ಕೆ ಬರಲು ನೀಡಲಾಗಿರುವ ಸೂಚನೆ ಎಂದು ಯಾವ ರೀತಿಯಿಂದಲೂ ವ್ಯಾಖ್ಯಾನಿಸಲಾಗದು ಎಂಬ ಬಿಜೆಪಿಯ ವಾದ ನೈತಿಕವಾಗಿ ಸರಿಯಿದ್ದರೂ ತಾಂತ್ರಿಕವಾಗಿ ತಪ್ಪಾಗಿತ್ತು. ಸಂವಿಧಾನವೆಂದರೆ ಕಾನೂನುಗಳ ಆಡಳಿತವೇ ಆಗಿರುವುದರಿಂದ ಮತ್ತು ಕಾನೂನೆಂದರೆ ಮಾತಿನ ಸರಪಳಿಯಾದುದರಿಂದ ಅದನ್ನು ವ್ಯಾಖ್ಯಾನಿಸುವ ಬಗೆಯಲ್ಲಿ ನಾಲಿಗೆ ಹೊರಳಿಕೆಯ ಎಷ್ಟು ಸಾಧ್ಯತೆಗಳಿವೆಯೋ ಅಷ್ಟೂ ಸಾಧ್ಯತೆಗಳಿರುವುದರಿಂದ ಇಲ್ಲಿ ಎಲ್ಲವೂ ತಾಂತ್ರಿಕ ಲೆಕ್ಕಚಾರಗಳ ಆಡಳಿತವೇ ಆಗಿರುತ್ತದೆ. ಇದನ್ನು ಅರಿತೂ ಬಿಜೆಪಿ ತಾಂತ್ರಿಕ ಲೆಕ್ಕಾಚಾರವನ್ನು ತಲೆಕೆಳಗು ಮಾಡುವ ತರಲೆಗೆ ಕೈಹಾಕಿ ಕೈಸುಟ್ಟುಕೊಂಡಿದೆ. ಇದು

ರಾಜ್ಯ ಬಿಜೆಪಿಗೆ ಆದ ಮುಖಭಂಗ ಮಾತ್ರವಲ್ಲ. ಅದರ ಹಿಂದೆ ಸೂತ್ರದ ದಾರ ಹಿಡಿದಿದ್ದ ಪ್ರಧಾನಿ ಮೋದಿ ಮತ್ತವರ ಸಹವರ್ತಿ ಅಮಿತ್‌ಶಾಗೂ ಆದ ಮುಖಭಂಗ. ಇದರಿಂದ ಮೋದಿಯವರಿಗೆ ಕೆಲ ವಲಯಗಳಲ್ಲಾದರೂ ಇದ್ದ ನೈತಿಕತೆಯ ವರ್ಚಸ್ಸಿಗೆ ಧಕ್ಕೆಯಾಗಿರಲೂ ಸಾಕು.

ಇನ್ನು ಕಾಂಗ್ರೆಸ್ ಮತ್ತು ಜೆಡಿಎಸ್ ಈ ತಾಂತ್ರಿಕ ಮಹಾಯುದ್ಧದಲ್ಲಿ ಮಾತ್ರ ಗೆದ್ದಿವೆ ಎನ್ನಬಹುದು. ಈ ಎರಡೂ ಪಕ್ಷಗಳು ತಮ್ಮ ಶಾಸಕರನ್ನು ಬಂಧಿಸಿಟ್ಟುಕೊಂಡ ರೀತಿಯನ್ನು ನೋಡಿದರೇ ಈ ಪಕ್ಷಗಳು ರಚಿಸುವ ಸರ್ಕಾರದ ಶೀಲವಂತಿಕೆ ಹೇಗಿರಬಹುದೆಂಬುದನ್ನು ಊಹಿಸಬಹುದು. ಮೊದಲಿಗೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ತವರು ಕ್ಷೇತ್ರದಲ್ಲಿ ಹೀನಾವಾಗಿ ಸೋತು ಇನ್ನೊಂದು ಕ್ಷೇತ್ರದಲ್ಲಿ ಸ್ವಲ್ಪದರಲ್ಲಿ ಗೆರೆ ದಾಟಿ ಬಂದು, ತಮ್ಮ ಸಚಿವ ಸಂಪುಟದ ಮುಕ್ಕಾಲು ಪಾಲು ಜನ ಸೋತು ಸುಣ್ಣವಾಗಿ ಅರ್ಧದಷ್ಟು ಶಾಸಕರು ಜನರಿಂದ ತಿರಸ್ಕೃತರಾದ ಹಿನ್ನೆಲೆಯಲ್ಲಿ, ಅವರ ಪಕ್ಷ ಮತ್ತೆ ಅಧಿಕಾರದ ಹಕ್ಕು ಮಂಡಿಸುವುದು ಜನಾದೇಶಕ್ಕೆ ಬಗೆದ ದ್ರೋಹವೇ ಆಗುತ್ತದೆ. ಇನ್ನು ವಿಧಾನಸಭೆಯ ಕಾಲು ಭಾಗಕ್ಕೂ ಕಡಿಮೆ ಸಂಖ್ಯೆಯಲ್ಲಿ ಜನಪ್ರತಿನಿಧಿಗಳು ಆಯ್ಕೆಯಾಗಿರುವ ಜೆಡಿಎಸ್‌ಗೆ ನೈತಿಕವಾಗಿ ಸ್ಥಾನ ಇರುವುದು ವಿರೋಧ ಪಕ್ಷವಾಗಿ ಮಾತ್ರ. ಆದರೆ ಬಿಜೆಪಿಯನ್ನು ಅಧಿಕಾರದಿಂದ ದೂರವಿಡುವ ಏಕೈಕ ಉದ್ದೇಶದಿಂದ ಕಾಂಗ್ರೆಸ್ ಈ ಜೆಡಿಎಸ್ ಜೊತೆ ಅವಕಾಶವಾದಿ ರಾಜಕೀಯ ಸಂಧಾನ ಮಾಡಿಕೊಂಡು ೩೮ ಸ್ಥಾನಗಳ ಪಕ್ಷಕ್ಕೆ ಮುಖ್ಯಮಂತ್ರಿ ಸ್ಥಾನವನ್ನು ಖಾಲಿ ತಟ್ಟೆಯಲ್ಲಿಟ್ಟು ಅರ್ಪಿಸುವಷ್ಟರ ಮಟ್ಟಿಗೆ ಹೀನಾಯ ಶರಣಾಗತಿಗೆ ಇಳಿದಿರುವುದು ಜನಾದೇಶದ ವಿಕ್ಷಿಪ್ತೀಕರಣ ಮಾತ್ರವೆನಿಸುತ್ತದೆ.

ಆದರೆ ಸಾಂವಿಧಾನಿಕತೆಯ ಹೆಸರಿನಲ್ಲಿ ಇಲ್ಲಿ ಮಾನ್ಯತೆ ಇರುವುದು ತಾಂತ್ರಿಕ ಸರಿತನಕ್ಕೆ ಮಾತ್ರ. ಕಾಂಗ್ರೆಸ್-ಜೆಡಿಎಸ್ ಬಳಸಿಕೊಂಡಿರುವುದು ಈ ಮಾನ್ಯತೆಯನ್ನೇ. ಈ ತಾಂತ್ರಿಕ ಸರಿತನದ ಸಾಮ್ರಾಜ್ಯದಲ್ಲಿ ನೈತಿಕ ಸರಿತನವೇನಿದ್ದರೂ ವೈಯಕ್ತಿಕ ನೆಲೆಯಲ್ಲಿ ಇರಬಹುದಾದ ಆಯಾ ವ್ಯಕ್ತಿಗಳ ಸ್ವ-ಭಾವ ಮಾತ್ರವಾಗಿ ಇಂಗಿಸಲ್ಪಟ್ಟಿದ್ದರೂ ನಾವು ಈಗ ಅಧಿಕಾರಕ್ಕೆ ಬರಲಿರುವ ಸರ್ಕಾರದ ಸದಸ್ಯರ ವೈಯಕ್ತಿಕ ಸ್ವಭಾವಗಳ ಗಟ್ಟಿತನವನ್ನಷ್ಟೇ ನೆಚ್ಚಿ ಬದುಕಬೇಕಾಗಿರುವುದರ ಹೊರತಾಗಿ ಬೇರೆ ಗತಿಯಿಲ್ಲ. ಆದರೆ ಪರಸ್ಪರ ಕೆಸರೆರಚಿಕೊಂಡು ಒಬ್ಬರನ್ನೊಬ್ಬರು ಸೋಲಿಸುವ ಆಟದಲ್ಲಿ ಇತ್ತೀಚಿನವರೆಗೆ ನಿರತವಾಗಿದ್ದ ಈ ಪಕ್ಷಗಳು ಈಗ ರಾತ್ರೋರಾತ್ರಿ ಕೈಕುಲುಕಿ ಮಿತ್ರತ್ವದ ಪ್ರದರ್ಶನ ಮಾಡುತ್ತಿರುವ ನಿರ್ಲಜ್ಜ ರಾಜಕೀಯ ಅನೈತಿಕತೆಯ ಹಿನ್ನೆಲೆಯಲ್ಲಿ ಈ ವೈಯಕ್ತಿಕ ಸ್ವಭಾವಗಳ ನೆಚ್ಚಿಕೆ ಕೂಡ ಮೋಸವೇ ಅದೀತೇನೋ!

ನನಗೆ ಗೊತ್ತು, ಇದೆಲ್ಲವನ್ನೂ ಕೋಮುವಾದದ ಅಪಾಯದ ಹೆಸರಿನಲ್ಲಿ ಸಾರಾಸಗಟಾಗಿ ಸಮರ್ಥಿಸುವ, ವಿಜಯೋತ್ಸವ ಆಚರಿಸುವ ನನ್ನ ಹಲವಾರು ಸ್ನೇಹಿತರಿದ್ದಾರೆ. ಆದರೆ ಮೊದಲಿಂದಲೂ ನನ್ನ ನಿಲುವು ಒಂದೇ ಆಗಿದೆ. ಜನಾದೇಶವನ್ನು ಗೌರವಿಸುತ್ತಲೇ, ಅದನ್ನು ನೈತಿಕ ನೆಲೆಯಲ್ಲಿ ಅರ್ಥೈಸುತ್ತಲೇ ನಾವು ರಾಜಕಾರಣ

ಮಾಡಬೇಕಿದೆ. ಇದಕ್ಕೆ ಯಾವುದೇ ತುಂಡು ದಾರಿ ಇಲ್ಲ. ನಿಜ, ಕೋಮುವಾದದ ಅಪಾಯವಿದೆ. ಈ ಅಪಾಯ ಯಾವಾಗ, ಏಕೆ ಉಂಟಾಯಿತು ಮತ್ತು ಏಕೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ ಎಂಬುದನ್ನೂ ಪರಿಶೀಲಿಸಿ, ಕೋಮುವಾದಿ ರಾಜಕಾರಣವನ್ನು ಎದುರಿಸುವ ಸಂದರ್ಭದಲ್ಲೇ ಈ ಪರಿಶೀಲನೆಯ ಪಾಠಗಳನ್ನು ನಮ್ಮ ರಾಜಕಾರಣಕ್ಕೆ ಅಳವಡಿಸಿಕೊಂಡು, ನಮ್ಮದೇ ರಚನಾತ್ಮಕ ರಾಜಕೀಯ ತಾತ್ವಿಕತೆಯೊಂದಿಗೆ ನಾವು ಮುನ್ನಡೆಯಬೇಕು ಎಂಬುದು ನನ್ನ ಪ್ರತಿಪಾದನೆಯಾಗಿದೆ. ಅದನ್ನು ಮಾಡದೆ ಕೇವಲ ಬಿಜೆಪಿ ಭಯ ಕೇಂದ್ರಿತ ರಾಜಕೀಯ ಹೋರಾಟದಲ್ಲಿ ನಾವು ಬಂಧಿತವಾಗಿರುವವರೆಗೂ ನಮ್ಮ ಕಣ್ಣುಗಳಿಗೆ ಜನಮಾನಸದ ವಾಸ್ತವ ಕಾಣಲಾರದು. ಹಾಗಾಗಿ ಕೋಮುವಾದಿ ರಾಜಕಾರಣದ ಅಪಾಯ ಇನ್ನಷ್ಟು ತೀವ್ರವಾಗಿ ನಮ್ಮನ್ನು ಬಾಧಿಸತೊಡಗಿದರೆ ಆಶ್ಚರ್ಯವಿಲ್ಲ. ಈಗ ಅಸ್ತಿತ್ವಕ್ಕೆ ಬರಲಿರುವ ಸರ್ಕಾರದ ಸ್ವರೂಪದಲ್ಲೇ, ಅದರ ಮುಂದಿನ ನಡೆಗಳಲ್ಲೇ ಇದು ನಿಚ್ಚಳವಾಗಿ ಕಂಡರೆ ಆಶ್ಚರ್ಯವಿಲ್ಲ.

ಅದೇನೇ ಇರಲಿ, ತಮ್ಮ ಮಿತಿಗಳಲ್ಲೇ (ತಮ್ಮ ಪಿತಾಶ್ರೀಯವರ ಮಾರ್ಗದರ್ಶನದಲ್ಲಿ) ಜಾಣ ರಾಜಕಾರಣ ಮಾಡಿ ದಕ್ಕಿಸಿಕೊಂಡಿರುವ ಮುಖ್ಯಮಂತ್ರಿ ಸ್ಥಾನದ ಅಧಿಕಾರದ ಪ್ರಮಾಣವಚನ ಸ್ವೀಕರಿಸಲಿರುವ ಕುಮಾರಸ್ವಾಮಿಯವರಿಗೆ ಶುಭಾಶಯ ಕೋರುತ್ತಾ, ಅವರು ಈಗ ಪಕ್ಷ ರಾಜಕಾರಣವನ್ನು ಮರೆತು ರಾಜ್ಯದ ಹಿತಬಯಸುವ ಎಲ್ಲ ಜನರೊಂದಿಗೆ ಮುಕ್ತವಾಗಿ ಸಮಾಲೋಚಿಸಿ ಜನತೆಯು ಜಾತಿ-ಮತಗಳ ಪರಿಗಣನೆ ಮೀರಿ ರಾಜ್ಯದ ಒಟ್ಟು ಶಾಂತಿ-ನೆಮ್ಮದಿಗಳನ್ನು ಅನುಭವಿಸುವಂತಹ ದಕ್ಷ ಆಡಳಿತವನ್ನು ನೀಡಲಿ ಎಂದು ಹಾರೈಸುತ್ತೇನೆ.

(ಜನತಾ ಮಾಧ್ಯಮ : ಮೇ ೨೩, ೨೦೧೮)

ಭಾಗ–೨

(ಸಾಹಿತ್ಯ–ಸಂಸ್ಕೃತಿ–ಪ್ರವಾಸ)

ನಾನು ಓದಿದ
ಒಂದು ಅಪರೂಪದ ಪುಸ್ತಕ

ನಾನು ಇಂದು ತಾನೇ ಓದಿ ಮಗಿಸಿದ ಪುಸ್ತಕದ ಬಗ್ಗೆ ಇಲ್ಲಿ ಬರೆಯುತ್ತಿದ್ದೇನೆ. ಅದು ಗೆಳೆಯ ಕೃಷ್ಣಮೂರ್ತಿ ಹನೂರು ಅವರ ಇತ್ತೀಚಿನ ಪುಸ್ತಕ 'ಕಾಲು ದಾರಿಯ ಕಥನಗಳು'. ಮೂಲತಃ ಕೃಷ್ಣಮೂರ್ತಿ ಅವರು ನಲವತ್ತು ವರ್ಷಗಳ ಹಿಂದೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯ ಕಾಲೇಜೊಂದರಲ್ಲಿ ಕನ್ನಡ ಅಧ್ಯಾಪಕರಾಗಿದ್ದಾಗ ಜಾನಪದದಲ್ಲಿ ಆಸಕ್ತಿ ತಾಳಿ ನಡೆಸಿದ ಕ್ಷೇತ್ರ ಕಾರ್ಯದ ಕಥನವಿದು. ಅಷ್ಟಕ್ಕೇ ನಿಲ್ಲದೆ, ಅವರ ಈ ಆಸಕ್ತಿ ಅವರನ್ನು ರಾಜ್ಯದ ಮತ್ತು ದೇಶದ ಇತರ ಕಡೆಗಳಿಗೂ ಕರೆದುಕೊಂಡು ಹೋದ ಅಥವಾ ಅನ್ಯಕಾರ್ಯ ನಿಮಿತ್ತ ಹೋದಸ್ಥಳಗಳಲ್ಲಿ ಅವರ ಈ ಆಸಕ್ತಿ ಕೆರಳಿ ಅಲ್ಲೆಲ್ಲ ಅವರಿಗೆ ಕಾಣಿಸಿದ, ಕೇಳಿಸಿದ ಕಥನ ಚಿತ್ರಗಳೂ ಇಲ್ಲಿ ಜೋಡಣೆಗೊಂಡಿವೆ.

ಜೋಡಣೆ ಎಂದೆ. ಹಾಗೆ ನೋಡಿದರೆ ಈ ಜೋಡಣೆಯೇ ಈ ಪುಸ್ತಕವನ್ನು ವಿಶಿಷ್ಟಗೊಳಿಸಿ ಅದನ್ನು ಓದುವ ಕುತೂಹಲವನ್ನು ಹುಟ್ಟಿಸಿರುವುದು. ಈ ಹಲವು ಕಥನಗಳ ಜೋಡಣೆಯಲ್ಲಿ ಮೂಡುವ ಹಲವು ವ್ಯಕ್ತಿಚಿತ್ರಗಳು, ಹಲವು ಜನಪದ ಸಮುದಾಯಗಳ ಸಾಂಸ್ಕೃತಿಕ ಅನನ್ಯತೆಗಳು ಮತ್ತು ಹಲವು ಜನಪದ ಪ್ರಕಾರಗಳ ಸೌಂದರ್ಯ ವಿಶೇಷಗಳು ಗರಿಗೆದರಿ ನಿಂತು ನಮ್ಮನ್ನು ಬೆರಗುಗೊಳಿಸುತ್ತವೆ. ಈ ಕ್ಷೇತ್ರಕಾರ್ಯದ ಕಥನಗಳು ಚಿತ್ರದುರ್ಗದಿಂದ ಮೈಸೂರು, ಬಾಗಲಕೋಟೆ, ಬೆಳಗಾವಿ ಜಿಲ್ಲೆ, ಆಂಧ್ರಪ್ರದೇಶ, ಹಿಮಾಚಲಪ್ರದೇಶ ಮತ್ತು ಜಮ್ಮುವರೆಗೂ ಹರಡಿಕೊಂಡು ಕಥನ ಅಖಿಲಭಾರತ ಆಯಾಮವನ್ನೂ ಪಡೆದುಕೊಳ್ಳಲು ಹವಣಿಸಿದೆ. ಒಂದು ಮಹಾಕಥನವಾಗಿ ಕಟ್ಟಿಕೊಳ್ಳುವ ಪ್ರಯತ್ನ ಮಾಡುತ್ತದೆ.

ಈ ಮಹಾಕಥನದ ಮುಖ್ಯ ಕ್ರಿಯಾಕ್ಷೇತ್ರ ಹಲವು ಜಾತಿ–ಬುಡಕಟ್ಟುಗಳ ಮಿಶ್ರಸಂಸ್ಕೃತಿಯ ಸಮಾಜವಿರುವ ಚಿತ್ರದುರ್ಗ ಜಿಲ್ಲೆ. ಇಲ್ಲಿನ ಪ್ರಬಲ ಕುಲಗಳೆನಿಸಿದ ಲಿಂಗಾಯತ, ಕುಂಚಿಟಿಗ ಮತ್ತು ರೆಡ್ಡಿ ಸಮಾಜಗಳ ಹೊರತಾಗಿಯೂ, ಈ ಜಿಲ್ಲೆಯ

ಬಹುತೇಕ ಭಾಗ (ವಿಶೇಷವಾಗಿ ಪೂರ್ವ ಭಾಗ) ಒಂದು ಜಾನಪದ ಮಹಾಕ್ಷೇತ್ರವೇ ಆಗಿದೆ. ಮ್ಯಾಸ ಬೇಡರು, ಊರು ಬೇಡರು ಮತ್ತು ಕಾಡುಗೊಲ್ಲರು, ಊರು ಗೊಲ್ಲರು ಎಂಬ ನಾಲ್ಕು ಮುಖ್ಯ ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಸಾರವೇ ಈ ಇಡೀ ಜಿಲ್ಲೆಯ ಸಂಸ್ಕೃತಿಗೆ ಒಳಸತ್ವವನ್ನು ನೀಡಿರುವುದು ಎಂದು ಅಲ್ಲಿ ಕೆಲ ಕಾಲ ತಂಗಿದ ಯಾರಿಗಾದರೂ ಗೊತ್ತಾಗುತ್ತದೆ. ಸ್ವತಃ ನಾನೂ ಅಲ್ಲಿ ಐದು ವರ್ಷಗಳ ಕಾಲವಿದ್ದು ಜಿಲ್ಲೆಯ ನಾಲ್ಕೂ ಕಡೆ ತಿರುಗಿ ಬಂದಿರುವ ಅನುಭವದ ಹಿನ್ನೆಲೆಯಲ್ಲಿ ಈ ಮಾತನಾಡುತ್ತಿದ್ದೇನೆ. ನಾನು ನನ್ನ ವೃತ್ತಿ ಬದುಕಿನ ಅತ್ಯುತ್ತಮ ಕಾಲವನ್ನು ಅಲ್ಲಿಯೇ ಕಳೆದದ್ದು ಎಂದು ನನಗೆ ಅನ್ನಿಸಿದ್ದರೆ ಅದಕ್ಕೆ ಆ ಒಳಸತ್ವದ ಶಕ್ತಿ ಸಂಪನ್ಮೂಲಗಳೇ ಕಾರಣವಾಗಿವೆ.

ಇನ್ನೂ ಜಿಲ್ಲೆಯ ಬಹುಭಾಗ ನಗರ ಸಂಸ್ಕೃತಿಯ ಹಪಾಹಪಿಯಿಂದ ದೂರವಿರುವ ಗ್ರಾಮೀಣ ಸಮಾಜವಾಗಿದ್ದು, ತನ್ನ ಆರ್ಥಿಕ ಮತ್ತು ಸಾಂಸ್ಕೃತಿಕ ಸ್ವಾಯತ್ತತೆಯಲ್ಲೇ ಸಮಾಧಾನದಿಂದ ಬದುಕುತ್ತಿದೆ. ಅದರ ದೇವರು, ಧರ್ಮಗಳು, ಹಾಡು–ಹಬ್ಬಗಳು, ನಂಬಿಕೆ–ಆಚರಣೆಗಳು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಇವೆಲ್ಲವುಗಳ ಸರಳ ಸೌಂದರ್ಯಗಳ ಹಿಂದೆ ಇರುವ ಅವರ (ಕೃಷಿ, ಪಶುಪಾಲನೆ, ಕಂಬಳಿ ನೇಯ್ಗೆ ಇತ್ಯಾದಿ) ಕಸುಬುಗಳು ಇನ್ನೂ ಅವರವೇ ಆಗಿವೆ. ಅವಾವುವೂ ಶಿಷ್ಟ ಸಮಾಜದ ದುಷ್ಟಶಕ್ತಿಗಳ ಆಕ್ರಮಣಕ್ಕೆ ಇನ್ನೂ ಒಳಗಾಗಿಲ್ಲ. ಹಾಗಾಗಿ ಈ ಇಡೀ ಸಮಾಜ ತನ್ನೊಂದಿಗೆ ತಾನು ಸಮರಸದಲ್ಲಿದ್ದು ಒಂದು ಪ್ರಸನ್ನಚಿತ್ತತೆ ಅದರ ಹೆಗ್ಗುರುತಾಗಿದೆ. ಅದು 'ಶ್ರೀಮತಿಕೆ'ಯಿಂದ ಕಣ್ಣು ಕುರುಡು ಮಾಡಿಕೊಂಡು ಹೋದ ಹೊರಗಿನವರಿಗೆ ಬಡತನದ ಸಮಾಜವಾಗಿ ಕಾಣಬಹುದಷ್ಟೆ. ಸ್ವತಃ ಅವರಿಗೆ ಆ ಭಾವನೆ ಇಲ್ಲ. ಹಾಗಾಗಿಯೇ ಅವರು ಹೊರಗಿನಿಂದ ಹೋದವರು ಕರುಬುವಷ್ಟು ಪ್ರಸನ್ನಚಿತ್ತರು.

ಇದು ನನ್ನ ಹದಿನೈದು ವರ್ಷಗಳ ಹಿಂದಿನ ಅನುಭವ. ಈಗ ಹೋಗಿ ನೋಡಿದರೆ ನಾನು ವಾಸಮಾಡಿದ ಚಿತ್ರದುರ್ಗ ಪಟ್ಟಣವಂತೂ ಬಹು ಬದಲಾಗಿದೆ. ಗ್ರಾಮಾಂತರ ಸಮಾಜ ಹೇಗೋ ನನಗೆ ತಿಳಿಯದು. ಇತ್ತೀಚೆಗೆ ಚಳ್ಳಕೆರೆ ಸುತ್ತಮುತ್ತ ಕೇಂದ್ರ ಸರ್ಕಾರದ ರಕ್ಷಣಾ ಇಲಾಖೆಯು ಸ್ಥಳೀಯ ಕಸಬುದಾರರ ಮತ್ತು ಪರಿಸರವಾದಿಗಳ ಪ್ರತಿಭಟನೆಗಳ ನಡುವೆಯೂ ಸಾವಿರಾರು ಎಕರೆ ಜಮೀನನ್ನು ವಶಪಡಿಸಿಕೊಂಡು ಆರಂಭಿಸಿರುವ ಮಿಲಿಟರಿ ಉದ್ದೇಶಗಳ ಸಂಸ್ಥಾಪನೆ ಅಲ್ಲಿನ ಬದುಕಿನ ಕ್ರಮದ ಮೇಲೆ ಏನು ಪರಿಣಾಮ ಉಂಟು ಮಾಡಿದೆಯೋ ಗೊತ್ತಿಲ್ಲ.

ಕೃಷ್ಣಮೂರ್ತಿ ಅವರು ಈ ಪುಸ್ತಕದಲ್ಲಿ ತಮ್ಮ ಕಥನಗಳ ಮೂಲಕ ಚಿತ್ರಿಸುವ ಸಮಾಜ ನಲವತ್ತು ವರ್ಷಗಳಷ್ಟು ಹಳೆಯದು. ಆದರೆ ಅದು ಹಳೆಯದೆಂದು ಹಳಿಯಲಾಗದಂತಹದ್ದು ಮತ್ತು ಅಪ್ರಸ್ತುತವಾಗದಂತಹದ್ದು, ಏಕೆಂದರೆ, ಆ ಸಮಾಜದ ಪ್ರಸನ್ನಚಿತ್ತತೆಯನ್ನು, ಇಂದು ನಾವು ಬಹು ಪ್ರಗತಿ ಹೊಂದಿ ಆಧುನಿಕರಾಗಿ ಏನೆಲ್ಲ ಗಳಿಸಿ ಏನೆಲ್ಲ ಕಳೆದುಕೊಂಡಿದ್ದೇವೆ ಎಂಬುದನ್ನು ಈ ಕಥನಗಳು ಆಳದಲ್ಲಿ ಕಾಡಿ ನಮಗೆ ನೆನಪಿಸುತ್ತವೆ. ಇದನ್ನೇ ಈ ಪುಸ್ತಕದ ಶೀರ್ಷಿಕೆ ಬಳಸಿ ಹೇಳುವುದಾದರೆ ನಾವು

ಚತುಷ್ಪಥ ರಸ್ತೆಗಳನ್ನು ಗಳಿಸಿಕೊಂಡು ಕಾಲುದಾರಿಗಳನ್ನು ಕಳೆದುಕೊಂಡಿದ್ದೇವೆ. ಆ ಕಾಲುದಾರಿಗಳ ಪಕ್ಕದ ನೆಲ-ಜಲ-ಜನ-ಜಾನುವಾರುಗಳು ತಮ್ಮಷ್ಟಕ್ಕೆ ತಾವಿದ್ದುಕೊಂಡು ಸುಖಿಸುವ ಜೀವಂತ ಚಿತ್ರಗಳನ್ನೇ ಕಳೆದುಕೊಂಡಿದ್ದೇವೆ. ಈ ಪುಸ್ತಕ ಅಂತಹ ಜೀವಂತ ಚಿತ್ರಗಳನ್ನು ನಮಗೆ ಕಟ್ಟಿಕೊಡುತ್ತದೆ. ಆ ಚಿತ್ರದಲ್ಲಿ ಕೊಲೆ-ಕಳ್ಳತನ-ಹಾದರ ಇತ್ಯಾದಿ ಕಥೆಗಳು ಇಲ್ಲವೆಂದಲ್ಲ. ಆದರೆ ಒಂದು ಸಮಾಜ ಅವನ್ನೆಲ್ಲ ಮೀರಿ ತನ್ನ ಸಮಾಧಾನವನ್ನು ಕಂಡುಕೊಳ್ಳುವ ಬಗೆಗಳನ್ನೂ ಅದರೊಂದಿಗೆ ಸೂಚಿಸುತ್ತವೆ.

ಜಾನಪದ ಹಾಡುಗಾರರಾದ ಸಿರಿಯಜ್ಜಿ, ದಾನಮ್ಮ, ಜಯಮ್ಮ, ಕತ್ತೆಗಳನ್ನು ಮೇಯಿಸುತ್ತಾ ಊರೂರು ಅಲೆಯುತ್ತಾ ಕತೆ ಹೇಳುವ ಕಲೆಯನ್ನು ಕಲಿತಿರುವ ಎಂಭತ್ತರ ನರಸಜ್ಜ, ಒಂಬತ್ತು ಎಕರೆ ಜಮೀನು ಉಳಿಸಿಕೊಳ್ಳಲು ಐವತ್ತು ಎಕರೆ ಜಮೀನು ಕಳೆದುಕೊಂಡ ತನ್ನ ಕಥೆಯಷ್ಟೇ ಸ್ವಾರಸ್ಯಕರವಾಗಿ ಜಾನಪದ ಕಥೆಗಳನ್ನು ಹೇಳುವ ಗಿರಿಯಯ್ಯ, ತನ್ನ ಕಸುಬಿನಿಂದಾಗಿಯೇ ಹೆಂಡತಿಯನ್ನು ಕಳೆದುಕೊಂಡರೂ ಕೋತಿ ಕುಣಿಸುವ ಕಸುಬಿನಲ್ಲೇ ತನ್ನ ಬದುಕಿನ ತತ್ವ ಅರಸುತ್ತಿರುವವ ಬೊಮ್ಮಣ್ಣ, ಗುಂಡೇರಿ ಬಳಿಯ ಅಮೃತಮಹಲ್ ಕಾವಲಿನ ಚರವಾಯಿಗಳು, ನಾಟಿ ಪಶುವೈದ್ಯ ಪಾಲನಾಯಕ ಮುಂತಾದ ಜಾನಪದರ ಬದುಕಿನ, ಕೆಲವೊಮ್ಮೆ ರೋಚಕವೆನಿಸುವ ಸ್ವಾರಸ್ಯಕರ ಚಿತ್ರಗಳು ಮತ್ತು ಅವರು ಹೇಳುವ ಹಾಡು ಕತೆಗಳ ವಿವರಗಳ ಜೊತೆ ಈ ಜಾನಪದ ಸಂಪತ್ತಿನ ಮಧ್ಯೆಯೇ ಮೂಡಿದ ಒಂದು ವಿಶಿಷ್ಟ ವ್ಯಕ್ತಿತ್ವವೆನಿಸುವ ಬೆಳಗೆರೆ ಕೃಷ್ಣಶಾಸ್ತ್ರಿ ಮತ್ತು ಅವರ ತಂದೆ ಚಂದ್ರಶೇಖರ ಶಾಸ್ತ್ರಿಗಳ ಕತೆಗಳೂ ಜೋಡಿಸಿಕೊಂಡು ಈ ಕಥನಯಾತ್ರೆ ಒಂದು ಹೊಸ ಆಯಾಮವನ್ನೇ ದೊರಕಿಸಿಕೊಂಡುಬಿಡುತ್ತದೆ. ಇದು ನಾವು ಅಧ್ಯಯನಕ್ಕೆ ಆರಂಭಿಸಿದ ಜಾನಪದ-ಶಿಷ್ಟ, ವೈದಿಕ-ಅವೈದಿಕ ಎಂಬ ಸಾಂಸ್ಕೃತಿಕ ವಿಂಗಡಣೆಗಳು ಇಂದು ಅಧ್ಯಯನದ ಗುರಿ-ಉದ್ದೇಶಗಳಿಂದಲೇ ನಮ್ಮನ್ನು ಚ್ಯುತಿಗೊಳಿಸಿ ಅಗ್ಗದ ಸಾಂಸ್ಕೃತಿಕ ರಾಜಕಾರಣದತ್ತ ಒಯ್ದಿರುವ ದುರಂತದ ಕತೆಯನ್ನು ಹೇಳುತ್ತದೆ.

ಬೆಳಗೆರೆ ಕೃಷ್ಣಶಾಸ್ತ್ರಿಗಳ ಜೊತೆ ಸಾಕಷ್ಟು ಒಡನಾಡಿರುವ ನಾನು ಅವರನ್ನು ಚೆನ್ನಾಗಿ ಬಲ್ಲೆ. ಅವರ ಮತ್ತು ಅವರನ್ನು ಮೀರಿಸಿದ ಅನ್ವೇಷಣಾತ್ಮಕತೆಯ ಬದುಕು ನಡೆಸಿದ ಅವರ ತಂದೆಯವರ ಕಥೆಯನ್ನು (ಮತ್ತು ಈ ಕಥೆಗಳ ಜೊತೆಗೇ ಬಂದು ಸೇರಿಕೊಳ್ಳುವ ಗದುಗಿನ ಭಾರತದ ರಾಮಯ್ಯ ಮತ್ತು ಭಜನೆ ಬುಡೇನ್ ಸಾಬ್‌ರ ಕಥೆಗಳನ್ನು ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ, ಕೃಷ್ಣಶಾಸ್ತ್ರಿಗಳು ಹೇಳುವ ದಂತಕಥೆಯಂತಿರುವ ಮುಕಂದೂರು ಸ್ವಾಮಿಗಳ ಕಥೆಯನ್ನು) ಜಾನಪದವೆಂದು ಕರೆಯುವುದೋ, ಶಿಷ್ಟವೆಂದು ಕರೆಯುವುದೋ? ಶಿಷ್ಟ-ಜಾನಪದ ವಿಂಗಡಣೆಯ ಗೆರೆಗಳ ನಡುವೆ ಇಂತಹವರ ಕತೆಗಳು ಕಳೆದುಹೋಗುವ ಮತ್ತು ಆ ಕತೆಗಳು ಹೇಳುವ ಸತ್ಯಗಳಿಂದ ಅಧ್ಯಯನ ವಂಚಿತವಾಗುವ ಅಪಾಯದ ಬಗ್ಗೆ ನಾನು ಇಲ್ಲಿ ಹೇಳುತ್ತಿರುವೆ. ಇಂತಹ ಕಾರಣಗಳಿಂದಲೇ ಇವೊತ್ತು ತತ್ವಪದಗಳ ಬಗ್ಗೆ ಹುಟ್ಟಿರುವ ಹೊಸ ಉತ್ಸಾಹವೂ ಈ ಅಪಾಯಕ್ಕೆ ಪಕ್ಕಾಗುವ ಎಲ್ಲ ಸೂಚನೆಗಳೂ ಇವೆ ಎಂಬುದನ್ನೂ ಇಲ್ಲಿ ಹೇಳಬಹುದು.

ಇಂತಹ ಮಹತ್ವದ ಪ್ರಶ್ನೆಗಳನ್ನು ಓದುಗರಲ್ಲಿ ಈ ಕಥನಯಾತ್ರೆ ಹುಟ್ಟಿಸುವುದು ಜಾನಪದ-ಶಿಷ್ಟಗಳ ಮಡಿ ಮೈಲಿಗೆಗಳಿಲ್ಲದೆ ಬೆರೆತು ಉಂಟಾಗಿರುವ ಅದರ ವಿಶಿಷ್ಟ ವಿನ್ಯಾಸದಿಂದಾಗಿ ಎಂಬುದನ್ನೂ ಇಲ್ಲಿ ಕಾಣಿಸಬೇಕು. ಚಿತ್ರದುರ್ಗದ ನಾಯಕರ ಆಡಳಿತದ ವೈಭವೀಕೃತ ಕಥೆಗಳ ಮಧ್ಯೆ ತಣ್ಣಗೆ ನಮ್ಮನ್ನು ಕೊರೆಯುವ ಹಲವು ರುದ್ರಕಥೆಗಳು, ಕಲ್ಲೇದೇವರ ಪುರದಲ್ಲಿ ಪಶುವೈದ್ಯರನ್ನು ಕಾಣಲು ಹೋಗಿ ಅಲ್ಲಿ ಬಸವಣ್ಣನ ಶಾಸನದ ಕತೆಯ ಜೊತೆಗೆ ಅಲ್ಲಿ ಅಲ್ಲಮನ ಕಾಲುದಾರಿಯಲ್ಲಿ ಈವರೆಗೆ ಎಲ್ಲೂ ಪತ್ತೆಯಾಗದ ಗುಹೇಶ್ವರನ ಗುಡಿಯನ್ನೂ, ಗೊಹೇಸ್ವರಪ್ಪನ ಅಂಕಿತವಿರುವ ಹಾಡುಗಳನ್ನೂ ಕಾಣುವಂತಾಗುವ ಮತ್ತು ಅಲ್ಲಿ ರಾತ್ರಿ ಕೇಳುವ ಒಂಟಿ ಹೆಂಗಸಿನ ಆರ್ತನಾದ ಹಾಗೂ ನಂತರದಲ್ಲೇ ಸಹಜ ತರ್ಕವೆಂಬಂತೆ ಕಾಣಿಸಿಕೊಳ್ಳುವ ಚಿರತೆಯ ಕತೆ, ಎ.ಕೆ. ರಾಮಾನುಜನ್‌ರ ಜೊತೆಯಲ್ಲಿ ಕೂತು ನೋಡಿದ ಗೊಲ್ಲರ ಕೋಲಾಟದ ಸಂಕೀರ್ಣತೆಯ ಬೆರಗು, ಮೊಳಕಾಲ್ಮೂರಿನ ಬಳಿ ಮ್ಯಾಸಬೇಡರ ಕಂಪಳರಂಗನ ಜಾತ್ರೆ ನೋಡಲು ಹೋಗಿ ಬರುವಾಗ ಮಾರ್ಗದ ಊರೊಂದರಲ್ಲಿ ಕಂಡ ಒಂದು ಪೌರಾಣಿಕ ನಾಟಕದ ಒಂದು ಸ್ವಾರಸ್ಯಕರ ಪ್ರಸಂಗ, ಹೆಂಡದಂಗಡಿಯೊಂದರಿಂದ ಕಂಡು ಕೇಳಿದ ಬಸಜ್ಜನ ಇಂದ್ರಾಗಾಂಧಿ ಪ್ರಸಂಗ, ಹಕ್ಕಿಪಿಕ್ಕರ ಹಂದಿ ಭೋಜನದ ಸಿದ್ಧತೆಯ ರೌದ್ರ ವಿವರ ಇತ್ಯಾದಿಗಳು ಸಾವಯವವಾಗಿ ಒಂದಕ್ಕೊಂದು ಹೆಣೆದುಕೊಂಡು ಧ್ವನಿಪೂರ್ಣವಾಗಿ ಚರಿತ್ರೆಯನ್ನು ಬಹುಸೂಕ್ಷ್ಮದಲ್ಲಿ ವರ್ತಮಾನದೊಳಕ್ಕೆ ನುಸುಳಿಸುವ ಸೃಜನಶೀಲತೆಯನ್ನು ಮೆರೆಯುತ್ತವೆ. ಎಷ್ಟಾದರೂ ಹನೂರರು ನಮ್ಮ ಹಿರಿಯ ಕಥೆಗಾರರೂ ಅಲ್ಲವೆ?

ಆದರೆ ಅವರ ಕಥೆಗಳಲ್ಲಿ ಕಾಣುವ ದೌರ್ಬಲ್ಯಗಳೂ ಇಲ್ಲಿ ಸೇರಿಕೊಂಡು ಇಡೀ ಕಥನಕ್ಕೆ ಸಿಗಬಹುದಾಗಿದ್ದ ಒಂದು ದರ್ಶನದ ನೋಟವನ್ನು ಮುಕ್ಕಾಗಿಸಿವೆ ಎಂಬುದನ್ನೂ ಇಲ್ಲಿ ಹೇಳಬೇಕು. ಚಿತ್ರದುರ್ಗದ ಕಥೆಗಳ ಜೊತೆಗೇ ತಮ್ಮ ಇತ್ತೀಚಿನ ಪ್ರಿಯ ವಸ್ತುವಾದ ನಿಯೋಗ ಪದ್ಧತಿ ಕುರಿತು ತಾವು ಮಾಡಹೊರಟಿರುವ ಸಂಶೋಧನೆಗಳ ಕಥೆಗಳನ್ನೂ, ಮೈಸೂರು ಜಿಲ್ಲೆಯ ನಂಜುಂಡೇಶ್ವರ, ಮಂಟೇಸ್ವಾಮಿ, ಬಿಳಿಗಿರಿ ರಂಗ, ಮಲೆ ಮಾದೇಶ್ವರರಿಗೆ ಸಂಬಂಧಿಸಿದ ಜಾನಪದ ಐತಿಹ್ಯಗಳ ತಮ್ಮ ವ್ಯಾಖ್ಯಾನಗಳನ್ನೂ, ತಿರುಪತಿ ದೇವರ ವಿಗ್ರಹದ ಜೀವಂತಿಕೆ ಕುರಿತು ತಾವು ಕೇಳಿದ ಕರ್ಣಾಕರ್ಣಿಕವಾದ ಕಥೆಯನ್ನೂ, ಭದ್ರಾಚಲದ ಬಳಿ ಕಂಡ ಒಂದು ಕಪಟ ಜಾನಪದ ಆಚರಣೆಯ ವಿವರಗಳನ್ನೂ ಈ ಪುಸ್ತಕದ ಚೌಕಟ್ಟಿನೊಳಕ್ಕೆ ಒಳನುಗ್ಗಿಸಿ ಅದಕ್ಕಾಗಿ ಹೊಸೆದಂತೆ ಕಾಣುವ ವ್ಯಾಖ್ಯಾನಗಳ ಹಿಂದಿನ ಮಹತ್ವಾಕಾಂಕ್ಷೆಯನ್ನು ಈ ಪುಸ್ತಕದ ಮುಖ್ಯ ಕಥಾನಕ ಹೊರಲಾಗದೆ ಪುಸ್ತಕದ ಅಂತ್ಯಭಾಗ ಬಸವಳಿದಿದೆ- ಪುಸ್ತಕದ ಮಂಗಳ ಗೀತೆಯಂತಿರುವ, ಕೃಷ್ಣಶಾಸ್ತ್ರಿಗಳ ಗುಡಿಸಿಲಿನ ಇಂದಿನ ಚಿತ್ರದ ಕಾವ್ಯಮಯ ವರ್ಣನೆಯ ಒಂದಿಷ್ಟು ತಂಗಾಳಿ ಈ ಬಸವಳಿಕೆಯನ್ನು ಸ್ವಲ್ಪ ಕಡಿಮೆ ಮಾಡುತ್ತದಾದರೂ.

ನಾನು ಕಂಡಂತೆ ಈ ಜಿಲ್ಲೆಯಲ್ಲಿ ಆಗಿ ಹೋದ ಸಾಧು ಸಂತರ ಸಂಖ್ಯೆ ಜಾಸ್ತಿ. ಅಂತಹವರ ಸಮಾಧಿಗಳೂ, ಅವುಗಳ ಭಕ್ತ ಸಮೂಹಗಳೂ ಅಲ್ಲಲ್ಲಿ ಇವೆ. ಈಗಲೂ ಜನಸಂದಣಿಯ ಮಧ್ಯೆ ಕಾಣದಂತಹ ಯೋಗಿಗಳೂ, ಸಿದ್ಧರೂ, ಅವಧೂತರೂ ಅಲ್ಲಿರುವವರೆಂದು ಹೇಳಲಾಗುತ್ತದೆ. ಅಂತಹವರ ಭಕ್ತ ಸಮೂಹಗಳು ಈಗಲೂ ಅಲ್ಲಿವೆ. ದೊಡ್ಡೇರಿಯಲ್ಲಿ ಈಗ ಒಂದು ಸಂಸ್ಥಾನವನ್ನೇ ಕಟ್ಟಿರುವ ಸತ್‌ಉಪಾಸಿ ಮಲ್ಲಣ್ಣನವರ ಕಥೆ ಬಹುಜನಜನಿತ. ಚಿತ್ರದುರ್ಗದ ಈವೊಂದು ವಿಶಿಷ್ಟ ಪರಂಪರೆಯ ಕಥೆಗಳನ್ನೂ–ಕೃಷ್ಣಶಾಸ್ತ್ರಿಗಳ ಕಥೆಗೆ ಸಂವಾದಿಯಾಗಿ–ಹನೂರರು ತಮ್ಮ ಕಥನದಲ್ಲಿ ಜೋಡಿಸುವಂತಾಗಿದ್ದರೆ ಇದರ ಸಾಂಸ್ಕೃತಿಕ ಆಯಾಮಕ್ಕೊಂದು ಹೊಸ ಬೆಡಗು ಪ್ರಾಪ್ತಿಯಾಗುತ್ತಿತ್ತೇನೋ!

ಈ ಎರಡು ಕೊರತೆಗಳನ್ನು ಬಿಟ್ಟರೆ ಇದೊಂದು ಆಧುನಿಕ ಕನ್ನಡ ವಾಙ್ಮಯಕ್ಕೇ ಅಪರೂಪದ ಕೊಡುಗೆ ಎಂದು ಹೇಳಬಹುದು.

ಪುಸ್ತಕದ ಹೆಸರು: **ಕಾಲುದಾರಿಯ ಕಥನಗಳು**

ಲೇ: **ಕೃಷ್ಣಮೂರ್ತಿ ಹನೂರು**

ಪ್ರ: **ಮನೋಹರ ಗ್ರಂಥ ಮಾಲೆ** ಬೆಲೆ: ರೂ. ೨೬೦/–

(ಫೇಸ್‌ಬುಕ್ ಬರಹ : ಸೆಪ್ಟಂಬರ್ ೧೭ , ೨೦೧೭)

ಚಂಪಾ ತೆಗೆದ ಸಾಹಿತ್ಯ ಸಮ್ಮೇಳನದ ಮರ್ಯಾದೆ!

ಮೈಸೂರಿನಲ್ಲಿ ಅಖಿಲಭಾರತ ಸಾಹಿತ್ಯ ಸಮ್ಮೇಳನ ಶುರುವಾಗಿ ವಿವಿಧ ಗೋಷ್ಠಿಗಳ ವರದಿಗಳು ಬರುತ್ತಿವೆ. ಸಮ್ಮೇಳನದ ಸರ್ವಾಧ್ಯಕ್ಷ ಚಂದ್ರಶೇಖರ ಪಾಟಿಲರು, 'ಪ್ರಜಾವಾಣಿ' ಪತ್ರಿಕೆಯ ಸುದ್ದಿ ತಲೆಬರಹವನ್ನೇ ಬಳಸಿ ಹೇಳುವುದಾದರೆ, ಈ ಸಾಹಿತ್ಯ ಸಮ್ಮೇಳನದ ವೇದಿಕೆಯಿಂದ 'ರಾಜಕೀಯ ಕಹಳೆ' ಊದಿದ್ದಾರೆ. ಸಾಹಿತ್ಯ ಸಮ್ಮೇಳನಗಳ ವೇದಿಕೆ ರಾಜಕೀಯ ವೇದಿಕೆಯಾಗಿ ಪರಿವರ್ತಿತವಾಗಿರುವುದು ಇದು ಮೊದಲೇನಲ್ಲ. ಈ ಹಿಂದಿನ ಸಮ್ಮೇಳನಗಳ ಅನೇಕ ಗೋಷ್ಠಿಗಳ ಭಾಷಣಗಳು ರಾಜಕೀಯ ಗಮಲುಗಳಿಂದಲೇ ಕೂಡಿ ಜಿಗುಪ್ಸೆ ಮೂಡಿಸುತ್ತಿದ್ದುದನ್ನು ನಾವೆಲ್ಲ ಗಮನಿಸಿದ್ದೇವೆ. ಆದರೆ ಸಮ್ಮೇಳನದ ಸರ್ವಾಧ್ಯಕ್ಷರೇ ಈ ಸಮ್ಮೇಳನದಲ್ಲಿ ಈ ಪ್ರವೃತ್ತಿಗೆ ರಾಜಾರೋಷವಾದ 'ಕಹಳೆ ನಾಂದಿ'ಯ ಮರ್ಯಾದೆ ನೀಡಿರುವುದು ಇದೇ ಮೊದಲು.

ಚಂಪಾ ಈ ವೇದಿಕೆಯಿಂದ 'ಕರ್ನಾಟಕದ ಹಿತಾಸಕ್ತಿಗಳನ್ನು ಕಾಪಾಡಲು ಜಾತ್ಯತೀತ ರಾಷ್ಟ್ರೀಯ ಪಕ್ಷ'ವೊಂದನ್ನು ಆಯ್ಕೆ ಮಾಡಿಕೊಳ್ಳಬೇಕೆಂದು ಕನ್ನಡಿಗರಿಗೆ ಕರೆ ಕೊಟ್ಟಿದ್ದಾರೆ. ಯಾವಾಗಲೂ ನಿರ್ಭಿಡೆಯಿಂದ ನೇರವಾಗಿ ಮಾತಾಡುವ ಚಂಪಾ ಕಾಂಗ್ರೆಸ್‌ನ್ನು ಬೆಂಬಲಿಸಿ ಎಂದು ಸರಳವಾಗಿ, ನೇರವಾಗಿ ಹೇಳಲೇಕೋ ಹಿಂಜರಿದಿದ್ದಾರೆ. ಅಷ್ಟರ ಮಟ್ಟಿಗೆ ಸಾಹಿತ್ಯ ಸಮ್ಮೇಳನದ ವೇದಿಕೆಯ 'ಮರ್ಯಾದೆ'ಯನ್ನು ಅವರು ಉಳಿಸಿದ್ದಾರೆ! ಚಂಪಾ ಅವರ ಪ್ರಕಾರ ಕನ್ನಡಿಗರು ಬೆಂಬಲಿಸಬೇಕಾದ ರಾಜಕೀಯ ಪಕ್ಷ ಜಾತ್ಯತೀತವಾಗಿದ್ದರಷ್ಟೇ ಸಾಲದು, ಅದು ರಾಷ್ಟ್ರೀಯವೂ ಆಗಿರಬೇಕಂತೆ! ಅವರು ಈ ಷರತ್ತನ್ನು ಏಕೆ ಹಾಕುತ್ತಿದ್ದಾರೆಂಬುದು ಸ್ಪಷ್ಟ. ಏಕೆಂದರೆ ತಮ್ಮ ಬೆಂಬಲ ಜಾತ್ಯತೀತ ಜನತಾ ದಳಕ್ಕೂ ಎಲ್ಲಿ ಹಂಚಿಹೋಗುವುದೋ ಎಂಬ ಆತಂಕ ಅವರದ್ದು! ಇಂತಹ ಅಪ್ಪಟ, ನಿರ್ಲಜ್ಜ ರಾಜಕೀಯ (ಚೇಲಾಗಿರಿಯ) ಭಾಷಣ ಹಿಂದೆಂದೂ ಈ ವೇದಿಕೆಯಿಂದ ಯಾರೂ ಮಾಡಿರಲಿಲ್ಲ. ಕನ್ನಡ ಸಾಹಿತ್ಯ ಲೋಕ ಬಹುಮಟ್ಟಿಗೆ ರಾಜಕೀಯ ಪುಢಾರಿಗಳ ಲೋಕವೇ ಆಗಿಬಿಟ್ಟಿದ್ದು ಅದರ ಚೇಲಾಗಿರಿ ಪಾತಾಳ

ಮುಟ್ಟಿರುವ ಸೂಚನೆ ಇದು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ರಾಜಕಾರಣದ ಸುದ್ದಿಗೆ ಹೋಗದೆ ಹೆಚ್ಚು ಸಾಂಸ್ಕೃತಿಕ ಘನತೆಯಿಂದ ಮಾತಾಡಿದ್ದಾರೆ. ಹಾಗಾಗಿ, ಅವರು ಕೂಡ ಸಾಹಿತ್ಯ ಸಮ್ಮೇಳನದ ವೇದಿಕೆಯ ಇಂತಹ ದುರ್ಬಳಕೆಯನ್ನು ಮತ್ತು ಇಂತಹ ರಾಜಕೀಯ ಚೇಲಾಗಿರಿಯನ್ನು ತಮ್ಮ ಪಕ್ಷಕ್ಕೆ ನೀಡಿದ ಬೆಂಬಲವೆಂದು ಭಾವಿಸದೆ, ಇದನ್ನೆಲ್ಲ ಅಸಹ್ಯದಿಂದಲೇ ನೋಡುವರು ಎಂದು ಭಾವಿಸಬಹುದು.

ಚಂಪಾ ತಮ್ಮ ಭಾಷಣದಲ್ಲಿ ಕನ್ನಡ ಸಾಹಿತ್ಯದಲ್ಲಿ ದಲಿತ–ಬಂಡಾಯ ಆರಂಭವಾದ ಮೇಲೆ ಸಮ್ಮೇಳನದ ಖದರೇ, ಸ್ವರೂಪವೇ ಬದಲಾಗಿದೆ ಎಂದಿದ್ದಾರೆ. ಅವರ ಮಾತು ನಿಜ. ಆ ಬದಲಾವಣೆಯ ಅಂತಿಮ ಫಲ ಸ್ವರೂಪವೇ ಇವರ ನಿನ್ನೆಯ ಭಾಷಣ. ಸಾಹಿತ್ಯ ಸಮ್ಮೇಳನವನ್ನು ಆಯೋಜಿಸುವ ಸಾಹಿತ್ಯ ಪರಿಷತ್ತು ಕರ್ನಾಟಕ ಏಕೀಕರಣದ ಸಂದರ್ಭದಲ್ಲಿ ಆರಂಭವಾದದ್ದು ನಾಡು ನುಡಿಗಳ ರಕ್ಷಣೆ ಮತ್ತು ಪೋಷಣೆಗಾಗಿಯೇ. ಆದರೆ ಅದು ಆಗಬೇಕಾದದ್ದು ಸಾಹಿತಿಗಳ ಘನತೆವೆತ್ತ ಮಾರ್ಗದರ್ಶನದಲ್ಲಿ, ಸಾಹಿತ್ಯದ ಮರ್ಯದೆಯ ಪರಿಧಿಯಲ್ಲಿ. ಹಾಗಾಗಿಯೇ ಈ ಹಿಂದೆ ಸಾಹಿತ್ಯ ಸಮ್ಮೇಳನಗಳಲ್ಲಿ ಅಧ್ಯಕ್ಷರು (ಸರ್ವಾಧ್ಯಕ್ಷತೆ ಎಂಬುದು ಅಧ್ಯಕ್ಷತೆ ಎಂಬುದರ ಮರ್ಯಾದೆಗೆ ತಕ್ಕನಲ್ಲದವರೆಲ್ಲ ಆ ಸ್ಥಾನಕ್ಕೆ ಆಯ್ಕೆಯಾಗತೊಡಗಿದ ನಂತರ ಕಳೆದುಹೋದ ಅದರ ಮರ್ಯಾದೆಯನ್ನು ಉಳಿಸಲು ಚಲಾವಣೆಗೆ ತರಲಾದ ಶಬ್ದ!) ಹೆಚ್ಚಾಗಿ ಕನ್ನಡ ಸಾಹಿತ್ಯ–ಸಂಸ್ಕೃತಿಗಳ ಸಮಸ್ಯೆಗಳ ಬಗ್ಗೆ ಮತ್ತು ಅವನ್ನು ಪರಿಹರಿಸುವ ಮಾರ್ಗಗಳ ಬಗ್ಗೆ ಮಾತಾಡಿ, ಕ್ವಚಿತ್ತಾಗಿ ಇದಕ್ಕೆ ಅಗತ್ಯವಾದ ರಾಜಕೀಯ ಇಚ್ಛಾಶಕ್ತಿಯ ಬಗ್ಗೆ ಮಾತನಾಡುತ್ತಿದ್ದರು. ಆಳುವವರಿಗೆ ಎಚ್ಚರಿಕೆ ನೀಡುತ್ತಿದ್ದರು. ಮಿಕ್ಕಂತೆ ಗೋಷ್ಠಿಗಳು ನೇರವಾಗಿ ಸಾಹಿತ್ಯ–ಸಂಸ್ಕೃತಿಗಳಿಗೆ ಸಂಬಂಧಿಸಿರುತ್ತಿದ್ದವು. ಒಂದು ಕವಿಗೋಷ್ಠಿ ಇರುತ್ತಿತ್ತು.

ಆದರೆ ದಲಿತ–ಬಂಡಾಯಗಳೆಂಬುವು ಬಂದಮೇಲೆ ನುಡಿಯ ಕಳಕಳಿ ಹಿನ್ನೆಲೆಗೆ ಸರಿದು, ನಾಡಿನ ಹಿತದ ಹೆಸರಿನಲ್ಲಿ ನೆಲ–ಜಲ–ಸಮಾಜ–ಇತಿಹಾಸಗಳ ಹೆಸರಲ್ಲಿ ಸಾಹಿತ್ಯೇತರ ಗೋಷ್ಠಿಗಳು ಆರಂಭವಾದವು. ಇಂತಹ ಗೋಷ್ಠಿಗಳಿಗೆ ವೇದಿಕೆ ಗಿರಾಕಿಗಳು ಜಾಸ್ತಿಯಾದುದರಿಂದ ಸಮಾನಾಂತರ ವೇದಿಕೆ ಎಂಬ ಹೆಸರಿನಲ್ಲಿ ಮತ್ತಷ್ಟು 'ಸಾಮಾಜಿಕ ಕಳಕಳಿ'ಯ ಗೋಷ್ಠಿಗಳು ಆರಂಭವಾದವು. ಇದರ ಜೊತೆಗೇ ಒಂದು–ಎರಡು–ಮೂರು–ನಾಲ್ಕು ಕವಿಗೋಷ್ಠಿಗಳೂ ಸೇರಿಕೊಂಡವು. ಇದರ ಪರಿಣಾಮವಾಗಿ ಸಾಹಿತ್ಯ ಸಮ್ಮೇಳನವೆಂಬುದು ಒಳ್ಳೆಯ ಅರ್ಥದಲ್ಲಿ ಜಾತ್ರೆ ಎಂಬಂತಿದ್ದುದು ಈಗ ಕೆಟ್ಟ ಅರ್ಥದ ಸಂತೆಯಾಗಿ ಹೋಗಿ, ಸಾಹಿತ್ಯ ಹಿನ್ನೆಲೆಗೆ ಸರಿಯಿತು. ಸಾಹಿತ್ಯ ಹಿನ್ನೆಲೆಗೆ ಸರಿದಂತೆ ಗೋಷ್ಠಿಗಳ ಮರ್ಯಾದೆಯೂ ಇಲ್ಲವಾಯಿತು. ರಾಜಕೀಯ ಪುಢಾರಿಗಳೆಲ್ಲ ಸಾಹಿತ್ಯ ಸಮ್ಮೇಳನಗಳಿಗೆ ಬಂದು ತಮ್ಮ ಬಡಾಯಿ ಭಾಷಣಗಳನ್ನೂ, ದಂಡಿ ದಂಡಿಯಾಗಿ ರಾಜಕೀಯ ಕ್ಲೀಷೆಗಳ ಕವಿತಾ ವಾಚನಗಳನ್ನೂ ಆರಂಭಿಸುವಂತಾಯಿತು.

ಇದೆಲ್ಲ ಸಾಹಿತ್ಯ ಸಮ್ಮೇಳನದ ಹೆಸರಿನಲ್ಲೇ ಏಕೆ ಎಂದು ಈಗ ಯಾರೂ ಕೇಳುವುದಿಲ್ಲ! ಕೇಳಿದರೆ ಅಪ್ಪಟ ಸಾಹಿತ್ಯವೆಂಬುದು ಎಲ್ಲೂ ಇಲ್ಲ ಎಂಬ ಅಸಂಬದ್ಧ

ಉತ್ತರ ಬರುತ್ತದೆ. ಆದರೆ ಈ ಪ್ರಶ್ನೆಯನ್ನು ಏಕೆ ಕೇಳಬೇಕಾಗಿದೆ ಎಂಬುದನ್ನು ಚಂಪಾ ಅವರ ನಿನ್ನೆಯ ಅಧ್ಯಕ್ಷ ಭಾಷಣ ಸ್ಪಷ್ಟಪಡಿಸುವಂತಿದೆ. ಅಪ್ಪಟ ಸಾಹಿತ್ಯವೆಂಬುದಿಲ್ಲ ನಿಜ. ಹಾಗೆಂದು ಅದರ ಅರ್ಥವನ್ನು ಅಸಂಬದ್ಧವಾಗಿ ವಿಸ್ತರಿಸುತ್ತಾ ಹೋದರೆ, ಅದರ ಅರ್ಥ ಔಚಿತ್ಯ ಮೀರಿ ಹೀಗೆ ಅಶ್ಲೀಲವಾಗುತ್ತಾ ಹೋಗುತ್ತದೆ. ಸಾಹಿತ್ಯ ಎಂಬ ಶಬ್ದದ ಜೊತೆಗೇ ಸಂಸ್ಕೃತಿ ಎಂಬ ಶಬ್ದವೂ ಇದೆ. ಅದು ಸಾಹಿತ್ಯದ ಅರ್ಥವನ್ನು ಎಷ್ಟರವರೆಗೆ ವಿಸ್ತರಿಸಬಹುದು ಎಂಬುದನ್ನು ಸೂಚಿಸುತ್ತದೆ.

ಆದರೆ ಚಂಪಾರನ್ನು ಕೇಳಿ ನೋಡಿ. ಜನ ತಮ್ಮ ನಾಡು–ನುಡಿಯ ಹಿತ ದೃಷ್ಟಿಯಿಂದ ರಾಜಕೀಯವಾಗಿ ಯಾರನ್ನು ಆಯ್ಕೆ ಮಾಡಿಕೊಳ್ಳಬೇಕೆಂದು ಸೂಚಿಸುವ ಹಕ್ಕು ಸಮ್ಮೇಳನಾಧ್ಯಕ್ಷರಿಗೆ ಇದೆ ಎಂದು ಘಂಟಾಘೋಷವಾಗಿ ಹೇಳಿಯಾರು! ಆ ಧೈರ್ಯ, ವಿಶ್ವಾಸ ಅವರಿಗೆ ಬಂದಿರುವುದೇ ಅವರೇ ಹೇಳುವಂತೆ, ಬಂಡಾಯ–ದಲಿತ ಚಳುವಳಿಗಳು ಇತ್ತೀಚಿನ ವರ್ಷಗಳಲ್ಲಿ ಸಾಹಿತ್ಯ ಸಮ್ಮೇಳನಗಳನ್ನು ರಾಜಕೀಯ ಸಮ್ಮೇಳನಗಳನ್ನಾಗಿ ಪರಿವರ್ತಿಸುತ್ತಾ ಬಂದಿರುವ ಚಾಳಿಯಿಂದಾಗಿ. ಇದಕ್ಕೆ ಕಾರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರುಗಳ ಗುಣಮಟ್ಟವೂ ಕುಸಿದಿರುವುದೂ ಆಗಿದೆ. ಇದಕ್ಕೆ ಮತ್ತೆ ಕಾರಣ ಈ ಸಂಸ್ಥೆ ಬುಡದಿಂದ ತಲೆವರೆಗೆ ಸಾಹಿತ್ಯೇತರ ಶಕ್ತಿಗಳ ಕೈವಶವಾಗಿರುವುದು. ನಾನು ಬಹಳ ಬಾರಿ ಹೇಳಿರುವಂತೆ ಈ ಬಂಡಾಯ–ದಲಿತ ಎಂಬ ಹಣೆಪಟ್ಟಿಯ ಸಾಹಿತ್ಯ ಚಳುವಳಿಗಳು ಎಂದೂ ಸಾಹಿತ್ಯ ಚಳುವಳಿಗಳೇ ಆಗಿರಲಿಲ್ಲ. ಅವು ಮೂಲತಃ ಸಾಹಿತ್ಯವನ್ನು 'ಬಳಸಿ'ಕೊಳ್ಳಲು ಬಯಸಿದ ರಾಜಕೀಯ ಚಳುವಳಿಗಳು. ಬಂಡಾಯ–ದಲಿತ ಸಾಹಿತ್ಯವೆಂಬುದರ ಮಧ್ಯದಿಂದ ನೆನಪಿಸಿಕೊಳ್ಳಬಹುದಾದ ಒಂದು ಸಾಹಿತ್ಯ ತುಂಡನ್ನು ಯಾರಾದರೂ ಉಲ್ಲೇಖಿಸಬಲ್ಲಿರಾ? (ಇಲ್ಲಿ ಒಂದು ಮಾತು ನೆನಪಿಡಬೇಕು: ಉದಾಹರಣೆಗೆ ಕೆಲವರು ದಲಿತ–ಬಂಡಾಯ ಸಾಹಿತಿಗಳೆಂದು –ತಪ್ಪಾಗಿ – ಗುರುತಿಸುವ ದೇವನೂರ ಮಹಾದೇವ ಅಥವಾ ಸಿದ್ದಲಿಂಗಯ್ಯ ಅವರಂತಹವರು ಈ ಚಳುವಳಿಗಳು ಆರಂಭವಾಗುವ ಮುನ್ನವೇ ಶ್ರೇಷ್ಠವಾದುದನ್ನು ಬರೆದಿದ್ದರು.) ಒಂದು ಕಾಲದಲ್ಲಿ ನಾವೆಲ್ಲ ಗೌರವಿಸುತ್ತಿದ್ದ ನಿಜವಾದ ಸಾಹಿತಿಯೇ ಆಗಿದ್ದ ಚಂಪಾ, ಬಂಡಾಯ ಸಾಹಿತ್ಯ 'ಸಂಘಟನೆ'ಯ ರಾಜಕಾರಣದಲ್ಲಿ ಜನಪ್ರಿಯ ನಾಯಕತ್ವದ ಹಪಾಹಪಿಗೆ ಬಿದ್ದು ಅಂತಿಮವಾಗಿ ಹೀಗೆ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಅದರ ಮರ್ಯಾದೆಗೆ ಭಂಗ ತರುವ ಹಂತ ತಲುಪಿದ್ದಾರೆ. ಇದು ನಿಜವಾದ ಸಾಹಿತ್ಯ ದುರಂತ.

ಅಂದಹಾಗೆ ಅವರ ರಾಜಕೀಯ ಆಯ್ಕೆಗೆ ನಮ್ಮಲ್ಲಿ ಬಹಳ ಜನರ ವಿರೋಧವಿರಲಾರದು. ಆದರೆ ತಮ್ಮ ವೈಯಕ್ತಿಕ ರಾಜಕೀಯ ಆಯ್ಕೆಯನ್ನು ಸಾಹಿತ್ಯ ಸಮ್ಮೇಳನದಲ್ಲಿ ಪ್ರಚಾರ ಮಾಡಹೊರಡುವುದು ನಿಜವಾಗಿಯೂ ಅಪ್ಪಟ ರಾಜಕೀಯ ಪುಢಾರಿಗಿರಿಯೇ. (ಮೂರು ವರ್ಷಗಳ ಹಿಂದೆ ಯು.ಆರ್. ಅನಂತಮೂರ್ತಿಯವರು ಧಾರವಾಡ ಸಾಹಿತ್ಯ ಸಮ್ಮೇಳನದ ಆರಂಭದಲ್ಲಿ ಮೋದಿ ವಿರೋಧಿ ಪ್ರಚಾರ ಆರಂಭಿಸಿದಾಗಲೂ ನಾನು ಇದೇ ರೀತಿಯ ಟೀಕೆಯ ಮಾತುಗಳನ್ನು ಬರೆದಿದ್ದೆ.)

ಚಂಪಾ ಕನ್ನಡ ಮಾಧ್ಯಮ ಜಾರಿಗೆ ತರಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆಯೂ ತಮ್ಮ ಭಾಷಣದಲ್ಲಿ ವಿವರವಾಗಿ ಮಾತಾಡಿದ್ದಾರೆ. ಇದನ್ನೆಲ್ಲ ಇವರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣಕ್ಕೆಂದೇ ಮೀಸಲಾಗಿಟ್ಟುಕೊಂಡು ಈವರೆಗೆ ಅದರ ಬಗ್ಗೆ ಮಾತನಾಡದಿರಲು ನಿರ್ಧರಿಸಿದ್ದರೆ? ಇವರೇಕೆ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ನಂತರದ ದಿನಗಳಲ್ಲಿ ಈ ಬಗ್ಗೆ ಒಂದೂ ಸೊಲ್ಲೆತ್ತಿಲ್ಲ? ಸರ್ಕಾರ ನಾಡು-ನುಡಿಗಳಿಗೆ ಸಂಬಂಧಿಸಿದಂತೆ ಕರೆಯುವ ಸಭೆಗಳಿಗೆ ಸದಾ ಹಾಜರಾಗುವ ಇವರು ಇಂತಹ ಸಭೆಗಳಲ್ಲಿ ಕನ್ನಡ ಮಾಧ್ಯಮ ಜಾರಿಗೆ ತರುವ ತುರ್ತಿನ ಬಗ್ಗೆ ಎಷ್ಟು ಬಾರಿ ಮಾತಾಡಿದ್ದಾರೆ? ಕನ್ನಡ ಮಾಧ್ಯಮದ ಹೆಸರಿನಲ್ಲಿ ಯಾವ ಕನ್ನಡದ ಹಬ್ಬವೂ ನಿಲ್ಲಬಾರದು ಎನ್ನುವ ಇವರು ಕನ್ನಡ ಮಾಧ್ಯಮದ ವಿಷಯವನ್ನು ಆ ಕನ್ನಡ ಹಬ್ಬಗಳಲ್ಲಿ ಮಾಡಬೇಕಾದ ಭಾಷಣಗಳ ಶಾಶ್ವತ ವಸ್ತುವನ್ನಾಗಿ ಮಾಡಿಕೊಂಡುಬಿಟ್ಟಿದ್ದಾರೆನಿಸುತ್ತದೆ. ಏಕೆಂದರೆ, ಅವರೇ ಒಮ್ಮೆ ಹೇಳಿಕೊಂಡಂತೆ, ಅವರು ನಿರಂತರ ಹೋರಾಟಗಾರರು. ಇವರ ಈ ಹೋರಾಟದ ನಿರಂತರತೆಗೆ ಕನ್ನಡ ಒಂದು ಸರಕಾಗಿದೆಯಷ್ಟೆ.

('ಉದಯವಾಣಿ' : ನವೆಂಬರ್ ೨೯, ೨೦೧೭)

ನೆಲಮಂಗಲ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ

(ತ್ಯಾಮಗೊಂಡ್ಲು; ೨೪ ಏಪ್ರಿಲ್ ೨೦೧೮)

ತಾಲ್ಲೂಕು ಸಾಹಿತ್ಯ ಸಮ್ಮೇಳನದ ಹೆಸರಿನಲ್ಲಿ ಸಂಭ್ರಮದೊಂದಿಗೆ ಇಲ್ಲಿ ಸೇರಿರುವ ಎಲ್ಲ ಕನ್ನಡ ಬಾಂಧವರೇ, ವಿಶೇಷವಾಗಿ ನನ್ನೂರು ತ್ಯಾಮಗೊಂಡ್ಲುವಿನ ನನ್ನ ಬಂಧುಗಳೇ, ನಿಮಗೆಲ್ಲರಿಗೂ ನನ್ನ ಹೃದಯಪೂರ್ವಕ ನಮಸ್ಕಾರಗಳು.

ನಾನು ತ್ಯಾಮಗೊಂಡ್ಲುವಿನ ಹುಡುಗ. ನಮ್ಮ ತಂದೆ ಸಿ.ಎಚ್. ಸೂರಾಚಾರ್ ಅವರು ಈ ಊರಿನ, ಈಗ ಮುಚ್ಚಿಹೋಗಿರುವ ಬಾಲಕರ ಪ್ರಾಥಮಿಕ ಶಾಲೆಯ ಮುಖ್ಯೋಪಧ್ಯಾಯರಾಗಿದ್ದ ಕಾರಣದಿಂದಾಗಿ ನಾನು ನನ್ನ ಶಾಲಾ ಶಿಕ್ಷಣವನ್ನು ಪೂರ್ತಿ ಇಲ್ಲೇ ಮುಗಿಸಿದ್ದು. ಆನಂತರ ನಾನು ಕಾಲೇಜು ಶಿಕ್ಷಣಕ್ಕೆಂದು ಬೆಂಗಳೂರಿಗೆ ಹೋದೆ. ಆನಂತರ ವೃತ್ತಿಜೀವನದ ಭಾಗವಾಗಿ ದೆಹಲಿ, ಬೆಂಗಳೂರು, ಮಂಗಳೂರು, ಮೈಸೂರು ಇತ್ಯಾದಿ ಊರುಗಳಲ್ಲಿ ನೆಲೆಸಿ ಈಗ ಕಳೆದ ಹತ್ತು ವರ್ಷಗಳಿಂದ ನನ್ನ ನಿವೃತ್ತ ಜೀವನವನ್ನು ಶಿವಮೊಗ್ಗದಲ್ಲಿ ನಡೆಸಿದ್ದೇನೆ. ಹೀಗೆ ಸುಮಾರು ಐವತ್ತು ವರ್ಷಗಳ ಕಾಲದಿಂದ ತ್ಯಾಮಗೊಂಡ್ಲುವಿನೊಂದಿಗೆ ಸಂಪರ್ಕ ಕಳೆದುಕೊಂಡಿದ್ದ ನನ್ನನ್ನು ಸ್ಥಳೀಯ ಸಾಹಿತ್ಯ ಪರಿಷತ್ತಿನ ಮಿತ್ರರು ಹೇಗೋ ಗುರುತಿಸಿ ಈ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆಯ ಗೌರವಕ್ಕೆ ಆಯ್ಕೆ ಮಾಡಿ ನನ್ನನ್ನು ಇಲ್ಲಿ ತಂದು ನಿಮ್ಮ ಮುಂದೆ ಕೂರಿಸಿದ್ದಾರೆ. ನಿಜವಾಗಿ ಇದು ನನಗೆ ಅನಿರೀಕ್ಷಿತ ಖುಷಿಯ, ಸಂಭ್ರಮದ ಘಳಿಗೆ. ಒಂದು ರೀತಿಯಲ್ಲಿ ಬದುಕಿನ ಸಾರ್ಥಕತೆಯ ಘಳಿಗೆ ಕೂಡ ಹೌದು. ಈ ಊರಿನ ಒಂದು ಕಾಲದ ಸಾಮಾನ್ಯ ಕುಟುಂಬವೊಂದರ ಹುಡುಗ ಇಂದು ಊರಿನ ಜನರ ಮುಂದೆ ಒಬ್ಬ ಗಣ್ಯ ಅತಿಥಿಯಾಗಿ ನಿಲ್ಲುವುದು ಒಂದು ರೋಮಾಂಚನದ ಕ್ಷಣವೇ ಹೌದು. ಈ ಖುಷಿ, ಸಂಭ್ರಮ ಮತ್ತು ರೋಮಾಂಚನಗಳಿಗೆ ಕಾರಣರಾದ ತಾಲ್ಲೂಕು ಸಾಹಿತ್ಯ ಪರಿಷತ್ತಿನ ಎಲ್ಲ ಪದಾಧಿಕಾರಿಗಳಿಗೆ, ನಿರ್ದಿಷ್ಟವಾಗಿ ತಮ್ಮ ಸೋದರ ಮತ್ತು ನನ್ನ ಶಾಲಾ ಸಹಪಾಠಿ ಡಾ. ಸಿ.ಆರ್. ರಮೇಶ್ ಅವರ ಮೂಲಕ ಕನ್ನಡ

ಸಾಹಿತ್ಯ ಕ್ಷೇತ್ರದಲ್ಲಿ ನಾನು ಮಾಡಿರುವ ಅಷ್ಟಿಷ್ಟು ಕೆಲಸವನ್ನು ಗುರುತಿಸಿ ಹಠ ಮಾಡಿ ನನ್ನನ್ನು ಇಲ್ಲಿಗೆ ಕರೆ ತಂದಿರುವ ಸಿ.ಆರ್ ಸ್ವಾಮಿಯವರಿಗೆ ಮೊಟ್ಟಮೊದಲಿಗೆ ನನ್ನ ಪ್ರೀತಿಪೂರ್ವಕ ಧನ್ಯವಾದಗಳನ್ನು ಅರ್ಪಿಸಬಯಸುತ್ತೇನೆ.

ತ್ಯಾಮಗೊಂಡ್ಲುವಿನೊಂದಿಗೆ ಐವತ್ತು ವರ್ಷಗಳಿಂದ ನನ್ನ ಸಂಪರ್ಕವಿರಲಿಲ್ಲ ಎಂದೆ. ಆದರೆ ನನ್ನ ವ್ಯಕ್ತಿತ್ವದ ಅಡಿಪಾಯ ಹಾಕಿದ ಬಾಲ್ಯಾನುಭವಗಳ ಈ ಊರನ್ನು ನಾನು ಹೇಗೆ ಮರೆಯಲು ಸಾಧ್ಯ? ನಮ್ಮ ಮೂಲ ಹಿರೀಕರ ಊರು ಪಕ್ಕದ ಡಾಬಸ್‌ಪೇಟೆ. ನಮ್ಮ ಮನೆದೇವರ ಊರು ಅದರ ಪಕ್ಕದ ದೇವರಹೊಸಹಳ್ಳಿ. ಹೀಗಿರುವಾಗ ನನ್ನ ಬೇರುಗಳು ಊರಿರುವ ಜಾಗವಿದು. ನಮ್ಮ ತಂದೆಗೆ ಇಲ್ಲಿಂದ ವರ್ಗವಾದ ನಂತರ ತ್ಯಾಮಗೊಂಡ್ಲುವಿನೊಡನೆಯ ನನ್ನ ಭೌತಿಕ ಸಂಪರ್ಕ ಹೆಚ್ಚೂಕಡಿಮೆ ಕಡಿದುಹೋಯಿತಾದರೂ ಭಾವನಾತ್ಮಕ ಸಂಪರ್ಕ ಸದಾ ಜೀವಂತವಾಗಿಯೇ ಇತ್ತು. ಇಲ್ಲಿ ನಾನು ಓದಿದ ಬಾಲಕರ ಸರ್ಕಾರಿ ಪ್ರಾಥಮಿಕ ಶಾಲೆ, ಬಾಲಕರ ಮಾಧ್ಯಮಿಕ ಶಾಲೆ, ಮಾಕನಕುಪ್ಪೆ ತಿಮ್ಮೇಗೌಡ ಪುರಸಭಾ ಪ್ರೌಢಶಾಲೆ, ಈ ಶಾಲೆಗಳಲ್ಲಿನ ನನ್ನ ನೂರಾರು ಸಂಖ್ಯೆಯ ಮತ್ತು ವೈವಿಧ್ಯಪೂರ್ಣ ಸಾಮಾಜಿಕ ಹಿನ್ನೆಲೆಗಳ ಮತ್ತು ಗುಣವಿಶೇಷಗಳ ಸಹಪಾಠಿಗಳ ಒಡನಾಟ ಮತ್ತು ಇವರಲ್ಲಿ ಅನೇಕರೊಂದಿಗೆ ಅಲೆದಾಡಿದ ಆಗ ತುಂಬಿ ತುಳುಕುತ್ತಿದ್ದ ಕೆರೆ, ಕಾಲುವೆ, ಕಲ್ಯಾಣಿಗಳು, ಹೂ ತುಂಬಿದ ಕಣಗಿಲೆ ತೋಟಗಳು, ಹೊಂಗೆ ಸೊಂಪಲುಗಳು, ಓಣಿಗಳು, ಕಾರೇಹಳ್ಳಿ, ಮಾವಿನಕೊಂಬಿನಹಳ್ಳಿ, ತಾವರೆಕೆರೆ, ಮರಳುಕುಂಟೆ ಮುಂತಾದ ಹಳ್ಳಿಗಳಿಂದ ಬರುತ್ತಿದ್ದ ಗೆಳೆಯರು ತಂದುಕೊಡುತ್ತಿದ್ದ ಕಾರೆ, ಈಚಲು, ಬೇಲ, ನೇರಿಳೆ, ಮಾವು ಮುಂತಾದ ಹಣ್ಣು-ಕಾಯಿಗಳ ಕಾಗೆ ಎಂಜಲುಗಳ ರುಚಿ, ಕೆರೆಯ ಹಿಂದೆ ಸದಾ ಹಸಿರಿನಿಂದ ಕಂಗೊಳಿಸುತ್ತಿದ್ದ ಭತ್ತದ ಗದ್ದೆಗಳಲ್ಲಿ ಕೆಲಸ ಮಾಡಲು ಬರುತ್ತಿದ್ದ ಹಿಂಡು ಹಿಂಡು ಕೂಲಿ ಹೆಂಗಸರು ಜೊತೆಯಾಗಿ ಹಾಡುತ್ತಿದ್ದ ನಾಟಿ ಮಾಡುವ ಮತ್ತು ಕಳೆ ಕೀಳುವ ಹಾಡುಗಳು, ಸಂಭ್ರಮದ ತೇರು ಹಬ್ಬ, ಆ ಸಂದರ್ಭದ ಅರವಂಟಿಗೆಗಳ ಪಾನಕದ ಸವಿ, ಕಾಮನ ಹಬ್ಬದ ಬೆರಗು ಹುಟ್ಟಿಸುವ ಬೊಂಬೆಗಳ ಪ್ರದರ್ಶನ, ಕೊನೆಯ ದಿನದ ಜಾನಪದ ಪ್ರದರ್ಶನಗಳ ಬೆಡಗು, ಸೈಕಲ್ ಮುಂತಾದ ಆಗಿನ ಕಾಲಕ್ಕೆ ಬೆಲೆಯುಳ್ಳವೂ, ಆಕರ್ಷಕವೂ ಎನಿಸಿದ್ದ ಬಹುಮಾನಗಳಿದ್ದ ಲಕ್ಕಿ ಡ್ರಾ, ಮದ್ದಿನ ಮರದ ಅದ್ಭುತ ಲೋಕ, ಪುರಸಭಾ ಕಛೇರಿ ಆವರಣದಲ್ಲಿ ನಡೆಯುತ್ತಿದ್ದ ದಸರಾ ಹಬ್ಬದ ವಿಶೇಷ ಕಾರ್ಯಕ್ರಮಗಳು, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳ ಗಣೇಶೋತ್ಸವ ಮತ್ತು ಮುಸ್ಲಿಂ ಹಬ್ಬಗಳ ದಿನಗಳಂದು ಊರಿನ ಮುಸ್ಲಿಂ ಬಾಂಧವರೆಲ್ಲ ಹೊಸಬಟ್ಟೆ ಧರಿಸಿ, ಮಹಿಳೆಯರು ನೆಕ್ಕಿ ಮೆತ್ತಿಕೊಂಡು ಊರ ತುಂಬಾ ನಡೆಸುತ್ತಿದ್ದ ಮೆರವಣಿಗೆಗಳು, ಸೈಕಲ್ ಶಾಪ್ ಬಾಷಾನ ಗ್ರಾಮಾಫೋನ್‌ನಲ್ಲಿ ಹೊಮ್ಮುತ್ತಿದ್ದ ಹೊಚ್ಚ ಹೊಸ ಕನ್ನಡ ಚಿತ್ರಗೀತೆಗಳು, ಇವರದೇ ಹಳೇ ಜೀಪೊಂದರಲ್ಲಿ ಆಗಾಗ್ಗೆ ಊರ ತುಂಬ ನಡೆಯುತ್ತಿದ್ದ ನವ ವಿವಾಹಿತರ ಮೆರವಣಿಗೆಗಳು, ಆಗಸ್ಟ್ ೧೫ ಹಾಗೂ ಜನವರಿ ೨೬ರಂದು ಪುರಸಭೆಯ ಮುಂದೆ ಆಲೂರು ಹನುಮಂತಪ್ಪ ಎಂಬ ನಮ್ಮ ಕಾಲದ ಹಿರಿಯ ರಾಜಕಾರಣಿ-ಮಂತ್ರಿವರ್ಯರೊಬ್ಬರು ನೆರವೇರಿಸುತ್ತಿದ್ದ ಧ್ವಜಾರೋಹಣ ಮತ್ತು ಅವರ 'ಘಂಟಾಘೋಷ'ಗಳ ಭಾಷಣ, ಊರಿನ ಎಲ್ಲ ಶಾಲೆಗಳ ವಿದ್ಯಾರ್ಥಿಗಳು

ಊರ ತುಂಬ ನಡೆಸುತ್ತಿದ್ದ ಪ್ರಭಾತ್‌ಪೇರಿಗಳು, ಗಂಗಮ್ಮನ ಪೂಜೆಗೆಂದು ವಾರದ ಕೆಲವು ನಿರ್ದಿಷ್ಟ ದಿನಗಳಂದು ಈ ಊರಿಗೆ ಬರುತ್ತಿದ್ದ ಪರಸ್ಥಳಗಳ ಕುಟುಂಬಗಳ ವೈವಿಧ್ಯಮಯ ನೋಟಗಳು, ಮಂಗಳವಾರ ಸಂತೆಮಾಳದಲ್ಲಿ ನಡೆಯುತ್ತಿದ್ದ ಸಂತೆಯಲ್ಲಿ ಪೇರಿಸಿರುತ್ತಿದ್ದ ಚಕ್ಕುಲಿಗಳ ಬೆಟ್ಟಗಳ ಬೆರಗು, ಶೆಟ್ಟರ ಬೀದಿಯ ತುಂಬ ಅಂದು ಸಂತೆಗೆ ಬಂದ ಹಳ್ಳಿ ಹೆಂಗಸರ ಕುಬುಸಗಳನ್ನು ಹೊಲೆಯಲು ತಿರುಗುತ್ತಿದ್ದ ಹೊಲಿಗೆ ಯಂತ್ರಗಳ ಭರಾಟೆಯ ಸದ್ದು, ವರ್ಷದಲ್ಲೊಮ್ಮೆ ಮೂಗಿಗೆ ಬಡಿದು ನಮ್ಮನ್ನೆಲ್ಲ ಹಾಲು ಮತ್ತು ಬಿಸಿ ಬೆಲ್ಲಗಳಿಗಾಗಿ ಆಹ್ವಾನಿಸುತ್ತಿದ್ದ ಆಲೆಮನೆಗಳ ಕಂಪು, ಹಿರಿಯರು ಭೇಟಿಕೊಟ್ಟು ನಮ್ಮ ಹೊಟ್ಟೆ ಉರಿಸುತ್ತಿದ್ದ ವಾಮನರಾವ್ ಹೋಟೆಲ್, ವರ್ಷದಲ್ಲಿ ಆರು ತಿಂಗಳು ಸಂತೆಮಾಳದ ಬಳಿ ಬೀಡುಬಿಟ್ಟು ಸಂಜೆ ಕತ್ತಲಾಗುವುದನ್ನು 'ನಮೋ ವೆಂಕಟೇಶಾ!' ಎಂದು ಇಡೀ ಊರಿಗೆ ಸಾರುತ್ತಾ ಹಿರಿಕಿರಿಯರೆನ್ನದೆ ಊರಿನ ಎಲ್ಲರ ಸಂಭ್ರಮಕ್ಕೆ ಕಾರಣವಾಗಿರುತ್ತಿದ್ದ ಮಾರುತಿ ಟೂರಿಂಗ್ ಟಾಕೀಸು, ಹೀಗೆ ಒಂದೇ ಎರಡೇ? ಒಮ್ಮೆ ತಮಿಳು ಕುಟುಂಬವೊಂದು ಬಂದು ಗರಡಿಮನೆಯ ಎದುರಿನ ಬಯಲಿನಲ್ಲಿ ೨೪ ತಾಸುಗಳ ಸತತ ಸೈಕಲ್ ಸವಾರಿ ಪ್ರದರ್ಶನ ನೀಡಿದ್ದು ಇಂದೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ಹಾಗೇ ಈ ಪ್ರದರ್ಶನದೊಂದಿಗ್ಗೆ ಧ್ವನಿವರ್ಧಕದಿಂದ ಹೊಮ್ಮುತ್ತಿದ್ದ 'ವಾಂಗಮಚಾ ವಾಂಗಮಚಾ' 'ನಾ ಪೆಟ್ರ ಸೆಲ್ವನ್' ಎಂಬ ಆ ಕಾಲಕ್ಕೆ ನಮಗೆ ಅಪರೂಪಕ್ಕೆ ಕೇಳಿಸುತ್ತಿದ್ದ ತಮಿಳು ಸಿನಿಮಾ ಹಾಡುಗಳೂ ಈಗಲೂ ನನ್ನ ಕಿವಿಯಲ್ಲಿ ಗುಣಗುಣಿಸುತ್ತಿವೆ.

ಹಾಗೆ ನೋಡಿದರೆ ಸಾಹಿತ್ಯ ಕುರಿತ ನನ್ನ ಆಸಕ್ತಿಯ ಬೀಜ ನನ್ನ ಮನಸ್ಸಿನಲ್ಲಿ ಬಿದ್ದದ್ದು ಈ ಊರಿನ ಮಣ್ಣಿನಲ್ಲೇ ಎಂದು ಹೇಳಬಹುದು. ಮೂಲತಃ ನಮ್ಮ ಕುಟುಂಬ ಚಿನ್ನ ಬೆಳ್ಳಿಯ ಕುಸುರಿ ಕೆಲಸ ಮಾಡುವ ಕಲೆಗಾರಿಕೆಯ ಹಿನ್ನೆಲೆ ಹೊಂದಿದ್ದು ನಮ್ಮ ತಂದೆ ಶಾಲಾ ಮಾಸ್ತರಾಗಿದ್ದರೂ ಬಯಲಾಟ-ಕೇಳಿಕೆ ಕಲಿಸುವ ಹವ್ಯಾಸವನ್ನೂ ಹೊಂದಿದ್ದು ಅದರಲ್ಲಿನ ಮಾತುಗಾರಿಕೆ ಮತ್ತು ಲಯಗಾರಿಕೆಗಳು ಬಾಲ್ಯದ ನನ್ನ ಮನಸ್ಸನ್ನು ಆಕ್ರಮಿಸಿಕೊಂಡಿದ್ದವು. ಇದರ ಜೊತೆಗೆ ತ್ಯಾಮಗೊಂಡ್ಲುವಿನಲ್ಲಿ ನಾನು ನೋಡಿದ ಪೌರಾಣಿಕ ನಾಟಕಗಳ ಮಟ್ಟುಗಳು ಮತ್ತು ಹಬ್ಬ-ಉತ್ಸವಗಳ ದಿನ ಧ್ವನಿವರ್ಧಕಗಳ ಮೂಲಕ ಮೊಳಗುತ್ತಿದ್ದ ಹಿರಣ್ಣಯ್ಯನವರ 'ದೇವದಾಸಿ' ಮತ್ತು ಕೊಟ್ಟೂರಪ್ಪನವರ 'ದಾನಶೂರ ಕರ್ಣ' ನಾಟಕಗಳ ಧ್ವನಿಮುದ್ರಿಕೆಗಳಲ್ಲಿನ ಸಂಭಾಷಣೆ-ಹಾಡುಗಳೂ ಭಾಷಾ ಬಳಕೆಯ ವಿವಿಧ ಸಾಧ್ಯತೆಗಳ ಕಡೆ ಎಳವೆಯಲ್ಲೇ ನನ್ನ ಗಮನ ಸೆಳೆದಿರಬೇಕು. ಇಲ್ಲಿ ಬಾಲ್ಯದಲ್ಲಿ ನೋಡಿದ ಕೇಳಿದ ಸದಭಿರುಚಿಯ ಕನ್ನಡ ಸಿನಿಮಾಗಳ ಸಂಭಾಷಣೆ- ಹಾಡುಗಳ ಪ್ರಭಾವವನ್ನೂ ನಾನು ಅಲ್ಲಗೆಳೆಯಲಾರೆ. ಜೊತೆಗೆ, ಬೆಂಗಳೂರಿನಲ್ಲಿ ಕಾಲೇಜು ಓದುತ್ತಿದ್ದು ಆಗಾಗ ಊರಿಗೆ ಬರುತ್ತಿದ್ದ ನಮ್ಮ ಅಣ್ಣ ಚಂದ್ರಶೇಖರಯ್ಯನವರು ಜಿ.ಪಿ. ರಾಜರತ್ನಂ ಮುಂತಾದ ತಮ್ಮ ಕನ್ನಡ ಸಾಹಿತ್ಯದ ಮೇಷ್ಟ್ರುಗಳ ಪಾಠಗಾರಿಕೆಯ ಬಗ್ಗೆ ಬಗ್ಗೆ ಹೇಳುತ್ತಿದ್ದ ಕುತೂಹಲಕಾರಿ ಕಥೆಗಳು ನನ್ನಲ್ಲಿ ಸಾಹಿತ್ಯಾಭಿರುಚಿಯನ್ನು ಹುಟ್ಟಿಸಿರಬಹುದು. ಇಲ್ಲಿನ ಪುರಸಭೆಯವರು ನಡೆಸುತ್ತಿದ್ದ ದಸರಾ ಆಚರಣೆಗಳಲ್ಲಿ ನಾನು ಆರನೇ ತರಗತಿಯಲ್ಲಿದ್ದಾಗಲೇ ಸಹಪಾಠಿಗಳನ್ನು

ನಾನೇ ಸಿದ್ಧಗೊಳಿಸಿ ಆಡಿದ ನಮ್ಮ ಪಠ್ಯವಾಗಿದ್ದ 'ಯಕ್ಷ ಪ್ರಶ್ನೆ' ನಾಟಕ ಮತ್ತು ನಮ್ಮ ಅಣ್ಣನ ಪಠ್ಯವಾಗಿದ್ದ ಕಾದಂಬರಿಯ ಒಂದು ಅಧ್ಯಾಯವನ್ನು ಆಧರಿಸಿ ನಾನೊಂದು ನಾಟಕ ಬರೆದು ಗೆಳೆಯರೊಂದಿಗೆ ಅರ್ಧಬಂರ್ಧ ಆಡಿದ ನೆನಪೂ ನನಗಿದೆ.

ಆದರೆ ಒಂದು ಮಾತು ನಿಜ. ಈ ಊರೇಕೆ, ನೆಲಮಂಗಲ ತಾಲ್ಲೂಕಿನಲ್ಲೇ ಸಾಹಿತ್ಯ ಚಟುವಟಿಕೆಗಳು ಆಗ ಕಡಿಮೆ ಎಂದು ಹೇಳಬೇಕು. ಅದಕ್ಕೆ ಕಾರಣ, ಇಲ್ಲಿ ಮಣ್ಣೆ ಮತ್ತು ನಿಜಗಲ್ಲುಗಳಂತಹ ಪಾಳೇಪಟ್ಟುಗಳಿದ್ದ ಇತಿಹಾಸವಿದ್ದರೂ, ಐತಿಹಾಸಿಕವಾಗಿ ಕೂಡ ಈ ಸೀಮೆಗೆ ಸಾಹಿತ್ಯ–ಸಂಗೀತಗಳ ಒಂದು ಗಟ್ಟಿಯಾದ ಪರಂಪರೆ ಇದ್ದಂತಿಲ್ಲ. ಉದಾಹರಣೆಗೆ ಈ ನಮ್ಮೂರಿನ ಹುಡುಗಿಯರಿಗೆ ಸಂಗೀತ ಪಾಠ ಹೇಳಲು ಸಂಗೀತದ ಮೇಷ್ಟ್ರು ದೂರದ ಮರಳುಕುಂಟೆಯಿಂದ ಬರಬೇಕಿತ್ತು. ವಿಶ್ವಕೋಶದಲ್ಲಿ ನಾನು ಹುಡುಕಿ ನೋಡಿದೆ. ಕನ್ನಡದ ಹಿರಿಯ ವಿದ್ವಾಂಸ ಡಿ.ಎಲ್. ನರಸಿಂಹಾಚಾರ್ ಅವರ ಹೆಸರಿನಲ್ಲಿರುವ ದೊಡ್ಡಬೆಲೆ ಎಂಬೊಂದು ಊರಿನ ಹೆಸರಿನ ಹೊರತಾಗಿ(ಹಾಗೆ ನೋಡಿದರೆ ಈ ಡಿಎಲ್ಎನ್ ಅವರು ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಜನಿಸಿದವರು. ಅವರ ಹಿರಿಯರು ದೊಡ್ಡಬೆಲೆಯವರಾಗಿರಬಹುದು) ಇನ್ನಾವ ಸಾಹಿತ್ಯ ಕುರುಹೂ ನನಗೆ ಈ ತಾಲ್ಲೂಕಿನಲ್ಲಿ ಕಾಣಲಿಲ್ಲ. ಒಂದು ಅಪವಾದದ ಹೊರತಾಗಿ. ನಾನು ಪ್ರೌಢಶಾಲೆಯಲ್ಲಿದ್ದಾಗ ಇದೇ ದೊಡ್ಡಬೆಲೆಯವರೊಬ್ಬರು ಬರೆದ 'ಹೆಣ್ಣು ಹೇಡಿಯಲ್ಲ' ಎಂಬ ನಾಟಕವನ್ನು ನಮ್ಮ ಸಹಪಾಠಿಗಳು ದಸರಾ ಉತ್ಸವದ ಸಂದರ್ಭದಲ್ಲಿ ಆಡಿದ್ದು ಮತ್ತು ಈ ನಾಟಕದ ಕರ್ತೃವನ್ನು ಕಾಣಲು ನಾನು ಹಾತೊರೆದದ್ದೂ ನನಗೆ ಚೆನ್ನಾಗಿ ನೆನಪಿದೆ. ಅಂದರೆ ಇಲ್ಲಿ ಸಾಹಿತ್ಯದ ಸೆಲೆ ಎಲ್ಲೋ ಗುಪ್ತಗಾಮಿನಿಯಾಗಿ ಹರಿದಿತ್ತೆನಿಸುತ್ತದೆ. ಇತ್ತೀಚಿನ ವರ್ಷಗಳಲ್ಲಿ ಇಲ್ಲಿಗೆ ಪ್ರಥಮ ದರ್ಜೆ ಕಾಲೇಜೂ ಬಂದು ಅದರ ಅಧ್ಯಾಪಕ ಮತ್ತು ವಿದ್ಯಾರ್ಥಿ ವೃಂದದ ಸಾಂಸ್ಕೃತಿಕ ಆಸಕ್ತಿ ಮತ್ತು ಚಟುವಟಿಕೆಗಳ ಮೂಲಕ ಈಗ ಪರಿಸ್ಥಿತಿ ಬದಲಾದಂತೆ ತೋರುತ್ತದೆ. ಅದೇನೇ ಇರಲಿ, ಖ್ಯಾತ ಇತಿಹಾಸಕಾರರಾದ ಎಚ್.ಎಸ್. ಗೋಪಾಲರಾವ್ ನಮ್ಮ ತಾಲ್ಲೂಕಿನವರೆಂದು ತಿಳಿದು ನನಗೆ ಹೆಮ್ಮೆ ಎನಿಸಿತು. ಇನ್ನು ಹಿರಿಯ ಲೇಖಕರಾದ ಸಿದ್ಧಗಂಗಯ್ಯ ಕಂಬಾಳು, ಮಲ್ಲೇಪುರಂ ಜಿ. ವೆಂಕಟೇಶ್, ಹುಲಿಕಲ್ ನಟರಾಜ್, ಮಣ್ಣೆ ರಾಜು, ತ್ಯಾಮಗೊಂಡ್ಲು ಅಂಬರೀಷ, ಆರ್.ಜಿ. ನೆಗಳೂರ ಮುಂತಾದ ಹೆಸರುಗಳ ನಂತರ ಹುಲಿಕುಂಟೆ ಮಂಜುಳಾ, ಹುಲಿಕುಂಟೆ ಮೂರ್ತಿ, ತ್ಯಾಮಗೊಂಡ್ಲುವಿನ ನೂರುಲ್ಲಾ, ರಹಮತ್ ಉಲ್ಲ ಇತ್ಯಾದಿ ಹೆಸರುಗಳು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕೇಳಿಬರುತ್ತಿವೆ, ಇವರೆಲ್ಲರಿಗೂ ಮತ್ತು ಈ ಸಮ್ಮೇಳನದಲ್ಲಿ ಭಾಗವಹಿಸುತ್ತಿರುವ ಇನ್ನೂ ಹಲವು ಉದಯೋನ್ಮುಖ ಪ್ರತಿಭೆಗಳಿಗೂ ನನ್ನ ಹೃತ್ಪೂರ್ವಕ ಶುಭಾಶಯಗಳು.

ಮುವ್ವತ್ತು ವರ್ಷಗಳ ದೂರದೂರುಗಳಲ್ಲಿನ ನನ್ನ ವೃತ್ತಿಜೀವನದ ಮಧ್ಯೆ ಈ ಎಲ್ಲ ನೆನಪುಗಳೊಂದಿಗೆ ತ್ಯಾಮಗೊಂಡ್ಲು ನನ್ನನ್ನು ನನ್ನ ಬೇರುಗಳತ್ತ ಸೆಳೆಯುತ್ತಿತ್ತೆಂಬುದನ್ನು ಇಲ್ಲಿ ಹೇಳಬೇಕು. ಆದ್ದರಿಂದ ಅವಕಾಶ ಸಿಕ್ಕಿದಾಗಲೆಲ್ಲ ಈ ಅವಧಿಯಲ್ಲಿ ನಾನು ನನ್ನ ಕೆಲ ಗೆಳೆಯರೊಂದಿಗೋ, ನನ್ನ ಕುಟುಂಬದೊಂದಿಗೋ ನಾಲ್ಕಾರು ಸಲ ನನ್ನ ಹಳೆಯ ನೆನಪುಗಳನ್ನು ಹಿಂಬಾಲಿಸಿ ಈ ಊರಿಗೆ ಬಂದು ಹೋಗಿದ್ದೇನೆ. ವಾಮನರಾವ್

ಹೋಟೆಲ್‌ನಲ್ಲಿ ದೋಸೆ ತಿಂದು ಬಾಲ್ಯದಲ್ಲಿ ಈಡೇರಿಸಿಕೊಳ್ಳಲಾಗದ ಆಸೆಯನ್ನು ಈಡೇರಿಸಿಕೊಂಡು ಹೋಗಿದ್ದೇನೆ. ಹಾಗೇ ಅದೇ ವೇಳೆಯಲ್ಲಿ ಒಣಗಿದ ಕೆರೆ, ಕಲ್ಯಾಣಿ ಕಾಲುವೆಗಳು, ಹಸಿರು ಕಳೆದುಕೊಂಡ ಗದ್ದೆಗಳನ್ನೂ, ಪಾರ್ಥೇನಿಯಂ ತುಂಬಿಕೊಂಡ ನಾನು ಆಡಿ ನಲಿದಿದ್ದ ಆಟದ ಮೈದಾನವನ್ನೂ ನಮ್ಮ ತಂದೆ ಪಾಠ ಮಾಡುತ್ತಿದ್ದ ಶಾಲೆಯೂ ಸೇರಿದಂತೆ ಇತರೆ ಸರ್ಕಾರಿ ಶಾಲೆಗಳಿಗೆ ಒದಗಿರುವ ದುರ್ಗತಿಯನ್ನೂ ನೋಡಿ ನೊಂದು ಹೋಗಿದ್ದೇನೆ. ನನ್ನಲ್ಲಿ ಅಷ್ಟೇನೂ ಉತ್ಸಾಹ ಹುಟ್ಟಿಸದ ಓರ್ವರ ಹೊರತಾಗಿ ನನ್ನ ಯಾವ ಹಳೆಯ ಸಹಪಾಠಿ-ಗೆಳೆಯರೂ ಸಂಪರ್ಕಕ್ಕೆ ಸಿಗದೆ ನಿರಾಶನಾಗಿ ಹಿಂದಿರುಗಿದ್ದೇನೆ. ಆ ನಿರಾಶೆಯನ್ನು ತುಂಬಿಕೊಳ್ಳಲು ಇಲ್ಲಿನ ಸರ್ಕಾರಿ ಶಾಲೆಯೊಂದರ ಸುಧಾರಣೆಗಾಗಿ ನನ್ನ ಕೈಲಾದ ನೆರವನ್ನೂ ನೀಡಿದ್ದೇನೆ.

ಈಗ ಊರು ದೊಡ್ಡದಾಗಿದೆ. ಜನಸಂಖ್ಯೆಯೂ ಬೆಳೆದಿದೆ. ನನ್ನ ಕಾಲಕ್ಕೆ ಹೋಲಿಸಿದಂತೆ ಅಂಗಡಿ ಮುಂಗಟ್ಟುಗಳ ಬಣ್ಣ ಬೆಡಗುಗಳನ್ನು ನೋಡಿದರೆ ಊರು ಸಂಪದ್ಭರಿತವಾದಂತೆಯೂ ಕಾಣುತ್ತದೆ. ನಾನಿದ್ದಾಗ ಇಲ್ಲದಿದ್ದ ಬ್ಯಾಂಕು, ಮುದ್ರಣಾಲಯ, ಖಾಸಗಿ ಶಾಲೆ, ಆಸ್ಪತ್ರೆ, ಔಷಧಿ ಅಂಗಡಿ, ಉಪಗ್ರಹ ಟೀವಿ, ಕಂಪ್ಯೂಟರ್-ಇಂಟರ್‌ನೆಟ್-ಸ್ಮಾರ್ಟ್ ಫೋನ್, ಕಾರು-ಬಾರುಗಳೆಲ್ಲದರ ಸೌಲಭ್ಯಗಳೂ ಊರಿಗೆ ಬಂದಿವೆ. ಇದರ ಮಧ್ಯೆ ಈ ಅಭಿವೃದ್ಧಿಯ ಭಾಗವಾಗಿಯೋ ಎಂಬಂತೆ ಈ ಊರಿನಲ್ಲಿ ವಿದ್ಯೆ ಪಡೆದ ಬಹುತೇಕ ಯುವಜನರು ಈ ಊರು ತಮ್ಮ ವ್ಯಕ್ತಿತ್ವ-ಸಾಮರ್ಥ್ಯಗಳ ಗಾತ್ರಕ್ಕೆ ಸಾಲದೆಂಬಂತೆ ಊರು ಬಿಟ್ಟು ಹೋಗಿ ಬೇರೆ ಕಡೆ ನೆಲೆಸಿದ್ದಾರೆ. ಈ ಆಧುನಿಕತೆ-ಅಭಿವೃದ್ಧಿಯ ಫಲವೆಂದರೆ, ಊರಿನ ಮಕ್ಕಳೆಲ್ಲರೂ ಯಾವುದೇ ತೆರನ ಬೇಧ-ಭಾವವಿಲ್ಲದೆ ಒಟ್ಟಿಗೆ ಕಲೆತು ಕಲಿಯುವ ಪವಿತ್ರ ಸ್ಥಳಗಳಾಗಿದ್ದ ಕನ್ನಡ ಮಾಧ್ಯಮದ ಶಾಲೆಗಳು ವಿದ್ಯಾರ್ಥಿಗಳಿಲ್ಲದೆ ಬಡವಾಗಿವೆ. ನನ್ನ ಗೆಳೆಯ ಮುದ್ದು ಬಸವ ತನ್ನ ಶ್ರೀಮಂತ ಕಂಠಸಿರಿಯ ಹಾಡುಗಳಿಂದ ಜೀವಂತಗೊಳಿಸುತ್ತಿದ್ದ ಊರ ಮಧ್ಯದ ಸರ್ಕಾರಿ ಮಾಧ್ಯಮಿಕ ಶಾಲೆ, ನಾನೊಮ್ಮೆ ಬಂದಾಗ ಹುಡುಗರಿಲ್ಲದೆ ಭಣಗುಡುತ್ತಾ ಮುಚ್ಚುವ ಆತಂಕವನ್ನು ಎದುರಿಸುತ್ತಿರುವುದನ್ನು ಅಲ್ಲಿಯ ಅಧ್ಯಾಪಕಿಯೊಬ್ಬರೇ ನನಗೆ ತಿಳಿಸಿದ್ದುಂಟು. ಇದಕ್ಕೆ ಕಾರಣ ಊರಿನಲ್ಲಿ ಈಗ ಸ್ಥಾಪಿತವಾಗಿರುವ ಇಂಗ್ಲಿಷ್ ಮಾಧ್ಯಮದ ಒಂದೆರಡು ಖಾಸಗಿ ಶಾಲೆಗಳು ಎಂಬುದೂ ನನಗೆ ಗೊತ್ತಾಯಿತು.

ಇದು ಒಂದು ಮಾಹಿತಿಯಾಗಿ ಕೆಲ ವರ್ಷಗಳ ಹಿಂದೆ ಊರನ್ನು ಪ್ರವೇಶಿಸಿದ ಮೇಲೆ ಗೊತ್ತಾದುದಾದರೆ, ಇದು ಒಂದು ಅನುಭವವಾಗಿ ಊರನ್ನು ಪ್ರವೇಶಿಸುವ ಹಾದಿಯಲ್ಲೇ ನನ್ನನ್ನು ತಾಕಿತು. ಬೇಗೂರು ಕಡೆಯಿಂದ ನಾನು ನನ್ನ ಪತ್ನಿ, ಮಗ, ಸೊಸೆ, ಮೊಮ್ಮಗಳೊಂದಿಗೆ ನನ್ನೂರ ಚೆಲುವನ್ನು ವರ್ಣಿಸುತ್ತಾ ವಾಹನವೊಂದರಲ್ಲಿ ಪ್ರವೇಶಿಸುತ್ತಿದ್ದಂತೆ ನಾನು ನನ್ನೂರನ್ನು ಪ್ರವೇಶಿಸಿದ್ದೇನೆ ಎಂಬುದೇ ಗೊತ್ತಾಗದಷ್ಟು ಅದು ಕಳೆಗುಂದಿತ್ತು. ಕೆರೆ ಕೋಡಿಯಿಂದ ಆರಂಭವಾಗುತ್ತಿದ್ದ ಎರಡೂ ಬದಿಯ ಕಾಲುವೆಗಳ ನೀರು, ಅದರ ಸನಿಹದ ಗದ್ದೆ-ತೋಟಗಳ ಮತ್ತು ಗಿಡಗಂಟೆಗಳ ಹಸಿರು ಕಾಣೆಯಾಗಿ, ಕಾಲುವೆ ಮಠ ಇತ್ಯಾದಿ ಊರಾರಂಭದ ಕಟ್ಟಡಗಳೆಲ್ಲ ಹಾಳುಬಿದ್ದಂತೆ ಕಂಡು ನನ್ನೂರನ್ನು ನನ್ನ ಕುಟುಂಬಕ್ಕೆ ತೋರಿಸುವ ಉತ್ಸಾಹವೆಲ್ಲ ಇಳಿದುಹೋಯಿತು.

ಸೀದಾ ನಮ್ಮ ಪ್ರಾಥಮಿಕ ಶಾಲೆಗೆ ಹೋದರೆ ನಮ್ಮ ತಂದೆ ಸಹೋದ್ಯೋಗಿಗಳು ಮತ್ತು ವಿದ್ಯಾರ್ಥಿಗಳ ಸಹಕಾರದಲ್ಲಿ ಶಾಲೆಯ ಆವರಣದಲ್ಲಿ ಸೊಂಪಾಗಿ ಬೆಳೆಸಿದ್ದ ಹೂಪಿನ ತೋಟ ಮತ್ತು ಅದರ ಮಧ್ಯೆ ಇದ್ದ ದೊಡ್ಡ ಹಲಸಿನ ಮತ್ತು ಸಂಪಿಗೆಮರಗಳು ಹೇಳಹೆಸರಿಲ್ಲದೆ ಕಾಣೆಯಾಗಿದ್ದವು. ಇದಕ್ಕೆ ಸಾಂಕೇತಿಕವೆಂಬಂತೆ ನಮ್ಮ ತಂದೆ ಪಾಠ ಮಾಡುತ್ತಿದ್ದ ಶಾಲಾಕೊಠಡಿ ಕುಸಿತದ ಅಪಾಯ ಎದುರಿಸುತ್ತಾ ಬೀಗ ಜಡಿದುಕೊಂಡಿತ್ತು. ಮೂಲೆಯಲ್ಲೊಂದು ಸಿಮೆಂಟಿನ ಗಣೇಶನ ಮಂಟಪ ಭಣಗುಟ್ಟುತ್ತಾ ಅಲ್ಲಿನ ಇತಿಹಾಸದ ದುರಂತ ಕಥೆಯನ್ನು ಹೇಳುತ್ತಿತ್ತು. ಸ್ವಲ್ಪ ಪಕ್ಕಕ್ಕೆ ಹೋಗಿ ನೋಡಿದರೆ ನಾವು ಬೇಸಿಗೆಯಲ್ಲಿ ಮರಕೋತಿಯಾಟವಾಡುತ್ತಿದ್ದ ಮತ್ತು ವಾರದ ಸಂತೆಗೆ ಆಶ್ರಯ ನೀಡುತ್ತಿದ್ದ ದಟ್ಟ ಮಾವಿನ ತೋಪು ಅವನತಿಯ ಹಂತದಲ್ಲಿತ್ತು. ಅದರ ಹಿಂದೆ ದಪ್ಪ ಮತ್ತು ವಿಶಾಲ ಕೆಸವಿನ ಎಲೆಗಳಿಂದ ಆವೃತವಾಗಿರುತ್ತಿದ್ದ ದೊಡ್ಡ ಕಾಲುವೆ ಎಷ್ಟೋ ಕಾಲದಿಂದ ನೀರಿನ ಪಸೆಯೇ ಕಾಣದಂತೆ ಒಣಗಿ ನಿಂತಿತ್ತು. ಊರಿಗೆ ಇಂಗ್ಲಿಷ್ ಶಾಲೆಗಳ ರೋಗ ಬಡಿದಿದೆ ಎಂಬುದು ನನಗೆ ಖಚಿತವಾಗತೊಡಗಿತ್ತು.

ಈ ನನ್ನ ಮಾತು ಕೆಲವರಿಗೆ ವಿಚಿತ್ರವಾಗಿ, ಇನ್ನೂ ಕೆಲವರಿಗೆ ಅಸಂಬದ್ಧವಾಗಿಯೂ ಕಾಣಬಹುದು. ಆದರೆ ನೀವು ಕನ್ನಡದ ಶ್ರೇಷ್ಠ ಲೇಖಕರಲ್ಲೊಬ್ಬರಾದ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ 'ಚಿದಂಬರ ರಹಸ್ಯ' ಕಾದಂಬರಿಯನ್ನು ಓದಿದ್ದರೆ ನನ್ನ ಈ ಮಾತು ನಿಮಗೆ ಹಾಗೆನ್ನಿಸಲಾರದು. ಆ ಕಾದಂಬರಿ ನಡೆಯುವ ಕೆಸರೂರಿನ ಮುಖ್ಯ ಬೆಳೆಯಾದ ಏಲಕ್ಕಿಗೆ ಕೊಳೆ ರೋಗ ಬರಲು ಆರಂಭಿಸುವುದಕ್ಕೂ ಆ ಊರಿನ ಜನರ ಮನಸ್ಸಿಗೆ ಕೊಳೆರೋಗದ ಲಕ್ಷಣಗಳು ತಾಕಿರುವುದಕ್ಕೂ ಸಂಬಂಧವಿರುವುದನ್ನು ತೇಜಸ್ವಿ ಅಲ್ಲಿ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಊರ ಜನಕ್ಕೆ ತಮ್ಮ ಬದುಕಿನ ಜೀವಂತ ಅಭಿವ್ಯಕ್ತಿಯ ಶಕ್ತಿ ಸಾಧನವಾಗಿರುವ ಮತ್ತು ತನ್ನ ಸುತ್ತಲಿನ ಸಂಬಂಧಗಳನ್ನು ಅಮ್ಮ, ಅಪ್ಪ, ಅಣ್ಣ, ಅಕ್ಕ, ಅತ್ತೆ, ಮಾವ, ಭಾವ ಎಂದು ನಮ್ಮ ಆತ್ಮದೊಂದಿಗೆ ಬೆಸೆಯುವ, ನಮ್ಮ ದೇವರುಗಳನ್ನು ಪ್ರೀತಿ-ಭಕ್ತಿಗಳ ಪಾಕದಲ್ಲಿ ಸ್ತುತಿಸಿ ನಮ್ಮವರನ್ನಾಗಿ ಮಾಡಿಕೊಳ್ಳುವ ಹಾಡು-ವಚನಗಳ ಭಾಷೆಯಾದ ತಾಯ್ನುಡಿಯು ಲೋಕಜ್ಞಾನ ಪಡೆಯುವ ಶಿಕ್ಷಣದ ಭಾಷೆಯಾಗಿ ಅನುಪಯುಕ್ತವಾಗಿ ಕಾಣತೊಡಗಿದೆ ಎಂದರೆ ಅದು ನಮ್ಮ ಆತ್ಮಗಳಿಗೇ, ನಮ್ಮ ಸಂವೇದನಾಶೀಲತೆಗೇ ಬಡಿದಿರುವ ಕೊಳೆರೋಗವೇ ಆಗಿರಬಹುದಲ್ಲವೆ? ನಮ್ಮ ಪ್ರಾಥಮಿಕ ಶಿಕ್ಷಣಕ್ಕೂ ನಮ್ಮ ಭಾಷೆ ಯೋಗ್ಯವಲ್ಲ ಎಂದು ಭಾವಿಸುವ ಜನರ ಮನಸ್ಸಿನ ಮಾಲಿನ್ಯ ಅವರ ಮನಸ್ಸನ್ನೂ ಮೀರಿ ಸುತ್ತಲಿನ ಭೌತಿಕ ಪರಿಸರಕ್ಕೂ ಹರಡುವುದು ಸಹಜ. ತನ್ನ ತಾಯ್ನುಡಿಯ ಬಗೆಗಿನ ಮಮತೆ ಕಳೆದುಕೊಂಡವರು ತಮ್ಮ ಪರಿಸರದ ಗಾಳಿ ಬೆಳಕು ನೆಲ ಜಲಗಳ ಬಗೆಗಿನ ಮಮತೆಯನ್ನೂ ಕಳೆದುಕೊಳ್ಳುವುದು ಸಹಜ. ಇದು ತ್ಯಾಮಗೊಂಡ್ಲುವಿನ ಕಥೆ ಮಾತ್ರವಲ್ಲ ಎಂದು ಸಮಾಧಾನಪಟ್ಟುಕೊಳ್ಳಬಹುದು.

ನಮ್ಮ ತಂದೆಗೆ ಈ ಊರಿನ ಶಾಲೆಗೆ ವರ್ಗವಾಗಿ ನಾವು ೧೯೬೫ರಲ್ಲಿ ಈ ಊರಿಗೆ ಬಂದಾಗ, ಸಣ್ಣ ಹುಡುಗನಾಗಿ ಈ ಊರಿನಲ್ಲಿ ನಾನು ನೋಡಿದ ಮೊದಲ ಸಾರ್ವಜನಿಕ ದೃಶ್ಯವೆಂದರೆ ಆಗ ಈ ಊರಿನ ಹಿರಿಯ ಮುಖಂಡರಲ್ಲೊಬ್ಬರಾಗಿದ್ದ ರಾಜಾ ಶ್ರೀಕಂಠಶೆಟ್ಟರು ತಮ್ಮೂರಿನ ಪುರಸಭೆಯನ್ನು ರದ್ದು ಮಾಡಿ ಅದನ್ನು ಗ್ರಾಮ

ಪಂಚಾಯ್ತಿಯನ್ನಾಗಿ ಪರಿವರ್ತಿಸಿದ ಸರ್ಕಾರಿ ಆದೇಶದ ವಿರುದ್ಧ ಪುರಸಭೆಯ ಕಟ್ಟಡದ ಮುಂದೆ ಗಾಂಧಿ ಫೋಟೋವನ್ನಿಟ್ಟುಕೊಂಡು ಉಪವಾಸ ಸತ್ಯಾಗ್ರಹ ಕೂತಿದ್ದುದು. ಅಲ್ಲಿಂದ ಆರಂಭವಾದ ಗಾಂಧಿ ಕುರಿತ ನನ್ನ ಕುತೂಹಲ ಮತ್ತು ಆಸಕ್ತಿ ಈ ವಯಸ್ಸಿನಲ್ಲೂ ಹಿಂಗದೆ ಅಧ್ಯಯನ ಮುಂದುವರೆದಿದ್ದು, ಗಾಂಧಿ ಎಂಬುದು ಜಗತ್ತು ಈವರೆಗೆ ಕಂಡ ಶ್ರೇಷ್ಠ ಮನಸ್ಸುಗಳಲ್ಲಿ ಒಂದು ಎಂಬುದು ನನಗೆ ಮನವರಿಕೆಯಾಗಿದೆ. ಗಾಂಧಿಯದು ಎಂತಹ ದ್ರಷ್ಟಾರ ಮನಸ್ಸೆಂದರೆ, ಅದು ಪರಿಸರವಾದ, ಕೊಳ್ಳುಬಾಕ ಸಂಸ್ಕೃತಿ ಇತ್ಯಾದಿ ಪರಿಕಲ್ಪನೆಗಳು ಹುಟ್ಟುವ ಬಹುಮುನ್ನವೇ ಅಂದರೆ ಒಂದು ಶತಮಾನದಷ್ಟು ಹಿಂದೆಯೇ, ಅವರು ಈ ಮಾತನ್ನಾಡಿದ್ದರು: 'ಈ ಭೂಮಿ ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲುದೇ ಹೊರತು ಎಲ್ಲರ ಆಸೆಗಳನ್ನಲ್ಲ.' ಇದು 'ಆಸೆಯೇ ದುಃಖಕ್ಕೆ ಕಾರಣ' ಎಂಬ ಬುದ್ಧನ ಮಾತಿನ ಮುಂದುವರಿಕೆಯೂ ಹೌದು. ಅದಿರಲಿ, ಗಾಂಧಿಯವರ ಈ ಮಾತು ಜಗತ್ತಿನಾದ್ಯಂತ ಮನುಷ್ಯನ ಬದುಕಿನ ಅಗತ್ಯಗಳು ಇಂದು ಸುಖ-ಶ್ರೀಮಂತಿಕೆಗಳ ಸ್ಪರ್ಧೆಯ ಆಟದಲ್ಲಿ ಆಸೆ-ದುರಾಸೆಗಳಾಗಿ ಮಾರ್ಪಟ್ಟು ಅವುಗಳ ಈಡೇರಿಕೆಗಾಗಿ ಮನುಷ್ಯ ತನಗೆ ಆಸರೆಯಾಗಿರುವ ಭೂಮಿಯ ಒಳ ಹೊರಗನ್ನೇ ಬಗೆದು, ಮಲಿನಗೊಳಿಸಿ ನಾಶ ಮಾಡುತ್ತಿದ್ದಾನೆ. ನಾವು ದಿನನಿತ್ಯ ಬಳಸುವ ಎಲ್ಲ ವಸ್ತುಗಳೂ ಭೂಮಿಯನ್ನು ಬಗೆದೇ ಬಂದವು ಎಂಬುದು ನೆನಪಿರಲಿ. ಜಗತ್ತು ಇಂದು ಎದುರಿಸುತ್ತಿರುವ ಅತ್ಯಂತ ಭಯಾನಕ ಬಿಕ್ಕಟ್ಟು ಭೂಮಿಯ ಉಳಿವಿಗೆ ಸಂಬಂಧಿಸಿದ್ದಾಗಿದೆ ಮತ್ತು ಭಾರತದ ಮಟ್ಟಿಗೆ ಈ ಬಿಕ್ಕಟ್ಟಿಗೆ ಕಾರಣವಾಗಿರುವ ಮನುಷ್ಯನ ಆಸೆ-ದುರಾಸೆಗಳ ಸಾಧನ ಇಂಗ್ಲಿಷ್ ಆಗಿದೆ ಎಂಬುದನ್ನು ನಾನು ಇಲ್ಲಿ ಒತ್ತಿಹೇಳಬಯಸುವೆ.

ನಮ್ಮ ತಂದೆ ತಾಯಿಗಳು ತಮ್ಮ ಮಕ್ಕಳು ಇಂಗ್ಲಿಷ್ ಶಾಲೆಗಳಲ್ಲಿ ಓದಿ ಎಲ್ಲರಂತೆ, ಬಹಳ ಬಾರಿ ಎಲ್ಲರಿಗಿಂತ ಹೆಚ್ಚಾಗಿ ಮುಂದುವರೆಯಬೇಕೆಂದು ಆಶಿಸುತ್ತಾರೆ. ಇದರ ಅರ್ಥ ಮತ್ತೇನೂ ಆಗಿರದೆ ತಮ್ಮ ಮಕ್ಕಳು ಈ ಜಗತ್ತಿನ ಸಕಲ-ಸುಖ ಸೌಲಭ್ಯಗಳನ್ನು ಪಡೆಯುವ ಅವಕಾಶವನ್ನು ಇಂಗ್ಲಿಷ್ ಶಿಕ್ಷಣ ಸುಗಮಗೊಳಿಸುವುದು ಎಂಬುದೇ ಆಗಿದೆ. ಮತ್ತೆ ಇದರ ಅರ್ಥವಾದರೂ ಏನು? ಭೂಮಿಯ ಸರ್ವನಾಶಕ್ಕೆ ತಮ್ಮ ಮಕ್ಕಳೂ ಸಮರ್ಥರಾಗಬೇಕೆಂಬುದೇ ತಾನೇ? ಗಾಂಧಿಯನ್ನು ಮರೆತ ಭಾರತದ ಜನ ಈ ಭೂಮಿಯನ್ನೂ, ತಾಯ್ನುಡಿಯನ್ನೂ ಮರೆತು ಇಂಗ್ಲಿಷ್ ವ್ಯಾಮೋಹದ ಮೂಲಕ ತಮ್ಮ ಮಕ್ಕಳನ್ನು ಅನುಚಿತ ಸುಖ-ಸಂಪತ್ತುಗಳ ದುರಾಸೆಗೆ ದೂಡಿ ಅವರನ್ನು ಭೂಮಿಯನ್ನೇ ಕೊಲ್ಲಲು ಸಜ್ಜಾಗಿರುವ ಪಡೆಗೆ ಸೇರಿಕೊಳ್ಳಲು ಪ್ರಚೋದಿಸುತ್ತಿರುವುದು ಸಹಜವೇ ಆಗಿದೆ. ಇಂಗ್ಲಿಷ್ ಶಿಕ್ಷಣ ಬಯಸುವ ಯಾರಿಗಾದರೂ ಇಂದು ಬೇಕಾಗಿರುವುದು ಜ್ಞಾನವಲ್ಲ; ಅಪರಿಮಿತ ಸುಖ ಸಂಪತ್ತಿನ ಬದುಕು. ಏಕೆಂದರೆ ಅವರು ಪಡೆಯುತ್ತಿರುವುದು ಜ್ಞಾನವೇ ಆಗಿದ್ದರೆ ಅವರಿಗೆ ಭೂಹತ್ಯೆಯಲ್ಲಿನ ತಮ್ಮ ಪಾತ್ರದ ಅರಿವೂ ಉಂಟಾಗುತ್ತಿತ್ತು.

ಸಂಸ್ಕೃತದಲ್ಲಿ ಒಂದು ಮಾತಿದೆ : 'ಕಾಮಾತುರಾಣಾಂ ನ ಲಜ್ಜ ನ ಭಯ' ಎಂಬುದಾಗಿ. ಅದನ್ನು ಇಂದು 'ಇಂಗ್ಲಿಷಾತುರಾಣಾಂ ನ ಬುದ್ಧಿ ನ ವಿವೇಕ' ಎಂದು

ಮಾರ್ಪಡಿಸಿಕೊಳ್ಳಬಹುದಾಗಿದೆ. ಏಕೆಂದರೆ ಕನ್ನಡ ಶಿಕ್ಷಣವಾದಿಗಳು ನಮ್ಮ ಶ್ರೇಷ್ಠ ಜ್ಞಾನಿ-ವಿಜ್ಞಾನಿಗಳೆಲ್ಲರೂ- ಸರ್ ಎಂ ವಿಶ್ವೇಶ್ವರಯ್ಯನವರಿಂದ ಹಿಡಿದು ಯು.ಆರ್. ರಾವ್, ಕಿರಣಕುಮಾರ್, ಸಿ.ಎನ್. ಆರ್ ರಾವ್ ಅವರವರೆಗೆ, ಕುವೆಂಪು-ಮಾಸ್ತಿಯವರಿಂದ ಹಿಡಿದು ದೇವನೂರ ಮಹಾದೇವ-ಶಿವಪ್ರಕಾಶ-ಜಯಂತ ಕಾಯ್ಕಿಣಿಯರವರೆಗೆ ಎಲ್ಲ ಓದಿದ್ದೂ ಕನ್ನಡ ಮಾಧ್ಯಮದಲ್ಲಿ ಎಂದೆಷ್ಟೇ ಬಾರಿ ಹೇಳಿದರೂ ನಮ್ಮ ಬುದ್ಧಿಗಾಗಲೀ, ವಿವೇಕಕ್ಕಾಗಲೀ ತಾಕುವುದಿಲ್ಲ! ಏಕೆಂದರೆ ನಮಗೆ ಹಿಡಿದಿರುವುದು ಇಂಗ್ಲಿಷ್ ದೆವ್ವ. ಅದು ನಮ್ಮ ನೆಲ ಜಲ ಗಾಳಿ ಬೆಳಕುಗಳನ್ನು ಸಂಪೂರ್ಣ ನಾಶ ಮಾಡಿ ನಮ್ಮನ್ನು ಧ್ವಂಸ ಮಾಡುವವರೆಗೂ ನಮ್ಮನ್ನು ಬಿಟ್ಟು ಹೋಗಲಾರದೇನೋ! ಇಲ್ಲಿ ಇನ್ನೊಂದು ವಿಷಯವನ್ನೂ ಪ್ರಸ್ತಾಪಿಸಬೇಕು. ಅದೆಂದರೆ, ಕನ್ನಡ ಶಾಲೆಗಳ ಗುಣಮಟ್ಟ ಕಳಪೆಯಾಗಿದೆ ಎಂಬುದು. ಆದರೆ ಈ ಮಾತನ್ನಾಡುವವರು ಇಂಗ್ಲಿಷ್ ಶಾಲೆಗಳು ಬರುವ ಮುನ್ನ ಈ ಮಾತನ್ನು ನಾವು ಆಡುತ್ತಿರಲಿಲ್ಲ ಎಂಬುದನ್ನು ನೆನಪಿಡಬೇಕು. ಅಂದರೆ ಕನ್ನಡ ಶಾಲೆಗಳು ಇಂದು ಏನಾದರೂ ಹಾಳಾಗಿದ್ದರೆ ಅದಕ್ಕೆ ಅಲ್ಲಿಂದ ನಮ್ಮ ಮಕ್ಕಳನ್ನು ಹೊರತಂದ ನಾವೇ ಕಾರಣರು ಮತ್ತು ಆ ಪಾಪದ ಹೊರೆಯನ್ನು ನಾವೇ ಹೊರಬೇಕು. ಆದರೆ ಸರ್ಕಾರಿ ಕನ್ನಡ ಶಾಲೆಗಳು ಇವರು ಹೇಳುವಷ್ಟು ಕಳಪೆಯಾಗಿಲ್ಲ ಮತ್ತು ಖಾಸಗಿ ಇಂಗ್ಲಿಷ್ ಶಾಲೆಗಳು ಇವರು ನಂಬಿರುವಷ್ಟು ಉತ್ತಮ ಮಟ್ಟದವೇನಾಗಿಲ್ಲ ಎಂಬುದನ್ನು ಎಲ್ಲರೂ ಬಲ್ಲರು. ಇವರಿಗೆಲ್ಲ ಖಾಸಗಿ ಇಂಗ್ಲಿಷ್ ಶಾಲೆಗಳು ಉತ್ತಮ ಗುಣಮಟ್ಟದ್ದಾಗಿ ಕಾಣುವುದು ಇವರ ಕಣ್ಣುಗಳಿಗೆ ಮುಸುಕಿರುವ ಇಂಗ್ಲಿಷ್ ಕುರಿತ ವ್ಯಾಮೋಹದ ಕಾರಣದಿಂದಾಗಿ ಮಾತ್ರ ಎಂಬುದನ್ನೂ ಇಲ್ಲಿ ಹೇಳಬೇಕು.

ಹಾಗಾದರೆ ಇಂಗ್ಲಿಷ್ ಕಲಿತವರೆಲ್ಲರೂ ವಿನಾಶಕಾರಿಗಳೇ ಎಂದು ನೀವು ಕೇಳಬಹುದು. ಆದರೆ ಮುಖ್ಯ ಪ್ರಶ್ನೆ ಇಂಗ್ಲಿಷ್‌ನ್ನು ಏಕೆ ಕಲಿಯಹೊರಟಿದ್ದೇವೆ ಮತ್ತು ಹೇಗೆ ಕಲಿಯಹೊರಟಿದ್ದೇವೆ ಎಂಬುದೇ ಆಗಿದೆ. ಇಂಗ್ಲಿಷ್ ಒಂದು ಸಂವಹನದ ಭಾಷೆಯಾಗಿ ಒಂದು ಸಮರ್ಥ ವಿಶ್ವಭಾಷೆಯೇ ಸರಿ. ಅದು ಜಗತ್ತಿನ ಮೂಲೆ ಮೂಲೆಗಳಿಂದ ಎಲ್ಲ ತೆರನ ಮಾಹಿತಿ-ವಿಚಾರ-ಚರ್ಚೆಗಳನ್ನು ಹೊತ್ತು ತರುತ್ತದೆ. ಹಾಗಾಗಿ ಅದನ್ನು ಕಲಿಯಬಾರದೆಂದು ಯಾರೂ ಹೇಳಲಾರರು. ಆದರೆ ಅದು ಹಿಂದೆ ಹೇಳಿದಂತೆ ಈ ಮಾಹಿತಿ-ವಿಚಾರ-ಚರ್ಚೆಗಳ ಸಂತೆಯ ಸರಕಿನ ಮಧ್ಯೆ ದುರಾಸೆಯ, ವಿನಾಶದ ವಾಹಕವಾಗಿ ನಮ್ಮ ಚೇತನವನ್ನು ಪ್ರವೇಶಿಸದಂತೆ ರಕ್ಷಾ ಕವಚವಾಗಿ ತಡೆಯಲು ನಮಗೆ ತಾಯ್ನುಡಿಯ, ಅಂದರೆ ತಾಯಿ ಮಮತೆಯುಳ್ಳ ಅಡಿಪಾಯದ ಶಿಕ್ಷಣ ಬೇಕು. ಅದು ನಮ್ಮ ಪ್ರಾಚೀನ ಬದುಕಿನ ವಿವಿಧ ಮಾದರಿಗಳ ಪ್ರಯೋಗಗಳ ಮೂಲಕ ಕಂಡುಕೊಂಡ ಚಿರಂತನ ಮೌಲ್ಯಗಳನ್ನು ಆಧರಿಸಿದ ವಿವೇಕವನ್ನು ನಮ್ಮದೇ ಬದುಕಿನ ಸೂಕ್ಷ್ಮಗಳಲ್ಲಿ ನೇಯ್ದ ನುಡಿಗಟ್ಟುಗಳ ಮೂಲಕ, ಅನುಭವ ಕಥನಗಳ ಮೂಲಕ ನಮ್ಮದೇ ನಾಲಿಗೆ ಮೇಲೆ ಹೊರಳಾಡುವ ಭಾಷೆಯ ವಿವಿಧ ಬಾಗು ಬಳುಕುಗಳ ಮೂಲಕ ನಮಗೆ ತಲುಪಬೇಕು. ಆಗ ಮಾತ್ರ ಆ ವಿವೇಕ ನಮ್ಮಲ್ಲಿ ಅಂತರ್ಗತವಾಗುತ್ತದೆ. ಬೇರುಗಳು ಗಟ್ಟಿಯಾಗಿ ಈ ಮಣ್ಣಿನಲ್ಲಿ ಕೂತ ಮೇಲೆ ಗಿಡದ ರೆಂಬೆ ಕೊಂಬೆಗಳು ಸರ್ವ ದಿಕ್ಕುಗಳಿಂದಲೂ ಗಾಳಿ ಬೆಳಕು ಪಡೆದು

ಸ್ವಚ್ಛಂದವಾಗಿ ಬೆಳೆಯಲಿ. ಇದು ತಾಯ್ನುಡಿ ಶಿಕ್ಷಣದ ಮೂಲ ತತ್ವ. ಇದನ್ನೇ ಗಾಂಧಿ-ಲೋಹಿಯಾ ಹೇಳಿದ್ದು. ನಿಜವಾದ ದೇಶಭಕ್ತರಾರೂ ಇದನ್ನು ಅಲ್ಲಗಳೆಯುವ ಧೈರ್ಯ ಮಾಡಲಾರರು.

ಇಂದು ಬಹುರಾಷ್ಟ್ರೀಯ ಕಂಪನಿಗಳು ಹರಡುತ್ತಿರುವ ಕೊಳ್ಳುಬಾಕ ಸಂಸ್ಕೃತಿಯ ಮಾಯಾಜಾಲದ ಭಾಷೆಯಾದರೂ ಯಾವುದು? ಅದರ ನುಡಿಗಟ್ಟಾದರೂ ಯಾವುದು? ಅದು ಮಾಡುತ್ತಿರುವುದಾದರೂ ಏನು? ನಿಧಾನವಾಗಿ ಅದು ನಮ್ಮನ್ನು ಅಂತಾರಾಷ್ಟ್ರೀಯಗೊಳಿಸುವ, ವಿಶ್ವ ಪ್ರಜೆಗಳನ್ನಾಗಿಸುವ ನೆಪದಲ್ಲಿ ನಮ್ಮ ನಿಜ ಅಸ್ತಿತ್ವದ ಬೇರುಗಳನ್ನೇ ಅಲ್ಲಾಡಿಸುತ್ತಾ ನಮ್ಮನ್ನು ನಮ್ಮಿಂದಲೇ, ನಮ್ಮ ಕೇಂದ್ರದಿಂದಲೇ ಪರಕೀಯವನ್ನಾಗಿ ಮಾಡುತ್ತಾ ನಮ್ಮ ದೇಶವನ್ನು ಮತ್ತೊಮ್ಮೆ-ಈ ಬಾರಿ ಮಾನಸಿಕವಾಗಿ-ವಸಾಹತು ದೇಶವನ್ನಾಗಿ ಮಾಡುತ್ತಿದೆ. ಈ ವಸಾಹತುಶಾಹಿಯ ವಿಶೇಷವೆಂದರೆ, ಹೊರಗಿನವರು ಇಲ್ಲಿಗೆ ಬಂದು ನಮ್ಮನ್ನು ನೇರವಾಗಿ ಆಳುವುದಿಲ್ಲ. ವಿವಿಧ ಸ್ತರಗಳ, ದರ್ಜೆಯ ದೇಶಿ ಏಜೆಂಟರುಗಳು, ಮಧ್ಯವರ್ತಿಗಳ ಮೂಲಕ ನಮ್ಮನ್ನು ಆಳುತ್ತಾರೆ. ಇಂಗ್ಲಿಷ್ ಶಾಲೆಗಳ ಮಾಲೀಕರು ತಮಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಈ ರೀತಿಯ ಏಜೆಂಟರುಗಳೇ ಆಗಿದ್ದಾರೆ. ಅವನ್ನು ಪೋಷಿಸುವ ಮಕ್ಕಳ ತಂದೆ-ತಾಯಿಗಳಾದ ನಾವಾದರೂ ಯಾರು? ಒಮ್ಮೆ ಕೇಳಿಕೊಳ್ಳಬೇಕು. ಹಾಗಾಗಿಯೇ ಒಮ್ಮೆ ನಮ್ಮನ್ನು ವಸಾಹತುಶಾಹಿಯ ಕ್ರೌರ್ಯ-ಸುಲಿಗೆಗಳಿಂದ ಮುಕ್ತಗೊಳಿಸಿದ ಹೋರಾಟದ ನೇತೃತ್ವ ವಹಿಸಿದ್ದ ಗಾಂಧಿ, ಇಂಗ್ಲಿಷ್ ಶಿಕ್ಷಣ ಪಡೆದವರು ದೇಶ ಕಟ್ಟಲಾರರು ಎಂದು ಹೇಳಿದ್ದು. ಈ ಸತ್ಯವನ್ನು ಮುಚ್ಚಿ ಹಾಕಲೆಂದೇ ಇಂದು ವಿದೇಶಿ ತಂತ್ರಜ್ಞಾನ ಮತ್ತು ಬಂಡವಾಳದ ಮೂಲಕ ಬಲಿಷ್ಠ ಭಾರತವನ್ನು ಕಟ್ಟಲು ದೇಶಭಕ್ತಿಯ ಹೊಸ ವ್ಯಾಖ್ಯಾನವನ್ನು ಪ್ರಯೋಗ ಮಾಡಲಾಗುತ್ತಿದೆ. ಅದು ಸಹಜವಾಗಿಯೇ ಐಕ್ಯತೆಯ ಬದಲಿಗೆ ಅಶಾಂತಿಯನ್ನು ಸೃಷ್ಟಿಸುತ್ತಿದೆ.

ಇರಲಿ. ನಾನು ನಮ್ಮ ಪ್ರಾಚೀನ ಪರಂಪರೆಯ ಮೌಲ್ಯಗಳ ಮಥನದಿಂದ ಮೂಡಿದ ವಿವೇಕವು ನಮ್ಮ ಮಣ್ಣಿನ ವಾಸನೆಯ ನುಡಿಗಟ್ಟುಗಳಲ್ಲಿ, ನಮ್ಮ ನಾಲಗೆಯ ಹೊರಳಿನಲ್ಲಿ ತನ್ನ ಬಾಗು ಬಳುಕುಗಳನ್ನು ಕಂಡುಕೊಂಡ ಭಾಷೆಯಲ್ಲಿ ನಮ್ಮನ್ನು ತಲುಪಬೇಕು ಎಂದು ನಂಬಿದವನು. ಈ ಪ್ರಕ್ರಿಯೆ ಶ್ರೇಷ್ಠ ರೂಪದಲ್ಲಿ ನಡೆಯುವುದು ಸಾಹಿತ್ಯ ರಚನೆಯ ಕರ್ಮದಲ್ಲಿ. 'ಕನ್ನಡ ಎನೆ ಕುಣಿದಾಡುವುದೆನ್ನದೆ ಕನ್ನಡವೆಂದೆಡೆ ಕಿವಿ ನಿಮಿರುವುದು / ಕಾಮನ ಬಿಲ್ಲನು ಕಾಣುವ ಕವಿಯೊಲು ತೆಕ್ಕನೆ ಮನ ಮೈಮರೆಯುವುದು!' ಎಂಬ ಕುವೆಂಪು ಸಾಲುಗಳಲ್ಲೇ ಈ ಸತ್ಯ ಸಾಕಾರಗೊಂಡಿದೆ. ಕನ್ನಡವನ್ನು ಹೀಗೆ ನಾಲಗೆಯ ಮೇಲೆ, ಕಿವಿಯ ಮೇಲೆ, ಸರ್ವೇಂದ್ರಿಯಗಳ ಮೇಲೆ ಹೊರಳಾಡಿಸಿಕೊಂಡು ಮಗು ಬೆಳೆಯಬೇಕು. ಆಗ ಅದು ಯಾವುದೇ ಭಾಷೆಯಲ್ಲಿ ಪಡೆದ ಮಾಹಿತಿಯು 'ಜ್ಞಾನ'ವಾಗಿ ಸಂಸ್ಕರಿತಗೊಳ್ಳುತ್ತದೆ. ಜ್ಞಾನ ಅಂದರೆ ಆತ್ಮೋದ್ಧಾರ ಸಾಧಕವಾದದ್ದು. ಇಂಗ್ಲಿಷ್ ಮೂಲಕವೇ ಪಡೆಯಲು ಸಾಧ್ಯವೆಂಬ ಮೂಢನಂಬಿಕೆಗೆ ಒಳಗಾಗಿರುವ ಆಧುನಿಕ ವಿಜ್ಞಾನ-ತಂತ್ರಜ್ಞಾನಗಳು ಆತ್ಮೋದ್ಧಾರಕ ಸಾಧನಗಳಾಗುವುದು

ಹೀಗೆ ಮಾತ್ರ. ತಾಯ್ನುಡಿಯ ಜ್ಞಾನಕೋಶದ ಸಂಸರ್ಗದಲ್ಲಿ. ಇಲ್ಲದೇ ಹೋದರೆ ಅವು ವಿನಾಶಕಾರಿಯೇ, ಈಗಾಗುತ್ತಿರುವಂತೆ...

ಸಾಹಿತ್ಯ ಎಂಬ ಶಬ್ದ ವ್ಯುತ್ಪತ್ತಿಯಾಗಿರುವುದು ಸಹಿತ ಎಂಬ ಶಬ್ದದಿಂದ ಎಂದು ಹೇಳಲಾಗುತ್ತದೆ. ಸಹಿತ ಅಂದರೆ ಸಾಂಘಿಕತೆ, ಜೊತೆಗೂಡಿ ಬಾಳುವ ಕಲೆ. ಕನ್ನಡದ ಏಕೆ, ಜಗತ್ತಿನ ಶ್ರೇಷ್ಠ ಕಥೆಗಾರರಲ್ಲಿ ಒಬ್ಬರಾದ ಮಾಸ್ತಿ ವೆಂಕಟೇಶ ಅಯ್ಯಂಗಾರರ ಪ್ರಕಾರ ಮನುಷ್ಯನ ಬದುಕಿನ ಶ್ರೇಷ್ಠ ಪ್ರಯೋಗವೆಂದರೆ ಕಥೆ. ಕಷ್ಟ-ಸುಖಗಳನ್ನು ಹಂಚಿಕೊಂಡು ಬಾಳನ್ನು ಸವಿ-ಸಹ್ಯ ಮಾಡಿಕೊಳ್ಳುವುದೇ ಪುರುಷಾರ್ಥವಾದರೆ ಅದನ್ನು ಆಗು ಮಾಡುವ ಕಥೆಗಾರಿಕೆಯೂ ಪುರುಷಾರ್ಥವೆನ್ನಿಸಿಕೊಳ್ಳಬಲ್ಲುದು. ಈ ನೆಲೆಯಲ್ಲಿಯೇ ಲೋಕವಿದ್ಯೆ ಎನಿಸಿಕೊಂಡಿರುವ ಸಾಹಿತ್ಯ ಅಥವಾ ಕಲೆ ಪಾರಮಾರ್ಥಿಕವೂ ಆಗುವುದು. ಈ ಲೋಕಾಲೋಕಗಳ ಅನುಸಂಧಾನಕ್ಕೆ ಸೇತುವೆಯಾಗಿರುವುದು ಭಾಷೆ. ಅದು ಆ ಶಕ್ತಿ ಪಡೆಯಬೇಕಾದರೆ ಅದು ಸುಖ-ಸಂಪತ್ತುಗಳ ದುರಾಸೆಯ ಸಂಸರ್ಗದಿಂದ ದೂರವಿರಬೇಕು. ಅದು ತಾಯಿ ಮೊಲೆಹಾಲಿನಂತೆ ಸಹಜ ನಿರ್ಮಲ ಜೀವದಾಯಿಯಾಗಿರಬೇಕು. ಜಾತಿ-ಧರ್ಮ-ಕುಲ-ಗೋತ್ರಗಳ ದ್ವೇಷ ಮತ್ತು ತಾರತಮ್ಯಗಳಿಂದ ಮುಕ್ತವಾಗಿರಬೇಕು. ಕನ್ನಡಿಗರ ಸಂಸ್ಕೃತಿಯ ಹೆಗ್ಗುರುತೆಂದರೆ ಸಹಿಷ್ಣುತೆ ಎಂದು ಕನ್ನಡದ ಆದಿ ಲೇಖಕನೆಂದು ಪರಿಗಣಿತನಾಗಿರುವ ಕವಿರಾಜಮಾರ್ಗಕಾರನೇ ಹೇಳಿದ್ದಾನಲ್ಲವೆ? ಪಂಪನಿಂದ ಹಿಡಿದು ನಮ್ಮ ಸಮಕಾಲೀನರಾದ ದೇವನೂರ ಮಹಾದೇವ ಅವರವರೆಗೆ ಕನ್ನಡ ಸಾಹಿತ್ಯ ಪ್ರತಿಪಾದಿಸುತ್ತಾ ಬಂದಿರುವುದೂ ಇದನ್ನೇ. ಪಂಪ 'ಮನುಷ್ಯ ಜಾತಿ ತಾನೊಂದೆವಲಂ!' ಎಂದರೆ ಮಹಾದೇವ 'ಸಂಬಂಜ ಅನ್ನೋದು ದೊಡ್ಡದು ಕನಾ!' ಎನ್ನುತ್ತಾರೆ.

ಒಂದೂವರೆಯಿಂದ ಎರಡು ಸಾವಿರ ವರ್ಷಗಳ ಇತಿಹಾಸ ಹೊಂದಿದೆಯೆಂದು ಹೇಳಲಾಗುವ ಕನ್ನಡ ಭಾಷೆ-ಸಾಹಿತ್ಯ ಪರಂಪರೆ ಅನೇಕ ಭಾಷೆ-ಸಂಸ್ಕೃತಿ- ಧರ್ಮ-ಸಂಪ್ರದಾಯಗಳ ಮುಖಾಮುಖಿಯಲ್ಲಿ ಎಲ್ಲವನ್ನೂ ತನ್ನೊಳಕ್ಕೆ ಜೀರ್ಣಿಸಿಕೊಂಡು ತನ್ನದೇ ತೇಜವನ್ನು ಮೆರೆಯುತ್ತಾ ಬಂದಿದೆ. ಹಾಗಾಗಿಯೇ ನಮಗೆ ಪಂಪ ರನ್ನ ಪೊನ್ನ ಜನ್ನ ಹರಿಹರ ರಾಘವಾಂಕ ಕುಮಾರವ್ಯಾಸ ವಚನಕಾರ ದಾಸವರೇಣ್ಯ ತತ್ವಪದಕಾರರೆಲ್ಲರ ಸಾಹಿತ್ಯ ಬರೀ ಸಾಹಿತ್ಯವೆನಿಸದೆ ಬದುಕಿನ ಜ್ಞಾನಕೋಶಗಳೂ ಆಗಿವೆ. ಇದೇ ಮಾತನ್ನು ಆಧುನಿಕ ಸಾಹಿತಿಗಳಾದ ಕುವೆಂಪು-ಮಾಸ್ತಿ-ಬೇಂದ್ರೆ-ಕಾರಂತ-ಪುತಿನ-ಅನಂತಮೂರ್ತಿ-ತೇಜಸ್ವಿ-ಲಂಕೇಶ್-ದೇವನೂರ ಮಹಾದೇವ ಅವರ ಸಾಹಿತ್ಯದ ಬಗೆಗೂ ಹೇಳಬಹುದು. ಆದರೆ ಒಂದು ವ್ಯತ್ಯಾಸದೊಡನೆ. ಪ್ರಾಚೀನ ಸಾಹಿತ್ಯವು ಮನುಷ್ಯ ಜಾತಿಯ ಐಕ್ಯತೆಯ ಕಥೆಗಳನ್ನು ಹೇಳಿದರೆ ಆಧುನಿಕ ಸಾಹಿತ್ಯ ಈ ಐಕ್ಯತೆಗೆ ಬಂದೊದಗಿರುವ ಧಕ್ಕೆ-ಆತಂಕಗಳನ್ನು ಹೇಳುತ್ತದೆ. ಹಾಗಾಗಿ ಈ ಧಕ್ಕೆಯ ಹಿಂದಿರುವ ಶಕ್ತಿ ಯಾವುದು ಎಂಬುದನ್ನು ನಾವು ಗುರುತಿಸಬೇಕಿದೆ.

ಹಾಗೆ ಗುರುತಿಸಿರುವ ಪ್ರಾಜ್ಞರು ಇದನ್ನು ಪಶ್ಚಿಮವನ್ನು ಕುರುಡಾಗಿ ಅನುಕರಿಸುವ ಆಧುನಿಕತೆ ಎಂದು ಕರೆಯುವರು. ಇದರ ಮೂಲ ಯಾವುದು ಎಂಬುದು ನಮ್ಮ

ಸರ್ವೋನ್ನತ ನ್ಯಾಯಾಲಯದ ನ್ಯಾಯಪ್ರಜ್ಞೆಗೂ ದಕ್ಕಲಾಗದಷ್ಟು ದಟ್ಟ ಮಾಯೆಯ ಮುಸುಕನ್ನು ರಾಷ್ಟ್ರಜೀವನದ ಮೇಲೆ ಹೊದಿಸಿಬಿಟ್ಟಿದೆ. ಹಾಗಾಗಿಯೇ ಅಲ್ಲವೆ ಈ ನ್ಯಾಯಾಲಯ ಮಾತೃಭಾಷಾ ಮಾಧ್ಯಮ ಶಿಕ್ಷಣವನ್ನು ಕಡ್ಡಾಯ ಮಾಡುವುದು ಸಂವಿಧಾನ ವಿರೋಧಿಯಾದದ್ದು ಎಂದು ಅಭಿಪ್ರಾಯಪಟ್ಟದ್ದು? ಈ ಮುಸುಕನ್ನು ತೆರೆಯುವ ಜವಾಬ್ದಾರಿ ಭಾಷೆ, ಸಂಸ್ಕೃತಿ, ಕಲೆ ಮತ್ತು ಸಾಹಿತ್ಯ ಪ್ರೇಮಿಗಳ ಮೇಲಿದೆ. ಕರ್ನಾಟಕದ ಮಟ್ಟಿಗೆ ಇವರೆಲ್ಲರ ಸಂಘಟಿತ ವೇದಿಕೆಯಾಗಿರಬೇಕಾದ ಸಾಹಿತ್ಯ ಪರಿಷತ್ತು ಈ ವಿಷಯದಲ್ಲಿ ಕೇವಲ ಔಪಚಾರಿಕ ಸದ್ದು ಮಾಡುತ್ತಿರುವುದು ವಿಷಾದಕರ. ಸಾಹಿತ್ಯ ಪರಿಷತ್ತು ರೂಪುಗೊಂಡದ್ದು ಕರ್ನಾಟಕ ರಾಜ್ಯೋದಯ ಚಳುವಳಿಯ ಭಾಗವಾಗಿ ಎಂಬುದನ್ನೂ, ಕರ್ನಾಟಕ ರಾಜ್ಯೋದಯ ಚಳುವಳಿ ಕನ್ನಡದ ಮಕ್ಕಳು ಕನ್ನಡದ ಮೂಲಕ ತಮ್ಮ ಬಾಳನ್ನು ಕಟ್ಟಿಕೊಳ್ಳುವಂತಾಗಲಿ ಎಂಬ ಕನಸನ್ನು ಹೊತ್ತು ರೂಪುಗೊಂಡದ್ದು ಎಂಬುದನ್ನೂ ಈ ಮೂಲಕ ಸಾಹಿತ್ಯ ಪರಿಷತ್ತಿನ ಅಧಿಪತಿಗಳಿಗೆ ನೆನಪಿಸಬಯಸುವೆ. ಅದು ಸರ್ಕಾರ ನೀಡುವ ಹಣಕಾಸಿನ ನೆರವು, ಅನುದಾನಗಳಿಗೆ ಮರುಳಾಗದೆ ಮತ್ತು ಬರೀ ಹಬ್ಬ-ಉತ್ಸವ-ಸಮ್ಮೇಳನಗಳ ಹುಸಿ ಸಂಭ್ರಮದಲ್ಲಿ ಮುಳುಗದೆ ತನ್ನ ಹುಟ್ಟಿನ ಉದ್ದೇಶವನ್ನು ಸಾರ್ಥಕಪಡಿಸಿಕೊಳ್ಳುವ ಕಡೆ ಗಮನ ಹರಿಸಬೇಕಿದೆ. ಕರ್ನಾಟಕದ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವಾದರೂ ಕಡ್ಡಾಯವಾಗಿ ಕನ್ನಡದಲ್ಲಿ ದೊರಕುವಂತೆ ಮಾಡಲು ಕಂಕಣಬದ್ಧವಾಗಬೇಕಿದೆ.

ಕಳೆದ ರಾಜ್ಯೋತ್ಸವ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವು ಸಾಹಿತ್ಯ ಸಾಧನೆಗೆಂದು ನನಗೆ ನೀಡಿದ ರಾಜ್ಯೋತ್ಸವ ಪ್ರಶಸ್ತಿಯನ್ನು ನಾನು ಕನ್ನಡ ಶಿಕ್ಷಣ ಮಾಧ್ಯಮ ಸಂಬಂಧವಾದ ಸರ್ಕಾರದ ನಿರಾಸಕ್ತಿಯ ಕಾರಣದಿಂದಾಗಿ ಸ್ವೀಕರಿಸಲಿಲ್ಲ. ಆಗ ಮುಖ್ಯಮಂತ್ರಿಗಳು ತಮ್ಮ ಸರ್ಕಾರ ಕನ್ನಡ ಶಿಕ್ಷಣ ಮಾಧ್ಯಮಕ್ಕೆ ಬದ್ಧವಾಗಿರುವುದಾಗಿಯೂ, ಮಾತೃಭಾಷಾ ಶಿಕ್ಷಣ ಮಾಧ್ಯಮ ಕಡ್ಡಾಯಕ್ಕೆ ಅಡ್ಡಿಯಾಗಿರುವ ಸಂವಿಧಾನದ ಅಂಶಗಳನ್ನು ತಿದ್ದುಪಡಿ ಮಾಡಲು ಅಗತ್ಯವಾದ ಉಪಕ್ರಮಗಳನ್ನು ಕೈಗೊಳ್ಳಲಾಗುತ್ತಿದೆಯೆಂದೂ ಹೇಳಿದ್ದರು. ಮೂರು ತಿಂಗಳುಗಾದರೂ ಅ ಉಪಕ್ರಮಗಳೇನು ಎಂಬುದು ಬಹಿರಂಗವಾಗಿಲ್ಲ. ರಾಜ್ಯದ ಜನರ ಭಾಷೆ ಮತ್ತು ಸಾಹಿತ್ಯ-ಸಂಸ್ಕೃತಿಗಳ ಹಿತ ಕಾಪಾಡುವ ಹೊಣೆ ಹೊತ್ತಿರುವ ಸಾಹಿತ್ಯ ಪರಿಷತ್ತು ತುರ್ತಾಗಿ ಮುಖ್ಯಮಂತ್ರಿಗಳನ್ನು ಈ ಸಂಬಂಧವಾಗಿ ಗಂಭೀರವಾಗಿ ಪ್ರಶ್ನಿಸಬೇಕಿದೆ. ಈ ನೆಲಮಂಗಲ ತಾಲ್ಲೂಕು ಸಾಹಿತ್ಯ ಸಮ್ಮೇಳನ ಇದಕ್ಕೆ ನಾಂದಿಯಾಗಲಿ ಎಂದು ಹಾರೈಸುತ್ತಾ ನನ್ನ ಮಾತುಗಳನ್ನು ಮುಕ್ತಾಯಗೊಳಿಸುವೆ. ಇದಕ್ಕೆ ಅವಕಾಶ ಮಾಡಿಕೊಟ್ಟ ಸ್ಥಳೀಯ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳಿಗೂ, ಸಹನೆಯಿಂದ ಕೇಳಿದ ನಿಮ್ಮೆಲ್ಲರಿಗೂ ನನ್ನ ವಂದನೆಗಳು.

ನಮಸ್ಕಾರ, ಜೈ ಕರ್ನಾಟಕ, ಜೈ ಹಿಂದ್.

ಡಿ.ಎಸ್. ನಾಗಭೂಷಣ

ಸಾಹಿತ್ಯ ಸಮ್ಮೇಳನಾಧ್ಯಕ್ಷತೆಯ ಸಂದರ್ಭದ ಒಂದು ಸಂದರ್ಶನ

(ಇದೇ ಫೆಬ್ರುವರಿ ೨೪ರಂದು ತ್ಯಾಮಗೊಂಡ್ಲುವಿನಲ್ಲಿ ನಡೆದ ನೆಲಮಂಗಲ ತಾಲ್ಲೂಕು ಹತ್ತನೇ ಸಾಹಿತ್ಯ ಸಮ್ಮೇಳನದ ಸಂದರ್ಭದ ಸ್ಮರಣ ಸಂಚಿಕೆಗಾಗಿ ಕೇಳಿದ ಪ್ರಶ್ನೆಗಳಿಗೆ ಸಮ್ಮೇಳನಾಧ್ಯಕ್ಷನಾಗಿದ್ದ ನನ್ನ ಉತ್ತರಗಳು)

೧. ಕನ್ನಡ ಶಾಲೆಗಳನ್ನು ಮುಚ್ಚುತ್ತಿರುವ ಸಂದರ್ಭದಲ್ಲಿ ಕನ್ನಡದ ಉಳಿವಿಗೆ ಪರಿಷತ್ತಿನ ಪಾತ್ರವೇನು?

ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾದ ಸಂದರ್ಭ ಮತ್ತು ಉದ್ದೇಶಗಳನ್ನು ನೆನಪಿಸಿಕೊಂಡಾಗ, ಕನ್ನಡ ಶಾಲೆಗಳು ಕ್ರಮೇಣ ಮುಚ್ಚುತ್ತಿರುವ ಇಂದಿನ ಸಂದರ್ಭದಲ್ಲಿ ಅದರ ಪಾತ್ರ ಏನೇನೂ ಕಾಣದೆ ನಿರಾಶೆ ಹುಟ್ಟಿಸುತ್ತಿದೆ. ಹಿಂದೆ ನಾನೊಮ್ಮೆ ಬರೆದಿದ್ದಂತೆ, ಶಾಲಾ ಪ್ರತಿ ವರ್ಷ ದಾಖಲಾತಿಯ ಸಮಯದಲ್ಲಿ ಪರಿಷತ್ತು (ಅಂದರೆ ಅದರ ಸ್ಥಳೀಯ ಶಾಖೆ) ಪ್ರತಿ ಊರಿನಲ್ಲೂ ಇತರ ಕನ್ನಡಪರ ಸಂಘಟನೆಗಳ ಜೊತೆಗೂಡಿ ಕನ್ನಡ ಮಾಧ್ಯಮ ಶಾಲಾ ದಾಖಲಾತಿಗೆ ತಂದೆ ತಾಯಿಗಳನ್ನು ಪ್ರೇರೇಪಿಸುವ ಮನೆ ಮನೆ ಭೇಟಿ, ಮೆರವಣಿಗೆ-ಜಾಥಾ-ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಆದರೆ ಪರಿಷತ್ತು ಪ್ರಾಥಮಿಕ ಶಾಲಾ ಮಟ್ಟದವರೆಗಾದರೂ ಮಾತೃಭಾಷಾ ಶಿಕ್ಷಣ ಕಡ್ಡಾಯ ಮಾಡುವ ಕರ್ನಾಟಕ ಸರ್ಕಾರದ ಆಜ್ಞೆಯನ್ನು ಸರ್ವೋನ್ನತ ನ್ಯಾಯಾಲಯ ಅಸಾಂವಿಧಾನಿಕ ಎಂದು ಅನೂರ್ಜಿತಗೊಳಿಸಿದ ನಂತರ ತಾಳಿರುವ ಮೌನ ವಿಷಾದವನ್ನುಂಟು ಮಾಡುವಂತಿದೆ. ಸರ್ವೋನ್ನತ ನ್ಯಾಯಾಲಯದ ತೀರ್ಪು ಪರಿಷತ್ತಿನ ಮೂಲ ಆಶಯಕ್ಕೇ ವಿರೋಧವಾಗಿರುವಾಗ, ಆ ತೀರ್ಪನ್ನು ಅನೂರ್ಜಿತಗೊಳಿಸುವ ಶಾಸನಾತ್ಮಕ ಕ್ರಮಗಳನ್ನು ರಾಜ್ಯ ಸರ್ಕಾರ ಕೈಗೊಳ್ಳುವಂತೆ ಅದರ ಮೇಲೆ ಒತ್ತಡ ಹೇರುವುದು ಅದರ ಧರ್ಮವಾಗಿತ್ತು. ಆದರೆ ಪರಿಷತ್ತು ಆ ಧರ್ಮವನ್ನೇಕೋ ಪಾಲಿಸುತ್ತಿಲ್ಲ.

೨. ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳು ಕೇವಲ ಸಮ್ಮೇಳನಗಳ ಸಂಘಟನೆಗೆ ಸೀಮಿತವಾಗಿವೆ ಎಂಬ ಅಭಿಪ್ರಾಯಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

ಹೌದು ಸಾಹಿತ್ಯ ಪರಿಷತ್ತು ಮುಖ್ಯವಾಗಿ ಸಾಹಿತ್ಯ ಸಮ್ಮೇಳನಗಳನ್ನು ನಡೆಸುವ ಸಂಸ್ಥೆ ಮಾತ್ರವಾಗಿಬಿಟ್ಟಿದೆ. ಉಳಿದಂತೆ ಅದು ಒಂದಿಷ್ಟು ದತ್ತಿ ಉಪನ್ಯಾಸಗಳನ್ನು ಏರ್ಪಡಿಸುವುದು ಮತ್ತು ಒಂದಿಷ್ಟು ಪ್ರಶಸ್ತಿಗಳನ್ನು ಘೋಷಿಸುವುದರ ಹೊರತಾಗಿ ಮತ್ತೇನಾದರೂ ಗಣನೀಯ ಕೆಲಸ ಮಾಡುತ್ತಿದೆಯೇನೋ ನನಗೆ ಗೊತ್ತಿಲ್ಲ.

ಈಗ ವಿವಿಧ ಸ್ತರಗಳ ಸಾಹಿತ್ಯ ಸಮ್ಮೇಳನಗಳಿಗೆ ಸರ್ಕಾರದ ಭಾರಿ ಅನುದಾನ ಸಿಗುವುದರಿಂದ ಬಹಳ ಕಡೆ ಅವು ಹೆಸರೇ ಕೇಳಿರದ 'ಸಾಹಿತಿ'ಗಳ 'ಅಧ್ಯಕ್ಷತೆ'ಯಲ್ಲಿ ಯಾವುದೇ ಸಾಂಸ್ಕೃತಿಕ ದಿಕ್ಕು ದೆಸೆಗಳಿಲ್ಲದೆ ನಡೆಯತೊಡಗಿ ನಿರರ್ಥಕವಾಗುತ್ತಿವೆ. ಇದರಿಂದಾಗಿ ಸಾಹಿತ್ಯ-ಸಂಸ್ಕೃತಿಗಳ ಪರಿಕಲ್ಪನೆ ಬಹು ಅಗ್ಗವಾಗುತ್ತಿದೆ. ಇದು ಒಂದು ಸಮಾಜಕ್ಕೆ ಯಾವಾಗಲೂ ಅಪಾಯಕಾರಿಯೇ. ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳಿಗೂ ಗುಣಮಟ್ಟದ ಸಾಹಿತಿಗಳು ಬರುತ್ತಿಲ್ಲ ಮತ್ತು ಇದರಿಂದಾಗಿ ಅಲ್ಲಿಯೂ ಚರ್ಚೆಗಳು ಮೌಲಿಕವಾಗಿರುವುದಿಲ್ಲ ಎಂಬ ದೂರೂ ಇದೆ. ನಾನಂತೂ ಇತ್ತೀಚಿನ ವರ್ಷಗಳಲ್ಲಿ ಯಾವ ಸಮ್ಮೇಳನಕ್ಕೂ ಹೋಗಿಲ್ಲ. ಈ ಬಗ್ಗೆ ಸಾಹಿತ್ಯ ಪರಿಷತ್ತು ಗಂಭೀರವಾಗಿ ಯೋಚಿಸಬೇಕಿದೆ.

೩. ಸರ್ಕಾರ ಶಿಕ್ಷಣವನ್ನು ಖಾಸಗೀಕರಣಕ್ಕೊಳಪಡಿಸುತ್ತಿರುವುದು ಎಷ್ಟು ಸರಿ? ಆರ್‌ಟಿಇ ಕಾಯ್ದೆ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಅಮೆರಿಕಾ ಮತ್ತು ಐರೋಪ್ಯ ದೇಶಗಳಂತಹ ಶ್ರೀಮಂತ ದೇಶಗಳಲ್ಲೂ ಶಾಲಾ ಶಿಕ್ಷಣ ಸರ್ಕಾರದ ಅಧೀನದಲ್ಲಿದೆ. ಆದರೆ ಇಲ್ಲಿ ಮಾತ್ರ ಶಾಲಾ ಶಿಕ್ಷಣವೂ ಕ್ರಮೇಣ ಲಾಭಕೋರ ವ್ಯಾಪಾರಿಗಳ ಕೈವಶವಾಗುತ್ತಿದೆ. ಇದಕ್ಕೆ ಕಾರಣ ನಾವು ಆಯ್ಕೆ ಮಾಡುವ ಜನಪ್ರತಿನಿಧಿಗಳು ಸಾಂಸ್ಕೃತಿಕವಾಗಿ ಕುರುಡರಾಗಿರುವುದು ಮತ್ತು ಅವರಿಗೆ ಹಣದ ಹೊರತಾಗಿ ಮತ್ತಾವ ಮೌಲ್ಯವೂ ಮುಖ್ಯವಾಗದಿರುವುದು.

ಶಿಕ್ಷಣ ಹಕ್ಕು ಕಾಯಿದೆ (ಆರ್‌ಟಿಇ) ಶಿಕ್ಷಣ ಕುರಿತ ನಮ್ಮ ವ್ಯವಸ್ಥೆಯ (ಪ್ರಜ್ಞಾಪೂರ್ವಕ) ಕುರುಡುತನದ ಪ್ರತೀಕದಂತಿದೆ. ಬಡವರ ಶಿಕ್ಷಣದ ಹೆಸರಲ್ಲಿ ಖಾಸಗಿ ಇಂಗ್ಲಿಷ್ ಶಾಲೆಗಳು ಸರ್ಕಾರದ ಹಣವನ್ನು ಲೂಟಿ ಮಾಡಲು ಈ ಕಾಯಿದೆ ಅವಕಾಶ ಮಾಡಿಕೊಟ್ಟಿದೆ. ಇದನ್ನು ರದ್ದುಗೊಳಿಸುವ ಚಳುವಳಿ ಸಮಾನ ಮತ್ತು ಮಾತೃಭಾಷಾ ಶಿಕ್ಷಣ ಚಳುವಳಿಯ ಒಂದು ಭಾಗವಾಗಿ ಶುರುವಾಗಬೇಕಿದೆ.

೪. ತಾವು ರಾಜ್ಯೋತ್ಸವ ಪ್ರಶಸ್ತಿಯನ್ನು ತಿರಸ್ಕರಿಸಲು ಕಾರಣವೇನು? ಪ್ರಶಸ್ತಿಗಳು ಭಾಷೆಯ ಬೆಳವಣಿಗೆಗೆ ಪೂರಕವೇ?

ನಾನು ರಾಜ್ಯೋತ್ಸವ ಪ್ರಶಸ್ತಿಯನ್ನು ತಿರಸ್ಕರಿಸಲಿಲ್ಲ. ತಿರಸ್ಕರಿಸಿದ್ದರೆ ಸಾಹಿತ್ಯ ಕ್ಷೇತ್ರದಲ್ಲಿನ ಯಾವ ಸಾಧನೆಗಾಗಿ ನನಗೆ ಈ ಪ್ರಶಸ್ತಿ ನೀಡಿದ್ದರೋ ಅದನ್ನು ನಾನೇ

ನಿರಾಕರಿಸಿದಂತಾಗುತ್ತಿತ್ತು. ಬದಲಿಗೆ ನಾನು, ಸರ್ಕಾರ ಕೊಟ್ಟ ಪ್ರಶಸ್ತಿಯನ್ನು ಸ್ವೀಕರಿಸಲು ನಿರಾಕರಿಸಿದೆನಷ್ಟೆ. ಇದಕ್ಕೆ ಕಾರಣ ಯಾವ ರಾಜ್ಯೋತ್ಸವ ಆಚರಣೆಯ ಸಂಭ್ರಮದ ಭಾಗವಾಗಿ ಈ ಪ್ರಶಸ್ತಿಯನ್ನು ಪ್ರಕಟಿಸಲಾಗಿತ್ತೋ ಆ ರಾಜ್ಯೋತ್ಸವ ಸಂಭ್ರಮ ಕನ್ನಡ ಶಾಲಾ ಶಿಕ್ಷಣಕ್ಕೆ ಒದಗಿರುವ ಕುತ್ತಿನಿಂದಾಗಿ ಅರ್ಥಹೀನವಾಗಿದೆ ಎಂಬುದಾಗಿತ್ತು. ಅದನ್ನು ನಾನು ಸರ್ಕಾರಕ್ಕೂ ತಿಳಿಸಿರುವೆ.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವವರನ್ನು ಗುರುತಿಸುವುದು ಸರ್ಕಾರದ ಧರ್ಮ. ಅದರಿಂದ ಪ್ರತಿಭೆಗಳಿಗೆ ಪ್ರೋತ್ಸಾಹ ಸಿಕ್ಕಿದಂತಾಗಿ ರಾಜ್ಯ-ದೇಶದ ಮಾನವ ಸಂಪನ್ಮೂಲ ಅಭಿವೃದ್ಧಿ ಹೊಂದುತ್ತದೆ. ಅದರ ಭಾಗವಾಗಿ ಭಾಷೆ-ಸಂಸ್ಕೃತಿಗಳೂ ಬೆಳೆಯುವವು. ಆದರೆ ಇಂದು ಪ್ರಶಸ್ತಿ ನೀಡಿಕೆ ಔಪಚಾರಿಕವಾಗಿದ್ದು ಆಯ್ಕೆ ರಾಜಕೀಯ ವಶೀಲಿಬಾಜಿಯ ಆರೋಪಕ್ಕೆ ಸಿಕ್ಕಿದೆ. ಹೀಗಾಗಿ ಪ್ರಶಸ್ತಿ ಯಾರೊಬ್ಬರ ಸಾಧನೆಯ ನಿಜ ಮಾನದಂಡವಾಗಿ ಉಳಿದಿಲ್ಲ ಎಂದು ವಿಷಾದದಿಂದ ಹೇಳಬೇಕಿದೆ.

೫. ಸಾಹಿತ್ಯದ ಬಗ್ಗೆ ನಿಮ್ಮ ಆಸಕ್ತಿ ಬೆಳೆದದ್ದು ಹೇಗೆ?

ನಮ್ಮ ತಂದೆ ಶಾಲಾ ಮಾಸ್ತರಾಗಿದ್ದುದರ ಜೊತೆಗೆ ಬಯಲಾಟದ ಮೇಷ್ಟ್ರು ಮತ್ತು ಕಲಾವಿದರೂ ಆಗಿದ್ದುದರಿಂದ ಮಾತಿನ ಬಳಕೆಯ ಕಲೆ ಮತ್ತು ಲಯಗಾರಿಕೆ ಬಾಲ್ಯದಿಂದಲೂ ನನ್ನನ್ನು ಪ್ರಭಾವಿಸಿದ್ದವು. ಇದೇ ಬೀಜವಾಗಿ ಮುಂದೆ ಕಾಲೇಜು ಶಿಕ್ಷಣದ ಸಮಯದಲ್ಲಿ ನಾನು ಒಲ್ಲದ ವಿಜ್ಞಾನದ ವಿದ್ಯಾರ್ಥಿಯಾದುದರಿಂದ ಅದರ ಒತ್ತಡದಿಂದ ಪಾರಾಗಲು ಸಾಹಿತ್ಯ ಪತ್ರಿಕೆಗಳು ಮತ್ತು ಪುಸ್ತಕಗಳ ಮೊರೆ ಹೋದೆ. ಜೊತೆ ನನ್ನ ಅಣ್ಣನಿಗೂ ಸಾಹಿತ್ಯದ ಅಭಿರುಚಿಯಿದ್ದುದು ನನ್ನ ಮೇಲೆ ಪರಿಣಾಮ ಬೀರಿರಬೇಕು.

ನಾನು ಆಕಾಶವಾಣಿಯಲ್ಲಿ ಕೆಲಸಕ್ಕೆಂದು ದೆಹಲಿಗೆ ಹೋದಾಗ, ಅಲ್ಲಿಗೆ ಒಮ್ಮೆ ಭೇಟಿ ನೀಡಿದ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರೂ ಮತ್ತು ಹಿರಿಯ ಕವಿಗಳೂ ಆದ ಜಿ. ಎಸ್. ಶಿವರುದ್ರಪ್ಪನವರ ಪರಿಚಯವಾಗಿ, ಅದು ಒಂದು ಆತ್ಮೀಯ ಸಂಬಂಧವಾಗಿ ಬೆಳೆದು ನನ್ನನ್ನು ಸಾಹಿತ್ಯದ ಕಡೆ ತಿರುಗಿಸಿತು. ಅವರೇ ನನ್ನಲ್ಲಿ ಸಾಹಿತ್ಯ ವಿಮರ್ಶೆಯ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿದ್ದು. ಆನಂತರ ನಾನು ಕರ್ನಾಟದ ಆಕಾಶವಾಣಿ ಕೇಂದ್ರಗಳಲ್ಲಿ ಕೆಲಸ ಮಾಡಲು ಬಂದ ಮೇಲೆ ಹೆಚ್ಚೂಕಡಿಮೆ ಕನ್ನಡದ ಎಲ್ಲ ಹಿರಿ ಕಿರಿಯ ಸಾಹಿತಿಗಳ ಪರಿಚಯವಾಯಿತು. ವಿಶೇಷವಾಗಿ ಲಂಕೇಶ್, ತೇಜಸ್ವಿ, ಅನಂತಮೂರ್ತಿ, ದೇವನೂರ ಮಹಾದೇವ ಮುಂತಾದವರು ಆತ್ಮೀಯರೇ ಆದರು. ಅವರ ಸ್ನೇಹ ನನ್ನ ಸಾಹಿತ್ಯ ಸಂವೇದನೆ ಮತ್ತು ಸೂಕ್ಷ್ಮಗಳನ್ನು ಅಪಾರವಾಗಿ ಬೆಳೆಸಿತು.

೬. ನಿಮ್ಮ ಮೆಚ್ಚಿನ ಲೇಖಕರಾರು?

ಒಬ್ಬರಿಬ್ಬರಿಲ್ಲ! ಮುಖ್ಯವಾಗಿ ಕುವೆಂಪು, ಮಾಸ್ತಿ, ಕಾರಂತ, ಡಿವಿಜಿ ಮತ್ತು ಬೇಂದ್ರೆಯವರು. ನಂತರದ ತಲೆಮಾರಿನಲ್ಲಿ ತೇಜಸ್ವಿ, ಲಂಕೇಶ್, ಅನಂತಮೂರ್ತಿ,

ದೇವನೂರ ಮಹಾದೇವ, ಸಿದ್ದಲಿಂಗಯ್ಯ, ವೈದೇಹಿ ಮತ್ತು ಎಚ್.ಎಸ್. ಶಿವಪ್ರಕಾಶ್, ಜಯಂತ ಕಾಯ್ಕಿಣಿ ಎನ್ನಬಹುದು.

೭. ಸಾಹಿತ್ಯ ಓದುಗರ ಸಂಖ್ಯೆ ದಿನೇ ದಿನೇ ಕ್ಷೀಣಿಸುತ್ತಿದೆ. ಇದಕ್ಕೆ ನಿಮ್ಮ ಪ್ರತಿಕ್ರಿಯೆ?

ಇಲ್ಲ, ಸಾಹಿತ್ಯದ ಓದುಗರ ಸಂಖ್ಯೆ ಕ್ಷೀಣವಾಗುತ್ತಿಲ್ಲ. ಜನಪ್ರಿಯ ಕಥೆ-ಕಾದಂಬರಿಗಳ ಓದುಗರ ಸಂಖ್ಯೆ ಕಡಿಮೆಯಾಗಿರಬಹುದು. ಆದರೆ ವಿಚಾರ-ವಿಮರ್ಶೆ ಮತ್ತು ವೈಜ್ಞಾನಿಕ-ತಾಂತ್ರಿಕ-ವೈದ್ಯಕೀಯ ಮಾಹಿತಿ ಪುಸ್ತಕಗಳ ಓದುಗರು ಹೆಚ್ಚಿದ್ದಾರೆ. ಇಂದು ಸಾಹಿತ್ಯದ ಸ್ವರೂಪವೇ ಬದಲಾಗುತ್ತಿದ್ದು, ಹೊಸ ಹೊಸ ಸಾಹಿತ್ಯ ಪ್ರಕಾರಗಳು ಮೂಡುತ್ತಿದ್ದು, ಹೊಸ ಹೊಸ ವೃತ್ತಿ ಕ್ಷೇತ್ರಗಳ ಲೇಖಕರು ಮತ್ತು ಓದುಗರೂ ಸೃಷ್ಟಿಯಾಗುತ್ತಿದ್ದಾರೆ. ಜೊತೆಗೆ ಸಾಮಾಜಿಕ ಮಾಧ್ಯಮಗಳೂ ವೈವಿಧ್ಯಮಯ ಸಾಹಿತ್ಯ ವೇದಿಕೆಗಳಾಗಿ ಬೆಳೆಯುತ್ತಿವೆ. ಇದು ಕನ್ನಡ ಸಾಹಿತ್ಯಕ್ಕೆ ಸಂಧಿಕಾಲ. ಹಾಗಾಗಿ ಈ 'ಗೊಂದಲ'ದಲ್ಲಿ ಒಟ್ಟಾರೆ ಕನ್ನಡ ಸಾಹಿತ್ಯದ ಮುಖ್ಯ ಕಾಳಜಿ, ದೃಷ್ಟಿ ಕೇಂದ್ರ ಯಾವುದು ಎಂಬುದು ಸ್ಪಷ್ಟವಾಗಿಲ್ಲ. ಇದರಿಂದಾಗಿ, ಸಾಹಿತ್ಯ ಚರ್ಚೆ ವಿಕೇಂದ್ರೀಕೃತವಾಗಿ ನಡೆದಿದ್ದು, ಓದುಗ ವರ್ಗ ಕ್ಷೀಣಿಸುತ್ತಿರುವ ಅನುಮಾನ ಹುಟ್ಟಿಸಿರಬಹುದಷ್ಟೆ.

೮. ನಿಮ್ಮ ಮುಂದಿನ ಸಾಹಿತ್ಯ ಕೃತಿಗಳ ಬಗ್ಗೆ ಹೇಳುವಿರಾ?

ನಾನು ಎಂದೂ ಸಂಕಲ್ಪ ಮಾಡಿ ಏನೂ ಬರೆದವನಲ್ಲ. ಸಾಹಿತ್ಯ ವಿಮರ್ಶೆಯನ್ನೂ ಅವರಿವರು ಕೇಳಿದರೆಂದು/ ಆಹ್ವಾನಿಸಿದರೆಂದು ಬರೆದೆನಷ್ಟೆ. ಆದರೆ ಅದರ ಸಂಖ್ಯೆಯನ್ನು ಈಗ ನೋಡಿದರೆ ನೂರಕ್ಕೆ ಹತ್ತಿರವಾಗುತ್ತಿದೆ! ನನಗೇ ಆಶ್ಚರ್ಯವಾಗಿದೆ. ಇನ್ನು ನನ್ನ ಇತರ ಕಾಳಜಿಗಳಾದ ಸಮಾಜವಾದಿ ಚಿಂತನೆ ಮತ್ತು ರಾಜಕೀಯ ವಿಶ್ಲೇಷಣೆಗಳನ್ನು ದಿನನಿತ್ಯದ ಬೆಳವಣಿಗೆಗಳಿಗೆ ಪ್ರತಿಸ್ಪಂದಿಸುತ್ತಾ ಬರೆಯುತ್ತೇನೆ ಅಷ್ಟೇ. ಅವು ಕೂಡಾ ನನಗೇ ಗೊತ್ತಿಲ್ಲದಂತೆ ಹತ್ತಕ್ಕಿಂತ ಹೆಚ್ಚು ಸಂಪುಟಗಳಾಗಿ ಪ್ರಕಟವಾಗಿವೆ!

ಸದ್ಯಕ್ಕೆ 'ಕುವೆಂಪು ಭಾಷಾ ಭಾರತಿ'ಗಾಗಿ ಗಾಂಧೀಜಿಯ 'ಹಿಂದ್ ಸ್ವರಾಜ್' ಕೃತಿಯನ್ನು ಸಂಪಾದಿಸುವ ಕೆಲಸದಲ್ಲಿ ತೊಡಗಿದ್ದೇನೆ. ಜೊತೆಗೇ ನನಗೇ ವೈಯಕ್ತಿಕ ಅಗತ್ಯವೆನಿಸಿ ಗಾಂಧಿಯವರ ವಿವರವಾದ ಜೀವನ ಚರಿತ್ರೆಯನ್ನು 'ಗಾಂಧಿ ಕಥೆ' ಎಂಬ ಶೀರ್ಷಿಕೆಯಲ್ಲಿ ಬರೆಯುತ್ತಿದ್ದೇನೆ.

೯. ಆಧುನಿಕ ತಂತ್ರಜ್ಞಾನ ಬಳಕೆಯ ಹಿನ್ನೆಲೆಯಲ್ಲಿ ಕನ್ನಡ ಭಾಷೆಯ ಬಳಕೆಯ ಸಾಧ್ಯತೆಗಳ ಬಗ್ಗೆ ನಿಮ್ಮ ಅಭಿಪ್ರಾಯ?

ರಾಷ್ಟ್ರದ ಮಾಹಿತಿ ತಂತ್ರಜ್ಞಾನದ ಕೇಂದ್ರ ಬೆಂಗಳೂರೇ ಆಗಿದ್ದರೂ, ಗಣಕದಲ್ಲಿ ಕನ್ನಡವನ್ನು ಸುಲಭ-ಸರಾಗವಾಗಿ ಬಳಸುವ ಸೌಲಭ್ಯ ಇನ್ನೂ ಉಂಟಾಗಿಲ್ಲವೆಂದರೆ ಏನು ಹೇಳುವುದು? ಸರ್ಕಾರ ಕೂಡ ಆಧುನಿಕ ತಂತ್ರಜ್ಞಾನವನ್ನು ಕನ್ನಡದ ಸಂವಹನದ ಸಾಧ್ಯತೆಗಳನ್ನು ಹೆಚ್ಚಿಸುವುದಕ್ಕಾಗಿ ಬಳಸಿಕೊಳ್ಳುವ ಪ್ರಯತ್ನಗಳನ್ನು ಮಾಡಬೇಕಿದೆ.

ಇದು ಮಾಹಿತಿ ತಂತ್ರಜ್ಞಾನ ಇಲಾಖೆಯಿಂದ ಆಗುವ ಕೆಲಸವಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಾಡಬೇಕಾದ ಕೆಲಸ. ಅದಕ್ಕೆ ಒಂದು ಕನ್ನಡ ಪ್ರೀತಿಯ ಉತ್ಸಾಹಿ ತಂತ್ರಜ್ಞರ ತಂಡ ಬೇಕಿದೆ.

೧೧. ತಮ್ಮನ್ನು ಲೋಹಿಯಾವಾದಿ-ಗಾಂಧಿ ಸಮಾಜವಾದಿ ಎಂದು ಗುರುತಿಸಲಾಗುತ್ತಿದೆ. ಇಂದಿನ ದಿನಗಳಲ್ಲಿ ಗಾಂಧಿ-ಲೋಹಿಯಾ ವಿಚಾರಗಳ ಪ್ರಸ್ತುತತೆ ಎಷ್ಟು?

ಜಗತ್ತೇ ಗುರುತಿಸಿದಂತೆ ಗಾಂಧಿ ಒಂದು ದ್ರಷ್ಟಾರ ವ್ಯಕ್ತಿತ್ವ. ಆಧುನಿಕತೆಯ ಮಿತಿಗಳನ್ನು ಅದರ ಆರಂಭ ಕಾಲದಲ್ಲೇ ಮುನ್ನೋಡಿ ಜಗತ್ತನ್ನು ಎಚ್ಚರಿಸಿದ ಪ್ರವಾದಿ ಆತ. ಅವರ 'ಈ ಭೂಮಿ ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲುದೇ ಹೊರತು ಎಲ್ಲರ ಆಸೆಗಳನ್ನಲ್ಲ' ಎಂಬ ಎಚ್ಚರಿಕೆಯ ಮಾತು ಇಂದಿನ ಕೊಳ್ಳುಬಾಕ ಸಂಸ್ಕೃತಿ ಸೃಷ್ಟಿಸಿರುವ ರೋಗ ರುಜಿನಗಳ, ಹಿಂಸಾಚಾರಗಳ, ನೆಲ-ಜಲ-ಗಾಳಿಗಳಿಗೆ ಬಂದೊದಗಿರುವ ಕುತ್ತುಗಳ, ಕೌಟುಂಬಿಕ ವಿಘಟನೆಗಳ ಮತ್ತು ಮಾನಸಿಕ ಅಶಾಂತಿಗಳ ಸಮಾಜದ ಬಗ್ಗೆ ಬರೆದ ವ್ಯಾಖ್ಯಾನದಂತಿದೆ. ಹಾಗಾಗಿ ಇಂದು ಭಾರತಕ್ಕಷ್ಟೇ ಅಲ್ಲ, ಜಗತ್ತಿಗೇ ಗಾಂಧಿ ಹೇಳಿದ ಉನ್ನತ ಚಿಂತನ-ಸರಳ ಜೀವನದ ಮಾರ್ಗವೊಂದೇ ಅಂತಿಮ ಪರಿಹಾರವಾಗಿದೆ.

ಗಾಂಧಿ ಶಿಷ್ಯರಾಗಿದ್ದ ಲೋಹಿಯಾ ಗಾಂಧಿಯವರ ವಿಚಾರಗಳನ್ನು ವ್ಯಾವಹಾರಿಕ ನೆಲೆಯಲ್ಲಿ ಸಂಘಟಿಸಿ, ಮನುಷ್ಯನಲ್ಲಿ ಆಂತರಿಕ ಶಾಂತಿ ಮತ್ತು ಬಾಹ್ಯ ಬಂಧುತ್ವ ರೂಢಿಗೊಳ್ಳುವಂತಹ ಮಿತಿಗಳುಳ್ಳ ಒಂದು ಸರಳ ಸಭ್ಯ ಜೀವನ ಶೈಲಿಯ ಜಾರಿಗೆ ಒಂದು ಕಾರ್ಯಕ್ರಮ ನಕ್ಷೆ ಹಾಕಿಕೊಟ್ಟರು. ಅದೇ ಲೋಹಿಯಾ ಸಮಾಜವಾದ. ಇದನ್ನು ಇಂದು ಅಪ್ರಸ್ತುತ ಎಂದು ಹೇಳಲು ಸಾಧ್ಯವೇ?

೧೧. ತ್ಯಾಮಗೊಂಡ್ಲುವಿನ ಈ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ ಆಹ್ವಾನ ನೀಡಿದಾಗ ನಿಮಗೇನನ್ನಿಸಿತು?

ಇದು ನನಗೆ ಒದಗಿ ಬಂದ ಅನಿರೀಕ್ಷಿತ ಗೌರವ. ಸಾಹಿತ್ಯ ಸಮ್ಮೇಳನಗಳ ಅತಿಯಾದ ಔಪಚಾರಿಕತೆಗಳನ್ನು ಇಷ್ಟಪಡದ ಮತ್ತು ಮಧುಮೇಹ ಸಂಬಂಧವಾದ ನಿರಂತರ ಅಸ್ವಸ್ಥತೆಯ ನಡುವೆಯೇ ಜೀವನ ಸಾಗಿಸುತ್ತಿರುವ ನಾನು ಇಲ್ಲಿನ ಸ್ನೇಹಿತರು ದೂರದ ಶಿವಮೊಗ್ಗದವರೆಗೆ ಬಂದು ಪ್ರೀತಿಯಿಂದ ಆಹ್ವಾನಿಸಿದ್ದರಿಂದಷ್ಟೇ ಈ ಗೌರವವನ್ನು ಒಪ್ಪಿಕೊಂಡಿದ್ದೇನೆ. ಇದರಲ್ಲಿ ನಾನು ನನ್ನ ಬಾಲ್ಯ ಕಳೆದ ತ್ಯಾಮಗೊಂಡ್ಲುವಿನ ಬಗೆಗಿನ ಮಮತೆ ಕೆಲಸ ಮಾಡಿಲ್ಲ ಎಂದು ಹೇಳಲಾರೆ. ಆ ಊರಿನ ಒಂದು ಸಾಮಾನ್ಯ ಕುಟುಂಬದ ಹುಡುಗ ಸಾಹಿತ್ಯ ಸಮ್ಮೇಳನದ ನೆಪದಲ್ಲಿ ತಾಲ್ಲೂಕಿನ ಗಣ್ಯರ ಮುಂದೆ ಗಣ್ಯ ಅತಿಥಿಯಾಗಿ ನಿಲ್ಲುವುದು ನಿಜವಾಗಿಯೂ ರೋಮಾಂಚನದ ಅನುಭವವೇ. ಇದಕ್ಕಾಗಿ ಸಾಹಿತ್ಯ ಪರಿಷತ್ತಿನ ಸ್ಥಳೀಯ ಪದಾಧಿಕಾರಿಗಳು ಮತ್ತು ಕಾರ್ಯಕರ್ತರಿಗೆ ನಾನು ನಿಜವಾಗಿ ಋಣಿಯಾಗಿದ್ದೇನೆ.

೧೨. ಸಾಹಿತ್ಯ ಬೆಳೆಸುವುದರಲ್ಲಿ ನಿಮ್ಮ ಪ್ರಕಾರ ಯುವಜನರ ಪಾತ್ರವೇನು?

ಯುವ ಸಮುದಾಯವೇ ಒಂದು ಸಮಾಜದ ಕ್ರಿಯಾಶೀಲತೆಯ ಮೂಲ. ಅವರು ಆಧುನಿಕ ಮನರಂಜನೆಯ ಮಾಧ್ಯಮಗಳ ಟೊಳ್ಳುತನವನ್ನು ಆದಷ್ಟು ಬೇಗ ಮನವರಿಕೆ ಮಾಡಿಕೊಂಡು ತಂತಮ್ಮ ಊರುಗಳಲ್ಲಿ ಹೆಚ್ಚಿನ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೆ ಕನ್ನಡ ತಾನೇ ತಾನಾಗಿ ಪೋಷಿಸಲ್ಪಡುತ್ತದೆ. ಉದಾಹರಣೆಗೆ ತಮ್ಮೂರುಗಳಲ್ಲಿ ಅವರು ನಿಯಮಿತವಾಗಿ ಒಂದು ಪುಸ್ತಕ ಓದುವ ವೇದಿಕೆ ಮಾಡಿಕೊಂಡರೂ ಸಾಕು, ಅದು ಕನ್ನಡಕ್ಕೆ ಕೊಡುಗೆ ಕೊಟ್ಟಂತೆಯೇ ಸರಿ.

(ಸಂದರ್ಶನ: **ಮಾರುತಿ ತೇಜಸ್ವಿ, ತ್ಯಾಮಗೊಂಡ್ಲು**)

ಸಾಹಿತ್ಯ ಸಮ್ಮೇಳನ ಹೇಗೆ ನಡೆಯಬೇಕು?

(ಇತ್ತೀಚೆಗೆ ನಾನು ಅಧ್ಯಕ್ಷನಾಗಿದ್ದ ನೆಲಮಂಗಲ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಮುಖ್ಯ ಸಂಘಟಕರಿಗೆ, ಸಮ್ಮೇಳನದ ನಂತರ ಅವರ ಕೋರಿಕೆಯ ಮೇಲೇ ಬರೆದ ಪತ್ರದ ಆಯ್ದ ಭಾಗಗಳು)

ಪ್ರಿಯರೇ,

ಮೊದಲಿಗೆ, ಸಮ್ಮೇಳನವನ್ನು ವ್ಯವಸ್ಥಿತವಾಗಿ ಮತ್ತು ಅಚ್ಚುಕಟ್ಟಾಗಿ ನಿರ್ವಹಿಸಿದ ನಿಮಗೆ, ನಿಮ್ಮ ತಂಡಕ್ಕೆ ಅಭಿನಂದನೆಗಳು. ಹಾಗೇ ನನ್ನ ಅನಾರೋಗ್ಯದ ಹಿನ್ನೆಲೆಯಲ್ಲಿ ಸ್ವಲ್ಪ ಆತಂಕಿತನಾಗಿದ್ದ ನನಗೆ ಸ್ವಲ್ಪವೂ ಕಷ್ಟವಾಗದಂತೆ ಬಹು ಪ್ರೀತಿಯಿಂದ ನೋಡಿಕೊಂಡದ್ದಕ್ಕಾಗಿ ಧನ್ಯವಾದಗಳು. ನನ್ನೂರು ತ್ಯಾಮಗೊಂಡ್ಲುವಿನಲ್ಲಿನ ಸಾಹಿತ್ಯ ಸಮ್ಮೇಳನಾಧ್ಯಕ್ಷನಾಗಿ ಭಾಗವಹಿಸಿದ್ದೇ ನನಗೊಂದು ಬಹು ಖುಷಿಯ, ರೋಮಾಂಚನದ ಅನುಭವ. ವಿಶೇಷವಾಗಿ ಊರ ತುಂಬ ನಡೆದ ಮೆರವಣಿಗೆ ನನಗೆ ಹಳೆಯ ನೆನಪುಗಳನ್ನು ಉಕ್ಕಿಸಿ ನಾನು ಸ್ವಲ್ಪ ಭಾವೋನ್ಮಾದಕ್ಕೆ ಒಳಗಾದೆನೆಂದೇ ಹೇಳಬೇಕು. ವಿಶೇಷವಾಗಿ ಕೆಲವೆಡೆ ಕೆಲವು ಹಿರಿಯರು ನಾನು ನಿಂತಿದ್ದ ಮೆರವಣಿಗೆಯ ಜೀಪ್ ಬಳಿ ಬಂದು, ನನ್ನ ಕೈಮುಟ್ಟಿ, 'ನೀನು ಆ ಪೇಟದ ಮೇಷ್ಟ್ರು ಸೂರಾಚಾರ್‌ರ ಮಗನೇನಪ್ಪಾ?' ಮಗ ಅಲ್ವೇನಪ್ಪಾ? ಅಂತ ಕೇಳಿದಾಗ ನನಗೆ ಕಣ್ಣು ಮಂಜಾಗಿ ಹೋದವು.

ಮಿಕ್ಕಂತೆ ಸಮ್ಮೇಳನ ಒಂದು ಸಾಹಿತ್ಯ ಸಮ್ಮೇಳನವಾಗಿ ಇತರೆಡೆಯ ಸಾಹಿತ್ಯ ಸಮ್ಮೇಳನಗಳಂತೆಯೇ–ಆದರೆ ವಿಶೇಷ ವಿಜೃಂಭಣೆಯಿಂದ–ನಡೆಯಿತೆಂದೇ ಹೇಳಬೇಕು. ಅಲ್ಲಿ ಸಾಹಿತ್ಯ–ಸಂಸ್ಕೃತಿಗಳು ಅನಿವಾರ್ಯವೆಂಬಂತೆ ಹಿನ್ನೆಲೆಗೆ ಸರಿಯುತ್ತವೆ. ತ್ಯಾಮಗೊಂಡ್ಲುವಿನಲ್ಲೂ ಹಾಗೇ ಆಯಿತು. ಇದಕ್ಕೆ ಮುಖ್ಯ ಕಾರಣಗಳು : ಒಂದು, ನಾನು ಸಮ್ಮೇಳನದ ಸಮಾರೋಪ ನುಡಿಗಳಲ್ಲಿ ಹೇಳಿದಂತೆ, ಸಮ್ಮೇಳನವನ್ನು ಊರ ಹಬ್ಬವಾಗಿ ಗ್ರಹಿಸಿ ಅದನ್ನು ವಿಜೃಂಭಣೆಯಿಂದ ನಡೆಸುವ ಬಯಕೆಯಿಂದಾಗಿ ಸೃಷ್ಟಿಯಾಗುವ ದಾಕ್ಷಿಣ್ಯಗಳು. ಇನ್ನೊಂದು, ಇಡೀ ಒಂದು ದಿನದ

ನಡಾವಳಿ ನಡೆಸುವಷ್ಟು ಸ್ಥಳೀಯ ಸಾಹಿತ್ಯ ಬಂಡವಾಳದ ಕೊರತೆ. ಈ ಬಂಡವಾಳ ಎನ್ನುವುದರಲ್ಲಿ ಊರಿನ ಜನರಲ್ಲಿ ಸಾಹಿತ್ಯ ಪ್ರೀತಿ–ಆಸಕ್ತಿಗಳ ಗಾತ್ರವೂ ಸೇರಿರುತ್ತದೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಇಂತಹ ಕಾರಣಗಳಿಂದಾಗಿಯೇ, ಅಂದು ಸಾರ್ವಜನಿಕ ಔಪಚಾರಿಕತೆಗಳು ಮತ್ತು ಒತ್ತಡಗಳೇ ಹೆಚ್ಚಾಗಿ, ಯಾವುದು ಇಡೀ ಸಮ್ಮೇಳನದ ಕೇಂದ್ರವಾಗಬೇಕಿತ್ತೋ–ಅಂದರೆ ಸಮ್ಮೇಳನದ ಮುಖ್ಯ ಚರ್ಚೆಯ ವಸ್ತುವಾಗಬೇಕಿತ್ತೋ–ಆ ಸಮ್ಮೇಳನಾಧ್ಯಕ್ಷರ ಭಾಷಣ ಈ ಔಪಚಾರಿಕತೆ ಮತ್ತು ಒತ್ತಡಗಳ ಮಧ್ಯೆ ಸಿಕ್ಕಿಹಾಕಿಕೊಂಡು ತನ್ನ ಪ್ರಾಧಾನ್ಯತೆಯನ್ನು ಕಳೆದುಕೊಂಡಿತು. ಅಂತಹ ಪ್ರಾಧಾನ್ಯತೆ ಅದಕ್ಕೆ ಬೇಕಿಲ್ಲದಿದ್ದಲ್ಲಿ ಅಧ್ಯಕ್ಷರ ಭಾಷಣ, ಮೆರವಣಿಗೆಯ ಔಪಚಾರಿಕೆಗಳಾದರೂ ಏಕೆ ಬೇಕು? ಸಮ್ಮೇಳನಾಧ್ಯಕ್ಷರಾದರೂ ಏಕೆ ಇತರೆಲ್ಲ ಕೆಲಸಗಳನ್ನು ಬಿಟ್ಟು ಎರಡು–ಮೂರು ದಿನ ಪಟ್ಟಾಗಿ ಕೂತು ತಮ್ಮ ಜೀವ ಹಿಂಡಿಕೊಂಡು ಭಾಷಣವನ್ನು ಬರೆಯಬೇಕು? ಇದು ಅಖಿಲಭಾರತ ಸಾಹಿತ್ಯ ಸಮ್ಮೇಳನದ ಹೊರತಾಗಿ (ಅಲ್ಲಿ ಉದ್ಘಾಟನೆಯ ನಂತರ ಸಮ್ಮೇಳನಾಧ್ಯಕ್ಷರ ಭಾಷಣವಿರುತ್ತದೆ) ಇತರೆಲ್ಲ ಸ್ಥಳೀಯ ಸಾಹಿತ್ಯ ಸಮ್ಮೇಳನಗಳಲ್ಲಿ ಕಂಡು ಬರುವ ದೃಶ್ಯ. ಹಾಗಾಗಿ ತ್ಯಾಮಗೊಂಡ್ಲುವಿನಲ್ಲಿ ನನಗೂ ಅನ್ನಿಸಿದಂತೆ ಸಮ್ಮೇಳನಾಧ್ಯಕ್ಷರು ಸಮ್ಮೇಳನದಲ್ಲಿ ಇತರ (ಸಾಹಿತ್ಯೇತರ) ನಡಾವಳಿಗಳನ್ನು ಸಾಂಗೋಪಾಂಗವಾಗಿ ನಡೆಸಲು ಅನುವಾಗುವ ಉತ್ಸವಮೂರ್ತಿಯಷ್ಟೆ. ಹಾಗಾಗಿಯೇ ನಾನು ಇತ್ತೀಚಿನ ವರ್ಷಗಳಲ್ಲಿ ಯಾವ ಸಾಹಿತ್ಯ ಸಮ್ಮೇಳನಗಳ ಕಡೆ ತಿರುಗಿಯೂ ನೋಡುತ್ತಿರಲಿಲ್ಲ. ನನ್ನೂರಿನ ಮೇಲಿನ ಸಹಜ ಪ್ರೀತಿ ಮತ್ತು ನೀವೆಲ್ಲ ತೋರಿದ ವಿಶ್ವಾಸದ ಕಾರಣದಿಂದಾಗಿಯಷ್ಟೆ ನಾನು ಸಮ್ಮೇಳನಾಧ್ಯಕ್ಷನಾಗಲು ಒಪ್ಪಿದ್ದು.

ಸಾಹಿತ್ಯ ಸಮ್ಮೇಳನವೊಂದು ಹೀಗೆ ನಡೆಯುವುದು ಅನಿವಾರ್ಯ ಎಂದು ನಾನು ಭಾವಿಸಿಲ್ಲ. ಮೊದಲಿಗೆ ಅದು ಊರ ಹಬ್ಬವಾಗಿ ನಡೆಯುವ ಅಗತ್ಯವಿಲ್ಲ. ಊರ ಹಬ್ಬಗಳ ವಿಜೃಂಭಣೆಗೆ ಊರ ದೇವತೆಯ ಹಬ್ಬ, ತೇರುತ್ಸವ, ದಸರಾ ಮತ್ತು ರಾಜ್ಯೋತ್ಸವಗಳಿವೆ. ಆದುದರಿಂದ ಸಾಹಿತ್ಯ ಸಮ್ಮೇಳನವನ್ನಾದರೂ ನಾಡು–ನುಡಿಗಳ ಇತಿಹಾಸ, ವರ್ತಮಾನ ಮತ್ತು ಭವಿಷ್ಯಗಳ ಅವಲೋಕನದ ಗಂಭೀರ ಕೆಲಸಗಳಿಗಾಗಿ ಮೀಸಲಿಡಬೇಕು. ಇದು ಪೂರ್ಣವಾಗಿ ಸ್ಥಳೀಯರ ಭಾಗವಹಿಸುವಿಕೆಯಲ್ಲಿಯೇ ನಡೆಯುವ ಅಗತ್ಯವಿಲ್ಲ. ಸಮ್ಮೇಳನಕ್ಕಾಗಿ ಸಾಹಿತ್ಯ ಬಲ್ಲವರೊಬ್ಬರಿಂದ ಸಮಕಾಲೀನವಾದ ಒಂದು ನಿರ್ದಿಷ್ಟ ವಿಷಯವು ದೃಷ್ಟಿಕೇಂದ್ರವಾಗಿರುವಂತೆ ಒಂದು ಕಾರ್ಯಕ್ರಮ ಸೂಚಿಯನ್ನು ಸಿದ್ಧಪಡಿಸಿ ಅದರಂತೆ ಗೋಷ್ಠಿಗಳನ್ನು ಏರ್ಪಡಿಸಬೇಕು. ಅವು ಸ್ಥಳೀಯ ಸಾಹಿತ್ಯಾಸಕ್ತರಿಗೆ ಸಾಹಿತ್ಯದ ಶಕ್ತಿ ಮತ್ತು ಸೌಂದರ್ಯಗಳ ಶಿಕ್ಷಣ ನೀಡುವಂತಿರಬೇಕು. ನಮ್ಮೆಲ್ಲರ ಒಟ್ಟು ಬದುಕು ಸಂಪೂರ್ಣ ವಾಣಿಜ್ಯೀಕರಣಗೊಂಡು ಮನುಷ್ಯ ಸಂಬಂಧಗಳು ಕೇವಲ ವ್ಯಾವಹಾರಿಕವಾಗುತ್ತಿರುವ ಈ ಸಂದರ್ಭದಲ್ಲಿ ಸಾಹಿತ್ಯದ ಇಂತಹ ಶಿಕ್ಷಣ ಬದುಕಿಗೆ ಜೀವದಾಯಿಯಾಗಬಹುದು. ಈ ವಿಷಯ ಒಬ್ಬ ಲೇಖಕ ಅಥವಾ ಒಂದು ಸಾಹಿತ್ಯ ಚಳುವಳಿ ಅಥವಾ ಚಿಂತನೆಯ ಸುತ್ತ ಕೇಂದ್ರೀಕೃತವಾಗಿರಲೂಬಹುದು. ಇವುಗಳಿಗೆ ಸಾಹಿತ್ಯ ಕಮ್ಮಟಗಳ ಅಧ್ಯಯನಶೀಲತೆಯ ಗಾಂಭೀರ್ಯವಲ್ಲದಿದ್ದರೂ

ಒಂದು ಜನಕುತೂಹಲದ ಗುಣ ಇರಬೇಕು. ಈ ಸಂಬಂಧದ ಮುಖ್ಯ ಭಾಷಣ ಮಾಡುವವರನ್ನು ಸಮ್ಮೇಳನಾಧ್ಯಕ್ಷರೆಂದು ಘೋಷಿಸಬೇಕು. ಅಧ್ಯಕ್ಷರ ಮೆರವಣಿಗೆ ಒಂದು ಪ್ರದರ್ಶನವಾಗಿರದೆ, ಸಮ್ಮೇಳನದ ಕಡೆ ಜನರ ಗಮನ ಸೆಳೆಯುವ ಉದ್ದೇಶವನ್ನಷ್ಟೇ ಹೊಂದಿರಬೇಕು. ಸಂಜೆಗೆ ಬೇಕಾದರೆ ಸಾಹಿತ್ಯ ಸಂಬಂಧಿಯಾದ ಲಲಿತ–ಲಘು ಮನರಂಜನೆಯ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳಬಹುದು.

ಇದಕ್ಕೆಲ್ಲ ಹೆಚ್ಚಿನ ಹಣ ಬೇಕಿಲ್ಲ. ಸದರಿ ಸಮ್ಮೇಳನಕ್ಕೆ ನೀವು ಖರ್ಚು ಮಾಡಿರಬಹುದಾದ ಮೊತ್ತದ ಕಾಲು ಭಾಗವೂ ಬೇಕಾಗುವುದಿಲ್ಲ. ಸಮ್ಮೇಳನ ಹೀಗೆ ಪೂರ್ಣ ಸಾಹಿತ್ಯ ಕಾರ್ಯಕ್ರಮವಾಗಿ ನಡೆದರೆ ರಾಜಕೀಯ ವ್ಯಕ್ತಿಗಳೂ ಇತ್ತ ಕಡೆ ಸುಳಿಯುವುದಿಲ್ಲ. ಸರ್ಕಾರ ನೀಡುವ ಅನುದಾನದ ಔಪಚಾರಿಕತೆಗೆ ಎಷ್ಟು ಜನ ಸಾರ್ವಜನಿಕ ವ್ಯಕ್ತಿಗಳನ್ನು ಕರೆಯಬೇಕೋ ಅಷ್ಟು ಜನರನ್ನು ಮಾತ್ರ ಉದ್ಘಾಟನಾ ಸಮಾರಂಭಕ್ಕೆ ಆಹ್ವಾನಿಸಿದರೆ ಸಾಕಾಗುತ್ತದೆ. ನೀವು ಕೇಳಿರಬೇಕು, ಮಹಾರಾಷ್ಟ್ರದ ಸಾಹಿತ್ಯ ಸಮ್ಮೇಳನಗಳಲ್ಲಿ ರಾಜಕೀಯ ನಾಯಕರು ವೇದಿಕೆಯ ಮುಂಭಾಗದಲ್ಲಿ ಕೂತು ಸಾಹಿತ್ಯಿಕ ನಡಾವಳಿಗಳನ್ನು ಸವಿಯುತ್ತಾರೆ. ನಾವೂ ಈ ಸಂಪ್ರದಾಯವನ್ನು ಬೆಳೆಸಬೇಕಿದೆ. (ಹಾಗೆ ನೋಡಿದರೆ ಜಿಲ್ಲಾ ಮತ್ತು ತಾಲ್ಲೂಕು ಸಾಹಿತ್ಯ ಸಮ್ಮೇಳನಗಳಿಗೆ ಸರ್ಕಾರ ಅನುದಾನ ನೀಡುವುದನ್ನು ನಿಲ್ಲಿಸಬೇಕು ಎನ್ನುವವನು ನಾನು. ಏಕೆಂದರೆ ಇತ್ತೀಚೆಗೆ ಅನುದಾನ ನೀಡುತ್ತಾರೆ ಎಂಬ ಕಾರಣಕ್ಕೇ ಈ ಸಮ್ಮೇಳನಗಳು ನಡೆಯುತ್ತಿದ್ದು, ಹೆಸರು ಕೇಳದವರನ್ನೆಲ್ಲ ಈ ಸಮ್ಮೇಳನಗಳ ಅಧ್ಯಕ್ಷರನ್ನಾಗಿಸಿ ಜನರ ಕಣ್ಣಲ್ಲಿ ಸಾಹಿತ್ಯದ ಮರ್ಯಾದೆಯನ್ನೇ ಕಳೆಯಲಾಗುತ್ತಿದೆ.)

ತ್ಯಾಮಗೊಂಡ್ಲು ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭ ಔಚಿತ್ಯಪೂರ್ಣವಾಗಿಯೂ, ಸುಂದರವಾಗಿಯೂ ಇತ್ತು. ಆ ಹಿನ್ನೆಲೆಯಲ್ಲೇ ನಾನು ನನ್ನ ಸಮಾರೋಪ ನುಡಿಗಳಲ್ಲಿ ಬೆಳಗಿನ ನಡಾವಳಿಗಳ ಬಗ್ಗೆ ಕೊಂಚ ನಿಷ್ಠುರವಾಗಿಯೇ ವಿಮರ್ಶಾತ್ಮಕವಾಗಿ ಮಾತಾಡಲು ಪ್ರೇರಣೆ ಸಿಕ್ಕಿದ್ದು. ನನ್ನ ಈ ನುಡಿಗಳನ್ನು ಸದುದ್ದೇಶದಿಂದ ಆಡಿದ ಮಾತುಗಳೆಂದು ನೀವು ಸ್ವೀಕರಿಸುತ್ತೀರಿ ಎಂಬ ನಂಬಿಕೆ ನನಗಿದೆ.

ಸಮ್ಮೇಳನದ ನೆಪದಲ್ಲಿ ಊರಿಗೆ ಬಂದ ನನ್ನ ಹಲವು ಬಾಲ್ಯ ಸ್ನೇಹಿತರೊಂದಿಗೆ ಈ ಸಂದರ್ಭದಲ್ಲಿ ಹೆಚ್ಚು ಕಾಲ ಕಳೆಯಲಾಗಲಿಲ್ಲ ಎಂಬ ಬೇಸರವಿದೆ. ಅದಕ್ಕಾಗಿಯೇ ಇನ್ನೊಮ್ಮೆ ಬರುವೆ.

ಮತ್ತೊಮ್ಮೆ ವಂದನೆಗಳು

ಡಿ.ಎಸ್. ನಾಗಭೂಷಣ

ಕರ್ನಾಟಕ ಸರ್ಕಾರದ ಸಂಸ್ಕೃತಿ ಹಬ್ಬ!

ಇಂದು ಕನ್ನಡ ಪತ್ರಿಕೆಗಳಲ್ಲಿ ಸರ್ಕಾರಿ ಸಂಸ್ಕೃತಿಯ ಹಬ್ಬವೇ ನಡೆದುಹೋಗಿದೆ! ಸರ್ಕಾರದ ಸಾಂಸ್ಕೃತಿಕ ನೀತಿ ಎಂಬುದೊಂದನ್ನು ಪ್ರಕಟಿಸಲಾಗಿದೆಯಲ್ಲದೆ ಆರು ತಿಂಗಳಿಂದ ಖಾಲಿ ಇದ್ದ ಅಕಾಡೆಮಿಗಳ, ಪ್ರಾಧಿಕಾರಗಳ ಅಧ್ಯಕ್ಷರುಗಳ ಮತ್ತು ಸದಸ್ಯರ ನೇಮಕಾತಿಗಳನ್ನೂ ಪ್ರಕಟಿಸಲಾಗಿದೆ. ಜೊತೆಗೆ ಒಂದು ಹೊಸ ವಿಶ್ವವಿದ್ಯಾಲಯ ಹಾಗೂ ಎರಡು ಹೊಸ ಅಧ್ಯಯನ ಸಂಸ್ಥೆಗಳ ಸ್ಥಾಪನೆಯ ಘೋಷಣೆಯನ್ನು ಮಾಡಲಾಗಿದೆ. ಬರಲಿರುವ ಚುನಾವಣೆಗಳಿಗಾಗಿ ಸಿದ್ಧತೆ ಚೆನ್ನಾಗಿ ನಡೆದಿದೆ!

ಮುಂದಿನ ಬಾರಿ ಬಿಜೆಪಿ ಸರ್ಕಾರ ತರಲು ಅದರ ಅಧ್ಯಕ್ಷ ಅಮಿತ್‌ಶಾ ಇನ್ನು ಮೂರು ದಿನಗಳಲ್ಲಿ ರಾಜ್ಯಕ್ಕೆ ಬಂದು, ಮೂರು ದಿನ ಠಿಕಾಣಿ ಹೂಡಿ ಇಲ್ಲಿನ ಸಾಹಿತ್ಯ-ಸಂಸ್ಕೃತಿಗಳ ಪುಢಾರಿಗಳನ್ನೆಲ್ಲ ಒಲಿಸಿಕೊಳ್ಳುವ ಪ್ರಯತ್ನ ಮಾಡುತ್ತಾರಂತಲ್ಲ! ಇದಕ್ಕೆಲ್ಲ ಮುನ್ನೆಚ್ಚರಿಕೆಯಾಗಿ ನಮ್ಮ ಸಿದ್ದರಾಮಯ್ಯ ಈ ದಿಢೀರ್ ಸಾಂಸ್ಕೃತಿಕ ಕ್ರಾಂತಿ ಕಹಳೆ ಊದಿರಬೇಕು!

ಬಹುಶಃ ಈ ರಾಜ್ಯದಲ್ಲಿರುವಷ್ಟು ಅಕಾಡೆಮಿಗಳು, ಪ್ರಾಧಿಕಾರಗಳು ಇನ್ನಾವ ರಾಜ್ಯದಲ್ಲೂ ಇರಲಾರದು! ರಾಜ್ಯದಲ್ಲಿ ಲಂಬಾಣಿ ಭಾಷೆ, ಹಾಲಕ್ಕಿ ಒಕ್ಕಲಿಗರ ಕನ್ನಡ, ಗೌಳಿಗರ ಕನ್ನಡ, ಕುಂದಾಪುರದ ಕನ್ನಡಗಳಿಗಾಗಿ ಇನ್ನೂ ಏಕೋ ಅಕಾಡೆಮಿಗಳು ಆರಂಭವಾಗಿಲ್ಲ ಎಂದು, ಬಹುಶಃ ಅಂತಹ ಒಂದು ಅಕಾಡೆಮಿಯ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿರಬಹುದಾದ ಗೆಳೆಯರೊಬ್ಬರು ಗೋಣಗಾಡಿಕೊಂಡಿದ್ದನ್ನು ಕೇಳಿ ಬೆಚ್ಚಿಬಿದ್ದೆ. ಸಾಹಿತಿಗಳು ಈ ರಾಜ್ಯದಲ್ಲಿ ರಾಜಕೀಯ ಪುಢಾರಿಗಿರಿಗೆ ಇಳಿದಷ್ಟು ಆಳಕ್ಕೆ ಇನ್ನಾವ ರಾಜ್ಯದಲ್ಲೂ ಇಳಿದಿರಲಾರರು! ಇಂದು ಪ್ರಕಟಿಸಲಾಗಿರುವ ಅಕಾಡೆಮಿಗಳ, ಪ್ರಾಧಿಕಾರಗಳ ನೇಮಕಾತಿಗಳನ್ನು ನೋಡಿದರೆ ಸಾಕು, ಇದು ವೇದ್ಯವಾಗುತ್ತದೆ. ಉದಾಹರಣೆಗೆ ಸಾಹಿತ್ಯ ಅಕಾಡೆಮಿಯನ್ನೇ ನೋಡಿ. ಅದರ ಅಧ್ಯಕ್ಷ ಮತ್ತು ಮೂರು ನಾಲ್ಕು ಸದಸ್ಯರ ಹೊರತಾಗಿ ಆ ದಂಡಿನಲ್ಲಿರುವ ಇನ್ನಾರೂ ಅಕಾಡೆಮಿ ಎಂಬ ಶಬ್ದಕ್ಕೇ, ಪರಿಕಲ್ಪನೆಗೇ ಮಾನ ತರುವಂತಿಲ್ಲ.

ನಾನೂ ಕರ್ನಾಟಕದ ಸಾಹಿತ್ಯ-ಸಂಸ್ಕೃತಿಗಳ ಒಂದಿಷ್ಟು ಪರಿಚಯವುಳ್ಳವನು. ಅವುಗಳಲ್ಲಿ ಸ್ವಲ್ಪ ಕೆಲಸ ಮಾಡಿದವನು ಕೂಡ. ಹಾಗಾಗಿ ಈ ಅಕಾಡೆಮಿಗಳ ಮತ್ತು ಪ್ರಾಧಿಕಾರಗಳ ಅಧ್ಯಕ್ಷರುಗಳು ಮತ್ತು ಸದಸ್ಯರ ಹೆಸರುಗಳನ್ನು ಕೇಳಿದಾಗ, 'ಓ ಇವರಲ್ಲವೇ' ಎಂಬ ಪರಿಚಿತತೆಯ ವಿಶ್ವಾಸ ಮೂಡುತ್ತಿತ್ತು. ಆದರೆ ಈಗ ಈ ಬಹುತೇಕ ನೇಮಕಾತಿಗಳನ್ನು ನೋಡಿದರೆ, 'ಇವರೆಲ್ಲ ಯಾರು? ಇವರೇಕೆ ಇಲ್ಲಿ ಸ್ಥಾನ ಪಡೆದಿದ್ದಾರೆ' ಎಂದು ಮುಗ್ಧವಾಗಿ ಪ್ರಶ್ನೆ ಕೇಳುವಂತಾಗುತ್ತದೆ. ನಾನು ಮುಗ್ಧನೋ ಅಥವಾ ಮೂರ್ಖನೋ ನನಗಿನ್ನೂ ತೀರ್ಮಾನಿಸಲಾಗಿಲ್ಲ!

ನನಗೆ ಇನ್ನೂ ಸಮರ್ಪಕ ಉತ್ತರ ದೊರಕಿರದ ನನ್ನ ಒಂದು ಪ್ರಶ್ನೆ ಎಂದರೆ ಈ ಪುಸ್ತಕ ಪ್ರಾಧಿಕಾರವನ್ನು ಯಾಕೆ ರಚಿಸಲಾಗಿದೆ, ಅದರ ಉದ್ದೇಶ-ಕರ್ತವ್ಯಗಳಾದರೂ ಏನು ಎಂಬುದು. ನನ್ನ ಹಲವು ಗೆಳೆಯರು ಇದರ ಅಧ್ಯಕ್ಷರುಗಳು ಮತ್ತು ಸದಸ್ಯರೂ ಆಗಿ ಹೋಗಿದ್ದಾರೆ. ಅವರ ಕಾರ್ಯನಿರ್ವಹಣೆಯಿಂದಲೂ ಈ ನನ್ನ ಪ್ರಶ್ನೆಗೆ ಉತ್ತರ ದೊರಕಿಲ್ಲ! ಈ ಪ್ರಾಧಿಕಾರದ ಕಾಗದದ ಮೇಲಿನ ಘೋಷಿತ ಉದ್ದೇಶಗಳೇನೇ ಇರಲಿ, ಇದು ಈವರೆಗೆ ಇತರ ಪ್ರಾಧಿಕಾರಗಳು ಮತ್ತು ಅಕಾಡೆಮಿಗಳು ಮಾಡದ ವಿಶಿಷ್ಟ ಕೆಲಸಗಳನ್ನೇನು ಮಾಡಿದೆ? ಯಾರಾದರೂ ಹೇಳಬೇಕು.

ಈಗ ಅಸ್ತಿತ್ವದಲ್ಲಿರುವ (ಇತರ ವಿಶ್ವವಿದ್ಯಾಲಯಗಳ ಜೊತೆಗೇ) ಜಾನಪದ, ಸಂಸ್ಕೃತ ಮತ್ತು ಸಂಗೀತ ವಿಶ್ವವಿದ್ಯಾಲಯಗಳು ಯಾವ ಸ್ಥಿತಿಯಲ್ಲಿವೆ, ಇವಕ್ಕೆ ಸಮರ್ಥ ಕುಲಪತಿಗಳನ್ನು ಹುಡುಕಲು ಎಷ್ಟು ಕಷ್ಟವಾಗಿದೆ ಎಂದು ಗೊತ್ತಿರುವರಾರೂ ಹೊಸ ವಿಶ್ವವಿದ್ಯಾಲಯ ಸ್ಥಾಪನೆಯ ಗೋಜಿಗೆ ಹೋಗಲಾರರು. ಆದರೂ ಸರ್ಕಾರ ಬುಡಕಟ್ಟು ಅಧ್ಯಯನಗಳ ವಿಶ್ವವಿದ್ಯಾಲಯ ತೆರೆಯುವ ನಿರ್ಧಾರ ಪ್ರಕಟಿಸಿದೆ. ಜೊತೆಗೆ ತತ್ವ ಪದ ಹಾಗೂ ಸೂಫಿ ಸಾಹಿತ್ಯ ಮತ್ತು ಪಾಲಿ ಮತ್ತು ಪ್ರಾಕೃತ ಸಾಹಿತ್ಯ ಸಂಶೋಧನೆಗಾಗಿ ಎರಡು ಪ್ರತ್ಯೇಕ ಅಧ್ಯಯನ ಸಂಸ್ಥೆಗಳು! ಇವೊತ್ತಿನ ಕನ್ನಡ ವಿದ್ವತ್ತಿನ ಸ್ಥಿತಿಗತಿ ನೋಡಿದರೆ ಇವು ನಮ್ಮ ಬಹುತೇಕ ಎಲ್ಲ ವಿಶ್ವವಿದ್ಯಾಲಯಗಳ ವಿವಿಧ ಇಲಾಖೆಗಳಾಗಿರುವಂತೆ ಅನಾಹುತಕಾರಿ ಜಾತಿ ರಾಜಕಾರಣದ ಗೂಡುಗಳಾಗಬಹುದೇ ಹೊರತು ಅಧ್ಯಯನ ಸಂಸ್ಥೆಗಳಾಗಂತೂ ಉಳಿಯಲಾರವು. ಈ ಸರ್ಕಾರಕ್ಕೆ ಇಂತಹ ಶಿಫಾರ್ಸುಗಳನ್ನು ಯಾರು ಮಾಡುತ್ತರೋ ತಿಳಿಯದಾಗಿದೆ!

ಇನ್ನು ಗೆಳೆಯ ಕೆ. ವಿ. ನಾರಾಯಣರ ಅಧ್ಯಕ್ಷತೆಯ ಕುವೆಂಪು ಭಾಷಾ ಭಾರತಿ ತನ್ನ ಉತ್ಸಾಹದಲ್ಲಿ ಎಷ್ಟು ಪುಸ್ತಕಗಳನ್ನು ಮುದ್ರಿಸಿ ಹೊರ ಹಾಕಿದೆಯೆಂದರೆ ಅವನ್ನೋದುವ ಕನ್ನಡಿಗರು ತಯಾರಾಗುವ ಹೊತ್ತಿಗೆ ಆ ಪುಸ್ತಕಗಳು ಗೋಡೌನ್‌ನಲ್ಲಿಯೋ, ಗ್ರಂಥಾಲಯಗಳ ಕಪಾಟುಗಳಲ್ಲಿಯೋ ಹುಳು ತಿಂದು ಹಾಳಾಗದಿದ್ದರೆ ಇದರ ಮೇಲೆ ಚೆಲ್ಲಲಾಗಿರುವ ಕನ್ನಡಿಗರ ತೆರಿಗೆ ಹಣದ ಅಥವಾ ಅಂತಾರಾಷ್ಟ್ರೀಯ ಸಾಲದ ಹಣದ ಪುಣ್ಯ! ಇದರ ಹೊಸ ಅಧ್ಯಕ್ಷರಾದ ಕೆ.ಮರುಳಸಿದ್ದಪ್ಪ ಏನು ಮಾಡುತ್ತಾರೋ ನೋಡಬೇಕು!

ಇಂದು ರಾಜ್ಯದಲ್ಲಿ ಸತತ ಬರವಿದ್ದರೂ, ಸಂಸ್ಕತಿಗೇನೂ ಬರವಿದ್ದಂತೆ ಕಾಣುವುದಿಲ್ಲ! ಸಂಸ್ಕೃತಿ ಸೇವೆಯ ಪುಢಾರಿ ಪುರುಷೋತ್ತಮರಿಗೆ ಸುಭಿಕ್ಷ ಕಾಲವಿದು! ಏಕೆಂದರೆ ಈ ಎಲ್ಲ ಅಕಾಡೆಮಿ, ಪ್ರಾಧಿಕಾರಗಳ ನೇಮಕಾತಿಗಳಿಗೆ ಬೇಕಾದಷ್ಟು ಸಂಖ್ಯೆಯ ಜನ ನಮ್ಮ ಸಿದ್ದರಾಮಯ್ಯನವರ ಸಾಮಾಜಿಕ ನ್ಯಾಯ ರಾಜಕಾರಣದಲ್ಲಿ ಹುಲುಸಾಗಿ ಬೆಳೆದಿದ್ದಾರೆ! ಅಥವಾ ಹೀಗೂ ಹೇಳಬಹುದು, ಇವರ ಅಪ್ಪಟ ಜಾತಿ ಲೆಕ್ಕಾಚಾರದ ಸಾಮಾಜಿಕ ರಾಜಕಾರಣ ಸೃಷ್ಟಿಸುತ್ತಿರುವ 'ಸಾಂಸ್ಕೃತಿಕ' ನಾಯಕರಿಗೆ ಜಾಗ ಮಾಡಿಕೊಡಲೆಂದೇ ಈ ಹೊಸ ವಿಶ್ವವಿದ್ಯಾಲಯಗಳು, ಹೊಸ ಅಧ್ಯಯನ ಸಂಸ್ಥೆಗಳನ್ನು ಆರಂಭಿಸಲಾಗುತ್ತಿದೆ! ಇದೇ ಇವರ ಹೊಸ ಸಾಂಸ್ಕೃತಿಕ ನೀತಿಯ ತಿರುಳೂ ಆಗಿರುವಂತಿದೆ.

(ಫೇಸ್‌ಬುಕ್ ಬರಹ : ೭ ಆಗಸ್ಟ್ ೨೦೧೭)

೨೦೧೭ರ
ರಾಜ್ಯೋತ್ಸವ ಪ್ರಶಸ್ತಿ : ಒಂದು ಪತ್ರ

ಪತ್ರಿಕಾ ಪ್ರಕಟಣೆ

ದಿನಾಂಕ: ೩೦, ಅಕ್ಟೋಬರ್, ೨೦೧೭

ನಾನು ನನ್ನ ಕರ್ತವ್ಯವೆಂದು ಭಾವಿಸಿ ಮಾಡಿದ ನಾಡು-ನುಡಿಗಳ ಅಲ್ಪ ಸೇವೆಯನ್ನು ಮಾನ್ಯ ಮಾಡಿ ಘನ ಕರ್ನಾಟಕ ಸರ್ಕಾರವು ನನಗೆ ಈ ವರ್ಷದ ರಾಜ್ಯೋತ್ಸವ ಪ್ರಶಸ್ತಿ ನೀಡಲು ನಿರ್ಧರಿಸಿರುವುದಕ್ಕಾಗಿ ಸರ್ಕಾರಕ್ಕೆ ನನ್ನ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸಬಯಸುತ್ತೇನೆ. ನಾಡು-ನುಡಿಗಳಿಗೆ ಸೇವೆ ಸಲ್ಲಿಸಿದವರನ್ನು ಗುರುತಿಸಿ ಪ್ರಶಸ್ತಿಯ ಮಾನ್ಯತೆಯನ್ನು ನೀಡುವುದು ಕೂಡ ನಾಡು-ನುಡಿಗಳಿಗೆ ಸಲ್ಲಿಸುವ ಸೇವೆಯೇ ಆಗಿದೆ. ಆದರೆ ನನಗೆ ನೀಡಲಾಗಿರುವ ಈ ಪ್ರಶಸ್ತಿಯನ್ನು ನಾನು ಸ್ವೀಕರಿಸಲು ಇಂದಿನ ಸಂದರ್ಭದಲ್ಲಿ ನನಗೆ ಮನಸ್ಸಾಗುತ್ತಿಲ್ಲವೆಂಬುದನ್ನೂ ಈ ಮೂಲಕ ತಿಳಿಸಬಯಸುವೆ. ಇದಕ್ಕೆ ಕಾರಣಗಳು ಹೀಗಿವೆ:

ರಾಜ್ಯೋತ್ಸವವೆಂಬುದು ನಮ್ಮ ಕನ್ನಡ ರಾಜ್ಯೋದಯದ ಸಂಭ್ರಮದ ಆಚರಣೆಯೇ ಆಗಿದೆ. ಈ ರಾಜ್ಯೋದಯಕ್ಕೆ ಕಾರಣವಾದ ಕರ್ನಾಟಕ ಏಕೀಕರಣ ಆಂದೋಲನದ ಕೇಂದ್ರ ಕಾಳಜಿಯಾಗಿದ್ದುದು, ಕರ್ನಾಟಕದ ಮಕ್ಕಳು ಕನ್ನಡವನ್ನು ತಮ್ಮ ಬದುಕಿನ ಭಾಷೆಯಾಗಿ ಬಳಸಿ ಬೆಳೆಸಬೇಕೆಂಬುದು. ಇದನ್ನು ಸಾಧ್ಯಮಾಡುವ ಮುಖ್ಯ ಸಾಧನವೆಂದರೆ ಕನ್ನಡ ಶಿಕ್ಷಣದ ಮಾಧ್ಯಮ. ಆದರೆ ಪ್ರಾಥಮಿಕ ಶಾಲಾ ಶಿಕ್ಷಣದ ಹಂತದವರೆಗಾದರೂ ಕರ್ನಾಟಕದ ಮಕ್ಕಳಿಗೆ ಶಿಕ್ಷಣ ಮಾಧ್ಯಮವು ಕನ್ನಡವಾಗಿರಬೇಕೆಂಬ ಕರ್ನಾಟಕದ ಜನತೆಯ ಪ್ರತಿನಿಧಿಯಾದ ಕರ್ನಾಟಕ ಸರ್ಕಾರದ ಸಂಕಲ್ಪ ಇನ್ನೂ ಈಡೇರಿಲ್ಲ. ಅದರ ಎರಡು ದಶಕಗಳ ನ್ಯಾಯಾಂಗ ಹೋರಾಟವೂ

ವಿಫಲವಾಗಿದೆ. ಇದಕ್ಕೆ ಕಾರಣ ನಮ್ಮ ರಾಷ್ಟ್ರ ಕಲ್ಪನೆಯ ಪ್ರಣಾಳಿಕೆಯಂತಿರುವ ನಮ್ಮ ಸಂವಿಧಾನವೇ ಅದಕ್ಕೆ ವಿರೋಧವಾಗಿರುವುದು. ರಾಷ್ಟ್ರ ಕಲ್ಪನೆಯಲ್ಲಿನ ಈ ಸಾಂವಿಧಾನಿಕ ವಿರೋಧಾಭಾಸವನ್ನು ಸರಿಪಡಿಸಿ ನಮ್ಮ ರಾಷ್ಟ್ರದ ಸಾಂಸ್ಕೃತಿಕ ಅಸ್ತಿತ್ವದ ಮೂಲಾಧಾರವಾದ ಜನಸಮುದಾಯಗಳ ಭಾಷೆಗಳ ಪ್ರಾಧಾನ್ಯತೆಯನ್ನು ರಾಷ್ಟ್ರದ ಬದುಕಿನಲ್ಲಿ ಮರುಸ್ಥಾಪಿಸಬೇಕಾದ್ದು ಜನತೆಯ ಪ್ರತಿನಿಧಿಯಾದ ಸರ್ಕಾರದ ಕರ್ತವ್ಯ.

ಆದರೆ ಕರ್ನಾಟಕ ಸರ್ಕಾರವು ಪ್ರಾಥಮಿಕ ಶಾಲಾ ಶಿಕ್ಷಣವನ್ನು ಕನ್ನಡದಲ್ಲೇ ಒದಗಿಸುವ ತನ್ನ ಸಂಕಲ್ಪಕ್ಕೆ ಸಂವಿಧಾನವೇ ಅಡ್ಡಿಯಾಗಿದೆ ಎಂಬುದನ್ನು ಈ ಸಂಬಂಧದ ನಮ್ಮ ಸರ್ವೋನ್ನತ ನ್ಯಾಯಾಲಯದ ತೀರ್ಪಿನಿಂದ ಮೂರು ವರ್ಷಗಳ ಹಿಂದೆಯೇ ಕಂಡುಕೊಂಡಿದ್ದರೂ ಅದನ್ನು ಸರಿಪಡಿಸುವ ಯಾವ ಕ್ರಮವನ್ನೂ ಈವರೆಗೆ ಕೈಗೊಳ್ಳದಿರುವುದು ದುರದೃಷ್ಟಕರ. ಕಳೆದ ವರ್ಷದ ರಾಜ್ಯೋತ್ಸವ ಸಂದರ್ಭದ ಒಂದು ಭಾಷಣದಲ್ಲಿ ನಮ್ಮ ಮುಖ್ಯಮಂತ್ರಿಗಳು ಈ ಸಂಬಂಧವಾದ ಸಂವಿಧಾನ ತಿದ್ದುಪಡಿ ಮಾಡಬೇಕೆಂದು ಪ್ರಧಾನ ಮಂತ್ರಿಯವರನ್ನು ಆಗ್ರಹಿಸಿದ್ದನ್ನು ಬಿಟ್ಟರೆ ತಮ್ಮ ಸರ್ಕಾರದ ಕಡೆಯಿಂದ ಯಾವ ಕ್ರಮವನ್ನೂ ಕೈಗೊಂಡ ಸೂಚನೆಗಳಿಲ್ಲ. ಬದಲಿಗೆ ಸರ್ಕಾರವು ಈ ಇಡೀ ವಿಷಯವನ್ನು ಮುಗಿದ ಅಧ್ಯಾಯವೆಂದು ಕೈಚೆಲ್ಲಿ, ಈ ಸಂಬಂಧದ ಈವರೆಗಿನ ಹೋರಾಟವನ್ನು ಚರಿತ್ರೆಗೆ ಸರಿಸುವ ಪ್ರಯತ್ನ ಮಾಡುತ್ತಿರುವಂತಿದೆ. ಇದರ ಪರೋಕ್ಷ ಪರಿಣಾಮವಾಗಿ ರಾಜ್ಯದಲ್ಲಿ ಕನ್ನಡ ಮಾಧ್ಯಮ ಶಾಲೆಗಳ ಸಂಖ್ಯೆ ಒಂದೇ ಸಮನೆ ಇಳಿಮುಖವಾಗುತ್ತಿದೆ. ರಾಜ್ಯೋತ್ಸವದ ಸಂದರ್ಭದಲ್ಲಿಯಾದರೂ ಈ ದುರಂತಮಯ ಬೆಳವಣಿಗೆಯ ಅಂತಿಮ ಪರಿಣಾಮವಾದರೂ ಏನಾಗಬಹುದು ಎಂಬುದನ್ನು ಯೋಚಿಸಿ ಇದಕ್ಕೆ ಪರಿಹಾರ ಹುಡುಕುವ ಪ್ರಯತ್ನದ ಬಗ್ಗೆ ಗಂಭೀರವಾಗಿ ಆಲೋಚಿಸಬೇಕಿದೆ.

ಶಿಕ್ಷಣ ಮಾಧ್ಯಮದ ಸಂಬಂಧವಾಗಿ ಸರ್ವೋನ್ನತ ನ್ಯಾಯಾಲಯದ ಮೆಟ್ಟಿಲು ಹತ್ತಿದ್ದು ಕರ್ನಾಟಕ ಸರ್ಕಾರವೇ ಆದುದರಿಂದ, ಈಗ ಅದಕ್ಕೆ ತಡೆಯಾಗಿರುವ ಸಂವಿಧಾನಕ್ಕೆ ಅಗತ್ಯ ತಿದ್ದುಪಡಿ ತರುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ಮುಂದಾಗಬೇಕಾದುದೂ ಕರ್ನಾಟಕ ಸರ್ಕಾರದ ಹೊಣೆಯೇ ಆಗಿದೆ. ಆದರೆ ಮೂರು ವರ್ಷಗಳಾದರೂ ಇದಕ್ಕಾಗಿ ಮೀನ-ಮೇಷ ಎಣಿಸುತ್ತಿರುವ ರಾಜ್ಯ ಸರ್ಕಾರದ ಮನೋಭಾವದ ಬಗೆಗಿನ ನನ್ನ ತೀವ್ರ ಅಸಮಾಧಾನ ಸೂಚಿಸಲು ನಾನು ಅದು ನೀಡುತ್ತಿರುವ ಈ ರಾಜ್ಯೋತ್ಸವ ಪ್ರಶಸ್ತಿಯನ್ನು ಸ್ವೀಕರಿಸದಿರಲು ನಿರ್ಧರಿಸಿದ್ದೇನೆ.

ಈಗಲಾದರೂ ನಮ್ಮ ರಾಜ್ಯ ಸರ್ಕಾರವು, ಅಗತ್ಯ ಕಂಡುಬಂದರೆ ಸಮಾನ ಮನಸ್ಕ ಇತರ ರಾಜ್ಯ ಸರ್ಕಾರಗಳ ಮುಖ್ಯಸ್ಥರೊಂದಿಗೆ ಸಮಾಲೋಚಿಸಿ, ರಾಜ್ಯಗಳ ಭಾಷೆಗಳನ್ನು ಆಯಾ ರಾಜ್ಯಗಳಲ್ಲಿನ ಪ್ರಾಥಮಿಕ ಶಿಕ್ಷಣದ ಮಾಧ್ಯಮವನ್ನಾಗಿ ಮಾಡುವುದಕ್ಕೆ ಅಡ್ಡಿಯಾಗಿರುವ ಸಂವಿಧಾನದ ವಿಧಿಗಳಿಗೆ ತಿದ್ದುಪಡಿ ತರುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುವ ಪ್ರಯತ್ನಗಳನ್ನು ಆರಂಭಿಸುವಂತೆ ಕೋರುತ್ತೇನೆ.

ಇದರಿಂದಾಗಿ ರಾಜ್ಯದ ಎಲ್ಲ ಪಠ್ಯಕ್ರಮಗಳ ಮತ್ತು ಎಲ್ಲ ಮಾದರಿಗಳ ಶಾಲೆಗಳಲ್ಲೂ ಕನ್ನಡವನ್ನು ಒಂದು ಭಾಷೆಯಾಗಿ ಕಲಿಸಬೇಕೆಂದು ಆದೇಶಿಸುವ ರಾಜ್ಯ ಸರ್ಕಾರದ ಇತ್ತೀಚಿನ ಆಜ್ಞೆಗಳಿಗೂ ಸಾಂವಿಧಾನಿಕ ಬಲ ಬಂದಂತಾಗುತ್ತದೆ. ಇಲ್ಲದೆ ಹೋದರೆ ಈ ಆಜ್ಞೆಗಳೂ ಶಿಕ್ಷಣ ಮಾಧ್ಯಮದ ಆಜ್ಞೆಯಂತೆಯೇ ನ್ಯಾಯಾಂಗದಿಂದ ಅಸಿಂಧು ಎನಿಸಿಕೊಳ್ಳುವ ಎಲ್ಲ ಸಾಧ್ಯತೆಗಳಿವೆ.

(ಡಿ.ಎಸ್. ನಾಗಭೂಷಣ)

(ಈ ಪತ್ರಿಕಾ ಹೇಳಿಕೆಯನ್ನು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಯವರಿಗೂ ತಲುಪಿಸಲಾಗಿತ್ತು.)

ಜಿಎಸ್‌ಎಸ್ ಪುರಸ್ಕಾರ ಸ್ವೀಕಾರ ಭಾಷಣ

ಎಲ್ಲರಿಗೂ ನಮಸ್ಕಾರ.

ಮೊಟ್ಟ ಮೊದಲಿಗೆ ನನಗೆ ಈ ಜಿಎಸ್‌ಎಸ್ ಪುರಸ್ಕಾರ ನೀಡುತ್ತಿರುವ ಶಿವಮೊಗ್ಗದ ಜಿಎಸ್‌ಎಸ್ ಪ್ರತಿಷ್ಠಾನದ ಎಲ್ಲ ಪದಾಧಿಕಾರಿಗಳಿಗೆ, ವಿಶೇಷವಾಗಿ ಅದರ ಅಧ್ಯಕ್ಷರಾದ ಶ್ರೀಮತಿ ಕಿರಣ್ ದೇಸಾಯಿ ಅವರಿಗೆ ನಾನು ನನ್ನ ಪ್ರೀತಿಪೂರ್ವಕ ಧನ್ಯವಾದಗಳನ್ನು ತಿಳಿಸಬಯಸುತ್ತೇನೆ. ಬೆಂಗಳೂರಿನಲ್ಲಿಯೂ ಒಂದು ಜಿಎಸ್‌ಎಸ್ ಪ್ರತಿಷ್ಠಾನವಿದೆ. ಅದು ಪ್ರತಿ ವರ್ಷ ವಿಮರ್ಶಕರೊಬ್ಬರಿಗೆ ಒಂದು ದೊಡ್ಡಮೊತ್ತದ ನಗದಿರುವ ಪ್ರಶಸ್ತಿಯನ್ನು ನೀಡುತ್ತದೆ. ಐದಾರು ವರ್ಷಗಳ ಹಿಂದೆ ಈ ಪ್ರಶಸ್ತಿಯನ್ನು ನನಗೆ ನೀಡುವ ಪರೋಕ್ಷ ಪ್ರಸ್ತಾಪವನ್ನು ಆ ಪ್ರತಿಷ್ಠಾನದ ಹಿರಿಯರೊಬ್ಬರು ನನ್ನೊಂದಿಗೆ ಮಾಡಿದಾಗ ನಾನು ಅದನ್ನು ನಯವಾಗಿಯೇ ನಿರಾಕರಿಸಿದ್ದೆ. ಆದರೆ ಇಂದು ಶಿವಮೊಗ್ಗದ ಈ ಪ್ರತಿಷ್ಠಾನ ನೀಡುತ್ತಿರುವ ಅದೇ ಹೆಸರಿನ ಈ ಪ್ರಶಸ್ತಿಯನ್ನು ನಾನು ಸ್ವೀಕರಿಸುತ್ತಿದ್ದರೆ ಅದಕ್ಕೆ ಎರಡು ಮುಖ್ಯ ಕಾರಣಗಳಿವೆ. ಒಂದು, ಈ ಪ್ರತಿಷ್ಠಾನದ ಪದಾಧಿಕಾರಿಗಳು ನನ್ನ ಸಾಹಿತ್ಯದ ಬಗ್ಗೆ ಮತ್ತು ನನ್ನ ಬಗ್ಗೆ ಪ್ರೀತಿ ಗೌರವವಿರುವವರು ಎಂಬದು ಮತ್ತು ಈ ಪ್ರಶಸ್ತಿಯನ್ನು ನಿರ್ವ್ಯಾಜ ಪ್ರೀತಿಯಿಂದ ಕೊಡುತ್ತಿರುವುದು. ಎರಡನೇ ಕಾರಣ, ಈ ಪ್ರಶಸ್ತಿ ಇನ್ನೂ ಹೊಸದಾಗಿದ್ದು, ಸಾಹಿತ್ಯೇತರ ಕಾರಣಗಳಿಂದ ಮಲಿನಗೊಂಡಿಲ್ಲ ಎನ್ನುವುದು. ಇಂದು ಕನ್ನಡದಲ್ಲಿ ನೂರಾರು ಪ್ರಶಸ್ತಿಗಳಿವೆ. ಬೆಳಿಗ್ಗೆ ಎದ್ದು ಪತ್ರಿಕೆಯ ಪುಟ ತೆರೆದರೆ ಒಂದಲ್ಲ ಒಂದು ಪ್ರಶಸ್ತಿಯ ಸುದ್ದಿ ಇರುತ್ತದೆ. ಮಾನವಂತ ಸಾಹಿತಿಗಳು ಇಂದು ಯಾವ ಪ್ರಶಸ್ತಿ ಬರಸಿಡಿಲಿನಂತೆ ತಮ್ಮ ಮೇಲೆ ಎರಗುವುದೋ ಎಂದು ಆತಂಕದಲ್ಲಿರುವ ಪರಿಸ್ಥಿತಿ ಇದೆ. ಇಂತಹ ಪ್ರಶಸ್ತಿಗಳ ಸಂತೆಯಲ್ಲಿ ಪ್ರಶಸ್ತಿ ಒಪ್ಪಿಕೊಳ್ಳಲು ನಿಮಗೆ ನಿಜವಾದ ಎಂಟೆದೆ ಬೇಕು!

ಜಿ.ಎಸ್. ಶಿವರುದ್ರಪ್ಪನವರ ಹೆಸರಿನಲ್ಲಿರುವ ಈ ಪ್ರಶಸ್ತಿಯನ್ನು ಸ್ವೀಕರಿಸಲು ನನಗೆ ಸಂತೋಷವೇ ಆಗುತ್ತಿದೆ. ಏಕೆಂದರೆ ನನ್ನ ಸಾಹಿತ್ಯ ವ್ಯಕ್ತಿತ್ವವನ್ನು ರೂಪಿಸಿದ ಹಲವರಲ್ಲಿ ಅವರು ಪ್ರಮುಖರು. ಅವರು ನನ್ನ ನೇರ ಗುರುಗಳಲ್ಲದಿದ್ದರೂ, ನಮ್ಮ

ಒಡನಾಟದುದ್ದಕ್ಕೂ ಹಿರಿಯ ಗೆಳೆಯರಂತೆಯೇ ಇದ್ದು ತಮ್ಮದೇ ವಿಶಿಷ್ಟ ರೀತಿಯಲ್ಲಿ ನನ್ನ ಸಾಹಿತ್ಯ ಚಿಂತನೆಯನ್ನು ಪ್ರಭಾವಿಸಿದ್ದಾರೆ. ಅವರನ್ನು ನಾನು ಹಲವು ದೂರಗಳಿಂದ ನೋಡಿದ್ದೇನೆ. ಕನ್ನಡದ ಸುಪ್ರಸಿದ್ಧ ಕವಿಯಾಗಿ, ಕನ್ನಡ ಪ್ರಾಧ್ಯಾಪಕರಾಗಿ, ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಅವರನ್ನು ದೂರದಿಂದ ಭಯಮಿಶ್ರಿತ ಗೌರವದಿಂದ ನೋಡಿದ್ದೇನೆ. ನಂತರ ನಾನು ಆನರ್ಸ್ ಮತ್ತು ಸ್ನಾತಕೋತ್ತರ ಪದವಿಗಳಿಗಾಗಿ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಯಾದಾಗ ಅದೇ ಕಾಲೇಜಿನಲ್ಲಿ ಸ್ಥಿತವಾಗಿದ್ದ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಕಾಲೇಜಿನ ಆವರಣದಲ್ಲಿ ಮುಕ್ತವಾಗಿ ಓಡಾಡಿಕೊಂಡಿರುತ್ತಿದ್ದ ಅವರನ್ನು ಭಯ ಕಳೆದುಕೊಂಡ ಗೌರವದಿಂದ ಗಮನಿಸಿದ್ದೇನೆ. ವಿಶೇಷವಾಗಿ ನಮ್ಮ ಗಣಿತಶಾಸ್ತ್ರ ವಿಭಾಗದ ಕಟ್ಟಡದಲ್ಲೇ ಇದ್ದ ಸೆನೆಟ್ ಹಾಲ್‌ನಲ್ಲಿ ಅವರು ಪ್ರತಿವರ್ಷ ನಡೆಸುತ್ತಿದ್ದ ಸಾಹಿತ್ಯ ವಿಚಾರ ಸಂಕಿರಣಗಳಲ್ಲಿ ಸಾಹಿತ್ಯದ ಪ್ರಶ್ನೆಗಳನ್ನು ಸಾವು ಬದುಕಿನ ಪ್ರಶ್ನೆಗಳೆಂಬಂತೆ ಚರ್ಚಿಸುತ್ತಿದ್ದ ಸಂದರ್ಭದಲ್ಲಿ ಅವರು ಅದನ್ನು ಸುದೂರದಲ್ಲಿ ನಿಂತು ನಿರ್ವಹಿಸುತ್ತಿದ್ದ ಪ್ರಬುದ್ಧ ಯಜಮಾನರ ಪಾತ್ರವನ್ನು ಮಧ್ಯಮ ದೂರದಿಂದ ಕಂಡು, ಸಾಹಿತ್ಯದ ಅಧ್ಯಯನದಿಂದ ಏನೆಲ್ಲ ಕಲಿಯಬಹುದೆಂದು ಅರಿತು ಬೆರಗಾಗಿದ್ದೇನೆ. ನಂತರ ನಾನು ಕೆಲಸಕ್ಕೆಂದು ದೆಹಲಿಯಲ್ಲಿ ವಾಸಮಾಡಬೇಕಾಗಿ ಬಂದಾಗ ಯೋಗಾಯೋಗವೆಂಬಂತೆ ಜಿಎಸ್‌ಎಸ್ ನನಗೆ ಬಹು ಹತ್ತಿರವಾಗಿ, ಅವರು ಅಧಿಕೃತ ಕೆಲಸಗಳ ಮೇಲೆ ದೆಹಲಿಗೆ ಬಂದಾಗಲೆಲ್ಲ ನನ್ನ ಪುಟ್ಟ ಮನೆಯಲ್ಲೇ ಉಳಿದುಕೊಳ್ಳುವ ವಿಶ್ವಾಸ ತೋರಿದಾಗ ಅವರನ್ನು ಬಹು ಹತ್ತಿರದಿಂದ ಆತ್ಮೀಯವಾಗಿ ಅರಿಯುವ ಸೌಭಾಗ್ಯ ನನ್ನದಾಗಿತ್ತು. ದೂರದಿಂದ ನೋಡಿದಾಗ ಬಹು ಬಿಗುಮಾನದ ವ್ಯಕ್ತಿಯಾಗಿ ಕಾಣುವ ಜಿಎಸ್‌ಎಸ್ ಹತ್ತಿರದಲ್ಲಿ ನೋಡಿದಾಗ ಮುಗ್ಧ ಮಗುವಿನಂತೆ ನನಗೆ ಕಾಣುತ್ತಿದ್ದರು. ಆ ಮುಗ್ಧತೆಯೇ ಅವರನ್ನು ಕವಿಯಾಗಿ ಮಾಡಿದ್ದೆಂದು ನಾನು ಭಾವಿಸಿದ್ದೇನೆ.

ಈ ಆತ್ಮೀಯತೆಯ ದಿನಗಳಲ್ಲೇ ಜಿಎಸ್‌ಎಸ್ ನನ್ನ ಮೇಲೆ ಪ್ರಭಾವ ಬೀರಿದ್ದು. ಅದು ಎಪ್ಪತ್ತರ ದಶಕ. ಲೋಹಿಯಾ ವಿಚಾರಗಳನ್ನು ಓದಿಕೊಂಡಿದ್ದ ನಾನು ನನ್ನ ಮಿತಿಯಲ್ಲೇ ತುರ್ತುಪರಿಸ್ಥಿತಿ ವಿರೋಧಿ ಚಳುವಳಿಯಲ್ಲಿ ಭಾಗವಹಿಸಿ ನನ್ನ ಮನಸ್ಸು ಹೆಚ್ಚು ರಾಜಕೀಯವಾಗತೊಡಗಿದ್ದ ಆ ಕಾಲದಲ್ಲಿ ಸ್ವತಃ ಲೋಹಿಯಾ ವಿಚಾರಗಳ ಅಭಿಮಾನಿಯಾಗಿದ್ದ ಜಿಎಸ್‌ಎಸ್ ನನ್ನಲ್ಲಿದ್ದ ಸಾಹಿತ್ಯಾಸಕ್ತಿಯನ್ನೂ ಗಮನಿಸಿ, ನೀವು ಸಾಹಿತ್ಯ–ಸಂಸ್ಕೃತಿಗಳ ಕವಚದೊಂದಿಗೆ ರಾಜಕೀಯ ಚಟುವಟಿಕೆಗಳಲ್ಲಿ ತೊಡಗುವಿರಾದರೆ ನೀವು ರಾಜಕೀಯದಲ್ಲಿ ಕಳೆದುಹೋಗಲಾರಿರಿ ಎಂದು ಸೂಚಿಸಿದರು. ಕಳೆದುಹೋಗಲಾರಿರಿ ಎಂದರೆ ಹಾಳಾಗಲಾರಿರಿ ಎಂದೇ ಅವರ ಅರ್ಥವಾಗಿತ್ತು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ! ನಮ್ಮ ಸಾಹಿತ್ಯ ವಿಮರ್ಶೆಗೂ ಇದರಿಂದ ಹೊಸ ಆಯಾಮ ದೊರಕೀತೆಂದೂ ಅವರು ಸೇರಿಸದಿರಲಿಲ್ಲ. ಹಾಗೆ ನೋಡಿದರೆ ಆಗೀಗ ಪದ್ಯಗಳನ್ನೋ, ಕಥೆಯನ್ನೋ ಅಥವಾ ವಿಮರ್ಶೆಯನ್ನೋ ಬರೆದುಕೊಂಡಿರುತ್ತಿದ್ದ ನಾನು ಸಾಹಿತ್ಯ ವಿಮರ್ಶೆಯ ಬರವಣಿಗೆಯನ್ನು ಗಂಭೀರವಾಗಿ

ಪರಿಗಣಿಸಲಾರಂಭಿಸಿದ್ದು ಆಗಲೇ. ಅವರಂತಹವರ ಹಲವು ರೀತಿಯ ಮಾರ್ಗದರ್ಶನ ಮತ್ತು ಪ್ರೋತ್ಸಾಹದಿಂದಲೇ ನಾನಿಂದು ನಿಮ್ಮ ಮುಂದೆ ಸಾಹಿತ್ಯ ವಿಮರ್ಶೆಗಾಗಿ ಈ ಪ್ರಶಸ್ತಿ ಸ್ವೀಕರಿಸಲು ಸಾಧ್ಯವಾಗಿರುವುದು. ನನ್ನ ಮೊದಲ ವಿಮರ್ಶಾ ಸಂಕಲನ 'ಗಮನ'ಕ್ಕೆ ಅವರು ಬರೆದುಕೊಟ್ಟ ಅನನ್ಯ ಬೆನ್ನುಡಿಯ ಭಾರವನ್ನು ನಾನು ಈಗಲೂ ಹೊತ್ತು ನಡೆದಿದ್ದೇನೆ.

ಜಿಎಸ್‌ಎಸ್ ಅವರು ರಾಜಕೀಯ ಎಚ್ಚರದ ಸಾಹಿತ್ಯ ವಿಮರ್ಶೆಯ ದೀಕ್ಷೆಯನ್ನು ನನಗೆ ನೀಡಿದರಾದರೂ, ಅದರ ಜೊತೆಯಲ್ಲೇ ಅವರು ಹೇಳಿದ ಮತ್ತೊಂದು ಮುಖ್ಯ ಪಾಠವೆಂದರೆ, ಸಾಹಿತ್ಯ ಸಾಹಿತ್ಯವಾಗಿಯೇ ಉಳಿಯಬೇಕೆಂಬುದು. ಅಂದರೆ ಅದು ಸಾಮಾಜಿಕತೆ ಹೆಸರಿನಲ್ಲಿ ತನ್ನನ್ನು ತಾನು ಕಳೆದುಕೊಳ್ಳಬಾರದು. ಸಾಹಿತ್ಯ ಸಾಹಿತ್ಯವಾಗಿ ಉಳಿಯದೆ ಸಮಾಜಶಾಸ್ತ್ರವೋ, ಮಾನವಶಾಸ್ತ್ರವೋ, ರಾಜಕೀಯ ಶಾಸ್ತ್ರವೋ ಆಗತೊಡಗಿದರೆ ಅದು ತನ್ನ ಪರಿಣಾಮಶೀಲತೆಯನ್ನು ಕಳೆದುಕೊಳ್ಳುವುದು. ಹಾಗಾಗಿ ಯಾವುದೇ ವಿದ್ಯಮಾನ ತಾನು ತಾನಾಗಿ ಉಳಿಯದೆ ಅದು ಹೊರಗೆ ಘನವಾದ್ದೇನನ್ನೂ ಸೃಷ್ಟಿಸಲಾರದೆಂಬುದು ಅವರಿಂದ ನಾನು ಕಲಿತ ಪಾಠ. ಹಾಗಾಗಿಯೇ ಇತ್ತೀಚಿನ ವರ್ಷಗಳಲ್ಲಿ ಬಹುಮುಖತೆಯ ಹೆಸರಿನಲ್ಲಿ ಸಾಹಿತ್ಯ ತನ್ನ ಮೂಲಗುಣವಾದ ಕಲಾತ್ಮಕತೆಯನ್ನೇ ಕಳೆದುಕೊಳ್ಳುತ್ತಿದೆ ಎನಿಸುತ್ತಿರುವುದರಿಂದ ಸಾಹಿತ್ಯದ ಸ್ವಾಯತ್ತತೆಯ ಬಗ್ಗೆ ನಾನು ಹೆಚ್ಚು ಮಾತನಾಡತೊಡಗಿರುವೆ. ಸಾಹಿತ್ಯ ವಿಮರ್ಶೆ ಬಹುಶಿಸ್ತೀಯ ಅಧ್ಯಯನವಾಗಿರಬಹುದೇ ಹೊರತು ಸಾಹಿತ್ಯ ಕೃತಿಯಲ್ಲ. ಆದರೆ ಇಂದು ನಾವು ವ್ಯಾಪಕವಾಗಿ ಈ ಬೆಳವಣಿಗೆಯನ್ನು ನೋಡುತ್ತಿದ್ದೇವೆ. ಇದಕ್ಕೆ ಮುಖ್ಯ ಕಾರಣ, ಸರ್ಕಾರದ ಸಂಸ್ಥೆಗಳು ಮತ್ತು ಕೆಲವು ಖಾಸಗಿ ಸಂಸ್ಥೆಗಳೂ ತಂತಮ್ಮ ರಾಜಕೀಯ ಉದ್ದೇಶಗಳಿಗಾಗಿ ಸಾಹಿತ್ಯದ ಮೌಲ್ಯಮಾಪನಕ್ಕೆ ಸಾಹಿತ್ಯೇತರ ಮಾನದಂಡಗಳನ್ನು ಬಳಸತೊಡಗಿ ಮಾನ್ಯತೆ-ಪ್ರಶಸ್ತಿ-ಪುರಸ್ಕಾರಗಳನ್ನು ಕೊಡತೊಡಗಿರುವುದು. ಇದು ಕನ್ನಡ ಸಾಹಿತ್ಯದ ಹಿತದೃಷ್ಟಿಯಿಂದ ಮಾರಕ ಬೆಳವಣಿಗೆಯಾಗಿದೆ. ಜನಪ್ರಿಯ ರಾಜಕಾರಣ ಕನ್ನಡ ಸಾಹಿತ್ಯವನ್ನೇ ತಿಂದು ಹಾಕುವ ಅಪಾಯವನ್ನು ನಾವಿಂದು ಎದುರಿಸುತ್ತಿದ್ದೇವೆ. ಎರಡು-ಮೂರು ತಲೆಮಾರಿನ ಸಾಹಿತಿಗಳ ಮತ್ತು ವಿವಿಧ ಸಾಹಿತ್ಯ ದೃಷ್ಟಿಗಳಿದ್ದ ಎರಡು ಮೂರು ಸಾಹಿತ್ಯ ಚಳುವಳಿಗಳ ಮಧ್ಯೆ ಬೆಳೆಯುತ್ತಾ ಅಲ್ಲಲ್ಲಿ ವಿಚಲಿತರಾದಂತೆ ಕಂಡರೂ ಆತ್ಯಂತಿಕವಾಗಿ ತಮ್ಮ ಸಾಹಿತ್ಯದ ಹದಗೆಡದಂತೆ ಎಚ್ಚರ ವಹಿಸಿದ್ದ ಜಿಎಸ್‌ಎಸ್‌ಗೆ ಗೌರವ ಸಲ್ಲಿಸುವುದೆಂದರೆ ಸಾಹಿತ್ಯವನ್ನು ಈ ಅಪಾಯದಿಂದ ಪಾರು ಮಾಡುವುದೇ ಆಗಿದೆ.

ಜಿಎಸ್‌ಎಸ್‌ಗೆ ಗೌರವ ಸಲ್ಲಿಸಲು ನಾವು ಮಾಡಲೇಬೇಕಾದ ಇನ್ನೊಂದು ಕೆಲಸವೆಂದರೆ ಕನ್ನಡದ ಮಕ್ಕಳ ಬಾಯಿಂದ ಕನ್ನಡವೇ ಕಾಣೆಯಾಗುತ್ತಿರುವ ಬೆಳವಣಿಗೆಯನ್ನು ತಡೆಯಲು ಕಂಕಣಬದ್ಧರಾಗುವುದು. ಕನ್ನಡ ಶಿಕ್ಷಣ ಮಾಧ್ಯಮವನ್ನು ಕಡ್ಡಾಯ ಮಾಡುವಂತೆ ತಾವಿರುವವರೆಗೂ ಸರ್ಕಾರಗಳೊಂದಿಗೆ ಅನುಸಂಧಾನ ಮಾಡಿದ ಅವರು ಜಾಗತೀಕರಣದ ಎಲ್ಲ ಪಿಡುಗುಗಳಿಗೂ ಕನ್ನಡ ಶಿಕ್ಷಣ ಉತ್ತರವಾಗಬಲ್ಲುದೆಂದು

ನಂಬಿದ್ದರು. ಕಳೆದ ರಾಜ್ಯೋತ್ಸವ ಸಂದರ್ಭದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿನ ನನ್ನ ಅತ್ಯಿಷ್ಟ ಕೆಲಸಗಳನ್ನು ಪರಿಗಣಿಸಿ ರಾಜ್ಯ ಸರ್ಕಾರ ನೀಡಿದ ರಾಜ್ಯೋತ್ಸವ ಪ್ರಶಸ್ತಿಯನ್ನು ನಾನು ಸ್ವೀಕರಿಸಲಿಲ್ಲ. ಕನ್ನಡದ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನಾದರೂ ಕಡ್ಡಾಯವಾಗಿ ಕನ್ನಡದಲ್ಲಿ ಒದಗಿಸಲು ಅಡ್ಡಿಯಾಗಿರುವ ಆತಂಕಗಳನ್ನು ನಿವಾರಿಸಿಕೊಳ್ಳಲು ರಾಜ್ಯ ಸರ್ಕಾರ ಮುಂದಾಗುತ್ತಿಲ್ಲ ಎಂಬ ಕಾರಣದ ಮೇಲೆ ನಾನು ಆ ಪ್ರಶಸ್ತಿಯನ್ನು ಸ್ವೀಕರಿಸಲಿಲ್ಲ. ಆಗ ನನಗೆ ಉತ್ತರ ಕೊಡುವ ರೀತಿಯಲ್ಲೇ ಸುದ್ದಿಗಾರರೊಂದಿಗೆ ಮಾತಾಡಿದ ಮುಖ್ಯಮಂತ್ರಿ ಸಿದ್ಧರಾಮಯ್ಯನವರು, ಕನ್ನಡ ಮಾಧ್ಯಮ ಕಡ್ಡಾಯ ಮಾಡುವುದು ಸಂವಿಧಾನ ವಿರೋಧಿ ಎಂಬ ಸರ್ವೋನ್ನತ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಸಂವಿಧಾನ ತಿದ್ದುಪಡಿಗಾಗಿ ಏನು ಮಾಡಬಹುದೆಂಬುದನ್ನು ರಾಜ್ಯ ಸರ್ಕಾರ ಗಂಭೀರವಾಗಿ ಯೋಚಿಸುತ್ತಿರುವುದಾಗಿ ತಿಳಿಸಿದ್ದರು. ತೀರ್ಪು ಬಂದಾಗಲೂ ಇಂತಹುದೇ ಭರವಸೆ ನೀಡಿದ್ದರು. ಆದರೆ ಅವರ ಸರ್ಕಾರದ ಅವಧಿ ಮುಗಿಯುತ್ತಾ ಬಂದಿರುವ ಹೊತ್ತಿನಲ್ಲೂ ಈ ಸಂಬಂಧ ಅವರೇನು ಕ್ರಮ ಕೈಗೊಳ್ಳಲಿದ್ದಾರೆ ಎಂಬುದು ಕನ್ನಡ ಜನತೆಗೆ ಸ್ಪಷ್ಟವಾಗಿಲ್ಲ. ಹಾಗಾಗಿ ಕನ್ನಡ ಸಾಹಿತ್ಯವನ್ನು ಉಳಿಸುವ ಆಂದೋಲನದ ಭಾಗವಾಗಿಯೇ ಕನ್ನಡ ಉಳಿಸುವ ಆಂದೋಲನ ಮತ್ತೆ ಚುರುಕುಗೊಳ್ಳಬೇಕಿದೆ.

ನನ್ನ ಈ ಮಾತುಗಳನ್ನು ಮುಗಿಸುವ ಮೊದಲು ಒಂದು ಕೋರಿಕೆ. ಕಿವಿ ಮಾತೆಂದರೂ ನಡೆದೀತು. ದಯವಿಟ್ಟು ಈ ಜಿಎಸ್‌ಎಸ್ ಪ್ರತಿಷ್ಠಾನವನ್ನು ಒಂದು ಜಾತಿ ಗುಂಪು ಎನ್ನುವಂತೆ ಮಾಡಬೇಡಿ. ಹಾಗೆ ಮಾಡಿದರೆ ಅದು ಜಿಎಸ್‌ಎಸ್ ವ್ಯಕ್ತಿತ್ವಕ್ಕೆ ಅಪಚಾರ ಮಾಡಿದಂತೆ. ಏಕೆಂದರೆ ಅವರು ಓರ್ವ ಅಪರೂಪದ ಜಾತ್ಯತೀತ ವ್ಯಕ್ತಿಯಾಗಿದ್ದರು. ಅವರನ್ನು ನಾನು ಮೊದಲು ಕಣ್ಣಾರೆ ನೋಡಿದ್ದು ಎಪ್ಪತ್ತರ ದಶಕದ ಆರಂಭದಲ್ಲಿ ಬೆಂಗಳೂರಿನಲ್ಲಿ ನಡೆದ ವೀರಶೈವ ಸಮ್ಮೇಳನವನ್ನು ಪ್ರತಿಭಟಿಸಲು ಪ್ರೊ. ನಂಜುಂಡಸ್ವಾಮಿ, ತೇಜಸ್ವಿ, ಲಂಕೇಶ್ ಅವರ ಜೊತೆ ನಿಂತಿದ್ದಾಗ. ಅವರು ಜಾತಿ–ಧರ್ಮಗಳ ಸಂಕುಚಿತತೆಯ ಕಾರಣಗಳಿಂದ ಪುಸ್ತಕಗಳನ್ನು ನಿಷೇಧಿಸುವ ಪ್ರಸ್ತಾಪ ಬಂದಾಗಲೆಲ್ಲ, ಅದು ಮಾಸ್ತಿಯವರ 'ಚೆನ್ನಬಸವನಾಯಕ'ವೇ ಆಗಿರಬಹುದು, ಶಿವಪ್ರಕಾಶರ 'ಮಹಾಚೈತ್ರ'ವೇ ಆಗಿರಬಹುದು, ಅಥವಾ ಪಿ.ವಿ. ನಾರಾಯಣರ 'ಧರ್ಮಕಾರಣ'ವೇ ಆಗಿರಬಹುದು, ಅದನ್ನು ಬೇಷರತ್ತಾಗಿ ಖಂಡಿಸಿ ದನಿ ಎತ್ತಿದ್ದಾರೆ. ಅವರ ಪ್ರತಿಭಾವಂತ ಶಿಷ್ಯಕೋಟಿಯಲ್ಲಿ ಎಲ್ಲ ಜಾತಿಗಳವರೂ ಇದ್ದರು ಎಂಬುದನ್ನು ನಾವು ಗಮನಿಸಬೇಕು. ಇದೊಂದು ಜಾತ್ಯತೀತ ಗ್ಯಾಂಗ್ ಎಂದೇ ಪ್ರಸಿದ್ಧವಾಗಿದ್ದು, ಈ ಸಂಬಂಧವಾಗಿ ಕೆಲವರು ಜಿಎಸ್‌ಎಸ್ ಅವರನ್ನು ಪ್ರೀತಿ ತುಂಬಿದ ತಮಾಷೆಯಿಂದ 'ಗ್ಯಾಂಗ್‌ಸ್ಟರ್' ಎಂದೂ ಕರೆಯುತ್ತಿದ್ದರು ಎಂಬುದನ್ನೂ ಇಲ್ಲಿ ತಿಳಿಸಬಯಸುವೆ.

ಕೊನೆಯದಾಗಿ ನನ್ನ ವ್ಯಕ್ತಿತ್ವ ಮತ್ತು ಸಾಹಿತ್ಯದ ಬಗ್ಗೆ ಮಾತಾಡಿದ ಗೆಳೆಯ ಡಾ. ಚನ್ನೇಶ್ ಹೊನ್ನಾಳಿಯವರು ಆಡಿದ ಒಂದು ಮಾತಿಗೆ ಪ್ರತಿಕ್ರಿಯಿಸಿ ನನ್ನ ಮಾತುಗಳನ್ನು ಮುಗಿಸಬಯಸುವೆ. ನಾನು ವಿಪುಲವಾಗಿ ಮತ್ತು ಶ್ರೇಷ್ಠ ಗುಣಮಟ್ಟದ ಕೃತಿಗಳನ್ನು ರಚಿಸಿದ್ದರೂ, ನನಗೆ ಸಾಹಿತ್ಯ ಲೋಕದಲ್ಲಿ ಅಗತ್ಯ ಮಾನ್ಯತೆ ಇಲ್ಲದಿರುವ

ಬಗ್ಗೆ ಅವರು ವಿಷಾದಿಸುತ್ತಾ ಅದಕ್ಕೆ ಕೆಲವು ಕಾರಣಗಳನ್ನು ಹುಡುಕಲು ಯತ್ನಿಸಿದರು. ಆದರೆ ಅವರ ಈ ಅಭಿಪ್ರಾಯ, ವಿಷಾದ ತಪ್ಪೆಂದು ನಾನು ಹೇಳಬಯಸುವೆ. ಏಕೆಂದರೆ, ಕಾಲೇಜು ಅಧ್ಯಾಪಕರಾದ ಅವರಿನ್ನೂ ಕನ್ನಡ ಸಾಹಿತ್ಯಲೋಕ ಕನ್ನಡ ಅಥವಾ ಇಂಗ್ಲಿಷ್ ಮೇಷ್ಟ್ರುಗಳ ಸಾಮ್ರಾಜ್ಯವಾಗಿದೆ ಎಂದು ಭಾವಿಸಿದಂತಿದೆ, ಈಗ ಮೇಷ್ಟ್ರುಗಳು ಯಾವುದೇ ಎಗ್ಗಿಲ್ಲದೇ ದಪ್ಪ ಸಂಬಳಗಳನ್ನು ಪಡೆಯಲಾರಂಭಿಸಿದ್ದೂ ಸೇರಿದಂತೆ ಇನ್ನೂ ಅನೇಕ ಕಾರಣಗಳಿಂದಾಗಿ ಕನ್ನಡ ಸಾಹಿತ್ಯಲೋಕ ವಿಶ್ವವಿದ್ಯಾಲಯ ಕೇಂದ್ರಿತವಾಗಿ ಉಳಿದಿಲ್ಲ ಎಂಬುದನ್ನು ಅವರು ಗಮನಿಸಿದಂತಿಲ್ಲ. ಇಂದು ಕನ್ನಡ ಸಾಹಿತ್ಯ ಸಾಫ್ಟ್‌ವೇರ್ ಇಂಜಿನಿಯರುಗಳೂ ಸೇರಿದಂತೆ ವೈವಿಧ್ಯಮಯ ವೃತ್ತಿ ಕ್ಷೇತ್ರಗಳ ಜನರಿಂದ ರಚಿತವಾಗುತ್ತಿದೆ ಮತ್ತು ಪೋಷಿಸಲ್ಪಡುತ್ತಿದೆ. ಹಾಗಾಗಿ ನನಗೆ ನನ್ನದೇ ಆದ ಒಂದು ಓದುಗ ವರ್ಗವಿದೆ. ಅವರಿಂದ ನಾನು ನಿರಂತರ ಪ್ರತಿಸ್ಪಂದನ ಪಡೆಯುತ್ತಿರುವೆ. ನನ್ನ ಪುಸ್ತಕಗಳನ್ನು ಪ್ರಕಟಿಸಿದ ಯಾವ ಪ್ರಕಾಶಕನೂ ನಷ್ಟ ಹೊಂದಿಲ್ಲ, ಬದಲಿಗೆ ನನ್ನ ಹಲವು ಪುಸ್ತಕಗಳು ಎರಡನೇ, ಮೂರನೇ ಆವೃತ್ತಿ/ ಮುದ್ರಣಗಳನ್ನು ಕಂಡಿವೆ. ನಿಜ, ನಾನು ಪ್ರತಿಷ್ಠಿತ ಸಂಸ್ಥೆಗಳ ಮತ್ತು ಕಾಲೇಜು/ವಿಶ್ವವಿದ್ಯಾಲಯಗಳ ವಿಚಾರ ಸಂಕಿರಣಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವುದಿಲ್ಲ. ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳು ನನ್ನ ಪುಸ್ತಕಗಳನ್ನು ಪ್ರಕಟಿಸಿಲ್ಲ. ಅದಕ್ಕೆ ಅವುಗಳದೇ ಆದ ಕಾರಣಗಳಿರಬಹುದು. ಅದರ ಬಗ್ಗೆ ನಾನು ಹೆಚ್ಚಿಗೆ ತಲೆ ಕೆಡಿಸಿಕೊಳ್ಳಲು ಹೋಗಿಲ್ಲ. ಹಾಗೆ ಹೋಗಲು ನನಗೇನು ಕಡಿಮೆಯಾಗಿದೆ?

(ಫೆಬ್ರುವರಿ ೧೨, ೨೦೧೮)

ದೆಹಲಿಯಲ್ಲಿ ಕಾರಂತರೊಂದಿಗೆ...

ನನ್ನ ವಿದ್ಯಾರ್ಥಿ ಜೀವನದ ಆರಂಭದಲ್ಲೇ ನಾನು ಶಿವರಾಮ ಕಾರಂತರ ಹೆಸರು ಕೇಳಿದ್ದೆನಾದರೂ, ಅವರ ಬಗ್ಗೆ ನಿರ್ದಿಷ್ಟವಾಗಿ ಯೋಚನೆ ಮಾಡಲಾರಂಭಿಸಿದ್ದು, ನನ್ನ ಪದವಿ ಶಿಕ್ಷಣದ ಎರಡನೇ ವರ್ಷಕ್ಕೆ ಅವರ ಕಾದಂಬರಿ 'ಆಳ ನಿರಾಳ' ಪಠ್ಯವಾದಾಗ. ನಮ್ಮ ಮೇಡಂ, ಶಾಂತಾ ಕಡಗದ ಅವರು ಕಾರಂತರ ವಿವರವಾದ ಪರಿಚಯ ಮಾಡಿದರು. ನಾನು, ಓರ್ವ ಲೇಖಕ ಇಷ್ಟೆಲ್ಲ ಕೆಲಸ ಮಾಡಲು ಸಾಧ್ಯವೇ ಎಂದು ಅವಕ್ಕಾದೆನಲ್ಲದೆ ಅವರ 'ವಿಶ್ವಕೋಶ'ಕ್ಕಾಗಿ ಹುಡುಕಾಡತೊಡಗಿದೆ. ಅದು ಸದ್ಯಕ್ಕೆ ನನಗೆ ಸಿಗಲಿಲ್ಲ. ಆದರೆ ನಮ್ಮ ಪಠ್ಯವಾಗಿದ್ದ ಅವರ ಕಾದಂಬರಿ ಹದಿನೇಳು-ಹದಿನೆಂಟರ ವಯಸ್ಸಿಗೆ ಮೀರಿದ ಧರ್ಮ, ಬ್ರಹ್ಮಚರ್ಯ, ಹಠವೀರ್ಯತೆ, ಜೀವನೋದ್ದೇಶ, ಲೌಕಿಕತೆ-ಪಾರಮಾರ್ಥಿಕತೆಗಳ ದ್ವಂದ್ವ ಇತ್ಯಾದಿಗಳನ್ನು ಕುರಿತ ವಿವೇಚನೆಗಳ ಅತಿ ಗಂಭೀರ ಚರ್ಚೆಗಳನ್ನೊಳಗೊಂಡು ನಮ್ಮನ್ನೇನೂ ಆಕರ್ಷಿಸಲಿಲ್ಲ. ಕೆಲ ತುಂಟ ವಿದ್ಯಾರ್ಥಿಗಳಂತೂ ಅದರಲ್ಲಿದ್ದ ಕೆಲ ಲೈಂಗಿಕ ವಿಚಾರಗಳ ಬಗ್ಗೆ 'ಸ್ಪಷ್ಟೀಕರಣ'ಗಳನ್ನು ಕೇಳುತ್ತಾ ಶಾಂತಾ ಅವರನ್ನು ಕಾಡುತ್ತಿದ್ದುದು ಮಾತ್ರ ಆ ಕಾದಂಬರಿಯ ಕುರಿತು ನನಗಿರುವ ನೆನಪು! ನಂತರ ಆ ಕಾದಂಬರಿಯನ್ನು ಓದುವ ನನ್ನ ಆಸೆ ಏಕೋ ಈಡೇರಿಲ್ಲವೆಂಬುದು ಬೇರೆ ವಿಷಯ.

ಆದರೆ ಈ ಕಾದಂಬರಿ ಕಾರಂತರನ್ನು ಕುರಿತ ನನ್ನ ಕುತೂಹಲವನ್ನು ಕೆರಳಿಸಿದ್ದಂತೂ ನಿಜ. ಅದರಲ್ಲೂ ಆಗಿನ ನನ್ನ ಕುಂದಾಪುರದ ಕಡೆಯ ಸಹಪಾಠಿಯೊಬ್ಬ ಕಾರಂತರು ಜಾತಿ ಬಿಟ್ಟು ಮದುವೆಯಾದ ಧೀರ ಎಂದು ಹೇಳಿದಾಗ ನಾನು ಬೆಚ್ಚಿಬಿದ್ದೆನಷ್ಟೇ ಅಲ್ಲ, ಅವರನ್ನು ಗುಪ್ತವಾಗಿ ಆರಾಧಿಸತೊಡಗಿದೆನೆಂದೇ ಹೇಳಬೇಕು! ನಂತರ ಅವರ ಬೇರೆ ಕಾದಂಬರಿಗಳನ್ನು ಓದತೊಡಗಿದೆ. ಸಮೀಕ್ಷೆ, ಮೊಗ ಪಡೆದ ಮನ, ಇನ್ನೊಂದೇ ದಾರಿ ಮುಂತಾದವು. ಅವು ನನ್ನನ್ನು ಬೇರೆ ಲೋಕಕ್ಕೇ ಒಯ್ದುವು. ನಂತರ ಸಾರ್ವಜನಿಕ ಗ್ರಂಥಾಲಯದಲ್ಲಿ ದೊರೆತ ಅವರ ಆತ್ಮಕತೆ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ನನಗೆ ಹುಚ್ಚೇ ಹಿಡಿಸಿಬಿಟ್ಟಿತು ಎಂದು ಹೇಳಬಹುದು! ಅಬ್ಬಾ ಎಂತಹ ಪ್ರಯೋಗಶೀಲತೆ, ಎಂತಹ ಸಾಹಸಗಳ ನಿರ್ಭೀತ ಬದುಕು!! ಕಷ್ಟಪಟ್ಟು ಓದಿ ಒಳ್ಳೆಯ ಹುದ್ದೆ ಪಡೆದು

ಒಳ್ಳೆಯ ಕಡೆ ಮದುವೆಯಾಗಿ, ಹೆಂಡತಿ ಮಕ್ಕಳೊಂದಿಗೆ ಸುಖವಾಗಿರುವುದಷ್ಟೇ ನನ್ನ ಜೀವನದ ಆದರ್ಶವಾಗಬಾರದು ಎಂಬ ತೀರ್ಮಾನಕ್ಕೂ ನಾನು ಆಗ ಬಂದೆ. ಜೊತೆಗೆ ನಾನು ಓದುತ್ತಿದ್ದ ವಿಜ್ಞಾನ ವಿಷಯದಿಂದ ಆದಷ್ಟು ಬೇಗ ಮತ್ತು ಹೇಗಾದರೂ ಬಿಡಿಸಿಕೊಂಡು ಸಾಹಿತ್ಯ ಅಥವಾ ಮಾನವಿಕಗಳ ಕಡೆ ಹೋಗಬೇಕೆಂಬ ಆಲೋಚನೆಯೂ ನನಗೆ ಹುಟ್ಟಿದ್ದು ಆಗಲೇ. ಹಾಗಾಗಿಯೇ ನಾನು ಪದವಿ ಮುಗಿದ ತಕ್ಷಣ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ಡಾ. ಜಿ.ಎಸ್. ಶಿವರುದ್ರಪ್ಪನವರ ಬಳಿ ನನ್ನ ತಂದೆಯನ್ನು ಒತ್ತಾಯಪೂರ್ವಕವಾಗಿ ಒಪ್ಪಿಸಿ ಕರೆದುಕೊಂಡು ಹೋಗಿ, ಪದವಿಯಲ್ಲಿನ ನನ್ನ ಕನ್ನಡ ವಿಷಯದ ಅಂಕಗಳನ್ನು ಪರಿಗಣಿಸಿ ಕನ್ನಡ ಸ್ನಾತಕೋತ್ತರ ತರಗತಿಗೆ ಪ್ರವೇಶ ನೀಡಬೇಕೆಂದು ಕೋರಿದ್ದು. ಆದರೆ ಅವರು ಈಗಾಗಲೇ ಉದ್ಯೋಗಾವಕಾಶಗಳ ಕೊರತೆ ಎದುರಿಸುತ್ತಿರುವ ಕನ್ನಡ ಎಂ.ಎ ಆಸೆ ಬಿಟ್ಟು ವಿಜ್ಞಾನ ವಿಷಯದ ಸ್ನಾತಕೋತ್ತರ ಪದವಿ ಪಡೆದು, ಉದ್ಯೋಗ ಪಡೆದ ನಂತರ ಸಾಹಿತ್ಯದಲ್ಲಿ ಆಸಕ್ತಿ ಬೆಳೆಸಿಕೊಂಡು ಕೃಷಿ ಆರಂಭಿಸಬಹುದಾಗಿಯೂ ನನಗೆ ಮತ್ತು ನಮ್ಮ ತಂದೆಗೆ 'ಬುದ್ಧಿ' ಹೇಳಿ ಕಳಿಸಿದ್ದು ಬೇರೆ ವಿಷಯ. (ಇದನ್ನು ನಾನು ಬಹಳ ವರ್ಷಗಳ ನಂತರ ೨೦೦೦ದ ಇಸವಿಯಲ್ಲಿ ಸಂಪಾದಿಸಿದ ಜಿಎಸ್‌ಎಸ್ ಅವರ ಗೌರವ ಗ್ರಂಥ 'ಹಣತೆ'ಯಲ್ಲಿನ ಲೇಖನವೊಂದರಲ್ಲಿ ವಿವರವಾಗಿ ಬರೆದಿರುವೆ)

ಕಾರಂತರು ನನ್ನನ್ನು ಆ ಹೊತ್ತಿಗೆ ಎಷ್ಟು ಮುತ್ತಿಕೊಂಡಿದ್ದರೆಂದರೆ ನಾನು ಗಣಿತಶಾಸ್ತ್ರದ ಸ್ನಾತಕೋತ್ತರ ತರಗತಿಯಲ್ಲಿದ್ದಾಗ ಅವರ 'ಬೆಟ್ಟದ ಜೀವ' ಕಾದಂಬರಿಯನ್ನೋದಿ, ಆಗ ನನ್ನ ಪ್ರಿಯ ಮಾಧ್ಯಮವಾಗಿದ್ದ ಆಕಾಶವಾಣಿಗಾಗಿ ಅದರ ನಾಟಕ ರೂಪ ಬರೆಯಲು ಉದ್ಯುಕ್ತನಾದೆ. ಹೆಚ್ಚಾಗಿ ಪ್ರಕೃತಿ ವರ್ಣನೆಗಳಿಂದ ಕೂಡಿದ ಆ ಕಾದಂಬರಿಯನ್ನು ನಾಟಕ ಮಾಡುವುದು ಕಷ್ಟವೆನಿಸಿತಾದರೂ, ಕಷ್ಟಪಟ್ಟು ಮಾಡಿದರೂ ಅದು ಕಾರಂತರಿಗೆ ಒಪ್ಪಿಗೆಯಾಗದಿದ್ದರೆ ಈ ಪ್ರಯತ್ನವೆಲ್ಲ ವ್ಯರ್ಥವಾಗುವುದಲ್ಲಾ ಎಂಬ ಆಲೋಚನೆಗೆ ಸಿಕ್ಕಿ, ನಾನು ಬರೆದಿದ್ದ ಒಂದಷ್ಟನ್ನು ಅವರ ಅವಗಾಹನೆಗೆ ಕಳಿಸಿ ಅವರ ಒಪ್ಪಿಗೆ ಕೋರಿದೆ. ನಾಲ್ಕೈದು ದಿನಗಳಲ್ಲೇ ಬಂತು ಉತ್ತರ! ಮೊದಲು ಅದು ಆಕಾಶವಾಣಿಯವರಿಂದ ಅನುಮೋದಿತವಾದ ಮೇಲೇ ಲೇಖಕರ ಒಪ್ಪಿಗೆಯ ಪ್ರಶ್ನೆ ಬರುವುದೆಂದು ಹೇಳಿ ಕಾರಂತರು ನನ್ನ ಬರಹವನ್ನು ಜೋಪಾನವಾಗಿ ರಿಜಿಸ್ಟರ್ಡ್ ಅಂಚೆಯಲ್ಲಿ ನನಗೆ ವಾಪಸ್ ಕಳಿಸಿದ್ದರು. ನಾನು ಅವರಿಗೆ ಪತ್ರ ಬರೆದಾಗ ನಾನು ನಮ್ಮಪ್ಪನಾಣೆ ಅವರಿಂದ ಉತ್ತರ ಬಂದೀತೆಂದು ನಿರೀಕ್ಷಿಸಿರಲಿಲ್ಲ. ಒಬ್ಬ ಅನಾಮಿಕ ವಿದ್ಯಾರ್ಥಿಗೆ ಅವರು ಉತ್ತರ ಕೊಡುವರೇ ಎಂಬ ಆಲೋಚನೆ ನನ್ನದಾಗಿತ್ತು. ಏಕೆಂದರೆ ನಾನು ಆ ಹೊತ್ತಿಗೆ ಒಂದಿಬ್ಬರು ಮೂವರು ಲೇಖಕರಿಗೆ ಪತ್ರ ಬರೆದು, ಅವರಿಂದ ಉತ್ತರ ಬರದೆ ನಿರಾಶನಾಗಿದ್ದೆ. ಹಾಗೆ ನೋಡಿದರೆ ನಾನು ಅವರಿಗೆ ಒಪ್ಪಿಗೆ ಕೇಳಿ ಪತ್ರ ಬರೆದದ್ದು ನಿಜವಾಗಿಯೂ, ಅವರು ಒಪ್ಪಿಗೆ ನೀಡದೆ ನನಗೆ ಕಷ್ಟವಾಗುತ್ತಿದ್ದ ನಾಟಕ ರಚನೆ ನಿಲ್ಲಿಸಲು ಒಂದು ನೆಪ ದೊರಕಿಸಿಕೊಳ್ಳುವ ಪ್ರಯತ್ನವಾಗಿ! ಜೊತೆಗೆ ನಾನು ನನ್ನ ಈ 'ಮಹಾ' ಪ್ರಯತ್ನದ ಬಗ್ಗೆ ನನ್ನ ಗೆಳೆಯ-ಸಹಪಾಠಿಗಳ ಬಳಿ ಬೇರೆ

ಹೇಳಿಕೊಂಡಿದ್ದೆನಲ್ಲ! ಸರಿ, ಕಾರಂತರ ಉತ್ತರವನ್ನು ನನಗೆ ಮತ್ತು ಗೆಳೆಯರಿಗೆ ಸೆಪವಾಗಿ ಹೇಳಿಕೊಂಡು ನಾಟಕ ರಚನೆಯನ್ನು ಕೈಬಿಟ್ಟೆ.

ವಿಜ್ಞಾನ ವಿಷಯಗಳಿಂದ ದೂರಾಗುವ ನನ್ನ ಆಸೆ ದೈವಕ್ಕೆ ಕೇಳಿಸಿ ಕೃಪೆಯಾದಂತೆ ನನಗೆ ದೆಹಲಿ ಆಕಾಶವಾಣಿಯಿಂದ ಕನ್ನಡ ವಾರ್ತೆಗಳನ್ನು ಓದುವ ಕೆಲಸ ಸಿಕ್ಕಿ ನಾನು ದೆಹಲಿಗೆ ಹೋದೆ. ಅಲ್ಲಿ ಹೆಚ್ಚು ಕೆಲಸವಿಲ್ಲದಿದ್ದುದರಿಂದ ನಾನು ಕೇಂದ್ರ ಸಾಹಿತ್ಯ ಅಕಾಡೆಮಿಯ ಕಛೇರಿ 'ರಬೀಂದ್ರ ಭವನದಲ್ಲಿದ್ದ ಗ್ರಂಥಾಲಯಕ್ಕೆ ಹೋಗಿ ಅಲ್ಲಿದ್ದ ಕನ್ನಡ ಪುಸ್ತಕಗಳನ್ನು ಓದತೊಡಗಿದೆ. ಈ ಅವಧಿಯಲ್ಲಿ ನಾನು ಅಲ್ಲಿ ಲಭ್ಯವಿದ್ದ ಕಾರಂತರ ಎಲ್ಲ ಬರಹಗಳನ್ನೂ ಓದಿದೆ ಎಂದು ಹೇಳಬೇಕು. ಈ ಸಂದರ್ಭದಲ್ಲಿ ಮುಖ್ಯವಾಗಿ ನನ್ನ ಗಮನ ಸೆಳೆದದ್ದು ಕಾರಂತರಿಗೆ ಅರವತ್ತಾದಾಗ ಕು.ಶಿ ಹರಿದಾಸ ಭಟ್ಟರ ಸಂಪಾದಕತ್ವದಲ್ಲಿ ಬಹು ಸುಂದರವಾಗಿ, ಅದ್ಭುತವಾಗಿ ಪ್ರಕಟವಾಗಿದ್ದ 'ಕಾರಂತ ಪ್ರಪಂಚ' ಎಂಬ ಅಭಿನಂದನಾ ಗ್ರಂಥ. ಅದು ಎಷ್ಟು ಸಮಗ್ರವಾಗಿತ್ತೆಂದರೆ, ಕಾರಂತರ ಆವರೆಗಿನ ಬದುಕಿನ ಬಗ್ಗೆ ವಿವಿಧ ಬರಹ ರೂಪಗಳಲ್ಲಿ ಅದು ಎಲ್ಲವನ್ನೂ ತಿಳಿಸುವಂತಿತ್ತು. ವಿಶೇಷವಾಗಿ ಕೆ.ಕೆ ಹೆಬ್ಬಾರರು ರಚಿಸಿದ್ದ ಕಾರಂತರ 'ವಿಶ್ವರೂಪಿ' ರೇಖಾಚಿತ್ರ ಅವರ ಬಗ್ಗೆ ಎಲ್ಲವನ್ನೂ ಹೇಳುತ್ತಿತ್ತು– ಅವರು ಹುಟ್ಟಿನಿಂದ ಬ್ರಾಹ್ಮಣರು ಎಂಬುದನ್ನೂ, ಅವರ ಎದೆಯ ಮೇಲೆ ಜನಿವಾರವೊಂದನ್ನು ಜೋಲಾಡಿಸುವ ಮೂಲಕ! ಆಗ ನನ್ನಲ್ಲಿ ಎದ್ದ ಪ್ರಶ್ನೆ : ಕಾರಂತರು ಈ ಚಿತ್ರವನ್ನು ಅದಿರುವ ಹಾಗೆ ಒಪ್ಪಿಕೊಂಡರೇ? ಏನೂ ತಕರಾರು ತೆಗೆಯಲಿಲ್ಲವೇ?

ಕಾರಂತರ ಮುಖತಃ ಭೇಟಿಯ ಆ ಕ್ಷಣಗಳು...

ನಾನು ಶಿವರಾಮ ಕಾರಂತರನ್ನು ಮುಖತಃ ಮೊದಲ ಬಾರಿಗೆ ನೋಡಿದ್ದು ೧೯೭೭ರ ಚಳಿಗಾಲದ ಒಂದು ಸಂಜೆ ಎಂದು ಕಾಣುತ್ತದೆ. ತಿಂಗಳು, ದಿನ ಅಷ್ಟು ನಿಖರವಾಗಿ ನೆನಪಿಲ್ಲ. ನಾನು ದೆಹಲಿಯಲ್ಲಿದ್ದಾಗ ನನ್ನ ಗೆಳೆಯ ರಾಮಚಂದ್ರದೇವ ಅವರ ಪುಟ್ಟ ಮನೆಯಲ್ಲಿ. ದೇವ ಆಗ ದೆಹಲಿಯ ಅಮೆರಿಕನ್ ಲೈಬ್ರರಿಯಲ್ಲಿ ಗ್ರಂಥಪಾಲಕರಾಗಿದ್ದರು. ಅವರು ಒಂದು ಸಂಜೆ ಕನಾಟ್ ಪ್ಲೇಸ್‌ನ ಪುಸ್ತಕದಂಗಡಿಯಲ್ಲಿ ಸಿಕ್ಕಿದಾಗ, 'ಶಿವರಾಮ ಕಾರಂತರು ಯಾವುದೋ ಕೆಲಸದ ಮೇಲೆ ದೆಹಲಿಗೆ ಬಂದಿದ್ದು, ನಾಳೆ ನಮ್ಮ ಮನೆಗೆ ಟೀಗೆ ಕರೆದಿದ್ದೇನೆ. ಬಿಡುವಿದ್ದರೆ ನೀವೂ ಬನ್ನಿ. ಒಟ್ಟಿಗೆ ಮಾತಾಡೋಣ' ಎಂದರು. ನನಗೋ ಸ್ವರ್ಗವೇ ಧರೆಗಿಳಿದಷ್ಟು ಸಂತೋಷವಾಯಿತು. ಆಗೊಮ್ಮೆ ಈಗೊಮ್ಮೆ ಮಾತ್ರ ಸಿಗುವ ಈ ದೇವ ಈ ಸುದ್ದಿ ತಿಳಿಸಲೆಂದೇ ನನಗೆ ಇಂದು ಸಿಕ್ಕಿರಬೇಕಾದರೆ ಇದು ದೈವಲೀಲೆಯೇ ಇರಬೇಕೆಂದು ನನಗೆ ನಾನೇ ಲಘುಶೈಲಿಯಲ್ಲಿ ಹೇಳಿಕೊಂಡು ನಾನು ಬರುತ್ತೇನೆಂದು ದೇವ ಅವರಿಗೆ ಹೇಳಿಬಿಟ್ಟೆ. ಆದರೆ ನಂತರ ಭಯ ಶುರುವಾಯಿತು. ಅಷ್ಟು ದೊಡ್ಡವರ ಬಳಿ ನಾನು ಏನು ಮಾತಾಡುವುದು? ಮೊದಲೇ 'ಖಾರಂತ'ರೆಂದು ಪ್ರಸಿದ್ಧರಾದವರು. ಅವರು ಏನೋ ಕೇಳಿ, ನಾನು ಏನೋ ಉತ್ತರಿಸಿ ಅವರ ಕೋಪಕ್ಕೆ ತುತ್ತಾದರೇನು ಗತಿ ಎಂಬೆಲ್ಲ ಪ್ರಶ್ನೆಗಳು ಮನಸ್ಸಿನಲ್ಲಿ ಮೂಡಿ ಆತಂಕವೇ ಉಂಟಾಯಿತು.

ಆದರೆ ಅವರನ್ನು ಕಾಣುವ ಭಾಗ್ಯ ಇನ್ನಾವಾಗಲೋ ಎಂಬ ಪ್ರಶ್ನೆಯೂ ಎದ್ದು, ಅವರನ್ನು ಕಾಣಲು ನಿರ್ಧರಿಸಿದೆ. ಹಾಗೇ, ಸ್ವಲ್ಪ ತಡವಾಗಿ ಹೋಗಿ ಸ್ವಲ್ಪ ಕಾಲ ಇದ್ದು ಆದಷ್ಟು ಕಡಿಮೆ ಮಾತನಾಡಿ ಬರುವುದೆಂದು ತೀರ್ಮಾನಿಸಿದೆ. ದೇವ ಅವರ ಮನೆ ನಾನಿದ್ದ ಹೊಸ ರಾಜೇಂದ್ರನಗರದಲೇ ಇತ್ತು. ನನ್ನ ಕೊಠಡಿಯಿಂದ ಒಂದರ್ಧ ಮೈಲು ದೂರದಲ್ಲಿ. ನನ್ನ ಆಕಾಶವಾಣಿ ಕೆಲಸದ ಪಾಳಿ ನೋಡಿದೆ. ಸಾಯಂಕಾಲದ ಪಾಳಿ ಇತ್ತು. ನನ್ನ ಸಹೋದ್ಯೋಗಿಯೊಬ್ಬರಿಗೆ ಅರ್ಧ ತಾಸು ತಡವಾಗಿ ಬರುವುದಾಗಿ ಹೇಳಿ ಕಾರಂತರ ಭೇಟಿಗೆ ಸಿದ್ಧನಾದೆ. ಮಾರನೆಯ ದಿನ ಸಂಜೆ ಐದು ಘಂಟೆಗೆ ದೇವ ಅವರ ಮನೆಗೆ ಹೋದೆ. ಅದು ಎರಡನೇ ಮಹಡಿಯಲ್ಲಿದ್ದ 'ಬರ್ಸಾತಿ'. (ಬಹುಶಃ ಇದು ಬರ್ಸಾತ್ ಅಂದರೆ ಮಳೆಯಿಂದ ಬಂದಿರುವ ಶಬ್ದ. ಅಂದರೆ ಮನೆಯು ಮಳೆಗೆ ಒಡ್ಡಿಕೊಳ್ಳುವ ತುತ್ತ ತುದಿಯ ವಸತಿಯದು.) ನಾನು ಅವರ ಮನೆ ಹೊಕ್ಕಾಗ ಕಾರಂತರಾಗಲೇ ಬಂದು ಪುಟ್ಟ ಹಜಾರದ ಮಧ್ಯದಲ್ಲಿದ್ದ ಬೆತ್ತದ ಕುರ್ಚಿಯೊಂದರ ಮೇಲೇ ಆಸೀನರಾಗಿದ್ದರು. ಎದುರಿನ ಟೀಪಾಯ್ ಮೇಲಿದ್ದ ಯಾವುದೋ ಪುಸ್ತಕವೊಂದನ್ನು ತೆರೆದು ನೋಡುತ್ತಿದ್ದರು. ಆಗ ರಾಮಚಂದ್ರ ದೇವ ಅವರ ಆಗಿನ ಪತ್ನಿಯೂ ದೆಹಲಿಗೆ ಬಂದಿದ್ದರೆಂಬ ನೆನಪು. ದೇವ ಅಡಿಗೆ ಮನೆಯಿಂದ ಕಾಫಿ ತರಲು ಹೋಗಿದ್ದರು, ನನ್ನನ್ನು ನೋಡಿದೊಡನೆ ಕಾರಂತರು 'ಇವನಾರು?' ಎಂಬಂತೆ ಪ್ರಶ್ನಾರ್ಥಕವಾಗಿ ನನ್ನನ್ನು ದಿಟ್ಟಿಸಿ ನೋಡಿದರು. ನನ್ನ ಆಗಮನದ ಸದ್ದಿನಿಂದ ಹೊರಬಂದ ದೇವ 'ಇವರು ನಾಗಭೂಷಣ ಅಂತ. ರೇಡಿಯೋದಲ್ಲಿ ಇವರು ಓದುವ ವಾರ್ತೆ ನೀವು ಕೇಳಿರಬೇಕು! ಇಲ್ಲಿನ ಆಕಾಶವಾಣಿಯಿಂದ ಕನ್ನಡ ವಾರ್ತೆ ಓದುತ್ತಾರೆ' ಎಂದು ನನ್ನನ್ನು ಪರಿಚಯ ಮಾಡಿಕೊಡುವ ಪ್ರಯತ್ನ ಮಾಡಿದರು.

ಕಾರಂತರು ತಕ್ಷಣ ಸ್ವಲ್ಪ ವಾರೆಯಾಗಿ ನಕ್ಕು, 'ಇಂದಿರಾ ತುತ್ತೂರಿ ಓದುತ್ತಿದ್ದವರಿಗೆ ಈಗ ಮೊರಾರ್ಜಿ ತುತ್ತೂರಿ ಊದುವ ಕೆಲಸ! ಆಯಿತು, ಕೂತ್ಕೊಳ್ಳಿ' ಎಂದು ದೇವ ತಂದಿದ್ದ ಕಾಫಿ ಬಟ್ಟಲು ಎತ್ತಿಕೊಂಡರು. ನನಗೂ ಕಾಫಿ ಬಂತು. ಕಾರಂತರಿಂದ ಬಡಿಯುವ ಮುಂದಿನ ಬರಸಿಡಿಲೇನೋ ಎಂದು ತವಕದಿಂದ ಕಾಯುತ್ತಾ ನಾನೂ ಕಾಫಿ ಹೀರತೊಡಗಿದೆ.

ದೇವ, 'ಇವರು ಸಾಹಿತ್ಯ ವಿಮರ್ಶೆಯನ್ನೂ ಬರೆಯುತ್ತಾರೆ. ಇತ್ತೀಚೆಗೆ ನಿಮ್ಮ 'ಮೂಕಜ್ಜಿಯ ಕನಸುಗಳು' ಬಗ್ಗೆ ದೀರ್ಘವಾಗಿ ಬರೆದಿದ್ದಾರೆ' ಎಂದು ನನ್ನನ್ನು ಮತ್ತಷ್ಟು ಪರಿಚಯ ಮಾಡಿಕೊಡುವ ಪ್ರಯತ್ನ ಮಾಡಿದರು. ಆಗ ಕಾರಂತರಿಗೆ 'ಮೂಕಜ್ಜಿಯ ಕನಸುಗಳು'ಗಾಗಿ ಜ್ಞಾನಪೀಠ ಪ್ರಶಸ್ತಿ ಬಂದಿತ್ತು. ನಾನು ಆಗ 'ಸಾಕ್ಷಿ' ಕಾರಂತ ವಿಶೇಷ ಸಂಚಿಕೆಗೆಂದು ಕೆ.ಪಿ. ಸುಬ್ಬಣ್ಣವರ ಆಗ್ರಹದ ಮೇರೆಗೆ ಬರೆದ ಲೇಖನವೊಂದರ ಕರಡನ್ನು ದೇವ ಅವರಿಗೆ ತೋರಿಸಿದ್ದೆ. (ನಂತರ ಅದು ಅಂತಿಮ ರೂಪು ಪಡೆದು ಬೆಂಗಳೂರು ವಿಶ್ವವಿದ್ಯಾನಿಲಯದ ಸಾಹಿತ್ಯ ಪತ್ರಿಕೆ 'ಸಾಧನೆ'ಯ ಕಾರಂತ ಸಂಚಿಕೆಯಲ್ಲಿ ಪ್ರಕಟವಾಯಿತು.)

ಸ್ವಲ್ಪ ಹೊತ್ತು ಈ ಮಾತಿನ ಬಗ್ಗೆ ಆಸಕ್ತಿ ತೋರದ ಕಾರಂತರು, ಕಾಫಿ ಮುಗಿಸಿ ಬಟ್ಟಲನ್ನು ಟೀಪಾಯಿ ಮೇಲಿಟ್ಟು ಮೆಲ್ಲಗೆ 'ಜ್ಞಾನಪೀಠ ಬಂದಮೇಲೆ ವಿಮರ್ಶಕರ ಗಮನ ಆ ಪುಸ್ತಕದ ಕಡೆ ಹರಿದಿದೆ!' ಎಂದರು.

ನನಗೆ ಏನು ಮಾತಾಡಲೂ ಆತಂಕ. ಏನೂ ಮಾತಾಡಲಿಲ್ಲ. ಸುಮ್ಮನಿರಲಾಗದೆ ದೇವ ಅವರೇ 'ಇವರಿಗೆ ಅದು ಒಂದು ವೈಚಾರಿಕ ಕೃತಿಯಾಗಿ ಇಷ್ಟವಾಗಿದೆ, ಕಾದಂಬರಿಯಾಗಿ ಅಲ್ಲ!' ಎಂದು 'ಬಾಂಬ್' ಹಾಕಿಯೇ ಬಿಟ್ಟರು! ಆ ಕಾದಂಬರಿ ಕುರಿತು ದೇವ ಅವರದ್ದೂ ಅದೇ ಅಭಿಪ್ರಾಯವಿದ್ದುದರಿಂದ ಅದರ ಬಗ್ಗೆ ಕಾರಂತರ ಪ್ರತಿಕ್ರಿಯೆಯನ್ನು ತಿಳಿಯಲು ಅವರಿಗೂ ಕುತೂಹಲವಿದ್ದಂತಿತ್ತು.

ಕಾರಂತರು ನಿಧಾನವಾಗಿ 'ಏಕೆ, ಕಾದಂಬರಿಯೊಂದು ವೈಚಾರಿಕವಾಗಿರಬಾರದೋ?' ಎಂಬ ಪ್ರಶ್ನೆಯನ್ನು ನನ್ನತ್ತ ಎಸೆದರು. ಅವರ ಮುಖ ಅರ್ಧ ಗಂಟಿಕ್ಕಿದಂತಿತ್ತು. ಅಥವಾ ನನ್ನ ಗಾಬರಿಯಲ್ಲಿ ಹಾಗೆ ಕಂಡಿತೋ ಅರಿಯೆ!

ಆಗ ನನಗೆ ೨೪-೨೫ ವರ್ಷ ವಯಸ್ಸು. ವಿಮರ್ಶೆಯ ಹೊಸ ಉತ್ಸಾಹ ಮೈಮೇಲೆ ಬಂದಂತಾಯಿತು. ನನ್ನೊಳಗಿನ ಆತಂಕವನ್ನೂ ಮೀರಿ ನನ್ನ ಬಾಯಿಂದ ಈ ಮಾತು ಹೊರಟುಬಿಟ್ಟಿತು : 'ನೀವು ಅದನ್ನು ಕಾದಂಬರಿ ಎಂದು ಬರೆದಾಗ ಮೊದಲು ಅದು ಕಾದಂಬರಿಯಾಗಿರಬೇಕು ಅಲ್ಲವೆ ಸರ್?' ಈ ಮಾತನ್ನೇನೋ ಆಡಿಬಿಟ್ಟಿದ್ದೆ. ಆದರೆ ಎದೆ ಕಾರಂತರ ಪ್ರತಿಕ್ರಿಯೆಯನ್ನು ಎದುರು ನೋಡುತ್ತಾ ಡವಗುಟ್ಟುತ್ತಿತ್ತು.

'ಮೂಕಜ್ಜಿಯ ಕನಸುಗಳು'ಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ ಕಾರಂತರು ಈ ಪ್ರಶ್ನೆಯನ್ನು ಈಗಾಗಲೇ ಹಲವು ಕಡೆಗಳಿಂದ ಎದುರಿಸಿದ್ದರು. ಹಾಗಾಗಿ ಅವರು ಲೋಕಾಭಿರಾಮವಾಗಿ 'ಅನ್ನಿಸಿದ್ದನ್ನು ಒಳಗಿನ ಒತ್ತಡದಿಂದ ಒಂದು ರೂಪದಲ್ಲಿ ಬರೆಯುತ್ತೇನೆ. ಜನ ಅದನ್ನು ಕಾದಂಬರಿ ಎಂದು ಓದುತ್ತಾರೋ, ಮತ್ತೇನೆಂದು ಓದುತ್ತಾರೋ ಅದು ನನಗೆ ಸಂಬಂಧಿಸಿದ ವಿಷಯವಲ್ಲ. ಅದು ನಿಮ್ಮಂತಹ ವಿಮರ್ಶಕ ಪ್ರಭೃತಿಗಳ ವ್ಯವಹಾರ.'

ನಾನು ಮುಂದೆ ಮಾತಾಡಲು ಹಿಂಜರಿದೆ. ಏಕೆಂದರೆ ಮಾತನಾಡಲು ನನಗೆ ಏನೂ ತೋಚಲಿಲ್ಲ. ನಾನು ಮಾತನಾಡದ್ದನ್ನು ಗಮನಿಸಿದ ಕಾರಂತರು ಮಾತು ಬದಲಾಯಿಸಬೇಕೆಂದೋ ಏನೋ ಎದುರಿನ ಗೋಡೆಗೆ ತೂಗು ಹಾಕಿದ್ದ ವರ್ಣಚಿತ್ರವೊಂದರತ್ತ ಕೈ ಚಾಚಿ 'ಅದು ಯಾವ ಕಲೆ ಗೊತ್ತುಂಟೋ ಮನೆಯೊಡೆಯರೇ?' ಎಂದು ರಾಮಚಂದ್ರ ದೇವ ಅವರತ್ತ ತಮ್ಮ ಗಮನ ಹರಿಸಿದರು.

ಇದ್ದಕ್ಕಿದ್ದಂತೆ ಈ ಪ್ರಶ್ನೆ ಹಾರಿಬಂದದ್ದರಿಂದಾಗಿ ಮತ್ತು ಅದರ ಕೊನೆಯಲ್ಲಿ ವ್ಯಂಗ್ಯದ ಮೊನಚೂ ತಾಗಿದಂತಾಗಿ ದೇವ ಕ್ಷಣಕಾಲ ಅಪ್ರತಿಭರಾದಂತೆ ಮಿಕಿಮಿಕಿ ಕಣ್ಣುಬಿಡುತ್ತಾ ನನ್ನ ಕಡೆ ನೋಡಿದರು. ದೇವ ಅವರಿಗೆ ಉತ್ತರ ಗೊತ್ತಿದ್ದರೂ ತಕ್ಷಣಕ್ಕೆ ಅದು ನೆನಪಿಗೆ ಬರದ ಕಷ್ಟಕ್ಕೆ ಅವರು ಸಿಲುಕಿದಂತಿದ್ದರು. ಕೆಲವು ಕ್ಷಣಗಳ ನಂತರ ಅಲ್ಲಿನ ಬಿಗುವನ್ನು ಸಡಿಲಿಸಲು ನಾನು 'ಅದು ಮಧುಬನಿ ಕಲೆ ಇರಬಹುದು' ಎಂದೆ. ತಕ್ಷಣ ಕಾರಂತರು

'ಇರಬಹುದೇನು? ಅದೇ ಇದು! ಎಲ್ಲೋ ಓದಿಕೊಂಡಿದ್ದನ್ನು ಊಹೆಯ ಮೇಲೆ ಹೇಳಿ ಪ್ರಯೋಜನವಿಲ್ಲ. ಮನೆಗೆ ಒಂದು ಸಾಮಾನು ತಂದರೆ ಅದರ ಬಗ್ಗೆ ತಿಳುವಳಿಕೆ ಇದ್ದು ತರಬೇಕು. ಬರೀ ಅಲಂಕಾರಕ್ಕೆ ತಂದು ಪ್ರದರ್ಶನಕ್ಕಿಡುವುದಲ್ಲ. ನೀವು ಸಾಹಿತಿಗಳಿಗೂ ಚಿತ್ರಕಲೆಗೂ ಸಂಬಂಧವಿಲ್ಲವೆಂದು ತಿಳಿದಂತೆ ಕಾಣುತ್ತದೆ' ಎಂದು ನಮ್ಮಿಬ್ಬರನ್ನೂ ಒಟ್ಟಿಗೇ ತರಾಟೆಗೆ ತೆಗೆದುಕೊಂಡು ಆ ಚಳಿಯಲ್ಲೂ ಸಣ್ಣಗೆ ನಮ್ಮ ಬೆವರಿಳಿಸಿಬಿಟ್ಟರು. ಅಷ್ಟೇ ಅಲ್ಲ, ಮಧುಬನಿ ಕಲೆಯ ಬಗ್ಗೆ ಕೆಲ ವಿವರಗಳನ್ನೂ ನೀಡಿದರು. ನಂತರದಲ್ಲೇ ತಮ್ಮ ತರಾಟೆ ತುಸು ಕಟುವಾಯಿತೆಂದು ಅವರಿಗೆ ಅನ್ನಿಸಿತೋ ಏನೋ, ಮತ್ತೆ ಲೋಕಾಭಿರಾಮಕ್ಕೆ ಹಿಂದಿರುಗಿದವರಂತೆ ನನ್ನನ್ನು 'ನೀವು ಯಾವ ಕಡೆಯವರು? ಬೆಂಗಳೂರು–ಮೈಸೂರು ಕಡೆಯವರೆಂದು ಕಾಣುತ್ತದೆ. ಏನು ಓದಿದ್ದೀರಿ?' ಎಂದು ಕೇಳಿದರು.

ನಾನು ಬೆಂಗಳೂರು ಜಿಲ್ಲೆಯ ಗ್ರಾಮಾಂತರದವನೆಂದೂ, ಗಣಿತಶಾಸ್ತ್ರ ಓದಿದವನೆಂದೂ ಅವರಿಗೆ ಹೇಳಿದೆ. ಜೊತೆಗೆ ನನಗೆ ಸ್ನಾತಕೋತ್ತರ ತರಗತಿಯಲ್ಲಿ ಅರ್ಥವಾಗದಿದ್ದ 'ಕ್ವಾಂಟಮ್ ಮೆಕಾನಿಕ್ಸ್'ನ ಮೂಲ ತತ್ವ ಅರ್ಥವಾಗಿದ್ದೇ ಅವರ 'ವಿಶ್ವಕೋಶ'ದ ಸಂಬಂಧಿತ ಅಧ್ಯಾಯದಿಂದ ಎಂದೂ ತಿಳಿಸಿದೆ.

ಕಾರಂರು ಪ್ರಸನ್ನರಾದಂತೆ ಕಂಡರು. 'ಬಹುಶಃ ಆ ಅಧ್ಯಾಯ ಓದಿದವರು ನೀವೊಬ್ಬರೇ ಇರಬೇಕು! ಯಾಕೇಂದ್ರೆ ಈ ಬಗ್ಗೆ ಈವರೆಗೆ ನನ್ನ ಬಳಿ ಯಾರಾದರೂ ಪ್ರಸ್ತಾಪ ಮಾಡಿದ್ದು ನೆನಪಿಲ್ಲ' ಎಂದು ನಸುನಕ್ಕು, 'ಗಣಿತಶಾಸ್ತ್ರ ಬಿಟ್ಟು ಈ ಸ್ತೋತ್ರಪಠಣದ ಕೆಲಸಕ್ಕೆ ಏಕೆ ಬಂದಿರಿ?' ಎಂದು ಮತ್ತೆ ತಮ್ಮ ಹಳೆಯ ವ್ಯಂಗ್ಯಕ್ಕೆ ತಿರುಗಿದರು.

ಕಾರಂತರ ಈ ವ್ಯಂಗ್ಯದಲ್ಲಿ ಕಿರಿಯನೊಡನೆಯ ಸಲುಗೆಯ ಪ್ರೀತಿ ಇತ್ತೇ ಹೊರತು ಅಸಮಾಧಾನವಿರಲಿಲ್ಲ ಎಂದು ಅರಿತ ನಾನು, 'ತುರ್ತು ಪರಿಸ್ಥಿತಿ ಕಾಲದಲ್ಲಿದ್ದಂತೆ ಆಕಾಶವಾಣಿ ವಾರ್ತೆಗಳು ಈಗ ಏಕಪಕ್ಷೀಯವಾಗಿಲ್ಲ. ಬೇಕಾದರೆ ನಾಲ್ಕು ದಿನ ಕೇಳಿ ನೋಡಿ' ಎಂದೆ.

ಅದಕ್ಕವರು 'ಬಾಲ್ಯದಿಂದಲೂ ಕೇಳುತ್ತಿರುವೆ ಮಾರಾಯ! ಏರುಪೇರುಗಳು ಇದ್ದೇ ಇವೆ. ಆದರೆ ಸರ್ಕಾರಿ ಮಡಿ ಮೈಲಿಗೆಗಳು ಹೋಗುವುದಿಲ್ಲ!' ಎಂದರು.

ಆಕಾಶವಾಣಿ ಕನ್ನಡ ವಾರ್ತೆಗಳ ನಿರೂಪಣಾ ಶೈಲಿಯಲ್ಲಿ ಒಂದೆರೆಡು ಪ್ರಯೋಗಗಳನ್ನು ಮಾಡಿ ಕೆಲವು ಮಡಿ ಕೇಳುಗರ ಮತ್ತು ಮೇಲಧಿಕಾರಿಗಳ ಆಕ್ರೋಶಕ್ಕೆ ತುತ್ತಾಗಿದ್ದ ನನ್ನ ಅಭಿಪ್ರಾಯವೂ ಅದೇ ಆಗಿದ್ದುದರಿಂದ ನಾನು ಮತ್ತೇನೂ ಹೇಳದೆ, ಕೆಲಸಕ್ಕೆ ಹೊತ್ತಾಯಿತೆಂದು ಹೇಳಿ ನಮಸ್ಕರಿಸಿ ಹೊರಟೆ. ಆ ಹಿರಿಯರು ಎದ್ದು ಬಾಗಿಲವರೆಗೂ ಬಂದು ನನ್ನನ್ನು ಬೀಳ್ಕೊಟ್ಟ ರೀತಿ ನನ್ನ ಹೃದಯವನ್ನು ತಟ್ಟಿತು.

ಕಾರಂತರು ಬರೀ 'ಖಾರಂತ'ರಲ್ಲ, ಒಳಹೊಕ್ಕರೆ ಪ್ರೀತಿಯ ಗಣಿಯೇ ಹೌದು. ಆದರೆ ಅವರು ಪ್ರೀತಿ ತೋರಿಸುವ ಪರಿಯೇ ಬೇರೆ ಎಂದು ಅಂದು ಮನವರಿಕೆಯಾಗಿತ್ತು. ಹಾಗಾಗಿಯೇ ದೇವ ಅವರ ಮನೆಯ ಮಹಡಿ ಮೆಟ್ಟಿಲುಗಳನ್ನು ಇಳಿದು ರಸ್ತೆಗೆ ಬರುವ ಹೊತ್ತಿಗಾಗಲೇ ಅವರನ್ನು ಮತ್ತೊಮ್ಮೆ ಭೇಟಿಯಾಗಲು ಮನ ತುಡಿಯತೊಡಗಿತ್ತು!

ಇದು ಏಕೆಂದು ನನ್ನ ಮುಂದಿನ ಭೇಟಿಗಳಲ್ಲಿ ಇನ್ನಷ್ಟು ಸಂಕೀರ್ಣತೆಗಳೊಂದಿಗೆ ನನ್ನ ಅರಿವಿಗೆ ಬಂತು.

ಮತ್ತೆ ಕಾರಂತರ ಭೇಟಿಗೆ ವಿಧಿಲೀಲೆಯ ಆಟ!

ಶಿವರಾಮ ಕಾರಂತರನ್ನು ನಾನು ಎರಡನೇ ಬಾರಿಗೆ ಭೇಟಿ ಮಾಡುವ ಸುಯೋಗಕ್ಕಾಗಿ ಹೆಚ್ಚು ದಿನವೇನೂ ಕಾಯಬೇಕಾಗಲಿಲ್ಲ. ನಂತರದ ಒಂದು ವರ್ಷಕ್ಕೂ ಕಡಿಮೆ ಅವಧಿಯಲ್ಲೇ ಅವರು ಮತ್ತೊಮ್ಮೆ ದೆಹಲಿಗೆ ಬಂದರು. ಆಗ ನಾನು ಅವರನ್ನು ಭೇಟಿ ಮಾಡುವ ಉದ್ದೇಶವಿರಲಿಲ್ಲವಾದರೂ ಭೇಟಿ ಮಾಡುವ ಅನಿವಾರ್ಯತೆ ನನಗೆ ಇದ್ದಕ್ಕಿದ್ದಂತೆ ಉಂಟಾಯಿತು. ಈ ಅನಿವಾರ್ಯತೆ ಎಂಬ ಕಾರಣದಿಂದಾಗಿಯೇ ಈ ಭೇಟಿಯ ಮುಂದಿನ ನಿರೂಪಣೆಯಲ್ಲಿ ಕಾರಂತರು ಕಾಣಿಸಿಕೊಳ್ಳುವುದು ಸಂಕ್ಷಿಪ್ತವಾಗಿ, ಕೊನೆಯಲ್ಲಿ.

ಕಾರಂತರು ೧೯೭೬ರ (೧೯೭೭ರಲ್ಲಿ ನೀಡಲಾಗುವ) ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರಾಗಿ ದೆಹಲಿಗೆ ಬಂದಿದ್ದರು. ಆಯ್ಕೆ ಸಮಿತಿಯ ಮುಂದೆ ಕನ್ನಡ ಚಿತ್ರಗಳು ಪ್ರದರ್ಶನವಾಗುವಾಗ ಅವುಗಳ ಸಂಭಾಷಣೆಗಳನ್ನೋ, ದೃಶ್ಯಗಳನ್ನೋ ಸಮಿತಿಯ ಕನ್ನಡೇತರ ಸದಸ್ಯರಿಗೆ ಅನುವಾದಿಸಿ ಹೇಳಲು ಅಥವಾ ವ್ಯಾಖ್ಯಾನಿಸಲು ನಮ್ಮ ಆಕಾಶವಾಣಿ ಕನ್ನಡ ವಾರ್ತಾ ವಿಭಾಗದಿಂದ ಪ್ರತಿ ವರ್ಷ ಒಂದಿಬ್ಬರನ್ನು ನಿಯೋಜಿಸಲಾಗುತ್ತಿತ್ತು. ಇದಕ್ಕೆ ಪ್ರತ್ಯೇಕ ಸಂಭಾವನೆ ಇದ್ದು, ಬಹು ಬಾರಿ ಈ ನಿಯೋಜನೆ ಹಿರಿಯ ಸಿಬ್ಬಂದಿಯ ಪಾಲಾಗುತ್ತಿತ್ತು. ಅಪರೂಪಕ್ಕೆ ಒಮ್ಮೊಮ್ಮೆ ನಮ್ಮಂತಹ ಕಿರಿಯರಿಗೂ ಅವಕಾಶ ದೊರೆಯುತ್ತಿತ್ತು. ಆ ವರ್ಷ ಎರಡು ಚಿತ್ರಗಳ ಪ್ರದರ್ಶನಕ್ಕೆ ನನ್ನನ್ನು ನಿಯೋಜಿಸಲಾಗಿತ್ತು.

ನಾನು ನನ್ನ ನಿಯೋಜನೆಯ ಮೊದಲ ದಿನ ಹೋದಾಗ ಕಾರಂತರೇನೂ ಅಲ್ಲಿ ಕಾಣಲಿಲ್ಲ. ಆದರೆ ಚಿತ್ರ ಪ್ರದರ್ಶನ ಆರಂಭವಾಗಿ ಅದು ಅರ್ಧ ಮುಗಿದಿದ್ದಾಗ 'ಎಲ್ಲರೂ ಒಪ್ಪಿದರೆ ಪ್ರದರ್ಶನವನ್ನು ಇಲ್ಲಿಗೇ ನಿಲ್ಲಿಸಿ ಸ್ವಲ್ಪಹೊತ್ತು ನಾವು ಹಾಯಾಗಿ ನಿದ್ರಿಸಬಹುದು!' ಎಂಬರ್ಥದ ಇಂಗ್ಲಿಷ್ ವಾಕ್ಯಗಳು ಜೋರಾಗಿ ಕೇಳಿಬಂದಾಗ ಅದು ಕಾರಂತರ ಧ್ವನಿ ಎಂಬುದನ್ನು ತಿಳಿಯಲು ನನಗೆ ಹೆಚ್ಚುಕಾಲವೇನೂ ಬೇಕಾಗಲಿಲ್ಲ. ಕಾರಂತರು ಹಾಗೆ ಹೇಳಲು ಕಾರಣವೂ ಇತ್ತು. ಅಂದಿನ ಚಿತ್ರ ತೀರಾ ಸಾಧಾರಣವಾಗಿದ್ದು ಸದಸ್ಯರೆಲ್ಲ ಆಕಳಿಸಲಾರಂಭಿಸಿದ್ದರು ಹಾಗಾಗಿ ಪ್ರದರ್ಶನ ನಿಂತಿತು. ನಾನು ಚಿತ್ರಪ್ರದರ್ಶನ ಮಂದಿರದಲ್ಲಿ ಬೆಳಕು ಮೂಡಿದ ಮೇಲೆ ಸಮಿತಿಯ ಸದಸ್ಯರಿಗೆ ವಂದನೆ ಹೇಳಿ ಮತ್ತು ಕೆಲ ಅಗತ್ಯ ಔಪಚಾರಿಕತೆಗಳನ್ನು ಮುಗಿಸಿ ಹೊರಬಂದಾಗ ಕಾರಂತರು ಆಕಾಶವಾಣಿಯ ನಿವೃತ್ತ ಹಿರಿಯ ಅಧಿಕಾರಿ ಹಾಗೂ ಸಂಸ್ಕೃತಿ ತಜ್ಞ ನಾರಾಯಣ ಮೆನನ್ ಅರ ಜೊತೆ ಮಾತನಾಡುತ್ತಾ ನಿಂತುದನ್ನು ನೋಡಿದೆ. ಹಾಗಾಗಿ ಅಂದು ಔಪಚಾರಿಕ ವಂದನೆ ಸಲ್ಲಿಸಲೂ ಅವಕಾಶವಾಗದೆ ಹಿಂದಿರುಗಿದೆ. ಆದರೆ ಆ ದಿನ ಸಮಿತಿಯಲ್ಲಿದ್ದ ಕನ್ನಡಿಗ ಸದಸ್ಯರಾಗಿದ್ದ ಚೌಡಪ್ಪ ರೆಡ್ಡಿಯವರ (ಇವರು

ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆಯ ಹಿರಿಯ ನಿವೃತ್ತ ಅಧಿಕಾರಿ ಎಂದು ನೆನಪು) ಪರಿಚಯವಾಯಿತು.

ಮಾರನೆಯ ದಿನ ನಾನು ಕನ್ನಡ ಸುದ್ದಿ ಕೊಠಡಿಯಲ್ಲಿ ಕಾರ್ಯನಿರತನಾಗಿದ್ದಾಗ ನನಗೊಂದು ಟ್ರಂಕ್‌ಕಾಲ್ ಬಂದಿತು. ಆಗ ಈಗಿನಂತೆ ಸುಲಭ ದೂರವಾಣಿ ಸೌಲಭ್ಯವಿರಲಿಲ್ಲ. ದೂರದೂರುಗಳಿಗೆ ಕರೆ ಮಾಡಲು ತಂತಿ ಕಛೇರಿಯಲ್ಲಿ ಮೊದಲೇ ಕರೆಯ ವಿವರ ನೋಂದಾಯಿಸಿ ಸರದಿಗಾಗಿ ಕಾಯಬೇಕಿತ್ತು. ಆ ಕರೆಗಳು ಸ್ಪಷ್ಟವಿಲ್ಲದೆ ಕೂಗಿ ಮಾತಾಡಬೇಕಿತ್ತು. ಅಂದು ಅಂತಹ ಕರೆ (ಇದು ನಾನು ದೆಹಲಿಯಲ್ಲಿದ್ದಾಗ ನನಗೆ ವೈಯಕ್ತಿಕವಾಗಿ ಬಂದ ಏಕೈಕ ಕರೆ ಕೂಡ!) ನನಗೆ ಬಂದದ್ದು ಪಿ. ಲಂಕೇಶ್‌ರಿಂದ. ಅವರು ಬೆಂಗಳೂರು ಆಕಾಶವಾಣಿಗೆ ಕರೆ ಮಾಡಿ ಈ ನಮ್ಮ ಕಛೇರಿಯ ದೂರವಾಣಿ ಸಂಖ್ಯೆಯನ್ನು ಪಡೆದು ಕರೆ ಮಾಡಿದ್ದರು. ಕರೆ ಅಸ್ಪಷ್ಟವೂ, ದುಬಾರಿಯೂ ಆಗಿದ್ದುದರಿಂದ ಅವರು ಹೇಳಿದ್ದು ಇಷ್ಟೇ: 'ನೀವು ಮೆಚ್ಚಿರುವ ನನ್ನ ಚಿತ್ರ ಪಲ್ಲವಿಯನ್ನು ಈ ಬಾರಿ ರಾಷ್ಟ್ರಪ್ರಶಸ್ತಿ ಆಯ್ಕೆಗೆ ಕಳಿಸಿರುವೆ. ಚಿತ್ರದ ಮೇಲೆ ತುಂಬ ಸಾಲ ಮಾಡಿರುವೆ. ದೆಹಲಿಯಲ್ಲಿರುವ ನೀವು ಈ ಸಂಬಂಧ ಏನು ಮಾಡಲು ಸಾಧ್ಯವೋ ಅದನ್ನು ಮಾಡಬೇಕು!' ಈ ಸಂದೇಶ ಅನಿರೀಕ್ಷಿತವಾಗಿದ್ದುದರಿಂದ ನಾನು ಏನು ಹೇಳಲೂ ತೋಚದೆ 'ಆಯಿತು. ಪ್ರಯತ್ನಿಸುತ್ತೇನೆ' ಎಂದಷ್ಟೇ ಹೇಳಿ ಫೋನ್ ಇಟ್ಟೆ.

ಹೌದು ನಾನು 'ಪಲ್ಲವಿ' ಚಿತ್ರವನ್ನು ತುಂಬ ಇಷ್ಟಪಟ್ಟಿದ್ದೆ. ಅದು ಬೆಂಗಳೂರಿನಲ್ಲಿ ಪ್ರದರ್ಶಿತವಾಗುತ್ತಿದ್ದಾಗ ನಾನೊಮ್ಮೆ ಬೆಂಗಳೂರಿಗೆ ಹೋಗಿದ್ದೆ. ಅದರ ನಿರ್ಮಾಣಕ್ಕೆ ಸಾಲ ರೂಪದಲ್ಲಿ ಧನಸಹಾಯ ಮಾಡಿದ್ದ ನನ್ನ ಗೆಳೆಯ ನೆಲಮನೆ ದೇವೇಗೌಡರು ನನಗೆ ಆ ಚಿತ್ರ ತೋರಿಸಿದ್ದರು. ನನಗೆ ಚಿತ್ರ ತುಂಬ ಇಷ್ಟವಾಯಿತೆಂದು ಹೇಳಿದಾಗ ಅವರಿಗೂ ಖುಷಿಯಾಗಿ ಅಂದು ಸಂಜೆಯೇ ನನ್ನನ್ನು ಲಂಕೇಶರ ಮನೆಗೆ ಕರೆದುಕೊಂಡು ಹೋದರು. (ಆ ಹೊತ್ತಿಗಾಗಲೇ ನಾನು ಲಂಕೇಶರನ್ನು ಎರಡು ಮೂರು ಬಾರಿ ಅವರ ಮನೆಯಲ್ಲಿ ಭೇಟಿ ಮಾಡಿ ವಿವರವಾಗಿ ಮಾತಾಡಿದ್ದ ಸ್ನೇಹವಿತ್ತು. ಅದನ್ನೆಲ್ಲ ಬೇರೆಡೆ ಬರೆದಿರುವೆ.) ನನ್ನ ಹೊಗಳಿಕೆಯ ಮಾತು ಕೇಳಿ ಲಂಕೇಶರಿಗೆ ಖುಷಿಯಾಯಿತಾದರೂ, 'ನಾನು ಇನ್ನೊಮ್ಮೆ ಈ ಚಿತ್ರ ತೆಗೆಯುವುದಾದರೆ ಇನ್ನೂ ಹೆಚ್ಚು ಜೀವಂತವಾಗಿ ತೆಗೆಯಬಲ್ಲೆ. ಚಿತ್ರದಲ್ಲಿ ಕ್ಯಾಮರಾ ಹೆಚ್ಚು ಚಲಿಸುವುದೇ ಇಲ್ಲ. ಸಂಕಲನ ಒರಟಾಗಿದೆ. ಹಾಗಾಗಿ ಚಿತ್ರ ಸರಾಗವಾಗಿಲ್ಲ ಮತ್ತು ಇದರಿಂದಾಗಿ ಚಿತ್ರಕ್ಕೆ ಜಡತೆ ಆವರಿಸಿದೆ' ಎಂದು ಚಿತ್ರದ ದೌರ್ಬಲ್ಯಗಳನ್ನು ತಾವು ಕಂಡಂತೆ ನಿಷ್ಠುರವಾಗಿ ವಿಮರ್ಶಿಸಿದ್ದರು. ನಂತರ ದೆಹಲಿ ಕನ್ನಡ ಸಂಘದ ಗೆಳೆಯರ ಸಹಕಾರದಿಂದ ಅದು ದೆಹಲಿ ಕನ್ನಡಿಗರ ಮುಂದೆಯೂ ಪ್ರದರ್ಶಿತವಾಗಿತ್ತು. ಆಗಲೂ–ಲಂಕೇಶರ ಆ ವಿಮರ್ಶೆಯ ಹೊರತಾಗಿಯೂ–ನನಗೆ ಚಿತ್ರ ಇಷ್ಟವಾಯಿತು.

ಲಂಕೇಶರ ದೂರವಾಣಿ ಕರೆಯ ನಂತರ ನನ್ನಲ್ಲಿ ಒಂದು ರೀತಿಯ ಪೀಕಲಾಟ ಆರಂಭವಾಯಿತು. ನಾನು ಏನು ಮಾಡಬಹುದು? ಎಂದು ಯೋಚಿಸತೊಡಗಿದೆ.

ಆಯ್ಕೆ ಸಮಿತಿ ಅಧ್ಯಕ್ಷರು ಕಾರಂತರು! ಅವರನ್ನು ಈ ವಿಷಯದಲ್ಲಿ ಮಾತನಾಡಿಸುವ ಪ್ರಶ್ನೆಯೇ ಇಲ್ಲ. ಉಳಿದ ಸದಸ್ಯರನ್ನು ನಾನು ಕಂಡದ್ದು ಆ ದಿನ ಒಂದೇ ಬಾರಿ. ಪ್ರದರ್ಶನ ಅರ್ಧಕ್ಕೆ ನಿಂತದ್ದರಿಂದ ಸರಿಯಾಗಿ ಪರಿಚಯವೂ ಆಗಿಲ್ಲ. ಚೌಡಪ್ಪರೆಡ್ಡಿ ಒಬ್ಬರೇ ಏನು ಮಾಡಿಯಾರು? ನಾನು ಹೀಗೆ ಯೋಚಿಸಿ ಒಂದು ದಿನ ಕಳೆಯುತ್ತಿರುವಾಗಲೇ, ಲಂಕೇಶರಿಂದ ಒಂದು ಪತ್ರ ಬಂತು. ಅದರಲ್ಲಿ ಅವರು ಬಂಗಾಳಿ ಚಿತ್ರರಂಗದ ಲಾಬಿ ಬಹಳ ಪ್ರಭಾವಶಾಲಿಯಾಗಿದ್ದು ಹೊಸ ಬಗೆಯ ಚಿತ್ರಗಳನ್ನು ನೋಡಿದ ಅಭ್ಯಾಸವಿಲ್ಲದ ಕಾರಂತರನ್ನು ಅದು ಯಾಮಾರಿಸುವ ಸಾಧ್ಯತೆ ಇದೆಯೆಂದೂ ಬರೆದಿದ್ದರು. ನಿರ್ದಿಷ್ಟವಾಗಿ ಆ ವರ್ಷ ಸ್ಪರ್ಧೆಯಲ್ಲಿದ್ದ 'ಮೃಗಯಾ' ಎಂಬ ಬಂಗಾಳಿ ಚಿತ್ರದ ನಿರ್ದೇಶಕ ಮೃಣಾಲ್ ಸೇನ್‌ಗೆ ದೆಹಲಿಯ ಸಾಂಸ್ಕೃತಿಕ ವಲಯಗಳಲ್ಲಿ ಭಾರಿ ಸಂಪರ್ಕಗಳಿರುವುದರಿಂದ ತಾವು ಈ ಎಚ್ಚರಿಕೆ ವಹಿಸಬೇಕಾಗಿದೆಯೆಂದೂ ಹೇಳಿದ್ದರು. ಅವರು ಈ ಪತ್ರದಲ್ಲಿ ಚೌಡಪ್ಪರೆಡ್ಡಿಯವರ ಪ್ರಸ್ತಾಪವನ್ನೂ ಮಾಡಿ, ಅವರು ತಮ್ಮ ಗೆಳೆಯರೆಂದೂ, ಅವರ ಮೂಲಕ ಇತರ ಸದಸ್ಯರನ್ನು ಪ್ರಭಾವಿಸುವ ಪ್ರಯತ್ನ ಮಾಡಬಹುದೆಂದೂ ಸೂಚಿಸಿದ್ದರು. ಎಲ್ಲಕ್ಕಿಂತ ಮುಖ್ಯವಾಗಿ ಮತ್ತು ನಾನು ಈ ವಿಷಯದಲ್ಲಿ ವಹಿಸಬಹುದಾದ ಪಾತ್ರದ ಸೂಚನೆ ನೀಡುವಂತೆ ಅವರು 'ಸೈಟ್ ಅಂಡ್ ಸೌಂಡ್' ಎಂಬ ಬ್ರಿಟಿಷ್ ಚಲನಚಿತ್ರ ಪತ್ರಿಕೆಯೊಂದರಲ್ಲಿ (ಅದು ಬ್ರಿಟಿಷ್ ಫಿಲ್ಮ್ ಸೊಸೈಟಿಯ ಪತ್ರಿಕೆ ಎಂದು ಅಸ್ಪಷ್ಟ ನೆನಪು) 'ಪಲ್ಲವಿ' ಚಿತ್ರದ ಬಗ್ಗೆ ಲೇಖನವೊಂದು ಪ್ರಕಟವಾಗಿದ್ದು ಅದರಲ್ಲಿ ಒಳ್ಳೆಯ ಮಾತುಗಳನ್ನು ಬರೆಯಲಾಗಿದೆಯೆಂದೂ, ಆ ಪತ್ರಿಕೆ ದೆಹಲಿಯಲ್ಲಿ ಸುಲಭವಾಗಿ ದೊರಕಬಹುದಾಗಿದ್ದು ಅದನ್ನು ಹೇಗಾದರೂ ಕಾರಂತರ ಗಮನಕ್ಕೆ ತರಬೇಕೆಂದು ಲಂಕೇಶ್ ಹೇಳಿದ್ದರು.

ಈಗ 'ಸೈಟ್ ಅಂಡ್ ಸೌಂಡ್' ಪತ್ರಿಕೆಗಾಗಿ ನನ್ನ ತಲಾಶ್ ಆರಂಭವಾಯಿತು. ಇದಕ್ಕೆ ನನಗೆ ಜೊತೆಯಾದವರು, ಈಗ 'ಅಗ್ನಿ' ಶ್ರೀಧರ್ ಎಂದೇ ಪರಿಚಿತರಾಗಿರುವ ಶ್ರೀಧರಮೂರ್ತಿಯವರು. ಅವರು ಲಂಕೇಶರಿಗೆ ಆಪ್ತರಾಗಿದ್ದು, ಆಗ ಐ.ಎ.ಎಸ್ ಪರೀಕ್ಷೆಯ ಕೋಚಿಂಗ್ ಪಡೆಯಲು ದೆಹಲಿಗೆ ಬಂದಿದ್ದರು. ಅವರ ಸೋದರ ಸಂಬಂಧಿ ಕಾಳೇಗೌಡರ ಶಿಫಾರ್ಸಿನ ಮೇರೆಗೆ, ಬಾಣಂತನಕ್ಕೆಂದು ಹೆಂಡತಿಯನ್ನು ಬೆಂಗಳೂರಿಗೆ ಕಳಿಸಿದ್ದ ನನ್ನ ಗೆಳೆಯರೊಬ್ಬರ ಮನೆಯಲ್ಲಿ ಅವರ ವಾಸ್ತವ್ಯಕ್ಕೆ ಏರ್ಪಾಡು ಮಾಡಿದ್ದೆ. ಅವರಿಗೆ ದೇಹದಾರ್ಢ್ಯದ ಬಗ್ಗೆ ಇರುವಷ್ಟೇ ಸಾಹಿತ್ಯ-ಸಂಸ್ಕೃತಿಗಳ ಬಗ್ಗೆಯೂ ಒಲವು ಇದ್ದುದರಿಂದ ನಾವು ವಾರಕ್ಕೆರಡು ಮೂರು ಬಾರಿಯಾದರೂ ಪರಸ್ಪರ ಭೇಟಿ ಮಾಡುತ್ತಿದ್ದೆವು. ಅವರೂ ವಾರಕ್ಕೊಮ್ಮೆಯೋ ತಿಂಗಳಿಗೆ ಎರಡು ಬಾರಿಯೋ ದೂರದ ಟ್ಯಾಗೋರ್ ಗಾರ್ಡನ್‌ಲ್ಲಿದ್ದ ನಮ್ಮ ಮನೆಗೆ ಬಂದು ಊಟ ಮಾಡಿಕೊಂಡು ಹೋಗುತ್ತಿದ್ದರು. ನನ್ನ ಜೊತೆ ಆಗ ಆಕಾಶವಾಣಿಯ ಗುಜರಾತಿ ಸಹೋದ್ಯೋಗಿಯೊಬ್ಬರಿದ್ದು, ಅವರ ತಾಯಿ ನಮಗೆ ಅಡಿಗೆ ಮಾಡಿ ಬಡಿಸುತ್ತಿದ್ದರು. ಸರಿ, ಶ್ರೀಧರ ಮೂರ್ತಿ ಮತ್ತು ನಾನು ದೆಹಲಿಯ ಎಲ್ಲ ಪುಸ್ತಕದಂಗಡಿ ಮತ್ತು ಪತ್ರಿಕೆ ಮಾರಾಟಗಳ ಅಂಗಡಿಗಳಿಗೂ ಅಲೆದು ವಿಚಾರಿಸಿದೆವು. ಯಾರೂ ಆ ಪತ್ರಿಕೆಯ

ಹೆಸರೂ ಕೇಳಿರಲಿಲ್ಲ! ಏನು ಮಾಡಲೂ ತೋಚದೆ ನಾವಿಬ್ಬರೂ ಅಸಹಾಯಕರಾದೆವು. ಆದರೆ ವಿಧಿಲೀಲೆಯ ಆಟ ನಿಲ್ಲುವುದಿಲ್ಲವಲ್ಲ!

'ಗೆಟ್‌ಔಟ್' ಎಂದು ಹೇಳದಿದ್ದು ನಮ್ಮ ಪುಣ್ಯ! ಹೋಗಿ ಹೋಗಿ!!

ಆ ದಿನಗಳಲ್ಲಿ ನನಗೆ ಮಧ್ಯಾಹ್ನ ಮತ್ತು ಸಂಜೆಯ ಪಾಳಿಗಳಿದ್ದಾಗ ಅವುಗಳ ಮಧ್ಯೆ ಹತ್ತಿರದಲ್ಲೇ ಇದ್ದ ಗ್ರಂಥಾಲಯಗಳಿಗೆ ಹೋಗಿ ಅಷ್ಟಿಷ್ಟು ಓದಿ ಬರುವ ರೂಢಿಯಿತ್ತು. ಹೀಗೆ ಒಂದು ಮಧ್ಯಾಹ್ನ ನಮ್ಮ ಕಛೇರಿಯಿದ್ದ ಪಾರ್ಲಿಮೆಂಟ್ ಬೀದಿಗೆ ತಾಗಿಕೊಂಡಂತಿದ್ದ ಬ್ರಿಟಿಷ್ ಕೌನ್ಸಿಲ್ ಲೈಬ್ರೆರಿಗೆ ಹೋದೆ. ಅಲ್ಲಿನ ಆಕರ ಸಂಪನ್ಮೂಲ ವಿಭಾಗದಲ್ಲಿ ಅಡ್ಡಾಡುತ್ತಾ ನನಗೆ ಆಗ ಆಸಕ್ತಿ ಮೂಡಿದ್ದ ಚಲನಚಿತ್ರ ನಿರ್ದೇಶನ ಕುರಿತ ಪುಸ್ತಕಗಳನ್ನು ಹುಡುಕುತ್ತಿದ್ದಾಗ ಇದ್ದಕ್ಕಿದ್ದಂತೆ ಅಲ್ಲಿ ನನ್ನ ಇಷ್ಟದೇವತೆಯೇ ಕಣ್ಮುಂದೆ ಪ್ರತ್ಯಕ್ಷವಾದಂತೆ 'ಸೈಟ್ ಅಂಡ್ ಸೌಂಡ್' ಪತ್ರಿಕೆ ಅಲ್ಲಿನ ಕೃತಿಫಲಕವೊಂದರ ಮೇಲೆ ಥಳಥಳನೇ ಹೊಳೆಯುತ್ತಾ ಕೂತಿದೆ! ಇದೇನು ಎರಡು ದಿನಗಳ ತೀವ್ರ ಹಂಬಲದ ಅಲೆದಾಟ ಮತ್ತು ಹತಾಶೆಗಳಿಂದ ಉಂಟಾದ ಭ್ರಮೆಯೋ ಅಥವಾ ನಿಜವೋ ಎಂದು ಪರೀಕ್ಷಿಸಲು ಅದನ್ನೊಮ್ಮೆ ಮುಟ್ಟಿ ನೋಡಿ ಕೈಗೆ ತೆಗೆದುಕೊಂಡು ಹತ್ತಿರದ ಕುರ್ಚಿಯಲ್ಲಿ ಕೂತೆ. ಅದನ್ನು ಒಮ್ಮೆ ತಿರುಗಿಸಿ ನೋಡಿದೆ. ಹೌದು, ಅದರಲ್ಲಿ 'ಪಲ್ಲವಿ' ಬಗ್ಗೆ ಸಚಿತ್ರ ಲೇಖನವಿತ್ತು. ತುಂಬ ಒಳ್ಳೆಯ ಮಾತುಗಳೂ ಇದ್ದವು. ನಾನು ಕೂಡಲೇ ವಿಭಾಗದ ಮೇಲ್ವಿಚಾರಕರ ಬಳಿ ಹೋಗಿ ಆ ಪತ್ರಿಕೆಯನ್ನು ಒಂದು ದಿನದ ಮಟ್ಟಿಗಾದರೂ ಹೊರಗೆ ಕೊಡಲು ಸಾಧ್ಯವೇ ಎಂದು ಕೇಳಿದೆ. ಪರೋಕ್ಷವಾಗಿ ಕಾರಣವನ್ನೂ ಹೇಳಿದೆ. ಆದರೆ ಅವರು ಆಕರ ಸಂಪನ್ಮೂಲ ವಿಭಾಗದ ಯಾವ ಕೃತಿ/ಪತ್ರಿಕೆಯನ್ನೂ ಹೊರ ನೀಡಲಾಗುವುದಿಲ್ಲವೆಂದೂ, ಸದಸ್ಯರಿಗೆ ಬೇಕಾದರೆ ಪತ್ರಿಕೆಯ ಅವಧಿ (ಒಂದು ತಿಂಗಳು) ಮುಗಿದ ನಂತರ ಗ್ರಂಥಾಲಯ ಮುಖ್ಯಸ್ಥರು ಅನುಮತಿ ನೀಡಿದರೆ ಹೊರಗೆ ಕೊಡುವ ಸಾಧ್ಯತೆ ಇದೆ ಎಂದೂ ಹೇಳಿದರು. ಇದರಿಂದ ಸದಸ್ಯನಲ್ಲದ ನನಗೆ ಏನೂ ತೋಚದಂತಾಗಿ, ಕಣ್ಣಿಗೆ ಬಿದ್ದದ್ದು ಕೈವಶವಾಗದೇ ಹೋಯಿತಲ್ಲ ಎಂಬ ವಿಷಾದದೊಡನೆ ಕಟ್ಟಡದಿಂದ ಹೊರಬಿದ್ದೆ.

ಮಾರನೆಯ ಬೆಳಿಗ್ಗೆ ಸಿಕ್ಕ ಶ್ರೀಧರ್‌ಗೆ ಬೇಸರದಿಂದ ಈ ವಿಷಯ ತಿಳಿಸಿದೆ. ಅವರು ತಣ್ಣಗೆ ಆ ಲೈಬ್ರರಿ ಎಲ್ಲಿದೆ ಎಂದು ಕೇಳಿದರು. ನಾನು ವಿವರ ಹೇಳಿ, ಬಹುಶಃ ಅವರೂ ಆ ಪತ್ರಿಕೆಯನ್ನು ಓದಿ ಸಂತೋಷಪಟ್ಟು ಬರುವವರೆಂದು ಭಾವಿಸಿ ನನ್ನ ಕೆಲಸಕ್ಕಾಗಿ ಕಛೇರಿಗೆ ಹೋದೆ. ನಾನು ಕೆಲಸಕ್ಕೆ ಕೂತ ಒಂದು ತಾಸಿಗೂ ಕಡಿಮೆ ಅವಧಿಯಲ್ಲೇ ನನಗೆ ಒಂದು ಕ್ಷಣ ಹೊರಬಂದು ಹೋಗಬೇಕೆಂದು ನಮ್ಮ ಕಛೇರಿಯ ಸ್ವಾಗತಕಾರ ಕೊಠಡಿಯಿಂದ ಶ್ರೀಧರ್‌ರ ಕರೆ ಬಂದಿತು. ಏನು ತುರ್ತು ಕೆಲಸವೋ ಎಂದು ನಾನು ಕಛೇರಿಯ ಹೊರಗೆ ಬಂದಾಗ ಅಲ್ಲಿ ಶ್ರೀಧರ್ ನನಗಾಗಿ ತವಕದಿಂದ ಕಾಯುತ್ತಿದ್ದಾರೆ. ನಾನೂ ಸ್ವಲ್ಪ ಆತಂಕದಿಂದಲೇ ಏನೆಂದು ವಿಚಾರಿಸಿದರೆ ಅವರು

ಮೆಲ್ಲಗೆ ಅಂಗಿಯ ಒಳಗಿಂದ ಆ 'ಸೈಟ್ ಅಂಡ್ ಸೌಂಡ್' ಪತ್ರಿಕೆಯನ್ನು ತೆಗೆದು, 'ಈಗ ಏನು ಮಾಡಬೇಕು, ಹೇಳಿ!' ಎಂದು ಅವಸರದಿಂದ ನನ್ನನ್ನು ಕೇಳುತ್ತಿದ್ದಾರೆ! ನನಗೆ ಗಾಬರಿಯೇ ಆಗಿ ಒಂದು ಕ್ಷಣ ಏನೂ ತೋಚದೇ ಹೋಯಿತು! 'ಹೇಗೆ ತಂದಿರಿ ಇದನ್ನ ಶ್ರೀಧರ್?' ಎಂದು ಕೇಳಿದರೆ, 'ಹೇಗೋ ತಂದೆ! ಅದೀಗ ಬೇಡ! ಈಗ ಏನು ಮಾಡಬೇಕು ಬೇಗ ಹೇಳಿ' ಎಂದು ಅವಸರಿಸುತ್ತಿದ್ದಾರೆ! ನಾನು ಮುಂದೆ ಏನೂ ಮಾತಾಡಲಾಗದೆ 'ಇದನ್ನು ಈ ಕೂಡಲೇ ಹೇಗಾದರೂ ಚೌಡಪ್ಪರೆಡ್ಡಿಯವರಿಗೆ ತಲುಪಿಸಿ' ಎಂದು ತಿಳಿಸಿದೆ. ಅವರು ಕೂಡಲೇ ಅಲ್ಲಿಂದ ಹೊರಟರು.

ಆ ಮಧ್ಯಾಹ್ನ ಮತ್ತೆ ಬ್ರಿಟಿಷ್ ಲೈಬ್ರೆರಿಗೆ ಹೋಗಿ ಆ ಪತ್ರಿಕೆಯಲ್ಲಿನ 'ಪಲ್ಲವಿ' ಕುರಿತ ಲೇಖನದ ಛಾಯಾ ಪ್ರತಿ ತೆಗೆಯುವ ಅವಕಾಶ/ಸೌಲಭ್ಯವಿದ್ದರೆ ಅದಕ್ಕಾಗಿ ಕೋರಿಕೆ ಸಲ್ಲಿಸಬೇಕು. ಅದು ಸಾಧ್ಯವಾಗದಿದ್ದರೆ ಸ್ವತಃ ನಾನೇ ಕೆಲವು ಟಿಪ್ಪಣಿಗಳನ್ನು ಮಾಡಿಕೊಂಡು ಬರಬೇಕೆಂದಿದ್ದ ನಾನು ಆ ಭೇಟಿಯನ್ನು ಊಹಿಸಿಕೊಳ್ಳಲೂ ಭಯಪಟ್ಟು ನನ್ನ ಕಛೇರಿ ಕೆಲಸಕ್ಕೆ ಹಿಂದಿರುಗಿದೆ. ಅಂದು ಮಾತ್ರವಲ್ಲ, ನಾನು ದೆಹಲಿಯಲ್ಲಿರುವವರೆಗೂ ನಾನು ಆ ಲೈಬ್ರೆರಿಯ ಕಡೆ ಕಾಲಿಡುವ ಧೈರ್ಯ ಮಾಡಲಿಲ್ಲ. ನಾನು ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದಾಗಲೂ ಆ ಇಡೀ ಮಧ್ಯಾಹ್ನ ಇದೊಂದೇ ಪ್ರಶ್ನೆ ನನ್ನನ್ನು ಕಾಡುತ್ತಿತ್ತು : ಸರ್ಪಗಾವಲಿರುವ ಆ ಕಟ್ಟಡದ, ಅದೂ ಎರಡನೇ ಮಹಡಿಯಿಂದ ಶ್ರೀಧರ್ ಈ ಪತ್ರಿಕೆಯನ್ನು ಹೇಗೆ ಅಪಹರಿಸಿಕೊಂಡು ತಂದಿರಬಹುದು? ಅಥವಾ ಬೇರೆಲ್ಲಿಂದಾದರೂ ತಂದರೋ? ಅವರು ಏನೂ ಹೇಳಲೊಲ್ಲರು!

ಎರಡು ದಿನಗಳ ನಂತರ ಮತ್ತೆ ನಾನು ಅನಿರೀಕ್ಷಿತವಾಗಿ ಚಿತ್ರ ಪ್ರದರ್ಶನವೊಂದರ ಅನುವಾದಕ್ಕೆ ಹೋಗಬೇಕಾಗಿ ಬಂತು. ಅದೂ ಒಂದು ಆಕಸ್ಮಿಕವೇ. ಅಂದು ಆ ಕರ್ತವ್ಯಕ್ಕೆ ನಿಯೋಜಿತರಾಗಿದ್ದ ನನ್ನ ಹಿರಿಯ ಸಹೋದ್ಯೋಗಿಯೊಬ್ಬರಿಗೆ ತುರ್ತು ಕೌಟುಂಬಿಕ ಕೆಲಸ ಬಿದ್ದು, ಅವರ ಕೋರಿಕೆಯ ಮೇರೆಗೆ ನಾವು ನಿಯೋಜನೆಗಳನ್ನು ಅದಲುಬದಲು ಮಾಡಿಕೊಂಡು ಅಂದಿನ ಚಿತ್ರ ಪ್ರದರ್ಶನಕ್ಕೆ ನಾನು ಹೋಗಬೇಕಾಯಿತು. ಅಲ್ಲಿ ಹೋಗಿ ನೋಡಿದರೆ ಅಂದಿನ ಪ್ರದರ್ಶನ 'ಪಲ್ಲವಿ'ಯದ್ದೇ ಆಗಿತ್ತು! ಇದು ವಿಧಿಲೀಲೆಯಲ್ಲದಿದ್ದರೆ ಮತ್ತಾವುದು ವಿಧಿಲೀಲೆ? ನಾನು ಅತಿ ಉತ್ಸಾಹದಿಂದ ನನ್ನ ಅಕ್ಕಪಕ್ಕ ಕೂತಿದ್ದ ಕನ್ನಡೇತರ ಸದಸ್ಯರಿಗೆ ಚಿತ್ರದ ಪ್ರತಿ ದೃಶ್ಯಾವಳಿಯ ಸಂಭಾಷಣೆ ಮತ್ತು 'ಅರ್ಥಪೂರ್ಣತೆ'ಯನ್ನು ವಿವರಿಸಿದೆ. ನಾನು ಪ್ರದರ್ಶನದ ಮೊದಲೇ ಅವರಿಗೆ ಲಂಕೇಶ್ ಕನ್ನಡದ ಎಂತಹ ಮುಖ್ಯ ಲೇಖಕರೆಂದು ವಿವರಿಸುವ ಮೂಲಕ ನನ್ನ ಸಾಹಿತ್ಯಾಭಿರುಚಿಯನ್ನೂ, ಅದರ ಭಾಗವಾಗಿ ಲಂಕೇಶರ ಬಗೆಗಿನ ನನ್ನ ಪ್ರೀತಿಯನ್ನೂ ಸೂಚ್ಯವಾಗಿ ನಿರೂಪಿಸಿದ್ದುದರಿಂದಾಗಿ ನನ್ನೀ ಅತಿ ಉತ್ಸಾಹ ಅವರಿಗೆ ಅನುಮಾನಾಸ್ಪದವಾಗಿ ಕಂಡಿರಲಾರದು. ಅಂದು ನಾನು ಕಾರಂತರು ಪ್ರದರ್ಶನಕ್ಕೆ ಬಂದಿದ್ದಾರೋ ಇಲ್ಲವೋ ಎಂಬುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳದೆ. (ಆ ಹೊತ್ತಿಗೆ 'ಸೈಟ್ ಅಂಡ್ ಸೌಂಡ್' ಅವರ ಕೈ ತಲುಪಿ ಅವರು ಬೇರೆ ತರ ಯೋಚನೆ ಮಾಡಿದ್ದರೆ ಗತಿಯೇನು ಎಂಬ ಭಯ ನನಗೆ!) ಎದುರಿಗೆ ಬಂದ ಚೌಡಪ್ಪರೆಡ್ಡಿಯವರು ನನಗೆ

ಏನೋ ಹೇಳಲು ತವಕಿಸುತ್ತಿದ್ದರೂ, ನನಗೆ ಬೇರೊಂದು ತುರ್ತು ಕೆಲಸವಿದೆ ಎಂದೂ, ನಾಳೆ ನಾಡಿದ್ದರಲ್ಲಿ ಕಾಣುತ್ತೇನೆಂದೂ ಹೇಳಿ ವಾಪಸ್ ಬಂದುಬಿಟ್ಟೆ.

ಮಾರನೆಯ ದಿನವೋ, ಆ ನಂತರದ ದಿನವೋ ಸಮಿತಿ ಸಭೆಯ ಕೊನೆಯ ದಿನ. ನಾನು ಸಂಜೆ ಕರ್ನಾಟಕ ಭವನಕ್ಕೆ ಹೋಗಿ ಚೌಡಪ್ಪರೆಡ್ಡಿಯವರನ್ನು ಕಂಡೆ. ಅವರು ಮಾಡಬಹುದಾದದ್ದನ್ನೆಲ್ಲ ಮಾಡಿದ್ದರು. ಕಾರಂತರಿಗೂ ಆ ಲೇಖನ ತೋರಿಸಿದ್ದಾಗಿ ಹೇಳಿದರು. ನನಗೆ ಕಾರಂತರ ಸಂಕ್ಷಿಪ್ತ ಪರಿಚಯವಿರುವುದಾಗಿ ಹೇಳಿದಾಗ 'ಹೌದೇ! ಹಾಗಿದ್ದರೆ ನೀವೂ ಒಮ್ಮೆ ಹೋಗಿ ಕಾರಂತರನ್ನು ಕಂಡು ಪರೋಕ್ಷವಾಗಿ ಇದರ ಪ್ರಸ್ತಾಪ ಮಾಡಿದರೆ ಒಳ್ಳೆಯದು' ಎಂದರು.

ನನಗೆ ಕಾರಂತರನ್ನು ಮತ್ತೊಮ್ಮೆ ಕಂಡು ಮಾತಾಡುವ ಆಸೆಯೇನೋ ಇತ್ತು. ಆದರೆ 'ಶಿಫಾರ್ಸಿ'ಗಾಗಿ ಎಂಬಂತೆ ಹೋದರೆ ಇನ್ನೊಮ್ಮೆ ಭೇಟಿ ಸಾಧ್ಯವಾಗದಂತಹ ಬೈಗುಳಗಳಿಗೆ ಒಳಗಾಗಿ ಬರುವ ಭಯವೂ ಇತ್ತು. ಲಂಕೇಶರ ಮೇಲಿನ ಅಭಿಮಾನ, ಅದಕ್ಕಿಂತ ಹೆಚ್ಚಾಗಿ 'ಪಲ್ಲವಿ' ಚಿತ್ರದ ಮೇಲಿನ ಪ್ರೀತಿ ನನ್ನನ್ನು ಒಳಗೇ ಒತ್ತುತ್ತಿದ್ದವು. ಈ ಒತ್ತಡವನ್ನು ತಡೆಯಲಾರದೆ ಹುಚ್ಚು ಧೈರ್ಯ ಮಾಡಿ ಕೊನೆಗೆ ಅವರಿದ್ದ ಕೊಠಡಿಯ ಬಾಗಿಲ ಬಳಿ ಹೋಗಿಯೇ ಬಿಟ್ಟೆ!

ಬಾಗಿಲು ಅರ್ಧ ತೆರೆದಿತ್ತು. ಕಾರಂತರು ಮಂಚದ ತುದಿಗೆ ಕೂತು ಕಾಫಿ ಹೀರುತ್ತಿದ್ದರು. ನಾನು ಅರ್ಧ ಭಯದಿಂದಲೇ 'ಬರಬಹುದಾ ಸಾರ್?' ಎಂದೆ. ಅವರು ನನ್ನತ್ತ ನೋಡಿ, 'ಬನ್ನಿ' ಎಂದರು. ನನಗೆ ಎದುರಿನ ಕುರ್ಚಿಯಲ್ಲಿ ಕೂರಲು ಹೇಳಿ, ನನ್ನನ್ನು ಎಲ್ಲೋ ನೋಡಿದ ನೆನಪಿಗೆ ಸಿಕ್ಕವರಂತೆ 'ನಿಮ್ಮನ್ನು ಎಲ್ಲೋ ನೋಡಿದಂತಿದೆ' ಎಂದರು. ನಾನು ನನ್ನ ಪರಿಚಯ ಹೇಳಿದಾಗ ಹುಬ್ಬು ಹಾರಿಸುತ್ತಾ 'ಓ ತುತ್ತೂರಿ ಕಲಾವಿದರು!' ಎಂದು ನಕ್ಕರು. ಕಾಫಿ ಕುಡಿಯುತ್ತೀರಾ ಎಂದು ಕೇಳಿದರು. ನಾನು ಬೇಡ, ಈಗ ತಾನೇ ಕುಡಿದೆ ಎಂದು ಹೇಳಿದಾಗ 'ಏನು ಸಮಾಚಾರ? ಹೇಗಿದೆ ಹೊಸ ಸರ್ಕಾರ? ನೀವೇ ತಾನೇ ಅದರ ವಕ್ತಾರರರು!' ಎಂದು ಔಪಚಾರಿಕ ಮಾತುಗಳನ್ನು ತಮ್ಮ ಎಂದಿನ ಲಘುಶೈಲಿಯಲ್ಲೇ ಆರಂಭಿಸಿದರು.

ಆ ಸಂದರ್ಭದಲ್ಲಿ ಈ ಸಂಬಂಧವಾಗಿ ಏನೆಲ್ಲ ಮಾತನಾಡಿದೆನೋ, ಅವರೇನು ಪ್ರತಿಕ್ರಿಯಿಸಿದರೋ ನನಗೆ ಅಷ್ಟಾಗಿ ನೆನಪಿಲ್ಲ. ಏಕೆಂದರೆ ಅವೆಲ್ಲ ಔಪಚಾರಿಕ ಮಾತುಗಳಾಗಿದ್ದವು ಮತ್ತು ನನ್ನ ಗಮನವೆಲ್ಲ 'ಪಲ್ಲವಿ ಚಿತ್ರದ ಬಗ್ಗೆ ಮಾತಾಡುವುದರಲ್ಲಿತ್ತು. ಆ ಈ ಮಾತುಗಳೆಲ್ಲ ಒಂದೆರಡು ನಿಮಿಷಗಳಲ್ಲಿ ಮುಗಿದ ನಂತರ ನಾನು ನೇರವಾಗಿ ವಿಷಯಕ್ಕೆ ಬಂದು, 'ಈ ಬಾರಿ ಸಿನಿಮಾಗಳು ಹೇಗಿವೆ ಸಾರ್?' ಎಂದು ಲೋಕಾಭಿರಾಮವಾಗಿ ಕೇಳಿದೆ. ಅದಕ್ಕವರು 'ನಾನು ಸಿನಿಮಾ ಹೆಚ್ಚು ನೋಡುವುದಿಲ್ಲ. ಅಡ್ವಾನಿಯವರ (ಆಗ ಅವರು ಸಮಾಚಾರ ಮತ್ತು ಪ್ರಸಾರ ಖಾತೆಯ ಸಚಿವರು) ವೈಯಕ್ತಿಕ ಕೋರಿಕೆ ಮೇರೆಗೆ ಈ ಸ್ಥಾನ ಒಪ್ಪಿಕೊಂಡಿದ್ದೇನೆ. ಇಷ್ಟೊಂದು ಸಿನಿಮಾ ಒಟ್ಟಿಗೆ ನೋಡುವುದು ಒಂದು ಹಿಂಸೆ! ಆದರೂ ಕೆಲವು ಸಿನಿಮಾಗಳನ್ನು ಚೆನ್ನಾಗಿ ಮಾಡಿದ್ದಾರೆ. ಖುಷಿಯಾಗಿದೆ' ಎಂದರು. ನಾನು ಕೇಳಲೋ ಬೇಡವೋ

ಎಂಬ ದ್ವಂದ್ವದಲ್ಲೇ 'ನಿಮಗೆ ಯಾವ ಚಿತ್ರ ತುಂಬ ಇಷ್ಟವಾಯ್ತು ಸಾರ್?' ಎಂದು ಕೇಳಿ ಆತಂಕದಲ್ಲೇ ಅವರ ಉತ್ತರವನ್ನು ಎದುರು ನೋಡುತ್ತಾ ಕೂತೆ. ಅವರು ತುಸು ಕಾಲ ಯೋಚಿಸಿದವರಂತೆ, 'ಒಂದು ಅಂತ ಹೇಳಲಾಗುವುದಿಲ್ಲ. ಇದು ಪ್ರಶಸ್ತಿ ಕೊಡುವ ಬಾಬತ್ತು. ವೈಯಕ್ತಿಕ ಇಷ್ಟ ಮುಖ್ಯವಲ್ಲ. ಸಮಾಲೋಚನೆ ಮಾಡಬೇಕು. ಆಗ ನನಗೂ ಹೊಸ ವಿಷಯ ತಿಳಿದು ಒಂದೊಂದು ಸಿನಿಮಾದ ಬಗ್ಗೆಯೂ ಅಂತಿಮವಾಗಿ ಏನೂಂತ ತೀರ್ಮಾನಿಸಬಹುದು' ಎಂದು ಸಮಾಧಾನವಾಗಿಯೇ ಉತ್ತರಿಸಿ ನನ್ನ ಮುಂದಿನ ಮಾತಿಗೆ ವಿಶ್ವಾಸ ತುಂಬಿದರು. ನಾನು 'ನಮ್ಮ ಕನ್ನಡ ಸಿನಿಮಾಗಳು ಹೇಗಿದ್ದವು ಸಾರ್?' ಎಂದೆ. ಅದಕ್ಕವರು ಕೂಡಲೇ 'ಆ ನಮ್ಮ ನಿಮ್ಮ ಎಂಬುದು ಇಲ್ಲಿ ನಡೆಯುವುದಿಲ್ಲ! ಅವೂ ಇತರ ಸಿನೆಮಗಳಂತೆಯೇ!' ಎಂದಷ್ಟೇ ಹೇಳಿ ಸುಮ್ಮನಾಗಿಬಿಟ್ಟರು.

ಮುಂದೆ ನಾನು ಕೇಳಲೋ ಬೇಡವೋ ಎಂಬ ಆತಂಕದಿಂದಲೇ 'ಲಂಕೇಶರ ಪಲ್ಲವಿ ನೋಡಿದಿರಾ? ಹೇಗನಿಸಿತು?' ಎಂದು ಕೇಳಿಯೇಬಿಟ್ಟೆ!

ಕಾರಂತರ ಮುಖ ಕೂಡಲೇ ಬದಲಾದಂತೆ ನನಗೆ ಕಂಡು ನಾನು ಅವರ ಮುಂದಿನ ಪ್ರತಿಕ್ರಿಯೆ ಏನಾಗಿರುತ್ತದೋ ಎಂದು ಊಹಿಸುತ್ತಾ ಅದನ್ನೆದುರಿಸಲು ಸಿದ್ಧತೆ ಮಾಡಿಕೊಳ್ಳತೊಡಗಿದೆ. ಆದರೆ ಅವರು ಬಾಯಿಬಿಡುವ ಮುನ್ನವೇ ಚೌಡಪ್ಪರೆಡ್ಡಿಯವರು ಕೊಠಡಿ ಬಳಿ ಬಂದು ಒಳಗೆ ಬರಬಹುದೇ ಎಂದು ಕೇಳಿದರು. ಕಾರಂತರ ಗಮನ ಬಾಗಿಲ ಕಡೆ ಹೋಗಿ, 'ಬನ್ನಿ' ಎಂದು ತಾವು ಎದ್ದು ಕುರ್ಚಿಯ ಮೇಲೆ ಆಸೀನರಾದರು. ಈ ಚಲನೆಗಳಿಂದಾಗಿ ಅಲ್ಲಿನ ಪರಿಸ್ಥಿತಿಯೇ ಬದಲಾದಂತಾಯಿತು! ನಂತರ ಕಾರಂತರು 'ಇವರ ಪರಿಚಯ ಇದೆಯಾ?' ಎಂದು ನನ್ನನ್ನು ಪರಿಚಯಿಸಲು ಹೊರಟರು. ಆದರೆ ಒಳಗೆ ಬಂದ ಚೌಡಪ್ಪ ರೆಡ್ಡಿಯವರು ನನ್ನನ್ನು ತಾವೇ ಕಾರಂತರ ಬಳಿಗೆ ಕಳಿಸಿದುದನ್ನೂ, ಅದರ ಉದ್ದೇಶವನ್ನೂ ಮರೆತಂತೆ ಅಥವಾ ತಮ್ಮ ಸ್ವಭಾವ ಸಹಜ ನೇರವಂತಿಕೆಯಿಂದಲೋ, ಭೋಳೆತನದಿಂದಲೋ ನನ್ನ ಮತ್ತು ಕಾರಂತರ ಮಾತು ಮುಟ್ಟಿದ್ದ ಹಂತದ ಸೂಕ್ಷ್ಮವನ್ನು ಅರಿಯದವರಾಗಿ, 'ಅಯ್ಯೋ ಇವರು ಗೊತ್ತಿಲ್ಲದೆ ಏನು? ದಿನಾ ಬೆಳಿಗ್ಗೆ ಇವರ ವಾರ್ತೆ ಕೇಳಲೇಬೇಕಲ್ಲ! ಇವರೇ ನಾನು ನಿಮಗೆ ಓದಲು ಕೊಟ್ಟ ಸೈಟ್ ಅಂಡ್ ಸೌಂಡ್ ಪತ್ರಿಕೆಯನ್ನು ತರಿಸಿಕೊಟ್ಟವರು!' ಎಂದು ಘೋಷಿಸಿಬಿಟ್ಟರು. ನನಗೋ ಆಕಾಶವೇ ತಲೆ ಮೇಲೆ ಕಳಚಿ ಬಿದ್ದಂತಾಯಿತು. ಕಾರಂತರು ನನ್ನ ಮುಖವನ್ನೊಮ್ಮೆ ಪರೀಕ್ಷಿಸುವಂತೆ ನೋಡುತ್ತಾ ನಿರ್ಣಾಯಕ ಧ್ವನಿಯಲ್ಲಿ ತಟಕ್ಕನೆ ಹೇಳಿದರು : 'ಹೌದೇ? ಇರಲಿ. ನಾಳೆ ಬೆಳಿಗ್ಗೆ ಆಯ್ಕೆ ಸಮಿತಿಯ ಅಂತಿಮ ಸಭೆ ಇದೆ. ಕೆಲವು ಟಿಪ್ಪಣಿ ಮಾಡಿಕೊಳ್ಳಬೇಕು. ನೀವಿಬ್ಬರೂ ದಯವಿಟ್ಟು ಇಲ್ಲಿಂದ ಹೊರಡಬಹುದು.' ನನಗೆ ದೂರದಲ್ಲೆಲ್ಲೋ ಸಿಡಿಲು ಬಡಿದ ಶಬ್ದ ಕೇಳಿದಂತಾಗಿ ಆ ಗಾಬರಿಯಲ್ಲೂ ಕಾರಂತರಿಗೆ ನಮಸ್ಕರಿಸಿ ಅಲ್ಲಿಂದ ಎದ್ದೆ.

ಚೌಡಪ್ಪರೆಡ್ಡಿಯವರು ಮಾಡಿದ ಅನಾಹುತದಿಂದಾಗಿ ಕಾರಂತರನ್ನು ಇನ್ನೆಲ್ಲಿ ಜೀವನವಿಡೀ ಭೇಟಿಯಾಗದಂತಾಗುವುದೋ ಎಂದು ಭಯ-ಸಂಕೋಚ-ಆತಂಕಗಳಿಂದ ಮುದುಡಿಹೋಗಿದ್ದ ನಾನು ಸದ್ಯ ಇಷ್ಟಕ್ಕೇ ಮುಗಿಯಿತಲ್ಲಾ ಎಂದು

ನಿಟ್ಟುಸಿರಿಟ್ಟು ಅವರ ಕೋಣೆಯಿಂದ ಹೊರಬಂದೆ. ಜೊತೆಗೆ ಬಹುಶಃ ನಾವೇ–ನಾನು ಮತ್ತು ಚೌಡಪ್ಪರೆಡ್ಡಿಯವರು–'ಪಲ್ಲವಿ'ಗೆ ಅನ್ಯಾಯ ಮಾಡಿಬಿಟ್ಟೆವೇನೋ ಎಂಬ ಆತಂಕವೂ ಶುರುವಾಯಿತು. ಆದರೆ ನನ್ನೊಂದಿಗೇ ಕಾರಂತರ ಕೊಠಡಿಯಿಂದ ಹೊರಬಂದ ಚೌಡಪ್ಪರೆಡ್ಡಿಯವರು ಯಾವ ಭಾವನೆಗೂ ಒಳಗಾಗದವರಂತೆ 'ಹೋದ ಕೆಲಸ ಏನಾಯಿತು?' ಎಂದು ಕೇಳುತ್ತಾ 'ಬನ್ನಿ ಇಲ್ಲೇ ಊಟ ಮಾಡಿಕೊಂಡು ಹೋಗುವಿರಂತೆ' ಎಂದು ಒತ್ತಾಯಿಸುತ್ತ ನನ್ನನ್ನು ಹಿಂಬಾಲಿಸಿದರು. ನನಗೋ ರೆಡ್ಡಿಯವರ ವರ್ತನೆಗೆ ಮೈಯೆಲ್ಲ ಉರಿದುಹೋಗಿ, 'ನಿಮ್ಮ ವರ್ತನೆಯಿಂದ ಕಾರಂತರು ನಮಗೆ ಗೆಟ್‌ಔಟ್ ಎಂದು ಹೇಳದಿದ್ದು ಪುಣ್ಯ. ಹೋಗಿ, ಹೋಗಿ!' ಎಂಬ ಮಾತು ಬಾಯಿಗೆ ಬಂದರೂ ಗಾಂಧಿ ಟೋಪಿ ಧರಿಸಿದ್ದ ಆ ಹಿರಿಯರನ್ನು ಅವರಿಗೆ ವಿದಾಯ ಹೇಳುವ ಮುನ್ನ ನೋಯಿಸಬಾರದೆಂಬ ವಿವೇಕ ನನ್ನಲ್ಲಿ ಉದಿಸಿ, 'ಎಲ್ಲ ಇನ್ನೊಂದೆರಡು ದಿನಗಳಲ್ಲಿ ಗೊತ್ತಾಗುತ್ತಲ್ಲ ಬಿಡಿ' ಎಂದು ಚುಟುಕಾಗಿ ಉತ್ತರಿಸಿ, ಯಾವುದೋ ತಿಕ್ಕಲು ಕ್ಷಣದಲ್ಲಿ ಹುಲಿ ಬೋನನ್ನು ಪ್ರವೇಶಿಸಿ ದೈವಕೃಪೆಯಿಂದೆಂಬಂತೆ ಆ ತಿಕ್ಕಲುತನದ ದುಷ್ಪರಿಣಾಮಗಳನ್ನು ಎದುರಿಸದೆ ಹೊರಬಂದ ನೆಮ್ಮದಿಯಲ್ಲಿ ಮನೆ ಕಡೆ ಹೊರಟೆ.

ಅದಾದ ಮೂರು ದಿನಗಳಲ್ಲಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳು ಪ್ರಕಟವಾದವು. ಮೃಗಯಾ'ಕ್ಕೆ ಸುವರ್ಣಪದಕ ಲಭಿಸಿತ್ತು. ಆದರೆ 'ಪಲ್ಲವಿ'ಗೂ ನ್ಯಾಯ ದೊರಕಿತ್ತು. ಲಂಕೇಶರಿಗೆ ಆ ವರ್ಷದ ಮೊದಲ ಪ್ರಯತ್ನದ ಅತ್ಯುತ್ತಮ ಚಿತ್ರ ನಿರ್ದೇಶನಕ್ಕಾಗಿ ಬಂಗಾರದ ಪದಕ ಪ್ರಕಟವಾಗಿತ್ತು. ನಾನೊಮ್ಮೆ ಮನಸ್ಸಿನಲ್ಲೇ 'ಜೈ ಕಾರಂತ' ಎಂದು ನನಗೆ ನಾನೇ ಹೇಳಿಕೊಂಡೆ!

(ಫೇಸ್‌ಬುಕ್ ಬರಹ : ಏಪ್ರಿಲ್ ೧೪–೧೫–೧೬–೧೭, ೨೦೧೮)

ವಚನ ಚಳುವಳಿ ಮತ್ತು
ಸಮಾಜವಾದ ಕೆಲವು ಪ್ರಶ್ನೋತ್ತರಗಳು

(ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಪತ್ರಿಕೆ 'ಮಹಾಮನೆ'ಯ ಪರವಾಗಿ ಕೇಳಿದ ಪ್ರಶ್ನೆಗಳಿಗೆ ನನ್ನ ಉತ್ತರಗಳು)

೧. ಸಮಾಜವಾದ ಎಂಬ ಹೆಸರಿಲ್ಲದಿದ್ದರೂ, ಇವತ್ತು ಸಮಾಜವಾದವೆಂದು ಕರೆಯಬಹುದಾದ ಧೋರಣೆಗಳನ್ನು ಮುಂದಿಟ್ಟುಕೊಂಡು ಒಂದು ಹೊಸ ಹಾಗೂ ಚಲನಶೀಲ ಸಮಾಜ ನಿರ್ಮಾಣಕ್ಕೆ ಕ್ರಿಯಾತ್ಮಕವಾಗಿ ಹೋರಾಡಿದ ವಚನಕಾರರ ನಿಲುವುಗಳನ್ನು, ರಾಮಮನೋಹರ ಲೋಹಿಯಾ ಅವರ ಸಮಾಜವಾದದ ನೆಲೆಯಲ್ಲಿ ತಾವು ಅರ್ಥೈಸುವ ಬಗೆ ಹೇಗೆ?

ಸಮಾಜವಾದದ ರಾಜಕೀಯ ವೈಭವದ ಕಾಲ ಮುಗಿದು ಹೋದ ಮೇಲೂ ಬಸವಣ್ಣನನ್ನು ಜಗತ್ತಿನ ಮೊದಲ ಸಮಾಜವಾದಿ ಎಂದು ಘೋಷಿಸಿಕೊಂಡು ವಚನವೈಭವವನ್ನು ಸಾರುವ ಅನೇಕ ಶರಣ ಜನರನ್ನು ನಾನು ನೋಡಿದ್ದೇನೆ; ಆಶ್ಚರ್ಯಪಟ್ಟಿದ್ದೇನೆ. ಇವರಿಗೆ ಎಂಟು ನೂರು ವರ್ಷಗಳಲ್ಲಿ ಚರಿತ್ರೆ ದಾಪುಗಾಲುಗಳನ್ನಿಟ್ಟು ಬೆಳೆದಿದೆ ಎಂಬ ಪರಿವೆಯೇ ಇದ್ದಂತಿಲ್ಲ! ಅದು ರಾಜಪ್ರಭುತ್ವದ ಸಾಮಂತಶಾಹಿ ಕಾಲಘಟ್ಟವಾಗಿದ್ದರೆ ಇದು ಯಂತ್ರನಾಗರಿಕತೆಯ ಆಧುನಿಕ ಕಾಲ. ಶರಣ-ವಚನ ಚಳುವಳಿ ಯಾವ ಕಾಳಜಿಗಳ ಸುತ್ತ ತನ್ನನ್ನು ಕಟ್ಟಿಕೊಂಡಿತ್ತೋ ಆ ಜಾತಿ-ವರ್ಗ-ಲಿಂಗ ಸಂಬಂಧಗಳು ಈ ಕಾಲದಲ್ಲಿ ಸಾಕಷ್ಟು ಪಲ್ಲಟಗೊಳ್ಳಲಾಗಿವೆ ಎಂಬುದೂ ಅವರಿಗೆ ತಿಳಿದಂತಿಲ್ಲ. ಹಾಗಾಗಿಯೇ ಅವರು ಪುಂಖಾನುಪುಂಖವಾಗಿ ವಚನಗಳನ್ನು ಉಲ್ಲೇಖಿಸುತ್ತಾ ಅಲ್ಲಿರುವುದು ಸಮಾಜವಾದವೇ ಎಂದು ಗಂಟಲು ಹರಿಯುವಂತೆ ಹೇಳುತ್ತಿದ್ದರೂ ಜನಸಮೂಹ ಅಲುಗಾಡುತ್ತಿಲ್ಲ.

ಕರ್ನಾಟಕದ ಮಟ್ಟಿಗೆ ವಚನ ಸಾಹಿತ್ಯದ ಪಾರಂಪರಿಕ ಪಾರಾಯಣಿಕತೆಯನ್ನು ಅನೇಕ ಸಂಘ-ಸಂಸ್ಥೆ-ಪರಿಷತ್ತುಗಳ ಮೂಲಕ ಪೋಷಿಸಿಕೊಳ್ಳುವ ಜನಸಮೂಹದ ಒಂದು

ಗಣನೀಯ ಭಾಗವಾದರೂ ಸಮಾಜವಾದಕ್ಕೆ ಒಲಿದಿದ್ದರೆ ಸಾಕಿತ್ತು, ಸಮಾಜವಾದ ಇಂದು ಭ್ರಷ್ಟಗೊಳ್ಳದೆ ಒಂದು ರಾಜಕೀಯ ಆದರ್ಶವಾಗಿ ಪ್ರಸ್ತುತವಾಗಿರುತ್ತಿತ್ತು. ಬದಲಿಗೆ ಈ ಜನಸಮೂಹ ಸಮಾಜವಾದಕ್ಕೆ ತದ್ವಿರುದ್ಧವಾದ ರಾಜಕೀಯ ಚಿಂತನೆಯನ್ನು ಪ್ರತಿನಿಧಿಸುವ ರಾಜಕಾರಣದೊಂದಿಗೆ ತನ್ನನ್ನು ತಾನು ಗುರುತಿಸಿಕೊಂಡಿತು ಮತ್ತು ಆ ಮೂಲಕ ವಚನಸಾಹಿತ್ಯದೊಂದಿಗೆ ನೆಪಮಾತ್ರವಾಗಿಯಾದರೂ ಉಳಿದಿದ್ದ ಸಂಬಂಧವನ್ನು ಕಳೆದುಕೊಂಡಿತು. ಈ ವಿಪರ್ಯಾಸಕ್ಕೆ ಕಾರಣ, ಶರಣ ಚಳುವಳಿ ಎಂಬುದು ಒಂದು ಜಾತಿಯಾಗಿ ಗಟ್ಟಿಗೊಂಡು ವಚನಸಾಹಿತ್ಯ ಜಾತಿ ಆಸ್ತಿಯಂತಾಗಿ ವಚನಗಳು ಕೇವಲ ಗಿಳಿಪಾಠಗಳಾಗಿದ್ದು. ಆದುದರಿಂದ ವಚನಸಾಹಿತ್ಯವನ್ನು ಒಂದು ಸಂಪನ್ಮೂಲವಾಗಿ ಜಾತಿ ಬಂಧನದಿಂದ ಬಿಡುಗಡೆಗೊಳಿಸದೆ, ಸಮಾಜವಾದ ಅಥವಾ ಲೋಹಿಯಾ ವಿಚಾರಗಳೊಂದಿಗೆ ಅದರ ತುಲನೆ ಮಾಡುವುದು ಸಮಾಜವಾದಕ್ಕೆ ಮಾಡುವ ಅಪಚಾರವಾಗುತ್ತದೆ.

ಅಕಡೆಮಿಕ್ ಅಧ್ಯಯನದ ಮಾತಾಗಿ ಹೇಳುವುದಾದರೆ, ವಚನ ಸಾಹಿತ್ಯ ಭಕ್ತಿ ಪಂಥದ ಮೂಸೆಯಲ್ಲಿ ಹುಟ್ಟಿದುದಾದರೆ ಸಮಾಜವಾದ ವೈಚಾರಿಕತೆಯ ಮೂಸೆಯಲ್ಲಿ ಹುಟ್ಟಿದುದಾಗಿದೆ. ಭಕ್ತಿ ಮಾರ್ಗವೂ ಜ್ಞಾನ ಮಾರ್ಗವೂ ಅವಿನಾ ಸಂಬಂಧ ಹೊಂದಿರುವ ನೆಲೆಯಲ್ಲಿ ವಚನ ಸಾಹಿತ್ಯಕ್ಕೂ ಸಮಾಜವಾದಿ ಆಶಯಗಳಿಗೂ ಸಂಬಂಧವಿರುವುದನ್ನು ಗುರುತಿಸಬಹುದು. ವಿಶೇಷವಾಗಿ, ಲೋಹಿಯಾರಿಂದ ಪ್ರಚುರವಾದ ಗಾಂಧಿ ಪ್ರಣೀತ ಸಮಾಜವಾದದ ವಿಷಯದಲ್ಲಿ. ಕೈಗಾರಿಕಾ ಕ್ರಾಂತಿ ಉಂಟುಮಾಡಿದ ಸಾಮಾಜಿಕ ವಿಷಮತೆಗಳನ್ನು ಪರಿಹರಿಸುವ ಒಂದು ಮಾರ್ಗವಾಗಿ ಭೌತವಾದಿ ಚಿಂತನೆಯಾಗಿ ಯೂರೋಪ್‌ನಲ್ಲಿ ಹುಟ್ಟಿಕೊಂಡ ಸಮಾಜವಾದ, ಭಾರತದಲ್ಲಿ ರಾಜಕಾರಣವು ಗಾಂಧಿ ಸ್ಪರ್ಶದಿಂದ ಆಧ್ಯಾತ್ಮೀಕರಣಗೊಂಡು ಲೋಹಿಯಾ ಸಮಾಜವಾದದ ರೂಪದಲ್ಲಿ ಭೌತ-ಅಭೌತಗಳ ಸಿಕ್ಕಿನಿಂದ ಬಿಡುಗಡೆಯಾಯಿತು. ಲೋಹಿಯಾ ಪ್ರಣೀತ ಸಮಾಜವಾದವನ್ನು ಆಧ್ಯಾತ್ಮಿಕವಾದ ಎಂದು ಬಿಡುಬೀಸಾಗಿ ಕರೆಯಲಾಗದಿದ್ದರೂ, ಸಮಾಜವಾದದ ಕೇಂದ್ರ ಆಶಯವಾದ ಸಮಾನತೆಯನ್ನು ಅದು ವ್ಯಾಖ್ಯಾನಿಸಿದ ರೀತಿ ಮತ್ತು ಅದನ್ನು ಅನುಷ್ಠಾನಗೊಳಿಸಲು ಅದು ಸೂಚಿಸಿದ ಕಾರ್ಯಕ್ರಮಗಳು ಕೇವಲ ವೈಚಾರಿಕ ಸ್ವರೂಪದವಾಗಿರಲಿಲ್ಲ. ಉದಾಹರಣೆಗೆ ಸಮಾನತೆ ಎಂಬ ಶಬ್ದದ ಬರೀ ಬಾಹ್ಯತೆಯನ್ನು ಗಮನಿಸಿದ ಲೋಹಿಯಾ ಅದನ್ನು ತಮ್ಮ ಸಮಾಜವಾದಿ ಸಂಕಥನದಲ್ಲಿ ಸಮತೆ ಎಂದು ಪುನರ್ವ್ಯಾಖ್ಯಾನಿಸಿದರು. ಸಮತೆ ಎಂದರೆ ಅಂತರಿಕ ಸಮತೋಲನವೂ ಸೇರಿಬಿಡುತ್ತದೆ. ಅಂದರೆ ಸಮಾನತೆಯ ರಾಜಕೀಯ ಪ್ರಯತ್ನಗಳು ಮನುಷ್ಯನಲ್ಲಿ ಒಂದು ಅಂತರಿಕ ಸಮತೋಲನವನ್ನು ಉಂಟು ಮಾಡುವಂತಿರಬೇಕು. ಅವನನ್ನು ಮತ್ತಷ್ಟು ಕೆರಳಿಸುವಂತಿರಬಾರದು; ಸಾಮಾಜಿಕ ಅಶಾಂತಿಗೆ ಕಾರಣವಾಗುವಂತಿರಬಾರದು. ಹಾಗಾಗಿಯೇ ಲೋಹಿಯಾ ಸಮಾಜವಾದವೆಂದರೆ ಮನುಷ್ಯನಲ್ಲಿ ಅಂತರಿಕ ಶಾಂತಿ ಮತ್ತು ಬಾಹ್ಯ ಬಂಧುತ್ವವನ್ನು ಸ್ಥಾಪಿಸುವುದೇ ಆಗಿದೆ. ಇದು ಅಧ್ಯಾತ್ಮವಲ್ಲದಿದ್ದರೆ ಮತ್ತಾವುದು ಅಧ್ಯಾತ್ಮ? ಈ ಮನಃಸ್ಥಿತಿಯ ಸ್ಥಾಪನೆಗಾಗಿ ಲೋಹಿಯಾ ಪ್ರತಿಪಾದಿಸಿದ್ದು,

ವೈಜ್ಞಾನಿಕ ಅನ್ವೇಷಣೆಗಳು ಅನಾವರಣಗೊಳಿಸಿದ್ದ ತಂತ್ರಜ್ಞಾನದ ಕ್ರಾಂತಿಕಾರಕತೆಯ ಮರುಳಿನಲ್ಲಿ ಜಗತ್ತು ನಡೆದಿದ್ದ ಮಿತಿ ಇಲ್ಲದ ಸುಖಜೀವನದ ದಾರಿಗೆ ಪ್ರತಿಯಾಗಿ ಮಿತಿಗಳಿರುವ ಒಂದು ಸಾಮಾಜಿಕ ಸಮರಸದ ಸರಳ ಸಭ್ಯ ಜೀವನಶೈಲಿ. ಈ ಮಿತಿಗಳ ಆದರ್ಶದ ಹಿಂದೆ ಇದ್ದುದು ನಾವು ಬದುಕುವ ಭೂಮಿಗೂ ಮತ್ತು ಸುಖ ಅನುಭವಿಸುವ ನಮ್ಮ ದೇಹಕ್ಕೂ ಒಂದು ಮಿತಿ ಎಂಬ ಅರಿವು. ಈ ಅರಿವಿಗೆ ಕಾರಣವಾಗಿದ್ದುದು 'ಈ ಭೂಮಿ ಎಲ್ಲರ ಅಗತ್ಯಗಳನ್ನು ಪೂರೈಸಬಲುದೇ ಹೊರತು ಎಲ್ಲರ ಆಸೆಗಳನ್ನಲ್ಲ' ಎಂಬ ಗಾಂಧಿಯವರ ದ್ರಷ್ಟಾರ ನುಡಿ.

ವಚನ ಸಾಹಿತ್ಯ ಕೂಡ ಒಂದು ಧರ್ಮ ಪ್ರತಿಪಾದನೆಯ ಸಿದ್ಧಾಂತವಾಗಿ ಸಹಜವಾಗಿಯೇ ತನ್ನ ಕೇಂದ್ರ ಕಾಳಜಿಯನ್ನಾಗಿ ಮಾಡಿಕೊಂಡದ್ದು ಆಸೆಯ ನಿರ್ವಹಣೆಯನ್ನೇ. ಆದರೆ ಎಲ್ಲ ತಥಾಕಥಿತ ಧರ್ಮಗಳ ಕೇಂದ್ರ ಕಾಳಜಿಯೂ ಇದೇ ಆಗಿದ್ದು, ಶರಣ ಧರ್ಮದ ವಿಶೇಷವೆಂದರೆ ಈ ಆಸೆಯನ್ನು ಅದು ವ್ಯಾಖ್ಯಾನಿಸಿಕೊಂಡ ರೀತಿ ಮತ್ತು ಅದನ್ನು ನಿರ್ವಹಿಸಲು ಕಂಡುಕೊಂಡ ಮಾರ್ಗ. 'ಒಡಲುಗೊಂಡವ ಹಸಿವ, ಒಡಲುಗೊಂಡವ ಹುಸಿವ... ನೀನೊಮ್ಮೆ ಒಡಲುಗೊಂಡು ನೋಡಾ ರಾಮನಾಥ' ಎಂದೆನ್ನುತ್ತಾ ವಚನಸಾಹಿತ್ಯದ ಮೂಲಪುರುಷನೆನಿಸಿದ ದೇವರ ದಾಸಿಮಯ್ಯ ದೇಹವನ್ನೇ ಕೇಂದ್ರವಾಗಿಟ್ಟುಕೊಂಡು ತನ್ನ ಆಧ್ಯಾತ್ಮವನ್ನು ಕಟ್ಟಿಕೊಳ್ಳುವ ಪರಿ ಸಮಾಜವಾದಿ ತಾತ್ವಿಕತೆಗೆ ಹತ್ತಿರವಾದದ್ದು. ಅಕ್ಕಮಹಾದೇವಿಯ 'ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲಡೆ ಹಾವಿನ ಸಂಗವೇ ಲೇಸು ಕಂಡೆಯ್ಯಾ! ಕಾಯದ ಸಂಗವ ವಿವರಿಸಬಲ್ಲಡೆ ಕಾಯದ ಸಂಗವೇ ಲೇಸು ಕಂಡಯ್ಯಾ!' ಎನ್ನುವ ವಚನವಂತೂ ವಚನ ಸಾಹಿತ್ಯದ ವಿಶಿಷ್ಟ ಆಧ್ಯಾತ್ಮಿಕತೆಯನ್ನು ಅದ್ಭುತ ಸಾಹಿತ್ಯ ಸೌಂದರ್ಯದೊಂದಿಗೆ ಕಟ್ಟಿಕೊಡುವುದಲ್ಲದೆ, ಸಮಾಜವಾದ ಹೇಳುವ ಆಂತರಿಕ ಶಾಂತಿ ಮತ್ತು ಬಾಹ್ಯಬಂಧುತ್ವವನ್ನು ಸಾಧಿಸಲು ಬೇಕಾದ 'ಕಾಯದ ಸಂಗದ ವಿವರಣೆ'ಯ ಮಾತಾಡುತ್ತದೆ. ಮಿತಿಯಿಲ್ಲದ ಆಸೆಯ ವಿಷವೇರದ ಹಾಗೆ ಮೋಹವೆಂಬ ಕಾಯದ ಗುಣದ ಮೇಲೆ ನಿಗಾ ಇಡುವುದು, ಅದರ ಅಗತ್ಯಗಳನ್ನು ನಿರಾಕರಿಸುವ ವೈರಾಗ್ಯದ ಅಧ್ಯಾತ್ಮಕ್ಕಿಂತ ಲೇಸು ಎನ್ನುತ್ತಾಳೆ ಅಕ್ಕ ಇಲ್ಲಿ. ಇನ್ನು 'ಹೆಣ್ಣು ಮಾಯೆಯಲ್ಲ, ಹೊನ್ನು ಮಾಯೆಯಲ್ಲ, ಮನದ ಮುಂದಣ ಆಸೆಯೇ ಮಾಯೆ' ಎಂದ ಅಲ್ಲಮ, ಬಸವಣ್ಣ ಆರಂಭಿಸಿದ ಶರಣ ಆಂದೋಲನವನ್ನು ಗುರುತಿಸಿದ ಪರಿಯನ್ನು ಹೇಳುವ ಈ ವಚನವನ್ನು ಗಮನಿಸಬೇಕು:

> ಸಮತೆಯೆಂಬ ಕಂಥೆಯ ತೊಟ್ಟು
> ಸುಬುದ್ಧಿಯೆಂಬ ಟೊಪ್ಪರವನಿಕ್ಕಿ
> ವಿಷಯವೆಂಬ ಹಾವುಗೆ ಮೆಟ್ಟಿ
> ತಮಂಧವೆಂಬ ಕುಳಿಯ ಬೀಳದೆ
> ವೈರಾಗ್ಯವೆಂಬ ಕೊರಡನೆಡಹದೆ

ಮದವೆಂಬ ಚೇಳ ಮೆಟ್ಟದೆ
ಗುಹೇಶ್ವರನ ಶರಣ ಬಂದೆನು
ಭಿಕ್ಷೆಯನಿಕ್ಕೈ, ಸಂಗನ ಬಸವಣ್ಣ!

ಈ ವಚನವನ್ನು ಒಂದು ಕಡೆ 'ಒಡಲಿಚ್ಚೆಯ ಸಲಿಸದೆ ಒಂದರೆಕ್ಷಣವಿರಬಾರದು' ಎನ್ನುವ ಅಲ್ಲಮನದೇ ವಚನ ಎಂಬುದನ್ನು ಗಮನಿಸಿ ಅರ್ಥೈಸಿಕೊಂಡಾಗ ಇಲ್ಲಿ ಬರುವ ಸುಬುದ್ಧಿ, ತಮಂಧ, ವೈರಾಗ್ಯ, ಆವುಗೆ ಮುಂತಾದ ಪರಮಾರ್ಥಕೋಶದ್ದೆಂದು ಅನ್ನಿಸುವ ಶಬ್ದಗಳು ಹೇಗೆ ವಿರುದ್ಧ ದಿಕ್ಕಿನಲ್ಲಿ ತಮ್ಮ ಅರ್ಥಗಳನ್ನು ಬಿಟ್ಟುಕೊಡುತ್ತಾ ಸಮತೆ ಎಂಬ ಮೌಲ್ಯ ಸಂಗ್ರಹದ ಕಂಥೆಯನ್ನು ಲೌಕಿಕಗೊಳಿಸುತ್ತವೆ ಎಂದು ಅರಿವಾಗುತ್ತದೆ. ಇನ್ನು ಬಸವಣ್ಣ ನೀಡಿದ ಭಿಕ್ಷೆಯಲ್ಲಿ ಏನೆಲ್ಲ ಇತ್ತು ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಕಾಯಕ ಘನತೆಯ ಸ್ಥಾಪನೆಯ ಮೂಲಕ ಜಾತಿ ಶ್ರೇಣೀಕರಣದ ನಾಶ, ದಾಸೋಹ ಕಲ್ಪನೆಯ ಮೂಲಕ ಸಿರಿಗರ ಹೊಡಿಸಿಕೊಂಡ ವರ್ಗದ ಆತ್ಮ ಜಾಗೃತಿ ಮುಖ್ಯವಾದ ಭಿಕ್ಷೆಗಳು. ಇವು ಲೋಹಿಯಾ ಸಮಾಜವಾದ ಹೇಳುವ ಆಂತರಿಕ ಶಾಂತಿ ಮತ್ತು ಬಾಹ್ಯಬಂಧುತ್ವ ಸಾಧಿಸುವ ಸಾಧನಗಳೇ ಹೌದು.

ಹೀಗೆ ಇವು ಒಂದು ರೀತಿಯಲ್ಲಿ ನಮ್ಮ ಕಾಲದ ಸಮಾಜವಾದ ತನ್ನ ಮುಂದಿಟ್ಟುಕೊಂಡ ಆಶಯಗಳೇ ಆದರೂ, ಅವುಗಳನ್ನು ಆಗು ಮಾಡಿಕೊಳ್ಳುವಲ್ಲಿ ಆ ಎರಡೂ ವಿದ್ಯಮಾನಗಳು ಎದುರಿಸಿದ ಸವಾಲುಗಳೇ ಬೇರೆ ತೆರನವು ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಶರಣ ಚಳುವಳಿ ನಡೆದದ್ದು ಉತ್ಪಾದನಾ ಶಕ್ತಿಗಳು ಮತ್ತು ಸಂಬಂಧಗಳು ಸ್ಥಳೀಯವಾಗಿ ಸರಳವಾಗಿದ್ದಾಗ ಮತ್ತು ಒಂದು ಬಹುಸೀಮಿತ ಪ್ರದೇಶದ ಸಾಮಂತಿಕೆಯ ರಾಜಕಾರಣದ ಆವರಣದಲ್ಲಿ. ಆದರೆ ಸಮಾಜವಾದ ಎದುರಿಸಬೇಕಾದದ್ದು ಯಂತ್ರನಾಗರಿಕತೆ ಮತ್ತು ಅದು ಹುಟ್ಟುಹಾಕಿದ ಬಂಡವಾಳಶಾಹಿ ರಾಜಕಾರಣದ ಸಂಕೀರ್ಣ ಉತ್ಪಾದನಾ ಶಕ್ತಿಗಳ ಸಂಬಂಧಗಳನ್ನು ಹಾಗೂ ಸ್ಪರ್ಧಾತ್ಮಕ ರಾಜಕಾರಣದ ಸವಾಲುಗಳನ್ನು ಎಂಬುದನ್ನು ನೆನಪಿಸಿಕೊಂಡಾಗ ಜಾತಿಕಾಯಕ-ಲಿಂಗ ಸಂಬಂಧಗಳ ಬಗೆಗಿನ ಆ ಕಾಲದ ವಚನಗಳನ್ನು ಉಲ್ಲೇಖಿಸಿ ಇವರೆಡರ ಹೋಲಿಕೆಗೆ ತೊಡಗುವುದು ಸುಲಭ ಕ್ರಾಂತಿಕಾರಕತೆ ಮಾತ್ರ ಅನ್ನಿಸಿಕೊಳ್ಳುತ್ತದೆ.

೨. ವಚನಕಾರರು ನಡೆಸಿದ ಜಾತಿವಿನಾಶ ಹೋರಾಟ ಕುರಿತಂತೆ ನಿಮ್ಮ ಅನಿಸಿಕೆಗಳೇನು?

ಜಾತಿ ವಿನಾಶದ ಇಂದಿನ ಕಲ್ಪನೆಗೂ ಅಂದಿನ ಕಲ್ಪನೆಗೂ ಮತ್ತು ಆ ಸಂಬಂಧದ ಹೋರಾಟದ ಮಾರ್ಗಗಳಿಗೂ ಐತಿಹಾಸಿಕ ಸಂದರ್ಭಾನುಸಾರದ ವ್ಯತ್ಯಾಸಗಳಿವೆ. ಹಾಗಾಗಿ ವಚನಕಾರರು ಜಾತಿ ವಿನಾಶದ ಹೋರಾಟ ನಡೆಸಿದರು ಎನ್ನುವುದೇ ಒಂದು ಅಪೂರ್ಣ ಮತ್ತು ಅಸಮರ್ಪಕ ಹೇಳಿಕೆ. ಜಾತಿ ಅಥವಾ ಕುಲಗಳ ಅಹಂಕಾರ ಮತ್ತು ಅವಮಾನಗಳ ಮಿಥ್ಯೆಗಳನ್ನು ಒಡೆಯುವ ಪ್ರಯತ್ನವಷ್ಟೇ ಶರಣ ಚಳುವಳಿ ಮೂಲಕ ಆಗಿದ್ದರೆ, ಸಮಾಜವಾದಿ ಚಳುವಳಿ ಜಾತಿ ವ್ಯವಸ್ಥೆಯ ಹಿಂದಿರುವ ವೃತ್ತಿ, ಆಸ್ತಿ ಮತ್ತು

ಅಧಿಕಾರ ಸಂಬಂಧಗಳ ಪುನಾರಚನೆಯ ಗುರಿ ಹೊಂದಿದೆ. ಆದರೆ ಸಮಾಜವಾದದ ಗುರಿ ಶರಣ ಚಳುವಳಿಯ ವಿಸ್ತರಣೆಯೆಂದು ಹೇಳುವುದು ತಪ್ಪಾಗಲಾರದು.

೩. ಮಹಿಳೆಯರ ಹಕ್ಕು ಸ್ಥಾಪನೆ ಮತ್ತು ಪುರುಷರೊಂದಿಗೆ ಅವರನ್ನು ಸಮಾನ ನೆಲೆಯಲ್ಲಿ ಕಾಣುವ ವಚನಕಾರರ ಅಪೂರ್ವ ದೃಷ್ಟಿಕೋನದ ಬಗ್ಗೆ ನಿಮ್ಮ ಪ್ರತಿಕ್ರಿಯೆ.

ಶರಣ ಚಳುವಳಿಯಲ್ಲಿ ಕಂಡುಬರುವ ಲಿಂಗ ಸಮಾನತೆಯ ಸ್ವರೂಪವು ಪಶ್ಚಿಮದ, ಅದೂ ಬಂಡವಾಳಶಾಹಿ ಸಂಸ್ಕೃತಿಯ ಒಡಲಲ್ಲಿ ಮೂಡಿದ ಸ್ತ್ರೀಸ್ವಾತಂತ್ರ್ಯ ಚಳುವಳಿಯ ಒಣ ಒಣವೆನ್ನಿಸುವ ಲೌಕಿಕ ಸಾಧನೆಗಳಿಗೆ ಹೋಲಿಸಿದರೆ ಹೆಚ್ಚು ಸಂಕೀರ್ಣವೂ ಆಳದ್ದೂ ಎನಿಸುತ್ತದೆ. ಪ್ರಾತಿನಿಧಿಕವಾಗಿ ಅಕ್ಕ- ಚನ್ನಮಲ್ಲಿಕಾರ್ಜನ ನೀಲಮ್ಮ-ಬಸವಣ್ಣ ಕದಿರೆಮ್ಮೆವ್ವೆ-ಆಕೆಯ ಗಂಡ ಈ ಸಂಬಂಧಗಳನ್ನು ಕುರಿತ ವಚನಗಳನ್ನು ಗಮನಿಸಿದರೆ ನನ್ನ ಮಾತು ಹೆಚ್ಚು ಅರ್ಥವಾದೀತು. ಶರಣ ಚಳುವಳಿಯಲ್ಲಿ ಗಂಡು ಗಂಡಾಗಿ ಮತ್ತು ಹೆಣ್ಣು ಹೆಣ್ಣಾಗಿ ಉಳಿದೂ ವ್ಯಕ್ತವಾಗಿರುವ ಲಿಂಗ ಸಮಾನತೆಯ ಭವ್ಯ ಸೌಂದರ್ಯ ಆಧುನಿಕ ಲಿಂಗ ಸಮಾನತೆಯನ್ನು ಅಣಕಿಸುವಂತಿದೆ. ಇದಕ್ಕೆ ಕಾರಣ ಬಹುಶಃ ಸಮಾಜದ ಕೆಳ ಸ್ತರಗಳಿಂದಲೇ ಬೆಳೆದು ಹಬ್ಬಿದ ಅದರ ವ್ಯಾಪ್ತಿ ಮತ್ತು ಸ್ಪರ್ಶಿಸಿದ ವೈವಿಧ್ಯಮಯವಾದ ಲಿಂಗ ಸಂಬಂಧಿಯಾದ ನೆಲೆಗಳು.

೪. ಕಾಯಕ ಮತ್ತು ದಾಸೋಹಗಳು ಅಪೂರ್ವ ಆರ್ಥಿಕ ತತ್ವಗಳಾಗಿ ಇಂದು ಪಡೆಯುವ ಮಹತ್ವ ಎಷ್ಟು? ಹಾಗೆಯೇ, ಸಿರಿಗರ ಹೊಡೆದವರನ್ನು ಕಟುವಾಗಿ ಟೀಕಿಸಿದ ವಚನಕಾರರ ಬಡವ-ಬಲ್ಲಿದ ಸಮಾನತೆಯುಳ್ಳ ಸಮಾಜ ರಚನೆಯ ಗುರಿಯ ಬಗೆಗೆ ನಿಮ್ಮ ಅನಿಸಿಕೆ ಏನು?

ಮೊದಲ ಪ್ರಶ್ನೆಗೆ ನೀಡಿದ ಉತ್ತರದಲ್ಲೇ ಈ ಪ್ರಶ್ನೆಗೂ ಉತ್ತರವಿದೆ. ಒಂದು ಮಾತು ಸೇರಿಸುವುದಾದರೆ, ದಾಸೋಹದಂತಹ ಕಾರ್ಯಕ್ರಮಗಳು ಸರಳ ಬದುಕಿನ ಸಣ್ಣ ಗಾತ್ರದ ಸಮಾಜದಲ್ಲಿ ಮಾತ್ರ ಸಂಘಟಿಸಲು ಸಾಧ್ಯವೇನೋ. ಹಾಗಾಗಿ ಅದರ ಮತ್ತು ಸಿರಿಗರದ ಮಾತಿನ ಹೆಚ್ಚು ಉತ್ಪ್ರೇಕ್ಷೆ ಬೇಡ. ಹಾಗೆ ಮಾಡಿದರೆ ಇಂದಿನ ಕಾರ್ಪೋರೇಟ್ ದಾನ-ಧರ್ಮಗಳೂ ದಾಸೋಹ ಎನಿಸಿಕೊಂಡಾವು!

೫. ಶೋಷಣೆಯೇ ಪ್ರಧಾನವಾದ ಪರಂಪರಾಗತ ಧರ್ಮಗಳಿಗೆ ಪ್ರತಿರೋಧ ಒಡ್ಡಿದ ಶರಣಧರ್ಮವು ಮತ್ತೆ 'ಭಕ್ತ' ಮತ್ತು 'ಭವಿ' ಎಂಬ ವರ್ಗೀಕರಣ ಮಾಡಿತು ಎನ್ನುತ್ತಾರೆ ಕೆಲವರು. ಆದರೆ, ಮತ್ತೆ ಕೆಲವರು 'ಭಕ್ತ' ಮತ್ತು 'ಭವಿ' ಎಂಬ ಪರಿಕಲ್ಪನೆಗಳನ್ನು ಧಾರ್ಮಿಕ ವರ್ತುಳದಲ್ಲಿಟ್ಟು ನೋಡುವ ಬದಲು, ವಚನಕಾರರ ಸಮಾನತೆಯ ಮತ್ತು ಪ್ರಗತಿಪರ ಸಿದ್ಧಾಂತಗಳನ್ನು ಒಪ್ಪಿ ಆ ಹೋರಾಟದಲ್ಲಿ ತನ್ನನ್ನು ತಾನು ಕ್ರಿಯಾಶೀಲವಾಗಿ ತೊಡಗಿಸಿಕೊಂಡವ 'ಭಕ್ತ', ಹಾಗೂ ಅದನ್ನೊಪ್ಪದ ಮೂಲಭೂತವಾದಿ 'ಭವಿ' ಎಂದು ಅರ್ಥೈಸಿದ್ದೂ ಉಂಟು. ಯಾವುದು ಸರಿ ನಿಮ್ಮ ಅಭಿಪ್ರಾಯದಲ್ಲಿ?

ಶರಣ ಚಳುವಳಿಯನ್ನು ಸಾರಾಸಗಟಾಗಿ ಸಮರ್ಥಿಸಿಕೊಳ್ಳುವ ಅಗತ್ಯವಿಲ್ಲ. ಯಾವುದೇ ಒಂದು ಆಂದೋಲನ ಒಂದು ಗುರಿ ಅಥವಾ ಉದ್ದೇಶಕ್ಕಾಗಿ ಜನರನ್ನು ಸಂಘಟಿಸತೊಡಗಿದಾಗ ಆ ಗುರಿ-ಉದ್ದೇಶಗಳನ್ನು ಒಪ್ಪದೆ ಹೊರಗೆ ಉಳಿದ ಜನರನ್ನು 'ಬೇರೆ'ಯಾಗಿ ವಿಂಗಡಿಸುವುದು ಸಹಜ. ಆದರೆ ಆ 'ಬೇರೆ'ಯನ್ನು ಕೀಳಾರ್ಥದಲ್ಲಿ ಗುರುತಿಸುವುದು ಆ ಆಂದೋಲನಕ್ಕೊಂದು ಅಹಂಕಾರವಿತ್ತೆಂಬುದರ ದ್ಯೋತಕ. ಶರಣ ಚಳುವಳಿ ಕೆಲವು ವಿಷಯಗಳಲಲ್ಲಿ (ಉದಾ : ಆಹಾರ ಪದ್ಧತಿ ಮತ್ತು ದೇವರುಗಳ ವೈವಿಧ್ಯ) ತನ್ನದೇ ಒಂದು ಪರಿಶುದ್ಧವಾದಿ ನಿಲುವನ್ನು ಹೊಂದಿತ್ತೆಂಬುದಕ್ಕೆ ವಚನಗಳಲ್ಲೇ ಸಾಕ್ಷಿ ಸಿಗುತ್ತವೆ. ಅವನ್ನು ಈ ಚಳುವಳಿಯ ಮಿತಿಗಳೆಂದು ಭಾವಿಸಬಹುದು. ಇದರಿಂದ ಶರಣ ಚಳುವಳಿಯ ಮಹತ್ವ ಅಥವಾ ಕ್ರಾಂತಿಕಾರತ್ವಕ್ಕೇನೂ ಚ್ಯುತಿಯೊದಗಲಾರದು. ಶರಣ ಚಳುವಳಿಯನ್ನು ಒಂದು ಪಟ್ಟಭದ್ರ ಹಿತಾಸಕ್ತಿಯನ್ನಾಗಿ ಮಾಡಿಕೊಳ್ಳುವವರು ಮಾತ್ರ ಅದರ ದೌರ್ಬಲ್ಯಗಳನ್ನೂ ನ್ಯಾಯಸಮ್ಮತಗೊಳಿಸುವ ವಾದ ಹೂಡುತ್ತಾರೆ.

೬. ಚಳವಳಿ ಮತ್ತು ಸಾಹಿತ್ಯ ಇವೆರಡರ ನಡುವಿನ ಸಂಬಂಧವನ್ನು ಹನ್ನೆರಡನೆಯ ಶತಮಾನದ ವಚನಗಳ ಹಿನ್ನೆಲೆಯಲ್ಲಿ ನೀವು ಪರಿಭಾವಿಸುವ ರೀತಿ ಯಾವುದು?

ಅದು ಭಕ್ತಿ ಚಳುವಳಿಯೂ ಆದುದರಿಂದ ಮತ್ತು ಸಮಾಜದ ಎಲ್ಲ ಸ್ತರಗಳಿಗೂ ವ್ಯಾಪಿಸಿದುದರಿಂದ ಅದು ಆತ್ಮವನ್ನಷ್ಟೇ ಅಲ್ಲದೆ ದೇಹವನ್ನೂ ಮುಟ್ಟಿತು. ಹಾಗಾಗಿ ಇಂದ್ರಿಯ-ಅತೀಂದ್ರಿಯ ಅನುಭವಗಳ ವರ್ಣಮಯ ಸಂಯೋಜನೆಯೊಂದು ಸೃಷ್ಟಿಯಾಗಿ ವಚನ ಸಾಹಿತ್ಯ ಬಹುಶಃ ವಿಶ್ವಸಾಹಿತ್ಯದಲ್ಲೇ ಅಪೂರ್ವ ಮತ್ತು ಅನನ್ಯವೆನಿಸಿದೆ. ಆಧುನಿಕ ಕಾಲದ ಎಂತಹುದೇ ಸಾಮಾಜಿಕ-ರಾಜಕೀಯ ಆಂದೋಲನಗಳೂ ಇಂತಹ ಸ್ಪಂದನಶೀಲ ಸಾಹಿತ್ಯವನ್ನು ಸೃಷ್ಟಿಸಲಾರದುವು; ಸೃಷ್ಟಿಸಿಲ್ಲ ಕೂಡ; ಅವು ಭೌತವಾದಿ ಲೋಕಗ್ರಹಿಕೆಯ ಕ್ರಮಗಳನ್ನು ಮೀರದ ಹೊರತು.

೭. ಹೊಸಗನ್ನಡದ ಹಲವಾರು ಜನ ಸಾಹಿತಿಗಳು 'ವಚನ ಸಾಹಿತ್ಯದ ಮಾದರಿ'ಯಲ್ಲಿ ಅಸಂಖ್ಯ ವಚನಗಳನ್ನು ಬರೆದದ್ದುಂಟು. ಈ ಹೊಸ ವಚನಗಳನ್ನು 'ನಿಜಶರಣರ' ಅಥವಾ 'ಮೂಲ ವಚನಕಾರರ' ವಚನಗಳ ಸಾಲಿಗೆ ಸೇರಿಸಬಹುದೆ?

ಹೊಸಗನ್ನಡದ ಲೇಖಕರ ಪ್ರಯತ್ನ ಎಷ್ಟೇ ಸದುದ್ದೇಶಗಳಿಂದ ಕೂಡಿದ್ದರೂ ಅವು ಸಹಜ ವಚನಗಳಲ್ಲ. ವಚನ ಎಂಬ ಶಬ್ದವೇ ಆಧ್ಯಾತ್ಮಿಕ ಅರ್ಥಗಳಿಂದ ಅನುರಣಿಸುತ್ತಾ ಕನ್ನಡ ಸಮಾಜದ ಒಂದು ಐತಿಹಾಸಿಕ ರಾಜಕೀಯ ಮತ್ತು ಸಾಂಸ್ಕೃತಿಕ ಸಂದರ್ಭವನ್ನು ಧನ್ಯತೆಯ ಭಾವದಿಂದ ಸ್ಮರಿಸುವಂತೆ ಮಾಡುತ್ತದೆ. ಪ್ರತಿಯೊಂದು ಸೃಷ್ಟಿಗೂ ಒಂದು ಆವರಣದ ವಿಶೇಷತೆ ಇರುತ್ತದೆ. ಆ ಆವರಣವಿಲ್ಲದೆ ಅದು ಅದಾಗಿರುವುದಿಲ್ಲ. ನಿಜ ಹೇಳಬೇಕೆಂದರೆ ಆಧುನಿಕರ ವಚನಗಳು ಒಣ ನೀತಿ ಬೋಧೆಯಂತಿವೆಯೇ ಹೊರತು ಸಹಜಸಾಹಿತ್ಯದ ಸೊಗಡಾಗಲೀ, ಬೆಡಗಾಗಲೀ ಅವುಗಳಲ್ಲಿ ನನಗಂತೂ ಕಂಡಿಲ್ಲ. ಆವಾಹನೆಯಿಂದ ಸೃಷ್ಟಿಯಾಗುವುದು ಭೂತಗಳು ಮಾತ್ರ.

೮. ಒಟ್ಟಾರೆ ವಚನ ಚಳವಳಿಯ ಪ್ರಸ್ತುತತೆಯ ಬಗ್ಗೆ ನಿಮ್ಮ ಅಭಿಪ್ರಾಯವೇನು?

ವಚನ ಚಳುವಳಿ ಗಿರೀಶ್ ಕಾರ್ನಾಡರು ತಮ್ಮ 'ತಲೆದಂಡ' ನಾಟಕದ ಮುನ್ನುಡಿಯ ಮಾತುಗಳಲ್ಲಿ ಹೇಳುವ ಹಾಗೆ, ಆಡುವ ನಾಲಗೆ ಸದಾ ನೋವಿನ ಹಲ್ಲಿಗೆ ಹೊರಳುವುದು ಎಂಬಂತೆ ಕನ್ನಡ ಜನತೆಯ, ಅದರ ರಾಜಕೀಯ–ಸಾಂಸ್ಕೃತಿಕ ಪರಂಪರೆಯ ಒಂದು ಹೆಮ್ಮೆಯ ಅಧ್ಯಾಯ ಹೇಗೋ ಕಳೆದುಹೋದ ಒಂದು ಅಪೂರ್ವ ಸಾಧ್ಯತೆಯನ್ನು ನೆನಪಿಸುವ ಅಧ್ಯಾಯವೂ ಹೌದು. ಒಂದು ಸಾಹಿತ್ಯ ಚಳುವಳಿಯಾಗಿ ಅದು ಕನ್ನಡ ಭಾಷೆಯನ್ನಾಡುವ ಜನಕ್ಕೆ ಒಂದು ಸದಾ ಸ್ಫೂರ್ತಿಯ ಚಿಲುಮೆಯೇ. ಆದರೆ ಅದು ತನ್ನ ಒಡಲಲ್ಲಿರಿಸಿಕೊಂಡಿರುವ ಸಾಮಾಜಿಕ ಚಳುವಳಿಯಾಗಿ ಅದು ಇಂದಿಗೆ ಪ್ರಸ್ತುತ ಮತ್ತು ಸ್ಫೂರ್ತಿಯುತವಾಗಬೇಕಾದರೆ, ಆರಂಭದಲ್ಲೇ ಹೇಳಿದಂತೆ ಅದರ ಜಾತಿ ವಾಸನೆಗಳ ವಿವಿಧ ಸಾಂಸ್ಥೀಕರಣಗಳು ವಿಸರ್ಜನೆಯಾಗಬೇಕು. ಆಗ ಮಾತ್ರ ವಚನಗಳು ಸಾಹಿತ್ಯಕ ರಚನೆಗಳಾಗಿ ಮಾತ್ರವಲ್ಲ ಸಾಮಾಜಿಕ ಸಂಚಲನೆಯ ಕೋಶಗಳಾಗಿ ಕೂಡ ನಮ್ಮ ಮಧ್ಯೆ ಕ್ರಿಯಾಶೀಲವಾಗುತ್ತವೆ. ಪ್ರಸ್ತುತವಾಗುತ್ತವೆ.

('ಮಹಾಮನೆ' ಪತ್ರಿಕೆಯ ಮಾರ್ಚ್ ೨೦೧೮ರ ಸಂಚಿಕೆ)

ಕರ್ನಾಟಕದಲ್ಲಿ ಕನ್ನಡಕ್ಕೆ ಮೊದಲ ಆದ್ಯತೆ : ಅಪಸ್ವರಗಳೇಕೆ? ಹೇಗೆ?

ಖ್ಯಾತ ಇತಿಹಾಸಕಾರ ರಾಮಚಂದ್ರ ಗುಹಾ ಕೆಲ ವಾರಗಳ ಹಿಂದೆ 'ಪ್ರಜಾವಾಣಿ'ಯ 'ಗುಹಾಂಕಣ' ಎಂಬ ತಮ್ಮ ಅಂಕಣ ಬರಹವೊಂದರಲ್ಲಿ ಭಾರತದಲ್ಲಿ ಸಾಂಸ್ಕೃತಿಕ ಅಸಹಿಷ್ಣುತೆ ಮತ್ತು ಸಂಕುಚಿತತೆಗಳು ಹೆಚ್ಚುತ್ತಿವೆ ಎಂಬ ಆತಂಕ ವ್ಯಕ್ತಪಡಿಸುತ್ತಾ, ಇದಕ್ಕೊಂದು ಉದಾಹರಣೆಯಾಗಿ, ಕರ್ನಾಟಕದಲ್ಲಿ ಕನ್ನಡಕ್ಕೆ ಮೊದಲ ಆದ್ಯತೆ ನೀಡುವ ನೀತಿಯನ್ನು ಉಲ್ಲೇಖಿಸಿ ಭವಿಷ್ಯದಲ್ಲಿ ಇದರ ದುಷ್ಪರಿಣಾಮಗಳ ಬಗ್ಗೆ ಬರೆದಿದ್ದರು. ಇದರ ಬಗ್ಗೆ ಸಹಜವಾಗಿಯೇ ತಕರಾರು ಎತ್ತಿದ ನಾನು, 'ಈ ನೀತಿಯಿಂದ ನಿಮಗಾಗಿರುವ ತೊಂದರೆಯಾದರೂ ಏನು? ಕನ್ನಡ ಮಾತಾಡದ ಹೆಮ್ಮೆಯ ಕನ್ನಡಿಗರಾದ ತಾವು ಕನ್ನಡಿಗರ ಮತ್ತು ಅವರ ಭಾಷೆಯ ಕ್ಷೇಮಾಭ್ಯುದಯದ ವಿಷಯವನ್ನು ಕನ್ನಡ ಮಾತಾಡುವ ಕನ್ನಡಿಗರಿಗೆ ಬಿಡುವುದು ಒಳ್ಳೆಯದು' ಎಂದು ಬರೆದೆನಲ್ಲದೆ, ಗಾಂಧಿ ಬಗ್ಗೆ ಅಭಿಮಾನ ಉಳ್ಳ ಅವರಿಗೆ ಮಾತೃಭಾಷೆಯ ಬಗ್ಗೆ ಗಾಂಧಿ ಹೊಂದಿದ್ದ ಅಚಲ ನಿಲುವನ್ನು ನೆನಪಿಸಿದೆ.

ಇದಕ್ಕೆ ಉತ್ತರವಾಗಿ ಗುಹಾ ಅವರು ಭಾಷೆಯ ವಿಷಯದ ಬಗ್ಗೆ ತಾವು ಈ ಹಿಂದೆ ಬರೆದಿದ್ದ **'Eighty years ago'** ಎಂಬ ಅಂಕಣ ಬರಹವೊಂದನ್ನು ನನಗೆ ಕಳಿಸಿದರು. ಅದರಲ್ಲಿ ೧೯೨೦ರ ಅಸಹಕಾರ ಚಳುವಳಿಯ ಸಂದರ್ಭದಲ್ಲಿ ಇಂಗ್ಲಿಷ್ ಶಿಕ್ಷಣದ ದುಷ್ಪರಿಣಾಮಗಳ ಬಗ್ಗೆ ಮಹಾತ್ಮ ಗಾಂಧಿ ಆಡಿದ ಮಾತುಗಳಿಗೆ ರಬೀಂದ್ರನಾಥ ಟ್ಯಾಗೋರರು ಹೇಗೆ ಪರಿಣಾಮಕಾರಿಯಾಗಿ ಪ್ರತಿಕ್ರಿಯಿಸಿ ಗಾಂಧಿಯವರಿಗೆ ಈ ವಿಷಯದಲ್ಲಿ ಸರಿಯಾದ ಜಾಗವನ್ನು ತೋರಿಸಿದರೆಂದೂ **('put him in his place')**, ನಂತರ ಗಾಂಧಿ ಹೇಗೆ ತಮ್ಮ ಮನೆಯ ಕಿಟಕಿ ಬಾಗಿಲುಗಳನ್ನು ಎಲ್ಲ ದಿಕ್ಕುಗಳಿಂದ ಬರುವ ಗಾಳಿ ಬೆಳಕುಗಳಿಗೆ ತೆರೆದಿಡುವ ರೂಪಕ ಭಾಷೆಯ ಮಾತಾಡಿ ಟ್ಯಾಗೋರರ ಇಂಗ್ಲಿಷ್ ಶಿಕ್ಷಣದ ಪರವಾದ ಮಾತುಗಳಿಗೆ ಅನುಕೂಲಕರವಾಗಿ ಪ್ರತಿಸ್ಪಂದಿಸಿದರೆಂದೂ ಬರೆದಿದ್ದಾರೆ. ಇದಕ್ಕೆ ಪೂರಕವಾಗಿ, ಗುಹಾ ಇತ್ತೀಚೆಗೆ ಖ್ಯಾತ ಇಂಗ್ಲಿಷ್ ಕಾದಂಬರಿಕಾರ ಆರ್.ಕೆ. ನಾರಾಯಣರ ಮೈಸೂರಿನ ಮನೆಯನ್ನು ಕರ್ನಾಟಕ ಸರ್ಕಾರ ತನ್ನ ವೆಚ್ಚದಲ್ಲಿ ಅವರ ಸ್ಮಾರಕವನ್ನಾಗಿ ಪರಿವರ್ತಿಸಬೇಕೆಂಬ ಪ್ರಸ್ತಾಪಕ್ಕೆ ಜಿಎಸ್‌ಎಸ್, ಭೈರಪ್ಪ ಅವರೂ ಸೇರಿದಂತೆ ಕನ್ನಡದ ಪ್ರಮುಖ ಲೇಖಕರು ವಿರೋಧ ವ್ಯಕ್ತಪಡಿಸಿದ್ದನ್ನೂ, ಇದಕ್ಕೆ ಕನ್ನಡದ ಇನ್ನಿಬ್ಬರು–ಗುಹಾ ಅವರ ಪ್ರಕಾರ ಕನ್ನಡಿಗರ ಬಹು

ಅಚ್ಚುಮೆಚ್ಚಿನ –ಲೇಖಕರಾದ ಗಿರೀಶ್ ಕಾರ್ನಾಡ್ ಮತ್ತು ಯು.ಆರ್. ಅನಂತಮೂರ್ತಿಯವರು ತಕ್ಕ ಉತ್ತರ ನೀಡಿ ಆ ಕನ್ನಡ ಲೇಖಕ ಸಮೂಹಕ್ಕೆ ಅದರ ಜಾಗ ತೋರಿ, ನಾರಾಯಣ್ ಅವರ ಸ್ಮಾರಕವನ್ನು ಆಗು ಮಾಡಿಸಿದ ಯಶೋಗಾಥೆಯನ್ನು ನಿರೂಪಿಸಿದ್ದಾರೆ. ಒಟ್ಟಿನಲ್ಲಿ ಅವರಿಗೆ ಕರ್ನಾಟಕದಲ್ಲಿ ಕನ್ನಡದ ಪ್ರಾಧಾನ್ಯತೆಗೆ ನಡೆಯುತ್ತಿರುವ ಆಂದೋಲನ ಸಂಕುಚಿತವೂ ಅಸಹಿಷ್ಣುವೂ ಆಗಿ ಕಂಡು ಮಹಾರಾಷ್ಟ್ರದ ಶಾಕ್ರೆಗಳನ್ನು ನೆನಪಿಸುವಂತೆ ಮಾಡಿದೆ.

ಗುಹಾ ಅವರ ಈ ಬರಹಕ್ಕೆ ನಾನೊಂದು ಉತ್ತರ ಬರೆದೆ. ಆದರೆ ಅವರಿಂದ ಇದಕ್ಕೆ ಹದಿನೈದು ದಿನಗಳಾದರೂ ಉತ್ತರ ಬಂದಿಲ್ಲ. ನನ್ನ ಈ ಪ್ರತಿಕ್ರಿಯೆಯೂ ಅವರಿಗೆ ಸಂಕುಚಿತವಾದವೆನಿಸಿ ಉತ್ತರಕ್ಕೆ ಅನರ್ಹವಾಗಿ ಕಂಡಿರಲೂ ಸಾಕು. ಆದರೆ ನನ್ನ ಉತ್ತರ ಕನ್ನಡಕ್ಕೆ ಕರ್ನಾಟಕದಲ್ಲೇ ಯಾವ ಯಾವ ದಿಕ್ಕುಗಳಿಂದ ಮತ್ತು ಯಾವ ಯಾವ ರೂಪಗಳಲ್ಲಿ ಕುತ್ತು ಬರಬಹುದೆಂಬ ಸೂಚನೆ ನೀಡುವ; ಸಾರ್ವಜನಿಕರಿಗೆ ಕುತೂಹಲಕಾರಿ ಎನ್ನಿಸುವ ಹಲವು ಅಂಶಗಳನ್ನು ಒಳಗೊಂಡಿದೆ ಎಂದು ಭಾವಿಸಿ 'ಸಮಾಜಮುಖಿ' ಓದುಗರ ಪ್ರತಿಕ್ರಿಯೆಗಾಗಿ ಇಲ್ಲಿ ನೀಡುತ್ತಿರುವೆ. ಇದು ಗುಹಾ ಅವರಿಗೆ ನಾನು ಬರೆದ ಉತ್ತರದ ಕನ್ನಡಾನುವಾದ :

೧, ಫೆಬ್ರುವರಿ, ೨೦೧೮

ಪ್ರಿಯ ಶ್ರೀ ಗುಹಾ ಅವರಲ್ಲಿ,

ಕ್ರಿಕೆಟ್ ಕುರಿತ ನಿಮ್ಮ ಪುಸ್ತಕ 'The State of Cricket' ತಲುಪಿದೆ. ಈಗ ನಿಮ್ಮ ಬಳಿ ಇರುವ ಅದರ ಕೆಲವೇ ಪ್ರತಿಗಳಲ್ಲಿ ಒಂದನ್ನು ಪಡೆಯುವ ಸೌಭಾಗ್ಯ ನನ್ನದಾಗಿರುವುದಕ್ಕಾಗಿ ನನಗೆ ಸಂತೋಷವಾಗಿದೆ, ವಂದನೆಗಳು. ಪುಸ್ತಕವನ್ನು ಓದಿ ಮರಳಿ ಬರೆಯುವೆ.

ಇಂಗ್ಲಿಷ್ ಕಾದಂಬರಿಕಾರ ಆರ್.ಕೆ. ನಾರಾಯಣರಿಗಾಗಿ ಮೈಸೂರಿನಲ್ಲಿ ಸ್ಮಾರಕವೊಂದನ್ನು ನಿರ್ಮಿಸುವ ಪ್ರಸ್ತಾಪವನ್ನು ಕನ್ನಡದ ಕೆಲವು ಲೇಖಕರು ವಿರೋಧಿಸಿದಾಗ ಅದನ್ನು ನಾನೂ ಬೆಂಬಲಿಸಿದ್ದೆ. ಆರ್‌ಕೆ ಎಂದೂ ಕನ್ನಡದ್ದಿರಲಿ, ಕರ್ನಾಟಕದ ಸಾಹಿತ್ಯ ಪರಿದೃಶ್ಯದ ಸಾವಯವ ಭಾಗವಾಗಿರಲಿಲ್ಲ. ಆದುದರಿಂದ ಕರ್ನಾಟಕ ಸರ್ಕಾರದ ಖಜಾನೆಯಿಂದ ಅವರ ಸ್ಮಾರಕಕ್ಕಾಗಿ ಹಣ ಖರ್ಚು ಮಾಡುವುದು ಉಚಿತವಲ್ಲವೆಂದು ನಾನು ಆಗ ವಾದಿಸಿದ್ದೆ. ಆರ್‌ಕೆ ಅವರ ಗೆಳೆಯರು ಮತ್ತು ಅಭಿಮಾನಿಗಳು ಹಣಕ್ಕಾಗಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಬಹುದಿತ್ತು ಎಂದೂ ಸೂಚಿಸಿದ್ದೆ. ಹೇಗೂ ಅವರು ರಾಷ್ಟ್ರೀಯ ಲೇಖಕರಲ್ಲವೆ?

ಆರ್‌ಕೆ ಎಂದೂ ಕರ್ನಾಟಕದ, ಕರ್ನಾಟಕದ ಜನತೆಯ ಹೆಮ್ಮೆಯಾಗಿರಲಿಲ್ಲ. ಕರ್ನಾಟಕದಲ್ಲಿನ, ನಿರ್ದಿಷ್ಟವಾಗಿ ಮೈಸೂರಿನಲ್ಲಿನ ಅವರ ವಾಸ ಭೌತಿಕ ಮಾತ್ರವಾಗಿತ್ತು. ಕನ್ನಡ ಸಾಹಿತ್ಯ ಚಟುವಟಿಕೆಗಳ ದೊಡ್ಡ ಕೇಂದ್ರವಾಗಿ, ಅದೂ ಕನ್ನಡದ ಅಪೂರ್ವ ಚೈತನ್ಯ ಕುವೆಂಪು ಅವರ ಭವ್ಯ ಉಪಸ್ಥಿತಿಯಿದ್ದ ಮೈಸೂರಿನಲ್ಲಿದ್ದರೂ ಆರ್‌ಕೆ ಎಂದೂ ಕನ್ನಡ ಲೇಖಕರೊಂದಿಗಾಗಲೀ ಅಥವಾ ಅವರ ಆಲೋಚನಾ ಲಹರಿಗಳೊಂದಿಗಾಗಲೀ

ಯಾವ ರೀತಿಯಲ್ಲೂ ಬೆರೆಯಲಿಲ್ಲ. ತನ್ನ ನಿಕಟ ಸಾಹಿತ್ಯಿಕ ವಲಯದಲ್ಲಿ ಏನಾಗುತ್ತಿದೆ ಎಂದು ತಿಳಿಯುವ ಗೋಜಿಗೂ ಅವರು ಹೋಗಲಿಲ್ಲ. ಇದನ್ನೇ 'ಇಂಗ್ಲಿಷ್ ಬ್ರಾಹ್ಮಣಿಕೆ' ಎಂದು ಕರೆಯುವುದು ಎಂದು ನಾನು ಭಾವಿಸಿದ್ದೇನೆ. ಕನ್ನಡದ ಬಹುಪಾಲು ಎಲ್ಲ ಲೇಖಕರೂ–ಬಹುಶಃ ನೀವು ಉಲ್ಲೇಖಿಸಿದ ಇಬ್ಬರ ಹೊರತಾಗಿ–ಹೀಗೇ ಭಾವಿಸಿದ್ದರೆಂದು ಕಾಣುತ್ತದೆ.

ಈ ಇಬ್ಬರಲ್ಲಿ ಕಾರ್ನಾಡರು ಎಂದೂ ಕನ್ನಡದ್ದೆಂದು ಹೇಳಬಹುದಾದ ಸಂವೇದನಾ ಸೂಕ್ಷ್ಮಗಳೊಂದಿಗೆ (ಸ್ವಲ್ಪಮಟ್ಟಿಗೆ 'ತಲೆತಂಡ' ನಾಟಕ ಇದಕ್ಕೆ ಅಪವಾದ) ಬರೆಯಲಿಲ್ಲ. ಅವರ ಕನ್ನಡ ಯಾವಾಗಲೂ ಕಲಿತ–ಕೃತಕ–ಗ್ರಾಂಥಿಕ ಕನ್ನಡವಾಗಿರುತ್ತಿತ್ತು ಮತ್ತು ಅವರು ಎಂದೂ ಕನ್ನಡತ್ವದ ಕೆಲಸ–ಕಾರ್ಯಗಳೊಂದಿಗೆ ತಮ್ಮನ್ನು ತಾವು ಗುರುತಿಸಿಕೊಂಡವರಲ್ಲ. ಅವರ ಬರವಣಿಗೆ, ಅವರ ಸಿನಿಮಾ–ಅವುಗಳಲ್ಲಿ ಕೆಲವು ಕನ್ನಡದವೇ ಆಗಿದ್ದರೂ– ಚಟುವಟಿಕೆಗಳು, ಅವರ ಸಂಪರ್ಕಗಳು ಎಲ್ಲವೂ ವ್ಯಾವಹಾರಿಕ ನೆಲೆಯಲ್ಲಿ ಮಾತ್ರವಿದ್ದಂತೆ ತೋರುತ್ತಿದ್ದವು. ಏನಾದರೂ ಅವರು ಭಾರತದಲ್ಲಿನ ಬೇರಿಲ್ಲದ ಅದ್ಭುತಗಳ ಜನವರ್ಗಕ್ಕೆ ಇನ್ನೊಂದು ಹೆಸರಾದ 'ರಾಷ್ಟ್ರ ಮಟ್ಟದ ವ್ಯಕ್ತಿತ್ವ'ವಾಗಿದ್ದವರು ತಾನೇ? ಈಗ ಅವರು ತಮ್ಮ ವೃದ್ಧಾಪ್ಯದಲ್ಲಿ ಅಗತ್ಯವೆನಿಸುವ ಬೇರುಗಳನ್ನು ಈಗ ಎಲ್ಲ ರೀತಿಯ ಮತ್ತು ಎಲ್ಲ ಹಂತಗಳ ಬೇರುಗಳಿರದ 'ರಾಷ್ಟ್ರೀಯ ವ್ಯಕ್ತಿತ್ವ'ಗಳ ಆಶ್ರಯದಾಣವಾಗಿ ಪರಿವರ್ತಿತವಾಗುತ್ತಿರುವ ಬೆಂಗಳೂರಿನಲ್ಲಿ ಕಂಡುಕೊಳ್ಳಲೆತ್ನಿಸುತ್ತಿರುವುದು ಆಶ್ಚರ್ಯವೇನಲ್ಲ. ಅವರು ಸಾಂಸ್ಕೃತಿಕ ನವೀಕರಣಗಳಿಗಾಗಿ ಮಾತ್ರ ಆಗಾಗ್ಗೆ ಭೇಟಿ ಕೊಡುವ 'ಮನೋಹರ ಗ್ರಂಥಮಾಲೆ'ಯ ಅಟ್ಟವಿರುವ ನಮ್ಮ ಸಾಂಸ್ಕೃತಿಕ ಕೇಂದ್ರಗಳಲ್ಲೊಂದಾದ ಧಾರವಾಡ ಅವರ ತವರೂರಾಗಿದ್ದು, ಅಲ್ಲಿ ಅವರಿಗೆ ಮನೆಯೊಂದಿದೆ ಎಂದೂ ಕೇಳಿರುವೆ. ಆದರೆ ನಾನು ಅವರ ಕೆಲವು ನಾಟಕಗಳನ್ನು ಅವರು ಆರಿಸಿಕೊಂಡ ವಸ್ತುಗಳ ತೀವ್ರ ನಾಟಕೀಕರಣಕ್ಕಾಗಿ ತುಂಬ ಇಷ್ಟಪಡುವೆ ಎಂಬುದನ್ನೂ ಇಲ್ಲಿ ತಿಳಿಸಬಯಸುವೆ. ಅವರು ಬರೆದಿರುವ ನಿಜವಾದ ಕನ್ನಡ ನಾಟಕವೆಂದರೆ 'ತಲೆದಂಡ' ಎಂದು ನಾನು ಭಾವಿಸಿರುವೆ.

ಇನ್ನು ನಮ್ಮ ಅನಂತಮೂರ್ತಿಯವರ ಬಗ್ಗೆ ಹೇಳುವುದಾದರೆ, ಅವರಿಗೆ ಎಂದಿನಿಂದಲೂ ತಮ್ಮ ಕನ್ನಡದ ಸಹ ಲೇಖಕರಿಂದ ತಾವು ಭಿನ್ನ ಎಂದು ತೋರಿಸಿಕೊಳ್ಳುವ ಮತ್ತು ಸದಾ ವಿವಾದಾಸ್ಪದವಾಗಿರುವ ಚಪಲ! ಹಾಗೆಂದೇ ಅವರನ್ನು 'ಸುದ್ದಿಜೀವಿ' ಎಂದೂ ಕರೆಯಲಾಗುತ್ತಿತ್ತು. ಈ ಅಡ್ಡ ಹೆಸರನ್ನು ಅವರ ಪತ್ನಿಯೂ ಅನುಮೋದಿಸಿದ್ದರು! ಆದ್ದರಿಂದ ಆರ್‌ಕೆ ಸ್ಮಾರಕವನ್ನು ರಾಜ್ಯ ಸರ್ಕಾರ ಪ್ರಾಯೋಜಿಸುವ ಪ್ರಸ್ತಾಪವನ್ನು ಇತರೆಲ್ಲರೂ ವಿರೋಧಿಸಿದಾಗ ಅವರು ತಾವು ರೂಢಿಸಿಕೊಂಡ ಪ್ರವೃತ್ತಿಯಿಂದಾಗಿ ಅವರನ್ನೆಲ್ಲ ವಿರೋಧಿಸಿ ಬ್ರಾಹ್ಮಣರೇ ಹೆಚ್ಚಾಗಿದ್ದ ತಮ್ಮ ಅಭಿಮಾನಿ ಶಿಷ್ಯಕೂಟದಿಂದ ಉದಾರವಾದಿತ್ವಕ್ಕಾಗಿ ಉಘೇ ಉಘೇ ಎನ್ನಿಸಿಕೊಳ್ಳಲು ಪ್ರೇರೇಪಿಸಿದ್ದು ಸಹಜವೇ ಆಗಿತ್ತು. (ಅವರಿಗೆ ಒಂದು ಮಿಶ್ರಜಾತಿಯ ಹಗೆಕೂಟವಿತ್ತೆಂಬುದನ್ನೂ ಇಲ್ಲಿ ಹೇಳದಿದ್ದರೆ ಅವರಿಗೆ ಅನ್ಯಾಯವಾದೀತು!) ಕನ್ನಡದ ಲೇಖಕರಲ್ಲಿ ರಾಷ್ಟ್ರೀಯ

ಪ್ರಸಿದ್ಧಿಗಾಗಿ ಹಂಬಲಿಸಿದವರೂ ಮತ್ತು ಅದನ್ನು ಸಮೃದ್ಧವಾಗಿ ಪಡೆದವರು ಇವರೊಬ್ಬರೇ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. (ಇತ್ತೀಚಿನ ವರ್ಷಗಳಲ್ಲಿ ನನ್ನ ಗೆಳೆಯ ಎಚ್.ಎಸ್. ಶಿವಪ್ರಕಾಶ್ ಅವರು ಇದಕ್ಕಾಗಿ ಹಂಬಲಿಸಿದರಾದರೂ, ದುರದೃಷ್ಟವಶಾತ್ ಅದನ್ನು ಪೂರ್ಣವಾಗಿ ಪಡೆಯಲಿಲ್ಲ ಎಂಬುದು ಬೇರೆ ಮಾತು.) ಇದರ ಪರಿಣಾಮವೆಂದರೆ ಇವರ ಈ ಅವಧಿಯ ಬರವಣಿಗೆ, ವಿಶೇಷವಾಗಿ ಸೃಜನಶೀಲ ಕೃತಿಗಳು ಹೆಚ್ಚು ಲೋಕಾಭಿರಾಮವಾಗಿ, ಶಬ್ದಮೋಹಕ್ಕೆ ಸಿಕ್ಕಿ ಟೊಳ್ಳಾದವು. ಅವರು ತಮ್ಮೂರಿಗೆ ಭೇಟಿ ನೀಡಿದ ಸಂದರ್ಭಾನುಭವದಲ್ಲಿ ಬರೆದ 'ಸೂರ್ಯನ ಕುದುರೆ' ಎಂಬ ಸಣ್ಣ ಕಥೆ ಮಾತ್ರ ಇದಕ್ಕೆ ಅಪವಾದ. ಈ ಪರಿಣಾಮವನ್ನು ಶಿವಪ್ರಕಾಶರ ಇತ್ತೀಚಿನ ಬರಹಗಳಲ್ಲೂ ಕಾಣಬಹುದು.

ಆದ್ದರಿಂದ ಈ ಇಬ್ಬರ (ನಮ್ಮ ರಾಜ್ಯದ ಈ ಇಬ್ಬರು ಮಾತ್ರವಿರುವ) 'ರಾಷ್ಟ್ರೀಯ ಲೇಖಕ'ರ ನಾಟಕೀಯ ನಡೆಗಳ ಆಧಾರದ ಮೇಲೆ ಭಾಷಾ ವಿಷಯದಲ್ಲಿ ಪಾಠ ಕಲಿಯಿರೆಂದು ದಯವಿಟ್ಟು ನನಗೆ ಸೂಚಿಸಬೇಡಿರಿ. ಹಾಗೆ, ಆರ್‌ಕೆ ಅವರ ಸ್ಮಾರಕದ ರಾಜ್ಯ ಪ್ರಾಯೋಜಕತ್ವವನ್ನು ನನ್ನಂತೆ ವಿರೋಧಿಸಿದ ಬಹುತೇಕರು ಅವರ ಕಾದಂಬರಿಗಳನ್ನು ಮೆಚ್ಚಿ ಓದುತ್ತಿದ್ದರು ಎಂಬುದೂ ನಿಮಗೆ ಗೊತ್ತಿರಲಿ. ಅದು ಪೂರ್ತಿ ಬೇರೆಯೇ ವಿಷಯ. ಏಕೆಂದರೆ, ಸ್ಥಳೀಯ ನಿರ್ದೇಶಕಗಳನ್ನುಳ್ಳ ಮಣ್ಣಿನ ಮಕ್ಕಳು ಮಾತ್ರ ಈ 'ವಿರೋಧಾಭಾಸ'ವನ್ನು ಅರ್ಥ ಮಾಡಿಕೊಳ್ಳಬಲ್ಲರು. ಹಾಗೆ ನೋಡಿದರೆ ಆರ್‌ಕೆ ಅವರ ಕಾದಂಬರಿಗಳಲ್ಲಿ ಕನ್ನಡದ–ಕರ್ನಾಟಕದ ಪರಿಮಳವೇ ಇಲ್ಲ. ಉದಾಹರಣೆಗೆ, ಮಾಲ್ಗುಡಿ ಎಂಬುದು ನೀವು ಸೂಚಿಸುವ ಹಾಗೆ ಬೆಂಗಳೂರಿನ ಮಲ್ಲೇಶ್ವರಂ ಮತ್ತು ಬಸವನಗುಡಿಗಳ ಮಿಶ್ರಣವಾಗಿರಲಾರದು. (ಹಾಗಿದ್ದಲ್ಲಿ ಅದು 'ಮಲ್ಲಗುಡಿ' ಅಥವಾ 'ಮಲ್ಲೇಗುಡಿ' ಎಂದಾಗಬೇಕಿತ್ತು.) ಮಾಲ್ಗುಡಿ ಎಂಬ ಹೆಸರಿನಲ್ಲಿ ಹೊಡೆಯುವುದು ತಮಿಳು ವಾಸನೆಯೇ. ಅಲ್ಲದೆ, ಮಾಲ್ಗುಡಿ ಆ ಕಾದಂಬರಿಯಲ್ಲಿ ಚಿತ್ರಿತವಾಗಿರುವಂತೆ ಒಂದು ಸಣ್ಣ ಊರೇ ಹೊರತು ನಗರ ಪ್ರದೇಶವಲ್ಲ. ಇನ್ನು ಅವರ ಕಾದಂಬರಿಗಳ ಬಹುತೇಕ ಪಾತ್ರಗಳ ಹೆಸರುಗಳೂ ಕನ್ನಡದವೆನಿಸುವುದಿಲ್ಲ. ಬದಲಿಗೆ, ತಮ್ಮ ವೃತ್ತಿಜೀವನದ ಆರಂಭದ ದಿನಗಳಲ್ಲಿ ಕನ್ನಡ ಪತ್ರಿಕೆಗಳಿಗೆ ವ್ಯಂಗ್ಯಚಿತ್ರಗಳನ್ನೂ ಲೇಖನಗಳನ್ನೂ ಬರೆದ ಅವರ ಸೋದರ ಆರ್.ಕೆ. ಲಕ್ಷ್ಮಣ್ ಅವರನ್ನು ಅವರ ದೀರ್ಘ ಮುಂಬೈ ವಾಸದ ನಂತರವೂ ಅಪ್ಪಟ ಕನ್ನಡಿಗರೆಂದು ಕರ್ನಾಟಕದಲ್ಲಿ ಗೌರವಪೂರ್ವಕವಾಗಿ ಪ್ರೀತಿಸಲಾಗುವುದು. ಹಾಗೆ ನೋಡಿದರೆ ಕೆ. ರಾಜಾರಾವ್‌ವರನ್ನು ಇಂಗ್ಲಿಷ್‌ನಲ್ಲಿ ಬರೆದ ಕನ್ನಡದ ಲೇಖಕ ಎಂದೇ ಕರೆಯಬಹುದು.

ಇನ್ನು ಭಾಷೆಯ ವಿಷಯ ಕುರಿತಂತೆ ಗಾಂಧಿ–ಟ್ಯಾಗೋರ್ ವಾಗ್ವಾದದ ಬಗ್ಗೆ ಹೇಳುವುದಾದರೆ, ರಾಷ್ಟ್ರೀಯತೆ ಕುರಿತ ಅವರ ವಾಗ್ವಾದದಂತೆಯೇ ಅದನ್ನು ಈ ಇಬ್ಬರೂ ತಮ್ಮ ಜೀವನದಲ್ಲಿ ಆತ್ಯಂತಿಕವಾಗಿ ಏನು ಮಾಡಹೊರಟಿದ್ದರು, ಏನು ಅರಸಿಹೊರಟಿದ್ದರು ಎಂಬ ದೃಷ್ಟಿಯಿಂದ ಅರ್ಥಮಾಡಿಕೊಳ್ಳಬೇಕು ಎಂದು ನಂಬಿರುವವನು ನಾನು. ಟ್ಯಾಗೋರ್ ಅವರ ಸೃಜನಶೀಲ ಕೊಡುಗೆಗಳ ಬಗ್ಗೆ ನನ್ನೆಲ್ಲ

ಗೌರವವನ್ನು ಅರ್ಜಿಸಿಯೂ ಹೇಳುವ ಮಾತೆಂದರೆ, ಅವರ ವ್ಯಕ್ತಿತ್ವದಲ್ಲಿ ಒಂದು ವೃತ್ತಿಶೀಲತೆಯ ಕುರುಹು ಯಾವಾಗಲೂ ಇತ್ತು. ಅವರು ವೃತ್ತಿಶೀಲರಾಗಿ, ಕನಿಷ್ಠ ಓರ್ವ ಲೇಖಕರಾಗಿ ಯಶಸ್ವಿಯಾಗಲು ಪ್ರಯತ್ನಿಸುತ್ತಿದ್ದರು. ಅವರಲ್ಲಿ ಒಂದು ತೆರನ ಪ್ರದರ್ಶನಪ್ರಿಯತೆಯ ಗುಣ ಅಂತರ್ಗತವಾಗಿತ್ತು. ಅವರು ಹೇಗೆ ನೋಬೆಲ್ ಪ್ರಶಸ್ತಿ ಪಡೆದರೆಂಬುದನ್ನು ನೀವು ಬಲ್ಲಿರಿ. ಅವರ ಬದುಕು ಕಲಾವಿದನಾಗಿ ನಿರ್ದಿಷ್ಟೀಕರಿಸಲ್ಪಟ್ಟು ಅದು ವೃತ್ತಿಪರವಾಯಿತು. ಇದರ ಯಶಸ್ಸಿಗಾಗಿ ಇಂಗ್ಲಿಷನ್ನು ಅವರು ಒಂದು ಪರಿಣಾಮಕಾರಿ ಸಾಧನವಾಗಿ ಕಂಡುಕೊಂಡಿದ್ದರು.

ಹೀಗೆ ಕನಿಷ್ಠ ಭಾರತದ ಮಟ್ಟಿಗಾದರೂ ಇಂಗ್ಲಿಷ್ ಭಾಷೆಯು ಸ್ಪರ್ಧೆಯ, ಯಶಸ್ಸಿನ ಆತ್ಯಂತಿಕ ಸಾಧನವಾಗಿದೆ. ಆಧುನಿಕವೆಂದು ಕರೆಯಲಾಗುವ ಬದುಕನ್ನು ನಡೆಸಬಯಸುವ ನಾವೆಲ್ಲರೂ ಗೊತ್ತಿದ್ದೋ, ಗೊತ್ತಿಲ್ಲದೆಯೋ ಬದುಕಿನಲ್ಲಿ ಸ್ಪರ್ಧಾಳುಗಳೇ ಆಗಿದ್ದೇವೆ. ಆ ಕಾರಣದಿಂದಲೇ ಇಂಗ್ಲಿಷ್ ಕುರಿತ ಗಾಂಧಿಯ ನಿಲುವಿಗೆ ಸಹಾನುಭೂತಿ ತೋರಿಸಲು ನಾವು ನಿರಾಕರಿಸುತ್ತೇವೆ. ಪಾಶ್ಚಿಮಾತ್ಯ ಅರ್ಥದಲ್ಲಿ ಎಂದೂ ಆಧುನಿಕರಾಗದಿದ್ದ ಗಾಂಧಿ ಸಹಜವಾಗಿಯೇ ಎಂದೂ ಯಾರೊಂದಿಗೂ ಸ್ಪರ್ಧೆಯಲ್ಲಿರಲಿಲ್ಲ. ಅವರೊಬ್ಬ ಭಾರತೀಯ ಆಧುನಿಕವಾದಿಯಾಗಿದ್ದರು. ಭಾರತೀಯ ಆಧುನಿಕವಾದಿಯಾಗಬೇಕಿದ್ದಲ್ಲಿ ನೀವು ಮೊದಲು ಈ ಮಣ್ಣಿನಲ್ಲಿ ಅನುಭವಗ್ರಾಹ್ಯವಾಗಿ ಬೇರೂರಿಬೇಕು. ಇಲ್ಲೇ ಮಾತೃಭಾಷೆಯ ಪಾತ್ರ ಮುಖ್ಯವಾಗುವುದು, ಅದು ಬದುಕಿನ ಸಾವಯ ಭಾಗವಾಗಿ ಕಾಣತೊಡಗುವುದು.

ಭಾಷೆಯ ವಿಷಯಕ್ಕೆ ಸಂಬಂಧಿಸಿದಂತೆ ಟ್ಯಾಗೋರರ ಆಕ್ಷೇಪಣೆಯ ಬಗೆಗಿನ ಗಾಂಧಿಯವರ ಪ್ರತಿಕ್ರಿಯೆಯನ್ನು ಯಾವುದೇ ರೀತಿಯಲ್ಲಿ ಭಾಗಶಃ ಒಪ್ಪಿಗೆ ಎಂದಾಗಲೀ, ಟ್ಯಾಗೋರ್‌ರೊಡನೆಯ ರಾಜಿಯೆಂದಾಗಲೀ ಕರೆಯಲಾಗದು. ಅವರು ತಮ್ಮ ಮನೆಯ ಕಿಟಕಿ-ಬಾಗಿಲುಗಳನ್ನು ತೆರೆದಿಡುವ ಮಾತುಗಳನ್ನಾಡಿರುವುದು ಲೋಕಜ್ಞಾನ ಅಥವಾ ವಿಶ್ವಮಾನವತ್ವ ಕುರಿತ ತಮ್ಮ ನಿಲುವಿನ ಪುನರುಚ್ಚಾರವಾಗಿದೆಯಷ್ಟೆ. ಅದು ಟ್ಯಾಗೋರರ ಭಾವನೆಗಳಿಗೆ ಘಾಸಿ ಉಂಟು ಮಾಡದೆ ಅವರ ಅಭಿಪ್ರಾಯ ಕುರಿತ ಅಸಮ್ಮತಿಯ, ಪ್ರತ್ಯುತ್ತರದ ಗಾಂಧಿ ಮಾದರಿಯಾಗಿದೆ. 'ನಯೀ ತಾಲೀಂ' ಎಂಬ ಅವರ ಹೊಸ ಶಿಕ್ಷಣ ಕಾರ್ಯಕ್ರಮ ಗಾಂಧಿಯವರ ಭಾಷಾ ನೀತಿಯಲ್ಲಿ ಯಾವುದೇ ಬದಲಾವಣೆ ಇಲ್ಲ ಎಂಬುದಕ್ಕೆ ಸಾಕ್ಷಿಯಾಗಿದೆ.

ಆದ್ದರಿಂದ ನಾನು ಮತ್ತು ದೇವನೂರ ಮಹಾದೇವ ಅವರ ಗುಂಪು ಪ್ರತಿಪಾದಿಸುವ ಮತ್ತು ಜಾರಿಗೆ ತರಲು ಯತ್ನಿಸುತ್ತಿರುವ ಭಾಷಾ ನೀತಿ ಎಂದರೆ, ಕನ್ನಡ ಮೊದಲು. ನಂತರ ಇಂಗ್ಲಿಷ್. (Kannada First-English Next!)

ವಂದನೆಗಳೊಂದಿಗೆ,

ಡಿ.ಎಸ್. ನಾಗಭೂಷಣ

ಶಿವಮೊಗ್ಗ

ಗುಹಾ ಅವರ ಪ್ರತಿಕ್ರಿಯೆ:

ದಿನಾಂಕ : ೨೮ ಫೆಬ್ರುವರಿ, ೨೦೧೮

ಪ್ರಿಯ ಶ್ರೀ ನಾಗಭೂಷಣ,

ಆರ್.ಕೆ. ನಾರಾಯಣ್ ಸ್ಮಾರಕ, ಗಿರೀಶ್-ಅನಂತಮೂರ್ತಿ, ಗಾಂಧಿ-ಟ್ಯಾಗೋರ್‌ಗಳನ್ನು ಒಳಗೊಂಡಂತೆ ನೀವು ಬರೆದ ಉತ್ತರ ಒಟ್ಟಿನಲ್ಲಿ ನನಗೆ ವಾಸ್ತವವನ್ನು ಮನಗಾಣಿಸುವ ರೀತಿಯಲ್ಲಿ ಇತ್ತು. ಬಹುಶಃ ಆರ್.ಕೆ. ನಾರಾಯಣ್ ಅವರ ಸ್ಮಾರಕಕ್ಕೆ ಭಾರತ ಸರ್ಕಾರವೇ ಹಣ ಕೊಡಬೇಕಿತ್ತು. ರಾಜ್ಯದಲ್ಲಿ ಕನ್ನಡವನ್ನು ಉತ್ತೇಜಿಸಬೇಕು ಮತ್ತು ಅದಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ಈ ವಿಷಯ ಅಷ್ಟು ಕಪ್ಪು-ಬಿಳುಪಾದುದಲ್ಲ; ಮಧ್ಯೆ ಒಂದಿಷ್ಟು ಬೂದು ಬಣ್ಣದ ಜಾಗವೂ ಇದೆ. ಅದೇನೇ ಇದ್ದರೂ, ಕನ್ನಡ ಬಲ್ಲವರು ಮಾತ್ರ ಕನ್ನಡಿಗರು ಎಂಬ ತರ್ಕದ ವಿಸ್ತರಣೆ ಹಿಂದಿಯನ್ನು ಬಲ್ಲವರು ಮಾತ್ರ ಭಾರತೀಯರು ಎಂಬಲ್ಲಿಗೆ ನಮ್ಮನ್ನು ಕೊಂಡೊಯ್ಯುತ್ತದೆ. ಸೋನಿಯಾ ಗಾಂಧಿ ನಿಜವಾದ ಭಾರತೀಯರೇ, ಅಲ್ಲವೆ, ಎಂಬುದು ಈ ತರ್ಕದ ಮುಂದುವರೆದ ಪ್ರಶ್ನೆ ಆಗುತ್ತದೆ. ನಾನು ಅವರ ರಾಜಕಾರಣವನ್ನು ಇಷ್ಟಪಡುವುದಿಲ್ಲ. ಆದರೆ ಇಟಲಿಯಲ್ಲಿ ಹುಟ್ಟಿದವರು ಎಂದಾಕ್ಷಣ ಅವರು ಭಾರತೀಯರಲ್ಲ ಎಂದರ್ಥವಲ್ಲ. ಈ ವಿಷಯವಾಗಿ ನಿಮ್ಮ ಅಭಿಪ್ರಾಯವನ್ನು ತಿಳಿಯಲು ನಾನು ಕುತೂಹಲದಿಂದ್ದೇನೆ.

ಇನ್ನೊಂದು ಸಣ್ಣ ವಿಷಯ. ಟ್ಯಾಗೋರ್‌ರನ್ನು 'ವೃತ್ತಿಶೀಲ' ಎಂದು ಕರೆಯುವುದು ಉಚಿತವಲ್ಲ. ಹೌದು (ಎಲ್ಲ ಲೇಖಕರಂತೆ) ಅವರು ಸ್ವಪ್ರತಿಷ್ಠರು, ಆದರೆ ಖಂಡಿತ 'ವೃತ್ತಿಶೀಲ'ರಾಗಿರಲಿಲ್ಲ. ಗಾಂಧಿಯನ್ನು ಅವರ ಉತ್ತುಂಗ ಪ್ರಸಿದ್ಧಿಯ ಕಾಲದಲ್ಲಿ ವಿರೋಧಿಸಲು ಅಪರೂಪದ ಧೈರ್ಯದ ಅಗತ್ಯವಿತ್ತು.

ನಿಮ್ಮ ಗುಹಾ

ನನ್ನ ಉತ್ತರ:

ಪ್ರಿಯಶ್ರೀ ಗುಹಾ,

ನಿಮ್ಮ ಉತ್ತರಕ್ಕಾಗಿ ವಂದನೆಗಳು. ಕ್ಷಮಿಸಿ, ನೀವು ಹೇಗೆ ತಾನೇ ಕನ್ನಡ-ಕನ್ನಡಿಗ ಸಮೀಕರಣವನ್ನು ಹಿಂದಿ-ಭಾರತ ಅಥವಾ ಹಿಂದೂಸ್ತಾನ ಸಮೀಕರಣದೊಂದಿಗೆ ಹೋಲಿಸಲು ಸಾಧ್ಯ? ಕನ್ನಡಿಗ ಎಂಬ ಶಬ್ದ ಕನ್ನಡ ಎಂಬ ಶಬ್ದದಿಂದ ಹುಟ್ಟಿದ್ದಾದರೆ, ಹಿಂದಿಗೂ ಭಾರತ, ಹಿಂದೂಸ್ತಾನ ಎಂಬ ಶಬ್ದಗಳಿಗೂ ಯಾವ ಸಂಬಂಧವಿದೆ? ನಾನು ನಿಮ್ಮನ್ನು ಕರ್ನಾಟಕದ ಒಬ್ಬ ಅಮೂಲ್ಯ ನಿವಾಸಿ ಎಂದು ಪರಿಗಣಿಸುತ್ತೇನೆ. ನಿಮಗೆ

ಇಷ್ಟು ಸಾಲದೇ? ಕಳೆದ ಸುಮಾರು ಇಪ್ಪತ್ತು ವರ್ಷಗಳಿಗೂ ಹೆಚ್ಚಿನ ಕಾಲಾವಧಿಯಲ್ಲಿ ಕರ್ನಾಟಕದಲ್ಲಿದ್ದೂ ನಿಮ್ಮ ಕಡೆಯಿಂದ ಕನ್ನಡ ಕಲಿಯುವ, ಮಾತಾಡುವ ಪ್ರಯತ್ನದ ಯಾವ ಸುಳಿವೂ ಇಲ್ಲದಾಗ ನೀವು ನಿಮ್ಮನ್ನು ಓರ್ವ ಹೆಮ್ಮೆಯ ಕನ್ನಡಿಗ ಎಂದು ಹೇಗೆ ಕರೆದುಕೊಳ್ಳಬಲ್ಲಿರಿ? ದಯವಿಟ್ಟು ನನಗೆ ವಯಸ್ಸಿನ ಕಾರಣ ಹೇಳಬೇಡಿರಿ. ಇಷ್ಟು ವರ್ಷಗಳಲ್ಲಿ ನಿಮ್ಮಂತೆ ಬೆಂಗಳೂರಿನಲ್ಲಿ ವಾಸ ಮಾಡಿದ ಯಾವ ಸಾಮಾನ್ಯ ಮನುಷ್ಯನೇ ಆಗಲಿ, ಕನಿಷ್ಠ ವ್ಯಾವಹಾರಿಕ ಕನ್ನಡದ ಜ್ಞಾನವನ್ನಾದರೂ ಪಡೆಯುತ್ತಿದ್ದ. ನಿಮಗೆ ಸ್ಥಳೀಯ ಭಾಷೆಯನ್ನು ಕಲಿಯಲು ತಡೆದಿರುವ ಅಂಶವೆಂದರೆ ನಿಮ್ಮ 'ಅ-ಸಾಮಾನ್ಯತೆ'ಯೇ ಆಗಿದೆ ಎಂದು ನನಗೆ ಯಾವಾಗಲೂ ಅನ್ನಿಸಿದೆ ಮತ್ತು ಇದೇ ನಿಮ್ಮ ಬಗ್ಗೆ ನಮ್ಮಲ್ಲಿ ಹಲವರಿಗಿರುವ ಅಸಮಾಧಾನಕ್ಕೆ ಕಾರಣವಾಗಿದೆ.

ನಾನು ಟ್ಯಾಗೋರ್‌ರನ್ನು ನಿಖರವಾಗಿ ಓರ್ವ 'ವೃತ್ತಿಶೀಲ'ರೆಂದು ಕರೆದಿಲ್ಲ ಎಂದುಕೊಂಡಿದ್ದೇನೆ. ಈ ಸಂಬಂಧವಾಗಿ ನಾನು ಬರೆದ ನಿಖರ ಮಾತುಗಳೆಂದರೆ, 'ಟ್ಯಾಗೋರ್ ಅವರ ಸೃಜನಶೀಲ ಕೊಡುಗೆಗಳ ಬಗ್ಗೆ ನನ್ನೆಲ್ಲ ಗೌರವವನ್ನು ಅರ್ಪಿಸಿಯೂ ಹೇಳುವ ಮಾತೆಂದರೆ, ಅವರ ವ್ಯಕ್ತಿತ್ವದಲ್ಲಿ ಒಂದು ವೃತ್ತಿಶೀಲತೆಯ ಕುರುಹು ಯಾವಾಗಲೂ ಇತ್ತು. ಅವರು ವೃತ್ತಿಶೀಲರಾಗಿ, ಕನಿಷ್ಠ ಓರ್ವ ಲೇಖಕರಾಗಿ ಯಶಸ್ವಿಯಾಗಲು ಪ್ರಯತ್ನಿಸುತ್ತಿದ್ದರು. ಅವರಲ್ಲಿ ಒಂದು ತೆರನ ಪ್ರದರ್ಶನಪ್ರಿಯತೆಯ ಗುಣ ಅಂತರ್ಗತವಾಗಿತ್ತು. ಅವರು ಹೇಗೆ ನೋಬೆಲ್ ಪ್ರಶಸ್ತಿ ಪಡೆದರೆಂಬುದನ್ನು ನೀವು ಬಲ್ಲಿರಿ.' ಇನ್ನು ಈ ಸಂಬಂಧದ ತೀರ್ಮಾನ ನಿಮ್ಮದು.

ಗೌರವಾದರಗಳೊಂದಿಗೆ,

ಡಿಎಸ್ಎನ್

ಭೀಮಸೇನ ಜೋಷಿ ಕುರಿತ ಪುಸ್ತಕ ಮತ್ತು ಗಾಯನದ ಸುತ್ತಮುತ್ತ...

(ಗಾಯಕ ಗೆಳೆಯ ಪಂಡಿತ್ ನಾಗರಾಜ ಹವಲ್ದಾರ್‌ಗೆ ಬರೆದ ಒಂದು ಪತ್ರ)

೨೨, ಜೂನ್, ೨೦೧೭

ಪ್ರಿಯ ಹವಲ್ದಾರ್,

ನೀವು ಪ್ರೀತಿಯಿಂದ ಕೊಟ್ಟ ಭೀಮಸೇನ ಜೋಷಿಯವರ ಬಗ್ಗೆ ನೀವು ಬರೆದಿರುವ ಪುಸ್ತಕವನ್ನು ನಿನ್ನೆ ರಾತ್ರಿ ಒಂದಕ್ಷರ ಬಿಡದೆ ಓದಿ ಮುಗಿಸಿದೆ. ನಿಮ್ಮ ಪದೇ ಪದೇ ಪುಸ್ತಕ ಓದಿ ಅಭಿಪ್ರಾಯ ತಿಳಿಸಿ ಎಂಬ ಮಾತನ್ನು ಗಂಭೀರವಾಗಿ ತೆಗೆದುಕೊಂಡ ನನ್ನ ತಪ್ಪಿನ ಶಿಕ್ಷೆಯನ್ನು ಈ ಮುಂದಿನ ಅತಿ ದೀರ್ಘ 'ಪುಸ್ತಕ ವಿಮರ್ಶೆ' ಎಂಬ ಪುರಾಣವನ್ನು ಓದುವ (ನೀವು ಬಯಸಿದರೆ) ನೀವು ಅನುಭವಿಸಬೇಕಾಗಿದೆ. ಇದು ಸ್ವಯಂಕೃತಾಪರಾಧವು. ನಿಮ್ಮ ಬಗ್ಗೆ ನನಗೆ ಸಹಾನೂಭೂತಿ ಇದೆ!

'ಭಾರತರತ್ನ ಭೀಮಸೇನ ಜೋಷಿ: ನಾವು-ನೀವು ಕಂಡಂತೆ' ಎಂಬ ಈ ಪುಸ್ತಕದ ಹಿಂದಿನ ನಿಮ್ಮ ಅಪಾರ ಪರಿಶ್ರಮ ಎದ್ದು ಕಾಣುವಂತಿದ್ದು, ಅದಕ್ಕಾಗಿ ಮೊದಲಿಗೆ ನಿಮಗೆ ಅಭಿನಂದನೆಗಳನ್ನು ಹೇಳಬೇಕಿದೆ. ನಿಮ್ಮ ಈ ಪರಿಶ್ರಮ ನಿಮ್ಮ 'ಪರಮ ಗುರು'ಗಳನ್ನು ಕುರಿತ ನಿಮ್ಮ ಗೌರವ, ಶ್ರದ್ಧೆ, ಭಕ್ತಿ ಮತ್ತು ಅಭಿಮಾನಗಳ ಪ್ರತೀಕವೇ ಆಗಿದೆ ಎಂಬುದು ಈ ಪುಸ್ತಕವನ್ನು ಓದಿದ ಯಾರಿಗಾದರೂ ವೇದ್ಯವಾಗುತ್ತದೆ. ಹಾಗೇ ಈ ಪುಸ್ತಕವನ್ನು ಓದುತ್ತಿದ್ದಾಗ ನಮ್ಮ ಕಾಲದ 'ದಂತಕತೆ' ಎನಿಸಿದ್ದ ಭೀಮಸೇನ ಜೋಷಿಯವರೊಂದಿಗೆ ಆತ್ಮೀಯವಾಗಿ ಒಡನಾಡಿದ ನಿಮ್ಮ ಪುಣ್ಯವೇ ಪುಣ್ಯ ಎಂದೂ ಎನಿಸದಿರದು. ಹಾಗೇ, ಅವರ ಕಾಲದಲ್ಲಿ ನಾವೂ ಬದುಕಿದ್ದೆವು, ಒಮ್ಮೆಯಾದರೂ ಅವರನ್ನು ಸನಿಹದಿಂದ ಕಂಡು ಮಾತನಾಡಿಸಿದ ಮತ್ತು ಮೂರು-ನಾಲ್ಕು ಬಾರಿ ಅವರ ಕಛೇರಿಯನ್ನು ನೇರವಾಗಿ ಕೇಳಿದ ಭಾಗ್ಯವಾದರೂ ನಮಗೆ ದೊರಕಿತಲ್ಲ ಎಂಬ ಸಮಾಧಾನವೂ ನನ್ನಂಥವರಿಗೆ ಉಂಟಾಗದಿರದು.

ನಾನು ಭೀಮಸೇನರ ಗಾಯನವನ್ನು ಮೊದಲ ಬಾರಿಗೆ ನೇರವಾಗಿ ಕೇಳಿದ್ದು ಬಹುಶಃ ೧೯೮೦ರಲ್ಲಿ ರೇಡಿಯೋ ಸಂಗೀತ ಸಮ್ಮೇಳನದಲ್ಲಿ, ದೆಹಲಿಯ ವಿಜ್ಞಾನ ಭವನದಲ್ಲಿ. ನಂತರದಲ್ಲಿ, ನಿಮಗೂ ನೆನಪಿರಬಹುದು, ನಾವಿಬ್ಬರೂ ಬೆಂಗಳೂರು ಆಕಾಶವಾಣಿ ಕೇಂದ್ರದಲ್ಲಿ ಸಹೋದ್ಯೋಗಿಗಳಾಗಿದ್ದಾಗ ನಿಮ್ಮ ನೆರವಿನಿಂದ ನಾನು ಅವರನ್ನೊಮ್ಮೆ-ಬಹುಶಃ ೧೯೮೯ರಲ್ಲಿ-ಬೆಂಗಳೂರಿನ 'ವುಡ್‌ಲ್ಯಾಂಡ್ಸ್' ಹೋಟೆಲಿನಲ್ಲಿ 'ತಿಂಗಳ ಅತಿಥಿ' ಕಾರ್ಯಕ್ರಮಕ್ಕಾಗಿ ಸಂದರ್ಶಿಸಿದ್ದೆ. ಬಹು ಆತಂಕದಿಂದಲೇ ಅವರನ್ನು ಮಾತನಾಡಿಸತೊಡಗಿದ ನನ್ನನ್ನು ಅವರು ತಮ್ಮ ಅನೌಪಚಾರಿಕ ಮತ್ತು ಸರಳ ನಡೆಯಿಂದ ಸಮಾನವಾಗಿ ಕಂಡು ನನ್ನ ಪ್ರಶ್ನೆಗಳಿಗೆ ಉತ್ತರಿಸಿದ ರೀತಿ ಮತ್ತು ಅದು ನಾನು ಕೇಳಲು ಹಿಂಜರಿಯುತ್ತಿದ್ದ ಪ್ರಶ್ನೆಯನ್ನು ಕೇಳಲು ಹುಟ್ಟಿಸಿದ ಧೈರ್ಯ ಈಗಲೂ ನನಗೆ ನೆನಪಿದೆ. ಈ ನೆನಪು ನನ್ನ ಮನಸ್ಸನ್ನು ಈಗಲೂ ಬೆಚ್ಚಗೆ ಮಾಡುತ್ತದೆ. ನಾನು ಅವರನ್ನು 'ನೀವೇಕೆ ವಚನಗಳನ್ನು ಹಾಡುವುದಿಲ್ಲ?' ಎಂದು ಕೇಳಿದೆ. ಈ ಪ್ರಶ್ನೆಯನ್ನು ಕೇಳಬಹುದೆಂದು ನೀವೂ ನನ್ನನ್ನು ಪ್ರೋತ್ಸಾಹಿಸಿದ್ದ ನೆನಪು! ನನ್ನ ಪ್ರಶ್ನೆಗೆ ಅವರು, 'ವಚನಗಳನ್ನು ಹಾಡಲೆಂದು ಬರೆದದ್ದಲ್ಲ' ಎಂದು ಉತ್ತರಿಸಿದರು. ಆಗ ನಾನು 'ಆದರೆ ನಿಮ್ಮಷ್ಟೇ ಉನ್ನತ ಮಟ್ಟದ ಗಾಯಕರಾದ ಪಂಡಿತ್ ಮಲ್ಲಿಕಾರ್ಜುನ ಮನ್ಸೂರರು ಅವನ್ನು ಹಾಡುತ್ತಾರಲ್ಲಾ?' ಎಂದು ಮರುಪ್ರಶ್ನೆ ಹಾಕಿದ್ದೆ. ಈಗಲೂ ನೆನಪಿದೆ, ಅದಕ್ಕವರು ಮೆಲುನಗೆಯೊಂದಿಗೆ ಸಣ್ಣಗೆ ಕಣ್ಣು ಮಿಟುಕಿಸುತ್ತಾ, 'ಏನು ಮಾಡುವುದು, ಕೆಲವರಿಗೆ ಹೋಳಿಗೆ ಇಷ್ಟ! ಇನ್ನು ಕೆಲವರಿಗೆ ಜಿಲೇಬಿ ಇಷ್ಟ!!' ಎಂದು ಉತ್ತರಿಸಿದ್ದರು. ಆಗಲೂ ಅದು ನನಗೆ ಜಾಣ ಉತ್ತರವೆನಿಸಿತ್ತು; ಈಗಲೂ! ಆದರೆ ಇತ್ತೀಚೆಗೆ ಆಕಸ್ಮಿಕವಾಗಿ ಅವರು ಅದ್ಭುತವಾಗಿ ಹಾಡಿರುವ 'ಕೈಲಾಸವಾಸ ಈಶ... ಶಂಭೋ!' ಎಂಬ ದಾಸರ ಪದವನ್ನು ಕೇಳಿ ರೋಮಾಂಚನಗೊಂಡೆ! (ಈ ಪದದಲ್ಲೂ ಶಿವನನ್ನು ಪ್ರಾರ್ಥಿಸುವುದು, ಹರಿಯಲ್ಲಿ ನಿರಂತರ ಭಕ್ತಿ ಇರುವಂತೆ ಮಾಡು ಎಂಬುದಾಗೇ ಇದ್ದರೂ!)

ಇನ್ನು ನೇರವಾಗಿ ಅವರ ಗಾಯನವನ್ನು ನಾನು ಕೊನೆಯದಾಗಿ ಕೇಳಿದ್ದು ಬಹುಶಃ ೧೯೯೦ ಅಥವಾ ೧೯೯೧ರಲ್ಲಿ-ಆಗ ನಾನು ಯುಪಿಎಸ್‌ಸಿ ಸಂದರ್ಶನವೊಂದಕ್ಕಾಗಿ ದೆಹಲಿಗೆ ಹೋಗಿದ್ದೆ-ಕಮಾನಿ ಸಭಾಭವನದಲ್ಲಿ (ಬಂಗಾಳಿ ಮಾರ್ಕೆಟ್ ಬಳಿ) ಏರ್ಪಡಿಸಿದ್ದ ಕಛೇರಿಯಲ್ಲಿ. ಅಂದು ನಾನು ಅಲ್ಲಿಗೆ ಹೋಗುವ ಹೊತ್ತಿಗೆ ಸಭಾಭವನ ತುಂಬಿ ಹೋಗಿತ್ತು. ಸಂಘಟಕರು ನನ್ನ ಒತ್ತಾಯದ ಮೇರೆಗೆ ವೇದಿಕೆಯಲ್ಲಿ ಕೂರುವುದಾದರೆ ಟಿಕೆಟ್ ಕೊಡುವುದಾಗಿ ಹೇಳಿದಾಗ ನಾನು ಕೂಡಲೇ ಒಪ್ಪಿಕೊಂಡೆ. ಅದು ನನ್ನ ಜೀವನದ ಮಹಾ ಸುದಿನವಾಗಿತ್ತು. ನನ್ನನ್ನು ಸಂಘಟಕರು ವೇದಿಕೆಯ ಬಳಿಗೆ ಕರದುಕೊಂಡು ಹೋಗಿ ಗಾಯನಕ್ಕೆ ಸಿದ್ಧವಾಗುತ್ತಿದ್ದ ಭೀಮಸೇನ ಜೋಷಿಯವರನ್ನು 'ಇವರು ಕರ್ನಾಟಕದವರಂತೆ... ಆಕಾಶವಾಣಿಯವರಂತೆ... ಇಲ್ಲಿ ಕೂರಬಹುದೆ?' ಎಂದು ಕೇಳಿದರು. ಜೋಷಿಯವರು ನನ್ನನ್ನೊಮ್ಮೆ ನೋಡಿ, ನಾನು ಮಾಡಿದ ಸಂದರ್ಶನವನ್ನು ನೆನಪು ಮಾಡಿಕೊಂಡಂತೆ ಮುಗುಳ್ನಕ್ಕು, ಹಿಂದಿಯಲ್ಲಿ 'ಇವರು ನಮ್ಮವರೇ! ಕೂರಲಿ, ಕೂರಲಿ!' ಎಂದರು. ನಂತರ ಗಾಯನ ಶುರು ಮಾಡುವ ಅವಸರದಲ್ಲಿದ್ದ ಅವರು ಚುಟುಕಾಗಿ ಕನ್ನಡದಲ್ಲಿ, 'ಈಗ ಎಲ್ಲಿದ್ದೀರಿ?

ಹೇಗಿದ್ದೀರಿ?' ಎಂದು ವಿಚಾರಿಸಿಕೊಂಡು ಉತ್ತರ ಪಡೆಯುತ್ತಿದ್ದಂತೆಯೇ ಕಛೇರಿ ಶುರು ಮಾಡಿಬಿಟ್ಟರು. ಓಹ್! ಅವರ ಸನಿಹದಲ್ಲಿ ಕೂತು ಆ ತಂಬೂರಿಗಳ ಝೇಂಕಾರ, ತಬಲಾ-ಹಾರ್ಮೋನಿಯಂಗಳ ಜೋಡಿ ಹೂಂಕಾರಗಳ ನಡುವೆ ಅಂದು ನಾನೆದುರಾದ ಈ ಮಹಾಗಾಯಕನ ಭೋರ್ಗರೆವ ಸಂಗೀತ ಪ್ರವಾಹದಲ್ಲಿ ಮಿಂದೇಳುವ ಅನುಭವ ಶಬ್ದಗಳಿಗೆ ನಿಲುಕದಂತಹದ್ದು. ವಿಶೇಷವಾಗಿ, ಕೊನೆಯಲ್ಲಿ ಹಾಡಿದ 'ಜೋ ಭಜೇ ಹರಿಕೋ ಸದಾ...' ಭಜನ್ ಅನ್ನು ಮುಗಿಸುತ್ತಿದ್ದಂತೆ ಯಾವುದೇ ಶ್ರೋತೃವಿಗೆ ಹರಿಭಕ್ತಿ ಮೈಯಲ್ಲಿ ತುಂಬಿಬಂದು ಗಾಯಕನ ಕಾಲ್ಮುಟ್ಟಿ ನಮಸ್ಕರಿಸುವಂತೆ ಪ್ರೇರೇಪಿಸಿಬಿಡುತ್ತದೆ. ಅಂದು ಹಾಗೇ ಆಯಿತು. ಭಜನ್ ಮುಗಿಯುತ್ತಿದ್ದಂತೆ 'ಪ್ರತಿಷ್ಠಿತ'ರಂತೆ ಕಾಣುತ್ತಿದ್ದ ಕಮಾನಿ ಸಭಾಗೃಹದ ಶ್ರೋತೃವರ್ಗ ವೇದಿಕೆಯೆಡೆಗೆ ಹೇಗೆ ನುಗ್ಗಿಬಂತೆಂದರೆ, ಅಂದು ನಾನು ಅವರೊಂದಿಗೆ ನಾಲ್ಕು ಮಾತಾಡಿ ತಣಿಯಬೇಕೆಂಬ ನನ್ನ ಬಯಕೆ ಹುಟ್ಟುತ್ತಿದ್ದಂತೆಯೇ ಹಿಂಗಿ ಹೋಯಿತು.

ಇದೆಲ್ಲ ಪುರಾಣ ಅತ್ತ ಇರಲಿ. ಕಳೆದೆರಡು ದಿನಗಳಲ್ಲಿ ನಿಮ್ಮ ಪುಸ್ತಕ ಓದಿಗೆ ಹಿನ್ನೆಲೆಯಾಗಿ ನಾನು ಈ ಮಹಾನ್ ಗಾಯಕನ ಪೂರಿಯಾ ಕಲ್ಯಾಣ್, ಶುದ್ಧ ಕಲ್ಯಾಣ್, ಭೈರವಿ, ಮಾರ್ವಾ, ಬಾಗೇಶ್ರೀ ಮುಂತಾದ ರಾಗಗಳನ್ನು, ದಾಸರ ಪದಗಳನ್ನು, ಮರಾಠಿ ಅಭಂಗಗಳನ್ನು, 'ಬಸಂತ್ ಬಹಾರ್' ಚಿತ್ರದ ಹಾಡನ್ನೂ, ಕೊನೆಗೆ ನಮ್ಮ 'ಸಂಧ್ಯಾರಾಗ' ಚಿತ್ರದ ಹಾಡುಗಳನ್ನೂ ಕೇಳಿದೆ. ಕೊಟ್ಟ ಕೊನೆಗೆ ಕೇಳಿದ ಇವರ ಮತ್ತು ಬಾಲಮುರಳಿ ಅವರ ಜುಗಲ್‌ಬಂದಿ-ವಿಶೇಷವಾಗಿ ಅಂತ್ಯದ 'ತಿಲ್ಲಾನ' (?) ನನ್ನನ್ನು ಹುಚ್ಚೆಬ್ಬಿಸಿತೆಂದೇ ಹೇಳಬೇಕು! ಅಂದಹಾಗೆ 'ಬಸಂತ್ ಬಹಾರ್' ಹಾಡಿನಲ್ಲಿ ಗೆದ್ದವರು ನಿಜವಾಗಿ ಮನ್ನಾಡೆಯೇ? ಹಾಗಂತ ಸಿನೆಮಾ ಹೇಳಬೇಕಷ್ಟೆ! ಅಂತೂ ನಮ್ಮ ಮನೆಯಲ್ಲಿ ಎರಡು ಸಂಜೆಗಳು-ಆರರಿಂದ ರಾತ್ರಿ ಒಂದರವರೆಗೆ-ಭೀಮಸೇನ ಜೋಷಿ ಹಾಡು ಹಬ್ಬದಲ್ಲೇ ಕಳೆದುಹೋದವು. ಈ ಅನಂದಕ್ಕೆ ನೆಪವಾಗಿ ಬಂದ ನಿಮ್ಮ ಪುಸ್ತಕಕ್ಕೆ ಮತ್ತು ನಿಮಗೆ ಧನ್ಯವಾದಗಳು.

ಇಲ್ಲಿಯೇ ಇನ್ನೊಂದೆರಡು ಸಂಗತಿಗಳನ್ನೂ ಹೇಳಬೇಕು. ಪೂರಿಯಾ ಕಲ್ಯಾಣ್ ರಾಗ ಉತ್ತುಂಗ ಸ್ಥಿತಿ ಮುಟ್ಟುತ್ತಿದ್ದ ಸಂದರ್ಭದಲ್ಲೇ ನಾನು ನಿಮ್ಮ ಪುಸ್ತಕದಲ್ಲಿನ ನೀವು ಕಲ್ಕತ್ತೆಯ ನಿಮ್ಮ ಮಾವನವರ ಮನೆಯಲ್ಲಿ ಜೋಷಿಯವರ ಮುಂದೆ ಶಿಷ್ಯಾರ್ಥಿಯಾಗಿ ಹಾಡಿದ ಸಂದರ್ಭವನ್ನು ಓದುತ್ತಿದ್ದೆ! ಹಾಗೇ ಭೈರವ್ ರಾಗದ ಉತ್ತುಂಗ ಸ್ಥಿತಿ ಮುಟ್ಟುತ್ತಿದ್ದಾಗ ಆ ರೇಡಿಯೋ ಸಂಗೀತ ಸಮ್ಮೇಳನದ ನಂತರದ ರಾತ್ರಿ-ಹಗಲಿನ 'ಮದ್ಯ ಪ್ರವೇಶ'ದ ಬೈಠಕ್‌ನ ನಿಮ್ಮ ವರ್ಣನೆ ಓದುತ್ತಿದ್ದೆ! ಬಹುಶಃ ಇವರೆಡೂ ಭಾಗಗಳು ಪುಸ್ತಕದ ಜೀವಂತ ಬರವಣಿಗೆಯ ಭಾಗಗಳು ಇರಬಹುದು. ಆದರೆ ಇವಕ್ಕೆ ಒದಗಿದ ರಾಗಾವೇಶದ ಹಿನ್ನೆಲೆಗಳಾದರೂ ಎಂಥಾ ಯೋಗಾಯೋಗ!

ಇಷ್ಟೆಲ್ಲ ಹೇಳಿದ ಮೇಲೂ ಒಂದು ಮಾತು ಹೇಳಬೇಕು. ಈ ಪುಸ್ತಕ ಹೆಚ್ಚಾಗಿ ಭೀಮಸೇನರ ವ್ಯಕ್ತಿತ್ವದ ಒಂದು ಪಾತಳಿಯನ್ನಷ್ಟೇ-ಅವರ ಸಂಗೀತ ವ್ಯಕ್ತಿತ್ವವನ್ನು-ನಿರೂಪಿಸುತ್ತದಷ್ಟೆ. ಅದೂ ಒಳಗೆ ಬೆಳಕು ಚೆಲ್ಲದ, ಹೆಚ್ಚಾಗಿ ಹೊರ ನೋಟದ ಚಿತ್ರಗಳ

ಮೂಲಕ. ಅದೂ ಸಂಗ್ರಹಿತ ಮಾಹಿತಿಯನ್ನೇ ಹೆಚ್ಚಾಗಿ ಅವಲಂಬಿಸಿ! ಹಾಗಾಗಿ, ಜೋಷಿಯವರನ್ನು ಕುರಿತ ನಿಮ್ಮ ಅಭಿಮಾನ ಪುಸ್ತಕದ ತುಂಬ ಮೇರೆಮೀರಿ ಹರಿದು, ಇದು ಒಮ್ಮೊಮ್ಮೆ ನಿಮ್ಮ ಗುರುಗಳ ವ್ಯಕ್ತಿತ್ವಕ್ಕೆ ನೀವು 'ಸಂಪಾದಿಸಿ' ಕೊಟ್ಟ ಅರ್ಹತಾ ಪತ್ರದಂತೆಯೂ ಕಾಣತೊಡಗುತ್ತದೆ! ನಿಜ, ನೀವು ನೀಡಿರುವ ಮಾಹಿತಿಯಲ್ಲಿ ಕೆಲವು ನಿಜವಾಗಿಯೂ ಮನಮಟ್ಟುವಂತಿದ್ದು, ಜೋಷಿಯವರ ಘನ ವ್ಯಕ್ತಿತ್ವವನ್ನು ಜೀವಂತವಾಗಿ ನಿರೂಪಿಸುವಂತಿವೆ. ಉದಾ: ಗಣಪತಿಭಟ್ಟರ ಮನೆಯ ಪಡಸಾಲೆಯಲ್ಲಿ ಜಮಖಾನೆಯ ಮೇಲೆ ಮಲಗಲೂ ಜೋಷಿಯವರು ಸಿದ್ಧವಿದ್ದದ್ದು, ಝಾರ್ಖಂಡ್‌ನ ಒಂದು ನಗರದಲ್ಲಿ ಹಿಂದೆ ತನಗೆ ನೆರವಾದ ಹಿರಿಯ ದಂಪತಿಗಳ ಮನೆಯನ್ನು ಹುಡುಕಿಕೊಂಡು ಹೋಗಿ ಅವರ ಆಶೀರ್ವಾದ ಪಡೆದದ್ದು, ಮಿಶ್ರಾ ಸೋದದರಿಗೆ ಸ್ವತಃ ತಾವೇ ಕೆಲ ಕಾಲ ನಿಂತು ತಂಬೂರಿ ಮೀಟಿದ್ದು, ಪ್ರಾಯೋಜಕರು ನಿಜವಾಗಿ ಕಷ್ಟಕ್ಕೆ ಸಿಲುಕಿದ್ದಾಗ ಹಣದ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳದೆ ಹೋಗುವುದು, ತನ್ನ ಪಕ್ಕವಾದ್ಯ ಗೆಳೆಯರ ಬಗ್ಗೆ ತೋರುವ ಪ್ರೀತಿ-ಸಹಾನುಭೂತಿ ಮತ್ತು ನೆರವಿನ ಮನೋಭಾವದ ಪ್ರಸಂಗಗಳು. ಆದರೆ ಇಂತಹ ಪ್ರಸಂಗಗಳ ನಿರೂಪಣೆಯಲ್ಲಿ ಬಹಳ ಕಡೆ ನಿಮ್ಮ ಷರಾಗಳು ಅತಿಯಾಗಿ, ಬರವಣಿಗೆ ಆರಾಧನೆಯ ಶೈಲಿಯನ್ನು ಮುಟ್ಟಿ, ಮಾತಿನ ದುಂದಿನಲ್ಲಿ ನಿರೂಪಣೆಯ ಹದ ಕೆಡುತ್ತದೆ. ಸುಂದರ, ಕಲಾತ್ಮಕ, ಮನೋಜ್ಞ ಮುಂತಾಗಿ ನೀವು ಈ ಪುಸ್ತಕದಲ್ಲಿ ದಂಡಿಯಾಗಿ ಮತ್ತು ಸುಲಭವಾಗಿ ಬಳಸುವ ಶಬ್ದಗಳಿಗೆ ಸ್ವತಃ ಏನೂ ಅರ್ಥವಿಲ್ಲದಾಗುತ್ತದೆ. ಇದರ ಜೊತೆಗೆ ನೀವು ನಿಮ್ಮ ಆಕಾಶವಾಣಿ ದಿನಗಳಲ್ಲಿ ಕೆಟ್ಟ ರೂಪಕಗಳನ್ನು ಕೇಳಿ ಪಡೆದುಕೊಂಡಂತಿರುವ ಚರ್ವಿತಚರ್ವಣ ಶೈಲಿ. ಉದಾ: ಯಾರಾರದ್ದೋ ಎಲ್ಲರಿಗೂ ಗೊತ್ತಿರುವ ಅಥವಾ ಒಂಚೂರೂ ವಿಶೇಷವೆನಿಸದ ಪರಿಚಯ ನೀಡಿ, 'ಈಗ ಇವರು ಏನು ಹೇಳುತ್ತಾರೋ ನೋಡೋಣ' ಅಥವಾ 'ಇವರು ಹೇಳುವುದು ಹೀಗೆ' ಇತ್ಯಾದಿ. ಜೊತೆಗೆ 'ನೋಡು(ಡಿ) ನಾಗರಾಜ(ಜ್)/ ಹವಲ್ದಾರ್'ಗಳ ವಿಪರೀತ ಪರಿಣಾಮದ ವಿಪರೀತ ಪ್ರಯೋಗಗಳು!

ಇವೆಲ್ಲವೂ ಸೇರಿ ಪಂಡಿತ್‌ಜೀಯವರ ವ್ಯಕ್ತಿತ್ವದ ಆಂತರಿಕ ಸಂಚಲನಗಳ ಬಗ್ಗೆ- ಉದಾ: ಅವರು ಮನೆ ಬಿಟ್ಟು ಹೋದಾಗ ಇದ್ದ ಅವರ ನಿಜವಾದ ಮನಃಸ್ಥಿತಿ, ಅವರು ಎರಡನೇ ಮದುವೆಯಾದಾಗಿನ ಅವರ ಮನಸ್ಸಂಕೀರ್ಣತೆ, ಅವರು ಕುಡಿತದ ಚಟಕ್ಕೆ ಬಿದ್ದ ಮತ್ತು ಅದನ್ನು ಬಿಡಬೇಕಾಗಿ ಬಂದ ನಿಜವಾದ ಹಿನ್ನೆಲೆ, ಅವರು ಹಠದಂತೆ ವಚನಗಳನ್ನು ಹಾಡಲು ನಿರಾಕರಿಸಿದ್ದರ ಹಿಂದಿನ ನಿಜವಾದ ತಾತ್ವಿಕ ಕಾರಣ, ಅವರು ಬಹುವಾಗಿ ಇಷ್ಟ ಪಡುತ್ತಿದ್ದ ರಾಗಗಳು, ಅದರ ಕಾರಣಗಳು ಮತ್ತು ಹಿನ್ನೆಲೆ, ಕನ್ನಡ ಮತ್ತು ಕರ್ನಾಟಕ ಕುರಿತ ಅವರ ವಿಶೇಷ ಪ್ರೀತಿ-ಒಳನೋಟಗಳನ್ನು ನೀಡುವಂತಿದ್ದಿದ್ದರೂ ಇವು ಸಹನೀಯವಾಗುತ್ತಿದ್ದವು. ಅದರೆ ಯಾವ ಒಳನೋಟಗಳೂ ಇಲ್ಲದೆ ಪುಸ್ತಕದ ಅಧ್ಯಾಯಗಳ ಶೀರ್ಷಿಕೆಗಳೂ ಸೇರಿದಂತೆ ಪುಸ್ತಕದ ಭಾಷೆ ಎಲ್ಲ ಒಣ ಒಣ, ಜಡ ಜಡ ಎನಿಸಿಬಿಡುತ್ತದೆ. ದಾಸರ ಪದ ಮತ್ತು ವಚನಗಳನ್ನು ಸೊಗಸಾಗಿ ಹಾಡುವ ನಿಮ್ಮ ಇಲ್ಲಿನ ನಿರೂಪಣೆಯ ಭಾಷೆ ಇನ್ನಷ್ಟು ಸೃಜನಶೀಲವಾಗಿರಬೇಕಿತ್ತೆಂದು ನನ್ನ ಭಾವನೆ.

ಇನ್ನು ನಿಮ್ಮ ಕೆಲವು ವಾಕ್ಯಗಳು ಅವುಗಳ ಮುಗ್ಧತೆಯಿಂದಾಗಿಯೇ ತಮಾಷೆಯಾಗಿ ಕಾಣುತ್ತವೆ: 'ಅವರು ಇತರರ ಸಣ್ಣ ಪುಟ್ಟ ದೋಷ-ದೌರ್ಬಲ್ಯಗಳ ಬಗ್ಗೆ ಎಂದೂ ಮಾತಾಡುತ್ತಿರಲಿಲ್ಲ' (ಅಂದರೆ ದೊಡ್ಡ ದೋಷ-ದೌರ್ಬಲ್ಯಗಳ ಬಗ್ಗೆ ಮಾತನಾಡುತ್ತಿದ್ದರು ಎಂದೇ?) ಇನ್ನೊಂದು: 'ನಾನು ಮತ್ತು ನನ್ನ ಪತ್ನಿ ಅಂದು ಒಂದೇ ಕಾರಿನಲ್ಲಿ ಹೋದೆವು'. (ಇದರಲ್ಲೇನು ವಿಶೇಷ?) ಈ ಪುಸ್ತಕದಲ್ಲಿ ನಾನು ಕಂಡ ಇನ್ನೊಂದು ತಮಾಷೆ ಎಂದರೆ, ನಿಮ್ಮ ಬರಹದ ನಾಯಕನ 'ಮದ್ಯಲಯ'ದ ಬಗ್ಗೆ ಇತರರಿಗೇಕೆ ಇಷ್ಟೊಂದು ಉಸಾಬರಿ ಎಂದು ಕೇಳುವ ನೀವೇ ಅದರ ಬಗ್ಗೆ ಒಂದು ದೊಡ್ಡ ಅಧ್ಯಾಯವನ್ನೇ ಬರೆದಿರುವುದು ಮತ್ತು ಅದರ ಬಗ್ಗೆ ಒಂದು ಕಡೆ 'ಅಪಲಾಜೆಟಿಕ್' ಆಗಿ ಇದ್ದಂತೆ ತೋರಿ ಇನ್ನೊಂದೆಡೆ ಈ ಅವರ ಈ 'ಮದ್ಯಲಯ'ದ 'ಕೆಪಾಸಿಟಿ'ಯನ್ನು ವೈಭವೀಕರಿಸುವಂತೆ ಬರೆದಿರುವುದು! ಇಲ್ಲೇ ಹೇಳಬಹುದಾದ ಇನ್ನೊಂದು ಮಾತೆಂದರೆ ಪುಸ್ತಕದ ಶೀರ್ಷಿಕೆಯೂ ಸೇರಿದಂತೆ ಪುಸ್ತಕದಾದ್ಯಂತ ಕಾಣುವ 'ಭಾರತ ರತ್ನ' ಬಿರುದು ಕುರಿತ ನಿಮ್ಮ ಹುರುಪು ಸಂಪೂರ್ಣ ಅನಗತ್ಯವಾದದ್ದು. ಏಕೆಂದರೆ ಭೀಮಸೇನ ಜೋಷಿಯವರ ಹಾಡು ಅದಕ್ಕಿಂತ ತುಂಬ ದೊಡ್ಡದು. ಅದು ನಿಮಗೆ ಗೊತ್ತಿರಬೇಕಿತ್ತು.

ಕೊನೆಯದಾಗಿ, ನೀವು ಜೋಷಿಯವರನ್ನು ನಿಮ್ಮ 'ಪರಮ ಗುರು' ಎಂದು ಕರೆದಿದ್ದೀರಿ. ಗುರುವಿನ ಗುರು ಎಂದರ್ಥದಲ್ಲಾಗಿದ್ದರೆ ಇದು ತಪ್ಪು ಪ್ರಯೋಗವೆನಿಸುತ್ತದೆ. ಪರಮ ಗುರು ಎಂದರೆ ಆತ್ಯಂತಿಕ (Ultimate) ಗುರು. ಈ ಅರ್ಥದಲ್ಲಿ ಕರೆದಿದ್ದರೆ ಅದು ಸರಿ. ಆದರೆ ನನ್ನ ಪ್ರಕಾರ ಅವರು ನಿಮಗೆ ನಿಜವಾಗಿ ಆತ್ಯಂತಿಕ ಗುರುಗಳೇ. ಈ ವಿಶೇಷ ಕಾರಣಕ್ಕಾಗಿ: ಅವರು ನಿಮಗೆ ಆಕಾಶವಾಣಿಯಲ್ಲಿ ಉಳಿದರೆ ಹಾಳಾಗುತ್ತೀ ಎಂದು ಎಚ್ಚರಿಕೆ ನೀಡಿ ನಿಮ್ಮನ್ನು ಬದುಕಿನಲ್ಲಿ ಪಾರು ಮಾಡಿದರು! ಆದರೆ ನಮ್ಮಂಥವರು ನಮಗೆ ನಾವೇ ಪರಮಗುರುಗಳಾಗಿ ಮೂಡುವ ತನಕ ಕಾಯಬೇಕಾಯಿತು. ಅಷ್ಟು ಹೊತ್ತಿಗೆ ತುಂಬ ಅಲ್ಲದಿದ್ದರೂ ಸಾಕಷ್ಟು ತಡವಾಗಿತ್ತು! ನಿಮಗೆ ಅಭಿನಂದನೆಗಳು!!

ಈ ನನ್ನ ವಿಮರ್ಶೆ ಎಂಬ ಪುರಾಣ ನಿಮಗೆ ಹೇಗನ್ನಿಸೀತೋ ತಿಳಿಯದು. ಆದರೆ ನಾನು ಇದನ್ನು ತುಂಬು ಪ್ರೀತಿ-ಅಭಿಮಾನಗಳಿಂದಷ್ಟೇ ಬರೆದಿದ್ದೇನೆ ಎಂದು ಪ್ರಾಮಾಣಿಕವಾಗಿ ಹೇಳಬಲ್ಲೆ.

ನಿಮ್ಮ ಪತ್ನಿ-ಪುತ್ರರಿಗೆ ನನ್ನ ಮತ್ತು ಸವಿತಾಳ ನೆನಪು ತಿಳಿಸಿ. ನಮ್ಮ ಒಂದೆರಡು-ಮೂರು ಪುಸ್ತಕ ಕಳಿಸಿದ್ದೇವೆ. ಓದಿ ಆನಂದಿಸಿ ಅಥವಾ ಶಪಿಸಿ. ಆದರೆ ವಿಮರ್ಶೆ ಮಾಡಲು ಹೋಗಬೇಡಿ. ಏಕೆಂದರೆ ಅದರಿಂದ ಸಮಯ ವ್ಯರ್ಥ!

ಪ್ರೀತಿಯಿಂದ,

ನಿಮ್ಮ

ಡಿ.ಎಸ್. ನಾಗಭೂಷಣ

ನಮ್ಮ ಅಸ್ಸಾಂ-ಮೇಘಾಲಯ ಪ್ರವಾಸ

(ನನ್ನ ಕುಟುಂಬವು ಮೂವರು ಗೆಳೆಯರ ಕುಟುಂಬಗಳೊಂದಿಗೆ ೨೦೧೬ ನವೆಂಬರ್ ಎರಡನೆಯ ವಾರದಲ್ಲಿ ಅಸ್ಸಾಂ-ಮೇಘಾಲಯ ಪ್ರವಾಸ ಹೋದ ಸಂದರ್ಭದಲ್ಲಿ ನಾನು ನನ್ನ ಫೇಸ್‌ಬುಕ್ ಗೆಳೆಯರೊಂದಿಗೆ ಹಂಚಿಕೊಂಡ ಅನುಭವಗಳ ಬರಹಗಳಿವು.)

ಷಿಲ್ಲಾಂಗ್‌ನಿಂದ ಚಿರಾಪುಂಜಿಯವರೆಗೆ...

ಚಿರಾಪುಂಜಿ ಎಲ್ಲರಿಗೂ ಗೊತ್ತು. ಅದು ಭಾರತದಲ್ಲೇ ಅತಿ ಹೆಚ್ಚು ಮಳೆಬೀಳುವ ಊರೆಂದು ಇತ್ತೀಚಿನವರೆಗೆ ಪ್ರಸಿದ್ಧವಾಗಿತ್ತು. ಈಗ ಆ ಪ್ರಸಿದ್ಧಿ ನಮ್ಮ ಆಗುಂಬೆಯ ಪಾಲಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ಎಲ್ಲ ಕಡೆಯೂ ಆಗುತ್ತಿರುವಂತೆ ಆಗುಂಬೆಯಲ್ಲೂ ಈಗ ಮಳೆ ಕಡಿಮೆ. ಇರಲಿ. ನಾವು ಚಿರಾಪುಂಜಿಗೆ ಹೊರಟಿದ್ದು, ಮೇಘಾಲಯದ ರಾಜಧಾನಿ ಷಿಲ್ಲಾಂಗನಿಂದ ನವೆಂಬರ್ ೧೦ರ ಬೆಳಿಗ್ಗೆ.

ನಮ್ಮ ಈ ಪ್ರಯಾಣದ ಬಗ್ಗೆ ಬರೆಯುವ ಮುನ್ನ ಷಿಲ್ಲಾಂಗ್ ನಗರದ ಬಗ್ಗೆ ಕೊಂಚ ಬರೆಯಬೇಕು. ಷಿಲ್ಲಾಂಗ್ ಒಂದು ಬೃಹತ್ ಗಿರಿಧಾಮ. ಈ ನಗರ ಈ ಹಿಂದೆ ಮೇಘಾಲಯವು ಅಸ್ಸಾಂನ ಭಾಗವಾಗಿದ್ದಾಗ ಅದರ ರಾಜಧಾನಿಯಾಗಿದ್ದುದು. ಹಾಗಾಗಿ ಅದು ಗಿರಿ ಪರ್ವತಗಳ ಶಿಖರ-ಕಣಿವೆಗಳಲ್ಲಿ ಬೃಹತ್ತಾಗಿ ಬೆಳೆದಿರುವ ನಗರ. ಇಲ್ಲಿನ ಜನ ಬಹುತೇಕ ಖಾಸಿ ಆದಿವಾಸಿ ಪಂಗಡಕ್ಕೆ ಸೇರಿದವರು. ಖಾಸಿ ಭಾಷೆ ಮಾತಾಡುವವರು. ಬಹುತೇಕ ಕ್ರಿಶ್ಚಿಯನ್ ಮತಕ್ಕೆ ಸೇರಿದವರು. ಇಲ್ಲಿ ನೋಡಲು ಅರ್ಹವಾದದ್ದು ಸ್ವತಃ ಆ ಊರೇ. ಆ ಊರಿನ ಅತಿ ಸುಂದರ ಜನರೇ!

ಇವುಗಳನ್ನು ಬಿಟ್ಟರೆ ಈ ಊರಿನಲ್ಲಿ ನೋಡಬೇಕಾದದ್ದು ಎಂದರೆ, ಕ್ರೈಸ್ತ ಪಾದ್ರಿ ಡಾನ್ ಬಾಸ್ಕೋ ನಿರ್ಮಿಸಿರುವ ಈಶಾನ್ಯ ರಾಜ್ಯಗಳ ಬುಡಕಟ್ಟುಗಳ ಇತಿಹಾಸ-ಪರಂಪರೆಗಳನ್ನು ಕುರಿತ ಒಂದು ಬೃಹತ್ ವಸ್ತು ಸಂಗ್ರಹಾಲಯ. ಇದನ್ನು ನೋಡಲು

ನಾವು ಹೊರಟಾಗ ಮಧ್ಯಾಹ್ನ ಮೂರುಗಂಟೆ. ಚುಮು ಚುಮು ಚಳಿ. ಹಾವಿನಂತೆ ಸುರುಳಿ ಸುತ್ತಿ ಸಾಗಿದ್ದ ರಸ್ತೆಯ ತುಂಬ ಚಿಲಿಪಿಲಿಗುಟ್ಟುತ್ತಾ ಶಾಲೆ ಮುಗಿಸಿ ಹೊರಟ ಮುದ್ದು ಮುಖಗಳ ಮಕ್ಕಳ ಹಿಂಡು. ನೋಡುವುದೇ ಒಂದು ಚೆಂದ. ಅಲ್ಲಲ್ಲಿ ಮಕ್ಕಳನ್ನು ಬೆನ್ನ ಚೀಲಗಳಲ್ಲಿ ಹೊತ್ತ ವಿಶಿಷ್ಟ ಈಶಾನ್ಯ ಉಡುಗೆಯ ಹೆಂಗಸರು. ಈ ಅರ್ಧ ತಾಸಿನ ಪಯಣದಲ್ಲಿ ನಾನು ಕಂಡದ್ದು ಸೀರೆ ಉಟ್ಟ ಒಬ್ಬ ಮಹಿಳೆಯನ್ನು ಮಾತ್ರ! ಗಂಡಸರು ರಸ್ತೆಗಳಲ್ಲಿ ಏಕೋ ಹೆಚ್ಚು ಕಾಣುವುದಿಲ್ಲ. ಕಂಡವರೆಲ್ಲ ವಯಸ್ಸಾದವರು! ಕಾರಣವೇನೆಂದು ನಮ್ಮ ಅಸ್ಸಾಮೀ ಚಾಲಕ ಅರುಣ್ ಹಜಾರಿಕಾನನ್ನು ಕೇಳಿದರೆ ಆತ, 'ಅವರೆಲ್ಲ ಕುಡಿದು ಹಾಗೆ ಆಗಿದ್ದಾರೆ ಅಷ್ಟೆ!' ಎಂದು ನಕ್ಕ.

ಏಳು ಅಂತಸ್ತುಗಳ ಈ ಈಶಾನ್ಯ ರಾಜ್ಯಗಳ ವಸ್ತು ಸಂಗ್ರಹಾಲಯದ ಮೂರು ಅಂತಸ್ತುಗಳು ನೆಲ ಮಹಡಿಗಳಲ್ಲಿವೆ. ಅವುಗಳ ಮೇಲೆ ಉಳಿದ ನಾಲ್ಕು ಅಂತಸ್ತುಗಳು. ಎಲ್ಲವಕ್ಕೂ ತಂಪಾದ ಅಮೃತಶಿಲೆಯ ನೆಲೆಗಟ್ಟಿದೆ. ಪ್ರತಿ ಅಂತಸ್ತಿನಲ್ಲೂ ಈಶಾನ್ಯ ಭಾರತದ ಇತಿಹಾಸ-ಸಂಸ್ಕೃತಿಗಳನ್ನು ಪ್ರತಿಬಿಂಬಿಸುವ ವಸ್ತು ವಿಶೇಷಗಳನ್ನೂ, ವರ್ಣ ಚಿತ್ರಗಳನ್ನೂ, ಪ್ರತಿಕೃತಿಗಳನ್ನೂ ವಿಷಯವಾರು ವಿಂಗಡಿಸಿ ಮಾಹಿತಿ ಪತ್ರಗಳೊಂದಿಗೆ ಪ್ರದರ್ಶಿಸಿದ್ದಾರೆ. ಇದನ್ನೆಲ್ಲ ಇಡಿಯಾಗಿ ನೋಡಲು ಒಂದು ದಿವಸ ಸಾಲುವುದಿಲ್ಲ. ಆಯಾಸವಾದರೆ ಏಳನೇ ಮಹಡಿಯಲ್ಲಿ ಚಹಾ ಬಿಸ್ಕತ್ತುಗಳ ಸೇವನೆಗೆ ಒಂದು ಸಣ್ಣ ಚಹಾ ಮಂದಿರವೂ ಇದೆ. ಅದರ ಪಕ್ಕದಲ್ಲೇ ಈಶಾನ್ಯ ರಾಜ್ಯಗಳ ಸಂಸ್ಕೃತಿಯನ್ನು ಕುರಿತು ತಯಾರಿಸಲಾಗಿರುವ ಒಂದು ಸುಂದರ ಸಾಕ್ಷ್ಯಚಿತ್ರವನ್ನು ನಿರಂತರವಾಗಿ ಪ್ರದರ್ಶಿಸುವ ಪುಟ್ಟ ಚಲನಚಿತ್ರ ಮಂದಿರವಿದೆ. ನೆಲ ಅಂತಸ್ತಿನಲ್ಲಿ ಈಶಾನ್ಯ ರಾಜ್ಯಗಳ ಕರಕುಶಲ ವಸ್ತುಗಳ ಮಾರಾಟ ಮಳಿಗೆಯೂ ಇದೆ. ಈ ಇಡೀ ವಸ್ತು ಸಂಗ್ರಹಾಲಯವನ್ನು ಮೇಘಾಲಯದ ಹತ್ತಾರು ಹುಡುಗಿಯರು ಸಂದರ್ಶಕರಿಗೆ ನಗುಮೊಗದಿಂದ ಎಲ್ಲ ಮಾಹಿತಿ ನೀಡುತ್ತಾ ನಿರ್ವಹಿಸುತ್ತಾರೆ.

ಕಟ್ಟಡದ ತುದಿಯಲ್ಲಿ ಕಬ್ಬಿಣದ ಪಂಜರದಂತಿರುವ 'ಆಕಾಶ ನಡಿಗೆ' (Sky Walk) ಸೌಲಭ್ಯವಿದ್ದು ಅಲ್ಲಿಂದ ಇಡೀ ಷಿಲ್ಲಾಂಗ್ ನಗರದ ವಿಹಂಗಮ ನೋಡ ಕಾಣಬಹುದು. ನಾವು ಅಂದು ಅಲ್ಲಿಗೆ ತಲುಪಿದಾಗ ಸಂಜೆ ನಾಲ್ಕೂವರೆ. ಸೂರ್ಯ ಮುಳಗತೊಡಗಿ ಕತ್ತಲು ಆವರಿಸತೊಡಗಿತ್ತು. ಈಶಾನ್ಯ ರಾಜ್ಯಗಳಲ್ಲಿ ಸೂರ್ಯ ನಾಲ್ಕೂವರೆ ಐದರ ಮಧ್ಯೆ ಮುಳುಗಿ ಐದರ ಹೊತ್ತಿಗೆ ಸಂಪೂರ್ಣ ಕತ್ತಲೆ ಆವರಿಸಿ ವಿದ್ಯುದ್ದೀಪಗಳು ಬೆಳಗತೊಡಗುತ್ತವೆ. ಈ ರಾಜ್ಯಗಳಲ್ಲಿ ಶಾಲಾ ಕಾಲೇಜುಗಳ ಸಮಯ ಬೆಳಿಗ್ಗೆ ಎಂಟರಿಂದ ಮಧ್ಯಾಹ್ನ (ಅಂದರೆ ಅಲ್ಲಿ ಸಂಜೆ!) ಮೂರರವರೆಗೆ. ಸರ್ಕಾರಿ ಕಛೇರಿಗಳು ನಡೆಯುವುದು ಬೆಳಿಗ್ಗೆ ಒಂಭತ್ತರಿಂದ ಸಂಜೆ ನಾಲ್ಕರವರೆಗೆ!

ಷಿಲ್ಲಾಂಗ್ ಬಳಿ ನೋಡಬಹುದಾದ ಇನ್ನೊಂದು ತಾಣವೆಂದರೆ 'ಬಡಾ ಪಾನಿ' ಎಂಬ ಬೃಹತ್ ಸರೋವರ. ಗೌಹಾತಿಯಿಂದ ಷಿಲ್ಲಾಂಗ್‌ಗೆ ಬರುವಾಗ ಷಿಲ್ಲಾಂಗ್

ನಗರದ ಏರನ್ನು ಏರುವ ಮುನ್ನ ಸಿಗುವ ಈ ಸರೋವರ ನೂರಾರು ಎಕರೆಗಳಷ್ಟು ವಿಸ್ತರಿಸಿ ತನ್ನ ಸುತ್ತಮುತ್ತಲಿನ ರಮಣೀಯ ಪ್ರಾಕೃತಿಕ ದೃಶ್ಯಗಳಿಂದ ನಮ್ಮ ಗಮನ ಸೆಳೆಯುತ್ತದೆ. ನಾವು ಅಲ್ಲಿಗೆ ಹೋದಾಗ ಯಾವುದೋ ವಾಣಿಜ್ಯ ಜಾಹೀರಾತಿಗಾಗಿ ಒಬ್ಬ ಈಶಾನ್ಯ ಸುಂದರಿಯನ್ನು ರೂಪದರ್ಶಿಯನ್ನಾಗಿರಿಸಿಕೊಂಡು ಚಿತ್ರೀಕರಣ ನಡೆಯುತ್ತಿತ್ತು. ಅದು ಎಷ್ಟು ಅನೌಪಚಾರಿಕವಾಗಿ ಸದ್ದಿಲ್ಲದೆ ನಡೆಯುತ್ತಿತ್ತೆಂದರೆ, ಆ ಕಡೆಯೇ ಗಮನ ಹರಿಸದ ಯಾರಿಗೂ ಅದು ಚಿತ್ರೀಕರಣದ ಕೆಲಸ ಎಂದು ಗೊತ್ತಾಗುವಂತಿರಲಿಲ್ಲ! ಸರೋವರದಲ್ಲಿ ದೋಣಿ ವಿಹಾರದ ಸೌಲಭ್ಯವೂ ಇದೆ. ನಮ್ಮಲ್ಲಿ ಕೆಲವರು ಆ ವಿಹಾರವನ್ನೂ ಮಾಡಿಬಂದರು.

ಷಿಲ್ಲಾಂಗ್‌ನಿಂದ ಚಿರಾಪುಂಜಿಗೆ ಹೋಗುವ ಸುಮಾರು ೧೫೦ ಕಿ.ಮೀ. ಗಳ ಪ್ರಯಾಣ ನಿಜವಾಗಿಯೂ ಮನಮೋಹಕವಾದದ್ದು. ಹಲವಾರು ವೀಕ್ಷಣಾ ತಾಣಗಳು, ಜಲಪಾತಗಳು, ಆಳದ ಕಣಿವೆಗಳು ನಮ್ಮನ್ನು ಎದುರಾಗುತ್ತವೆ. ಒಂದು ವೀಕ್ಷಣಾ ತಾಣ ಭಾರತೀಯ ವಾಯು ನೆಲೆಯ ಪ್ರದೇಶದಲ್ಲಿದ್ದು ಅಲ್ಲಿಗೆ ಹೋಗಲು ವಾಯುಪಡೆಯ ಸೈನಿಕರಿಂದ ತಪಾಸಣೆಗೆ ಒಳಗಾಗಬೇಕಾಗುತ್ತದೆ. ಆ ತಾಣದಿಂದ ಷಿಲ್ಲಾಂಗ್ ನಗರ ಆಳದ ಕಣಿವೆಯಲ್ಲಿ ನೆಮ್ಮದಿಯಿಂದ ಮಲಗಿರುವ ಸುಂದರ ದೃಶ್ಯ ಕಾಣುತ್ತದೆ. ಅಲ್ಲಿ ಈಶಾನ್ಯ ರಾಜ್ಯಗಳ ಕರಕುಶಲ ವಸ್ತುಗಳ ಸಣ್ಣ ಮಳಿಗೆಗಳಿವೆ. ಆದರೆ ಅಂದು ನಾವು ಅಲ್ಲಿಗೆ ಹೋದ ಹಿಂದಿನ ರಾತ್ರಿ ಸರ್ಕಾರ ದೊಡ್ಡ ನೋಟುಗಳನ್ನು ರದ್ದು ಮಾಡಿದ್ದುದರಿಂದ ಮತ್ತು ಆಶ್ಚರ್ಯಕರವಾಗಿ ಆ ಸುದ್ದಿ ಚುಮುಚುಮು ಬೆಳಿಗ್ಗೆ ಹೊತ್ತಿಗೇ ಆ ಮೂಲೆಯ ಜಾಗಕ್ಕೂ ತಲುಪಿದ್ದು, ಮಳಿಗೆಗಳಲ್ಲಿ ಅಷ್ಟೇನೂ ವ್ಯಾಪಾರ ನಡೆಯಲಿಲ್ಲ. ಇದು ಹೇಗೆ ಸಾಧ್ಯವಾಯಿತೆಂದು ನೋಡಿದರೆ, ಮಳಿಗೆಯಲ್ಲಿದ್ದ ವ್ಯಾಪಾರಿಗಳೆಲ್ಲರ ಕೈಗೆ ಆ ಹೊತ್ತಿಗೇ 'ಷಿಲ್ಲಾಂಗ್ ಟೈಮ್ಸ್' ಪತ್ರಿಕೆ ದೊರೆತಿತ್ತು. ಮೇಘಾಲಯ ಆದಿವಾಸಿಗಳ ರಾಜ್ಯವಾದರೂ ಅಕ್ಷರಜ್ಞಾನದಿಂದ ಜಾಗೃತವಾದ ರಾಜ್ಯ.

ಚಿರಾಪುಂಜಿ ಮೇಘಾಲಯದ ದಕ್ಷಿಣಕ್ಕೆ ಬಾಂಗ್ಲಾದೇಶದ ಗಡಿಯಲ್ಲಿರುವ ಜಿಲ್ಲಾ ಕೇಂದ್ರ. ಹಾಗಾಗಿ ಅಲ್ಲಿಗೆ ಹೋಗಲು ಹಲವಾರು ಆಳದ ಕಣಿವೆಗಳನ್ನು ಇಳಿದು ಹೋಗಬೇಕು. ಹಾಗೆ ಇಳಿದು ಹೋಗುವಾಗ ಎದುರಾಗುವ ಮೊದಲ ಜಲಪಾತವೆಂದರೆ 'ಎಲಿಫೆಂಟ್' ಜಲಪಾತ. ಕಾಡಿನ ಮಧ್ಯೆ ಝರಿಯೊಂದು ಇಳಿಯುತ್ತಾ ನಿರ್ಮಾಣವಾಗಿರುವ ಈ ಜಲಪಾತದ ಹಿನ್ನೆಲೆಯಲ್ಲಿ ಆನೆಯನ್ನು ಹೋಲುವ ಒಂದು ಬಂಡೆ ಇತ್ತಂತೆ. ಅದೀಗ ಭೂಕಂಪಕ್ಕೆ ಸಿಕ್ಕಿ ಕುಸಿದಿದೆ ಎಂದು ಅಲ್ಲಿನ ಮಾಹಿತಿ ಫಲಕ ಹೇಳುತ್ತದೆ. ಆದರೂ ಈ ಜಲಪಾತ ಆನೆಯ ಹೆಸರು ಉಳಿಸಿಕೊಂಡಿದೆ. ನಮ್ಮ ಮಡಿಕೇರಿ ಬಳಿಯ ಅಬ್ಬಿ ಜಲಪಾತದಷ್ಟೂ ರಮಣೀಯವಾಗಿರದ ಈ ಜಲಪಾತ ನೋಡಲು ದೊಡ್ಡ ಜನಸಂದಣಿಯೇ ಸೃಷ್ಟಿಯಾಗಿತ್ತು. ಇದಕ್ಕೆ ಕಾರಣ ಮೇಘಾಲಯದ ಪ್ರವಾಸೋದ್ಯಮ ಇಲಾಖೆ ಕೈಗೊಂಡಿರುವ ಪ್ರಚಾರ ಮತ್ತು ಅಲ್ಲಿ ಮಾಡಿರುವ

ಮೂಲಭೂತ ಸೌಕರ್ಯಗಳು. ನಮ್ಮ ರಾಜ್ಯದ ಪ್ರವಾಸೋದ್ಯಮ ನೋಡಿ. ಅಬ್ಬಿ ಜಲಪಾತವಿರಲಿ, ಜಗತ್ಪ್ರಸಿದ್ಧ ಜೋಗ ಜಲಪಾತವನ್ನೂ ಮೂಲಭೂತ ಸೌಕರ್ಯಗಳಿಂದ ಸಜ್ಜುಗಳಿಸದೆ ದರಿದ್ರ ಸ್ಥಿತಿಯಲ್ಲಿಟ್ಟಿದೆ. ಈಚೆಗೆ ನಾನು ಅಲ್ಲಿಗೆ ಹೋಗಿದ್ದಾಗ, ಎಲ್ಲೋ ನಮ್ಮ ಪ್ರವಾಸೋದ್ಯಮ ಇಲಾಖೆಯ ಜಾಹೀರಾತು ಫಲಕ ನೋಡಿ ಬೆಂಗಳೂರಿನಿಂದ ಗಾಡಿ ಮಾಡಿಕೊಂಡು ಕುಟುಂಬದೊಂದಿಗೆ ಬಂದಿದ್ದ ಉತ್ತರ ಭಾರತದ ಒಬ್ಬ ಪ್ರವಾಸಿ, ಜಲಪಾತದಲ್ಲಿ ಒಂದು ಹನಿ ನೀರನ್ನೂ ಕಾಣದೆ ಹತಾಶನಾಗಿ, ಕರ್ನಾಟಕವನ್ನು ಅತಿ ಅಶ್ಲೀಲ ಭಾಷೆಯಲ್ಲಿ ಬೈಯ್ಯುತ್ತಿದ್ದುದನ್ನು ಕೇಳಿ ಜಿಗುಪ್ಸೆಯೆನಿಸಿತ್ತು.

ಮುಂದಿನ ದಾರಿಯಲ್ಲಿ ಮಲೆನಾಡಿನ ಘಾಟಿ ರಸ್ತೆಗಳಲ್ಲಿ ಕಾಣುವಂತಹ ಹಲವಾರು ತಣ್ಣನೆಯ ಹಳ್ಳಿಗಳು, ಸಣ್ಣ ಊರುಗಳು ಕಾಣಸಿಗುತ್ತವೆ. ಝುಂಪಾ ಎಂಬ ರುದ್ರ ಮನೋಹರವೆನಿಸಿದ ಒಂದು ಆಳದ ಕಣಿವೆಯ ಬಳಿ ನಾವು ವಿಶ್ರಮಿಸಿಕೊಳ್ಳಲು ಗಾಡಿ ನಿಲ್ಲಿಸಿದಾಗ ಆ ದುರ್ಗಮ ತಾಣದಲ್ಲೂ ಹಣ್ಣು-ಹಂಪಲು ಮುಸುಕಿನ ಜೋಳ ಮಾರಲು ಕೂತ ಗಿರಿಕನ್ಯೆಯರು ಕಂಡು ಮನಸ್ಸು ಉಲ್ಲಾಸಗೊಂಡಿತು. ಕಣಿವೆಯ ಆ ಪರ್ವತದಿಂದ ಈಚೆಯ ಈ ಪರ್ವತಕ್ಕೆ ಹಗ್ಗದ ತೂಗುಸೇತುವೆಯ ಮೇಲೆ ತುಯ್ದಾಡುತ್ತಾ ಬಂದು ಇಲ್ಲಿ ವ್ಯಾಪಾರ ಮಾಡುವ ಈ ಮಹಿಳೆಯರನ್ನು ನೋಡಿದಾಗ ಇಲ್ಲಿ ಬದುಕು ದುಸ್ತರವಾಗಿದೆ ಅನ್ನಿಸಿದರೂ, ಆ ಮಹಿಳೆಯರ ಮುಖಗಳ ಮೇಲಿದ್ದ ಮಂದಹಾಸ, ಇದೆಲ್ಲ ನಾವು ಅವರನ್ನು ನೋಡುವ ದೃಷ್ಟಿಯಲ್ಲಿರುವ ಕೆಟ್ಟ 'ಕರುಣೆ'ಯಲ್ಲಿ ಹುಟ್ಟುವ ಹುಸಿ ಕಲ್ಪನೆ ಮಾತ್ರ ಎನಿಸುವುದೂ ಉಂಟು.

ಚಿರಾಪುಂಜಿ ಹತ್ತಿರ ಹತ್ತಿರವಾಗುತ್ತಿದ್ದಂತೆ ಕಾಡು ಕಡಿಮೆಯಾಗುತ್ತಾ ಆಶ್ಚರ್ಯವೆಂಬಂತೆ ಹುಲ್ಲುಗಾವಲುಗಳು, ಅವುಗಳ ಮಧ್ಯೆ ಸಣ್ಣಪುಟ್ಟ ಕಪ್ಪು ಬಂಡೆಗಳೂ, ನೀರಿನ ಒರತೆಗಳೂ ಕಾಣತೊಡಗಿದವು. ಅಂತಹ ಒಂದು ಕಡೆ ಚಹಾ ಕುಡಿಯಲು ಇಳಿದಾಗ ದೂರದಲ್ಲಿ ಒಂದು ಜಲಪಾತವಿರುವ ಫಲಕ ಕಂಡು ಸವಿತಾ ಸೇರಿದಂತೆ ಹಲವರು ಆ ಪುಟ್ಟ ಕಣಿವೆ ಇಳಿದು ಹೊರಟೇ ಬಿಟ್ಟರು. ನಮ್ಮ ಪ್ರವಾಸದಲ್ಲಿಲ್ಲದ ಈ ಕಾರ್ಯಕ್ರಮದಿಂದ ಗಾಬರಿಯಾದ ನಮ್ಮ ಪ್ರವಾಸ ನಿರ್ವಾಹಕ ಶಿವದಾಸ್ ಅವರ ಹಿಂದೆ ಓಡಿದರು. ಇದನ್ನು ನೋಡಿ ಕೆಲ ವೃದ್ಧರಿಗೂ ಉತ್ಸಾಹ ಬಂದು ಅವರೂ ಜಲಪಾತದ ಅನ್ವೇಷಣೆಗೆ ಹೊರಟುಬಿಟ್ಟರು. ಅಂತೂ ಅವರೆಲ್ಲ ಒಂದು ಕಿ.ಮೀ. ಇಳಿದು ಒಂದು ತೊರೆಯ ನೀರ್ಬೀಳವನ್ನು ನೋಡಿ ತೊರೆಯಲ್ಲಿ ಕಾಲು ತಣ್ಣಗೆ ಮಾಡಿಕೊಂಡು ಬಂದರು. ನಾವು ಆ ಕೆಳ ಕಣಿವೆಯ ಹುಲ್ಲುಗಾವಲುಗಳ ವೈವಿಧ್ಯವನ್ನು ಆನಂದಿಸುತ್ತಾ ಕಾಲ ಕಳೆದವು. ಹಸಿವೂ ಆಗಿದ್ದುದರಿಂದ ನಮ್ಮ 'ನಿರ್ಮಲಾ ಟ್ರಾವೆಲ್ಸ್'ನ ಬಸವರಾಜು ನೇತೃತ್ವದ ಅಡುಗೆ ತಂಡ ಷಿಲ್ಲಾಂಗ್‌ನಲ್ಲಿ ಸಿದ್ಧಪಡಿಸಿ ಕಟ್ಟಿಕೊಂಡು ಬಂದಿದ್ದ ಪಲಾವ್, ಅನ್ನ-ಸಾರು, ಅನ್ನ-ಮೊಸರಿನ ಊಟ ಸವಿದೆವು. ಯಾರೋ ಒಬ್ಬ ಬಂದು ದೂರ ಕೈ ಮಾಡುತ್ತಾ ಅಲ್ಲಿಂದ ಬಾಂಗ್ಲಾದೇಶ ಆರಂಭವಾಗುತ್ತದೆ ನೋಡಿ ಎಂದ. ಆ ಹೊತ್ತಿಗೆ ಬಂದ ನಮ್ಮ ಪ್ರವಾಸ ನಿರ್ವಾಹಕ, 'ಇಲ್ಲಿಂದ ಎಗರಿ ಎಗರಿ ನೋಡುವುದೇಕೆ?

ಚಿರಾಪುಂಜಿಯಲ್ಲಿ ಬಾಂಗ್ಲಾ ಗಡಿಯಲ್ಲೇ ಇರುತ್ತೇವೆ ಬನ್ನಿ' ಎಂದು ನಮ್ಮನ್ನು ಅಲ್ಲಿಂದ ಹೊರಡಿಸಿದರು.

ಅಲ್ಲಿಂದ ಇಪ್ಪತ್ತು ನಿಮಿಷಗಳ ಪ್ರಯಾಣದ ನಂತರ ಅಲ್ಲಲ್ಲಿ ಹಳ್ಳ ತಗ್ಗುಗಳಲ್ಲಿ ಮನೆಗಳು ಹರಡಿಕೊಂಡಂತಿರುವ ನಮ್ಮ ಬಹು ನಿರೀಕ್ಷೆಯ ಚಿರಾಪುಂಜಿ ನಗರ ಸಿಕ್ಕಿತು. ತೇವಾಂಶವೇ ಅನುಭವಕ್ಕೆ ಬರದ, ಎತ್ತರ ಬೆಳೆದ ಬರೀ ಒಣ ಹುಲ್ಲುಗಾವಲುಗಳಿಂದ ಆವೃತವಾಗಿದ್ದ ಜನಸಂಚಾರವೇ ಕಾಣದೆ ಭಣಗುಟ್ಟುತ್ತಿದ್ದ ಈ ಪುಟ್ಟ ಊರು ಅತಿ ಇತ್ತೀಚಿನವರೆಗೆ ದೇಶದ ಅತಿ ಹೆಚ್ಚು ಮಳೆ ಕಾಣುವ ಜಾಗವಾಗಿತ್ತೇ ಎಂದು ಆಶ್ಚರ್ಯವಾಯಿತು. ಅಥವಾ ಆ ದಾಖಲೆ ಕಳೆದುಕೊಂಡ ಮೇಲೆ ಈ ಸ್ಥಿತಿ ತಲುಪಿದೆಯೋ ಎಂಬ ಪ್ರಶ್ನೆಯೂ ಮೂಡಿತು. ಈಗ ಚಿರಾಪುಂಜಿಯಲ್ಲಿ ನೋಡಲು ಇರುವುದು ಎರಡು ಸ್ಥಳಗಳು. ಒಂದು ಊರ ಹೊರವಲಯದಲ್ಲಿರುವ ಸುಣ್ಣದ ಕಲ್ಲಿನ ಪ್ರಾಚೀನ ಗುಹಾ ಸಂಕೀರ್ಣ. ಮಳೆಯಿಂದಾಗಿ ಈ ಗವಿಯಲ್ಲಿ ಕರಗಿದ ಸುಣ್ಣದ ಕಲ್ಲು ವಿವಿಧ ಆಕೃತಿಗಳನ್ನು ಸೃಷ್ಟಿಸಿದೆ. ಇದನ್ನು ನೋಡಲು ದೇಶ ವಿದೇಶಗಳಿಂದ ಬಂದ ಜನರ ಒಂದು ಸಂತೆಯೇ ಅಲ್ಲಿ ನೆರೆದಿತ್ತು. ಜೊತೆಗೆ ಅವರ ವೈವಿಧ್ಯಮಯ ವಾಹನಗಳ ಜಾತ್ರೆ ಕೂಡ.

ನಂತರ ನಾವು ನೋಡಿದ್ದು ಜೀವ ಪರಿಸರ ಉದ್ಯಾನ (Eco Park) ಎಂದು ಕರೆಯಲಾಗುವ ಒಂದು ಹುಲ್ಲುಗಾವಲು ಸಂಕೀರ್ಣ! ಅಲ್ಲಲ್ಲಿ ಸಣ್ಣ ನೀರಿನ ಹೊಂಡಗಳು. ಇಲ್ಲಿ ಆಮ್ಲಜನಕ ಸಮೃದ್ಧಿಯಾಗಿ ದೊರಕುವುದಂತೆ. ಆದರೆ ನನಗೇನೂ ಆ ಅನುಭವವಾಗಲಿಲ್ಲ. ಆದರೆ ಬೆಳಗಿನಿಂದ ಚಳಿಯಲ್ಲಿ ನಲುಗಿದ್ದ ನನಗೆ ಇಲ್ಲಿ ಸಂಜೆಯ ಎಳೆಬಿಸಿಲು ಬಹು ಮುದ ನೀಡಿತು. ನಮ್ಮ ನಿರ್ವಾಹಕ ಹೇಳಿದಂತೆ ಕೆಲವೇ ಮೈಲುಗಳಾಚೆ ಇದ್ದ ಬಾಂಗ್ಲಾದೇಶಕ್ಕೆ ಸೇರಿದ ಗುಡ್ಡಗಳನ್ನು ನಾವು ನೋಡಿದೆವು.

ನಮ್ಮ ಚಿರಾಪುಂಜಿ ಪ್ರವಾಸದ ಕೊನೆಯ ವೀಕ್ಷಣಾ ತಾಣ, ಅಲ್ಲಿಂದ ಹತ್ತು ಕಿ. ಮೀ. ದೂರದ ಸಣ್ಣ ಕಣಿವೆಯಲ್ಲಿನ ದಿಬ್ಬವೊಂದರ ಮೇಲಿಂದ ಕಾಣುವ ನೌಖೋಲಿಯಾ ಜಲಪಾತ. ಅದು ದುರ್ಗಮ ಕಾಡಿನ ಮಧ್ಯೆ ಧುಮ್ಮಿಕ್ಕುವ ಏಕಧಾರೆಯ ಬಹು ಸುಂದರ ಜಲಪಾತ. ದೂರದಿಂದ ಇಳಿಬಿಟ್ಟ ಬಿಳಿ ನೂಲಿನಂತೆ ಕಾಣುವ ಇದು ಜಗತ್ತಿನ ನಾಲ್ಕನೇ ಅತಿ ಎತ್ತರದ ಜಲಪಾತವಂತೆ. ಅದು ಬೀಳುವ ಕಣಿವೆಯ ಆಳವನ್ನು ನೋಡಿದರೆ ಇದು ನಿಜವೆನ್ನಿಸುತ್ತದೆ. ಮುಳುಗುತ್ತಿದ್ದ ಸಂಜೆಯ ಸೂರ್ಯನ ಮಂದ ಬೆಳಕಿನಲ್ಲಿ ಈ ನೀರ್ಬೀಳವು ನಮಗೆ ಸ್ವರ್ಗೀಯ ಸೌಂದರ್ಯದೊಂದಿಗೆ ಕಂಡು ನಮ್ಮ ಮನ ತಣಿಸಿತು. ನಾವು ಕೈಗೊಂಡ ಚಿರಾಪುಂಜಿಯ ಈ ದೀರ್ಘ ಪ್ರಯಾಣ ಸಾರ್ಥಕವಾಗಿ ಕೊನೆಗೊಂಡು ನಮ್ಮ ಆಯಾಸವನ್ನೆಲ್ಲ ಪರಿಹರಿಸಿ ಅಷ್ಟೇ ದೀರ್ಘವಾದ ಮರುಪ್ರಯಾಣಕ್ಕೆ ಅಣಿಗೊಳಿಸಿತು.

ಈ ಪ್ರವಾಸ ಬರಹವನ್ನು ಮುಗಿಸುವ ಮುನ್ನ ನಾವು ಷಿಲ್ಲಾಂಗ್‌ನಲ್ಲಿ ತಂಗಿದ್ದ ಮೇಘಾಲಯ ಪ್ರವಾಸೋದ್ಯಮ ಇಲಾಖೆಯ ಕುಟೀರಗಳ ಅಚ್ಚುಕಟ್ಟುತನದ ಬಗ್ಗೆ

ಹೇಳಲೇಬೇಕು. ನಮ್ಮ ರಾಜ್ಯದ ಪ್ರವಾಸೋದ್ಯಮ ಇಲಾಖೆಯ ವಸತಿಗಳನ್ನೂ, ಅದರ ಸೇವಾ ಸಿಬ್ಬಂದಿಯ ಉಡಾಫೆಯ ವರ್ತನೆಗಳನ್ನೂ ಕಂಡಿದ್ದ ನಮಗೆ ಇಲ್ಲಿ ಕಾಪಾಡಲಾಗಿರುವ ಸ್ವಚ್ಛತೆ, ಸಿಬ್ಬಂದಿಯ ಸೌಜನ್ಯಯುತ ಸೇವಾ ಮನೋಭಾವ ಮತ್ತು ವರ್ತನೆ ನಮ್ಮ ಅಪಾರ ಮೆಚ್ಚುಗೆಗೆ ಪಾತ್ರವಾಯಿತು. ಒಮ್ಮೆ ನಾವು ಕೊಡಚಾದ್ರಿಗೆ ಪ್ರವಾಸಿ ಕೊಠಡಿಗಳನ್ನು ಮೀಸಲಿರಿಸಿ ಕುಟುಂಬಗಳೊಂದಿಗೆ ಹೋಗಿದ್ದಾಗಲೂ, ಮಧ್ಯರಾತ್ರಿ ಬಂದ ಯಾವನೋ ಅಧಿಕಾರಿ ಮತ್ತು ಅವನ ಕುಡುಕ ತಂಡ ತಮಗೆ ಜಾಗವಿಲ್ಲವೆಂದು ನಮ್ಮನ್ನು ಕೊಠಡಿಯಿಂದ ಖಾಲಿ ಮಾಡಿಸಲು ನಡೆಸಿದ ಅನಾಗರಿಕ ಪ್ರಯತ್ನ ಇಲ್ಲಿ ನೆನಪಾಯಿತು.

(ನವೆಂಬರ್ ೧೦, ೨೦೧೬)

ಕಾಜಿರಂಗ ರಾಷ್ಟ್ರೀಯ ಉದ್ಯಾನವನದಲ್ಲಿ...

ಕಾಜಿರಂಗ ರಾಷ್ಟ್ರೀಯ ಉದ್ಯಾನವನ ಅಸ್ಸಾಂನ ರಾಜಧಾನಿ ಗೌಹಾತಿಯಿಂದ ಪೂರ್ವಕ್ಕೆ ಸುಮಾರು ೨೦೦ ಕಿ.ಮೀ. ದೂರದಲ್ಲಿರುವ ಅರಣ್ಯ ಪ್ರದೇಶ. ಇದರ ಉತ್ತರಕ್ಕೆ ಅರುಣಾಚಲ ಪ್ರದೇಶವಿದ್ದರೆ, ದಕ್ಷಿಣಕ್ಕೆ ನಾಗಾಲ್ಯಾಂಡ್ ಇದೆ. ಪೂರ್ವಕ್ಕೆ ಸ್ವಲ್ಪ ದೂರದಲ್ಲಿ ಮಯನ್ಮಾರ್ ಗಡಿ ಇದೆ. ಬ್ರಹ್ಮಪುತ್ರ ನದಿಯ ದಂಡೆಯುದ್ದಕ್ಕೂ ಚಾಚಿರುವ ಈ ಅರಣ್ಯ ೭೫ ಕಿ.ಮೀ. ಉದ್ದ ಮತ್ತು ೬೫ ಕಿ.ಮೀ. ಅಗಲವಿದೆ. ದಟ್ಟ ಅರಣ್ಯವೇನಲ್ಲ; ಕುರುಚಲು ಕಾಡು ಎನ್ನಬಹುದು. ಆದರೆ ಎತ್ತರ ಬೆಳೆದ ವಿಶಾಲ ಹುಲ್ಲು ಹಾಸುಗಳು, ಅಸಂಖ್ಯಾತ ಸಣ್ಣ ತೊರೆಗಳು ಮತ್ತು ಕೆರೆಗಳಿಂದ ಕಂಗೊಳಿಸುವ ಈ ಕಾಡು ಏಕದಂತ ಖಡ್ಗಮೃಗದ ಆವಾಸ ಸ್ಥಾನ.

ಜಗತ್ತಿನಲ್ಲಿ ಇಲ್ಲಿ ಮಾತ್ರ ಕಂಡುಬರುವ ಈ ಖಡ್ಗಮೃಗ ಕಳೆದ ವರ್ಷದ ಬ್ರಹ್ಮಪುತ್ರ ನದಿಯ ಮಹಾಪ್ರವಾಹಕ್ಕೆ ಸಿಕ್ಕಿ ಸಾವಿರಾರು ಸಂಖ್ಯೆಯಲ್ಲಿ ಕೊಚ್ಚಿ ಹೋದರೂ ಇನ್ನೂ ಸಾವಿರಾರು ಸಂಖ್ಯೆಯಲ್ಲಿವೆ. ಈ ಮೃಗ ಆನೆಯಂತೆ ಭಾರಿ ಗಾತ್ರದ ಪ್ರಾಣಿ; ಆನೆಯಂತೆಯೇ ಸಸ್ಯಾಹಾರಿ. ಆದರೆ ಆನೆಯಂತೆ ಆಕ್ರಮಣಕಾರಿಯಲ್ಲ. ನಾಚಿಕೆಯ ಸಾಧು ಪ್ರಾಣಿ. ಮನುಷ್ಯರನ್ನು ನೋಡಿದರೆ ಗಿಡ-ಹುಲ್ಲು ಹಾಸುಗಳಲ್ಲಿ ಮರೆಯಾಗುತ್ತದೆ. ಅಲ್ಲದೆ ಇದು ಆನೆಯಂತೆ ಹಿಂಡುಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ; ಒಂಟಿ ಪ್ರಾಣಿ. ಜೊತೆಯಲ್ಲಿ ಇನ್ನೊಂದು ಕಂಡರೆ ಅದನ್ನು ಅದರ ಮರಿ ಎಂದು ಸುಲಭವಾಗಿ ಊಹಿಸಬಹುದು.

ಇವುಗಳ ಜೊತೆ ಸಾವಿರಾರು ಆನೆಗಳೂ, ಕಾಡೆಮ್ಮೆ-ಕೋಣಗಳೂ, ಜಿಂಕೆಗಳೂ ಇಲ್ಲಿ ವಾಸಿಸುತ್ತವೆ. ನೂರಕ್ಕೂ ಹೆಚ್ಚು ಸಂಖ್ಯೆಯಲ್ಲಿರುವ ಹುಲಿಗಳೂ ಆಗಾಗ ಕಾಣಿಸಿಕೊಳ್ಳುತ್ತವೆ. ಪ್ರಾಣಿಗಳಲ್ಲದೆ ತನ್ನ ತೊರೆ-ಕೊಳಗಳಿಂದ ರಮಣೀಯವಾಗಿದ್ದು, ಇಲ್ಲಿ ಸೂರ್ಯೋದಯ ಮತ್ತು ಸೂರ್ಯಾಸ್ತಗಳನ್ನು ನೋಡುವುದೇ ಒಂದು ವಿಶಿಷ್ಟ ಅನುಭವ.

ಇದೇ ೧೧ರಂದು ನಾವು (ನನ್ನ ಪತ್ನಿ ಸವಿತಾ, ದಂಪತಿ ಗೆಳೆಯರಾದ ನಿಸಾರ್‌ಅಹಮದ್–ಮನೋರಮಾ ಹಾಗೂ ಎಂ.ಬಿ.ಪಾಟೀಲ್–ಜಯಶ್ರೀ) ನಿರ್ಮಲಾ ಟ್ರಾವೆಲ್ಸ್‌ನ ಪ್ರವಾಸಿ ತಂಡದ ಭಾಗವಾಗಿ ಕಾಜಿರಂಗಕ್ಕೆ ಭೇಟಿ ಕೊಟ್ಟೆವು. ಬೆಳಗಿನ ಜಾವ ಒಮ್ಮೆ, ಆನೆಯ ಮೇಲೆ ಮತ್ತು ಮಧ್ಯಾಹ್ನ ಹಾಗೂ ಸಾಯಂಕಾಲ ಜೀಪಿನಲ್ಲಿ– ಹೀಗೆ ಮೂರು ಬಾರಿ ನಾವು ಅರಣ್ಯ ಸಂಚಾರ ಮಾಡಿದೆವು. ಆದರೆ ಖಡ್ಗಮೃಗಗಳ ಹೊರತಾಗಿ ನಮಗೆ ಮತ್ತಾವ ವನ್ಯಪ್ರಾಣಿಯೂ ಕಾಣಲಿಲ್ಲ. ನಮ್ಮ ಚಾಲಕರ ಪ್ರಕಾರ ಕೈಕೊಟ್ಟ ನಮ್ಮ ನಸೀಬು ಇದಕ್ಕೆ ಕಾರಣ!

ಸಂಜೆ ಅಸ್ಸಾಂ ಕಲಾವಿದರು ನೀಡಿದ ಅಸಾಮೀ ನೃತ್ಯ ಪ್ರದರ್ಶನಗಳನ್ನು ನೋಡಿದೆವು. ಕೊನೆಯಲ್ಲಿ ಸವಿತಾ, ಕಲಾವಿದರ ಆಹ್ವಾನದ ಮೇರೆಗೆ ಅವರ ಜೊತೆಗೂಡಿ ನರ್ತಿದಳು.

(ನವೆಂಬರ್ ೧೧, ೨೦೧೬)

ಬ್ರಹ್ಮಪುತ್ರೆಯ ಮಡಿಲಲ್ಲಿ, ಓರ್ವ ಬ್ರಹ್ಮಪುತ್ರನೊಂದಿಗೆ...

ಅಸ್ಸಾಂಗೆ ಹೋಗಿ ಬಂದವರು ಬ್ರಹ್ಮಪುತ್ರ ನದಿಯ ಬಗ್ಗೆ ಬರೆಯದಿರುವುದು ಮಹಾ ಲೋಪವೆನಿಸುತ್ತದೆ. ಏಕೆಂದರೆ ಅಸ್ಸಾಮನ್ನು ಪೊರೆಯುತ್ತಿರುವ ತಾಯಿ ಬ್ರಹ್ಮಪುತ್ರ ನದಿ. ಹಾಗೆ ನೋಡಿದರೆ ಅಸ್ಸಾಂ ಎಂದರೇ ಬ್ರಹ್ಮಪುತ್ರ ಕಣಿವೆ ಎನ್ನಬಹುದು. ನದಿ ಅಸ್ಸಾಂನ ಪಶ್ಚಿಮ ತುದಿಯಿಂದ ಪೂರ್ವ ತುದಿಯವರೆಗೂ ಹರಿದು ಅಸ್ಸಾಂ ಜನರ ನೀರಿನ ಮತ್ತು ನೀರಾವರಿಯ ಅಗತ್ಯಗಳನ್ನು ಪೂರೈಸಿ ಅಕ್ಷರಶಃ ರಾಜ್ಯದ ಜೀವ ನದಿಯೆನಿಸಿದೆ.

ಜಗತ್ತಿನ ಅತಿ ಉದ್ದದ ನದಿಗಳಲ್ಲಿ ಒಂದೆನಿಸಿದ ಈ ನದಿ ೨೯೦೦ ಕಿ.ಮೀ. ಉದ್ದ ಹರಿಯುತ್ತದೆ. ದಕ್ಷಿಣ ಟಿಬೆಟ್‌ನ(ಚೀನಾದ) ಕೈಲಾಸ ಪರ್ವತ ಶ್ರೇಣಿಯ ಶಿಖರವೊಂದರಲ್ಲಿ ಹುಟ್ಟಿ ಹಿಮಾಲಯದ ನೀರ್ಗಲ್ಲುಗಳನ್ನು ಕರಗಿಸಿಕೊಳ್ಳುತ್ತಾ ಸಾವಿರಕ್ಕೂ ಹೆಚ್ಚು ಕಿ.ಮೀ.ನಷ್ಟು ಉದ್ದ ಆ ಪ್ರದೇಶದಲ್ಲೇ ಹರಿದು ಅರುಣಾಚಲ ಪ್ರದೇಶದ ಕಣಿವೆಯೊಂದರ ಮೂಲಕ ಭಾರತವನ್ನು ಪ್ರವೇಶಿಸುವ ಈ ಮಹಾನದಿ ಅಸ್ಸಾಂನ ಉದ್ದಕ್ಕೂ ಅದರ ನೆಲವನ್ನು ತಣಿಸುತ್ತಾ ಸುಮಾರು ೯೦೦ ಕಿ.ಮೀ. ಹರಿದು ಬಾಂಗ್ಲಾದೇಶವನ್ನು ಪ್ರವೇಶಿಸುತ್ತದೆ. ಅಲ್ಲಿ ಜಮುನಾ (ನಮ್ಮ ಯಮುನಾ ಅಲ್ಲ) ಮತ್ತು ಪದ್ಮಾ ಎಂದು ಕರೆಯಲಾಗುವ ಗಂಗಾ ನದಿಯನ್ನು ಕವಲು ಕವಲುಗಳಾಗಿ ಸೇರಿ ಕೊನೆಗೆ ಬಂಗಾಳ ಕೊಲ್ಲಿಯಲ್ಲಿ ಲೀನವಾಗುತ್ತದೆ.

ನಾನು ಬ್ರಹ್ಮಪುತ್ರದ ದಂಡೆಯಲ್ಲೇ ಇರುವ ಗೌಹಾತಿ(ಸ್ಥಳೀಯರು ಇದನ್ನು ಗುವಹಾಟಿ ಎಂದು ಉಚ್ಚರಿಸುತ್ತಾರೆ) ತಲುಪಿದೊಡನೆ ನಮ್ಮ ಪ್ರವಾಸ ನಿರ್ವಾಹಕರನ್ನು ಕೇಳಿದ ಮೊದಲ ಪ್ರಶ್ನೆ, 'ಇಲ್ಲಿ ಬ್ರಹ್ಮಪುತ್ರ ಎಲ್ಲಿದೆ?' ಏಕೆಂದರೆ ಆ ನದಿಯ ಬಗ್ಗೆ, ಬಾಲ್ಯದಿಂದಲೂ ಭೂಪಟಗಳನ್ನು ಬರೆಯುವ ಹವ್ಯಾಸವಿದ್ದ ನನಗೆ ಆಗಿನಿಂದಲೂ

ಕುತೂಹಲವಿತ್ತು. ನಾನು ಎಪ್ಪತ್ತರ ದಶಕದಲ್ಲಿ ದೆಹಲಿಯಲ್ಲಿ ಆಕಾಶವಾಣಿಯ ಕನ್ನಡ ವಾರ್ತಾ ವಾಚಕನಾಗಿ ಸೇರಿದ ನಂತರವಂತೂ ಮಳೆಗಾಲದಲ್ಲಿ ಮಾತ್ರವಲ್ಲ, ವರ್ಷಪೂರ್ತಿ ಆ ನದಿಯ ಪ್ರವಾಹ ಮತ್ತು ದೋಣಿ ದುರಂತಗಳನ್ನು ಕುರಿತ ವಾರ್ತೆಗಳನ್ನು ಓದುತ್ತಾ ಈ ನದಿಯ ಬಗ್ಗೆ ಕುತೂಹಲ ಬೆಳೆಸಿಕೊಂಡಿದ್ದೆ. ಹಾಗಾಗಿ ಜೀವನದಲ್ಲೊಮ್ಮೆ ಆ ನದಿಯನ್ನು ನೋಡುವ ತೀವ್ರ ಹಂಬಲ ಬೆಳೆದಿತ್ತು. ಈಗ ಅದನ್ನು ಆದಷ್ಟು ಬೇಗ ಪೂರೈಸಿಕೊಳ್ಳುವ ತವಕ ಸಹಜವಾಗಿತ್ತು.

ನಮ್ಮ ಪ್ರವಾಸದ ಮೊದಲ ದಿನವೇ ಬ್ರಹ್ಮಪುತ್ರ ನದಿಯ ನಡುಗಡ್ಡೆಯಲ್ಲಿರುವ ಉಮಾನಂದ ದೇವಾಲಯಕ್ಕೆ ಹೋಗುವ ಕಾರ್ಯಕ್ರಮವಿತ್ತಾದರೂ, ಗೌಹಾತಿ ವಿಮಾನ ನಿಲ್ದಾಣದಿಂದ ಗೌಹಾತಿ ನಗರದ ನಮ್ಮ ವಿಶ್ರಾಂತಿ ಗೃಹಕ್ಕೆ ಬರುವುದೇ ಸ್ವಲ್ಪ ತಡವಾಗಿ, ಅಂದು ಅಲ್ಲಿನ ಇತಿಹಾಸ ಪ್ರಸಿದ್ಧ ಕಾಮಾಖ್ಯ(ಕಾಮಾಕ್ಷಿ?) ದೇವಾಲಯವನ್ನು ನೋಡುವಷ್ಟರಲ್ಲೇ ಸೂರ್ಯ ಮುಳುಗಿ, ನಮ್ಮ ಬ್ರಹ್ಮಪುತ್ರ ದರ್ಶನ ನಮ್ಮ ಪ್ರವಾಸದ ಕೊನೆಯ ದಿನಕ್ಕೆ ಮುಂದೂಡಲ್ಪಟ್ಟಿತು. ಈ ಮೊದಲ ಮತ್ತು ಕೊನೆಯ ದಿನಗಳ ಮಧ್ಯೆ ಷಿಲ್ಲಾಂಗ-ಚಿರಾಪುಂಜಿ-ಕಾಜಿರಂಗಗಳ ಪ್ರವಾಸ ನಿಗದಿಯಾಗಿತ್ತು.

ಕಾಮಾಖ್ಯ ಈ ದೇಶದ ಪ್ರಸಿದ್ಧ ಶಕ್ತಿ ಪೀಠಗಳಲ್ಲೊಂದು. ಶಿವ, ದಕ್ಷ ಯಜ್ಞದಲ್ಲಿ ಶವವಾದ ತನ್ನ ಸತಿಯನ್ನು ಹೊತ್ತು ದೇಶ ತಿರುಗುತ್ತಿರುವಾಗ ಆ ಶವದ ಒಂದು ಭಾಗ ಇಲ್ಲಿ ಬಿದ್ದು ಅದು ಶಕ್ತಿಪೀಠವೆನಿಸಿದೆ ಎಂಬುದು ಸ್ಥಳೀಯ ಪುರಾಣ. ಇಂತಹ ಇನ್ನೊಂದು ಶಕ್ತಿ ಪೀಠವನ್ನು ೨೦ ವರ್ಷಗಳ ಹಿಂದೆ ಹಿಮಾಲಯದ ಕೇದಾರದಲ್ಲಿ ನಾನು ನೋಡಿದ್ದೆ. ಕಾಮಾಖ್ಯ ನಮ್ಮ ಇತಿಹಾಸ ಪ್ರಸಿದ್ಧ ತಾಂತ್ರಿಕ ವಿದ್ಯಾಸಾಧನೆಯ ತಾಣವೂ ಹೌದು. ಕತ್ತಲು ತುಂಬಿಕೊಂಡ ಗುಹೆಯಂತಿರುವ ಅಷ್ಟೇನೂ ಭವ್ಯವಾಗಿರದ ಈ ದೇವಾಲಯದೊಳಗೆ ಕೇದಾರದಂತೆಯೇ ನೆಲದಿಂದ ಉಬ್ಬಿಕೊಂಡ ಒಂದು ಬಂಡೆಯನ್ನು (ಶಿವನ ಹೆಗಲ ಮೇಲಿಂದ ಬಿದ್ದ ಸತಿ ದೇಹದ ಭಾಗವಾಗಿ) ಪೂಜಿಸಲಾಗುತ್ತದೆ. ಈ ದೇವಾಲಯ ಗೌಹಾತಿ ನಗರದ ಹೊರ ವಲಯದ ಗುಡ್ಡವೊಂದರ ಮೇಲಿದ್ದು, ಇದನ್ನು ಹತ್ತಿ ಹೋಗುವ ಮೆಟ್ಟಿಲುಗಳುದ್ದಕ್ಕೂ ನಮ್ಮ ಎಲ್ಲ ಯಾತ್ರಾ ಸ್ಥಳಗಳಲ್ಲಿರುವಂತೆಯೇ ಅಂಗಡಿ-ಮುಂಗಟ್ಟುಗಳ ಸಾಲುಗಳಿವೆ. ಪಂಡಾಗಳ ಕಾಟವೂ ಇದ್ದು, ಇವರು ವಾರಾಣಾಸಿ ಅಥವಾ ಪುರಿಯ ಪಂಡಾಗಳಂತೆ ಹೆಚ್ಚು ಕಾಡುವುದಿಲ್ಲವೆಂಬುದು ಒಂದು ಸಮಾಧಾನ! ಆದರೆ ಸ್ವಲ್ಪ ಜಿಗುಪ್ಸೆ ಹುಟ್ಟಿಸುವ ಸಂಗತಿ ಎಂದರೆ ಈ ಮೆಟ್ಟಿಲುಗಳ ಮೇಲೆಲ್ಲಾ ಅಬ್ಬೇಪಾರಿಗಳಂತೆ ಅಲೆದಾಡುವ ವಕ್ರವಕ್ರವಾಗಿ ಬೆಳೆದಿರುವ ಮೇಕೆ ಮತ್ತು ಕುರಿಗಳ ಹಿಂಡು. ಇವು ಬಲಿಪಶುಗಳಾಗಲು ಕಾಯುತ್ತಿರುವ ಹರಕೆಯ ಪ್ರಾಣಿ ಸಮೂಹ.

ಇರಲಿ. ಬ್ರಹ್ಮಪುತ್ರ ನೋಡುವ ನನ್ನ ಹಂಬಲ ಈಡೇರಿದ್ದು ನಮ್ಮ ಪ್ರವಾಸದ ಕೊನೆಯ ದಿನ, ನವೆಂಬರ್ ೧೨ರ ಬೆಳಿಗ್ಗೆ ನಾವು ಉಮಾನಂದ ದೇವಾಲಯ ನೋಡಲು ಹೋದಾಗ. ಆ ದೇವಾಲಯಕ್ಕೆ ಹೋಗಲು ಬ್ರಹ್ಮಪುತ್ರ ನದಿಯ ಮೇಲೆ ದೋಣಿಯಲ್ಲಿ

ಹೋಗಬೇಕು. ಮೊದಲ ಬಾರಿಗೆ ಈ ನದಿಯನ್ನು ನೋಡಿದಾಗ ಒಂದು ಕ್ಷಣ ನನ್ನ ಉಸಿರು ನಿಂತಾಯಿತು. ಅಷ್ಟು ರುದ್ರ ಭಯಂಕರ ವಿಸ್ತಾರದ ನದಿಯದು. ಮಳೆಗಾಲ ಮುಗಿದು ಒಂದೂವರೆ ತಿಂಗಳುಗಳಾದರೂ ಇದು ತುಂಬಿ ಭೋರ್ಗರೆಯುತ್ತಾ ಹರಿಯುತ್ತದೆ. ದೇವಾಲಯವಿರುವ ನಡುಗಡ್ಡೆಯಾಚೆಗೂ ಚಾಚಿಕೊಂಡಿರುವ ಈ ನದಿ ಸಮುದ್ರದಂತೆ ನಮ್ಮ ಕಣ್ಣ ವಿಸ್ತಾರಕ್ಕೆ ಸವಾಲೆಸೆಯುವಂತಿರುತ್ತದೆ. ನಾನು ಕಣ್ಣು ತುಂಬ ಬ್ರಹ್ಮಪುತ್ರಳನ್ನು ತುಂಬಿಕೊಂಡೆ.

ಅದಿರಲಿ, ನನಗೆ ನಿಜವಾಗಿ ಭಯವಾದದ್ದು, ಹೆಮ್ಮಾರಿಯಂತಹ ಈ ನದಿಯ ಮೇಲೆ ಹೋಗಲು ನಮಗೆ ನಿಗದಿಯಾಗಿದ್ದ ದೋಣಿಯನ್ನು ನೋಡಿದಾಗ. ಒಡಕಲೂ, ಬಡಕಲೂ ಆದ ಈ ಯಾಂತ್ರೀಕೃತ ದೋಣಿ ಕೊಳಕಿಗೆ ಇನ್ನೊಂದು ಹೆಸರಿನಂತಿತ್ತು. ನೆಲಗಟ್ಟಿನ ಮರದ ಹಲಗೆಗಳು ಕಿತ್ತುಹೋಗಿ ನೀರು ಒಳನುಗ್ಗುವ ಭಯ ಹುಟ್ಟಿಸುತ್ತಿತ್ತು. ಆದರೆ ಆ ದೋಣಿ ಜನರನ್ನು ಹೊತ್ತು ನನ್ನ ಕಣ್ಣ ಮುಂದೆಯೇ ನದಿಯ ಆ ದಡದಿಂದ ಸುರಕ್ಷಿತವಾಗಿ ಸಾಗಿ ಬಂದಿತ್ತಾದ್ದರಿಂದ ಆದದ್ದಾಗಲಿ ಎಂದು ದೋಣಿಯ ಒಂದು ಮುರಕಲು ಕುರ್ಚಿಯ ಮೇಲೆ ಕೂತು ದೋಣಿ ವಿಹಾರವನ್ನು ಆರಂಭಿಸಿದೆ. ಸುತ್ತಲೂ ವೇಗವಾಗಿ ಹರಿಯುವ ಜಲರಾಶಿ. ಅದರ ಮೇಲೆ ಸಣ್ಣ ದೋಣಿಗಳಲ್ಲಿ ಹುಟ್ಟು ಹಾಕುತ್ತಾ ನಿರಾತಂಕವಾಗಿ ಮೀನು ಹಿಡಿಯುತ್ತಿದ್ದ ಬೆಸ್ತರ ಮನೆ ಮಕ್ಕಳು! ಸ್ವಲ್ಪ ಸಮಾಧಾನವಾಯಿತು. ಆದರೆ ನಿಜವಾಗಿ ಕಷ್ಟವಾದದ್ದು ದೇವಾಲಯದ ದಂಡೆಗೆ ಬಂದ ನಮ್ಮ ದೋಣಿಯಿಂದ ದಂಡೆಯನ್ನು ಮುಟ್ಟಲು ಪ್ರಯತ್ನಿಸಿದಾಗ. ಸುಮಾರು ಹತ್ತು-ಹದಿನೈದು ಅಡಿಗಳ ಎತ್ತರದಲ್ಲಿರುವ ಆ ದಂಡೆ ಏರಲು ಮರಳು ಮೂಟೆಗಳನ್ನು ಅಡ್ಡಾದಿಡ್ಡಿಯಾಗಿ ಪೇರಿಸಿದ್ದಾರೆ. ಒಂದು ಕ್ಷಣ ಆಯ ತಪ್ಪಿದರೂ ನದಿಗುರುಳುವುದೇ ಸರಿ! ಹರ ಸಾಹಸ ಮಾಡುತ್ತಾ ಗೆಳೆಯರ ನೆರವಿನಿಂದ ದಂಡೆ ಏರಲು ಸಾಧ್ಯವಾಯಿತಾದರೂ ಮತ್ತಷ್ಟು ಮೆಟ್ಟಿಲೇರಿ ದೇವಸ್ಥಾನಕ್ಕೆ ಹೋಗುವ ನಿರ್ಧಾರವನ್ನು ಕೈಬಿಟ್ಟೆ. ಏಕೆಂದರೆ ವಾಪಸ್ ಹೋಗಲು ಮತ್ತೆ ಈ ದಂಡೆ ಇಳಿಯುವ ಭಯಾನಕ ಕಲ್ಪನೆಯೇ ನನ್ನ ಮನಸ್ಸನ್ನು ಆವರಿಸಿತ್ತು. ನಮ್ಮ ತಂಡದವರು ದೇವಾಲಯಕ್ಕೆ ಹೋಗಿಬರುವವರೆಗೆ ನಾನು ಮತ್ತು ಗೆಳೆಯ ಎಂ.ಬಿ. ಪಾಟೀಲ್ ಎಳೆನೀರು, ಅದರ ಎಳೆ ಕೊಬ್ಬರಿ ಸೇವನೆ ಮಾಡುತ್ತಾ ಸುತ್ತ ಸಮುದ್ರದಂತೆ ಆವರಿಸಿದ್ದ ಬ್ರಹ್ಮಪುತ್ರಳ ರುದ್ರ ರಮಣೀಯ ಸೌಂದರ್ಯವನ್ನು ಸವಿಯುತ್ತಾ ಕಾಲ ಕಳೆದೆವು.

ದೇವಾಲಯ ನೋಡಿ ವಾಪಸ್ ಬಂದ ನಮ್ಮ ಇನ್ನಿತರ ಗೆಳೆಯರ ತಂಡ, ದೇವಾಲಯ ಕಷ್ಟಪಟ್ಟು ನೋಡುವಷ್ಟು ಸುಂದರವಾದುದೇನಲ್ಲವೆಂದು ತಮ್ಮ ಕ್ಯಾಮೆರಾದಲ್ಲಿ ತೋರಿಸಿದಾಗ ನನಗೆ ಸಮಾಧಾನವಾಗಿ, ದಂಡೆಯಿಳಿದು ದೋಣಿಯತ್ತ ಸಾಗಿದೆ. ಆಶ್ಚರ್ಯವೆಂದರೆ ಹತ್ತುವಾಗ ಆದಷ್ಟು ಭಯ-ಕಷ್ಟ ಈಗ ಆಗಲಿಲ್ಲ. ಗೆಳೆಯ ನಿಸಾರ್ ಅಹಮದ್ ಪ್ರಕಾರ ಅಲ್ಲಿ ಪವಾಡವೇ ನಡೆದು ಹೋಗಿ, ಮೂಟೆಗಳ ಜಾಗದಲ್ಲಿ ಮಣ್ಣಿನ ಮೆಟ್ಟಿಲುಗಳು ಮೂಡಿದ್ದವು! ಈ 'ಪವಾಡ'ವನ್ನು ನಾವು

ಹತ್ತುವ ಕಷ್ಟದ ಭಯ-ಭ್ರಾಂತಿಗಳಲ್ಲಿ ಈ ಮೆಟ್ಟಲುಗಳು ನಮ್ಮ ಕಣ್ಣಿಗೆ ಬಿದ್ದಿರದೇ ಹೋಗಿರಬಹುದೆಂದು ನಾನು ವ್ಯಾಖ್ಯಾನಿಸಿದೆ! ಅದೇನೇ ಇರಲಿ, ಈ ಹೊತ್ತಿಗೆ ಬ್ರಹ್ಮಪುತ್ರ ನಮ್ಮ ಮನಸ್ಸಿಗೆ ಹೊಂದಿಕೊಂಡುಬಿಟ್ಟಿದ್ದಳು. ಅಥವಾ ಅವಳ ವಿಸ್ತಾರವನ್ನು ಹಿಡಿಯುವಷ್ಟು ನಮ್ಮ ಮನಸ್ಸಿನ ಕ್ಷಿತಿಜಗಳೂ ವಿಸ್ತರಿಸಿದ್ದವು. ಸಂಜೆಯಾಗುತ್ತಾ ತಂಗಾಳಿ ಬೀಸತೊಡಗಿತ್ತು. ನದಿಯ ಮೇಲೆ ಹಕ್ಕಿಗಳ ಹಿಂಡು ಹಾರತೊಡಗಿದ್ದವು. ನಮ್ಮ ಬೆನ್ನ ಹಿಂದಿನ ಪಶ್ಚಿಮ ದಿಕ್ಕಿನಲ್ಲಿ ಸಂಜೆಯ ಸೂರ್ಯ ನದಿಯ ಮೇಲೆ ಒಂದು ಸೌಂದರ್ಯರಾಶಿಯನ್ನೇ ಸೃಷ್ಟಿಸಿದ್ದ. ಈ ಹೊತ್ತಿಗೆ ದೋಣಿಯ ಛಾವಣಿ ಮೇಲೇರುವ ಧೈರ್ಯ ಸಂಘಟಿಸಿಕೊಂಡಿದ್ದ ಸವಿತಾ ಹಲವು ಸುಂದರ ಚಿತ್ರಗಳನ್ನು ತೆಗೆದಳು. ಹಾಗೇ ಒಂದು ನಿಮಿಷದ ವಿಡಿಯೋವನ್ನು ಕೂಡ.

ಮತ್ತೆ ದಂಡೆಗೆ ವಾಪಸಾದಾಗ ಬ್ರಹ್ಮಪುತ್ರ ನಮ್ಮ ನಿಯಂತ್ರಣಕ್ಕೆ ಸಿಕ್ಕಿ ಮನವನ್ನು ತುಂಬಿಕೊಂಡಿದ್ದಳು.

ಅಂದು ಇಳಿಸಂಜೆಯಲ್ಲಿ ನಾವು ಗೌಹಾತಿ ನಗರ ದರ್ಶನ ಮಾಡಿದೆವು. ಕೆಲವರು 'ಖರೀದಿ ಯಾತ್ರೆ' ಮಾಡಿದರು. ಈ ನಗರ ನಮ್ಮ ವಿಜಯಪುರ ಅಥವಾ ಹುಬ್ಬಳ್ಳಿಯಂತಹ ಮಧ್ಯಮ ಗಾತ್ರದ, ಆದರೆ ಜನನಿಬಿಡವಾದ ನಗರ. ಅಸ್ಸಾಂನ ಅಧಿಕೃತ ರಾಜಧಾನಿಯೆನಿಸಿದ ದಿಸ್‌ಪುರ ಈ ನಗರಕ್ಕೇ ಮೆತ್ತಿಕೊಂಡಂತೆ ಇರುವ ಸುಯೋಜಿತ, ಸುಂದರ ಪ್ರದೇಶ. ಗೌಹಾತಿ ಪೇಟೆ ನಮ್ಮ ಪೇಟೆಗಳಂತೆಯೇ ಇಕ್ಕಟ್ಟು ಮತ್ತು ಜನಸಂದಣಿಯಿಂದ ಕೂಡಿ ರೇಜಿಗೆ ಹುಟ್ಟಿಸುವಂತಹದು. ಆದರೆ ಊರ ಮಧ್ಯೆ ತನ್ನ ಪ್ರಸಿದ್ಧ ಕವಿ ಲಕ್ಷ್ಮಿನಾಥ ಬೇದಬರುವಾರ ಪ್ರತಿಮೆಯನ್ನು ಸ್ಥಾಪಿಸಿಕೊಂಡಿರುವ ಈ ನಗರದ ಜನ ಸಾಕಷ್ಟು ಸುಸಂಸ್ಕೃತರು ಎಂದು ನಾನು ನಮ್ಮ ವಾಹನ ಚಾಲಕ ಅರುಣ್ ಹಜಾರಿಕಾನನ್ನು ಮಾತಾನಾಡಿಸಿದಾಗ ಅರಿವಿಗೆ ಬಂತು.

ಹದಿನೆಂಟು ಜನರಿದ್ದ ನಮ್ಮ ಪ್ರವಾಸಿ ತಂಡಕ್ಕೆ ಆ ಪ್ರದೇಶದ ಘಾಟಿ ರಸ್ತೆಗಳಿಗೆ ಹೊಂದುವಂತೆ ಎರಡು ಚಿಕ್ಕ ವಾಹನಗಳ ವ್ಯವಸ್ಥೆ ಮಾಡಲಾಗಿದ್ದು, ಶಿವಮೊಗ್ಗ-ಕಲ್ಬುರ್ಗಿಗಳಿಂದ ಹೋಗಿದ್ದ ನಮ್ಮ ಆರು ಜನರ ತಂಡಕ್ಕೆ ಒಂದು ಪ್ರತ್ಯೇಕ (ಇನ್ನೋವಾ) ವಾಹನ ಮತ್ತು ಚಾಲಕನ ವ್ಯವಸ್ಥೆ ಮಾಡಲಾಗಿತ್ತು. ೧೦ನೇ ತರಗತಿವರೆಗೆ ಮಾತ್ರ ಓದಿದ್ದ ಸುಮಾರು ೩೫-೪೦ರ ಪ್ರಾಯದ ಅರುಣ್ ಹಜಾರಿಕಾನಿಗೆ ತನ್ನ ನಾಡು-ನುಡಿಗಳ ನಿಕಟ ಪರಿಚಯವೆಷ್ಟಿತ್ತೆಂದರೆ, ಆತ ನಮ್ಮ ಪ್ರವಾಸದುದ್ದಕ್ಕೂ ಆ ರಾಜ್ಯದ ಸಾಂಸ್ಕೃತಿಕ ಇತಿಹಾಸದ ಸಕಲ ವಿವರಗಳನ್ನೂ ನಮ್ಮ ಮುಂದಿಟ್ಟ. ನಾವು ಭೂಪೇನ್ ಹಜಾರಿಕಾ ಬಗ್ಗೆ ಕೇಳಿದೊಡನೆ, ತನ್ನಲಿದ್ದ ಭೂಪೇನ್‌ರ ಧ್ವನಿ ಸುರುಳಿಗಳನ್ನು ಹಾಕಿ ನಮ್ಮ ಆನಂದ ಹೆಚ್ಚಿಸಿದ. ಅಷ್ಟೇ ಅಲ್ಲ, ಅಸ್ಸಾಂ ರಾಜ್ಯದ ಚಲನಚಿತ್ರ ಮತ್ತು ಪಾರಂಪರಿಕ ಸಂಗೀತವನ್ನೂ ಕೇಳಿಸಿದ. ಜ್ಞಾನಪೀಠ ಪುರಸ್ಕೃತ ಬೀರೇಂದ್ರ ಕುಮಾರ್ ಭಟ್ಟಾಚಾರ್ಜಿ ಗೊತ್ತಾ ಎಂದು ಕೇಳಿದೊಡನೆ, ಅವರಿಗಿಂತ ಒಳ್ಳೆಯ ಲೇಖಕ ಪ್ರತಿಮೆಯಾಗಿ ನಿಂತಿರುವ ಲಕ್ಷ್ಮೀನಾಥ್ ಬೇದ್‌ಬರುವಾ ಎಂದು ವಿವರಿಸಿದ.

ಅಸ್ಸಾಂನ ಸಾಮಾಜಿಕ ಸ್ವರೂಪದ ಬಗ್ಗೆ ಅರುಣ್ ಹಜಾರಿಕಾನನ್ನು ಕೇಳಿದಾಗ, ಅಲ್ಲಿನ ಜಾತಿಗಳ ವಿವರ ನೀಡಿ, ಅಲ್ಲಿ 'ಸುಮ್ಮನೆ ಬೆಂಕಿ ಉರಿಸಿ ಕಣ್ಣು ಹಾಳು ಮಾಡುವ' ಬ್ರಾಹ್ಮಣ ಪಂಥವನ್ನು ಟೀಕಿಸಿದ ಮತ್ತು ಜಾತಿ ವ್ಯವಸ್ಥೆಯನ್ನು ವಿರೋಧಿಸಿದ ಶಂಕರದೇವ ಅವರ ಆಧ್ಯಾತ್ಮಿಕ ಪರಂಪರೆಯ ಪ್ರಭಾವ ಇಲ್ಲಿ ದೊಡ್ಡದು ಎಂದು ವಿವರಿಸಿ, ತಾನೂ ಆ ಪರಂಪರೆಗೆ ಸೇರಿದವನು ಎಂದು ಹೆಮ್ಮೆಯಿಂದ ಹೇಳಿಕೊಂಡ! ಅವನು ತನ್ನ ಮದುವೆ ಈ ಪರಂಪರೆಯ ಪ್ರಕಾರ ಹೆಚ್ಚು ಖರ್ಚಿನ ಬಾಬತ್ತಿಲ್ಲದೆ ಹೇಗೆ ಹತ್ತು ನಿಮಿಷಗಳಲ್ಲಿ ಮುಗಿದು ಹೋಯಿತು ಎಂದು ಹೇಳಿದಾಗ ನನಗೆ ನಮ್ಮ ಕಡೆಯ ರಾಮಚಂದ್ರ ಮಿಷನ್‌ನ ಚಟುವಟಿಕೆಗಳ ನೆನಪಾಯಿತು. ಈ ಹಜಾರಿಕಾಗೆ ತನ್ನ ರಾಜ್ಯದ ಅಂಗುಲ ಅಂಗುಲವೂ ಪರಿಚಯವಿದ್ದಂತಿತ್ತು. ಅವನು ನಮ್ಮ ಪ್ರಯಾಣದುದ್ದಕ್ಕೂ ಅಲ್ಲಲ್ಲಿ ಗಾಡಿ ನಿಲ್ಲಿಸಿ ಅಲ್ಲಿನ ಪ್ರಾಕೃತಿಕ ವಿಶೇಷಗಳನ್ನು ವಿವರಿಸುತ್ತಿದ್ದ. ಕಾಜಿರಂಗದಿಂದ ಹಿಂತಿರುಗುತ್ತಿದ್ದಾಗ, ಒಂದೆಡೆ ಗಾಡಿ ನಿಲ್ಲಿಸಿ, ನಮ್ಮನ್ನು ಒಂದು ವೀಕ್ಷಣಾ ಗೋಪುರ ಹತ್ತಿಸಿ, ಇಲ್ಲಿ ಆನೆಗಳ ಹಿಂಡು ಕಾಣಲೇಬೇಕು ಎನ್ನುತ್ತಾ, ಅರಣ್ಯದ ಮಧ್ಯೆ ದೂರದಲ್ಲಿ ಮರಿಗಳೊಂದಿಗೆ ಸಾಗುತ್ತಿದ್ದ ಆನೆಗಳ ಹಿಂಡೊಂದನ್ನು ಗುರುತಿಸಿ ತೋರಿಸಿದ.

ನಮ್ಮ ಹಜಾರಿಕಾಗೆ ರಾಜ್ಯದ ರಾಜಕೀಯವೂ ಚೆನ್ನಾಗಿ ಗೊತ್ತು. ಅಸ್ಸಾಂ ೭೦-೮೦ರ ದಶಕದ ವಿದ್ಯಾರ್ಥಿ ಚಳುವಳಿಯ ಬಗ್ಗೆ ಮಾತನಾಡುತ್ತಾ ಆತ, ಆ ವಿದ್ಯಾಥಿಗಳಿಗೆ ಚಳುವಳಿ ಮಾಡುವುದು ಗೊತ್ತಿತ್ತೇ ಹೊರತು ರಾಜ್ಯವಾಳುವ ಪರಿ ಗೊತ್ತಿರಲಿಲ್ಲ ಎಂದು ಈಗ ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಮಂತ್ರಿಯಾಗಿರುವ ಮಾಜಿ ವಿದ್ಯಾರ್ಥಿ ನಾಯಕ ಮತ್ತು ಮಾಜಿ ಮುಖ್ಯಮಂತ್ರಿ ಪ್ರಫುಲ್ಲ ಕುಮಾರ್ ಮಹಂತೋ ಬಗ್ಗೆ ಸಹಾನುಭೂತಿ ತೋರಿದ. ಹಿಂದಿನ ಗೊಗೋಯ್ ಸರ್ಕಾರ ಬಾಂಗ್ಲಾದೇಶದ ಅಕ್ರಮ ವಲಸೆಗಾರ ಮುಸ್ಲಿಂ ಮತದಾರರ ನೆರವಿನಿಂದ ಹತ್ತು ವರ್ಷ ರಾಜ್ಯವನ್ನಾಳಿತು ಎಂದು ವಿಶ್ಲೇಷಿಸಿದ. ಹಜಾರಿಕಾಗೆ ಈಗ ಅಲ್ಲಿನ ಬಿಜೆಪಿ ನೇತೃತ್ವದ ಆಡಳಿತ ಮೆಚ್ಚುಗೆಯಾದಂತಿತ್ತು. ನಾವು ಕಾಜಿರಂಗದ ದಾರಿಯಲ್ಲಿನ ನೌಗಾಂಗ್ ನಗರ ನೋಡಿದಾಗ ಇಲ್ಲಿ ಬೋಡೋಗಳ ಕ್ರೌರ್ಯ ಭಯಂಕರವಾಗಿತ್ತಲ್ಲವೆ ಎಂದಾಗ, 'ಅದು ಹಳೆಯ ಕಥೆ. ಈಗ ಹಾಗಿಲ್ಲ. ಅದನ್ನು ಈಗ ನೆನಪಿಗೆ ತಂದುಕೊಳ್ಳುವುದು ಬೇಡ' ಎಂಬ ಮುತ್ಸದ್ದಿತನ ಪ್ರದರ್ಶಿಸಿದ! ಹಾಗೇ ಒಂದು ಎಚ್ಚರಿಕೆಯನ್ನೂ ನೀಡಿದ: 'ಈ ಪತ್ರಿಕೆ ಮತ್ತು ಟಿವಿಯವರು ಹೇಳುವುದನ್ನೆಲ್ಲ ಹಾಗಾಗೇ ನಂಬಬೇಡಿ. ವಾಸ್ತವ ಬೇರೆ ಇರುತ್ತದೆ!'

ಆದರೆ ಈ ನಮ್ಮ ಚಾಲಕ ಹಜಾರಿಕಾ ವಾಚಾಳಿಯೂ ಅಲ್ಲ; ಬಾಯಿಬಡುಕನೂ ಅಲ್ಲ. ನಾವು ಮಾತಾಡಿಸಿದಾಗ ಮಾತ್ರ ಮಾತಾಡುವವ. ತನ್ನ ಊಟ-ವಸತಿಗಳ ಬಗ್ಗೆ ನಮ್ಮನ್ನು ಅವಲಂಬಿಸಿದವನಲ್ಲ. ನಾವು ನಮ್ಮ ಊರುಗಳಲ್ಲಿ ಕಂಡಿದ್ದ ಟ್ಯಾಕ್ಸಿ ಚಾಲಕರ ಉಡಾಫೆ ಮತ್ತು ಬೇಜವಾಬ್ದಾರಿ ವರ್ತನೆ ಮತ್ತು ಮಂಡಿಸುತ್ತಿದ್ದ ಬೇಡಿಕೆಗಳನ್ನು ನೆನೆದು ಈತನ ಬಗ್ಗೆ ನಮ್ಮಲ್ಲಿ ಧನ್ಯತೆಯ ಭಾವವೇ ಉಂಟಾಯಿತು. ನಾನು ಕೇಳಿದಾಗ ಮಾತ್ರ ತನಗೆ ಒಂದು ಪುಟ್ಟ ಹೆಣ್ಣುಮಗುವಿದೆಯೆಂದೂ, ತಾಯಿ-ತಮ್ಮನೊಂದಿಗೆ ಒಂದು

ಪುಟ್ಟ ಅಡಿಕೆ ತೋಟದ ಮಾಲೀಕನಾಗಿ ಒಂದು ಸಣ್ಣ ಮನೆಯಲ್ಲಿ ಕನಿಷ್ಠ ಅಗತ್ಯಗಳ ನೆಮ್ಮದಿಯ ಜೀವನ ನಡೆಸುತ್ತಿರುವುದಾಗಿ ತಿಳಿಸಿದ. ಪ್ರಯಾಣದ ಕೊನೆಯಲ್ಲಿ ಗೌಹಾತಿ ವಿಮಾನ ನಿಲ್ದಾಣದಲ್ಲಿ ಒಂದಿಷ್ಟು ಹಣ ಕೈಗಿತ್ತಾಗ ಮರು ಮಾತಾಡದೆ ಅಷ್ಟೇ ಪ್ರೀತಿಯಿಂದ ಸ್ವೀಕರಿಸಿ 'ಮತ್ತೆ ಕಾಣೋಣ!' ಎಂಬ ನನ್ನ ವಿದಾಯದ ಮಾತುಗಳಿಗೆ 'ಖಂಡಿತ ಸಾಬ್!' ಎಂದು ನಮ್ಮನ್ನು ಬೀಳ್ಕೊಟ್ಟ. ನಮ್ಮ ಅಸ್ಸಾಂ-ಮೇಘಾಲಯದ ನೆನಪಿನ ಜೀವಂತ ಮತ್ತು ಅವಿಭಾಜ್ಯ ಭಾಗವಾಗಿರುವ ಈ ಅರುಣ್ ಹಜಾರಿಕಾ ಈಗ ನಮ್ಮ ಸ್ಮೃತಿಕೋಶದ ಒಂದು ಭಾಗವೂ ಹೌದು.

(ನವೆಂಬರ್ ೧೫, ೨೦೧೬)

ಭಾಗ–೩

(ಕೆಲವು ಶ್ರದ್ಧಾಂಜಲಿ ಬರಹಗಳು)

ಡಾ. ಹೊ. ಶ್ರೀನಿವಾಸಯ್ಯ, ಗಾಂಧಿ, ಗಾಂಧಿವಾದ ಮತ್ತು ಗಾಂಧಿ ಭವನಗಳು...

ಡಾ. ಹೊ. ಶ್ರೀನಿವಾಸಯ್ಯ ಅವರ ಬಗ್ಗೆ ಬರೆಯಲು ನಾನೆಷ್ಟು ಯೋಗ್ಯನೋ ನನಗೆ ತಿಳಿಯದು. ಗಾಂಧಿ ಸ್ಮಾರಕ ನಿಧಿಯ ಉಪಾಧ್ಯಕ್ಷರಾದ ಗೆಳೆಯ ಜಿ.ಬಿ. ಶಿವರಾಜು ಅವರು ಏನಾದರೂ ಬರೆಯಿರಿ–ಗಾಂಧಿ ಭವನ ಕುರಿತ ನಿಮ್ಮ ಕಲ್ಪನೆಯ ಬಗ್ಗೆಯೇ ಬರೆಯಿರಿ–ಎಂದು ಪ್ರೀತಿಪೂರ್ವಕವಾಗಿ ಆಗ್ರಹಿಸಿದ್ದರಿಂದ ಈ ಬರಹದ ಪ್ರಯತ್ನ ಮಾಡುತ್ತಿದ್ದೇನೆ. ಏಕೆಂದರೆ ಹೊ. ಶ್ರೀನಿವಾಸಯ್ಯನವರ ಹೆಸರು ಬಹು ಬಾರಿ ಮತ್ತು ಬಹು ಸಂದರ್ಭಗಳಲ್ಲಿ ನಾನು ಕೇಳಿದ್ದೆನಾದರೂ, ಅವರನ್ನು ಮುಖತಃ ಕಂಡು ಮಾತಾಡಿದ್ದು, ಎರಡು ಬಾರಿಯೋ ಮೂರು ಬಾರಿಯೋ ಇರಬೇಕು. ಅದೂ ಅವರು ಗತಿಸುವ ಮುಂಚಿನ ಎರಡು–ಮೂರು ವರ್ಷಗಳಲ್ಲಿ.

ಗಾಂಧಿ ವ್ಯಕ್ತಿತ್ವ ಮತ್ತು ವಿಚಾರಗಳ ಕುರಿತು ನನಗೆ ವಿದ್ಯಾರ್ಥಿ ದೆಸೆಯಿಂದಲೂ ಕುತೂಹಲ ಮತ್ತು ಆಸಕ್ತಿಗಳಿದ್ದುದರಿಂದ ಗಾಂಧಿ ಸಾಹಿತ್ಯವನ್ನು ಓದುವ ಸಂದರ್ಭಗಳಲ್ಲಿ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಶ್ರೀನಿವಾಸಯ್ಯನವರ ಹೆಸರು ಕಣ್ಣಿಗೆ ಅಥವಾ ಕಿವಿಗೆ ಬೀಳುತ್ತಿತ್ತು. ಅವರೊಬ್ಬರು ಕರ್ನಾಟಕದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಗಾಂಧಿವಾದಿಯೆಂಬುದು ನನ್ನ ಮನಸ್ಸಿನಲ್ಲಿ ಅಚ್ಚೊತ್ತಿತ್ತು. ಜೊತೆಗೆ ನಾನು ಬಹುವಾಗಿ ಮೆಚ್ಚುವ ಗಾಂಧಿವಾದಿ ಲೇಖಕ ದಿ. ಸಿದ್ಧವನಹಳ್ಳಿ ಕೃಷ್ಣಶರ್ಮರ ನಿಕಟವರ್ತಿಯಾಗಿ ೧೯೪೭ರಷ್ಟು ಹಿಂದೆಯೇ–ತಮ್ಮ ವಿದ್ಯಾರ್ಥಿ ದೆಸೆಯಲ್ಲಿಯೇ ಇವರು ಬೆಂಗಳೂರಿನ ಮಲ್ಲೇಶ್ವರಂನಲ್ಲಿ 'ಗಾಂಧಿ ಸಾಹಿತ್ಯ ಸಂಘ'ವನ್ನು ಗಾಂಧಿ ವಿಚಾರಗಳ ಪ್ರಚಾರಕ್ಕಾಗಿ ಸ್ಥಾಪಿಸಿದ್ದರೆಂಬ ಸಂಗತಿ ಅವರಲ್ಲಿ ನನಗೆ ಹೆಚ್ಚಿನ ಅಭಿಮಾನ ಹುಟ್ಟಿಸಿತ್ತು. ಅಷ್ಟೇ ಅಲ್ಲ, ಈ ಸಂಸ್ಥೆಗೆ ಪೂರಕವಾಗಿ ಗಾಂಧಿಗೆ ಪ್ರಿಯವಾಗಿದ್ದ ನಿಸರ್ಗ ಚಿಕಿತ್ಸಾ ಕೇಂದ್ರವೊಂದನ್ನು ತೆರೆದು ನಿರ್ವಹಿಸಿದರೆಂಬುದೂ ಗಾಂಧಿ ವಿಚಾರಧಾರೆ ಕುರಿತ ಅವರ ಸಮಗ್ರ ಗ್ರಹಿಕೆ ಮತ್ತು ಬದ್ಧತೆಗಳ ಪ್ರತೀಕವೇ ಆಗಿತ್ತೆಂದು ನಾನು ಭಾವಿಸಿದ್ದೇನೆ. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ನಾನು

ಮಾರಕ ಅಸ್ವಸ್ಥತೆಗೆ ಈಡಾಗಿ ಎಲ್ಲ ಚಿಕಿತ್ಸೆಗಳೂ ಅನುಮಾನಾಸ್ಪದವೆನಿಸಿದಾಗ ನಾನು ಮೊರೆ ಹೋದದ್ದು ಈ ಚಿಕಿತ್ಸಾ ಕೇಂದ್ರದ ಇಬ್ಬರು ವೈದ್ಯ ಕಾರ್ಯಕರ್ತರಿಗೇ. ಈ ಇಬ್ಬರೂ ಒಂದು ತಿಂಗಳು ನಾನು ತಂಗಿದ್ದ ನನ್ನ ಬಂಧುವೊಬ್ಬರ ದೂರದ ಮನೆಗೆ ನಿತ್ಯವೂ ಬಂದು ನನಗೆ ಅಗತ್ಯ ಚಿಕಿತ್ಸೆ ನೀಡುತ್ತಿದ್ದುದರ ಹಿಂದಿನ ಸೇವಾ ತತ್ಪರತೆಯನ್ನು ನಾನೆಂದೂ ಮರೆಯಲಾರೆ. ಹೀಗೆ ನಾನು ಶ್ರೀನಿವಾಸಯ್ಯನವರು ಬದುಕಿನಲ್ಲಿಯೂ ಅಳವಡಿಸಿಕೊಂಡು ನಿರ್ವಹಿಸುತ್ತಿದ್ದ ಗಾಂಧಿ ಬದುಕಿನ ಮಾರ್ಗದ ಫಲಾನುಭವಿಯೂ ಆಗಿದ್ದೇನೆ ಎಂದು ಹೇಳಿಕೊಳ್ಳಲು ಹೆಮ್ಮೆಯೆನಿಸುತ್ತದೆ. ಜೊತೆಗೆ ಇವರ ಸಂಪಾದಕತ್ವದ 'ಪ್ರಕೃತಿ ಜೀವನ' ಮಾಸಿಕದ ಆಜೀವ ಚಂದಾದಾರನಾಗಿ ಅದರ ಓದುಗನೂ ಆಗಿದ್ದೇನೆ ಎಂದೂ ಇಲ್ಲಿ ತಿಳಿಸಬಯಸುವೆ.

ಈ ಲೇಖನ ಬರೆಯಲು ಪೀಠಿಕೆಯಾಗಿ, ಶ್ರೀನಿವಾಸಯ್ಯನವರ ಕುಟುಂಬವೂ ಅವರ ಬಗ್ಗೆ ಹೊರತಂದಿರುವ ಕೈಹೊತ್ತಿಗೆಯೊಂದನ್ನು ಓದುತ್ತಾ ಹೋದಂತೆ ನನಗೆ ಗಾಬರಿಯೇ ಆಯಿತು. ಒಬ್ಬ ಮನುಷ್ಯ ಒಂದು ಜೀವಿತಾವಧಿಯಲ್ಲಿ ಇಷ್ಟೊಂದು ಕೆಲಸ ಮಾಡಲು ಸಾಧ್ಯವೇ ಎಂದು ನನಗೆ ಮಹದಾಶ್ಚರ್ಯವಾಯಿತು. ಮಂಡ್ಯ ಜಿಲ್ಲೆಯ ಒಂದು ಕುಗ್ರಾಮದ (ಬಹುಶಃ ಒಂದು ಅನಕ್ಷರಸ್ಥ) ರೈತಾಪಿ ಕುಟುಂಬವೊಂದರಲ್ಲಿ ಜನಿಸಿ ಆರೇಳು ದಶಕಗಳ ಹಿಂದೆಯೇ ಇಂಜಿನಿಯರಿಂಗ್‌ನಲ್ಲಿ ಪದವಿ ಮತ್ತು ನಂತರದ ಪೂರಕ ವ್ಯಾಸಂಗ ಕ್ರಮಗಳನ್ನೂ ಕೈಗೊಂಡು ಪ್ರತಿಷ್ಠಿತ ಸರ್ಕಾರಿ ಕಾರ್ಖಾನೆಗಳಲ್ಲಿ ವಿಶೇಷ ಪರಿಣಿತಿಯ ತಂತ್ರಜ್ಞರಾಗಿ ದುಡಿಯುತ್ತಿದ್ದ ಹೊತ್ತಿನಲ್ಲೇ ಸ್ವಾತಂತ್ರ್ಯ ಹೋರಾಟದಲ್ಲೂ ವಿದ್ಯಾರ್ಥಿಯಾಗಿ ಭಾಗವಹಿಸಿ, ನಂತರ ಗಾಂಧಿ ಚಿಂತನೆ ಮತ್ತು ಮೌಲ್ಯಗಳ ಪ್ರಸಾರಕ್ಕಾಗಿ ಹಲವು ನೆಲೆಗಳ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳುತ್ತಾ ತಮ್ಮ ೯೩ ವರ್ಷಗಳಷ್ಟು ಹಣ್ಣು ಹಣ್ಣಾದ ವಯಸ್ಸಿನವರೆಗೂ ನಿರಂತರವಾಗಿ ದುಡಿದ ಈ ಚೇತನ ಅಪರೂಪದ್ದು. ಗಾಂಧಿಯುಗದಲ್ಲಿ ಮಾತ್ರ ನಿರ್ಮಾಣವಾಗುವಂತಹದ್ದು.

ಗಾಂಧಿ ಸಂಬಂಧಿತ ಸಂಘಟನೆಗಳಲ್ಲಲ್ಲದೆ, ಆರೋಗ್ಯ, ಸಹಕಾರ, ಗ್ರಾಮೀಣ ಅಭಿವೃದ್ಧಿ, ಕಾರ್ಮಿಕ ಕಲ್ಯಾಣ, ಶಿಕ್ಷಣ, ಪತ್ರಿಕೋದ್ಯಮ, ಸಾಹಿತ್ಯ-ಸಂಸ್ಕೃತಿ ಇತ್ಯಾದಿ ಕ್ಷೇತ್ರಗಳಲ್ಲೂ ಅಪರೂಪದ ಸಾಧನೆ ಗೈದಿರುವ ಶ್ರೀನಿವಾಸಯ್ಯನವರು ನಾನು ಅವರನ್ನು ವೈಯಕ್ತಿಕವಾಗಿ ಭೇಟಿ ಮಾಡಿದ ಯಾವ ಸಂದರ್ಭದಲ್ಲೂ ತಮ್ಮ ಈ ಸಾಧನೆಗಳ ಹಿರಿಮೆಯನ್ನಾಗಲೀ, ಹಿರಿತನವನ್ನಾಗಲೀ ಮೆರೆದವರಲ್ಲ. ಗಾಂಧಿ ಭವನದಲ್ಲಿ ನಾನು ಅವರನ್ನು ಕಂಡ ಎರಡು ಮೂರು ಸಂದರ್ಭಗಳಲ್ಲೂ ಅವರು ನನ್ನನ್ನು ಬಹಳ ಕಾಲದ ಪರಿಚಿತನಂತೆ, ಅತಿ ಆಪ್ತನಂತೆಯೇ ತಮ್ಮ ಪ್ರೀತಿ ತೋರಿ ನನ್ನೊಡನೆ ಸಮಾನನಂತೆ ಬೆರೆತರು. ಅಷ್ಟೇ ಅಲ್ಲದೆ ನನ್ನ ಪತ್ನಿ ಮತ್ತು ನಮ್ಮ ಕುಟುಂಬದ ಇಬ್ಬರು ಕಿರಿಯ ಸದಸ್ಯರೊಂದಿಗೆ ಹೋದಾಗ ಕೂಡ ಅವರೆಲ್ಲರನ್ನೂ ತಮ್ಮ ಕುಟುಂಬದವರಂತೆಯೇ ಪ್ರೀತ್ಯಾದರಗಳಿಂದ ಮಾತನಾಡಿಸಿ, ಗಾಂಧಿ ಭವನಕ್ಕೆ ಆಗಾಗ್ಗೆ ಬಂದು ಹೋಗುತ್ತಿರಲು ಸೂಚಿಸಿದರು. ಗಾಂಧಿ ವಿಚಾರ ಕುರಿತಂತೆ ಅವರಿಗಿಂತ ಭಿನ್ನವಾದ ನೆಲೆಯ ನನ್ನ ನಿಲುವು, ನಿರೂಪಣೆ ಮತ್ತು ಅಭಿಪ್ರಾಯಗಳನ್ನು ಅವರು ಸಹನೆಯಿಂದ ಕೇಳುತ್ತಿದ್ದರು.

ಅವರು ನನ್ನನ್ನು (ಬಹುಶಃ ಆಗ ಗಾಂಧಿ ಸ್ಮಾರಕ ನಿಧಿಯ ಕಾರ್ಯದರ್ಶಿಯಾಗಿದ್ದ ಜಿ.ಬಿ. ಶಿವರಾಜು ಅವರ ಕುಮ್ಮಕ್ಕಿನಿಂದ) ಗಾಂಧಿ ಭವನದ ಒಂದೆರಡು ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಮಾಡಿದರು. ಹಾಗೇ ನಾನು ಅಧ್ಯಕ್ಷನಾಗಿರುವ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಸಹಯೋಗದಲ್ಲಿ 'ಹಿಂದ್ ಸ್ವರಾಜ್' ಕುರಿತು ಒಂದು ಕಾರ್ಯಾಗಾರವನ್ನು ಗಾಂಧಿ ಭವನದಲ್ಲಿ ಆಯೋಜಿಸಲೂ ಅವಕಾಶ ಮಾಡಿಕೊಟ್ಟರು.

ರಾಷ್ಟ್ರಮಟ್ಟದ ಗಾಂಧಿ ಸಂಘಟನೆಗಳ ಸಂಪರ್ಕವಲ್ಲದೆ, ೩೧ ವರ್ಷಗಳಷ್ಟು ದೀರ್ಘಕಾಲ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಒಂದಲ್ಲ ಒಂದು ಮಟ್ಟದ ಉಸ್ತುವಾರಿಯಲ್ಲಿದ್ದ ಈ ಹಿರಿಯರು ಗಾಂಧಿ ವಿಚಾರಗಳನ್ನು ವಿವಿಧ ಸ್ತರಗಳ ಜನವರ್ಗಗಳಿಗೆ ತಲುಪಿಸುವ ಹಲವು ರೂಪಗಳ–ಶಿಬಿರ, ಕಾರ್ಯಾಗಾರ, ವಿಚಾರ ಸಂಕಿರಣ, ವಸ್ತು ಪ್ರದರ್ಶನ, ಪುಸ್ತಕ ಪ್ರಕಟಣೆ, ಗ್ರಂಥ ಭಂಡಾರ ಸ್ಥಾಪನೆ ಇತ್ಯಾದಿ– ಕಾರ್ಯಕ್ರಮಗಳನ್ನು ಕೈಗೊಂಡಿದ್ದರ ಜೊತೆಗೇ ಬೆಂಗಳೂರಿನ ಗಾಂಧಿ ಭವನವನ್ನು ಸಮಕಾಲೀನ ಅಗತ್ಯಗಳಿಗೆ ತಕ್ಕಂತೆ; ಆದರೆ ಗಾಂಧಿ ಮೌಲ್ಯಗಳಿಗೆ ಅಪಚಾರವಾಗದಂತೆ, ಆಧುನಿಕ ಸೌಲಭ್ಯಗಳಿಂದ ಸಜ್ಜುಗೊಳಿಸಿದ್ದಾರೆ. ಈ ಭವನ ಇಂದು ರಾಜ್ಯದ ರಾಜಧಾನಿಯಲ್ಲಿ ರಾಜ್ಯದ ಅಳಿದುಳಿದಿರುವ ಗಾಂಧಿವಾದಿಗಳು ಹೆಮ್ಮೆಪಡಬಹುದಾದ ಒಂದು ಗಾಂಧಿ ತಾಣವಾಗಿದೆ; ಹಾಗೇ ಇದು ಗಾಂಧಿ ಸಂಬಂಧಿತ ಸಮಾರಂಭಗಳ ಅಚ್ಚುಕಟ್ಟಾದ ನಿರ್ವಹಣೆಗೆ ಸೂಕ್ತವಾದ ಭವನವೂ ಆಗಿದೆ. ಇದೆಲ್ಲದಕ್ಕಾಗಿ ಕರ್ನಾಟಕದ ಗಾಂಧಿ ಪರಂಪರೆಯ ಮುಂದಿನ ವಾರಸುದಾರರು ಶ್ರೀನಿವಾಸಯ್ಯನವರಿಗೆ ಚಿರಋಣಿಗಳಾಗಿರಬೇಕಿದೆ.

* * *

ಈ ಮೊದಲೇ ತಿಳಿಸಿದಂತೆ ನನ್ನ ಮತ್ತು ಶ್ರೀನಿವಾಸಯ್ಯನವರ ಪರಸ್ಪರ ವೈಯಕ್ತಿಕ ಪರಿಚಯ ಅಲ್ಪಕಾಲಿಕವಾದದ್ದು ಮತ್ತು ಹೊರ ವಲಯಗಳದ್ದು. ಅವರ ವ್ಯಕ್ತಿತ್ವವನ್ನು ಒಳಹೊಕ್ಕು ನೋಡುವ ಸಂದರ್ಭಗಳು ನನ್ನ ಪಾಲಿಗೆ ದೊರೆತದ್ದು ಇಲ್ಲವೇ ಇಲ್ಲವೆನಿಸುವಷ್ಟು ಕಡಿಮೆ. ಆದರೂ ಅವರ ಜೀವನ ವಿವರಗಳನ್ನು ಅವರ ಪರಿಚಯ ಪುಸ್ತಕದಲ್ಲಿ ಗಮನಿಸಿದ ನಂತರ ಮತ್ತು ಅವರೊಡನೆ ಬೆರೆತ ಒಂದೆರಡು ಸಂದರ್ಭಗಳನ್ನೇ ಮೆಲುಕು ಹಾಕಿದಾಗ ಅವರ ಒಂದೆರಡು ದೌರ್ಬಲ್ಯಗಳೂ ನನ್ನ ಗಮನಕ್ಕೆ ಬಂದುದನ್ನು ಇಲ್ಲಿ ದಾಖಲಿಸದಿದ್ದರೆ ತಪ್ಪಾದೀತು; ನನ್ನ ಈ ಬರಹದ ಅಪ್ರಾಮಾಣಿಕತೆಯೂ ಆದೀತು. ಹುಟ್ಟಿನಿಂದ ಒಕ್ಕಲಿಗ ಜಾತಿಗೆ ಸೇರಿದ್ದ ಅವರು ಅದೇ ಜಾತಿಯವರ 'ಕೇಂದ್ರಸ್ಥಾನ'ವಾದ ಆದಿಚುಂಚನಗಿರಿ ಮಠದೊಂದಿಗೆ ಹೊಂದಿದ್ದ ವಿಶೇಷ ಸಂಬಂಧ, ಅವರು ಹಿರಿಯ ಗಾಂಧಿವಾದಿಯೂ ಆಗಿದ್ದರು ಎಂಬ ಸಂಗತಿಯ ಹಿನ್ನೆಲೆಯಲ್ಲಿ ನನ್ನಲ್ಲಿ ಒಂದು ಅಸಮಾಧಾನದ ಅಲೆಯನ್ನೂ ಎಬ್ಬಿಸಿದೆ. ಇಂದು ನಮ್ಮ ಮಠಗಳು ಎಂತಹ ಜಾತಿಕೂಪಗಳಾಗಿವೆ ಮತ್ತು ಹಲವು ತೆರೆನ ವ್ಯಾಪಾರಿ ಕೇಂದ್ರಗಳಾಗಿವೆ ಎಂಬುದು ಇಲ್ಲಿ ನೆನಪಿಗೆ ಬರದಿರಲಾರದು. ಗಾಂಧಿ ವಿಚಾರಧಾರೆಯ

ಜೀವ ಶಕ್ತಿಯಂತಿರುವ ಜಾತಿ ಮತಗಳ ಬಂಧನಗಳಿಲ್ಲದ ವಿಶ್ವಭ್ರಾತೃತ್ವದ (ಉನ್ನತ ಚಿಂತನೆ-ಸರಳ ಬದುಕು ಎಂಬ) ಬೀಜ ಸಂದೇಶದ ಜೊತೆ ಇದನ್ನು ನೆನೆದಾಗ ನನ್ನ ಅಸಮಾಧಾನಕ್ಕೆ ಈ ಬರಹವನ್ನು ಓದುವ ಕೆಲವರಿಗಾದರೂ ಸಮರ್ಥನೆ ಕಂಡೀತು ಎಂದು ನಾನು ಭಾವಿಸಿದ್ದೇನೆ.

ಹಾಗೇ ಶ್ರೀನಿವಾಸಯ್ಯನವರಲ್ಲಿ ನಾನು ಕಂಡ ಇನ್ನೊಂದು ದೌರ್ಬಲ್ಯವೆಂದರೆ, ಅವರು ಆಳುವ ವ್ಯವಸ್ಥೆಯಿಂದ ಉದ್ದೇಶಪೂರ್ವಕವಾಗಿ ದೂರವಿರಲು ಬಯಸಲಿಲ್ಲ ಮತ್ತು ಬಹುಶಃ ಇದೇ ಕಾರಣದಿಂದಾಗಿ ಅವರು ಎಂದೂ ಸರ್ಕಾರದ ನೀತಿಗಳ ಒಳಿತು-ಕೆಡಕುಗಳ ಬಗೆಗಿನ ವಿಮರ್ಶಕರಾಗಲಿಲ್ಲ ಎಂಬುದು. ನನ್ನ ಮತ್ತು ಅವರ ಪರಿಚಯದ ಒಂದೆರಡು ವರ್ಷಗಳ ಅವಧಿಯಲ್ಲೇ ಆಳುವ ಸರ್ಕಾರದ ಹಲವು ನೀತಿ-ಕಾರ್ಯಕ್ರಮಗಳು ಜನ ವಿರೋಧಿ ಎನಿಸಿ, ಇತರೆ ಗಾಂಧಿವಾದಿಗಳೂ ಸೇರಿದಂತೆ ಸಾರ್ವಜನಿಕರ ಟೀಕೆ-ವಿರೋಧಗಳಿಗೆ ಒಳಗಾಗಿವೆ. ಅಂತಹ ಸಂದರ್ಭಗಳಲ್ಲೂ ಈ ಹಿರಿಯರು ಇದೆಲ್ಲದಕ್ಕೂ ತಮಗೂ ಸಂಬಂಧವೇ ಇಲ್ಲವೆಂಬಂತೆ ಸುಮ್ಮನಿದ್ದುಬಿಟ್ಟುದನ್ನು ಕಂಡು ನಾನು ಮೂಕವಿಸ್ಮಿತನಾಗಿದ್ದೇನೆ. ಅವರು ಸಕ್ರಿಯ ರಾಜಕಾರಣಿಯಂತೆ ಸರ್ಕಾರವನ್ನು ಟೀಕಿಸಬೇಕಿತ್ತು ಎಂದು ಯಾರೂ ನಿರೀಕ್ಷಿಸಲಾರರು. ಆದರೆ, ತಮ್ಮ ಅಸಮಾಧಾನ-ಅಸಮ್ಮತಿಗಳನ್ನು ಅಗತ್ಯ ಮುತ್ಸದ್ದಿತನದಿಂದಲೇ ದಾಖಲಿಸಬಹುದಿತ್ತಲ್ಲ ಎಂಬ ಕೊರಗಿಗೆ ಅವಕಾಶವಿದೆ.

ಶ್ರೀನಿವಾಸಯ್ಯನವರು ಸಾತ್ವಿಕ ವ್ಯಕ್ತಿತ್ವದ ಸಾಧು ಮನುಷ್ಯರು, ನಿಜ. ಆದರೆ ಸಾತ್ವಿಕತೆ ಎಂದರೆ ಭೋಳೆತನ, ಕೇಡಿನ ಎದುರೂ ನಿರ್ಲಿಪ್ತತೆ ಅಥವಾ ನಿಷ್ಕ್ರಿಯತೆ ಎಂದಲ್ಲವಲ್ಲ? ಗಾಂಧಿ ಭವನದ ಮುಖ್ಯಸ್ಥರಾಗಿ ಸರ್ಕಾರಿ ವಲಯಗಳ ಜೊತೆ ನಿಯಮಿತವಾಗಿ ಒಡನಾಡುವವರಾಗಿ ಅವರಿಗೆ ಇದೆಲ್ಲ ಮುಜುಗರವನ್ನುಂಟು ಮಾಡುವಂತಹದಾಗಬಹುದಿತ್ತು ಎಂದೂ ಕೆಲವರು ವಾದಿಸಬಹುದು. ಆದರೆ ಅವರು ಗಾಂಧಿ ಭವನದ (ಗಾಂಧಿ ಸ್ಮಾರಕ ನಿಧಿಯ) ಮುಖ್ಯಸ್ಥರಾಗಿರುವುದು ಅವರು ಗಾಂಧಿವಾದಿಗಳೆನಿಸಿಕೊಂಡಿರುವುದರಿಂದ ಮತ್ತು ಈ ಗಾಂಧಿವಾದದ ಜವಾಬ್ದಾರಿಗಳು ಗಾಂಧಿ ಭವನದ ಮುಖ್ಯಸ್ಥನ ಜವಾಬ್ದಾರಿಗಳಿಗಿಂತ ಶ್ರೇಷ್ಠವಾದವು ಮತ್ತು ಮುಖ್ಯವಾದವು ಮತ್ತು ಅವೇ ಇವನ್ನೂ ನಿರ್ಧರಿಸುವವು ಎಂಬುದು ಶ್ರೀನಿವಾಸಯ್ಯನವರಿಗೆ ಏಕೆ ಹೊಳೆಯದೇ ಹೋಯಿತು ಎಂದೂ ನನಗೆ ಆಶ್ಚರ್ಯವಾಗುತ್ತದೆ.

ಈ ಆಶ್ಚರ್ಯವೇ ಹಲವು ಬಾರಿ ಗಾಂಧಿ ಭವನ ತನ್ನೆಲ್ಲ ವಿಧಾಯಕ ಕೆಲಸ ಕಾರ್ಯಗಳ ಹೊರತಾಗಿಯೂ ತನ್ನ ಸ್ವರೂಪ ಮತ್ತು ಕಾರ್ಯಶೈಲಿಯನ್ನು ನಿರ್ಣಾಯಕವಾಗಿ ಬದಲಾಯಿಸಿಕೊಳ್ಳುವ ಕಾಲ ಈಗ ಬಂದಿದೆಯಲ್ಲವೇ ಎಂದು ನಾನು ಯೋಚಿಸಲೂ ಅವಕಾಶ ನೀಡಿದೆ. ಕರ್ನಾಟಕ ಸರ್ಕಾರ ಪ್ರತಿ ಜಿಲ್ಲಾ ಕೇಂದ್ರದಲ್ಲೂ ಒಂದು ಗಾಂಧಿ ಭವನ ನಿರ್ಮಿಸುವ ಯೋಜನೆ ಆರಂಭಿಸಿದೆ ಎಂದು ತಿಳಿದುಬಂದಾಗ ನಾನು ಈ ಯೋಜನೆ ಕುರಿತು ವ್ಯಾಪಕವಾದ ಸಾರ್ವಜನಿಕ ಚರ್ಚೆಯಾಗಬೇಕೆಂದು

ಹೇಳಿದ್ದೂ, ಬರೆದದ್ದೂ ಇದೇ ಕಾರಣದಿಂದ. (ನೋಡಿ: 'ಪ್ರಜಾವಾಣಿ' : 'ಸಂಗತ' : ೨೧ ಜನವರಿ ೨೦೧೭) ಶ್ರೀನಿವಾಸಯ್ಯನವರ ಬಗ್ಗೆ ಬರೆಯುವ ಸಂದರ್ಭದಲ್ಲಿ ಈ ಬಗ್ಗೆ ನಾಲ್ಕು ಮಾತುಗಳನ್ನು ಬರೆಯುವುದು ಅವರಿಗೆ ಸಲ್ಲಿಸುವ ಪ್ರಾಮಾಣಿಕ ಗೌರವವೂ, ಗಾಂಧಿ ನ್ಯಾಯವೂ ಆಗಬಹುದೆಂದು ನಾನು ಭಾವಿಸುತ್ತೇನೆ.

* * *

ಗಾಂಧಿವಾದವೆಂಬುದಿಲ್ಲ; ಇರುವುದು ಗಾಂಧಿ ಬದುಕು ಎಂಬ ಮಾತಿದೆ ಅಂದಾಕ್ಷಣ ಗಾಂಧಿ ವಿಚಾರಗಳೆಂಬುವು ಇಲ್ಲ ಎಂದರ್ಥವಲ್ಲ. ಗಾಂಧಿ ನುಡಿದಂತೆ ನಡೆದರು ಮತ್ತು ನಡೆದಂತೆ ನುಡಿದರು ಕೂಡ. ಇಂತಹ ಬದುಕಿನ ಅಖಂಡ ಸಾವಯತೆಯಲ್ಲಿ ನಮ್ಮ ಬದುಕಿಗೆ, ನಮ್ಮ ನಮ್ಮ ಬದುಕುಗಳ ಸತ್ಯಗಳ ಅನ್ವೇಷಣೆಗೆ ತೋರುಗೈ ಆಗಬಲ್ಲ ಅನೇಕ ವಿಚಾರಗಳು ಹೊರಹೊಮ್ಮಿವೆ. ಅವನ್ನೇ ಸ್ಥೂಲವಾಗಿ ಇಂದು ಗಾಂಧಿ ವಿಚಾರಧಾರೆ ಅಥವಾ ಗಾಂಧಿವಾದ ಎಂದು ಕರೆಯಲಾಗುತ್ತದೆ. ಇದರ ಮುಖ್ಯ ಕಳಕಳಿ ಎಂದರೆ, ಆತ್ಮಸಾಕ್ಷಿಗೆ ಎಂದೂ ಎರವಾಗದಂತೆ ನಡೆ ಎಂಬುದು. ಆ ಆತ್ಮಸಾಕ್ಷಿಯೇ ಗಾಂಧಿ ಕಂಡುಕೊಂಡ ದೇವರು. ಹಾಗಾಗಿಯೇ ಅವರು ದೇವರು ಸತ್ಯ ಎಂಬ ಪುರಾತನ ಮಾತನ್ನು ಸತ್ಯವೇ ದೇವರು ಎಂದು ತಲೆಕೆಳಗಾಗಿಸಿ ವೈಚಾರಿಕ ಯುಗಕ್ಕಾಗಿ ದೇವರನ್ನು ಪುನರನ್ವೇಷಿಸಿ, ಪುನರ್‌ವ್ಯಾಖ್ಯಾನಿಸಿ, ಪುನರ್‌ರೂಪಿಸಿಕೊಟ್ಟರು.

ಇದೇ ಅರ್ಥದ ಅವರ ಇನ್ನೊಂದು ಮಾತೆಂದರೆ, 'ಮನುಷ್ಯ ದೇವರಾಗುವ ತನಕ ಅವನಿಗೆ ಶಾಂತಿ ಇಲ್ಲ' ಎಂಬುದು. ಅಂದರೆ ಮನುಷ್ಯ ತನ್ನ ಬದುಕಿನ ಸತ್ಯವನ್ನು (ಅಂದರೆ ದೈವತ್ವವನ್ನು) ಕಂಡುಕೊಳ್ಳುವ ತನಕ ಅವನಿಗೆ ಶಾಂತಿಯಿಲ್ಲ. ಬದುಕಿನ ಈ ಸತ್ಯಾನ್ವೇಷಣೆಗೆ ದಾರಿ ಯಾವುದು? ಅದನ್ನೂ ಗಾಂಧಿ ತಮ್ಮ ಬದುಕಿನ ದಿಕ್ಕಿನ ಸೂಚನೆಯನ್ನೀಯುತ್ತಲೇ ಹೀಗೆ ವಿವರಿಸಿದ್ದಾರೆ: 'ನನಗೆ ಎಂದಾದರೂ ಧರ್ಮ ಮತ್ತು ನೀತಿಗಳ ನಡುವೆ ಆಯ್ಕೆ ಮಾಡಿಕೊಳ್ಳಬೇಕಾಗಿ ಬಂದರೆ ನೀತಿಯನ್ನೇ ಆಯ್ದುಕೊಂಡೇನು.' ಅವರು ತಮ್ಮ ಬದುಕಿನುದ್ದಕ್ಕೂ ಇಂತಹುದೇ ಆಯ್ಕೆ ಮಾಡಿಕೊಳ್ಳುತ್ತಾ ವೈಚಾರಿಕ ಯುಗಕ್ಕಾಗಿ ಧರ್ಮದ ಅರ್ಥವನ್ನು ಹೊಸದಾಗಿ ಕಟ್ಟಿಕೊಟ್ಟರು. ವರ್ಣಧರ್ಮವನ್ನು ಅವರು ವ್ಯಾಖ್ಯಾನಿಸಿದ ರೀತಿ ಮತ್ತು ಅಸ್ಪೃಶ್ಯತೆಯ ನಿವಾರಣೆಗಾಗಿ ಅವರು ನಡೆಸಿದ ಹೋರಾಟ ಇದಕ್ಕೆ ಬಹು ದೊಡ್ಡ ಉದಾಹರಣೆಗಳು.

ಈ ಉದಾಹರಣೆಗಳೇ ಅವರ ಪ್ರಕಾರ ನೀತಿ ಎಂದರೇನು ಎಂಬ ಪ್ರಶ್ನೆಗೆ ಸ್ಪಷ್ಟ ಉತ್ತರ ಕೊಡುತ್ತವೆ. ಅವರ ಪ್ರಕಾರ ನೀತಿ ಎಂದರೆ ಸೋದರತೆ, ಸಮಾಜ ಜೀವಿತ್ವ, ಅದಕ್ಕೆ ಬೇಕಾದ ಆದರ್ಶಗಳ ಹಂಬಲ ಮತ್ತು ಬದ್ಧತೆ ಹಾಗೂ ಅವು ಬೇಡುವ ತ್ಯಾಗ. ಇವುಗಳ ಕೊರತೆಯೇ ಭಾರತದ ಸಮಾಜವನ್ನು ಆಂತರಿಕವಾಗಿಯೂ(ಅಂದರೆ ಅದರ ಮನೋಬಲವನ್ನು) ಮತ್ತು ಬಾಹ್ಯವಾಗಿಯೂ (ಅಂದರೆ ಅದರ ಸಂಘಟನೆಯ ಬಲವನ್ನೂ) ಒಡೆದು ಗುಲಾಮಗಿರಿಗೆ ತಳ್ಳಿತು ಎಂದು ಗಾಂಧಿ ಭಾವಿಸಿದರು. ಇದಕ್ಕೆ ಪೂರಕವಾಗಿ ನಮ್ಮನ್ನು ಸೆಳೆದುಕೊಂಡ, ಮನುಷ್ಯ ಮೂಲತಃ ಭೋಗಜೀವಿ ಎಂದು ನಂಬಿದ ಪಶ್ಚಿಮದ ಆಧುನಿಕ ಜೀವನ ಪದ್ಧತಿಯನ್ನು ನಾಗರಿಕತೆ ಎಂದು ಕರೆಯುವುದು

ತಪ್ಪು ಎಂದ ಗಾಂಧಿ, ಈ ಜೀವನ ಪದ್ಧತಿಗೆ ಪರ್ಯಾಯವಾಗಿ ಭೋಗಕ್ಕೆ ಒಂದು ವಿವೇಕದ ಮಿತಿಯುಳ್ಳ ಬದುಕಿನ ಮಾದರಿಯೊಂದರ ಹೊಳಹನ್ನು ನಮಗೆ ನೀಡಿ ಹೋಗಿದ್ದಾರೆ. ಬದುಕಿನ ಆತ್ಯಂತಿಕ ಗುರಿ ಶಾಂತಿ, ನೆಮ್ಮದಿ ಮತ್ತು ಸಮತ್ವಗಳೇ ಆಗಿರುವುದರಿಂದ ಇಂತಹ ಮಿತಿಗಳುಳ್ಳ ಸರಳ ಬದುಕೇ ಅದನ್ನು ಸಾಧಿಸಲು ಏಕೈಕ ಮಾರ್ಗ ಎಂದು ಅವರು ಪ್ರತಿಪಾದಿಸಿದರು.

ಆದರೆ ಆಧುನಿಕ ವಿಜ್ಞಾನ-ತಂತ್ರಜ್ಞಾನಗಳು ಈ ಜಗತ್ತಿನ ನಿಗೂಢತೆಯನ್ನು ಸವಾಲಾಗಿ ಸ್ವೀಕರಿಸಿ ಅದನ್ನು ಬಯಲು ಮಾಡಲು ಹಠತೊಟ್ಟಂತೆ ತೋರುವ ನಿರಂತರ ಶೋಧನೆ-ಸಂಶೋಧನೆಗಳಲ್ಲಿ ತೊಡಗಿವೆ. ಈ ಹಾದಿಯುದ್ದಕ್ಕೂ ಅವು ಉತ್ಪನ್ನ-ಉಪ ಉತ್ಪನ್ನಗಳ ರೂಪದಲ್ಲಿ ಅನೇಕ ಬಗೆಯ ಸುಖ ಸಾಧನಗಳನ್ನು ನಿರಂತರವಾಗಿ ತಯಾರಿಸಿ ನೀಡುತ್ತಿವೆ. ಅವುಗಳ ಅನುಭೋಗದ ಅಮಲಿನಲ್ಲಿರುವ ಆಧುನಿಕ ಬದುಕಿನ ಆರಾಧಕರು ಗಾಂಧಿಯವರ ಈ ಸರಳ ಬದುಕಿನ ಪರಿಕಲ್ಪನೆಯನ್ನು ಅಧ್ಯಾತ್ಮಿಕತೆಯ ಐಲು ಎಂದು ಸುಲಭವಾಗಿ ತಳ್ಳಿಹಾಕಬಹುದಾಗಿದೆ; ಹಾಗೆ ಆಗುತ್ತಿದೆ ಕೂಡ. ಆದರೆ ಮನುಷ್ಯನ ಬದುಕಿನಲ್ಲಿ ಆಧ್ಯಾತ್ಮಿಕ-ಲೌಕಿಕಗಳೆಂಬ ಪ್ರತ್ಯೇಕ ಕೋಣೆಗಳಿಲ್ಲ. ಅವನ್ನು ಮಾಡಿಕೊಂಡಿರುವವರು ನಾವು, ನಮ್ಮ ಬೌದ್ಧಿಕ ವಿಶ್ಲೇಷಣೆಗಳಿಗಾಗಿ. ಅದಕ್ಕೆ ಸಾಬೀತೆಂಬಂತೆ, ಗಾಂಧಿ ತಮ್ಮ ಈ ಸರಳ ಬದುಕಿನ ಅನಿವಾರ್ಯತೆ ಮತ್ತು ವ್ಯಾವಹಾರಿಕತೆಗಳನ್ನು ಜಗತ್ತು ಮನದಟ್ಟುಮಾಡಿಕೊಳ್ಳಲು ಅನುವಾಗುವಂತೆ ತಮ್ಮ ಕಾಲಕ್ಕೆ ಅಪೂರ್ವವೆನಿಸುವ ಒಳನೋಟವುಳ್ಳ ಸತ್ಯವೊಂದನ್ನು ಹೇಳಿದರು: 'ಈ ಭೂಮಿ ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲುದೇ ಹೊರತು ಎಲ್ಲರ ಆಸೆಗಳನ್ನಲ್ಲ.' ಈ ಮಾತನ್ನು ಗಾಂಧಿ ಆಡಿದ್ದು ಪರಿಸರ-ಜೀವ ಪರಿಸರ, ಪರಿಸರ ಮಾಲಿನ್ಯ, ಪರಿಸರವಾದ, ಹವಾಮಾನ ವೈಪರೀತ್ಯ, ಬಿಕ್ಕಟ್ಟು ಇತ್ಯಾದಿ ವಿಚಾರಗಳು ಅಥವಾ ಈ ಪದಪುಂಜಗಳು ಇನ್ನೂ ಚಲಾವಣೆಗೆ ಬರದಿದ್ದ ಕಾಲದಲ್ಲಿ, ಸುಮಾರು ಒಂದು ಶತಮಾನದ ಹಿಂದೆ ಎಂಬುದನ್ನು ಗಮನಿಸಿದರೆ ಗಾಂಧಿ ಚಿಂತನೆಯ ಸಮಗ್ರತೆಯೂ, ಅಧ್ಯಾತ್ಮ ಎಂದರೆ ಪ್ರಜ್ಞೆಯ ಸಮಗ್ರತೆಯೇ ಎಂಬುದೂ ಗೊತ್ತಾಗುತ್ತದೆ.

ಮನುಷ್ಯನ ಅಗತ್ಯ ಮತ್ತು ಆಸೆಗಳ ಬಗ್ಗೆ ಹೊಸ ಜಿಜ್ಞಾಸೆಯನ್ನು ಹುಟ್ಟುಹಾಕಿದ ಈ ಮಿತಿಗಳುಳ್ಳ ಸರಳ ಬದುಕಿನ ವಿಚಾರವೇ ಗಾಂಧಿ ಬದುಕಿನ ಮತ್ತು ತತ್ವಮೀಮಾಂಸೆಯ ಕೇಂದ್ರವೆಂದು ನಾನು ಭಾವಿಸಿರುವೆ. ಈ ಕೇಂದ್ರ ವಸ್ತುವಿನೊಡನೆಯ ಕ್ರಿಯಾಶೀಲ ಸಂಬಂಧದ ಜೀವಂತಿಕೆ ಇಲ್ಲದೆ ಗಾಂಧಿವಾದದ ಹೆಸರಿನಲ್ಲಿ ಗಾಂಧಿ ಭವನವೂ ಸೇರಿದಂತೆ ಬಹುಪಾಲು ಗಾಂಧಿ ಸಂಸ್ಥೆಗಳು ಬೋಧಿಸುತ್ತಿರುವ ಬೋಳು ಬೋಳಾದ ಸತ್ಯ, ಅಹಿಂಸೆ, ಕೋಮು ಸೌಹಾರ್ದ, ಖಾದಿ, ಗ್ರಾಮೋದ್ಯೋಗ ಇತ್ಯಾದಿಗಳು ಗಾಂಧಿ ಪ್ರತಿಮೆಯ ಪೂಜಾ ಮಂತ್ರಗಳಂತೆ ನನಗೆ ಕೇಳಿಸುತ್ತವೆ. ನನ್ನಂಥವರಿಗೆ ಇವೆಲ್ಲ ಹಾಗೆ ಕೇಳಿಸಲು ಕಾರಣಗಳು ಮುಖ್ಯವಾಗಿ ಎರಡು: ಒಂದು, ಗಾಂಧಿ ನಮ್ಮನ್ನಗಲಿಹೋದ ನಂತರದ ದಿನಗಳಲ್ಲಿ ಗಾಂಧಿ ಬದುಕಿನ ದರ್ಶನಕ್ಕೆ ಮುಖ ತಿರುಗಿಸಿದ ನಮ್ಮ ರಾಷ್ಟ್ರ ಪ್ರಭುತ್ವಗಳ ಆಡಳಿತ ಶೈಲಿ, ನೀತಿ, ಕಾರ್ಯಕ್ರಮಗಳಿಗೆ ಪರಿಣಾಮಕಾರಿಯಾಗಿ

ಪ್ರತಿಕ್ರಿಯಿಸುವ ಇಚ್ಛಾಶಕ್ತಿಯನ್ನು ಗಾಂಧಿ ಭವನದ ಆಡಳಿತ ಪ್ರಕಟಿಸದಿರುವುದು. ಎರಡು, ಪ್ರಭುತ್ವವು ಗಾಂಧಿ ನೇತೃತ್ವದ ರಾಷ್ಟ್ರೀಯ ಹೋರಾಟ ರೂಪಿಸಿಕೊಟ್ಟ ರಾಷ್ಟ್ರ ನಿರ್ಮಾಣದ ಹಾದಿ ಬಿಟ್ಟು ಹೊರಟಿದೆ ಎಂದು ಅದನ್ನು ಎಚ್ಚರಿಸುವ ಕೆಚ್ಚನ್ನು ಅದು ತೋರದಿರುವುದು.

ನಿಜ, ಒಮ್ಮೆ ಎಪ್ಪತ್ತರ ದಶಕದಲ್ಲಿ ಜಯಪ್ರಕಾಶ ನಾರಾಯಣರ ಪ್ರಬುದ್ಧ ನಾಯಕತ್ವದಲ್ಲಿ ಗಾಂಧಿ ಸಂಸ್ಥೆಗಳು ಪ್ರಭುತ್ವದ ವಿರುದ್ಧ ಸಿಡಿದೆದ್ದವು. ಆದರೆ ಆ ಸಿಟ್ಟು ಸುಸ್ಥಿರವಾಗಿ ಸಾಕಾರಗೊಳ್ಳದೆ, ಪ್ರತಿಭಟನೆ ಸುಸ್ತಾಗಿ ಗಾಂಧಿ ಭವನವೂ ಸೇರಿದಂತೆ ಗಾಂಧಿ ಸಂಸ್ಥೆಗಳು ಮತ್ತೆ ಗಾಂಧಿವಾದದ ಗಾಣದೆತ್ತುಗಳಂತೆ ಅದೇ ಸುಲಭ ಉಪದೇಶಗಳ ಸವಕಲು ಹಾದಿಯನ್ನೇ ಹಿಡಿದಿವೆ. ವಿಶೇಷವಾಗಿ, ಕಳೆದ ತೊಂಬತ್ತರ ದಶಕದಲ್ಲಿ ಆರ್ಥಿಕ ಸುಧಾರಣೆಗಳ ಹೆಸರಿನಲ್ಲಿ ಆರಂಭವಾದ ಜಾಗತೀಕರಣ ಮತ್ತು ಅದರ ಭಾಗವಾಗಿ ಅನುಸರಿಸಲಾಗುತ್ತಿರುವ 'ಅಭಿವೃದ್ಧಿ'ಯ ಹೊಸ ಪರಿಕಲ್ಪನೆ ಗಾಂಧಿ ಚಿಂತನೆಗೆ ತದ್ವಿರುದ್ಧವಾಗಿದೆ ಎಂಬ ಪರಿವೆಯೇ ಈ ಸಂಸ್ಥೆಗಳಿಗೆ ಇನ್ನೂ ಉಂಟಾದಂತಿಲ್ಲ. ಯಾವ ವಸಾಹತುಶಾಹಿ ವಿರುದ್ಧ ಗಾಂಧಿ ಹೋರಾಡಿ ಅದು ಎಂದೂ ಮತ್ತೆ ಭಾರತಕ್ಕೆ ಕಾಲಿಡದಂತಹ ಚಿಂತನಾಕ್ರಮವೊಂದನ್ನು ರೂಢಿಸಿಕೊಟ್ಟರೋ ಆ ವಸಾಹತುಶಾಹಿ ಇಂದು ಈ ಹೊಸ ಅಭಿವೃದ್ಧಿ ಪರಿಕಲ್ಪನೆಯ ಮೂಲಕ ನವವಸಾಹತುಶಾಹಿಯಾಗಿ ನಮ್ಮ ಒಳ-ಹೊರಗೆರಡನ್ನೂ ಪ್ರವೇಶಿಸಿಬಿಟ್ಟಿದೆ. ಸಮಾಜವನ್ನು ಹಲವು ನೆಲೆಗಳಲ್ಲಿ ವಿಘಟಿಸಿಬಿಟ್ಟಿದೆ. ನಮ್ಮ ಮೂಲ ಸ್ವಭಾವ, ಪ್ರತಿಭೆ, ಗುರುತು ಮತ್ತು ಆವರಣಗಳೇ ನಮಗೆ ಅನ್ಯವಾದಂತಾಗಿವೆ. ಇದರ ಪರಿಣಾಮವಾಗಿ ಹಲವು ಹೊಸ ಬಗೆಯ ಹಿಂಸಾಚಾರಗಳು, ಅಶ್ಲೀಲತೆಗಳು ನಮ್ಮ ಒಳಗನ್ನೂ, ಹೊರಗನ್ನೂ ಪ್ರವೇಶಿಸಿ ನಮ್ಮನ್ನು ಆಕ್ರಾಂತರನ್ನಾಗಿಸಿವೆ. ಇವನ್ನೆಲ್ಲ ತಹಬಂದಿಗೆ ತರಲು ಪ್ರಭುತ್ವಗಳು ವಿಕ್ಷಿಪ್ತ ಮತೀಯತೆ, ಜಾತೀಯತೆ, ರಾಷ್ಟ್ರೀಯತೆಗಳಂತಹ ಸಂಕುಚಿತ ವಾದಗಳನ್ನು ಚಲಾವಣೆಗೆ ತರಲು ಹೊರಟಿವೆ. ಗಾಂಧಿ ಭವನ ಇದರ ಪ್ರತಿಹಂತದಲ್ಲೂ ಪ್ರತಿರೋಧದ ವೇದಿಕೆಯಾಗಬೇಕಿತ್ತು. ಕನಿಷ್ಠ ತಾತ್ವಿಕ ಪ್ರತಿರೋಧದ ಮುಖವಾಣಿಯಾಗಬೇಕಿತ್ತು. ಆದರೆ ಆಯಿತೇ? ನಮ್ಮ ಪ್ರಭುತ್ವಗಳು ಒಂದು ಕಡೆ ಗಾಂಧಿ ಯಾವುದನ್ನು ಅನಾಹುತಕಾರಿ, ಜೀವ ವಿರೋಧಿ, ಅನೈತಿಕ, ಅನಾಧ್ಯಾತ್ಮಿಕ, ಅನ್ಯ ಎಂದು ಗುರುತಿಸಿದ್ದರೋ ಅಂತಹ ಮೌಲ್ಯಗಳನ್ನು ಪ್ರಚೋದಿಸುವ ಬದುಕಿನ ಮಾದರಿಯನ್ನು ಸಮರೋಪಾದಿಯಲ್ಲಿ ಕಟ್ಟುತ್ತಿರುವ ಹೊತ್ತಿನಲ್ಲೇ ಅದಕ್ಕೆ ಸಂಬಂಧವೇ ಇರದಂತೆ ಗಾಂಧಿ ಭವನ, ಗಾಂಧಿ ಉಪದೇಶಗಳ ಯಜ್ಞಗಳನ್ನು ಸಕಲ (ಕೆಲವೊಮ್ಮೆ ಸಂಭ್ರಮದ ಸರ್ಕಾರಿ) ಔಪಚಾರಿಕತೆಗಳೊಂದಿಗೆ ನಡೆಸುತ್ತಾ ಹೋಗಿದೆ! ಗಾಂಧಿವಾದಕ್ಕಾಗಿ ಗಾಂಧಿವಾದ ಎಂಬಂತೆ ತೋರುವ ಈ ವರ್ತನೆ, ನಡೆ-ನುಡಿಗಳ ಅಭಿನ್ನತೆ ಮತ್ತು ಸಾವಯತೆಗಳನ್ನೇ ಜೀವವಾಗಿಸಿಕೊಂಡಿರುವ ಗಾಂಧಿ ವ್ಯಕ್ತಿತ್ವ ಮತ್ತು ಚಿಂತನೆಗೆ ಮಾಡುವ ಅನ್ಯಾಯವೇ ಆಗಿದೆ. ಗಾಂಧಿ ಭವನದ ಚಾಲಕ ಶಕ್ತಿಯಾದ ಗಾಂಧಿ ಸ್ಮಾರಕ ನಿಧಿಗೆ ಪ್ರಭುತ್ವಗಳ ಅನುದಾನಗಳ ಕೊಡುಗೆ ಇದೆ ಎಂಬುದು ಗಾಂಧಿ

ಭವನದ ಕಾರ್ಯ ಸ್ವಾಯತ್ತತೆಗೆ ಅಡ್ಡಿಯಾಗಬಾರದು. ಏಕೆಂದರೆ ಆ ಅನುದಾನಗಳ ಹಣ ಜನರದ್ದು; ಗಾಂಧಿ ಬಗೆಗೆ ಅಭಿಮಾನವಿರಿಸಿಕೊಂಡ ರಾಷ್ಟ್ರ, ಗಾಂಧಿ ಚೇತನದ ಕ್ರಿಯಾಶೀಲತೆಗಾಗಿ ನೀಡಲೊಪ್ಪಿರುವ ಹಣವದು. ಅದು ಆ ಚೇತನದ ಕ್ರಿಯಾಶೀಲತೆಯ ಅಭಿವ್ಯಕ್ತಿ ರೂಪದ ಚಟುವಟಿಕೆಗಳಿಗಾಗಿ ಖರ್ಚಾಗಬೇಕು. ಹುರುಡು ಅಭಿಮಾನದ ಪ್ರದರ್ಶನಗಳಿಗಲ್ಲ. ಗಾಂಧಿ ಭವನ ಎಂದರೆ ಗಾಂಧಿ ಮಠ ಎಂದಾಗಬಾರದಲ್ಲವೆ?

ಗಾಂಧಿ ಭವನದ ಚಟುವಟಿಕೆಗಳಲ್ಲಿ ಪ್ರಭುತ್ವದ ಪಾತ್ರ ಕನಿಷ್ಠತಮವಾಗಿರಬೇಕು; ಅನೌಪಚಾರಿಕವಾಗಿರಬೇಕು. ಹಾಗಾದಾಗ ಗಾಂಧಿ ಚಿಂತನೆಯ ಹಿನ್ನೆಲೆಯಲ್ಲಿ ತನಗೆ ಜನವಿರೋಧಿಯಾಗಿ ಕಂಡ ಪ್ರಭುತ್ವಗಳ ನೀತಿ–ಕಾರ್ಯಕ್ರಮಗಳ ಬಗ್ಗೆ ಟೀಕೆ ಮಾಡಬಲ್ಲ, ವಿರೋಧ ವ್ಯಕ್ತಪಡಿಸುವಂತೆ ಪ್ರೇರೇಪಿಸಬಲ್ಲ ಆತ್ಮಸಾಕ್ಷಿ ಎಚ್ಚರಗೊಳ್ಳುತ್ತದೆ. ಪ್ರತಿರೋಧದ ಗಾಂಧಿ ಮಾರ್ಗಗಳು ತಂತಾನೇ ಕಣ್ಮುಂದೆ ತೆರೆದುಕೊಳ್ಳುತ್ತವೆ. ಇದಕ್ಕಾಗಿ ಗಾಂಧಿ ಭವನ ಸಾರ್ವಜನಿಕ ವಿಶ್ವಾಸಾರ್ಹತೆಯುಳ್ಳ ಚಿಂತಕರ ಚಾವಡಿಯೊಂದನ್ನು ಸಜ್ಜುಗೊಳಿಸಿಕೊಳ್ಳಬೇಕು ಮತ್ತು ಇದಕ್ಕೆ ಸದಾ ಹೊಸ ನೀರು ಸೇರ್ಪಡೆಯಾಗುತ್ತಿರುವಂತೆ ನೋಡಿಕೊಳ್ಳಬೇಕು. ಈ ಚಾವಡಿ ಒಂದು ಅನೌಪಚಾರಿಕ ಸಂಶೋಧನಾ ತಂಡವಾಗಿಯೂ ಕೆಲಸ ಮಾಡುತ್ತಾ, ಇಂದಿನ ಕಾಲಕ್ಕೆ ಗಾಂಧಿಯನ್ನು ಪುನರನ್ವೇಷಿಸುವ ಪ್ರಯತ್ನವನ್ನೂ ಮಾಡಬೇಕು. ಅಂದರೆ, ಇಂದು ಗಾಂಧಿ ಬದುಕಿದ್ದರೆ ಪ್ರಚಲಿತ ಸವಾಲು, ಸಮಸ್ಯೆ, ಇಕ್ಕಟ್ಟು–ಬಿಕ್ಕಟ್ಟುಗಳ ಬಗ್ಗೆ ಏನು ಯೋಚಿಸುತ್ತಿದ್ದರು, ಏನು ನಿಲುವು ತೆಗೆದುಕೊಳ್ಳುತ್ತಿದ್ದರು ಮತ್ತು ಯಾವ ಕಾರ್ಯಕ್ರಮ ಹಾಕಿಕೊಳ್ಳುತ್ತಿದ್ದರು ಎಂಬುದನ್ನು ಸಾಧಾರವಾಗಿ ಊಹಿಸುವ, ಕಲ್ಪಿಸಿಕೊಂಡು ಆ ಸಂಬಂಧದ ಕ್ರಿಯಾಶೀಲತೆಗಳ ಸಾಧ್ಯತೆಗಳನ್ನು ಮತ್ತು ರೂಪಗಳನ್ನು ಮಂಡಿಸುವ ಕೆಲಸವದು. ಇದರ ಆಧಾರದ ಮೇಲೆ ಗಾಂಧಿ ಭವನ ತನ್ನ ಚಟುವಟಿಕೆಗಳನ್ನು ರೂಪಿಸಿಕೊಳ್ಳಬೇಕು ಮತ್ತು ನಿಯಮಿತವಾಗಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಇವುಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತಹ ಒಂದು ನಿಶ್ಚಿತ ಸಮೂಹವನ್ನು ಸಂಘಟಿಸಿ ಅದು ಬೆಳೆಯುತ್ತಾ ಹೋಗುವಂತೆ ನೋಡಿಕೊಳ್ಳಬೇಕು. ಗಾಂಧಿ ಅಥವಾ ಗಾಂಧಿವಾದಿ ಪುಸ್ತಕಗಳನ್ನ ದಂಡಿ ದಂಡಿಯಾಗಿ ಪ್ರಕಟಿಸಿ ಅವನ್ನು ಸುಲಭ ದರಗಳಲ್ಲಿ ಮಾರಿದರೆ ಅಥವಾ ಉಚಿತವಾಗಿ ಹಂಚಿದರೆ ಹೆಚ್ಚಿನ ಪ್ರಯೋಜನ ಆಗಲಾರದೇನೋ. ಜನ ಅವನ್ನು ಓದುವ ಮತ್ತು ಅದರಿಂದ ಸ್ಫೂರ್ತಿಗೊಳ್ಳುವಂತಹ ಒಂದು ವಾತಾವರಣವಿಲ್ಲದಿದ್ದರೆ ಯಾರು ಅವನ್ನು ಗಂಭೀರವಾಗಿ ಓದುತ್ತಾರೆ? ಅಥವಾ ಓದಿದರೂ ಅದು ಒಣ ಓದು ಮಾತ್ರವಾಗಿ ಉಳಿಯುತ್ತದೆ.

ಇಲ್ಲಿಯೇ ಒಂದು ಮಾತನ್ನು ಹೇಳಬೇಕು. ಸ್ವಾತಂತ್ರ್ಯ ಘೋಷಣೆ ಗಾಂಧಿಯ ಇಷ್ಟದಂತೆ ಆಗಲಿಲ್ಲ. ಆ ಹೊತ್ತಿಗೆ ಅವರಿಗೆ ತಾನು ಸೋತೆನೇನೋ ಎಂಬ ಅನುಮಾನವೂ ಆರಂಭವಾಗಿತ್ತೆನಿಸುತ್ತದೆ. ರಾಷ್ಟ್ರ ವಿಭಜನೆಯ ಸಂದರ್ಭದ ಕೋಮು ದಂಗೆ ಮತ್ತು ಅದನ್ನು ನಿರ್ವಹಿಸಲಾಗದ ಹೊಸ ದೇಶಿ ಸರ್ಕಾರ ಓಡಿಯತೊಡಗಿದ್ದ ಹಾದಿ ಅವರನ್ನು ಕಂಗೆಡಿಸಿದ್ದವು. ಅವರ ನೌಖಾಲಿ ಯಾತ್ರೆ ಅವರ ಒಂದು ಆತ್ಮಾವಲೋಕನದ ಮಹಾಯಾತ್ರೆಯೇ ಆಗಿತ್ತು. ಅದರ ಒಳ ಮತ್ತು

ಹೊರ ವಿವರಗಳನ್ನು ಓದಿದ ಯಾರಿಗಾದರೂ ಹೀಗೆ ಅನ್ನಿಸದಿರದು. ಈ ಯಾತ್ರೆಯ ನಂತರದಲ್ಲೇ ಅವರು ಭಾರತದ ಉಪಖಂಡಕ್ಕಾಗಿ (ಅವರು ರಾಷ್ಟ್ರ ವಿಭಜನೆಯನ್ನು ಗಾಯಗೊಂಡ ಮನಸ್ಸಿನಿಂದಷ್ಟೇ ಒಪ್ಪಿದ್ದರು ಎಂಬುದನ್ನೂ ನಾವಿಲ್ಲಿ ಗಮನಿಸಬೇಕು) ಹೊಸ ಯೋಜನೆಯೊಂದರ ನೀಲನಕ್ಷೆಯನ್ನು ಸಿದ್ಧ ಮಾಡಿಟ್ಟುಕೊಂಡಿದ್ದರು.

ತಮ್ಮ 'ಹಿಂದ್ ಸ್ವರಾಜ್'ನ ತಾತ್ವಿಕತೆಯನ್ನೂ, ಕಾಂಗ್ರೆಸ್ ಜನಾಂದೋಲನ ಒಂದು ರಾಜಕೀಯ ಪಕ್ಷವಾಗಿ ಪರಿವರ್ತಿತವಾಗದೆ 'ಲೋಕ ಸೇವಕ ಸಂಘ'ವೆಂಬ ರಚನಾತ್ಮಕ ಕಾರ್ಯಕ್ರಮಗಳ ಸ್ವಯಂಸೇವಾ ಸಂಘಟನೆಯಾಗಿ (ಬಹುಶಃ ಆ ಹೊತ್ತಿಗಾಗಲೇ ಪ್ರಭಾವಶಾಲಿಯಾಗಿ ಬೆಳೆಯುತ್ತಿದ್ದ ರಾಷ್ಟ್ರೀಯ ಸ್ವಯಂ ಸೇವಕ ಸಂಘಕ್ಕೆ ಪರ್ಯಾಯವಾಗಿ?) ಪುನರ್ರೂಪಗೊಳ್ಳಬೇಕೆಂಬ ತಮ್ಮ ಸಲಹೆಯನ್ನು ಒಪ್ಪದ ಕಾಂಗ್ರೆಸ್ ನಾಯಕತ್ವದಿಂದ ಗಾಂಧಿ ಭ್ರಮನಿರಸನಗೊಂಡಂತಿದ್ದರು. ಅದರ ಪರಿಣಾಮವಾಗಿ ಅವರು ತಮ್ಮ ಯುವ ಶಿಷ್ಯ ಸಮೂಹದೊಡನೆ (ಅವರಲ್ಲಿ ಹೆಚ್ಚಿನವರು ಸಮಾಜವಾದಿಗಳಾಗಿದ್ದವರು) ತಮ್ಮ ಈ ಹೊಸ ಯೋಜನೆಯ ಬಗ್ಗೆ ಸಮಾಲೋಚನೆಗಳನ್ನು ಆರಂಭಿಸಿದ್ದರು. (ತಮ್ಮ ಕೊಲೆಯ ಎರಡು ದಿನಗಳ ಮುನ್ನ ಗಾಂಧಿ ತಮ್ಮ ನೌಖಾಲಿ ಯಾತ್ರೆಯ ಸಹಚರರೂ, ಸಮಾಜವಾದಿ ಶಿಷ್ಯರೂ ಆಗಿದ್ದ ರಾಮಮನೋಹರ ಲೋಹಿಯಾ ಅವರೊಂದಿಗೆ ಸುದೀರ್ಘ ಮಾತುಕತೆ ನಡೆಸಿ, ಈ ಮಾತುಕತೆಗಳನ್ನು ಮುಂದುವರೆಸಲು ಎರಡು-ಮೂರು ದಿನಗಳ ನಂತರ ಬರಲು ಆಹ್ವಾನಿಸಿದ್ದರು ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು.) ಗಾಂಧಿ ತಮ್ಮ ಜೀವಿತದ ಅಂತಿಮ ಘಟ್ಟದಲ್ಲಿ ತಮಗೆ ನೂರಿಪ್ಪತ್ತೈದು ವರ್ಷ ಬದುಕುವ ಆಸೆ ಇದೆಯೆಂದು ಪದೇ ಪದೇ ಹೇಳುತ್ತಿದ್ದುದರ ಹಿಂದೆ (ಸ್ವಾತಂತ್ರ್ಯ ಘೋಷಣೆಯ ಸಂದರ್ಭ ಮತ್ತು ಆನಂತರದ ಹಲವು ಬೆಳವಣಿಗೆಗಳು ಅವರಲ್ಲಿ ತ್ವರಿತವಾಗಿ ಸಾವನ್ನು ಆಹ್ವಾನಿಸುವ ಸಂಚಾರಿ ಭಾವವನ್ನು ಹುಟ್ಟಿಸಿತ್ತಾದರೂ) ಈ ಹೊಸ ಯೋಜನೆಯ ಅನುಷ್ಠಾನದ ಕನಸೂ ಇತ್ತೆಂದು ಅನಿಸುತ್ತದೆ. ಯೋಜನೆಯ ಆರಂಭಿಕ ಹೆಜ್ಜೆಯೇ ಪಾಕಿಸ್ತಾನದ ಪ್ರವಾಸವಾಗಿತ್ತು ಎಂಬುದು ಈ ಯೋಜನೆಯ ಬಗ್ಗೆ ಕುತೂಹಲ ಹುಟ್ಟಿಸುತ್ತದೆ. ಹಾಗಾಗಿ ಗಾಂಧಿ ತಮ್ಮ ವಾರಸುದಾರರಿಗೆ ಬಿಟ್ಟುಹೋಗಿರುವ ನಿಜವಾದ ಮುಖ್ಯ ಜವಾಬ್ದಾರಿ ಎಂದರೆ ಇನ್ನುಳಿದಿದ್ದ ತಮ್ಮ ಆಯುಷ್ಯದಲ್ಲಿ ಗಾಂಧಿ ಏನನ್ನು ಮಾಡಬಯಸಿದ್ದರು ಎಂಬುದನ್ನು ಸಂಶೋಧಿಸಿ ಆ ಕಾರ್ಯಗಳನ್ನು ಕೈಗೊಳ್ಳುವುದೇ ಆಗಿದೆ. ಗಾಂಧಿ ಭವನದ ಚಿಂತಕರ ಚಾವಡಿ ಇದನ್ನು ತನ್ನ ಕೆಲಸಗಳ ದಿಕ್ಸೂಚಿಯಾಗಿ ಪರಿಗಣಿಸಬೇಕಿದೆ.

('ಗಾಂಧಿ ಮಾರ್ಗಿ: ಹೊ.ಶ್ರೀ' : ಡಾ. ಹೊ. ಶ್ರೀನಿವಾಸಯ್ಯ ಸ್ಮರಣ ಗ್ರಂಥ: ೨೦೧೭)

ಹದಿ ಹರೆಯದ ಉತ್ಸಾಹದ ಹಿರಿಯ ಜೀವ ಸುರೇಂದ್ರ ಕೌಲಗಿ

ಸುರೇಂದ್ರ ಕೌಲಗಿಯವರನ್ನು ನಾನು ಕಂಡು ಮಾತಾಡಿದ್ದು ಹೆಚ್ಚೆಂದರೆ ನಾಲ್ಕು ಬಾರಿ. ಇಪ್ಪತ್ತು ವರ್ಷಗಳ ಹಿಂದೊಮ್ಮೆ ನನ್ನ ಪತ್ನಿ ಸವಿತಾ ಮತ್ತು ಕವಿ ಮಿತ್ರ ಎಸ್. ಮಂಜುನಾಥರೊಂದಿಗೆ ಮೂರು ದಿನಗಳ ಕಾಲ ಮೇಲುಕೋಟೆ ಪ್ರವಾಸಕ್ಕೆ ಹೋಗಿದ್ದಾಗ ಮೊದಲ ಬಾರಿಗೆ ಅವರನ್ನು ನೋಡಿದ್ದು. ಆಗ ಮೇಲುಕೋಟೆ ಬಹು ಸುಂದರವಾದ ದೊಡ್ಡ ಹಳ್ಳಿಯಾಗಿತ್ತು. ಗುಡ್ಡದ ಮೇಲಿನ ಆ ಹಳ್ಳಿಯಲ್ಲಿನ ಪ್ರಶಾಂತ ಮುಗ್ಧತೆ, ಮನೋಹರವಾದ ಕೊಳಗಳು, ಕಣಿವೆಯೊಂದರಲ್ಲಿ ಜುಳುಜುಳನೆ ಹರಿದಿದ್ದ ಒಂದು ಸಣ್ಣ ತೊರೆ, ಸಣ್ಣ ಮಲೆಯೊಂದರ ಮೇಲಿನ ಮತ್ತು ಊರೊಳಗಿನ ಜನರ ಸದ್ದು ಗದ್ದಲವಿಲ್ಲದ ಎರಡು ಪುರಾತನ ದೇವಸ್ಥಾನಗಳು, ಊರ ಹೊರಗಿನ ವಿಶಾಲ ಬಂಡೆಗಲ್ಲುಗಳೊಂದರ ತುದಿಯಲ್ಲಿ ಕೂತರೆ ಕೆಳಗೆ ದೂರದಲ್ಲಿ ಕಾಣುವ ಬೆಣ್ಣೆಯ ಮಡಕೆಯನ್ನೋ, ತರಕಾರಿಗಳ ಮಂಕರಿಯನ್ನೋ ಅಥವಾ ಎತ್ತು-ನೇಗಿಲುಗಳೊಂದಿಗೆ ನಡೆದಿದ್ದ ರೈತಜನರ ಚಿತ್ರ, ಊರೊಳಗಿನ ಉಪಹಾರ ಮಂದಿರವೊಂದರಲ್ಲಿ ನಾವು ಬೇಸರವಿಲ್ಲದೆ ದಿನವೂ ತಿನ್ನಬಹುದಾದಷ್ಟು ರುಚಿಯಾಗಿದ್ದ ಪುಳಿಯೋಗರೆ, ಇವುಗಳೊಂದಿಗೇ ಮೂಡಿ ಬರುವುದು ಸುರೇಂದ್ರ ಕೌಲಗಿಯವರು ತಮ್ಮ ಕುಟುಂಬದೊಂದಿಗೆ ವಾಸಿಸುತ್ತಿದ್ದ ಜನಪದ ನಿಲಯ.

ಸುರೇಂದ್ರ ಕೌಲಗಿಯವರ ಇಬ್ಬರು ಮಕ್ಕಳಾದ ಸಂತೋಷ್ ಮತ್ತು ಸುಘೋಷ್ ನನ್ನ ಗೆಳೆಯ ಮಂಜುನಾಥರ ಗೆಳೆಯರಾಗಿದ್ದುದರಿಂದಷ್ಟೇ ನಾನು ಅವರ ಸಲಹೆಯ ಮೇರೆಗೆ ನನ್ನ ಪತ್ನಿಯೊಂದಿಗೆ ಜನಪದ ನಿಲಯಕ್ಕೆ ಹೋಗಿದ್ದೆ. ಅದು ಆಗ ನಾನು ನೋಡಿದಾಗ ವಿವಿಧ ತೆರನ ಜನರ ಚಲನವಲನ-ಮಾತುಕತೆಗಳಿಂದ ತುಂಬಿಕೊಂಡಿತ್ತು. ಒಂದೆರಡು ವಿದೇಶಿ ಮುಖಗಳೂ ಕಂಡಂತಿದ್ದ ಆ ಸಂಜೆಯ ಜನಸಮೂಹದ ಮಧ್ಯೆಯೂ ಮನೆಯ ಯಜಮಾನತಿ ಗಿರಿಜಮ್ಮನವರು ಮಂಜುನಾಥರನ್ನು ಗುರುತಿಸಿ ತಾವು ತಯಾರಿಸಿದ್ದ ಬಹು ರುಚಿಕಟ್ಟಾದ ಚಿತ್ರಾನ್ನದ ಒಂದೊಂದು ದೊಡ್ಡ

ಉಂಡೆಯನ್ನು ನಮಗೆ ನೀಡಿದ್ದು ಮತ್ತು ನಾವು ಅದನ್ನು ಇನ್ನೂ ಮುಂಚೆ ಬಂದಿದ್ದರೆ ಮನದುಂಬಿ ಇನ್ನಷ್ಟು ಸವಿಯಬಹುದಿತ್ತೇನೋ ಎಂಬ ಕಳೆದುಹೋದ ಅವಕಾಶಕ್ಕಾಗಿ ನಮ್ಮನ್ನು ನಾವೇ ಶಪಿಸಿಕೊಂಡು ತಿಂದಿದ್ದು ಮಾತ್ರ ಈಗ ನೆನಪಿದೆ! ಆ ಜನ ಮತ್ತು ರುಚಿ ಸಂಭ್ರಮಗಳ ಮಧ್ಯೆ ಸುರೇಂದ್ರ ಕೌಲಗಿಯವರ ಮುಖ ಮತ್ತು ಮಾತು ಎಲ್ಲೋ ನುಸುಳಿ ಬಂದುಹೋದದ್ದಷ್ಟೇ ನೆನಪು ನನಗೆ! ಆಗ ಸುರೇಂದ್ರ ಕೌಲಗಿಯವರು ನಮ್ಮ ನಡುವಿದ್ದ ಹಲವು ಗಾಂಧಿವಾದಿಗಳಲ್ಲಿ ಒಬ್ಬರಾಗಿದ್ದರಷ್ಟೆ. ಅವರು ಗಾಂಧಿ ಚಿಂತನೆಯನ್ನಾಧರಿಸಿದ ಒಂದು ಸಂಸ್ಥೆಯನ್ನು ನಡೆಸುತ್ತಾರೆ ಎಂಬ ಸ್ಥೂಲ ಮಾಹಿತಿಯ ಹೊರತಾಗಿ ಅವರ ಬಗ್ಗೆ ನನಗೆ ಬಹಳ ಹೆಚ್ಚೇನೂ ಗೊತ್ತಿರಲಿಲ್ಲ.

ಆದರೆ ಅದಾದ ಆರೇಳು ವರ್ಷಗಳ ನಂತರ ೨೦೦೨ರಲ್ಲಿ ಮೈಸೂರಿನಲ್ಲಿ ಡಾ. ರಾಮಮನೋಹರ ಲೋಹಿಯಾ ಪ್ರತಿಷ್ಠಾನವು ಜಯಪ್ರಕಾಶ ನಾರಾಯಣರ ಜನ್ಮಶತಮಾನೋತ್ಸವದ ಅಂಗವಾಗಿ ಅವರನ್ನು ಕುರಿತು ನಾನು ಬರೆದ 'ಒಂದು ಅಪೂರ್ಣ ಕ್ರಾಂತಿಯ ಕಥೆ' ಪುಸ್ತಕದ ಬಿಡುಗಡೆ ಸಮಾರಂಭದ ಸಂದರ್ಭದಲ್ಲಿ ಸುರೇಂದ್ರ ಕೌಲಗಿಯವರನ್ನು ಆಹ್ವಾನಿಸಿದಾಗಲೇ ಅವರನ್ನು ನಾನು ನಿಜವಾಗಿ ಪರಿಚಯ ಮಾಡಿಕೊಳ್ಳಲು ಸಾಧ್ಯವಾಗಿದ್ದು. ಅವರು ಬಹುಕಾಲ ಜೆಪಿಯವರ ಆಪ್ತ ಕಾರ್ಯದರ್ಶಿಯಾಗಿದ್ದರೆಂದು ಗೊತ್ತಾಗಿದ್ದೂ ಆಗಲೇ. ಆ ಸಂದರ್ಭದಲ್ಲಿ ಅವರೊಂದಿಗೆ ಮಾತುಕತೆಯಾಡುತ್ತಿರುವಾಗಲೇ ಸರ್ವೋದಯ ಚಳುವಳಿಯೊಡನೆಯ ಅವರ ಆತ್ಮೀಯ ಸಂಬಂಧ ಮತ್ತು ಅವರ ಜನಪದ ಸೇವಾ ಟ್ರಸ್ಟ್‌ನ ಬಹುಮುಖ ಚಟುವಟಿಕೆಗಳ ಸಕಲ ಪರಿಚಯವೂ ಆಗಿದ್ದು. ಆ ಮೊದಲ ಮಾತುಕತೆಯಲ್ಲೇ ಕೌಲಗಿಯವರು ಹಿರಿತನದ ಯಾವ ಭಾರಗಳೂ ಇಲ್ಲದ ತಮ್ಮ ನಗುಮೊಗದ ಆತ್ಮೀಯತೆಯಿಂದ ನನ್ನನ್ನು ಸೆಳೆದರು. ಅವರು ಜೆಪಿಯವರ ಮೇಲಿನ ಅಭಿಮಾನದಿಂದ ಜೆಪಿಯವರು ಬಹು ಪ್ರಾಮಾಣಿಕವಾಗಿ ತಮ್ಮ ವೈಯಕ್ತಿಕ ಬದುಕಿನ 'ವಿಫಲತೆ'ಗಳ ಬಗ್ಗೆ ಹೇಳಿಕೊಂಡಿದ್ದ ಸಂದರ್ಶನವೊಂದನ್ನು ನನ್ನ ಪುಸ್ತಕದಲ್ಲಿ ಸೇರಿಸಿದ್ದಕ್ಕಾಗಿ ಆಕ್ಷೇಪಿಸಿದರಾದರೂ, ನನ್ನ ಬಗೆಗಿನ ಅವರ ಆತ್ಮೀಯತೆಯಲ್ಲಿ ಏನೂ ವ್ಯತ್ಯಾಸವಾಗಲಿಲ್ಲ.

ಇದಕ್ಕೆ, ಅಂದು ವಿಧ್ಯುಕ್ತವಾಗಿ ಆರಂಭವಾದ ಆ ಹಿರಿಯರ ಮತ್ತು ಈ ಕಿರಿಯನ ಸಂಬಂಧ ನಂತರದ ಈ ಹದಿನೈದು ವರ್ಷಗಳಲ್ಲಿ ಹೆಚ್ಚೆಚ್ಚು ಆತ್ಮೀಯವಾಗುತ್ತಾ ಹೋದದ್ದೇ ಸಾಕ್ಷಿಯಾಗಿದೆ. ನಾನು ಸರ್ಕಾರಿ ಸೇವೆಯಿಂದ ಸ್ವಯಂನಿವೃತ್ತಿ ಪಡೆದು ಶಿವಮೊಗ್ಗದಲ್ಲಿ ನೆಲೆಯಾಗಿ ಅವರ ಸಂಪಾದಕತ್ವದ 'ಜನಪದ ವಿಚಾರ' ಮಾಸಿಕದ ನಿಯಮಿತ ಓದುಗನಾದ ಮೇಲೆ, ವಿಶೇಷವಾಗಿ ನಾನೂ ಆರು ವರ್ಷಗಳ ಹಿಂದೆ ನನ್ನ ಸಂಪಾದಕತ್ವದಲ್ಲಿ 'ಹೊಸ ಮನುಷ್ಯ' ಎಂಬ ಸಮಾಜವಾದಿ ಮಾಸಿಕವನ್ನು ಅರಂಭಿಸಿದ ಮೇಲೆ ನನ್ನ ಮತ್ತು ಅವರ ಸಂಬಂಧ ಬೇರೆಯೇ ಹಂತ ತಲುಪಿತೆಂದು ಹೇಳಬೇಕು. ಅವರಿಗೆ ನಮ್ಮ ಪತ್ರಿಕೆಯ ಒಂದು ಸಂಚಿಕೆ ತುಂಬ ಮೆಚ್ಚುಗೆಯಾದರೆ, ಅವರು ಚಿಕ್ಕ ಹುಡುಗನಂತೆ ಕೂಡಲೇ ನನಗೆ ದೂರವಾಣಿ ಕರೆಮಾಡಿ, 'ಏನ್ರೀ ನಾಗಭೂಷಣ, ನಮ್ಮ 'ಜನಪದ ವಿಚಾರ'ದ ಮೇಲೆ ಸ್ಪರ್ಧೆಗೆ ಇಳಿದಿದ್ದೀರಾ? ಅದೆಲ್ಲ ನಡೆಯೋಲ್ಲ... ನಮ್ಮ

ಮುಂದಿನ ಸಂಚಿಕೆ ಕಾದು ನೋಡಿ!' ಎಂದು ಸವಾಲು ಹಾಕುತ್ತಲೇ ತಮ್ಮದೇ ವಿಶಿಷ್ಟ ಶೈಲಿಯಲ್ಲಿ ತಮ್ಮ ಮೆಚ್ಚುಗೆಯನ್ನು ಸೂಚಿಸುತ್ತಿದ್ದರು. ಆ ಮೆಚ್ಚುಗೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸಾಕಾರಗೊಳ್ಳುತ್ತಿದ್ದುದು ಮತ್ತು ನನ್ನನ್ನು ಅವರ ಮುಂದೆ ವಿನೀತನನ್ನಾಗಿಸುತ್ತಿದ್ದುದು ಅವರ ಪತ್ರಿಕೆಯ ಮುಂದಿನ ಸಂಚಿಕೆಯಲ್ಲಿ ಅವರು ನನ್ನ ಅಥವಾ ನಮ್ಮ ಪತ್ರಿಕೆಯ ಲೇಖನವೊಂದನ್ನು ಅಳವಡಿಸಿಕೊಂಡಾಗ!

ಈ ಮಧ್ಯೆ ನಾನು ಸುರೇಂದ್ರ ಕೌಲಗಿಯವರನ್ನು ನನ್ನ ಕೆಲವು ಗೆಳೆಯರೊಂದಿಗೆ ಮೇಲುಕೋಟೆಯ ಅವರ ಮನೆಗೆ ಹೋಗಿ ಎರಡು ಬಾರಿ ಕಂಡು ಮಾತನಾಡಿದ್ದೇನೆ. ಆ ಎರಡೂ ಸಂದರ್ಭಗಳಲ್ಲಿ ಹರೆಯದ ಹುಡುಗನ ಉತ್ಸಾಹದಿಂದ ನನ್ನೊಡನೆ ಗಾಂಧಿ–ವಿನೋಬಾ–ಜೆಪಿ ವಿಚಾರಗಳ ಬಗ್ಗೆ ನನಗೆ ಮುಜುಗರವಾಗುವಂತಹ ವಿದ್ಯಾರ್ಥಿ ವಿನಯದೊಂದಿಗೆ ಚರ್ಚಿಸಿದ್ದಾರೆ. ತಮ್ಮ ಜನಪದ ಸೇವಾ ಟ್ರಸ್ಟ್‌ನ ಎಲ್ಲ ಚಟುವಟಿಕೆಗಳ ಜಾಗಗಳನ್ನೂ ನಾನು ಮತ್ತು ನನ್ನ ಪತ್ನಿ ನೋಡಿ ಬರಬೇಕೆಂಬ ಇಚ್ಛೆಯಿಂದ ಅದಕ್ಕೆ ಸಕಲ ಏರ್ಪಾಡುಗಳನ್ನೂ ಮಾಡಿದ್ದಾರೆ. ನಾವು ಅವರ ಟ್ರಸ್ಟಿನ ಖಾದಿ ಮತ್ತು ಗ್ರಾಮೋದ್ಯೋಗ ಚಟುವಟಿಕೆಗಳನ್ನೂ ಅನಾಥ ಮಕ್ಕಳ ಕೇಂದ್ರ 'ಕರುಣಾ ಗೃಹ'ವನ್ನೂ, ಅಪರೂಪದ ಪುಸ್ತಗಳಿರುವ ದೊಡ್ಡ ಗ್ರಂಥಾಲಯವನ್ನೂ ನೋಡಿ ಮತ್ತು ಈ ಹಿಂದೆ ಅವರು ನಡೆಸಿದ ಶೈಕ್ಷಣಿಕ ಸಂಸ್ಥೆಗಳ ಕಥೆಯನ್ನೂ ಕೇಳಿ ಅವರ ಬಗ್ಗೆ ವಿಶಿಷ್ಟ ಗೌರವ ತಾಳಿದ್ದೇವೆ. ಈ ಟ್ರಸ್ಟ್‌ನ ಎರಡು ಪ್ರಕಟಣೆಗಳಾದ ಜೆ.ಸಿ. ಕುಮಾರಪ್ಪ ಅವರ ಗಾಂಧಿ ಅರ್ಥಶಾಸ್ತ್ರ ಕುರಿತ 'ಶಾಶ್ವತ ಅರ್ಥಶಾಸ್ತ್ರ' ಮತ್ತು ಫುಕೊವೊಕಾನ 'One straw revolution'ನ ಅನುವಾದ 'ಒಂದು ಹುಲ್ಲಿನ ಕ್ರಾಂತಿ' ಪರ್ಯಾಯ ಬದುಕನ್ನು ಕುರಿತ ಕನ್ನಡ ಸಾಹಿತ್ಯ ರಾಶಿಗೆ ಸಂದಿರುವ ಎರಡು ಅಮೂಲ್ಯ ಕೊಡುಗೆಗಳಾಗಿವೆ ಎಂದೇ ನಾನು ಭಾವಿಸಿದ್ದೇನೆ.

ಇಷ್ಟು ಕೆಲಸಗಳನ್ನು ಮಾಡಿರುವ ದೊಡ್ಡ ಜೀವ ನನ್ನನ್ನು ಒಮ್ಮೆ ಶ್ರೀರಂಗಪಟ್ಟಣದಲ್ಲಿ ನಡೆದ ವಾರ್ಷಿಕ ಸರ್ವೋದಯ ಸಮ್ಮೇಳನಕ್ಕೂ, ಮತ್ತೊಮ್ಮೆ ಕಳೆದ ವರ್ಷ ಮೇಲುಕೋಟೆಯಲ್ಲಿ ಅವರೇ ಮುಂದೆ ನಿಂತು ಆಯೋಜಿಸಿದ್ದ ಪ್ರಥಮ ಕರ್ನಾಟಕ ಸರ್ವೋದಯ ಸಮ್ಮೇಳನಕ್ಕೂ ಅಭಿಮಾನದಿಂದ ಆಹ್ವಾನಿಸಿ ನನ್ನಿಂದ ಮಾತುಗಳನ್ನಾಡಿಸಿ ಅನನ್ಯ ಪ್ರೀತಿ ತೋರಿಸಿದ್ದಾರೆ. ಸರ್ವೋದಯ ಚಳುವಳಿ ಕುರಿತ ಅವರ ಈ ಉತ್ಸಾಹ ನನ್ನನ್ನು ಒಮ್ಮೊಮ್ಮೆ ಮೂಕವಿಸ್ಮಿತನ್ನಾಗಿಯೂ ಮಾಡಿದೆ. ಒಮ್ಮೆ ಅವರು ಅದರ ಸಂಘಟನೆಗಾಗಿ ಮೇಲುಕೋಟೆಯಿಂದ ಶಿವಮೊಗ್ಗದವರೆಗೂ ಬಂದು ಏನೂ ಮಾಡಲಾಗದೆ ಬರಿಗೈಲಿ ಹಿಂತಿರುಗಿದ್ದನ್ನು ಕಂಡು ನಾನು ವಿಷಾದಪಟ್ಟಿದ್ದೇನೆ. ಆದರೆ ಅವರಿಗೇನೂ ವಿಷಾದವಿದ್ದಂತೆ ತೋರಲಿಲ್ಲ. ಅವರು 'ಜನಪದ ವಿಚಾರ'ದಲ್ಲಿ ಪ್ರತಿ ತಿಂಗಳೂ ಸರ್ವೋದಯದ ಮುನ್ನಡೆ ಎಂದು ಆಶಾದಾಯಕವಾದದ್ದನ್ನು ಏನನ್ನಾದರೂ ಬರೆಯುತ್ತಲೇ ಇದ್ದರಲ್ಲಾ!

'ಜನಪದ ವಿಚಾರ' ಗಾಂಧಿ ಚಿಂತನೆಗಳಿಗೆಂದೇ ಮೀಸಲಾದ ಕನ್ನಡದ ಏಕೈಕ ಪತ್ರಿಕೆಯಾಗಿದ್ದು ಅದರಲ್ಲಿನ ಗಾಂಧಿ ವಿಚಾರ ಕುರಿತ ಹಲವು ಅಪರೂಪದ ಅನುವಾದ

ಲೇಖನಗಳನ್ನು ಓದಿ ನಾನು ಗಾಂಧೀಜಿಯ ಬಗ್ಗೆ ಹೊಸ ಒಳನೋಟಗಳನ್ನು ಪಡೆದಿದ್ದೇನೆ. ಹಾಗೇ ಗಾಂಧಿಯುಗ ಮತ್ತೆ ಬರಲಿದೆ ಮತ್ತು ಬಂದೇ ಬರಬೇಕೆಂಬ ಅದಮ್ಯ ನಂಬಿಕೆಯಿಂದ ಮತ್ತು ಗಾಂಧಿ ಚಿಂತನೆಯ ಒಳಹೊಕ್ಕು ತೆಗೆದ ಸಮಯೋಚಿತ ಸೂಕ್ತಿಗಳ ಬಲದಿಂದ ಹದಿಹರೆಯದವರನ್ನೂ ನಾಚಿಸುವಂತಹ ಹುರುಪಿನೊಂದಿಗೆ ಬರೆಯುತ್ತಿದ್ದ ಅದರ ಸಂಪಾದಕೀಯಗಳನ್ನು ನಾನು ಮರೆಯಲಾರೆ. ಇಂತಹ ಆಯ್ದ ಸಂಪಾದಕೀಯಗಳ ಸಂಗ್ರಹವೊಂದನ್ನು ಸಿದ್ಧಪಡಿಸಿ ಅದಕ್ಕಾಗಿ ಅವರು ನನ್ನನ್ನು ಇನ್ನಿಲ್ಲದಂತೆ ಒತ್ತಾಯಿಸಿ ಅದಕ್ಕೆ ಒಂದು ಮುನ್ನುಡಿಯನ್ನೂ ಬರೆಸಿದ್ದರು. ಅದು ಪುಸ್ತಕವಾಗಿ ಪ್ರಕಟವಾಯಿತೋ ಇಲ್ಲವೋ ತಿಳಿಯೆ! ಅದೇನೇ ಇರಲಿ, ಅಷ್ಟೆಲ್ಲ ದೊಡ್ಡ ಕೆಲಸಗಳನ್ನು ಮಾಡಿದ ಅವರು ನನ್ನಂತಹ ಕಿರಿಯನ ಬಗ್ಗೆ ತೋರಿಸಿದ ಪ್ರೀತಿ–ಪ್ರೇಮ–ಅಭಿಮಾನಗಳು ನನ್ನನ್ನು ಹೆಚ್ಚು ನಮ್ರನನ್ನಾಗಿಸಿವೆ. ಅದೂ ಒಳ್ಳೆಯದಕ್ಕೇ ತಾನೇ?

ಇಂತಹ ಹಿರಿಯ ಜೀವದ ನೆನಪನ್ನು ಹಸಿರಾಗಿ ಇರಿಸುವಂತೆ ಜನಪದ ಸೇವಾ ಟ್ರಸ್ಟ್‌ನ ಚಟುವಟಿಕೆಗಳು ಇನ್ನಷ್ಟು ವ್ಯಾಪಕ ಮತ್ತು ಚುರುಕುಗೊಳ್ಳುವಂತಾಗಲಿ ಮತ್ತು ಮುಖ್ಯವಾಗಿ 'ಜನಪದ ವಿಚಾರ' ಪತ್ರಿಕೆ ಇನ್ನಷ್ಟು ಸಮೃದ್ಧವಾಗಿ ಬೆಳೆದು ಮುಂದುವರಿಯುವಂತಾಗಲಿ.

('ಜನಪದ ವಿಚಾರ' : ಸೆಪ್ಟಂಬರ್, ೨೦೧೮)

ಪ್ರೊ. ಬಿ.ಕೃಷ್ಣಪ್ಪ ಸ್ಮರಣೆ

ಪ್ರೊ. ಬಿ.ಕೃಷ್ಣಪ್ಪ ಅವರ ಸ್ಮಾರಕ ಭವನ 'ಮೈತ್ರಿವನ'ದಲ್ಲಿ ಇಂದು (ಅಕ್ಟೋಬರ್ ೧, ೨೦೧೭) ಲೋಕಾರ್ಪಣೆಯಾಗುತ್ತಿದೆ. ಅದು ಕೃಷ್ಣಪ್ಪನವರ ಹುಟ್ಟೂರಾದ ಹರಿಹರದ ಬಳಿ ಮುಂಬೈ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಪಕ್ಕವೇ ಭವ್ಯವಾಗಿ ನಿರ್ಮಾಣಗೊಂಡಿದೆ. ಕೃಷ್ಣಪ್ಪನವರು ಸುಮಾರು ಇಪ್ಪತ್ತು ವರ್ಷಗಳ ಹಿಂದೆ ನಿಧನರಾದಾಗ ಅವರ ಪಾರ್ಥಿವ ಶರೀರವನ್ನು ಇಲ್ಲಿಯೇ ಮಣ್ಣು ಮಾಡಲಾಗಿತ್ತು. ಈಗ ಮುಖ್ಯಮಂತ್ರಿಗಳಿಂದ ಲೋಕಾರ್ಪಣೆಗೊಳ್ಳುತ್ತಿರುವ ಈ ಭವನ, ಕೃಷ್ಣಪ್ಪನವರು ಈ ನಾಡಿನ ದಲಿತರ ಉನ್ನತಿಗಾಗಿ ನಡೆಸಿದ ಅವಿರತ ಹೋರಾಟ ಮತ್ತು ಮಾಡಿದ ಸೇವೆಗೆ ಜನತೆಯ ಪರವಾದ ಒಂದು ಗೌರವ ಸಲ್ಲಿಕೆಯ ಸಂಕೇತವಾಗಿ ಬಹುಕಾಲ ನಿಲ್ಲಲಿದೆ. ಕಳೆದ ಮೇ ತಿಂಗಳಲ್ಲಿ ಕೃಷ್ಣಪ್ಪನವರ ಹುಟ್ಟುಹಬ್ಬವನ್ನು ಶಿವಮೊಗ್ಗದ ನಮ್ಮ 'ಕೃಷ್ಣಪ್ಪ ಗೆಳೆಯರ ಬಳಗ'ವು ಮೈತ್ರಿವನದಲ್ಲಿಯೇ ಆಚರಿಸಿತ್ತು. ಈ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತನಾಡಿದ್ದ ನಾನು ಈ ಜಾಗ ಕೇವಲ ದಲಿತರ ಜಾಗವಾಗದೆ, ಕರ್ನಾಟಕದ ಎಲ್ಲ ಪ್ರಗತಿಪರ ಚಳುವಳಿಗಳ ಅಧ್ಯಯನ ಕೇಂದ್ರವಾಗುವಂತೆ ಸುಸಜ್ಜಿತವಾಗಿ ಬೆಳೆಯಲಿ ಎಂದು ಹಾರೈಸಿದ್ದೆ.

ಕೃಷ್ಣಪ್ಪ ನನ್ನ ಆಪ್ತ ಸ್ನೇಹಿತರಲ್ಲೊಬ್ಬರಾಗಿದ್ದರು. ಎಂಬತ್ತರ ದಶಕದ ಆರಂಭದಲ್ಲಿ ಐದು ವರ್ಷಗಳ ಕಾಲ ನಾನು ಭದ್ರಾವತಿಯಲ್ಲಿದ್ದಾಗ ಅವರ ಕುಟುಂಬ ನನ್ನ ಕುಟುಂಬವೇ ಆಗಿಹೋಗಿತ್ತು. ಅವರು ಅಲ್ಲಿನ ಸರ್.ಎಂ.ವಿ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದರು. ನಾನು ಅಲ್ಲಿನ ಆಕಾಶವಾಣಿ ಕೇಂದ್ರದಲ್ಲಿ ಕಾರ್ಯಕ್ರಮ ಅಧಿಕಾರಿಯಾಗಿದ್ದೆ. ಆಗ ಅವಿವಾಹಿತನಾಗಿದ್ದ ನಾನು ಅವರ ಮನೆಗೆ ಹೋಗಿ ಇನ್ನೂ ತುಂಬ ಚಿಕ್ಕವರಾಗಿದ್ದ ಶಾಲಿನಿ ಮತ್ತು ಸೀಮಾ ಎಂಬ ಅವರ ಮಕ್ಕಳೊಡನೆ ಬೆರೆತು ಆಟವಾಡಿ, ಕೃಷ್ಣಪ್ಪ ದಂಪತಿಗಳೊಂದಿಗೆ ಲೋಕಾಭಿರಾಮವಾಗಿ ಮಾತನಾಡುತ್ತಾ ಊಟ ಮಾಡದೆ ಬರದ ವಾರವೇ ಇರಲಿಲ್ಲ. ಸ್ವತಃ ಕೃಷ್ಣಪ್ಪನವರು ವಾರಕ್ಕೊಮ್ಮೆಯೋ ಎರಡು ಬಾರಿಯೋ ನನ್ನ ಕಛೇರಿಗೆ ಬಂದು ನನ್ನೊಡನೆ ಹತ್ತು ನಿಮಿಷವಾದರೂ ಮಾತಾಡಿ ಹೋಗುವುದು ರೂಢಿಯಂತಾಗಿ ಹೋಗಿತ್ತು. ಈ ಮಾತುಕತೆಗಳಲ್ಲಿ

ಸಹಜವಾಗಿಯೇ ಗಾಂಧಿ-ಅಂಬೇಡ್ಕರ್-ಲೋಹಿಯಾರ ತತ್ವ ವಿಚಾರಗಳೂ ಮತ್ತು ಆಗ ತಮ್ಮ ಜೀವಂತಿಕೆಯ ಉತ್ತುಂಗ ಸ್ಥಿತಿಯಲ್ಲಿದ್ದ ದಲಿತ ಸಂಘರ್ಷ ಸಮಿತಿ ಹಾಗೂ ರೈತ ಸಂಘಗಳ ಚಟುವಟಿಕೆಗಳನ್ನು ಕುರಿತ ಚರ್ಚೆಗಳೂ ಇರುತ್ತಿದ್ದವು.

ಕೃಷ್ಣಪ್ಪನವರು ಸುತ್ತಮುತ್ತಲಿನ ಹಳ್ಳಿಗಳಲ್ಲಿ ತಾವು ಉದ್ದೇಶಿಸಿ ಮಾತನಾಡುತ್ತಿದ್ದ ಸಭೆಗಳಿಗೂ ನನ್ನನ್ನು ತಮ್ಮ ಲ್ಯಾಂಬ್ರೆಟಾ ಸ್ಕೂಟರಿನಲ್ಲಿ ಕರೆದುಕೊಂಡು ಹೋಗುತ್ತಿದ್ದುದುಂಟು. ಸಭೆಯಿಂದ ಹಿಂದಿರುಗಿ ಬರುವಾಗ ಅವರ ಭಾಷಣದ ಕುರಿತು ನಮ್ಮಿಬ್ಬರ ನಡುವೆ ಬಿಸಿಬಿಸಿ ಚರ್ಚೆಯಾಗುತ್ತಿದ್ದುದೂ ಉಂಟು! ಒಮ್ಮೆ ಅವರು ತಮ್ಮ ಭಾಷಣದಲ್ಲಿ ಅಂಬೇಡ್ಕರ್ ಅವರು ಸೂಟ್ ಹಾಕುತ್ತಿದ್ದುದನ್ನು ಸಮರ್ಥಿಸಿಕೊಳ್ಳಲು ಅವರ ಅಂಗಿ ತುಂಬ ಹರಿದುಹೋಗಿದ್ದುದೇ ಕಾರಣವೆಂದು ಹೇಳಿದಾಗ ನನಗೆ ರೇಗಿಹೋಗಿತ್ತು. 'ಅಂಬೇಡ್ಕರ್ ಅಷ್ಟು ಬಡವರಾಗಿದ್ದರೆ ಸೂಟ್ ಹೇಗೆ ಹೊಲಿಸಿಕೊಳ್ಳಲು ಸಾಧ್ಯ?' ಎಂದು ಕೇಳಿ ಅವರನ್ನು ರೇಗಿಸಿಬಿಟ್ಟಿದ್ದೆ. ಆಗ ಅವರು 'ನಿನ್ನನ್ನು ಸ್ಕೂಟರ್‌ನಿಂದ ಇಲ್ಲಿಯೇ ಅರ್ಧದಾರಿಯಲ್ಲಿ ಇಳಿಸಿಹೋಗಿಬಿಡುತ್ತೇನೆ!' ಎಂದು ಹೆದರಿಸಿದ್ದರು. ಆದರೆ ಮನೆ ತಲುಪಿದ ಮೇಲೆ, 'ಇಷ್ಟೊತ್ತಿನಲ್ಲಿ ಇನ್ನೆಲ್ಲಿಗೆ ಊಟಕ್ಕೆ ಹೋಗುತ್ತೀಯಯ್ಯಾ? ಇಲ್ಲೇ ಊಟ ಮಾಡಿಹೋಗು' ಎಂಬ ಪ್ರೀತಿಯ ಉಪಚಾರ! ಊಟಕ್ಕೆ ಮುಂಚೆ ಮತ್ತೆ ಮುಗಿಯದ ಅದೇ ಬಿಸಿಬಿಸಿ ಚರ್ಚೆ!

ನಮ್ಮ ನಡುವೆ ಪದೇ ಪದೇ ಚರ್ಚೆಗೆ ಕಾರಣವಾಗುತ್ತಿದ್ದುದು ಅವರ ಮನೆಯ ವರಾಂಡದಲ್ಲಿ ತೂಗುಹಾಕಿದ್ದ, ಅವರೇ ಚಿತ್ರಗಳನ್ನು ಜೋಡಿಸಿ ಅಂಟಿಸಿ ಮಾಡಿದ್ದ ಒಂದು ಹಳೆಯ ಫೋಟೊ. ಅದರಲ್ಲಿ ಅಬ್ರಾಹಂ ಲಿಂಕನ್, ಗಾಂಧಿ, ಲೋಹಿಯಾ ಮತ್ತು ಪೆರಿಯಾರ್ ಚಿತ್ರಗಳಿದ್ದವು. ಅದು ಅವರ ಪೂರ್ವಾಶ್ರಮದ ತಾತ್ವಿಕ ನಂಬಿಕೆಯನ್ನು ಸಂಕೇತಿಸುವ ಚಿತ್ರವಾಗಿತ್ತು. ಅಂಬೇಡ್ಕರ್‌ರ ದೊಡ್ಡ ಫೋಟೊ ಪ್ರತ್ಯೇಕವಾಗಿ ಬಾಗಿಲ ಮೇಲೆ ತೂಗುತ್ತಿತ್ತು. ನಾನು 'ಗಾಂಧಿ ಜೊತೆಯಲ್ಲಿ ಪೆರಿಯಾರ್ ಇರಲಾರರು' ಎಂದರೆ ಅವರು, 'ಒಂದು ಕಾಲದಲ್ಲಿ ಅಂಟಿಸಿಯಾಗಿದೆ. ಈಗ ಸುಮ್ಮನೆ ಏಕೆ ತೆಗೆಯಬೇಕು?' ಎನ್ನುತ್ತಿದ್ದರು. ನಾನು 'ಸುಮ್ಮನೆ ಅಂತಲ್ಲ ಕೃಷ್ಣಪ್ಪನೋರೆ, ಅಸಂಗತ ಸಂದೇಶ ನೀಡುವ ಚಿತ್ರ ಹಾಕಬಾರದು' ಎಂದರೆ ಅವರು, 'ಅದನ್ನು ತೆಗೆದರೆ ಖಾಲಿ ಬೀಳುವ ಜಾಗದಲ್ಲಿ ಯಾರ ಚಿತ್ರ ಹಾಕುವುದು?' ಎಂದು ನನಗೆ ಪ್ರಶ್ನೆ ಹಾಕುತ್ತಿದ್ದರು. ಅದಕ್ಕೆ ನಾನು 'ಅಂಬೇಡ್ಕರ್ ಚಿತ್ರ ಹಾಕಬಹುದು' ಎಂದರೆ, 'ಅದು ಇನ್ನೂ ಅಸಂಗತವಾಗುತ್ತದೆ. ಗಾಂಧಿ-ಅಂಬೇಡ್ಕರ್ ಜೊತೆಗಿರಲಾರರು' ಎನ್ನುತ್ತಿದ್ದರು. ನಾನು 'ಅವರಿಬ್ಬರ ಮಧ್ಯೆ ಹೇಗೂ ಲೋಹಿಯಾ ಇರುತ್ತಾರಲ್ಲ ಸಾರ್!' ಎಂದರೆ, 'ಇಲ್ಲಯ್ಯ, ಅಂಬೇಡ್ಕರ್‌ಗೆ ಪ್ರತ್ಯೇಕ ಸ್ಥಾನ ಬೇಕು!' ಎಂದು ಮಾತು ಮುಗಿಸುತ್ತಿದ್ದರು.

ಗಾಂಧಿ ಜೊತೆಗೆ ಅಂಬೇಡ್ಕರ್ ಚಿತ್ರ ಹಾಕಲು ಅವರ ಮನಸ್ಸು ಏಕೋ ಒಪ್ಪುತ್ತಿರಲಿಲ್ಲ. ಜೊತೆಗೆ, ಗಾಂಧಿ ಮತ್ತು ಲೋಹಿಯಾ ಚಿತ್ರವನ್ನು ತೆಗೆಯಲೂ ಏಕೋ ಅವರ ಮನಸ್ಸು ಒಪ್ಪುತ್ತಿರಲಿಲ್ಲ. ಇದು ಕೃಷ್ಣಪ್ಪನವರ ತಾತ್ವಿಕ ವ್ಯಕ್ತಿತ್ವದ ಗೊಂದಲವೋ ಜಟಿಲತೆಯೋ ಸಂಕೀರ್ಣತೆಯೋ ನನಗೆ ಅರ್ಥವಾಗುತ್ತಿರಲಿಲ್ಲ! ಈಗಲೂ ಅರ್ಥವಾಗಿಲ್ಲ!!

ಅಂಬೇಡ್ಕರ್‌ವಾದಿಯಾಗಿದ್ದ ಕೃಷ್ಣಪ್ಪ ಪೂರ್ವಾಶ್ರಮದಲ್ಲಿ 'ಸಮಾಜವಾದಿ ಯುವಜನ ಸಭಾ'ದಲ್ಲಿ ಲೋಹಿಯಾವಾದಿಯಾಗಿದ್ದವರು. ಅದಕ್ಕೂ ಮುನ್ನ ಓರ್ವ ಸಾಹಿತ್ಯಪ್ರಿಯ ಕನ್ನಡ ಅಧ್ಯಾಪಕರಾಗಿ ಎಸ್.ಎಲ್. ಭೈರಪ್ಪನವರನ್ನೂ ತಮ್ಮ ಕಾಲೇಜಿಗೆ ಕರೆಸಿ ಭಾಷಣ ಮಾಡಿಸಿದಂತಹ 'ಮುಕ್ತ ಚಿಂತಕ'ರಾಗಿದ್ದವರು. ಆದರೆ ಅಂಬೇಡ್ಕರ್‌ವಾದಿಯಾದ ಮೇಲೆ ಸಾಹಿತ್ಯದ ವಿಷಯದಲ್ಲೂ ಅವರು 'ಕಟ್ಟಾ ದಲಿತವಾದಿ'ಯಾಗಿ ಹೋದರು! ಒಂದು ವಿಮರ್ಶಾ ಲೇಖನದಲ್ಲಿ ಅವರು ಕುವೆಂಪು ಅವರನ್ನು ದಲಿತ ವಿರೋಧಿ ಪೂರ್ವಾಗ್ರಹ ಹೊಂದಿದ್ದವರು ಎಂಬಂತೆ ಬರೆದಾಗ ನಾನು ಅವರ ಬಳಿ ದೊಡ್ಡ ಸಾಹಿತ್ಯಿಕ ಜಗಳವನ್ನೇ ಆಡಿದ್ದೆ. ಆದರೆ ಅವರು ಇಂತಹ ಜಗಳಗಳನ್ನು ಎಂದೂ ವೈಯಕ್ತಿಕವಾಗಿ ತೆಗೆದುಕೊಂಡವರಲ್ಲ.

ನಾನು ಸವಿತಾಳನ್ನು ಅವಳ ಇಚ್ಛೆಯಂತೆಯೇ ಭದ್ರಾವತಿಯಲ್ಲಿ ರಿಜಿಸ್ಟರ್ಡ್ ಮದುವೆಯಾದಾಗ ಸಾಕ್ಷಿಯಾಗಿ ಸಹಿ ಹಾಕಿದವರಲ್ಲಿ ಕೃಷ್ಣಪ್ಪ ಅವರೂ ಒಬ್ಬರು. ರಿಜಿಸ್ಟ್ರೇಷನ್ ಮತ್ತು ಊಟದ ನಂತರ ನಮ್ಮನ್ನೆಲ್ಲ (ನನ್ನ ಮತ್ತು ಸವಿತಾಳ ಗೆಳೆಯರ ಬಳಗ ಹಾಗೂ ಅವಳ ತಂದೆ-ತಾಯಿಗಳನ್ನು) ತಮ್ಮ ಮನೆಗೆ ಕರೆದುಕೊಂಡು ಹೋಗಿ ಸಂಜೆಯವರೆಗೆ ಹಾಡುಗಳನ್ನು ಹೇಳುತ್ತ ನಮ್ಮನ್ನು ರಂಜಿಸಿ ಉಪಾಹಾರ ನೀಡಿ ಕಳಿಸಿದವರು ಕೃಷ್ಣಪ್ಪನವರು. ಅವರು ತುಂಬ ಒಳ್ಳೆಯ ಹಾಡುಗಾರರು ಮತ್ತು ತಮ್ಮಟೆ ವಾದಕರು ಎಂಬುದು ಬಹಳ ಜನಕ್ಕೆ ಗೊತ್ತಿಲ್ಲ. ಅಡಿಗರ 'ಅಳುವ ಕಡಲೊಳು ತೇಲಿ ಬರುತಿದೆ ನಗೆಯ ಹಾಯಿದೋಣಿ'ಯನ್ನು ಅವರ ಬಾಯಿಂದಲೇ ಕೇಳಬೇಕಿತ್ತು.

ಕೃಷ್ಣಪ್ಪನವರ ಕುಟುಂಬದ್ದೇ ಆದ ಕೆಲವು ಕಾರಣಗಳಿಂದಾಗಿ ನಮ್ಮ 'ಮಂತ್ರ ಮಾಂಗಲ್ಯ' ಸಮಾರಂಭಕ್ಕೆ ಅವರು ಬರಲಿಲ್ಲವಾದರೂ, ನಂತರದ ಕೆಲವೇ ದಿನಗಳಲ್ಲಿ ನಾವು ಅವರ ಕುಟುಂಬ ಸ್ನೇಹಿತರಾದೆವು. ನಾವು ಮತ್ತು ಅವರು ನಮ್ಮ ಸಾಮಾನ್ಯ ಗೆಳೆಯರ ಬಳಗದೊಂದಿಗೆ ಹದಿನೈದು ದಿನಗಳ ದಕ್ಷಿಣಭಾರತ ಪ್ರವಾಸ ಮಾಡಿದ್ದು ಒಂದು ಸ್ಮರಣಾರ್ಹ ಅನುಭವ. ಕೃಷ್ಣಪ್ಪನವರ ಮೂಲಕ ನನಗೆ ಹಲವಾರು ದಲಿತ ನಾಯಕರ ಸ್ನೇಹ ದೊರೆಯಿತು. ಅವರಲ್ಲಿ ಕೆಲವರು ಈಗಿಲ್ಲ. ಇನ್ನು ಕೆಲವರು ದಲಿತ ಚಳುವಳಿಯ ಛಿದ್ರೀಕರಣದ ಕಾರಣದಿಂದಾಗಿ ನನ್ನ ಕಣ್ಣು ಮತ್ತು ನೆನಪುಗಳಿಂದ ಮರೆಯಾಗಿದ್ದಾರೆ. ಈಗ ಉಳಿದಿರುವವರು ಹೆಚ್ಚಾಗಿ ಕೃಷ್ಣಪ್ಪನವರ ದಲಿತೇತರ ಗೆಳೆಯರೇ! ಕೃಷ್ಣಪ್ಪನವರ ಬಳಗದಲ್ಲಿ ಅವರ ಸಂಖ್ಯೆಯೇನೂ ಕಡಿಮೆ ಇರಲಿಲ್ಲ.

'ನೀನು ನನಗಿಂತ ಹೆಚ್ಚಾಗಿ ದೇವನೂರ ಮಹಾದೇವನ ಗೆಳೆಯನಯ್ಯಾ!' ಎಂಬ ಹೇಳಿಕೆಯನ್ನು ಕೃಷ್ಣಪ್ಪನವರು ಹೆಚ್ಚೂಕಮ್ಮಿ ನನ್ನ ಮೇಲೆ ಆರೋಪದಂತೆಯೇ ಹೊರಿಸುತ್ತಿದ್ದರು. ನಾನು ದೇವನೂರ ಮಹಾದೇವ ಅವರ ಆಪ್ತ ಗೆಳೆಯನೂ ಆಗಿದ್ದೆ. ಈಗಲೂ ಆಗಿದ್ದೇನೆ. ಈ ಇಬ್ಬರನ್ನೂ ದಲಿತ ಚಳುವಳಿಯ ಎರಡು ಕಣ್ಣುಗಳೆಂದು ನಾನು ಕರೆಯುತ್ತಿದ್ದೆ. ಆದರೆ ಇವರಿಬ್ಬರ ದೃಷ್ಟಿಗಳು ಸ್ವಲ್ಪ ಬೇರೆ ಬೇರೆಯಾಗಿದ್ದುದರಿಂದ ದಲಿತ ಚಳುವಳಿಗೆ ಸ್ವಲ್ಪ ಮಾಲುಗಣ್ಣು ಎನ್ನುತ್ತಿದ್ದೆ!

ಅಷ್ಟೇ ಅಲ್ಲ, ನನಗೆ ನಂಜುಂಡಸ್ವಾಮಿ, ಸುಂದರೇಶ್, ಕಡಿದಾಳು ಶಾಮಣ್ಣನವರಿಂದ ಹಿಡಿದು ಹಾಸನ, ತೀರ್ಥಹಳ್ಳಿ, ತುಮಕೂರುಗಳಲ್ಲಿನ ಯುವ ನಾಯಕರವರೆಗೆ ರೈತಸಂಘದಲ್ಲೂ ಅನೇಕ ಗೆಳೆಯರಿದ್ದರು. ಏಕೆಂದರೆ ಕೃಷ್ಣಪ್ಪ, ದೇವನೂರ ಮತ್ತು ಈ ಎಲ್ಲ ರೈತಸಂಘದ ಗೆಳೆಯರ ಪೂರ್ವಾಶ್ರಮ ಲೋಹಿಯಾ ಸಮಾಜವಾದವೇ ಆಗಿತ್ತು. ಹಾಗಾಗಿಯೇ ಇಪ್ಪತ್ತೈದು ವರ್ಷಗಳ ಹಿಂದೆ ಕರ್ನಾಟಕದಲ್ಲಿ ಒಂದು ಪರ್ಯಾಯ ರಾಜಕೀಯ ಶಕ್ತಿ ನಿರ್ಮಿಸುವ ಪ್ರಯತ್ನದಲ್ಲಿ ನಾನೂ ಭಾಗಿಯಾಗಿ, ಅದರ ಭಾಗವಾಗಿ ಸಿದ್ಧಗೊಂಡ ದಲಿತ ಚಳುವಳಿಯ ಮುಖವಾಣಿಯಾಗಿದ್ದ 'ಪಂಚಮ'ದ ವಿಶೇಷ ಸಂಚಿಕೆಯ ಸಂಪಾದಕರಲ್ಲೊಬ್ಬನಾಗಿ, ಆ ಸಂಚಿಕೆಗಾಗಿ ಬಿ. ಕೃಷ್ಣಪ್ಪನವರನ್ನು ಸಂದರ್ಶಿಸಿದ್ದೆ. ಅದರಲ್ಲಿ ಅವರು ನನ್ನ ಪ್ರಶ್ನೆ-ಮರುಪ್ರಶ್ನೆಗಳ ಹೊಡೆತ ತಾಳಲಾರದೆ, 'ಆಯಿತು; ಯೋಚಿಸಬಹುದು' ಎಂದಿದ್ದರು! (ನೋಡಿ: ನನ್ನ 'ಕಂಡದ್ದು ಕಾಡಿದ್ದು' ಸಂಕಲನ)

ಆದರೆ ಕೃಷ್ಣಪ್ಪನವರು ರೈತಸಮೂಹದ ಬಗ್ಗೆ, ಅದರ ನಾಯಕತ್ವದ ಬಗ್ಗೆ ಅನುಮಾನಗಳನ್ನೇ ಇಟ್ಟುಕೊಂಡಿದ್ದರೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಆ ರೀತಿಯಲ್ಲಿ ಅವರು ಪ್ರಚಲಿತ ಅರ್ಥದ, ಅಂದರೆ ಅನ್ಯರಾರನ್ನೂ ನಂಬದ, ಕಟ್ಟಾ ಅಂಬೇಡ್ಕರ್‌ವಾದಿಯಾಗಿದ್ದರು. ನಮ್ಮ ದಿನನಿತ್ಯದ ಮಾತುಕತೆಗಳ ಮಧ್ಯದಲ್ಲೂ ಹಾಗೆಯೇ; ದಲಿತರನ್ನೊಳಗೊಂಡ ಯಾವ ವಿವಾದವೇ ಆಗಲಿ ಅವರು ಯೋಚಿಸದೆಯೂ ಯೋಚಿಸಿಯೂ ಅವನು ದುಷ್ಟನೋ, ಭ್ರಷ್ಟನೋ, ತರಲೆಯೋ, ಪುಂಡನೋ ಎಂಬುದನ್ನು ಲೆಕ್ಕಿಸದೆ ದಲಿತರ ಪರವಾಗಿಯೇ ಮಾತನಾಡುತ್ತಿದ್ದರು! 'ಅವರು ಹಾಗಿರುವುದು ಚರಿತ್ರೆಯ ಕಾರಣದಿಂದ ಕಣಯ್ಯಾ' ಎಂದು ಸಮರ್ಥಿಸಿಕೊಳ್ಳುತ್ತಿದ್ದರು. 'ಚರಿತ್ರೆಯೇ ಕಾರಣವಾಗಿದ್ದರೆ, ಎಲ್ಲ ದಲಿತರೂ ಹಾಗೇ ಇರಬೇಕಾಗಿತ್ತು ಸಾರ್' ಎಂದು ನಾನು ಹೇಳಿದರೆ ಅವರು ನನ್ನನ್ನು ದುರುದುರು ನೋಡುತ್ತಿದ್ದರು! ಆದರೆ ಒಳಗೇ ಅಂತಹ ದಲಿತರಲ್ಲಿನ ದುಷ್ಟತನ ಮತ್ತು ಭ್ರಷ್ಟತನದ ಬಗ್ಗೆ ನೋಯುತ್ತಿದ್ದರು.

ಬಹಳ ಜನ ಮಹಾದೇವ ಅವರನ್ನು ದಲಿತ ಚಳುವಳಿಯ ತಾಯಿಯೆಂದೂ, ಕೃಷ್ಣಪ್ಪನವರನ್ನು ತಂದೆಯೆಂದೂ ಕರೆಯುವುದುಂಟು. ಆದರೆ ನನ್ನ ಪ್ರಕಾರ ಕೃಷ್ಣಪ್ಪ ತನ್ನ ಮಕ್ಕಳೆಲ್ಲರ ತಪ್ಪುಗಳನ್ನು ಕ್ಷಮಿಸುವ ತಾಯಿಯಂತಿದ್ದರೆ ಮಹಾದೇವ ತಪ್ಪುಗಳ ಬಗ್ಗೆ ಬಹಿರಂಗವಾಗಿ ಅಲ್ಲದಿದ್ದರೂ ಅಂತರಂಗದಲ್ಲಿ ವಿರೋಧವನ್ನು ದಾಖಲು ಮಾಡಿಕೊಳ್ಳುವ ತಂದೆಯಂತಿದ್ದರು. ಹಾಗಾಗಿಯೇ ಸಾಮಾನ್ಯ ದಲಿತರಿಗೆ ಕೃಷ್ಣಪ್ಪರನ್ನು ಕಂಡರೆ ಹೆಚ್ಚು ಇಷ್ಟ!

ನಾನು ಭದ್ರಾವತಿ ಬಿಟ್ಟ ಮೇಲೂ ಕೃಷ್ಣಪ್ಪನವರೊಂದಿಗೆ ಸಂಪರ್ಕ ಇತ್ತು- ದಲಿತ ಸಂಘರ್ಷ ಸಮಿತಿ ಜನತಾ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಂಡು ಚುನಾವಣಾ ರಾಜಕಾರಣಕ್ಕೆ ಇಳಿಯಬಾರದು ಎನ್ನುತ್ತಿದ್ದ ಅವರೇ, ಅದೇ ಹೊಂದಾಣಿಕೆಯೊಂದಿಗೆ

ಚುನಾವಣೆಗೆ ಇಳಿಯುವವರೆಗೆ. ಆನಂತರ ಅವರೊಂದಿಗೆ ನನ್ನ ಸಂಪರ್ಕ ಕಡಿಮೆಯಾಯಿತು. ಅದಕ್ಕೆ ಕಾರಣ, ನನಗೂ ದೂರ ದೂರದ ಊರುಗಳಿಗೆ ವರ್ಗವಾದುದೂ, ನಾನು ನನ್ನ ವೃತ್ತಿಸಂಬಂಧಿತ ಹಲವು ತೊಂದರೆಗಳನ್ನು ಎದುರಿಸಬೇಕಾದುದೂ ಇರಬಹುದು. ಅವರು ನನ್ನಂತಹ ಹಲವು ಹಿತೈಷಿಗಳ ಸಲಹೆಯ ಹೊರತಾಗಿಯೂ ಬಿಎಸ್‌ಪಿ ಸೇರಿದಾಗಲಂತೂ ನಾನು ಅವರಿಂದ ಸಂಪೂರ್ಣ ದೂರವಾದೆ. ಆ ಪಕ್ಷ ಸೇರಿ ನಂತರ ಅವರು ಪಟ್ಟ ಪಾಡಿನ ಬಗ್ಗೆ ಹೇಳದಿರುವುದು ಒಳಿತು. ಅವರು ಬದುಕಿದ್ದರೆ ಅವರೇ ಹೇಳುತ್ತಿದ್ದರೇನೋ. ಆದರೆ ವೈಯಕ್ತಿವಾಗಿ ಕೃಷ್ಣಪ್ಪ ನನ್ನ ಸ್ನೇಹಿತರಾಗಿಯೇ ಉಳಿದರು.

ನಾವು ೧೯೯೫ರಲ್ಲಿ 'ಮಾನವ ಮಂಟಪ' ಎಂಬ ಅಂತರ್‌ಜಾತಿ ವಿವಾಹಿತರ ವೇದಿಕೆ ರಚಿಸಿ ಅದರ ಮೊದಲ ಸಮಾವೇಶದ 'ಒಲವು' ಎಂಬ ಸ್ಮರಣ ಸಂಪುಟವನ್ನು ನಾನು ಸಂಪಾದಿಸಬೇಕಾಗಿ ಬಂದಾಗ ಅದನ್ನು ಕೃಷ್ಣಪ್ಪ ದಂಪತಿಗೆ ಅರ್ಪಿಸಿದ್ದ ನೆನಪು. ಏಕೆಂದರೆ ಅವರು ಜಾತಿ ಮೀರಿದ ನಮ್ಮ ಕುಲದ ಆದಿ ದಂಪತಿಗಳು; ಜಾತಿಪದ್ಧತಿಯ ಎರಡು ತುದಿಗಳ ಸಂಗಮದ ಅದ್ಭುತ ಸಾಮರಸ್ಯದ ಸಂಕೇತವಾಗಿರುವವರು! ಹಾಗಾಗಿಯೇ ನಮಗೆ ಇಂದಿರಾ ಕೃಷ್ಣಪ್ಪನವರು ಕೃಷ್ಣಪ್ಪನವರಷ್ಟೇ ಪ್ರಿಯರಾಗಿರುವವರು. ಈ ಕಾರಣದಿಂದಲೇ ಇಂದಿರಾ ಅವರನ್ನು ಒತ್ತಾಯಿಸಿ ನಾನು ನಮ್ಮ 'ಹೊಸ ಮನುಷ್ಯ' ಪತ್ರಿಕೆಯಲ್ಲಿ 'ಪ್ರೊ. ಬಿ.ಕೃಷ್ಣಪ್ಪ ನೆನಪಿನ ಮಾಲೆ' ಎಂಬ ಜೀವನ ಚರಿತ್ರೆ ಬರೆಸಲು ಸಾಧ್ಯವಾಗಿದ್ದು.

ಆದರೆ ಕೃಷ್ಣಪ್ಪ ಸ್ಮಾರಕ ಭವನದ ಉದ್ಘಾಟನೆಯ ಬಗ್ಗೆ ಪತ್ರಿಕೆಗಳಲ್ಲಿ ಸರ್ಕಾರ ನೀಡಿರುವ ಜಾಹೀರಾತನ್ನು ನೋಡಿ ನನಗೆ ದಿಗ್ಭ್ರಮೆಯೂ, ಅಪಾರ ದುಃಖವೂ, ಬೇಸರವೂ ಉಂಟಾಯಿತು. ಅದರಲ್ಲಿ ಬಸವಣ್ಣ ಮತ್ತು ಅಂಬೇಡ್ಕರ್‌ರೊಂದಿಗೆ ಜಗಜೀವನರಾಂ ಅವರ ಚಿತ್ರವೂ ಕಾಣಿಸಿಕೊಂಡಿದೆ! ಬಸವಣ್ಣನ ಚಿತ್ರ ಬಿಡಿ, ಅದು ಸಿದ್ದರಾಮಯ್ಯನವರ ಸರ್ಕಾರ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಅನುಸರಿಸಿಕೊಂಡು ಬಂದ ಅಹಿಂದ ಜಾತೀಯತೆಯ ದುಷ್ಪರಿಣಾಮಗಳನ್ನು ಹೋಗಲಾಡಿಸಿಕೊಳ್ಳಲು ನಡೆಸಿರುವ ರಾಜಕೀಯ ತಂತ್ರದ ಲಾಂಛನವಾಗಿದೆ. ಆದರೆ ಜಗಜೀವನರಾಂ ಅವರ ಚಿತ್ರವೇಕೆ? ಎಲ್ಲ ಕುಲಗಳ ಸಹಾನುಭೂತಿ ಮತ್ತು ಬೆಂಬಲದೊಂದಿಗೆ ಹುಟ್ಟಿ ಬೆಳೆದ ದಲಿತ ಚಳುವಳಿ ಯಾವಾಗ ಕೇವಲ ದಲಿತರ ಚಳುವಳಿಯಾಗತೊಡಗಿತೋ ಆಗ ಉದ್ಭವವಾದ ರಾಜಕೀಯ ಗೊಂದಲದ ಅಂತಿಮ ಪರಿಣಾಮವಿದು. ಜಾತಿವಿನಾಶದ ಗುರಿ ಕಳೆದುಕೊಂಡ ಈ ಚಳುವಳಿಯು ದಲಿತರ ಪರವಾದ ಜಾತಿ ರಾಜಕಾರಣ ಮಾಡಹೊರಟ ಸಂಕುಚಿತ ತಾತ್ವಿಕತೆಯೊಳಗೆ ದಲಿತ ಜಾತೀಯತೆ ಸಹಜವಾಗಿಯೇ ಹುಟ್ಟುಹಾಕಿದ ಉಪಜಾತೀಯತೆ ಕೂಡ ಇರಬೇಕಾದದ್ದು ಅನಿವಾರ್ಯವೇ ಆಗಿತ್ತೇನೊ!

ಇಪ್ಪತ್ತೈದು ವರ್ಷಗಳ ಹಿಂದೆ ದೇವನೂರರನ್ನಾಗಲೀ, ಕೃಷ್ಣಪ್ಪನವರನ್ನಾಗಲೀ ನಾವ್ಯಾರೂ ಎಡಗೈ ಬಲಗೈ ಎಂಬುದಿರಲಿ, ದಲಿತರೆಂದೂ ಗುರುತಿಸುತ್ತಿರಲಿಲ್ಲ. ಅವರು ಅದನ್ನೆಲ್ಲ ಮೀರಿದವರೆಂದೇ ಅವರೊಂದಿಗೆ ನಾವು ಯಾವ ಭಿಡೆಯೂ ಇಲ್ಲದೆ

ಒಡನಾಡಿದೆವು. ಆದರೆ ಇಂದು ಕೃಷ್ಣಪ್ಪನವರ ಸ್ಮಾರಕ ಭವನ ಉದ್ಘಾಟನೆ ಮಾಡುವ ಹೊತ್ತಿನಲ್ಲಿ ಹೊರಡಿಸಿದ ಜಾಹೀರಾತಿನಲ್ಲಿ ರಾಜ್ಯ ಸರ್ಕಾರ ತನ್ನ ರಾಜಕೀಯ ಉದ್ದೇಶಕ್ಕಾಗಿ ಜಗಜೀವನರಾಂ ಚಿತ್ರವನ್ನೂ ಹಾಕಿ ಕೃಷ್ಣಪ್ಪನವರನ್ನು ಮಾದಿಗರು ಎಂದು ನಿರ್ದಿಷ್ಟವಾಗಿ ಗುರುತಿಸುವ ಪ್ರಯತ್ನ ಮಾಡಿದೆ. ಈ ಸ್ಮಾರಕ ಭವನದ ಸನಿಹದಲ್ಲೇ ಇರುವ ಕೃಷ್ಣಪ್ಪನವರ ಸಮಾಧಿಯಲ್ಲಿರಬಹುದಾದ ಅವರ ಆತ್ಮ ಇದರಿಂದಾಗಿ ವಿಲವಿಲ ಒದ್ದಾಡಿದ್ದರೆ ಆಶ್ಚರ್ಯವಿಲ್ಲ.

ಅಂದಹಾಗೆ, ಜಗಜೀವನರಾಂ ಅವರು ದಲಿತ ನಾಯಕರಾಗಿದ್ದು ಯಾವಾಗಿನಿಂದ? ಬದುಕಿದ್ದಾಗಲಂತೂ ಅಲ್ಲ. ನಿಧನರಾದಾಗಲೂ ಅಲ್ಲ. ಕಾನ್ಶೀರಾಂ ಉತ್ತರಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ಮಾಯಾವತಿ ಉತ್ತರ ಭಾರತದಲ್ಲಿ ದಲಿತ ರಾಜಕಾರಣವನ್ನು ಜಾಟವ್ ರಾಜಕಾರಣ ಮಾಡಿದಾಗ ಭಾರತದಾದ್ಯಂತ ಸಾಂಕ್ರಾಮಿಕವಾಗಿ ಹರಡಿದ ದಲಿತ ಉಪಜಾತಿ ರಾಜಕಾರಣ ಕರ್ನಾಟಕವನ್ನೂ ಪ್ರವೇಶಿಸಿ, ಇಲ್ಲಿನ ದಲಿತ ಚಳುವಳಿಯನ್ನು ಎಡಗೈ-ಬಲಗೈ ಎಂದು ಒಡೆದಾಗ ಆ ಒಡಕಿನಲ್ಲಿ ಉದ್ಭವವಾದದ್ದು ಜಗಜೀವನರಾಂ ಎಂಬ ಉತ್ಸವಮೂರ್ತಿ! ಈ ದಲಿತ ಉಪಜಾತಿ ರಾಜಕಾರಣ, ಕೃಷ್ಣಪ್ಪನವರನ್ನು ಮರಣೋತ್ತರವಾಗಿ ಬಲಿತೆಗೆದುಕೊಂಡಿರುವುದು ಕರ್ನಾಟಕದ ದಲಿತ ಚಳುವಳಿಯ ಇತಿಹಾಸ ಕಾಣುತ್ತಿರುವ ದೊಡ್ಡ ದುರಂತವಾಗಿದೆ.

(ಫೇಸ್‌ಬುಕ್: ಅಕ್ಟೋಬರ್ ೧, ೨೦೧೭ ಮತ್ತು 'ಭೀಮರಥ' ಪತ್ರಿಕೆ : ಅಕ್ಟೋಬರ್ ೧೩, ೨೦೧೭)

ರಾಜಶೇಖರ ಕೋಟಿ ಎಂಬ ಪವಾಡ

ನಾನು ರಾಜಶೇಖರ ಕೋಟಿಯವರನ್ನು ನೋಡುವ ಮುನ್ನ ನೋಡಿದ್ದು ಅವರ ಪತ್ರಿಕೆ 'ಆಂದೋಲನ'ವನ್ನು. ಅದು ೧೯೭೫-೭೬ರ ಸಮಯ. ರಾಷ್ಟ್ರಾದ್ಯಂತ ತುರ್ತು ಪರಿಸ್ಥಿತಿ ಜಾರಿಯಲ್ಲಿತ್ತು. ಪತ್ರಿಕೆಗಳನ್ನು ಪೂರ್ವ ಪರೀಕ್ಷೆಗಳಿಗೆ ಒಳಪಡಿಸಿಯೇ ಪ್ರಕಟಿಸಬೇಕಾಗುತ್ತಿತ್ತು. ನಾನಾಗ ದೆಹಲಿಯ ಆಕಾಶವಾಣಿಯ ಕನ್ನಡ ಸುದ್ದಿ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೆ. ಅಂತಹ ಕಾಲಮಾನದ ಒಂದು ದಿನ 'ಆಂದೋಲನ' ನನ್ನ ಕಾರ್ಯಾಲಯದ ವಿಳಾಸಕ್ಕೆ ತಲುಪಿತು. ತೆಗೆದು ಅದರ ಲೇಖನಗಳ ಮೇಲೆ ಕಣ್ಣಾಡಿಸುತ್ತಿದ್ದಂತೆ ಒಂಚೂರು ಗಾಬರಿಯೂ ಆಯಿತೆಂದು ಹೇಳಬೇಕು. ಇಂದಿರಾಗಾಂಧಿಯವರ ಆ ಅವಧಿಯ ಸರ್ವಾಧಿಕಾರಿ ಪ್ರಭುತ್ವದ ವಿರುದ್ಧವಿದ್ದವರೆಂದು ನಾನು ಕೇಳಿದ್ದ ಕರ್ನಾಟಕದ ನಾಲ್ಕಾರು ಮುಖ್ಯ ವ್ಯಕ್ತಿಗಳ ಬರಹಗಳು ಅಲ್ಲಿದ್ದವು: ಪ್ರೊ. ಎಂ.ಡಿ. ನಂಜುಂಡಸ್ವಾಮಿ, ಲಂಕೇಶ್, ದೇವನೂರ ಮಹಾದೇವ ಇತ್ಯಾದಿ. ಜೊತೆಗೆ ಪ್ರಭುತ್ವಕ್ಕೆ ಕಸಿವಿಸಿಯನ್ನುಂಟು ಮಾಡಬಹುದಾದ ಕೆಲ ಸಮಾಜವಾದಿ ಚಟುವಟಿಕೆಗಳ ಸುದ್ದಿಗಳು. ನಾನು ಕುತೂಹಲದಿಂದ ಪತ್ರಿಕೆಯನ್ನು ನನ್ನ ಒಂದಿಬ್ಬರು ಹಿರಿಯ ಸಹೋದ್ಯೋಗಿಗಳಿಗೆ ತೋರಿಸಿದೆ. ಅವರು ಒಮ್ಮೆ ಕಣ್ಣಾಡಿಸಿ ಸದ್ಯಕ್ಕೆ ಈ ಪತ್ರಿಕೆಯೊಂದಿಗೆ ಸಂಪರ್ಕವಿರಿಸಿಕೊಳ್ಳುವುದು ಒಳ್ಳೆಯದಲ್ಲವೆಂದು ನನಗೆ ಸಲಹೆ ಮಾಡಿದರು.

ಈ ವಾರಪತ್ರಿಕೆಯನ್ನು (ಅದು ಪ್ರತಿವಾರವೇನೂ ಪ್ರಕಟವಾಗುತ್ತಿರಲಿಲ್ಲವೆಂಬುದು ಬೇರೆ ಮಾತು!) ಯಾರ ಶಿಫಾರ್ಸಿನ ಮೇಲೆ ನನಗೆ ಕಳಿಸಲಾಗಿತ್ತೋ ನನಗೆ ತಿಳಿಯದು. ಏಕೆಂದರೆ ನಾನಾಗ ಕರ್ನಾಟಕದ ಲೇಖಕರ ವಲಯದಲ್ಲಾಗಲೀ, ರಾಜಕೀಯ ವಲಯದಲ್ಲಾಗಲೀ ಕಿಂಚಿತ್ತೂ ಪರಿಚಿತನಾಗಿರಲಿಲ್ಲ. ಆದರೆ ಆ ಹೊತ್ತಿಗೆ 'ಕಸ್ತೂರಿ'ಯಲ್ಲಿ ನಾನು ಲೋಹಿಯಾ ಬಗ್ಗೆ ಬರೆದ ಲೇಖನವೊಂದಕ್ಕೆ ಆ ಪತ್ರಿಕೆಯಲ್ಲಿ ಕೆಲವು ಪ್ರತಿಕ್ರಿಯೆಗಳನ್ನು ನೋಡಿದ್ದೆ. ಅವರಲ್ಲಿ ಯಾರಾದರೂ ನನ್ನ ವಿಳಾಸ ಪತ್ತೆ ಹಚ್ಚಿ ಪತ್ರಿಕೆ ಕಳಿಸಿರಬಹುದೆಂದು ಊಹಿಸಿದೆ. ಅದೇನೇ ಇರಲಿ, ಆ

ಹೊತ್ತಿಗೆ ನಾನು ಹೇಗೋ ದೆಹಲಿಯಲ್ಲಿ ಕೆಲವು ಸಮಾನ ಮನಸ್ಕ ಗೆಳೆಯರ ಗುಂಪಿನ ಸದಸ್ಯನಾಗಿ ನಮ್ಮದೇ ರೀತಿಯಲ್ಲಿ ತುರ್ತು ಪರಿಸ್ಥಿತಿ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದೆ, ಜವಾಹರಲಾಲ್ ನೆಹ್ರೂ ವಿಶ್ವವಿದ್ಯಾಲಯದಲ್ಲಿದ್ದ ಸಮಾಜವಾದಿ ವಿದ್ಯಾರ್ಥಿಗಳ ಗುಂಪು ಇಂತಹ ಚಟುವಟಿಕೆಗಳಲ್ಲಿ ಸಕ್ರಿಯವಾಗಿತ್ತು. ಆ ಗುಂಪಿಗೆ ಆಗ ಭೂಗತರಾಗಿದ್ದ ಜಾರ್ಜ್ ಫರ್ನಾಂಡೀಸ್, ಕಿಷನ್ ಪಟ್ನಾಯಕ್ ಸೇರಿದಂತೆ ಹಲವು ಹಿರಿ ಕಿರಿಯ ನಾಯಕರ ಸಂಪರ್ಕವಿದ್ದು ಈ ನಾಯಕರುಗಳ ಹೆಸರಿನ ಕರಪತ್ರಗಳ ಮುದ್ರಣ ಮತ್ತು ವಿತರಣೆಯ ಗುಪ್ತ ಚಟುವಟಿಕೆಗಳಲ್ಲಿ ಅವರೆಲ್ಲ ತೊಡಗಿದ್ದರು. ಈ ಹಿನ್ನೆಲೆಯಿಂದಾಗಿ 'ಆಂದೋಲನ' ನನ್ನಲ್ಲಿ ಹೆಚ್ಚಿನ ಕುತೂಹಲವನ್ನೂ, ಹುರುಪನ್ನೂ ಹುಟ್ಟಿಸಿತು. ಹಾಗಾಗಿ ಏನಾದರಾಗಲೀ ಎಂದು ನಾನು ಅದರ ಸಂಪಾದಕರಾದ ರಾಜಶೇಖರ ಕೋಟಿಯವರಿಗೆ ಒಂದು ಪತ್ರ ಬರೆದು ಪತ್ರಿಕೆಯ ಬಗ್ಗೆ ನನ್ನ ಮೆಚ್ಚುಗೆ ತಿಳಿಸಿದೆ.

ಒಂದು ವಾರದಲ್ಲೇ ಕೋಟಿಯವರಿಂದ ಉತ್ತರ ಬಂತು. ಅದರಲ್ಲಿ ಸಂಕ್ಷಿಪ್ತವಾಗಿ ಪತ್ರಿಕೆಯ ಹಿನ್ನೆಲೆಯನ್ನು ತಿಳಿಸಲಾಗಿತ್ತು. ಧಾರವಾಡದಲ್ಲಿ ಪತ್ರಿಕೆ ನಡೆಸುತ್ತಿದ್ದ ರಾಜಶೇಖರ ಕೋಟಿಯವರನ್ನು ಪೂರ್ಣಚಂದ್ರ ತೇಜಸ್ವಿ, ನಂಜುಂಡಸ್ವಾಮಿ ಮುಂತಾದ 'ಸಮಾಜವಾದಿ ಯುವಜನ ಸಭಾ'ದ ನಾಯಕರು ಮೈಸೂರಿಗೆ ಕರೆ ತಂದು ಅವರ 'ಆಂದೋಲನ' ಪತ್ರಿಕೆಯನ್ನು 'ಸಮಾಜವಾದಿ ಯುವಜನ ಸಭಾ'ದ ಮುಖವಾಣಿಯಾಗಿ ಸ್ಥಾಪಿಸಬಯಸಿದ್ದರು. ಆದರೆ ಅಷ್ಟರಲ್ಲಿ ತುರ್ತು ಪರಿಸ್ಥಿತಿ ಘೋಷಣೆಯಾಗಿ ಯೋಜನೆ ಅಸ್ತವ್ಯಸ್ತವಾಗಿತ್ತು. ಆದರೂ ಮೈಸೂರಿನ ಹಿರಿಕಿರಿಯ ಲೇಖಕ-ಪ್ರಗತಿಪರ-ಸಮಾಜವಾದಿಗಳು ಪತ್ರಿಕೆಗೆ ಬೆಂಬಲವಾಗಿ ನಿಂತಿದ್ದರು. ಇವರೆಲ್ಲ ಸ್ವತಃ ಬೀದಿಗಳಲ್ಲಿ ನಿಂತು ಪತ್ರಿಕೆ ಮಾರುತ್ತಿದ್ದರಂತೆ. ಕೋಟಿಯವರು ತಮ್ಮ ಪತ್ರದಲ್ಲಿ ನನಗೆ ಪತ್ರಿಕೆಗಾಗಿ ಏನಾದರೂ ಬರೆಯಲು ಹೇಳಿದ್ದರು. ಅದರ ಪ್ರಕಾರ, ನನಗೀಗ ನೆನಪಿರುವಂತೆ ಪತ್ರಿಕೆಯಲ್ಲಿ ಗಾಂಧಿ ಬಗ್ಗೆ ನಡೆದ ಚರ್ಚೆಗೆ ನಾನೊಂದು ಪ್ರತಿಕ್ರಿಯೆ ಬರೆದೆ. ಅದೇ 'ಆಂದೋಲನ'ದಲ್ಲಿ ಪ್ರಕಟವಾದ ನನ್ನ ಮೊದಲ 'ಬರಹ'. ಆನಂತರ ನಾನು ಒಂದೆರಡು ಲೇಖನಗಳನ್ನೂ, ಕಥೆಗಳನ್ನೂ ಪತ್ರಿಕೆಗಾಗಿ ಬರೆದೆ. ಕೋಟಿಯವರು ಪತ್ರಿಕೆಯನ್ನು ನಡೆಸುತ್ತಿದ್ದ ಕಷ್ಟದಲ್ಲೇ ನನ್ನ ಕಥೆಗಳಿಗೆ ಯಾರಿಂದಲೋ ಚಿತ್ರ ಬರೆಸಿ ಅವುಗಳ 'ಬ್ಲಾಕ್' ಮಾಡಿಸಿ (ಅದು ಚಿತ್ರ ಮುದ್ರಿಸುವ ಆಗಿನ ವಿಧಾನ) ಪ್ರಕಟಿಸಿದ್ದರು. ಇದು ನನ್ನ ಕಥೆಗಳಿಗೆ ಪತ್ರಿಕೆಯಲ್ಲಿ ಸಂದ ವಿಶೇಷ ಮರ್ಯಾದೆ! (ಈಗ ಆ ಯಾವ 'ಕಥೆ'ಗಳೂ ನನ್ನ ಬಳಿ ಇಲ್ಲ!)

ಹೀಗೆ 'ಆಂದೋಲನ'ದೊಂದಿಗೆ ಬೆಳೆದ ನನ್ನ ಆತ್ಮೀಯ ಸಂಬಂಧ ಒಮ್ಮೆ ನಾನು ದೆಹಲಿಯಿಂದ ಬೆಂಗಳೂರಿಗೆ ಬಂದಾಗ ಮೈಸೂರಿಗೂ ಹೋಗಿ 'ಆಂದೋಲನ' ಬಳಗವನ್ನೊಮ್ಮೆ ಕಂಡು ಮಾತಾಡಿಸಿ ಬರಲು ಪ್ರೇರೇಪಿಸಿತು. ಹಾಗೆ ಬಹುಶಃ ೧೯೭೬ರ ಕೊನೆಯಲ್ಲಿ ನಾನು ಮೈಸೂರಿಗೆ ಬಂದೆ. ಆಗ 'ಆಂದೋಲನ' ಮುದ್ರಣಾಲಯ

ಸರಸ್ವತಿಪುರಂನ ಕಾಂತರಾಜೇ ಅರಸ್ ರಸ್ತೆಯ ಅಂಗಡಿಸಾಲಿನಲ್ಲಿ ಇತ್ತು. ಅಲ್ಲಿ ನನಗೆ ಮೊದಲು ಎದ್ದು ಕಂಡದ್ದು ಕೋಟು ಧರಿಸಿ ಕುರ್ಚಿಯೊಂದರಲ್ಲಿ ನಗುಮೊಗದೊಂದಿಗೆ ಆಸೀನರಾಗಿದ್ದ ಕನ್ನಡ ಉಪನ್ಯಾಸಕರೂ ಮತ್ತು ಹೆಸರಾಂತ ಪುಸ್ತಕ ಪ್ರಕಾಶಕರೂ ಆಗಿದ್ದ ನೆಲಮನೆ ದೇವೇಗೌಡರು. ಅವರೊಂದಿಗೆ ಮಾತಾಡುತ್ತಿದ್ದುದನ್ನು ಕೇಳಿ ನನ್ನ ಬಳಿ ಬಂದು ಪರಿಚಯ ಮಾಡಿಕೊಂಡವರೇ, ಅಲ್ಲೇ ನಿಂತು ಮೈಕೈಯನ್ನೆಲ್ಲ ಮಸಿ ಮಾಡಿಕೊಂಡು ಅಚ್ಚಿಗೆ ಮೊಳೆ ಜೋಡಿಸುತ್ತಿದ್ದ ರಾಜಶೇಖರ ಕೋಟಿಯವರು. ನನ್ನ ಮೆಚ್ಚಿನ ಪತ್ರಿಕೆಯ ಸಂಪಾದಕರನ್ನು ಈ 'ಸ್ಥಿತಿ'ಯಲ್ಲಿ ನೋಡಿ ಗಾಬರಿಯಾದ ನನ್ನ ಸ್ಥಿತಿ ಕಂಡು ನಸುನಕ್ಕ ಕೋಟಿಯವರು 'ಬಂದೆ' ಎಂದು ಹೊರಹೋಗಿ ಹತ್ತು-ಹದಿನೈದು ನಿಮಿಷಗಳಲ್ಲಿ 'ಸ್ವಚ್ಛ'ವಾಗಿ ಹಿಂತಿರುಗಿದರು. ಕೋಟಿ ಸನಿಹದ ಕನ್ನೇಗೌಡನ ಕೊಪ್ಪಲಿನಲ್ಲಿ ಪತ್ರಿಕೆಯ ಸಹಾಯಕ ಸಂಪಾದಕ ಎಂ.ಆರ್. ಶಿವಣ್ಣನವರೊಡನೆ (ಇವರು ಈಗ ದಿವಂಗತರು) ಸಣ್ಣದೊಂದು ಮನೆಯನ್ನೋ ಕೊಠಡಿಯೊಂದನ್ನೋ ಮಾಡಿಕೊಂಡು ವಾಸವಾಗಿದ್ದಾರೆಂದು ಆ ಹೊತ್ತಿಗೆ ದೇವೇಗೌಡರು ನನಗೆ ತಿಳಿಸಿದ್ದರು. ಜೊತೆಗೆ ಪತ್ರಿಕೆಯ ಆರ್ಥಿಕ ಬಡತನದ ಬಗ್ಗೆಯೂ ಅವರು ಹೇಳಿದ್ದರು. ಇಂತಹ ನಾಜೂಕಿನ ಆರ್ಥಿಕ ಮತ್ತು ರಾಜಕೀಯ ಸ್ಥಿತಿಯಲ್ಲೂ ಪತ್ರಿಕೆಯನ್ನು ಕುತೂಹಲದ ಓದನ್ನು ಆಹ್ವಾನಿಸುವಂತೆ ಅಚ್ಚುಕಟ್ಟಾಗಿ ಹೊರತರುತ್ತಿದ್ದ ಕೋಟಿಯವರ ವೃತ್ತಿಶೀಲತೆ ಮತ್ತು ಸಮಾಜವಾದಿ ಬದ್ಧತೆಗಳ ಬಗ್ಗೆ ನನಗೆ ಮೆಚ್ಚುಗೆ ಮೂಡಿತು. ನಂತರ ಕೋಟಿಯವರೊಂದಿಗೆ ನಡೆದ ಮಾತುಕತೆಯಲ್ಲಿ ಅವರ ಸಂಭಾವಿತತನ, ಸೌಜನ್ಯಗಳು ಎದ್ದು ಕಂಡವು. ಆ ನಿತ್ಯ ಸಂಕಷ್ಟಗಳ ದಿನಗಳಲ್ಲೂ ಸದಾ ಹಸನ್ಮುಖಿಯಾಗೇ ಇರುತ್ತಿದ್ದ ಅವರು ನನ್ನ ಗಮನ ಸೆಳೆದರು.

ಅಂದು ಸಂಜೆಯ ಹೊತ್ತಿಗೆ ನಾನು ದೆಹಲಿಯಿಂದ ಬಂದಿರುವ ಸುದ್ದಿ 'ಆಂದೋಲನ'ದ ಮಿತ್ರರಿಗೆಲ್ಲ ತಲುಪಿ ಒಂದು ಸಮಾಜವಾದಿ ದಂಡೇ ಅಲ್ಲಿ ನೆರೆಯಿತು. ಪ್ರೊ. ನಂಜುಂಡಸ್ವಾಮಿ, ಕಾಳೇಗೌಡ ನಾಗವಾರ, ಕೆ. ರಾಮದಾಸ್, ಬಿ.ಎನ್ ಶ್ರೀರಾಮ್, ಪ. ಮಲ್ಲೇಶ್, ಎಚ್. ಗೋವಿಂದಯ್ಯ, ಅನಂತರಂಗಾಚಾರ್, ಶಿವರಾಮು ಕಾಡನಕುಪ್ಪೆ, ಹೊರೆಯಾಲ ದೊರೆಸ್ವಾಮಿ, ನೆಲಮನೆ ದೇವೇಗೌಡ, ವೈ. ಮಹೇಶ, ಶಿವತೀರ್ಥನ್ ಮುಂತಾದರು ಅಲ್ಲಿ ಸೇರಿದ್ದರು. ಈ ಮಧ್ಯೆ 'ದ್ಯಾವನೂರು' ಕಥಾ ಸಂಕಲನದ ಮೂಲಕ ನನ್ನಲ್ಲಿ ತೀವ್ರ ಆಸಕ್ತಿ ಕೆರಳಿಸಿದ್ದ ದೇವನೂರ ಮಹಾದೇವ ಅವರನ್ನು ಹುಡುಕಿಹೊರಟು ದಾರಿ ಮಧ್ಯದಲ್ಲಿ ಅವರು ಸಿಕ್ಕಿ ಪರಿಚಯವಾಗಿತ್ತು. ಹೀಗೆ ಕೋಟಿಯವರನ್ನು ಕಾಣಲು ಬಂದ ನನಗೆ ಅಂದು ಮೈಸೂರಿನ ಇಡೀ ಸಮಾಜವಾದಿ ಬಳಗವೇ ಪರಿಚಯವಾಗಿತ್ತು. ಆ ಪರಿಚಯದ ಮಾತುಕತೆಗಳಲ್ಲಿ ನನಗೆ ಗೊತ್ತಾದದ್ದು, 'ಆಂದೋಲನ' ಪತ್ರಿಕೆ ಮತ್ತು 'ನೆಲಮನೆ ಪ್ರಕಾಶನ' ಸಹಭಾಗಿತ್ವದಲ್ಲಿ ಒಂದೇ ಸಾಹಸವಾಗಿ ನಡೆಯುತ್ತಿದ್ದು ಇದರ ಹಿಂದೆ ಇದ್ದ ಮೂವರು ಪ್ರಮುಖರೆಂದರೆ, ದೇವನೂರ ಮಹಾದೇವ, ನೆಲಮನೆ ದೇವೇಗೌಡ ಮತ್ತು ರಾಜಶೇಖರ ಕೋಟಿ. ಈ

ಭೇಟಿಯ ಸಮಯದಲ್ಲೇ 'ಭೂಗತ'ವಾಗಿ ಸುತ್ತಾಡುತ್ತಿದ್ದ ಜಯಪ್ರಕಾಶ್ ನಾರಾಯಣ್ ಅವರ 'ಸೆರೆಮನೆಯ ದಿನಚರಿ'ಯ ಒಂದು ಪ್ರತಿ ಹೇಗೋ ನನಗೆ ದೊರೆತಿದ್ದು, ಅದನ್ನು ನಾನು ಕನ್ನಡಕ್ಕೆ ಅನುವಾದಿಸುತ್ತಿರುವ ಪ್ರಸ್ತಾಪ ಮಾಡಿದ್ದು. ಅದು ನಂತರ ೧೯೭೭ರಲ್ಲಿ ನೆಲಮನೆ ಪ್ರಕಾಶನದಿಂದ ಪ್ರಕಾಶಿತವಾಗಿ ಮೂರು ಮುದ್ರಣಗಳನ್ನು ಕಂಡಿತು.

ಈ ಮೊದಲ ಭೇಟಿಯ ನಂತರ ನಾನು ಹಲವು ಬಾರಿ ಮೈಸೂರಿಗೆ ಬಂದು ಹೋದೆ. ಆದರೆ ಒಂದೆರಡು ಭೇಟಿಗಳ ನಂತರ ಏಕೋ ರಾಜಶೇಖರ ಕೋಟಿಯವರು ಈ ಸಮಾಜವಾದಿ ಗುಂಪಿನಲ್ಲಿ ಕಾಣಸಿಗಲಿಲ್ಲ. ಪತ್ರಿಕೆ ಕಷ್ಟದಲ್ಲಿದ್ದು ತುಂಬಾ ಅನಿಯಮಿತವಾಗಿದೆ ಎಂದೂ ಕೋಟಿಯವರು ಮೈಸೂರಿನಲ್ಲಿಯೇ ಬೇರೆ ಕಡೆ ಎಲ್ಲಿಯೋ ಇದ್ದಾರೆಂದೂ ನೆಲಮನೆ ದೇವೇಗೌಡರು ತಿಳಿಸಿದರು. ಆದರೆ ಈ ಬೆಳವಣಿಗೆಗೆ ಕಾರಣವೇನೆಂದು ಅವರು ಸ್ಪಷ್ಟವಾಗಿ ಹೇಳಲಿಲ್ಲ. ಪತ್ರಿಕೆಗೆ ಸಹಾಯಕರಾಗಿದ್ದ ಎಂ.ಆರ್. ಶಿವಣ್ಣ ಈಗ ನೆಲಮನೆ ಪ್ರಕಾಶನದಲ್ಲಿ ಸಹಾಯಕರಾಗಿದ್ದರು. ಆದರೆ ಇಂತಹ ಒಂದು ಭೇಟಿಯ ಸಂದರ್ಭದಲ್ಲಿನ ಸಭೆಯೊಂದರಲ್ಲಿ ಕೋಟಿಯವರನ್ನು ಒಮ್ಮೆ ಕಂಡ ನೆನಪು. ಅವರೀಗ ಹಸನ್ಮುಖಿಯಾಗೇನೂ ಕಾಣಲಿಲ್ಲ. ಮುಖ ಮಾಸಿತ್ತು. ಅವರ ಚೈತನ್ಯ ಕುಸಿದಂತಿತ್ತು. ಅವರೊಡನೆ ಮಾತಾಡಬೇಕೆನಿಸುವಷ್ಟರಲ್ಲಿ ಅವರು ಗುಂಪಿನಿಂದ ಮಾಯವಾಗಿದ್ದರು. ಕೋಟಿ ಈಗ ಈ ಗುಂಪಿನಲ್ಲಿಲ್ಲವೇನೋ ಎಂಬ ಅನುಮಾನ ಆಗಲೇ ನನ್ನಲ್ಲಿ ಹುಟ್ಟಿದ್ದು. ಕೆಲವು ಗೆಳೆಯರೂ ನಂತರ ಈ ಬಗ್ಗೆ ನನಗೆ ಪರೋಕ್ಷ ಸೂಚನೆ ನೀಡಿದರು.

ಆ ಹೊತ್ತಿಗೆ ಸಮಾಜವಾದಿ ಪಕ್ಷವೆಂಬುದು ಜನತಾ ಪಕ್ಷದಲ್ಲಿ ಲೀನವಾಗಿ, ಆ ಜನತಾ ಪಕ್ಷವೂ ವಿಘಟನೆಯ ಸ್ಥಿತಿಯಲ್ಲಿದ್ದಾಗ ನಾನು ಬಹು ಉತ್ಸಾಹಿತನಾಗಿ (ಇದರ ಹಿಂದೆ, ಆಗ ನನಗೆ ಆಪ್ತರಾಗಿದ್ದ ಕಿಷನ್ ಪಟ್ನಾಯಕ್, ಪ್ರೊ. ನಂಜುಂಡಸ್ವಾಮಿ ಮತ್ತು ದೇವನೂರ ಮಹಾದೇಹ ಅವರ ಪ್ರೋತ್ಸಾಹವೂ ಇತ್ತು) ದೆಹಲಿಯ ಕೆಲಸ ಬಿಟ್ಟು ಮೈಸೂರಿಗೆ ಬಂದು ಸಮಾಜವಾದಿ ಗೆಳೆಯರನ್ನು ಸಂಘಟಿಸಿ ಸಮಾಜವಾದಿ ಕೆಲಸಗಳಲ್ಲಿ ತೊಡಗಬೇಕೆಂಬ ಪ್ರಸ್ತಾಪವೂ ಗೆಳೆಯರ ಮಧ್ಯೆ ಚರ್ಚೆಗೆ ಬಂದಿತ್ತು. (ಇದನ್ನೆಲ್ಲ ಈಗ ನೆನೆದರೆ ಅರ್ಧ ಭಯವೂ ಅರ್ಧ ನಗುವೂ ಬರುತ್ತದೆ!) ಇದರ ಭಾಗವಾಗಿ 'ಆಂದೋಲನ'ದ ಜವಾಬ್ದಾರಿಯನ್ನು ನನಗೆ ವಹಿಸುವ ಪ್ರಸ್ತಾಪವೂ ಇತ್ತು. ದೇವನೂರ ಮಹಾದೇವ ಈ ಬಗ್ಗೆ ಒಂದೆರಡು ಬಾರಿ ಕೋಟಿಯವರೊಂದಿಗೆ ಮಾತಾಡಿದ ನೆನಪೂ ಇದೆ. ಆದರೆ ಕೋಟಿ 'ಆಂದೋಲನ'ದ ಜವಾಬ್ದಾರಿಯನ್ನು ಯಾವುದೇ ಕಾರಣಕ್ಕೂ ಬಿಟ್ಟುಕೊಡಲು ಸಿದ್ಧರಿಲ್ಲವೆಂದು ಗೊತ್ತಾಯಿತು. ನಾನೂ ಸುಮ್ಮನಾದೆ. ಆದರೆ ಪ್ರಕಟಣೆ ನಿಲ್ಲಿಸಿದ್ದ ಸಮಾಜವಾದಿ ನಿಯತಕಾಲಿಕ 'ಮಾನವ'ದ ಪುನರುಜ್ಜೀವನದ ಕಡೆ ಗಮನ ಹರಿಸಿದೆ. ಅದು ೧೯೭೮ ಇರಬಹುದು. ನಾನು ದೆಹಲಿಯಲ್ಲಿದ್ದುಕೊಂಡೇ ಅದರ ಸಂಪಾದನೆ ಮಾಡುತ್ತಿದ್ದೆ, ದೇವನೂರ ಮಹದೇವ ಮತ್ತು ಪ್ರೊ. ಎಂ.ಡಿ. ನಂಜುಂಡಸ್ವಾಮಿ ಅದರ ಸಲಹಾಗಾರರಾಗಿದ್ದರೆ ನೆಲಮನೆ

ದೇವೇಗೌಡರು ಅದರ ಪ್ರಕಾಶಕರು. ಎಂ.ಆರ್. ಶಿವಣ್ಣ ಅದರ ಸಹಾಯಕ ಸಂಪಾದಕರು. ಈ ಪತ್ರಿಕೆ ಒಂದು ವರ್ಷ ನಡೆದು 'ಲಂಕೇಶ್ ಪತ್ರಿಕೆ' ಆರಂಭವಾದ ಮೇಲೆ ಈ ಬಗ್ಗೆ ಉತ್ಸಾಹ ಕುಗ್ಗಿ ಅದು ಕಣ್ಮುಚ್ಚಿತು. ಆದರೆ 'ಆಂದೋಲನ' ಈ ಸಮಯದಲ್ಲಿ ಏನಾಗಿತ್ತು ಎಂದು ನನಗೆ ಗೊತ್ತಾಗಲಿಲ್ಲ. ನನಗೂ ಈ ಸಂದರ್ಭದಲ್ಲಿ ನನ್ನ ಸಮಾಜವಾದಿ ಮಿತ್ರರ ಕೆಲ ವರ್ತನೆಗಳು ಬೇಸರ ಹುಟ್ಟಿಸಿ ನಾನೂ ಮೈಸೂರಿಗೆ ಬರುವುದನ್ನು ನಿಲ್ಲಿಸಿದ್ದೆ.

* * *

ಮತ್ತೆ ನಾನು ಮೈಸೂರಿನ ಗೆಳೆಯರ ಸಂಪರ್ಕಕ್ಕೆ ಬಂದದ್ದು, ದಲಿತ ಸಂಘರ್ಷ ಸಮಿತಿ ಮತ್ತು ರೈತ ಸಂಘಗಳು ದೊಡ್ಡ ಚಳುವಳಿಗಳಾಗಿ ಬೆಳೆದು ಎರಡೂ ಸೇರಿ ಒಂದು ಪರ್ಯಾಯ ರಾಜಕೀಯ ಶಕ್ತಿಯಾಗಿ ಹೊರಹೊಮ್ಮುವ ಚರ್ಚೆಗಳು ನಡೆದಿದ್ದಾಗ. ನಾನಾಗ ದೆಹಲಿಯಿಂದ ಕರ್ನಾಟಕದ ಆಕಾಶವಾಣಿ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುವ ಹುದ್ದೆಯಲ್ಲಿದ್ದೆ. ಅದು ಎಂಬತ್ತರ ದಶಕದ ಆರಂಭದ ವರ್ಷಗಳು. ರಾಜ್ಯದಲ್ಲಿ ಜನತಾ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಿತ್ತು. ಕೆಲವು ಸಮಾಜವಾದಿಗಳು ಮತ್ತು ಅವರ ಮಿತ್ರರು ಅಧಿಕಾರ ಅಥವಾ ಅದರ ಪ್ರಭಾವ ವಲಯದಲ್ಲಿದ್ದರು. ನಾನು ಆಗ ದಲಿತ ಸಂಘದ ಮುಖವಾಣಿಯಾಗಿದ್ದ 'ಪಂಚಮ'ವು ದಲಿತ ಮತ್ತು ರೈತ ಚಳುವಳಿಗಳನ್ನು ಒಗ್ಗೂಡಿಸುವ ಪ್ರಯತ್ನವಾಗಿ ದೇವನೂರ ಮಹಾದೇವ ಅವರ ಮಾರ್ಗದರ್ಶನದಲ್ಲಿ ಹೊರತರಲಿದ್ದ 'ದ + ರೈ' ವಿಶೇಷ ಸಂಚಿಕೆಗಾಗಿ ಕೆಲಸ ಮಾಡಲು ಎರಡು ವಾರ ಮೈಸೂರಿಗೆ ಬಂದಿದ್ದೆ. ಕನ್ನೇಗೌಡನ ಕೊಪ್ಪಲಿನಲ್ಲಿದ್ದ ನೆಲೆಮನೆ ಪ್ರಕಾಶನದ ಮನೆಯಲ್ಲಿ ನನ್ನ ವಸತಿ. ಎಚ್. ಗೋವಿಂದಯ್ಯ ಈ ಕೆಲಸದಲ್ಲಿ ನನ್ನ ಸಹವರ್ತಿ. ಆ ಸಮಯದಲ್ಲಿ, 'ಆಂದೋಲನ' ನಿಧಾನವಾಗಿ ಪ್ರವರ್ಧಮಾನಕ್ಕೆ ಬರುತ್ತಿದ್ದು ರಾಜಶೇಖರ ಕೋಟಿಯವರು ಅದಕ್ಕಾಗಿ ಅಹಿರ್ನಿಶಿ ದುಡಿಯುತ್ತಿದ್ದಾರೆಂದು ನನಗೆ ತಿಳಿದು ಬಂತು. ಆ ಹೊತ್ತಿಗೆ ಅವರು ವಿವಾಹಿತರಾಗಿದ್ದರು ಮತ್ತು ಅವರ ಪತ್ನಿ ಉದ್ಯೋಗಸ್ಥೆಯಾಗಿದ್ದುದರಿಂದ ಕೋಟಿ ಆರ್ಥಿಕವಾಗಿ ಸ್ವಲ್ಪ ನೆಮ್ಮದಿಯಿಂದಿದ್ದಾರೆಂದೂ ತಿಳಿಯಿತು. ಆಗ ನನಗೆ ಗೊತ್ತಿದ್ದ ಯಾವ ಸಮಾಜವಾದಿ ಮಿತ್ರರೂ (ಬಹುಶಃ ದೇವನೂರರ ಹೊರತಾಗಿ; ಏಕೆಂದರೆ ಕೋಟಿಯವರ ವಿವಾಹ ನಡೆದದ್ದು ಇವರ ನೇತೃತ್ವದಲ್ಲೇ ಎಂದು ನಂತರ ತಿಳಿಯಿತು) ಕೋಟಿಯವರ ನಿಕಟ ಸಂಪರ್ಕದಲ್ಲಿ ಇಲ್ಲದಿದ್ದುದರಿಂದ ನಾನೂ ಅವರನ್ನು ಭೇಟಿಯಾಗುವ ಸಂದರ್ಭ ಒದಗಿ ಬರಲಿಲ್ಲ.

ನಂತರದ ವರ್ಷಗಳಲ್ಲಿ ರೈತ–ದಲಿತ–ಸಮಾಜವಾದಿ ಚಳುವಳಿಗಳು ದಿಕ್ಕೆಡತೊಡಗಿ ನಾನೂ ನನ್ನ ವೃತ್ತಿಜೀವನದ ಹಲವು ಕೋಟಲೆಗಳಲ್ಲಿ ವ್ಯಸ್ತನಾಗಿದ್ದರಿಂದ ಮೈಸೂರಿನ ಕಡೆ ಬಹಳ ವರ್ಷ ಬರಲಿಲ್ಲ. ಆದರೆ ನಾನು ಹಾಸನದಲ್ಲಿದ್ದಾಗ ಅಲ್ಲಿನ 'ಜನತಾ ಮಾಧ್ಯಮ'ದ ಸಮಾಜವಾದಿ ಮಿತ್ರರಾದ ಆರ್.ಪಿ. ವೆಂಕಟೇಶ ಮೂರ್ತಿ ಮತ್ತು ಮಂಜುನಾಥ ದತ್ತರ ಜೋಡಿ ತೊಂಬತ್ತರ ದಶಕದ ಆರಂಭದಲ್ಲಿ ತಮ್ಮ ಮುದ್ರಣಾಲಯಕ್ಕೆ ಹೊಸ ತಂತ್ರಜ್ಞಾನದ ಮುದ್ರಣ ಯಂತ್ರವೊಂದನ್ನು ತರಲು ಮೈಸೂರಿಗೆ ಹೊರಟು ನನ್ನನ್ನೂ

ಜೊತೆಗೆ ಬರುವಂತೆ ಕರೆದರು. ಕಾರಣ, ಆ ಯಂತ್ರ ಕೋಟಿಯವರ 'ಆಂದೋಲನ' ಮುದ್ರಣಾಲಯಕ್ಕೆ ಸೇರಿದ್ದಾಗಿತ್ತು. ಕೋಟಿಯವರು ತಮ್ಮ ಮುದ್ರಣಾಲಯವನ್ನು ಅತ್ಯಾಧುನೀಕರಿಸಿ ಈ ಹಳೆಯ ಮಾದರಿಯ ಯಂತ್ರವನ್ನು ಖರೀದಿಗಿಟ್ಟಿದ್ದರು. ಅಂದೇ ನಾನು ಕೋಟಿಯವರನ್ನು ಸುಮಾರು ಹತ್ತು ವರ್ಷಗಳ ನಂತರ ಮೊದಲ ಬಾರಿಗೆ ನೋಡಿದ್ದು. ನಾನು ಅಂದು ಕೋಟಿಯವರು ಕಟ್ಟಿದ್ದ 'ಸಾಮ್ರಾಜ್ಯ'ವನ್ನು ಕಂಡು ಅಕ್ಷರಶಃ ಬೆಚ್ಚಿಬಿದ್ದೆ. ಆಧುನಿಕವಾದ ಬೃಹತ್ ಆಫ್‌ಸೆಟ್ ಯಂತ್ರ ಸಂಕೀರ್ಣವಾಗಿತ್ತು ಅವರ ಪತ್ರಿಕಾಲಯ. ಆ ದೊಡ್ಡ ಕಟ್ಟಡದ ಮಹಡಿಗೆ ನನ್ನನ್ನು ಕರೆದೊಯ್ದ ಕೋಟಿಯವರು ತಾವು ದಾಸ್ತಾನು ಮಾಡಿದ್ದ 'ಮುದ್ರಣ ಕಾಗದ'ದ ರಾಶಿ ರಾಶಿಯನ್ನು ತೋರಿಸಿದರಲ್ಲದೆ, ಈ ಸಂಬಂಧ ತಾವು ಕೈಗೊಂಡ ವಿದೇಶ ಯಾತ್ರೆಗಳ ಬಗ್ಗೆಯೂ ವಿವರಿಸಿದರು. ನೆಟ್ಟ ಕಣ್ಣು ನೆಟ್ಟಂತೆ, ಬಿಟ್ಟ ಬಾಯಿ ಬಿಟ್ಟಂತೆ ನೋಡುವುದಷ್ಟೇ ನನ್ನ ಕೆಲಸವಾಗಿತ್ತು ಆಗ. ಕೋಟಿ ಆಗ ನಿಜವಾಗಿಯೂ ಕೋಟಿಯೇ–ಕೋಟ್ಯಾಧೀಶರೇ–ಆಗಿದ್ದಂತಿತ್ತು. ಒಂದು ವಿಶಾಲವಾದ ಮನೆಯನ್ನು ಕೊಂಡಿದ್ದರು. ಒಂದೋ ಎರಡೋ ಭರ್ಜರಿ ಕಾರುಗಳೂ ಇದ್ದವು.

ನಾನು ಆಗ ನೋಡುತ್ತಿದ್ದುದು ಒಂದು ಪವಾಡವೇ ಆಗಿತ್ತು. ಈ ಪವಾಡವಾದರೂ ಹೇಗೆ ಸಂಭವಿಸಿತು? ಯಾರಾರೋ ಏನೇನೋ ಅವರ ಈ ದಿಢೀರ್ ಉನ್ನತಿಗೆ ಕಾರಣಗಳನ್ನುಹೇಳಿದರು.ಕೆಲವು ನಂಬುವಂತಹವು,ಇನ್ನುಕೆಲವು ನಂಬಲಾಗದಂತಹವು. ಆದರೆ ಆಗ ನನಗನ್ನಿಸಿದ್ದು, ಕೋಟಿಯವರ ಗುರಿಯತ್ತ ಏಕೋದೃಢ ಮನಸ್ಕತೆ, ರಾಜಿ ಇಲ್ಲದ ವೃತ್ತಿಪರತೆ, ಕಠಿಣ ದುಡಿಮೆ ಮತ್ತು ಸಮಾಜವಾದಿ ತತ್ವದ ಮೂಲಕ ಅವರಲ್ಲಿ ಅಂತರ್ಗತವಾಗಿದ್ದ ಜನಪರ ಕಾಳಜಿಗಳು ಇಲ್ಲದೆ ಯಾವ ಅದೃಷ್ಟ ರಾಶಿಯೂ, ಯಾರ ರಾಜಕೀಯ ಅಥವಾ ಇತರೆ ರೀತಿಯ ನೆರವೂ ಇಷ್ಟು ದೊಡ್ಡ ಯಶಸ್ಸಿನ ಕಥೆಯನ್ನು ನಿರ್ಮಿಸಲಾರದು ಎಂದು. ಕೋಟಿಯವರೊಳಗೆ ಸುಪ್ತವಾಗಿದ್ದ ಒಬ್ಬ ದಕ್ಷ ಉದ್ಯಮಿ ಮತ್ತು ವೃತ್ತಿಪರ ಪತ್ರಕರ್ತ ಪೂರ್ಣ ಪ್ರಮಾಣದಲ್ಲಿ ಹೊರಹೊಮ್ಮಿ ಎದ್ದು ನಿಂತಿದ್ದ. ಪತ್ರಿಕೆಯನ್ನೂ ನೋಡಿದೆ. ಅದೇ ಹಳೆಯ ಅಚ್ಚುಕಟ್ಟುತನ. ಜೊತೆಗೀಗ ವ್ಯಾಪಕ ಸುದ್ದಿ ನಿರ್ವಹಣೆಯ ದಕ್ಷತೆ. ಜನಪರ ಆದ್ಯತೆಗಳಿಗೆ ಕಿಂಚಿತ್ತೂ ಚ್ಯುತಿಯಾದಂತೆ ಕಂಡು ಬರಲಿಲ್ಲ.

ನನಗೆ ತಿಳಿದಂತೆ ಕೋಟಿ ತುಂಬಾ ಒಳ್ಳೆಯ ಬರಹಗಾರರೇನಲ್ಲ. ಒಳ್ಳೆಯ ಬರಹಗಾರನಾಗಿಬಿಟ್ಟರೆ ಪತ್ರಿಕೆ ನಡೆಸಲಾಗುವುದಿಲ್ಲ ಎಂಬುದೂ ನಿಜ. ಆದರೆ ಅವರ ಸಂಪಾದಕೀಯ ದಕ್ಷತೆ ಎಣೆಯಿಲ್ಲದಂತಹದ್ದು. ಹಾಗಾಗಿಯೇ ಆ ಹೊತ್ತಿಗೆ 'ಆಂದೋಲನ' ಮೈಸೂರು ಜಿಲ್ಲೆಯ ಅತಿ ದೊಡ್ಡ ದಿನ ಪತ್ರಿಕೆಯಾಗಿ ಹೊರಹೊಮ್ಮಿತ್ತು. ಮಂಡ್ಯ ಆವೃತ್ತಿಯೂ ಆರಂಭಗೊಂಡಿತ್ತೆಂದು ಕಾಣುತ್ತದೆ. ನಾನು ಅವರನ್ನು ಮನದುಂಬಿ ಅಭಿನಂದಿಸಿದೆ. ಜೊತೆಗೆ ಒಂದು ನೆನಪೂ ನನ್ನೊಳಗೆ ಚುಟುಕು ಮುಳ್ಳಾಡಿಸಿದ್ದೂ ನಿಜ. ಅದೆಂದರೆ, ಈ ಹಿಂದೆ ನಾವು ಕೆಲವರು ಯೋಚಿಸಿದ್ದಂತೆ

ಪತ್ರಿಕೆಯ ಜವಾಬ್ದಾರಿಯನ್ನೇನಾದರೂ ಕೋಟಿಯವರು ನಮಗೆ ಬಿಟ್ಟುಕೊಟ್ಟಿದ್ದರೆ 'ಆಂದೋಲನ' ಈ ಯಶಸ್ಸಿನ ಒಂದಂಶವನ್ನಾದರೂ ಸಾಧಿಸಲಾಗುತ್ತಿತ್ತೇ ಎಂಬ ಪ್ರಶ್ನೆಯ ಚೂಪು ಮೊನೆ. ಯಾವ ಸಾರ್ವಜನಿಕ ಜವಾಬ್ದಾರಿಯನ್ನೂ ಪೂರ್ಣವಾಗಿ ಅಥವಾ ನೆಟ್ಟಗೆ ನಿರ್ವಹಿಸಿದ ಯಾವ ದಾಖಲೆಯೂ ಇಲ್ಲದ ಸಮಾಜವಾದಿಗಳ ಸಾಮೂಹಿಕ ಪ್ರಯತ್ನಕ್ಕೇನಾದರೂ 'ಆಂದೋಲನ' ಸಿಕ್ಕಿದ್ದರೆ ಅದು ಬಹು ಹಿಂದೆಯೇ ಕಣ್ಮುಚ್ಚುತ್ತಿದ್ದುದು ಖಚಿತ. 'ಆಂದೋಲನ'ದ ಅದೃಷ್ಟ, ಅದು ಬಚಾವಾಯಿತು. ಅದು ಸಮಾಜವಾದಿಯಾಗಿಯೇ ಉಳಿದು ಸಮಾಜವಾದದ ಮಾನವನ್ನು ಕಿಂಚಿತ್ತಾದರೂ ಉಳಿಸಿತು. ಇದಕ್ಕೆ ಕಾರಣ ಕೋಟಿಯವರ ವ್ಯಕ್ತಿತ್ವದೊಳಗೆ ಅಂತರ್ಗತವಾಗಿದ್ದ ತಣ್ಣನೆಯ ಹಠವಾದಿತ್ವ. ಆದರೆ ಇಷ್ಟೆಲ್ಲ ಸಾಧನೆಯ ನಂತರವೂ ಅವರ ವ್ಯಕ್ತಿತ್ವದಲ್ಲಿನ ಸೌಜನ್ಯ ಕಿಂಚಿತ್ತೂ ಕಡಿಮೆಯಾಗಿರಲಿಲ್ಲ. ಆದರೆ ಅವರ ವ್ಯಕ್ತಿತ್ವಕ್ಕೊಂದು ವಿಶಿಷ್ಟ ಠೀವಿ ಬಂದಿತ್ತು. ಅದಕ್ಕೆ ಅವರ ಬದಲಾದ ಜೀವನಶೈಲಿಯೂ ಕಾರಣವಾಗಿದ್ದಂತಿತ್ತು.

ಇದರ ನಂತರ ನಾನು ಮಡಿಕೇರಿಯಲ್ಲಿದ್ದಾಗ ಕೋಟಿಯವರು ಪತ್ರಿಕೆಯ ಕೊಡಗು ಆವೃತ್ತಿಯ ಸಂಬಂಧವಾಗಿ ಅಲ್ಲಿಗೆ ಬಂದಾಗಲೆಲ್ಲ ಭೇಟಿ ಮಾಡುತ್ತಿದ್ದರು. ಕಷ್ಟ ಸುಖಗಳನ್ನು ಹಂಚಿಕೊಳ್ಳುತ್ತಿದ್ದರು. ಪತ್ರಿಕೆಯನ್ನು ಒಂದು 'ಮಿತಿ' ಮೀರಿ ಬೆಳೆಸಿದ್ದರ ಕಷ್ಟಗಳ ಅರಿವು ಅವರಿಗಾಗತೊಡಗಿತ್ತು ಎಂದು ನನಗಾಗ ಅನ್ನಿಸತೊಡಗಿತ್ತು. ಆದರೂ ರಾಜ್ಯದ್ದೋ ಅಥವಾ ಭಾರತದ್ದೋ ಅತಿ ದೊಡ್ಡ ಜಿಲ್ಲಾ ಪತ್ರಿಕೆ 'ಆಂದೋಲನ'ವಾಗಿತ್ತು ಎಂಬ ಹೆಗ್ಗಳಿಕೆಯಲ್ಲಿ ಆ ಕಷ್ಟಗಳನ್ನು ಅವರು ಮರೆತಂತೆಯೂ ಇತ್ತು.

ಮತ್ತೆ ನಾನು ಕೋಟಿಯವರ ಸಂಪರ್ಕಕ್ಕೆ ಬಂದದ್ದು ೨೦೦೩ರಲ್ಲಿ ಮೈಸೂರು ಆಕಾಶವಾಣಿಗೆ ವರ್ಗವಾಗಿ ಬಂದ ನಂತರ. ಆ ಮೂರು ವರ್ಷ ನಾವು ಆಗಾಗ್ಗೆ ಭೇಟಿಯಾಗುತ್ತಿದ್ದೆವು. ಈಗ ನಾನು ನಿತ್ಯ 'ಆಂದೋಲನ ಓದುತ್ತಿದ್ದುದರಿಂದ ಪತ್ರಿಕೆಯ ಬಗ್ಗೆಯೂ ವಿಚಾರ ವಿನಿಮಯ ನಡೆಯುತ್ತಿತ್ತು. ನಮ್ಮ ಕೌಟುಂಬಿಕ ಸ್ನೇಹವೂ ಸ್ಥಾಪಿತವಾಯಿತು. ಇದರಿಂದಾಗಿ ಪತ್ರಿಕೆಯ ನಿರ್ಹಣೆಯ ಬಗ್ಗೆ ಕೇಳಿಬರುತ್ತಿದ್ದ ಒಂದೆರಡು 'ದೂರು'ಗಳನ್ನೂ ಅವರೊಡನೆ ಪ್ರಸ್ತಾಪಿಸಲು ಸಾಧ್ಯವಾಯಿತು. ಕೋಟಿ ನನ್ನಂತೆಯೇ ಸಕ್ಕರೆಯ ಕಾಯಿಲೆಯಿಂದ ತೀವ್ರವಾಗಿ ಬಳಲುತ್ತಿದ್ದರು. ಇದರ ಮೇಲೆ ಅವರ ವೃತ್ತಿಜೀವನದ ಒತ್ತಡಗಳು. ಅವರು ಹಲವು ಬಾರಿ ಎಲ್ಲ ಜವಾಬ್ದಾರಿಗಳನ್ನು ಹಿರಿಮಗನಿಗೆ ವಹಿಸುವ ಮಾತನ್ನಾಡುತ್ತಿದ್ದರು ಮತ್ತು ಆ ದಿಸೆಯಲ್ಲಿ ಮಗನನ್ನು ತರಬೇತಿಗೊಳಿಸುವ ಪ್ರಯತ್ನವನ್ನೂ ಮಾಡುತ್ತಿದ್ದರು. ಈ ಮಧ್ಯೆ ರೈತ ಮುಖಂಡ ಎಂ.ಡಿ. ನಂಜುಂಡಸ್ವಾಮಿಯವರು ನಿಧನರಾದಾಗ ಚಾಮರಾಜನಗರದ ಬಳಿಯಲ್ಲಿ ಅವರ ಅಂತ್ಯಕ್ರಿಯೆಗೆ ಕೋಟಿಯವರೊಂದಿಗೆ ನಾನೂ, ನನ್ನ ಪತ್ನಿಯೂ ಹೋಗಿ ಬಂದೆವು. ಆಗ ಅವರು ತಮ್ಮ ಕಾರುಗಳ ಮತ್ತು ಅವುಗಳ ವೇಗದ ಚಾಲನೆಯ ಹುಚ್ಚಿನ ಬಗ್ಗೆ ವಿವರವಾಗಿ ಹೇಳಿ ಅದೊಂದು ತಮ್ಮ ದೌರ್ಬಲ್ಯವಾಗಿ ಉಳಿದಿದೆ ಎಂದು ಅಲವತ್ತುಕೊಂಡಿದ್ದರು. ಕೋಟಿಯವರ ಬಗ್ಗೆ ಮೈಸೂರಿನ ಅವರ ಹಳೆಯ

ಸಮಾಜವಾದಿ ಗೆಳೆಯರಲ್ಲಿ ಒಂದು ಅಸಮಾಧಾನದ ಹೊಗೆ ಇದ್ದುದನ್ನು ನಾನು ಬಲ್ಲೆ. ಅದರ ಮೂಲ ಇಲ್ಲಿದ್ದಂತಿತ್ತು. ನಿಖರವಾಗಿ, ಕಾರುಗಳ, ವೇಗದ ಚಾಲನೆಯ ಹುಚ್ಚಿನ ಬಗ್ಗೆ ಅಲ್ಲ. ಅದನ್ನು ಹುಟ್ಟಿಸಿದ ಜೀವನ ದೃಷ್ಟಿ ಮತ್ತು ಕ್ರಮಗಳ ಬಗ್ಗೆ ಇರಬಹುದು. ಆದರೆ ಯಾರು ಎಲ್ಲ ರೀತಿಯಲ್ಲಿ 'ಸರಿ'ಯಾಗಿರುವವರು? ಅವರನ್ನು ಈ ಸಂಬಂಧವಾಗಿ ಟೀಕಿಸುವವರೂ ಸೇರಿದಂತೆ? ಇದರಲ್ಲಿ ಕೊಂಚ ಈರ್ಷ್ಯೆಯೂ ಲೇಪವೂ ಇದ್ದೀತು. ಆದರೂ ನಾನು ಕೋಟಿಯವರನ್ನು ನನ್ನ ಹೆಮ್ಮೆಯ ಸ್ನೇಹಿತನೆಂದೇ ನೆನೆಯುತ್ತೇನೆ. ಆದರೆ ಅವರ ಬಗ್ಗೆ ನನಗೆ ಒಂದು ಬೇಸರವಂತೂ ಇದೆ. ಅವರು ಹಲವು ವರ್ಷಗಳ ಹಿಂದೆ ಸ್ಥಾಪಿಸಿದ 'ರಾಮಮನೋಹರ ಲೋಹಿಯಾ ಟ್ರಸ್ಟ್' ನಿಷ್ಕ್ರಿಯವಾಗಿಯೇ ಉಳಿದಿದೆ. ಅದನ್ನು ಅವರ ಕುಟುಂಬವಾದರೂ ಪುನಶ್ಚೇತನಗೊಳಿಸುವ ಪ್ರಯತ್ನ ಮಾಡಬೇಕು.

ಇತ್ತೀಚಿನ ಮತ್ತೆರೆಡು ನೆನಪುಗಳೆಂದರೆ, ೨೦೦೭ರಲ್ಲಿ ಪ್ರೊ. ಕೆ. ರಾಮದಾಸ್ ನಿಧನರಾದಾಗ ಅವರ ನೆನಪಿನ ಗ್ರಂಥ ಸಂಪಾದಿಸಿಕೊಡಬೇಕೆಂದು ಮೈಸೂರಿನ ಗೆಳೆಯರ ಪರವಾಗಿ ಶಿವಮೊಗ್ಗದಲ್ಲಿದ್ದ ನನ್ನನ್ನು ಒತ್ತಾಯಿಸಿದವರು ಕೋಟಿಯವರೇ. ನಂತರ ಈ ಗ್ರಂಥದ ಮುದ್ರಣ, ಬಿಡುಡೆ ಮತ್ತು ವಿತರಣೆಯ ಜವಾಬ್ದಾರಿಗಳನ್ನು ವಹಿಸಿಕೊಂಡವರೂ ಅವರೇ. ೨೦೧೧ರಲ್ಲಿ ನಾನು 'ನವ ಮಾನವ' (ನಂತರ ಅದು 'ಹೊಸ ಮನುಷ್ಯ' ಎಂದಾಯಿತು.) ಎಂಬ ಸಮಾಜವಾದಿ ಮಾಸಿಕವನ್ನು ಆರಂಭಿಸಿದಾಗ 'ಅಯ್ಯೋ, ನಾವು ಮಾಡಬೇಕಿದ್ದ ಕೆಲಸವನ್ನು ನೀವು ಮಾಡುತ್ತಿದ್ದೀರಿ!' ಎಂದು ಉತ್ಸಾಹ ತೋರಿ ನನ್ನ ಕೋರಿಕೆಯನ್ನು ಮನ್ನಿಸಿ ಮೈಸೂರಿನಲ್ಲಿ ನಡೆದ ಅದರ ಬಿಡುಗಡೆ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದರಲ್ಲದೆ ಪತ್ರಿಕೆಯ ಮೊದಲ ಸಂಚಿಕೆಯ ಪುಟವಿನ್ಯಾಸವನ್ನೂ ಮಾಡಿಕೊಟ್ಟವರವರು! ಆದರೆ ಏಕೋ ನಂತರದ ದಿನಗಳಲ್ಲಿ ಅವರಿಗೆ ಈ ಸಂಬಂಧ ಆಸಕ್ತಿ ಇಲ್ಲವಾಯಿತು.

ರಾಜಶೇಖರ ಕೋಟಿಯವರು ತಮ್ಮ ವ್ಯಕ್ತಿತ್ವಕ್ಕೆ ತಕ್ಕಂತೆ ತಮ್ಮ ಕ್ರಿಯಾಶೀಲ ಬದುಕಿನ ನಡುವೆಯೇ ನಮ್ಮನ್ನಗಲಿ ಹೋಗಿದ್ದಾರೆ. ಇದು ಸ್ಥಳೀಯ ಪತ್ರಿಕೋದ್ಯಮ ಪ್ರಪಂಚಕ್ಕೆ ಹೇಗೆ ಒಂದು ಆಘಾತವೋ ಅವರನ್ನು ರೂಪಿಸಿದ ಸಮಾಜವಾದಿ ತತ್ವ ಪರಂಪರೆಗೂ ಒಂದು ಆಘಾತವೇ. ಅವರಿಂದ ಯುವ ಪತ್ರಕರ್ತರು ಕಲಿಯುವುದು– ಹೀಗೆ ಕಲಿತ ಅನೇಕರು ಇಂದು ರಾಜ್ಯಮಟ್ಟದ ಪತ್ರಿಕೆಗಳಲ್ಲಿ ಹೆಸರು ಮಾಡಿದ್ದಾರೆ– ಎಷ್ಟಿದೆಯೋ ಅಷ್ಟು ಯುವ ಸಮಾಜವಾದಿಗಳೂ ಕಲಿಯುವುದಿದೆ. ಆದರೆ ಈಗ ಯುವ ಸಮಾಜವಾದಿಗಳಾದರೂ ಎಲ್ಲಿದ್ದಾರೆ?

(ರಾಜಶೇಖರ ಕೋಟಿಯವರನ್ನು ಕುರಿತ ನೆನಪಿನ ಗ್ರಂಥಕ್ಕಾಗಿ ಬರೆದದ್ದು)

ನಮ್ಮ ಮನೆಯ ದೇವತೆ: ನನ್ನ ತಂಗಿ ರಾಜಮ್ಮ

(ಒಂದು ನೆನಪಿನ ಚಿತ್ರ)

ಡಾ. ಸಿ.ಆರ್. ಚಂದ್ರಶೇಖರ್ ಅವರ ಪತ್ನಿಯಾಗಿ ಡಿ.ಎಸ್. ರಾಜೇಶ್ವರಿ ಎಂದು ಹೆಸರು ಬದಲಿಸಿಕೊಂಡ ನನ್ನ ತಂಗಿಯ ಹುಟ್ಟು ಹೆಸರು ಲಿಂಗರಾಜಮ್ಮ. ಶಾಲೆಯಲ್ಲಿ ಡಿ.ಎಸ್. ಲಿಂಗರಾಜಮ್ಮ. ನಮ್ಮ ತಂದೆಯ ತಾಯಿಯ ಹೆಸರು ಲಿಂಗಮ್ಮ. ನಮ್ಮ ತಂದೆಗೆ ತಮ್ಮ ತಾಯಿಯಯನ್ನು ಕಂಡರೆ ತುಂಬ ಅಕ್ಕರೆ. ಅವರೇ ತಮ್ಮ ಮಗಳಾಗಿ ಹುಟ್ಟಿದ್ದಾಳೆ ಎಂಬ ತಮ್ಮ ನಂಬಿಕೆಯ ಅನುಸಾರವಾಗಿಯೋ ಏನೋ ಅವರು ಈ ಮಗಳಿಗೆ ತಮ್ಮ ತಾಯಿಯ ಹೆಸರನ್ನು ಸ್ವಲ್ಪ ಆಧುನೀಕರಿಸಿ ಲಿಂಗರಾಜಮ್ಮ ಎಂದು ಇಟ್ಟರೆಂದು ಕಾಣುತ್ತದೆ. ನಮ್ಮ ಕಡೆಯ ನೆಂಟರಿಷ್ಟರೆಲ್ಲರಿಗೂ ಅವಳು ಲಿಂಗರಾಜಮ್ಮನೆಂದೇ ಪರಚಿತಳು ಮತ್ತು ಅವರೆಲ್ಲ ಅವಳನ್ನು ಸಂಬೋಧಿಸುತ್ತಿದ್ದುದು ಆ ಹೆಸರಿನಿಂದಲೇ. ಅದೇನೇ ಇದ್ದರೂ, ನನಗೆ ಅವಳು ರಾಜಮ್ಮ. ಅವಳನ್ನು ಕೊನೆಯ ಬಾರಿಗೆ ಬಹುಶಃ ೨೦೧೫ರ ಮಾರ್ಚ್ ೯ರಂದು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮಾತನಾಡಿಸಿದವರೆಗೂ ನಾನು ಅವಳನ್ನು ಕರೆಯುತ್ತಿದ್ದುದು ಆ ಹೆಸರಿನಿಂದಲೇ.

ರಾಜಮ್ಮ ಹುಟ್ಟಿದ್ದು ೧೯೫೫ರ ಏಪ್ರಿಲ್ ೨೧. ಆ ದಿನ ನನಗೆ ಇನ್ನೂ ನೆನಪಿದೆ. ನಾನಾಗ ಮೂರು ವರ್ಷದ ಹುಡುಗ. ಆಗ ನಮ್ಮ ವಾಸ ಬೆಂಗಳೂರಿನ ಪೂರ್ವ ದಿಕ್ಕಿನಲ್ಲಿರುವ (ಮತ್ತು ಈಗ ಬೆಂಗಳೂರಿನ ಭಾಗವೇ ಆಗಿರುವಂತಿರುವ) ತಾಲ್ಲೂಕು ಕೇಂದ್ರ ಹೊಸಕೋಟೆ ಬಳಿಯ ತಿಮ್ಮಸಂದ್ರದಲ್ಲಿ. ನಮ್ಮ ತಂದೆ ಸಿ.ಎಚ್. ಸೂರಾಚಾರ್ ಪಕ್ಕದ ಹಸಿಗಾಳದಲ್ಲಿ ಶಾಲಾ ಮುಖ್ಯೋಪಾಧ್ಯಾಯರಾಗಿದ್ದರು. ಆ ದಿನ ಮಧ್ಯಾಹ್ನ ನಾನು ಮನೆಯಲ್ಲಿ ಆಟವಾಡಿಕೊಂಡಿದ್ದಾಗ ನಮ್ಮ ತಾಯಿಯ ಜೊತೆಯಿದ್ದ ಕಮ್ಮಾರ ಕುಟುಂಬದ ಸಿದ್ಧಮ್ಮ ಎಂಬುವವರು ಊರಿನ ಹಿರಿಯ ಹೆಂಗಸರಿಬ್ಬರ ಹೆಸರು ಹೇಳಿ ಅವರಿಗೆ ಶೀಘ್ರ ಬರಹೇಳಲು ತಿಳಿಸಿ ನನ್ನನ್ನು ಮನೆಯಿಂದ ಅಟ್ಟಿದರು. ನನ್ನೊಡನೆ ಆ ಮಹಿಳೆಯರು ಬಂದೊಡನೆ ನಡುಮನೆಯಲ್ಲಿ ಒಂದು ಸೀರೆ ಅಡ್ಡಕಟ್ಟಿ ನನ್ನನ್ನು

ಹೊರಗೆ ಆಡಿಕೊಳ್ಳಲು ಮನೆಯಿಂದ ಹೊರಗೆ ಕಳಿಸಿದರು. ರಾಜಮ್ಮ ನಮ್ಮ ಮನೆಯಲ್ಲಿ ಅವತರಿಸಿದ್ದಳು.

ರಾಜಮ್ಮನ ಶಿಶುತನದ ಮತ್ತೊಂದು ನೆನಪೆಂದರೆ, ನಮ್ಮ ಊರ ಪಕ್ಕದಲ್ಲಿ ಆಗ ತುಂಬಿ ಹರಿಯುತ್ತಿದ್ದ ದಕ್ಷಿಣ ಪಿನಾಕಿನಿ ಎಂಬ ಪುಟ್ಟ ನದಿಯ (ಈಗ ಅದು ಬರಿ ಬಯಲು!) ಆಚೆಯ ಮಂಚಪ್ಪನಹಳ್ಳಿಯಲ್ಲಿದ್ದ ವೀರನಂಜಾಚಾರ್ ಎಂಬ ನಮ್ಮ ಚಿಕ್ಕಪ್ಪ ಮಗುವನ್ನು ನೋಡಲು ಬಂದದ್ದು. ಈ ಭೇಟಿ ನನಗೆ ಚೆನ್ನಾಗಿ ನೆನಪಿರಲು ಕಾರಣವಿದೆ. ಅವರು ಮಗುವಿನ ಬಲಗೈ ಹೆಬ್ಬೆರಳಿಗೆ ಅಂಟಿಕೊಂಡಿದ್ದಂತಿದ್ದ ಸಣ್ಣ ಆರನೇ ಬೆರಳನ್ನು ನೋಡಿ (ಇದು ನಮ್ಮ ತಾಯಿಯ ಬಳುವಳಿ; ನನಗೂ ಎಡಗೈಯಲ್ಲಿ ಆರು ಬೆರಳುಗಳಿವೆ!) ಇದು ಹೆಣ್ಣು ಮಕ್ಕಳಿಗೆ ಅವಲಕ್ಷಣವೆಂದು ನನ್ನ ಕೈಯಿಂದ ಮನೆಯಲ್ಲಿದ್ದ ಬ್ಲೇಡ್ ಒಂದನ್ನು ತರಿಸಿ, ಅದನ್ನು ಬೆಂಕಿಯಲ್ಲಿ ಸ್ವಲ್ಪ ಬಿಸಿ ಮಾಡಿ ಆ ಪುಟ್ಟ ಬೆರಳನ್ನು ಕತ್ತರಿಸಿ ಹಾಕಿದರು. ಆದ ಗಾಯಕ್ಕೆ ಅರಿಶಿನ ಹಚ್ಚಿದರು. ಮಗು ಸ್ವಲ್ಪ ಹೊತ್ತು ಅತ್ತು ಮಲಗಿತು.

ಇನ್ನೊಂದು ನೆನಪು, ನಾನು ಮತ್ತು ನಮ್ಮಣ್ಣ ಮನೆಯ ಹೊರಗೆ ಆಟವಾಡುತ್ತಿದ್ದವರು ಇದ್ದಕ್ಕಿದ್ದಂತೆ ನೆನಪಾದಂತೆ, ಮಗು (ಆಗ ಅದನ್ನು ನಾವು ಕರೆಯುತ್ತಿದ್ದುದು 'ಪಾಪ' ಎಂದು!) ಕಣ್ಣುಬಿಟ್ಟಿರಬೇಕು, ನೋಡೋಣ ಎಂದು ಬಂದು ತೊಟ್ಟಿಲಲ್ಲಿ ಮಲಗಿದ್ದ ಮಗುವನ್ನು ಮಾತಾಡಿಸುತ್ತಿದ್ದುದು. ರಾಜಮ್ಮ ನಮ್ಮ ಮನೆಯ ಮುದ್ದು ಮಗು. ಅದಕ್ಕೆ ಒಂದು ವಿಶೇಷ ಕಾರಣವೂ ಇತ್ತು. ನಾನೂ ನಮ್ಮ ಅಣ್ಣನೂ ಕಪ್ಪು ಬಣ್ಣದವರು, ನಮ್ಮ ತಂದೆ-ತಾಯಿರಂತೆಯೇ. ಆದರೆ ರಾಜಮ್ಮ ಸ್ವಲ್ಪ ತಿಳಿ ಬಣ್ಣದ (ನಾವು ತಪ್ಪಾಗಿ ಬೆಳ್ಳಗೆ ಎನ್ನುತ್ತೇವಲ್ಲ, ಹಾಗೆ!) ಮಗುವಾಗಿ ಹುಟ್ಟಿದ್ದಳು! ಜೊತೆಗೆ ಸುಂದರವೂ ಆದ ಮಗುವಾಗಿದ್ದಳು. ಅವಳು ನಮ್ಮ ಮನೆಯ ಮುದ್ದು ಮಗು ಮಾತ್ರವಲ್ಲ, ಇಡೀ ಊರಿನ ಮುದ್ದು ಮಗುವಾಗಿದ್ದಳು. ಊರಿನ ಒಬ್ಬರಲ್ಲ ಒಬ್ಬ ಹಿರಿಯರು ಬಂದು ಅವಳನ್ನು ಎತ್ತಿಕೊಂಡು ಆಟವಾಡಿಸುತ್ತಾ ತಿರುಗಾಡುತ್ತಿದ್ದುದು ನನಗಿನ್ನೂ ನೆನಪಿದೆ.

ನಾನು ಅವಳಿಗಿಂತ ಮೂರು ವರ್ಷಗಳಷ್ಟು ದೊಡ್ಡವನಷ್ಟೆ. ಅವಳು ಹುಟ್ಟಿದ ನಾಲ್ಕು ವರ್ಷಗಳ ನಂತರ ಇನ್ನೋರ್ವ ತಂಗಿ ಸರಸ್ವತಿ ಹುಟ್ಟುವವರೆಗೆ ರಾಜಮ್ಮನೇ ನನಗೆ ಆಡಲು ಜೊತೆ. ಆ ಹೊತ್ತಿಗೆ ನಮ್ಮ ತಂದೆಗೆ ವರ್ಗವಾಗಿ ನಾವು ನೆಲಮಂಗಲದ ಬಳಿಯ ತ್ಯಾಮಗೊಂಡ್ಲು ಎಂಬ ಸ್ವಲ್ಪ ದೊಡ್ಡದೇ ಆದ-ಪಟ್ಟಣ ಎಂದು ಕರೆಯಬಹುದಾದ-ಊರಿಗೆ ಬಂದಿದ್ದೆವು. ನಮ್ಮ ತಂದೆಗೆ ರಾಜಮ್ಮನನ್ನು ಕಂಡರೆ ಹೆಚ್ಚು ಅಕ್ಕರೆ. ಅವಳ ಅಗತ್ಯಗಳ ಕಡೆ ಹೆಚ್ಚು ಗಮನ ಮತ್ತು ಅವುಗಳ ಪೂರೈಕೆ. ಇದು ನನ್ನಲ್ಲಿ ಅವಳ ಬಗ್ಗೆ ಈರ್ಷ್ಯೆಯನ್ನು ಹುಟ್ಟಿಸಿತ್ತು ಎಂಬುದೂ ನಿಜ. ಈ ಬಗ್ಗೆ ನನ್ನ ಬಾಲ್ಯದುದ್ದಕ್ಕೂ ನಮ್ಮ ತಂದೆ-ತಾಯಿಗಳ ಜೊತೆ ನನ್ನ ಜಗಳ ನಿರಂತರವಾಗಿ ಇದ್ದೇ ಇತ್ತು! ಇದರ ಪರೋಕ್ಷ ಪರಿಣಾಮವಾಗಿ ಅವಕಾಶ ಸಿಕ್ಕಾಗಲೆಲ್ಲ ರಾಜಮ್ಮನಿಗೆ ನನ್ನಿಂದ ಸಣ್ಣ ಪುಟ್ಟ ಏಟುಗಳೂ ಬೀಳುತ್ತಿದ್ದವು! ಇದರ ಪ್ರತಿಫಲವಾಗಿ ನಮ್ಮ ತಂದೆ ಸಂಜೆ ಮನೆಗೆ

ಬಂದ ಮೇಲೆ ರಾಜಮ್ಮನ ದೂರಿನನ್ವಯ ನನಗೂ ನಮ್ಮ ತಂದೆಯಿಂದ ಅದರ ಎರಡರಷ್ಟು ದೊಡ್ಡೇಟುಗಳು ಬೀಳುತ್ತಿದ್ದವು. ಇದರಿಂದ ನನಗೆ ರಾಜಮ್ಮನನ್ನು ಕಂಡರೆ ಕುಟುಂಬದಲ್ಲಿ ಒಂದು ರೀತಿಯಲ್ಲಿ ಎದುರಾಳಿಯನ್ನು ಕಂಡಂತೆಯೇ ಆಗುತ್ತಿತ್ತು! ಆದರೆ ಸರಸ್ವತಿ ಹುಟ್ಟಿದ ಮೇಲೆ ರಾಜಮ್ಮನ ಮೇಲಿನ ಈರ್ಷ್ಯೆಯ ಸ್ವಲ್ಪ ಪಾಲು ಸರಸ್ವತಿಯ ಮೇಲಿನ ವಿಶೇಷ ಪ್ರೀತಿಯಾಗಿಯೂ ಮಾರ್ಪಟ್ಟಿತೆಂದು ಕಾಣುತ್ತದೆ. ಹಾಗಾಗಿ ಬಾಲಕಿ ರಾಜಮ್ಮನೊಡನೆಯ ನನ್ನ ಸಂಬಂಧಕ್ಕೆ ಒಂದು ರೀತಿಯ ಸಮತೋಲನ ದೊರೆಯಿತೆಂದು ಹೇಳಬಹುದು.

ಇವೆಲ್ಲ ಬೆಳವಣಿಗೆಗಳ ಬಗ್ಗೆ ನಾನು ಈಗ ಬರೆಯಬಲ್ಲವನಾಗಿದ್ದೇನಷ್ಟೆ. ಇವೆಲ್ಲ ಆಗ ನನಗೆ ಪ್ರಜ್ಞಾಪೂರ್ವಕವಾಗೇನೂ ಗೋಚರವಾಗುತ್ತಿರಲಿಲ್ಲ. ಹಾಗಾಗಿ ನಾವು ಮನೆಯ ಮೂವರು ಮಕ್ಕಳು (ಹಿರಿಯನಾದ ನಮ್ಮಣ್ಣ ಚಂದ್ರಶೇಖರಯ್ಯ ಬೆಂಗಳೂರಿನಲ್ಲಿ ಕಾಲೇಜು ಓದುತಿದ್ದರು) ಒಟ್ಟಿಗೆ ಆಡಿಕೊಂಡು–ಬಡಿದಾಡಿಕೊಂಡು ಬಡತನದಲ್ಲೂ ಸಂತೋಷದಿಂದಲೇ ಬೆಳೆದೆವೆಂದು ಹೇಳಬೇಕು. ಇಬ್ಬರು ತಂಗಿಯರೂ ನಾನೆಲ್ಲಿ ಹೋದರೂ ನನ್ನ ಜೊತೆಗೆ ಇದ್ದೇ ಇರುತ್ತಿದ್ದರು. ವಿಶೇಷ ಮುದ್ದಿನ ಕಾರಣ ರಾಜಮ್ಮನ ಬಾಯಿ ಸ್ವಲ್ಪ ಮುಂದು. ಜೊತೆಗೆ ಹಠ, ನನ್ನೊಡನೆ ಅವಿಧೇಯತೆ! ಹೀಗಾಗಿ ನನ್ನಿಂದ ಅವಳಿಗೆ ಅವಕಾಶ ಸಿಕ್ಕಾಗಲೆಲ್ಲ ಮಕ್ಕಳೇಟು!

ನಮ್ಮ ತಂದೆಯೇ ಉಪಾಧ್ಯಾಯರಾಗಿದ್ದೂ, ಸಂಜೆ ಮನೆ ಪಾಠ ಮಾಡುತ್ತಿದ್ದರಾದರೂ, ರಾಜಮ್ಮನನ್ನು, ಅವಳ ಬೇಡಿಕೆಯನ್ನು ಮನ್ನಿಸಿ ಯಾರೋ ಲಿಲ್ಲಿ ಎಂಬ ಮೇಡಂ ಬಳಿ ಮನೆ ಪಾಠಕ್ಕೆ ಕಳಿಸುತ್ತಿದ್ದರು. ಅವಳನ್ನು ಅಲ್ಲಿಗೆ ಕರೆದುಕೊಂಡು ಹೋಗುವ ಮತ್ತು ಕರೆದುಕೊಂಡು ಬರುವ ಚಾಕರಿ ಬೇರೆ ನನಗೆ! ಜೊತೆಗೆ ಅವಳಿಗೆ ಪ್ರತಿ ಹಬ್ಬಕ್ಕೂ ಬಟ್ಟೆ ಹೊಲಿಸುವುದೇನು, ನೃತ್ಯ ಕಲಿಯಲು ಕಳಿಸುವುದೇನು, ಶಾಲಾ ಪ್ರವಾಸಕ್ಕೆ ಕಳಿಸುವುದೇನು! ಇದನ್ನು ಪ್ರಶ್ನಿಸಿದಾಗಲೆಲ್ಲ ನಮ್ಮ ತಂದೆಯದು ಒಂದೇ ಉತ್ತರ: 'ಹೆಣ್ಣು ಮಕ್ಕಳು ಬಹಳ ದಿವಸ ಮನೆಯಲ್ಲಿರುವುದಿಲ್ಲ. ಗಂಡನ ಮನೆಗೆ ಹೋದ ಮೇಲೆ ನಮಗೆ ನೋಡಿಕೊಳ್ಳಲಾಗುವುದಿಲ್ಲ.' ಅವಳಿಗೆ ಹೊಸ ಬಟ್ಟೆ ಹೊಲಿಸುವಾಗ ನೀಡುತ್ತಿದ್ದ ಕಾರಣ: 'ನೀವು ಗಂಡು ಮಕ್ಕಳು ಪುಟಗೋಸಿ ಕಟ್ಟಿಕೊಂಡು ಓಡಾಡಬಹುದು. ಅವರು ಓಡಾಡಲು ಆಗುವುದೆ?' ಆ ವಯಸ್ಸಿನಲ್ಲಿ ಈ ವಿವರಣೆಗಳೆಲ್ಲ ಅಷ್ಟಾಗಿ ಅರ್ಥವಾಗದ ನನಗೋ ರೇಗಿ ಹೋಗುತ್ತಿತ್ತು. ಆದರೂ ಅವಳು ಶಿಶುವಿಹಾರದಲ್ಲಿ ಕಲಿತು ಬಂದ 'ಚಿಗರೇ ಮರಿಯೇ ಮತ್ತೆ ಓಡಿ ಬಾ...' ಎಂದು ತನ್ನ ಮುದ್ದು ಧ್ವನಿಯಲ್ಲಿ ಹಾಡುತ್ತಾ 'ನೃತ್ಯ' ಮಾಡುವುದನ್ನು ನೋಡಿದಾಗಲೆಲ್ಲ ಅವಳನ್ನು ಕುರಿತ ಅಸಮಾಧಾನವೆಲ್ಲ ಮರೆತುಹೋಗಿ ನಾನೂ ಅವಳನ್ನು ಮುದ್ದಿಸುತ್ತಿದ್ದುದು ನೆನಪಿಗೆ ಬರುತ್ತಿದೆ. ನನಗೆ ನೆನಪಿನಲ್ಲಿರುವ, ಅವಳು ಮುದ್ದಾಗಿ ಹಾಡುತ್ತಿದ್ದ ಇನ್ನೊಂದು ಹಾಡೆಂದರೆ 'ಆಶಾಸುಂದರಿ' ಎಂಬ ಕನ್ನಡ ಚಿತ್ರದ 'ಜೋ ಜೋ ರಾಜಕುಮಾರ...' ನಮ್ಮಣ್ಣ ಕೂಡ ಊರಿಗೆ ಬಂದಾಗಲೆಲ್ಲ ಅವಳಿಂದ ಈ ಹಾಡನ್ನು ಹೇಳಿಸಿ ಆನಂದಿಸುತ್ತಿದ್ದ

ನೆನಪು. ಇದರ ಜೊತೆಗೇ, ಒಂದು ಮಳೆಗಾಲದ ಬೆಳಿಗ್ಗೆ ನಾವು ಮೂವರು ಊರ ಹೊರಗೆ ಹೂ ಕೀಳಲು ಹೋಗಿ ಬಿರುಗಾಳಿ ಮತ್ತು ಮಳೆಗೆ ಸಿಕ್ಕಿಹಾಕಿಕೊಂಡು ಒಂದು ಒಂಟಿ ಮರದ ಕೆಳಗೆ ಹೆದರಿ ಅವರಿಬ್ಬರೂ ನನ್ನನ್ನು ಆತುಕೊಂಡು ಕೂತು ನಾನು ಹೇಳಿಕೊಟ್ಟಂತೆ 'ಓಂ ನಮಃ ಶಿವಾಯ' ಎಂದು ಜಪ ಮಾಡಿದ್ದೂ ನನಗೀಗ ನೆನಪಿಗೆ ಬಂದು ನನ್ನ ಕಣ್ಣುಗಳು ಒದ್ದೆಯಾಗುತ್ತಿವೆ.

ಬಾಲ್ಯದಲ್ಲಿ ನಾವು ಮಕ್ಕಳು ಈ ಮುಂಚೆ ತಿಳಿಸಿದಂತೆ ಆ ಕಾಲದ ಕಷ್ಟದ ಬದುಕಿನಲ್ಲಿ ಕಷ್ಟಗಳು ಅನುಭವಕ್ಕೆ ಬಾರದಂತಹ ರೀತಿಯಲ್ಲಿ ಸಣ್ಣಪುಟ್ಟ ಸಂತೋಷಗಳನ್ನು ಹಂಚಿಕೊಂಡು ಬದುಕಿದೆವು. ಒಂದು ಗೌರಿಹಬ್ಬದಲ್ಲಿ ರಾಜಮ್ಮನಿಗೆ ಆಗ 'ಥಮಾಸ್' ಎಂದು ಕರೆಯುತ್ತಿದ್ದ ಬೆಲೆ ಬಾಳುವ ಬಟ್ಟೆಯಲ್ಲಿ ಲಂಗ ಹೊಲೆಸಿ, 'ನಾಗರು' ಎಂಬ ಬಂಗಾರದ ಆಭರಣ ಮಾಡಿಸಿ ಅಲಂಕರಿಸಿ ಆರತಿ ಮಾಡಿದಾಗ ನನಗೆ ಆದ ಸಂತೋಷ–ಸಂಭ್ರಮ ಈಗಲೂ ನನಗೆ ನೆನಪಾಗುತ್ತಿದೆ. ಆಗ ರಾಜಮ್ಮ ಯೌವ್ವನಸ್ಥೆಯಾಗಿದ್ದಳು. ಅವಳು ನನ್ನ ಕಣ್ಣಿಗೆ ಅಂದು ನಮ್ಮ ಮನೆಯ ದೇವತೆಯಂತೆ ಕಂಡಳು! ರಾಜಮ್ಮನ ಬಗ್ಗೆ ಬಾಲ್ಯದ ನನ್ನ ಇರುಸು ಮುರುಸು ಕಡಿಮೆಯಾಗತೊಡಗಿದ್ದು ಆಗಿನಿಂದಲೇ ಎಂದು ಹೇಳಬಹುದು. ಮುಂದೆ ಕೆಲವೇ ದಿನಗಳಲ್ಲಿ ನಮ್ಮ ತಂದೆ ಅವಳಿಗೆ ಸಂಗೀತ ಕಲಿಸಲು ಓರ್ವ ಸಂಗೀತದ ಮೇಷ್ಟ್ರನ್ನು ನೇಮಿಸಿದರು. ಅಂದಿನಿಂದ ನಮ್ಮ ಮನೆಯ ವಾತಾವರಣವೇ ಬದಲಾಯಿತು. ಸಂಗೀತದ ಮೇಷ್ಟ್ರು ಹೋದ ಮೇಲೆ ನಾನು ಅವಳಿಂದ ಹಾರ್ಮೋನಿಯಂ ನುಡಿಸುವುದನ್ನು ಕಲಿಯತೊಡಗಿದೆ! ಈಗಲೂ ಯಾರ ಮನೆಯಲ್ಲಾದರೂ ಹಾರ್ಮೋನಿಯಂ ಕಂಡರೆ ಸರಿಮಾಗರಿ ಸರಿಗರಿಸಾ ರಿಗಪದಮಪ ದಪಮಗರಿಸ... ಎಂದೋ ಅಥವಾ ದಸಸ ದಪಮಪ ಎಂದೋ ಗುನುಗುತ್ತಾ ಅದರ ಮನೆಗಳ ಮೇಲೆ ಕೈ ಆಡಿಸುವ ಬಯಕೆಯಾಗುತ್ತದೆ. ಅವಳಿಗೆ ರಾರಾ ವೇಣು ಗೋಪಾ ಬಾಲಾ ಕೃತಿಯ ಪಾಠವಾಗುತ್ತಿದ್ದಾಗ ನನಗೆ ಟೈಫಾಯಿಡ್ ಜ್ವರ ಬಂದು ಮಲಗಿದ್ದೆ. ಆದರೂ ಆ ಪಾಠದಲ್ಲಿ ನಾನು ಎಷ್ಟು ತಲ್ಲೀನನಾಗಿದ್ದೆ ಎಂದರೆ, ಎಷ್ಟೋ ವರ್ಷಗಳ ನಂತರವೂ ರಾಜಮ್ಮನೋ ಮತ್ತೊಬ್ಬರೋ ಆ ಕೃತಿಯನ್ನು ಹಾಡಿದಾಗ ನನಗೆ ಟೈಫಾಯಿಡ್ ಜ್ವರದ ಅನುಭವವಾಗುತ್ತಿತ್ತು! ಈ ಎಲ್ಲ ನೆನಪುಗಳ ಜೊತೆಗೆ ಈಗ ರಾಜಮ್ಮನ ನೆನಪೂ ಉಮ್ಮಳಿಸಿ ಬಂದು ಗಂಟಲು ಕಟ್ಟುತ್ತದೆ.

ಈ ನಂತರದ ದಿನಗಳನ್ನು ನಾವು ಒಟ್ಟಿಗೆ ಕಳೆದದ್ದು ಬೆಂಗಳೂರಿನಲ್ಲಿ. ನಮ್ಮಣ್ಣನಿಗೆ ಬೆಂಗಳೂರಿನಲ್ಲಿ ಕಾಲೇಜು ಉಪನ್ಯಾಸಕನಾಗಿ ಕೆಲಸ ಸಿಕ್ಕಿ ನಾವು ರಾಜಾಜಿನಗರದಲ್ಲಿ ವಾಸಿಸತೊಡಗಿದೆವು. ನಾನೂ ಆ ಹೊತ್ತಿಗೆ ಕಾಲೇಜು ಪ್ರವೇಶಿಸಿದ್ದೆ. ಇಲ್ಲಿ ಹೇಳಲು ಉಚಿತವಲ್ಲದ ಕಾರಣಗಳಿಂದಾಗಿ ನನ್ನ ಕಾಲೇಜು ಶಿಕ್ಷಣದ ಕಷ್ಟಗಳೇ ನನಗೆ ಹಾಸಿ ಹೊದೆಯುವಷ್ಟು ಇದ್ದುದರಿಂದ ರಾಜಮ್ಮನ ಕಡೆ ನನ್ನ ಗಮನ ಅಷ್ಟಕ್ಕಷ್ಟೆ ಎಂದು ಹೇಳಬೇಕು. ಅವಳು ಮತ್ತು ನಮ್ಮಣ್ಣ ಪರಸ್ಪರ ಹೆಚ್ಚು ಆಪ್ತರಾದರು. ಸಿಆರ್‌ಸಿ ಅವರನ್ನು ಮದುವೆಯಾದ ನಂತರ ಅವಳು ಕನ್ನಡ ಸಾಹಿತ್ಯದ ಸ್ನಾತಕೋತ್ತರ ಪದವಿ ಮತ್ತು ಪತ್ರಿಕೋದ್ಯಮದ ಡಿಪ್ಲೊಮೋ ಮಾಡಿದಳಾದರೂ, ನಮ್ಮ ಮನೆಯಲ್ಲಿದ್ದಾಗ

ಅವಳು ಶಿಕ್ಷಣದ ಬಗ್ಗೆ ಅಷ್ಟೇನೂ ಆಸಕ್ತಿ ತೋರಿಸಿರಲಿಲ್ಲವೆಂದೇ ಹೇಳಬೇಕು. ಅದರಲ್ಲಿ ಅವಳು ಸ್ವಲ್ಪ ಹಿಂದೆಯೇ. ಆದರೆ ಅವಳು ತನ್ನ ಆಸಕ್ತಿಯ ಕರ್ನಾಟಕ ಶಾಸ್ತ್ರೀಯ ಸಂಗಿತಾಭ್ಯಾಸದಲ್ಲಿ ಮುಂದುವರಿದಳು. ನಿವೃತ್ತರಾಗಿದ್ದ ನಮ್ಮ ತಂದೆ ಅವಳನ್ನು ವಾರಕ್ಕೆ ಎರಡು ಬಾರಿಯೋ ಮೂರು ಬಾರಿಯೋ ಸಿಟಿ ಮಾರ್ಕೆಟ್ ಬಳಿಯಲ್ಲೆಲ್ಲೋ ಇದ್ದ ಶ್ರೀಕಂಠಾಚಾರ್ ಎಂಬ ಸಂಗೀತ ಮೇಷ್ಟರ ಮನೆಗೆ ಕರೆದುಕೊಂಡು ಹೋಗಿ ಪಾಠ ಹೇಳಿಸಿಕೊಂಡು ಬರುತ್ತಿದ್ದುದು ಈಗಲೂ ನನಗೆ ನೆನಪಿದೆ. ಅವಳು ಮದುವೆಗೆ ಸ್ವಲ್ಪ ಮುಂಚೆ ಸಂಗೀತ ಶಿಕ್ಷಣದ ಅತ್ಯುನ್ನತ ಪದವಿಯಾದ ವಿದ್ವತ್ ಪರೀಕ್ಷೆಯಲ್ಲಿ ತೇರ್ಗಡೆಯಾದಳು.

ರಾಜಮ್ಮನನ್ನು ನೋಡಲು. ಸಿ.ಆರ್. ಚಂದ್ರಶೇಖರ್ ತಮ್ಮ ತಂದೆ ತಾಯಿಗಳೊಂದಿಗೆ ನಮ್ಮ ಮನೆಗೆ ಬಂದದ್ದು ಇನ್ನೂ ನನಗೆ ಚೆನ್ನಾಗಿ ನೆನಪಿದೆ. ಅದು ಬಹುಶಃ ೧೯೭೪ರ ಕೊನೆಯ ದಿನಗಳಲ್ಲಿ ಒಂದು. ನಮ್ಮ ರಾಜಮ್ಮನಿಗೆ ಆಗ ಇಪ್ಪತ್ತು ವರ್ಷ. ತುಂಬ ಸುಂದರವಾದ ಯುವತಿಯವಳು. ಅವಳಿಗೆ ಚಂದ್ರಶೇಖರ್ ಸರಿಜೋಡಿಯಾಗಲಾರರೆಂದು ನನ್ನ ಮತ್ತು ನಮ್ಮ ಮನೆಯ ಕೆಲ ಸದಸ್ಯರ ಅಭಿಮತ! ಸಿಆರ್‌ಸಿ ಕೂಡ ಅಂದು ವಧು ನೋಡಲು ಯಾವ ಪೂರ್ವ ಸಿದ್ಧತೆಯೂ ಇಲ್ಲದವರಂತೆ ಅಲೆಮಾರಿಯಂತೆ ಒಡ್ಡೊಡ್ಡಾಗಿ ಬಂದಿದ್ದರು! ಆದರೆ ರಾಜಮ್ಮ ಆಗಲೇ ಎಷ್ಟು ಪ್ರಬುದ್ಧಳಾಗಿದ್ದಳೆಂದರೆ, ಅವಳು ಒಂದೇ ಮಾತು ಹೇಳಿದ್ದು: 'ಅವರ ಬಣ್ಣ, ಚೆಲುವು ಮುಖ್ಯವಲ್ಲ. ಅವರು ಡಾಕ್ಟರು. ಸಂಭಾವಿತರಂತೆಯೂ ಕಾಣುತ್ತಾರೆ. ನನಗೆ ಇವರಿಗಿಂತ ಒಳ್ಳೆಯ ಗಂಡ ಸಿಗಲಾರರು.' ಅವಳ ಈ ಆಯ್ಕೆ ಅತ್ಯುತ್ತಮವಾಗಿತ್ತು ಎಂಬುದಕ್ಕೆ ಮುಂದಿನ ಅವರ ನಲವತ್ತು ವರ್ಷಗಳ ಸುಗಮ ಮತ್ತು ಸುಮಧುರ ದಾಂಪತ್ಯ ಜೀವನವೇ ಸಾಕ್ಷಿಯಾಗಿದೆ. ನನಗೆ ತಿಳಿದಂತೆ ಅದು ಒಂದು ಸಣ್ಣ ಘರ್ಷಣೆಯೂ ಇಲ್ಲದ, ಸಂಪೂರ್ಣ ಪರಸ್ಪರ ಅರಿತುಕೊಂಡ, ಪರಸ್ಪರ ಪ್ರೀತಿ ಮತ್ತು ಗೌರವಗಳೆರಡನ್ನೂ ಹೊಂದಿದ್ದ ಸಮರಸವಾದ ದಾಂಪತ್ಯವಾಗಿತ್ತು.

೧೯೭೫ರಲ್ಲಿ ರಾಜಮ್ಮನ ಮದುವೆಯಾದಾಗ ನಾನು ದೆಹಲಿಯಲ್ಲಿ ಕೆಲಸದಲ್ಲಿದ್ದೆ. ಮೂರು ದಿನಗಳ ಮಟ್ಟಿಗೆ ಮದುವೆಗೆ ಬಂದು ಹೋಗಿದ್ದೆ. ಆ ನಂತರವೂ ನಾನು ದೆಹಲಿಯಲ್ಲಿ ಏಳು ವರ್ಷಗಳಿದ್ದು, (ಆಗ ರಾಜಮ್ಮ-ಸಿಆರ್‌ಸಿ ಅವರು ತಮ್ಮ ತಾಯಿ ಮತ್ತು ನನ್ನ ತಂದೆ-ತಂಗಿ ಮತ್ತವರ ಇನ್ನೋರ್ವ ಬಂಧುಗಳೊಂದಿಗೆ ದೆಹಲಿಯ ನನ್ನ ಮನೆಗೆ ಬಂದು ಐದಾರು ದಿನಗಳಿದ್ದು, ಉತ್ತರ ಭಾರತದ ಒಂದು ಪುಟ್ಟ ಪ್ರವಾಸ ಕೈಗೊಂಡಿದ್ದರು) ಮತ್ತೆ ಆ ನಂತರ ಕರ್ನಾಟಕಕ್ಕೆ ಬಂದರೂ ಬೆಂಗಳೂರಿನಿಂದ ದೂರವಿದ್ದ ಊರುಗಳಲ್ಲಿ ಕೆಲಸ ಮಾಡಬೇಕಾಗಿ ಬಂದುದರಿಂದ ಅವಳ ಮನೆಗೆ ಭೇಟಿ ನೀಡುತ್ತಿದ್ದುದು ವರ್ಷಕ್ಕೊಮ್ಮೆಯೋ ಅಥವಾ ಎರಡು ಬಾರಿಯೋ ಅಷ್ಟೆ. ನಾನು ಜಾತಿ ಹೊರಗೆ ಮತ್ತು ಯಾವ ಧಾರ್ಮಿಕ ಸಂಪ್ರದಾಯವೂ ಇಲ್ಲದೆ ಸರಳವಾಗಿ-ಕುವೆಂಪು ಪ್ರಣೀತ 'ಮಂತ್ರ ಮಾಂಗಲ್ಯ'ದ ರೂಪದಲ್ಲಿ-ಮದುವೆಯಾದಾಗ ರಾಜಮ್ಮ ತಳೆದ ನಿಲುವು ನನಗೆ ತುಂಬ ಬೇಸರ ತರಿಸಿತ್ತು. ಆದರೆ ನಾನು ಮದುವೆಯಾದ

ನಂತರ 'ನಮ್ಮ ಮನೆ' ಎಂದುಕೊಂಡಿದ್ದ ಎಲ್ಲ ಮನೆಗಳ ಬಾಗಿಲುಗಳೂ ಬಂದ್ ಆಗಿದ್ದಾಗ ಹೆಂಡತಿಯನ್ನು 'ನಮ್ಮ ಮನೆ' ಎಂದು ನಾನು ಕರೆದುಕೊಂಡು ಹೋಗಲು ಧೈರ್ಯ ಮಾಡಿದ್ದು ರಾಜಮ್ಮನ ಮನೆಗೇ. ರಾಜಮ್ಮ ಮತ್ತು ಸಿಆರ್‌ಸಿ ನಮ್ಮನ್ನು ಅವರ ಸುಪ್ತ ಅಸಮಾಧಾನಗಳ ನಡುವೆಯೇ ಪ್ರೀತಿಯಿಂದ ಉಪಚರಿಸಿದರು. ನನ್ನ ಹೆಂಡತಿಯನ್ನು ನೋಡಿ ಅವರಿಗೆ ಈತ ತಪ್ಪು ಮಾಡಿಲ್ಲವೆಂದು ಎನಿಸಿತೋ ಏನೋ, ನಮ್ಮನ್ನು ಬೆಂಗಳೂರಿನಲ್ಲೆಲ್ಲ ಸುತ್ತಾಡಿಸಿ, ಫೋಟೋ ತೆಗೆದು, ಉಡುಗೊರೆ ಕೊಟ್ಟು ಸತ್ಕರಿಸಿ ಕಳಿಸಿದರು. ಗಾಬರಿಯಾದಂತಿದ್ದ ನನ್ನ ಹೆಂಡತಿಗೂ ಸಮಾಧಾನವಾಯಿತು. ಅದರಿಂದ ನನಗೂ ಒಂಚೂರು ನೆಮ್ಮದಿಯೆನಿಸಿತು.

ರಾಜಮ್ಮನಿಗೆ ಗಂಡನ ಮನೆಗೆ ಹೋದ ಮೊದಲ ವರ್ಷಗಳಲ್ಲಿ ಸ್ವಲ್ಪ ಕಿರಿಕಿರಿಯಾಗಿ, ಅದರಿಂದ ಗಂಡನ ಮನೆಯ ಹಿರಿಯರಿಗೂ ಸ್ವಲ್ಪ ಕಿರಿಕಿರಿಯಾದುದಕ್ಕೆ ಸಂಬಂಧಿಸಿದ ಒಂದೆರಡು ಘಟನೆಗಳು ನನಗೆ ನೆನಪಿವೆ. ಅದಕ್ಕೆ ಮುಖ್ಯ ಕಾರಣ ಎರಡೂ ಕುಟುಂಬಗಳ ಸಾಂಸ್ಕೃತಿಕ ಹಿನ್ನೆಲೆಗಳು ಭಿನ್ನವಾಗಿದ್ದುದೇ ಆಗಿತ್ತು. ಆದರೆ ಅದು ಆದಷ್ಟು ಬೇಗ ಪರಿಹಾರವಾಗಿ, ರಾಜಮ್ಮ ಅನತಿ ಕಾಲದಲ್ಲಿಯೇ ಆ ಮನೆಯ 'ಯಜಮಾನತಿ'ಯೇ ಆದಳು! ಸೌಜನ್ಯಕ್ಕೆ ಇನ್ನೊಂದು ಹೆಸರಿನಂತಿದ್ದ ಅವರ ಅತ್ತೆ ಸರೋಜಮ್ಮನವರೂ ಈ ಯಜಮಾನಿಕೆಯನ್ನು ತಮಗೆ ದೊರೆತ ವಿಶ್ರಾಂತಿಯೇ ಎಂದು ಭಾವಿಸಿ ಒಪ್ಪಿಕೊಂಡಂತಿತ್ತು. ಸಿಆರ್‌ಸಿ ಅವರ ತಂದೆ ಕೆಲವು ಅನಿವಾರ್ಯ ಕಾರಣಗಳಿಂದಾಗಿ ತಮ್ಮೂರು ಚನ್ನಪಟ್ಟಣದಲ್ಲಿಯೇ ನೆಲೆಸಬೇಕಾಗಿ ಬಂದುದರಿಂದ, ಬೆಂಗಳೂರಿನ ಸಿಆರ್‌ಸಿ ಮನೆಯಲ್ಲಿ ಅತ್ತೆ-ಸೊಸೆ ಜೋಡಿಯ ಗಮ್ಮತ್ತೇ ಗಮ್ಮತ್ತು! ಈ ಗಮ್ಮತ್ತು ಸರೋಜಮ್ಮನವರ ನಿಧನ ಕಾಲದವರೆಗೂ ಕೆಲವು ಏರಿಳಿತಗಳೊಂದಿಗೆ ಮುಂದುವರೆಯಿತು. ಅದರ ಫಲಾನುಭವಿಗಳಲ್ಲವೇ ನಾನು ಮತ್ತು ನನ್ನ ಪತ್ನಿ ಸವಿತಾ?

ರಾಜಮ್ಮ ಸ್ವಭಾವತಃ ಯಜಮಾನಿಕೆಯ ಗುಣವುಳ್ಳವಳಾಗಿದ್ದಳು. ಅವಳನ್ನು ಬಾಲ್ಯದಲ್ಲಿ ವಿಶೇಷ ಮುದ್ದಿನಿಂದ ಬೆಳೆಸಿದ ರೀತಿಯೂ ಈ ಗುಣವನ್ನು ಉತ್ತೇಜಿಸಿರಬಹುದು. ಇದನ್ನು ನಾನು ಅವಳ ಶಾಲಾ ಮತ್ತು ಕಾಲೇಜು ದಿನಗಳಲ್ಲೂ ಗಮನಿಸಿದ್ದೆ. (ಅವಳೂ ನಾನೂ ಒಂದು ನಿರ್ದಿಷ್ಟ ಅವಧಿಯಲ್ಲಿ ಒಂದೇ ಶಾಲೆ ಮತ್ತು ಕಾಲೇಜುಗಳಲ್ಲಿ ಓದಿದ್ದುಂಟು.) ನನ್ನ ನಿರೀಕ್ಷೆಗೆ ವಿರುದ್ಧವಾಗಿ ಅವಳು ಶಾಲಾ-ಕಾಲೇಜುಗಳ ಆವರಣದಲ್ಲಿ ಗೆಳತಿಯರ ಹಿಂಡು ಕಟ್ಟಿಕೊಂಡು ಯಜಮಾನಿಕೆಯ ಉತ್ಸಾಹದಲ್ಲಿ ಜೋರಾಗಿ ಕೂಗಾಡುತ್ತಾ ಒಂದೆರಡು ಬಾರಿ ನನಗೆ ಮುಜುಗರವನ್ನು ಉಂಟು ಮಾಡಿದ ಪ್ರಸಂಗಗಳೂ ಉಂಟು! ಆದರೆ ಇದನ್ನು ಮನೆಯಲ್ಲಿ ಹೇಳಿದಾಗ ಯಾರೂ ನಂಬುತ್ತಿರಲಿಲ್ಲ. ಬದಲಾಗಿ ನಾನು ಸುಮ್ಮನೆ ಚಾಡಿ ಹೇಳುತ್ತಿರುವೆನೆಂದು ನನ್ನನ್ನೇ ದೂಷಿಸುತ್ತಿದ್ದರು! ಈ ಯಜಮಾನಿಕೆಯ ಸ್ವಭಾವದ ಜೊತೆಗೆ, ಮದುವೆಯ ನಂತರ ಅವಳಿಗೆ ಎಲ್ಲಿಂದಲೋ ದೇವರು-ದಿಂಡಿರುಗಳ ಭಕ್ತಿ ಮತ್ತು ಮಡಿ-ಮೈಲಿಗೆಗಳ ಆಚರಣೆಗಳು ಬೇರೆ ವಿಪರೀತವಾಗಿ ಅಂಟಿಕೊಂಡು ಅವಳ ಬದುಕು ಅವಳಿಗೇ ಗೊತ್ತಿಲ್ಲದಂತೆ ಜಟಿಲವೂ ಆಯಾಸಕರವೂ ಆಯಿತು.

ಇದನ್ನು ನಾನು ಅವಳಿಗೆ ಹಲವಾರು ಬಾರಿ ಹೇಳಿದ್ದೆನಾದರೂ ಅವಳು ಯಾರ ಮಾತನ್ನೂ ಕೇಳದ ಹಠಮಾರಿಯಾಗಿದ್ದಳು. ನಾನು ನಾಸ್ತಿಕನೂ, ವಿಚಾರವಾದಿಯೂ ಆಗಿರುವೆನೆಂದು; ಹಾಗಾಗಿ ಹಾಗೆ ಹೇಳುತ್ತಿರುವೆನೆಂದು ಅವಳು ತರ್ಕಿಸುತ್ತಿದ್ದಳು. ಇದಕ್ಕೆ ಪ್ರತಿಯಾಗಿ ನಾನು ತರ್ಕಿಸಿದಂತೆ, ಅವಳಿಗೆ ಮಕ್ಕಳಿಲ್ಲವೆಂಬ ಕೊರಗು ತುಂಬ ಬಾಧಿಸುತ್ತಿತ್ತು. ಅವಳು ಬದುಕುತ್ತಿದ್ದ, ಬೆರೆಯುತ್ತಿದ್ದ ಮತ್ತು ನಂಬುತ್ತಿದ್ದ ಸಾಂಪ್ರದಾಯಿಕ ಸಮಾಜದಲ್ಲಿ ಅವಳಿಗೆ ಈ ಕೊರತೆ ಎದ್ದುಕಂಡು ಕಾಡುತ್ತಿತ್ತು. ಅದನ್ನು ವಿಚಾರ ಮಾಡಿ ಜೀರ್ಣಿಸಿಕೊಳ್ಳುವ ಶಕ್ತಿ ಅವಳಿಗಿರಲಿಲ್ಲ. ಹಾಗಾಗಿ ಅದನ್ನು ದಮನ ಮಾಡಿಕೊಳ್ಳಲೆಂದೇ ಅವಳು ದೇವರು-ದಿಂಡಿರು-ಮತಾಚರಣೆಗಳಲ್ಲಿ ಅಷ್ಟೊಂದು ತೊಡಗಿಕೊಂಡಿರುತ್ತಿದ್ದಳೆಂದು ನನ್ನ ಭಾವನೆ. ಈ ವಿಷಯದಲ್ಲಿ ಸಿಆರ್‌ಸಿಯವರೂ- ಬಹುಶಃ ಮನೋಚಿಕಿತ್ಸೆಯ ಭಾಗವಾಗಿ- ಪ್ರೋತ್ಸಾಹಕರವಾಗಿದ್ದುದರಿಂದ ನಾನೂ ಆ ಬಗ್ಗೆ ಹೆಚ್ಚು ಮಾತನಾಡಲು ಹೋಗುತ್ತಿರಲಿಲ್ಲ.

ಈ ಎಲ್ಲ ಒತ್ತಡಗಳ ನಡುವೆಯೂ ಸಿಆರ್‌ಸಿಯವರ ಅಪಾರ ಸಂಖ್ಯೆಯ ಬಂಧು ಬಾಂಧವರನ್ನು ಉಪಚರಿಸುವಲ್ಲಿ ರಾಜಮ್ಮ ಹಿಂದೆ ಬಿದ್ದಿರಲಿಲ್ಲ. ಜೊತೆಗೆ ತನ್ನ ತಂದೆ ಮನೆಯವರನ್ನೂ ಮರೆಯಲಿಲ್ಲ. ಅವಳು, ಸಿಆರ್‌ಸಿ ಮತ್ತು ಅವರ ತಾಯಿ ಸರೋಜಮ್ಮನವರು ನಮ್ಮ ತಂದೆ ತಾಯಿಗಳ ಅನಾರೋಗ್ಯದ ಸಂದರ್ಭಗಳಲ್ಲೆಲ್ಲ ಅವರ ಸೇವೆ ಮಾಡಿದಷ್ಟು ನಾವು ಮಕ್ಕಳಾಗಿ ಮಾಡಿಲ್ಲವೆಂದು ಹೇಳಬೇಕು. ಹಾಗೇ ನಮ್ಮ ತಂದೆ ತಾಯಿ ಮತ್ತು ಕೆಲವೊಮ್ಮೆ ನಮ್ಮ ಅಣ್ಣನ ಮಕ್ಕಳೂ ಈ ಕುಟುಂಬದೊಂದಿಗೆ ಮಾಡಿದಷ್ಟು ದೇಶ ಸಂಚಾರವನ್ನು ನಮ್ಮೊಂದಿಗೆ ಮಾಡಿಲ್ಲವೆಂಬುದೂ ಅಷ್ಟೇ ಸತ್ಯ. ಈ ಕುಟುಂಬದೊಂದಿಗೆ ನಾನು ಮತ್ತು ನನ್ನ ಪತ್ನಿ ಕೈಗೊಂಡ ಹಿಮಾಲಯ ಪ್ರವಾಸ ನಮ್ಮ ಜೀವನದ ಒಂದು ಸ್ಮರಣೀಯ ಘಟನೆಯೇ ಹೌದು. ಅದಕ್ಕಿಂತ ಹೆಚ್ಚಾಗಿ ತೊಂಬತ್ತರ ದಶಕದಲ್ಲಿ ನನಗೆ ಮಾರಣಾಂತಿಕ ಕಾಯಿಲೆಯಾದಾಗ ನಾನು ನನ್ನ ಪತ್ನಿಯೊಂದಿಗೆ ದೂರದ ಮಡಿಕೇರಿಯಿಂದ ಧಾವಿಸಿಬಂದದ್ದು ಇವರ ಮನೆಗೇ. ಇವರ ಮನೆಯಲ್ಲಿದ್ದುಕೊಂಡೇ, ಸಿಆರ್‌ಸಿಯವರ ಮೇಲ್ವಿಚಾರಣೆಯಲ್ಲಿ ಮತ್ತು ರಾಜಮ್ಮನ ಪೋಷಣೆಯಲ್ಲಿ ನಾನು ಚೇತರಿಸಿಕೊಂಡದ್ದು. ಹಾಗೆ ನೋಡಿದರೆ, ಸಿಆರ್‌ಸಿ ಮತ್ತು ರಾಜಮ್ಮನಿಗೆ ನಮ್ಮ ಕುಟುಂಬ ಬೇರೆಯೇ ಆಗಿರಲಿಲ್ಲ. ರಾಜಮ್ಮ ಒಮ್ಮೊಮ್ಮೆ ನಮ್ಮ ಅಣ್ಣನ ಮನೆಯ ಯಜಮಾನಿಕೆಯನ್ನೂ ವಹಿಸಿಕೊಳ್ಳುವ ಉತ್ಸಾಹ ತೋರಿ ಕಿರಿಕಿರಿ ಉಂಟುಮಾಡಿದ್ದೂ ಹೌದು. ಅದೇನೇ ಇರಲಿ, ಅವಳು ಮದುವೆಯಾಗಿ ಹೋದಮೇಲೂ ತನ್ನ ತವರನ್ನು ಮರೆಯಲಿಲ್ಲವಷ್ಟೇ ಅಲ್ಲ, ಅದನ್ನು ತನ್ನ ಮನೆಯನ್ನಾಗಿಯೇ ಉಳಿಸಿಕೊಂಡಳು. ಹಾಗಾಗಿ ನಮ್ಮ ತಾಯಿ ಗೌರಮ್ಮನವರು ಅವರ ಮನೆಯಲ್ಲಿ ತಮ್ಮ ಕೊನೆಯುಸಿರೆಳೆದಿದ್ದು ನ್ಯಾಯೋಚಿತವೇ ಆಗಿದೆ ಎಂದು ನನ್ನ ಭಾವನೆ. ನನ್ನ ಈ ಎಲ್ಲ ಸ್ಮೃತಿಗಳೇ ಬಹುಶಃ, ಅಂದು ಅವಳ ಮನೆಯಲ್ಲಿ ಅವಳ ಶವ ನೋಡಿದಾಗ ತಡೆಯಲಾಗದೆ ನುಗ್ಗಿಬಂದ ದುಃಖ-ಅಳುಗಳ ಮಧ್ಯೆ 'ರಾಜಮ್ಮ! ನೀನು ನಮ್ಮ ಮನೆಯ ದೇವತೆಯಾಗಿದ್ದೆ!' ಎಂಬ ಮಾತನ್ನು ನನ್ನಿಂದ ಹೊರಹಾಕಿದವೆಂದು ಕಾಣುತ್ತದೆ...

ರಾಜಮ್ಮ ಮಾತಿನಲ್ಲಿ ಜೋರಾದರೂ, ಕಟುವಾದರೂ ಹೃದಯದಿಂದ ಕರುಣಾಮಯಿ. ಕಷ್ಟದಲ್ಲಿದ್ದವರಿಗೆ ಅವಳು ಸಹಾಯ ಮಾಡದ ಸಂದರ್ಭವೇ ಇಲ್ಲವೆಂದು ಹೇಳಬೇಕು. ಹಾಗೇ ಅವಳು ತನ್ನ ಬದುಕಿನಲ್ಲಿ ಸಾಕಷ್ಟು ಸುಖ-ಆನಂದ ಅನುಭವಿಸಿದಳು. ಅವಳು ತನ್ನ ದಾಂಪತ್ಯದ ಬದುಕಿನುದ್ದಕ್ಕೂ ಪತಿಯೊಂದಿಗೆ ದೇಶದೊಳಗಷ್ಟೇ ಅಲ್ಲದೆ ಹೊರಗೂ ಅನೇಕ ದೇಶಗಳ ಪ್ರವಾಸ ಮಾಡಿಬಂದಳು. ಮದುವೆಯಾದ ನಂತರ ವೀಣಾವಾದನದಲ್ಲೂ ವಿದ್ವತ್ ಮಾಡಿದ ಅವಳು ಅಸಂಖ್ಯಾತ ಮಕ್ಕಳಿಗೆ ಸಂಗೀತ ವಿದ್ಯೆಯನ್ನು ದಾಟಿಸಿ ಆನಂದಪಟ್ಟಳು. ಸಾರ್ವಜನಿಕ ಸಂಗೀತ ಕಛೇರಿಗಳ ವಿಷಯದಲ್ಲಿ ಅವಳಿಗೆ ಆ ಕ್ಷೇತ್ರದಲ್ಲಿನ ಸಂಕುಚಿತ ರಾಜಕಾರಣದಿಂದಾಗಿ ಅಷ್ಟಾಗಿ ಪ್ರೋತ್ಸಾಹ ಸಿಗಲಿಲ್ಲವಾದರೂ ಅಲ್ಲಲ್ಲಿ ಕಛೇರಿ ನಡೆಸಿ ಅಭಿಮಾನಿಗಳಿಂದ ಮೆಚ್ಚುಗೆ ಗಳಿಸಿದಳು. ಅವಳ ಹಾಡುಗಾರಿಕೆಯ ಧ್ವನಿಮುದ್ರಿಕೆಯೂ ಬಿಡುಗಡೆಯಾಯಿತು. ಅವಳು ಮೈಸೂರು ಶೈಲಿಯ ಚಿತ್ರಕಲೆಯನ್ನೂ ಕಲಿತು ಅದರಲ್ಲಿ ಪರಿಣತಿಯನ್ನು ಸಾಧಿಸಿದ್ದಳು. ಅವಳು ರಚಿಸಿದ ವರ್ಣಮಯ ಸುಂದರ ಕಲಾಕೃತಿಗಳು ಈಗಲೂ ಅವಳ ಮನೆಯ ಗೋಡೆಗಳನ್ನು ಅಲಂಕರಿಸಿದ್ದು ನಮ್ಮ ಗಮನ ಸೆಳೆಯುತ್ತವೆ. ಜೊತೆಗೆ ಅವಳು ತಾನು ವಾಸಿಸುತ್ತಿದ್ದ ಸಿಂಡಿಕೇಟ್ ಬ್ಯಾಂಕ್ ಕಾಲೋನಿಯ ನೆರೆಹೊರೆಯ ಗೃಹಿಣಿಯರೊಂದಿಗೆ ಸೇರಿ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುತ್ತಾ ಸಾಮಾಜಿಕ ಜೀವನದ ಆನಂದವನ್ನೂ ಅನುಭವಿಸಿದಳು.

ನಮ್ಮ ರಾಜಮ್ಮನ ದೊಡ್ಡ ಸಾಧನೆ ಎಂದರೆ, ಸಿಆರ್‌ಸಿ ಅವರೊಂದಿಗೆ ಸಹಮನಸ್ಕಳಾಗಿ ಸಹಕರಿಸಿ ತನ್ನ ಅತ್ತೆ-ಮಾವರ ಹೆಸರಿನ ಟ್ರಸ್ಟ್‌ವೊಂದರ ಅಡಿಯಲ್ಲಿ 'ಸಮಾಧಾನ' ಎಂಬ ಉಚಿತ ಮನೋಚಿಕಿತ್ಸಾ ಸಲಹಾ ಕೇಂದ್ರ ಸ್ಥಾಪಿಸಿದ್ದು. ರಾಮನಗರದ ಬಳಿ ಕುಲದೇವತೆಗಳ ಒಂದು ದೇವಾಲಯಗಳ ಸಂಕೀರ್ಣದ ಜೊತೆಗೇ ಮನೋರೋಗಿಗಳ ಪುನರ್ವಸತಿ ಸಂಕೀರ್ಣವನ್ನೂ ಸ್ಥಾಪಿಸಲು ಅವಳು ಹೆಣಗಿದಳು. ಈ ಪ್ರಯತ್ನಗಳ ಹಾದಿಯಲ್ಲೇ ಅವಳ ಆರೋಗ್ಯ ಹದಗೆಡಲಾರಂಭಿಸಿತೆಂದು ನನ್ನ ಅನ್ನಿಸಿಕೆ. ಆ ಹೊತ್ತಿಗೆ ಅವಳ ಅತ್ತೆಯ ಅನಿರೀಕ್ಷಿತ ಸಾವೂ ಅವಳನ್ನು ಮನೆಯಲ್ಲಿ ಒಂಟಿಯಾಗಿಸಿ ಕಂಗೆಡಿಸ ತೊಡಗಿದ್ದನ್ನೂ ಆಗಾಗ್ಗೆ ಮನೆಗೆ ಭೇಟಿ ಕೊಡುತ್ತಿದ್ದ ನಾನು ಗಮನಿಸಿದ್ದೆ. ಜೊತೆಗೆ ನಮ್ಮ ತಾಯಿಯಿಂದ ಮಧುಮೇಹವೂ, ತಂದೆಯಿಂದ ಅಧಿಕ ರಕ್ತದ ಒತ್ತಡವೂ ಅವಳಿಗೆ ಕೊಡುಗೆಯಾಗಿ ಸಂದಿದ್ದು ಅವು ಒಳಗೊಳಗೇ ಅವಳ ದೇಹವನ್ನು ಘಾಸಿಗೊಳಿಸಿದ್ದವು. ಮಧುಮೇಹದಿಂದ ಕಣ್ಣುಗಳು ಮಸುಕಾಗತೊಡಗಿದ್ದವು. ಶ್ವಾಸಕೋಶಗಳಿಗೆ ಅಲರ್ಜಿ ಅಂಟಿಕೊಂಡಿತ್ತು. ಈ ಬಗ್ಗೆ ಸಿಆರ್‌ಸಿ ಪದೇ ಪದೇ ಚಿಕಿತ್ಸೆಯ ವ್ಯವಸ್ಥೆ ಮಾಡಿದರಾದರೂ, ಮೊದಲೇ ತಿಳಿಸಿದಂತೆ ದೇವರು ದಿಂಡಿರುಗಳನ್ನು ಕುರಿತ ಅವಳ ವಿಪರೀತ ಆಸ್ಥೆ ಮತ್ತು ಬಿಡಲಾಗದ ಮಡಿ-ಮೈಲಿಗೆಗಳ ಭರಾಟೆಯ ನಡುವಿನ ಬಿಡುವಿಲ್ಲದ ಬದುಕು ಈ ಚಿಕಿತ್ಸೆಗಳು ಹೆಚ್ಚು ಫಲಪ್ರದವಾಗದಂತೆ ಮಾಡಿದವು. ಅನಿಯಂತ್ರಿತ ಮಧುಮೇಹದ ಕಾರಣದಿಂದಾಗಿ ಪದೇ ಪದೇ ಕಾಡಲಾರಂಭಿಸಿದ್ದ ಹಲವು ಸೋಂಕುಗಳು ಅವಳನ್ನು ಕಂಗೆಡಿಸತೊಡಗಿದಾಗ ಅವಳು ಅಸಹಾಯಕಳಾದಂತೆ ಕಾಣುತ್ತಿತ್ತು.

ತೀವ್ರ ಅಸ್ವಸ್ಥತೆಯ ನಡುವೆಯೂ ಶಿವಮೊಗ್ಗದ ನಮ್ಮ ಮನೆಗೆ ಸಿಆರ್‌ಸಿ ಅವರೊಂದಿಗೆ ನೀಡಿದ ಕೊನೆಯ ಭೇಟಿಯಲ್ಲಿ (ಅವಳು ಸಿಆರ್‌ಸಿ ಮತ್ತು ತನ್ನ ಅತ್ತೆಯೊಂದಿಗೆ ನಮ್ಮ ಮನೆಗೆ ವರ್ಷಕ್ಕೆ ಕನಿಷ್ಠ ಎರಡು ಬಾರಿ ಭೇಟಿ ನೀಡುತ್ತಿದ್ದಳು. ನಾವಾಗ ನಮ್ಮ ನೆಂಟರಿಷ್ಟರಿಗೆ ಸಂಬಂಧಿಸಿದಂತೆ–ಅವಳು ಅವರೊಂದಿಗೆ ನನಗಿಂತ ಹೆಚ್ಚಿನ ಸಂಪರ್ಕದಲ್ಲಿದ್ದಳಾದ್ದರಿಂದ–ಹಲವು ಸಂಗತಿಗಳ ಬಗ್ಗೆ ಲೋಕಾಭಿರಾಮವಾಗಿ ಮಾತಾಡಿಕೊಳ್ಳುತ್ತಿದ್ದೆವು. ಇತ್ತೀಚೆಗೆ, ನಾನು ನನ್ನ ಆತ್ಮಚರಿತ್ರೆ ಬರೆಯುವ ಸಿದ್ಧತೆ ಮಾಡಿಕೊಳ್ಳುತ್ತಿದ್ದು, ಅದಕ್ಕಾಗಿ ನನಗೆ ಮರೆತುಹೋಗಿರುವ ನಮ್ಮ ನೆಂಟರಿಷ್ಟರ ವಿವರ ಮತ್ತು ವಿಶಿಷ್ಟತೆಗಳನ್ನು ಅವಳ ಬಳಿ ಕೇಳಿ ಗುರುತು ಮಾಡಿಕೊಳ್ಳುತ್ತಿದ್ದೆ. ಆದರೆ ಈಗ ಯಾರನ್ನು ಕೇಳಲಿ?) ಅವಳು ತಾನು ನಂಬಿದ ಜ್ಯೋತಿಷಿಯ ಮಾತುಗಳನ್ನು ಉಲ್ಲೇಖಿಸುತ್ತಾ, 'ನಾನು ಅರವತ್ತು ವರ್ಷಗಳಿಗಿಂತ ಹೆಚ್ಚು ಬದುಕುವುದಿಲ್ಲವಂತೆ ಕಣೋ! ಹಾಗಾಗಿ ಇದು ನಿನ್ನ ಮನೆಗೆ ನನ್ನ ಕೊನೆಯ ಭೇಟಿ ಇರಬಹುದು' ಎಂದು ಹೇಳಿ ನನ್ನನ್ನು ಗಾಬರಿ–ಆತಂಕಗಳಲ್ಲಿ ಮುಳುಗಿಸಿದ್ದಳು. ನಾನು ಅವಳ ಮತ್ತು ನನ್ನ ಸಮಾಧಾನಕ್ಕೆ, 'ಆಯಸ್ಸು ಹೇಳಿ ಗಾಬರಿ ಪಡಿಸುವವರು ಜ್ಯೋತಿಷಿಗಳಿರಲಿ, ಮನುಷ್ಯರೇ ಅಲ್ಲ ಬಿಡು!' ಎಂದಿದ್ದೆ. ಆದರೆ ಕಾಕತಾಳೀಯವೆಂಬಂತೆ ಆ ಜ್ಯೋತಿಷಿಯ ಮಾತೇ ನಿಜವಾಯಿತು. ಅವಳ ಆರೋಗ್ಯ ದಿನೇ ದಿನೇ ಹದಗೆಡತೊಡಗಿ ಕೊನೆಯ ದಿನಗಳ ಉನ್ನತ ದರ್ಜೆಯ ತುರ್ತು ಚಿಕಿತ್ಸೆಗಳ ಹೊರತಾಗಿಯೂ. ಸಿಆರ್‌ಸಿ ಅವಳನ್ನು ಉಳಿಸಿಕೊಳ್ಳಲಾಗಲಿಲ್ಲ.

ಅವಳ ಸಾವಿನ ಎರಡು ದಿನ ಮುಂಚೆ ನಾನು ಮತ್ತು ಸವಿತಾ ವಿಕ್ಟೋರಿಯಾ ಆಸ್ಪತ್ರೆಯ ತುರ್ತು ಚಿಕಿತ್ಸಾ ಘಟಕದಲ್ಲಿ ಅವಳ ಜೊತೆಗಿದ್ದೆವು. ತುರ್ತು ಚಿಕಿತ್ಸೆಯ ಫಲವಾಗಿ ಪೂರ್ಣ ಗುಣಮುಖಳಾಗಿದ್ದಂತೆ ಕಂಡ ಅವಳು, ಬದುಕಿ ಬಂದ ಸಂಭ್ರಮದಲ್ಲಿ, 'ನಿಮ್ಮನ್ನೆಲ್ಲ ಮತ್ತೆ ನೋಡ್ತಿನೋ ಇಲ್ಲವೋ ಅಂದುಕೊಂಡಿದ್ದೆ ಕಣೋ! ಸದ್ಯ ಪಾರಾದೆ!' ಎಂದು ನಿಟ್ಟುಸಿರುಬಿಟ್ಟಿದ್ದಳು. ರಕ್ತ ಪೂರೈಕೆ ಚಿಕಿತ್ಸೆಗೆ ತಯಾರಾಗುತ್ತಿದ್ದ ಅವಳನ್ನು ಆ ಸಂಜೆ ಬೀಳ್ಕೊಟ್ಟು ಹೊರಡುತ್ತಿದ್ದ ನಮ್ಮನ್ನು ತಡೆದು ಸವಿತಾಳನ್ನು ತನ್ನ ಉಪಚಾರಕ್ಕಾಗಿ ರಾತ್ರಿವರೆಗೆ ಅಲ್ಲಿಯೇ ಉಳಿಸಿಕೊಂಡಳು. ಆದರೆ ಆ ರಾತ್ರಿಯೇ ಅವಳ ಕಾಯಿಲೆಗಳು ಮತ್ತೆ ತೀವ್ರ ಉಲ್ಬಣಿಸಿದ ಕಾರಣ ಅವಳನ್ನು ವಿಕ್ಟೋರಿಯಾದಿಂದ ಜಯನಗರದ ಅಪೋಲೋಗೆ ಕೊಂಡೊಯ್ಯಲಾಯಿತು. ತನ್ನ ಅರವತ್ತನೇ ಹುಟ್ಟುಹಬ್ಬವನ್ನು ನಮ್ಮೆಲ್ಲರೊಂದಿಗೆ ಸಂಭ್ರಮದಿಂದ ಆಚರಿಸಿಕೊಳ್ಳುವ ತುಂಬು ನಿರೀಕ್ಷೆಯಲ್ಲಿದ್ದ ಅವಳು ಮರುದಿನವೇ ಇದ್ದಕ್ಕಿದಂತೆ ನಮ್ಮನ್ನೆಲ್ಲ ಬಿಟ್ಟು ಹೋದಳು. ನನ್ನ ಅಸ್ತಿತ್ವದ ಒಂದು ಭಾಗವೇ ಕಳಚಿಹೋದಂತೆ ಮಾಡಿರುವ (ನಮ್ಮ ತಂದೆಯ ಸಾವೂ ನನಗೆ ಹೀಗೇ ಮಾಡಿತ್ತು) ಅವಳ ಈ ವಿದಾಯ ನಮ್ಮ ಕಡೆಯಿಂದ ಅತಿ ದುಃಖದಾಯಕ ಸಂಗತಿ ಎನಿಸಿದರೂ, ಅವಳಿಗೆ ಅದು ಅಪಾರ ದೈಹಿಕ ಹಿಂಸೆಗಳಿಂದ 'ಬಿಡುಗಡೆ'ಯೇ ಆಗಿತ್ತು. ಅವಳು ಕೊನೆಯ ದಿನಗಳಲ್ಲಿ ಆಸ್ಪತ್ರೆಯಲ್ಲಿದ್ದಷ್ಟು ದಿನವೂ ಅವಳ ಬಳಿಯೇ ಇದ್ದ ನಮ್ಮಣ್ಣನ ಮಗ ಪ್ರಶಾಂತನ ಪ್ರಕಾರ ಅವಳು ಸಾವಿನಲ್ಲಿ

ಶಾಂತಿಯನ್ನು ಕಂಡಳು. ಕೊನೆಯುಸಿರೆಳೆಯುವ ಮುನ್ನ ಅವಳು ಕೇಳಿದ ಕೊನೆಯ ಪ್ರಶ್ನೆ: 'ಅಣ್ಣಯ್ಯ ಬಂದನೇನೋ?'

ಅದು ಅವಳು ತನ್ನ ಜೀವನದಲ್ಲಿ ಎಲ್ಲರಿಗಿಂತ ಹೆಚ್ಚಾಗಿ ಹಚ್ಚಿಕೊಂಡಿದ್ದ ನನ್ನ ಮತ್ತು ಅವಳ ಅಣ್ಣನಾದ ಚಂದ್ರಶೇಖರಯ್ಯನವರನ್ನು ಕುರಿತಾಗಿತ್ತಾದರೂ, ಅವಳ ಆ ಅಣ್ಣಯ್ಯನಲ್ಲಿ ನಮ್ಮ ಇಡೀ ಕುಟುಂಬವೇ ಸೇರಿತ್ತು ಎಂದು ನಾನು ಭಾವಿಸಿದ್ದೇನೆ. ಹೌದು ಆ ಅಣ್ಣಯ್ಯ ಆಗ ಅಲ್ಲಿ ಹಾಜರಿದ್ದರು; ಆದರೆ ಅವಳ ಪ್ರಜ್ಞೆಗೆ ಬಾರದಂತೆ.

ರಾಜಮ್ಮನ ಸ್ಮರಣಾರ್ಥ ಡಾ. ಸಿ.ಆರ್. ಚಂದ್ರಶೇಖರ್ ಅವರು ತಾವು ಸೇವೆ ಸಲ್ಲಿಸಿದ ಬೆಂಗಳೂರಿನ ಮಾನಸಿಕ ಮತ್ತು ನರರೋಗಗಳ ಸಂಸ್ಥೆಯ ಆವರಣದಲ್ಲಿ ಒಂದು ಸಾರ್ವಜನಿಕ ವಿಶ್ರಾಂತಿ ಗೃಹ ನಿರ್ಮಿಸುವ ಪ್ರಯತ್ನದಲ್ಲಿದ್ದಾರೆ. ಅವರ ಈ ಪ್ರಯತ್ನಕ್ಕೆ ನಾವೆಲ್ಲ ಕೈಜೋಡಿಸೋಣ. ಅದುವೇ ರಾಜಮ್ಮನ ನೆನಪಿಗೆ ನಾವು ಸಲ್ಲಿಸಬಹುದಾದ ಸಾರ್ಥಕ ಶ್ರದ್ಧಾಂಜಲಿ.

ಓಂ ಶಾಂತಿ ಶಾಂತಿ ಶಾಂತಿಃ

(ವಿದುಷಿ ಡಿ.ಎಸ್. ರಾಜೇಶ್ವರಿ ಸ್ಮರಣ ಗಂಥದಲ್ಲಿ – ೨೦೧೬ – ಪ್ರಕಟ)

ನಮ್ಮ ಮನೆಗಳ ಮೌನ ಸಾಧಕಿಯರು

(ನಮ್ಮ ಅತ್ತಿಗೆಗೊಂದು ಶ್ರದ್ಧಾಂಜಲಿ)

ನಮ್ಮ ಅತ್ತಿಗೆ ಮೊನ್ನೆ ತೀರಿ ಹೋದರು. ಅವರ ಹೆಸರು ಪ್ರಭಾವತಿ. ಅವರು ನನ್ನ ಅಣ್ಣ ಡಾ. ಡಿ.ಎಸ್. ಚಂದ್ರಶೇಖರಯ್ಯ ಅವರ ಪತ್ನಿ. ನಮ್ಮಣ್ಣ ಬೆಂಗಳೂರು ವಿಶ್ವವಿದ್ಯಾಲಯದ ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿದ್ದವರು ಮತ್ತು ವಿಜ್ಞಾನ ವಿಭಾಗಗಳ ಡೀನ್ ಕೂಡ ಆಗಿ ನಿವೃತ್ತರಾದವರು. ಇವರು ಇಂಜಿನಿಯರಿಂಗ್ ಗಣಿತ ಎಂಬ ಸಂಪುಟಗಳ ಮೂಲಕ ಇಂಜಿನಿಯರಿಂಗ್ ವಿದ್ಯಾರ್ಥಿಗಳ ನಡುವೆ ಸಾಕಷ್ಟು ಜನಪ್ರಿಯರಾದವರು ಹಾಗೂ ಉನ್ನತ ಗಣಿತಶಾಸ್ತ್ರದ ಬಗೆಗೂ ಅಂತಾರಾಷ್ಟ್ರೀಯ ಪ್ರಕಾಶನ ಸಂಸ್ಥೆಗಳ ಮೂಲಕ ಹಲವು ಪುಸ್ತಕಗಳನ್ನು ಪ್ರಕಟಿಸಿದವರು. ನಾನು ಕೂಡ ಅವರ ವಿದ್ಯಾರ್ಥಿಯೇ.

ಆದರೆ ನಮ್ಮ ಅತ್ತಿಗೆ ಅಷ್ಟೇನೂ ಓದಿದವರಲ್ಲ; ಎಸ್.ಎಸ್.ಎಲ್.ಸಿ ಪಾಸು ಮಾಡಿದವರಷ್ಟೆ. ಈ ಬಗ್ಗೆ ಹಿಂದೆ ನಮ್ಮಣ್ಣ ನಮ್ಮ ತಂದೆ-ತಾಯಿಗಳ ಬಳಿ 'ಓದಿಲ್ಲದವಳನ್ನು ತಂದು ಕಟ್ಟಿಬಿಟ್ಟಿರಿ' ಎಂದು ಆಗಾಗ್ಗೆ ಗೊಣಗುತ್ತಿದ್ದುದೂ ಉಂಟು. ಆದರೆ ಇತ್ತೀಚಿನ ವರ್ಷಗಳಲ್ಲಿ ಅಲ್ಲ. ಏಕೆಂದರೆ ತುಂಬ ಓದದೇ ಇದ್ದುದರಿಂದಲೇ ಅವರು ಏನು ಸಾಧಿಸಿದರೋ, ಎಷ್ಟು ಜನರ ಪ್ರೀತಿ-ವಿಶ್ವಾಸ ಸಂಪಾದಿಸಿ ನಿರ್ಗಮಿಸಿದರೋ ಅದನ್ನ ಸಾಧಿಸಲು ಸಾಧ್ಯವಾಗಿದ್ದು. ನಮ್ಮ ಇಡೀ ಕುಟುಂಬ ಈ ಮಹಾಮಾತೆಗೆ ಇಂದು ತಲೆಬಾಗಿ ವಂದಿಸುತ್ತಿದೆ.

ನಮ್ಮ ಅತ್ತಿಗೆ ನಮ್ಮ ಮನೆಗೆ ಮದುವೆಯಾಗಿ ಬಂದಾಗ ನಾನು ಮೊದಲ ಪದವಿ ಓದುತ್ತಿದ್ದೆ. ಜೊತೆಗೆ ಚಿಕ್ಕವರಾದ ಇಬ್ಬರು ತಂಗಿಯರು. ಅಲ್ಲದೆ ನಮ್ಮ ಜೊತೆಯಲ್ಲೇ ಇದ್ದ ನಮ್ಮ ತಂದೆ ತಾಯಿಗಳು. ನಮ್ಮದು ಆಗ ತಾನೇ ನಮ್ಮಣ್ಣನ ಉಪನ್ಯಾಸಕ ಹುದ್ದೆಯಿಂದಾಗಿ ಬಡತನದಿಂದ ಮಧ್ಯಮ ವರ್ಗಕ್ಕೆ ಹೊರಳಿಕೊಳ್ಳುತ್ತಿದ್ದ ಕಾಲ. ನಮ್ಮ

ತಂದೆ ಪ್ರಾಥಮಿಕ ಶಾಲಾ ಮಾಸ್ತರರಾಗಿ ನಿವೃತ್ತರಾದವರು. ನಮ್ಮ ಅತ್ತಿಗೆಯಾದರೋ ಕೊಳ್ಳೇಗಾಲದ ಸ್ವಲ್ಪ ಅನುಕೂಲಸ್ಥ ಮನೆತನದಿಂದ ಬಂದವರು. ಕುಟುಂಬದ ಚಿನ್ನ-ಬೆಳ್ಳಿ ಕೆಲಸವಲ್ಲದೆ ಕಾವೇರಿ ತೀರದಲ್ಲಿ ಜಮೀನನ್ನೂ ಹೊಂದಿದ್ದ ಕುಟುಂಬ. ಹಾಗಾಗಿ ನಮ್ಮ ಅತ್ತಿಗೆಗೆ ಹೊಸದರಲ್ಲಿ ನಮ್ಮ ಕೆಲ ರೀತಿ-ರಿವಾಜುಗಳಿಗೆ, ಪ್ರವೃತ್ತಿಗಳಿಗೆ ಹೊಂದಿಕೊಳ್ಳುವುದು ಕಷ್ಟವೇ ಆಯಿತೆಂದು ಹೇಳಬೇಕು. ಆದರೆ ನಮ್ಮ ತಾಯಿಯ ಬಹು ಪ್ರಬುದ್ಧ ಅತ್ತೆತನದಿಂದಾಗಿ ಈ ವ್ಯತ್ಯಾಸಗಳು ಯಾವ ಕಿರಿಕಿರಿಯನ್ನೂ ಉಂಟು ಮಾಡದೆ ಸರಿಹೋದವು. ಜೊತೆಗೆ ಅವರ ಕುಟುಂಬವು ದೇವರಾಜ ಅರಸರ ಭೂ ಸುಧಾರಣಾ ಕಾನೂನುಗಳಿಂದಾಗಿ ಜಮೀನನ್ನು ಕಳೆದುಕೊಂಡುದರಿಂದ ತತ್ತರಿಸಿ ಧೃತಿಗೆಟ್ಟಿದ್ದರಿಂದಾಗಿ ನಮ್ಮ ಅತ್ತಿಗೆಗೆ ನಮ್ಮ ಕುಟುಂಬದೊಂದಿಗೆ ಹೆಚ್ಚು ಸಮರಸವಾಗಿ ಕೂಡಿಕೊಳ್ಳಲು ಸಹಾಯವಾಯಿತು.

ನಮ್ಮ ಅತ್ತಿಗೆ ಕುಟುಂಬದಲ್ಲಿ ಹೆಚ್ಚಿಗೆ ಓದಿದವರು ಕಡಿಮೆ. ಜೊತೆಗೆ ಇತರ ಓದೂ ಕಡಿಮೆ. ಆದರೆ ನಮಗೆ ಪುಸ್ತಕಗಳ ಸಂಪರ್ಕ ಜಾಸ್ತಿ. ಹಲವು ಬಾರಿ ಮಾತುಕತೆ ಸಾಹಿತ್ಯ ಕೃತಿಗಳ ಮತ್ತು ಸಾರ್ವಜನಿಕ ಸಂಗತಿಗಳ ಸುತ್ತ ನಡೆಯುತ್ತಿದ್ದವು. ಇದರ ಜೊತೆಗೇ ನಮ್ಮಣ್ಣ ಡಾಕ್ಟರೇಟ್ ಮಾಡತೊಡಗಿದ್ದ. ಇನ್ನೂ ಮುಖ್ಯ ಸಂಗತಿ ಎಂದರೆ ಕುಟುಂಬಕ್ಕೆ ನಮ್ಮ ತಂದೆಯವರ 'ಮೌಲ್ಯ'ಯುತವಾದ ಮಾರ್ಗದರ್ಶನ. ಇದೆಲ್ಲವೂ ನಮ್ಮ ಅತ್ತಿಗೆಗೆ ನಮ್ಮ ಕುಟುಂಬದ ಬಗ್ಗೆ ವಿಶಿಷ್ಟ ಗೌರವ ಮೂಡಿಸಿದ್ದರೆ ಆಶ್ಚರ್ಯವಿಲ್ಲ. ಬಹುಬೇಗ ಅವರು ನಮ್ಮ ಕುಟುಂಬದ ಸಾವಯವ ಭಾಗವಾಗಿ ಹೋದರು. ಎಲ್ಲರ ಮೆಚ್ಚುಗೆಯ ಅತ್ತಿಗೆ/ಸೊಸೆ ಆದರು. ಅವರಲ್ಲಿ ವ್ಯಕ್ತಿಗತ ದೌರ್ಬಲ್ಯಗಳಿರಲಿಲ್ಲವೆಂದಲ್ಲ. ಎಲ್ಲರಂತೆ ಅವರಲ್ಲೂ ಕೆಲವಿದ್ದವು. ಅವುಗಳ ಪರಿಣಾಮಗಳನ್ನು ಅವರು ತಮ್ಮ ಬದುಕಿನಲ್ಲಿ 'ಅನುಭವಿಸಿ'ಯೇ ಹೋದರು. ಅದರ ವಿವರಗಳು ಇಲ್ಲಿ ಅನಗತ್ಯ.

ಈ ಐವತ್ತು ವರ್ಷಗಳಲ್ಲಿ ಅವರು ನಮ್ಮ ಕುಟುಂಬದ ಕೇಂದ್ರಶಕ್ತಿಯೇ ಆದರು. ಆದರೆ 'ಯಜಮಾನಿ'ಯಾಗಿ ಅಲ್ಲ. ಅವರು ಎಂದೂ ಯಾರ ಪಾಲಿಗೂ 'ಯಜಮಾನಿಕೆ'ಯ ವ್ಯಕ್ತಿತ್ವವಾಗಿದ್ದವರಲ್ಲ. ಸ್ವಲ್ಪ ಹಿಂಜರಿಕೆಯ ಸ್ವಭಾವವೇ ಯಾವಾಗಲೂ ಅವರದ್ದು. ಆದರೆ ಅದೇ ಅವರ ದೊಡ್ಡಗುಣವಾಯಿತು. ನಮ್ಮ ತಂದೆಯವರಿಂದ ಆರಂಭವಾದಂತೆ ಸದಾ ಜೋರಿನವರೇ ಆದ ನಮ್ಮ ಕುಟುಂಬದ ಇತರರನ್ನು ನಮ್ಮ ಅತ್ತಿಗೆಯ ಈ ಗುಣ ಪರೋಕ್ಷವಾಗಿ ವರ್ತನೆಗಳಲ್ಲಿ ಸ್ವಲ್ಪ ಸಂಯಮವನ್ನು ಕಲಿಯಲು ಪ್ರೇರೇಪಿಸಿತು ಎಂದೇ ಹೇಳಬೇಕು. ಅವರು ಶ್ರದ್ಧೆಯಿಂದ ಮಾಡುತ್ತಿದ್ದ ನಮ್ಮ ತಂದೆ-ತಾಯಿಯ ಸೇವೆ ಅವರನ್ನು ನಾವು ಕ್ರಮೇಣ ಒಡಹುಟ್ಟಿದ ಅಕ್ಕನಂತೆಯೇ ಕಾಣುವಂತೆ ಮಾಡಿತು. ಬರೀ ನಮ್ಮ ಕುಟುಂಬವಷ್ಟೇ ಅಲ್ಲ, ನಮ್ಮ ಮನೆಗೆ ಶಿಕ್ಷಣಕ್ಕಾಗಿ ಬಂದಿರುತ್ತಿದ್ದ ನಮ್ಮ ಆಪ್ತ ಬಂಧುಗಳ ಮಕ್ಕಳಿಗೂ ಅವರು ಅಕ್ಕ-ತಾಯಿಯಾಗಿ ಅವರ ಯೋಗಕ್ಷೇಮವನ್ನು ನೋಡಿಕೊಂಡ 'ಅನ್ನಪೂರ್ಣೆ'ಯೇ ಆದರು. ನಮ್ಮ ಕುಟುಂಬದ ಮಾತ್ರವಲ್ಲ, ನಮ್ಮ ಮನೆತನದ ಹಿರಿಯ ಸೊಸೆಯಾದ ಅವರು ನಮ್ಮ ಮನೆತನದವರೆಲ್ಲರೂ 'ಮನೆಗೆ

ಬಂದರೆ ಇಂತಹ ಸೊಸೆ ಬರಬೇಕು!' ಎನ್ನತೊಡಗಿದ್ದರು. ಅಂತಹ ಸ್ನೇಹಮಯ, ನಿಸ್ಪೃಹ ಸೇವೆ, ಮಾತುಕತೆ, ಗೌರವ ಅವರಿಂದ. ಅವರು– ಕುಟುಂಬ ಸಹಜವಾದ ಕೆಲ ಕ್ಷಣಿಕ ಅಸಮಾಧಾನಗಳ ನಡುವೆಯೂ– ನಮ್ಮ ಪಾಲಿಗೆ 'ಮನೆಗೆ ಬಂದ ಮಹಾಲಕ್ಷ್ಮಿ'ಯೇ ಆಗಿದ್ದರು.

ಇಂತಹ ಸಂದರ್ಭಗಳಲ್ಲೆಲ್ಲ ನನಗೆ ನಮ್ಮ ತಂದೆ–ತಾಯಿ ತಮ್ಮ ಕುಟುಂಬ ಈಗಿರುವ ಸ್ಥಿತಿಯಲ್ಲಿ ಮನೆಗೆ ಎಂತಹ ಸೊಸೆ ತರಬೇಕು ಎಂಬ ಬಗ್ಗೆ ಹೊಂದಿದ್ದ ವಿವೇಚನೆ ಮತ್ತು ಮುನ್ನೋಟಗಳ ಬಗ್ಗೆ ಮೆಚ್ಚುಗೆ ಗೌರವಗಳು ಉಂಟಾಗುತ್ತಿದ್ದವು. ನಮ್ಮಣ್ಣ ಕೂಡ ತನಗೆ ಓದಿಲ್ಲದ ಹೆಣ್ಣು ತಂದು ಕಟ್ಟಿದರು ಎಂದು ಗೊಣಗುವುದನ್ನು ಕ್ರಮೇಣ ನಿಲ್ಲಿಸಿದ. ದಯವಿಟ್ಟು ಯಾರೂ ಹೆಣ್ಣಿನ ಓದಿನ ಬಗ್ಗೆ ನನ್ನದು ಪೂರ್ವಗ್ರಹದ ನಿಲುವು ಎಂದು ಭಾವಿಸಬಾರದು. ಸ್ವತಃ ನನ್ನ ತಂಗಿಯರೇ ಉನ್ನತ ಶಿಕ್ಷಣ ಪಡೆದವರು. ನನ್ನ ಪತ್ನಿ ಕೂಡ. ಮತ್ತು ನನ್ನ ಅತ್ತಿಗೆಯೇ ತಮ್ಮ ಮೂರು ಜನ ಮಕ್ಕಳಿಗೆ–ಅವರಲ್ಲಿ ಇಬ್ಬರು ಹೆಣ್ಣು ಮಕ್ಕಳು–ಸ್ನಾತಕೋತ್ತರ ಶಿಕ್ಷಣ ಕೊಡಿಸಿದವರು. ಅವರ ಸೊಸೆಯೂ ಉನ್ನತ ಶಿಕ್ಷಣ ಪಡೆದವರೇ. ಆದರೆ ನನ್ನ ಪ್ರಶ್ನೆ ಅಥವಾ ಬೆರಗು: ನಮ್ಮ ಅತ್ತಿಗೆ ಹೆಚ್ಚು ಓದಿದ್ದರೆ, ಅವರ ಮೂಲಕ ನಮ್ಮ ಕುಟುಂಬ ಏನನ್ನು ಸಾಧಿಸಿತೋ ಅದನ್ನು ಸಾಧಿಸಲು ಸಾಧ್ಯವಾಗುತ್ತಿತ್ತೇ ಎಂಬುದು. ವಾಸ್ತವವಾಗಿ ನಮ್ಮ ಕುಟುಂಬದ ಸಾಧನೆ ಎಂದರೆ ಭಾಗಶಃ ಅವರ ಸಾಧನೆಯೇ. ಹಾಗಾಗಿಯೇ ಮೊನ್ನೆ ಅವರ ಪಾರ್ಥಿವ ಶರೀರಕ್ಕೆ ಗೌರವ ಸಲ್ಲಿಸಲು ನಮ್ಮ ಮನೆತನದ ಎಲ್ಲ ಶಾಖೆಗಳಿಂದಲೂ ಹಿರಿಕಿರಿಯರೆನ್ನದೆ ಎಲ್ಲರೂ ಬಂದಿದ್ದುದು.

ಆಗ ನನಗನ್ನಿಸಿದ್ದು: ನಾವು ಉನ್ನತ ಅಧಿಕಾರ ಸ್ಥಾನಗಳಿಗೇರಿಯೋ, ಉನ್ನತ ವೇತನ/ಆದಾಯವನ್ನು ಪಡೆದೋ ಅಥವಾ ಮಹತ್ವದ ಸಾರ್ವಜನಿಕ ಚರ್ಚೆಗಳಲ್ಲಿ ಭಾಗವಹಿಸಿ, ಪ್ರಸಿದ್ಧ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದು, ಪುಸ್ತಕ ಪ್ರಕಟಿಸಿ, ಪ್ರಶಸ್ತಿಗಳನ್ನು ಪಡೆದೋ ದೊಡ್ಡ ಸಾಧನೆ ಮಾಡಿದವರೆಂದು ಗುರುತಿಸಲ್ಪಡುತ್ತೇವೆ. ಆದರೆ ನಮ್ಮ ಅತ್ತಿಗೆಯಂತಹವರ ಸಾಧನೆಯೇನು ಕಡಿಮೆಯೇ? ನನ್ನ ಪ್ರಕಾರ ನೇಪಥ್ಯದ ಅವರ ಸಾಧನೆ ನಮ್ಮಂಥವರ ಈ ಸಾಧನೆಗಳಿಗಿಂತ ತುಂಬ ದೊಡ್ಡದು. ನಮ್ಮ ಸಾಧನೆಗೆ ಮೂಲ ಆಧಾರವೇ ಇವರ ಸಾಧನೆ ಅಲ್ಲವೆ? ಹಾಗೆ ನೋಡಿದರೆ ಅವರೆಂದೂ ತಾವು ಸಾಧನೆ ಮಾಡಿದವರೆಂದು ಭಾವಿಸಿದವರಲ್ಲ. ಸಾಧನೆ ಮಾಡಬೇಕು ಎಂದೂ ಬದುಕು ನಡೆಸಿದವರಲ್ಲ. ಬಹು ಸಹಜವಾಗಿ ತಾಯ್ತನದ ಧರ್ಮ ಮೆರೆದವರು ಅವರು. ಆದರೆ ಅವರಂಥವರಿಗೆ ಅವರು ಬದುಕಿದ್ದಾಗಲೇ ತಕ್ಕ ಮಾನ್ಯತೆ ನಮ್ಮ ಕುಟುಂಬಗಳಲ್ಲಿ ದೊರೆಯುತ್ತಿದೆಯೇ? ಎಂದು ಕೇಳಿಕೊಂಡಾಗ, ನಿರಾಶೆಯೂ, ನಾಚಿಕೆಯೂ ಒಟ್ಟಾಗಿ ಆಗುತ್ತದೆ. ಇದಕ್ಕೆ ನಮ್ಮ ಆಧುನಿಕ ಸಮಾಜದಲ್ಲಿ ಹೊರ, ಪ್ರಯತ್ನಪೂರ್ವಕ, ಎದ್ದು ಕಾಣುವ ಸಾಧನೆಗಳಿಗೇ ಹೆಚ್ಚು ಪ್ರಾಶಸ್ತ್ಯ ದೊರೆಯುವಂತಾಗಿರುವುದೇ ಕಾರಣವಾಗಿದೆ. ಇದಕ್ಕೆ ಮತ್ತೆ ಕಾರಣ ಸಮಾಜ ಹೆಚ್ಚು ಲೌಕಿಕ ಯಶಸ್ಸಿನ ಕಡೆ ವಾಲುತ್ತಾ, ಹೆಚ್ಚು

ವ್ಯಕ್ತಿಗತವೂ, ಹೆಚ್ಚು ಪ್ರತಿಷ್ಠೆಪ್ರಿಯವೂ ಆಗುತ್ತಿದ್ದು ಕುಟುಂಬ ಕಟ್ಟುವ ಕೌಶಲ್ಯ, ದಕ್ಷತೆ, ಶ್ರದ್ಧೆ ಮತ್ತು ಅರ್ಪಣಾ ಮನೋಭಾವದ ಗುಣಗಳು ಹಿಂದೆ ಸರಿಯುತ್ತಿರುವುದು. ಇದರ ಸಾಮಾಜಿಕ ದುಷ್ಪರಿಣಾಮಗಳನ್ನು ನಾವಿಂದು ಕಣ್ಣಾರೆ ನೋಡುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ನಮ್ಮ ಅತ್ತಿಗೆಯವರ ನೆನಪು ನನಗೆ ಬಹು ಅಮೂಲ್ಯವೆನಿಸುತ್ತದೆ. ನಾವೆಲ್ಲ ಬದುಕಿರುವವರೆಗೂ ಅವರು ನಮಗಿಂತ ಹೆಚ್ಚು ಬದುಕಿರುತ್ತಾರೆ.

(ಫೇಸ್‌ಬುಕ್ ಬರಹ : ೧ ಡಿಸೆಂಬರ್, ೨೦೧೭)

ಭಾಗ–೪

(ಕೆಲ ಪತ್ರ ಸಂವಾದಗಳು)

ಗಿರೀಶ್ ಭಟ್
ಅಜಕ್ಕಳರ ಒಂದು ಪುಸ್ತಕ

೪.೨.೨೦೧೬

ಪ್ರಿಯ ಶ್ರೀ ಗಿರೀಶ್ ಅವರಲ್ಲಿ,

ವಂದನೆಗಳು. ನೀವು ವಿಶ್ವಾಸಪೂರ್ವಕವಾಗಿ ಕಳಿಸಿದ ಅಸಹಿಷ್ಣುತೆ ಕುರಿತ ನಿಮ್ಮ ಕಿರುಪುಸ್ತಕವನ್ನು ಇದೀಗ ತಾನೇ ಓದಿಮುಗಿಸಿದೆ. ನಾನು ಹೇಳಬಹುದಾದದ್ದು ಇಷ್ಟು:

ಈ ಪುಸ್ತಕದಲ್ಲಿ ನೀವು ಸೆಕ್ಯುಲರ್‌ವಾದ-ವಾದಿಗಳೆಂದು ಗುರುತಿಸಿ ಎದುರುತ್ತರ ಕೊಡಲು ಯತ್ನಿಸಿರುವ ಪಂಥ/ಪಂಥೀಯರು ಮೂಲತಃ ಮಾರ್ಕ್ಸ್‌ವಾದಿಯಾದದ್ದು/ಮಾರ್ಕ್ಸ್‌ವಾದಿಗಳು. ಅವರೀಗ ರಾಜಕೀಯವಾಗಿ ಸೋತುಸುಣ್ಣವಾಗಿ ತಮ್ಮ ಭವಿಷ್ಯದ ಬಗ್ಗೆ ತೀರಾ ಆತಂಕಗೊಂಡಿರುವರು. ತಮ್ಮ (ಜಗತ್ತನ್ನು ಭೌತ-ಅಭೌತವೆಂದು ವಿಭಾಗಿಸಿ ನೋಡುವ) ಸಿದ್ಧಾಂತದಲ್ಲೇ ಮೂಲದೋಷವಿದೆ; ಅದೇ ತಮ್ಮ ಅವನತಿಗೆ ಕಾರಣವಾಗಿದೆ ಎಂದು ಇನ್ನೂ ಅರಿಯಲಾಗದ ಈ ಸಿದ್ಧಾಂತಶರರು, ಸಂಘ ಪರಿವಾರದ ರಾಜಕಾರಣವೇ ತಮ್ಮ ವಿನಾಶಕ್ಕೆ ಕಾರಣವೆಂದು ನಂಬಿ ಅದರ ವಿರುದ್ಧ ನಡೆಸಿರುವ ರಾಜಕೀಯ ಪ್ರಚಾರಾಂದೋಲನದ ಒಂದು ಆಯಾಮವಾಗಿ ಇಂದು ಅಸಹಿಷ್ಣುತೆ ಕುರಿತ ಚರ್ಚೆ ಕಾಣುತ್ತಿರುವುದು ನಿಜ.

೨. ಆದರೆ ಭಾರತದಲ್ಲಿ ಸೆಕ್ಯುಲರ್‌ವಾದದ ಇನ್ನೊಂದು ಆವೃತ್ತಿಯೂ ಇದೆ. ಸೆಕ್ಯುಲರ್‌ವಾದ ಪಶ್ಚಿಮದ ಆಧುನಿಕ ರಾಜಕಾರಣದಿಂದ ಆಮದಾದದ ಪರಿಕಲ್ಪನೆ ಎಂಬುದು ತಾಂತ್ರಿಕವಾಗಿ ಸರಿ ಎನಿಸಿದರೂ, ನಮ್ಮ ರಾಷ್ಟ್ರೀಯ ಹೋರಾಟದ ಮೂಲಕ ಇಲ್ಲಿ ಕಟ್ಟಿಕೊಂಡ ಆಧುನಿಕ ರಾಜಕಾರಣ ಎದುರಿಸಬೇಕಾಗಿ ಬಂದ ಬಿಕ್ಕಟ್ಟುಗಳ ಹಿನ್ನೆಲೆಯಲ್ಲಿ ನಮ್ಮದೇ ಎನ್ನಬಹುದಾದ ಸೆಕ್ಯುಲರ್‌ವಾದವೆಂಬುದೊಂದು ಅಸ್ತಿತ್ವದಲ್ಲಿದೆ ಎಂಬುದನ್ನು ನಾವು ಗಮನಿಸದಿರಲಾಗದು. ನಿರ್ದಿಷ್ಟವಾಗಿ, ಕಳೆದ ಶತಮಾನದ ಮುವ್ವತ್ತರ ದಶಕದಿಂದಲೂ ಗಾಂಧಿ ರಾಜಕಾರಣದ ವಿರುದ್ಧ ಹಲವು ನೆಲೆಗಳಲ್ಲಿ

ಕೆಲಸ ಮಾಡುತ್ತಾ ಬಂದಿರುವ ಸಂಕುಚಿತ ಹಿಂದೂವಾದಿ ರಾಜಕಾರಣ ಈ ದೇಸಿ ಸೆಕ್ಯುಲರ್‌ವಾದದ ಅಗತ್ಯವನ್ನು ಮನಗಾಣಿಸಿದೆ.

೩. ಹಿಂದೂ ಧರ್ಮ ಸೆಮೆಟಿಕ್ ಧರ್ಮಗಳಂತೆ 'ರಿಲಿಜಿಯನ್' ಅಲ್ಲ ಎಂಬುದು ತಾಂತ್ರಿಕವಾಗಿ ಮಾತ್ರ ಸರಿ. ಮೇಲೆ ಪ್ರಸ್ತಾಪಿಸಿದ ಹಿಂದೂವಾದಿ ರಾಜಕಾರಣ ಆರಂಭವಾದ ಕಾಲದಿಂದಲೂ ಹಿಂದೂ ಧರ್ಮವನ್ನು ಒಂದು 'ರಿಲಿಜಿಯನ್' ಆಗಿ ಕಟ್ಟುವ ವ್ಯವಸ್ಥಿತ ಪ್ರಯತ್ನ ನಡೆದೇ ಇದೆ. ಆಧುನಿಕ ಕಾಲದ ನಮ್ಮ ಅನ್ಯಮತ ವಿರೋಧಿ ದಂಗೆಗಗಳಲ್ಲಿ ತಮ್ಮೆಲ್ಲ ಪ್ರತ್ಯೇಕ ಸಂಪ್ರದಾಯಗಳನ್ನು ಮರೆತು ಎಲ್ಲ ಸಂಪ್ರದಾಯಗಳ ಹಿಂದೂಗಳೂ ಭಾಗವಹಿಸುವುದನ್ನು ನಾವು ನೋಡಿದ್ದೇವೆ, (ಉದಾ: ೧೯೮೪ರ ಸಿಖ್ ಹತ್ಯಾಕಾಂಡ, ೨೦೦೨ರ ಗುಜರಾತ್ ಹತ್ಯಾಕಾಂಡ, ರಾಮಜನ್ಮಭೂಮಿ ಆಂದೋಲನ ರಾಮನನ್ನು ಎಲ್ಲ ಸಂಪ್ರದಾಯಗಳ ದೇವರನ್ನಾಗಿ ಮಾಡಿದ್ದೂ ಇದಕ್ಕೆ ಇನ್ನೊಂದು ಉದಾಹರಣೆ.)

೪. ಕಾಂಗ್ರೆಸ್ಸಿನ ಅಥವಾ ಸೆಕ್ಯುಲರ್‌ವಾದಿಗಳ ಮುಸ್ಲಿಮರ ತುಷ್ಟೀಕರಣವೇ ಹಿಂದೂವಾದಿ ರಾಜಕಾರಣದ ಉತ್ಕರ್ಷಕ್ಕೆ ಒಂದು ಕಾರಣವೆಂಬುದು ನಿಜವೆಂದ ಮಾತ್ರಕ್ಕೆ, ಅದು ಹಿಂದೂವಾದಿ ರಾಜಕಾರಣದ ಚೇಷ್ಟೆಗಳನ್ನು ಕ್ಷಮಾರ್ಹಗೊಳಿಸುವುದಿಲ್ಲ.

೫. ಇಸ್ಲಾಂ ಒಂದು ಕಠಿಣ ಧರ್ಮ, ಅದು ಹಿಂದೂ ಧರ್ಮದ ರೀತಿಯಲ್ಲಿ ಆಧುನಿಕಗೊಳ್ಳಲು ನಿರಾಕರಿಸುತ್ತದೆ ಎಂಬುದು ನಮ್ಮ ಅಭಿಪ್ರಾಯ. ಅದೇನೇ ಇದ್ದರೂ, ಅದರ ಫಲವನ್ನು ಅದರ ಸದಸ್ಯರು ಉಣ್ಣುತ್ತಾ ಅದು ಒಳಗಿಂದ ಬದಲಾವಣೆಯಾಗಬೇಕಷ್ಟೆ. ಸದ್ಯಕ್ಕೆ ಆ ಧರ್ಮ ನಮ್ಮ ಸಂವಿಧಾನಕ್ಕೆ ಬದ್ಧವಾಗಿ ನಡೆಯುತ್ತಿದೆಯೋ ಇಲ್ಲವೋ ಎಂಬುದು ಇಂದು ನಮಗೆ ಮುಖ್ಯವಾಗಬೇಕು

೬. ಅಸಹಿಷ್ಣುತೆಯ ಕೂಗು ಚಾಲ್ತಿಗೆ ಬಂದದ್ದು, ಮೋದಿ ಸರ್ಕಾರ ಆಡಳಿತಕ್ಕೆ ಬಂದಂದಿನಿಂದ ಒಂದೇ ಸಮನೆ ಅನ್ಯಧರ್ಮೀಯರ ಅಸಹ್ಯಕರ ನಿಂದನೆ, ಕೊಲೆಗಳು ಒಂದಾದರ ಮೇಲೊಂದರಂತೆ ನಡೆದದ್ದು ಮತ್ತು ಅದಕ್ಕೆ ಪ್ರಭುತ್ವದ ಮೂಕ ಸಮ್ಮತಿ ಇದೆ ಎಂಬುದು ರಾಷ್ಟ್ರಪ್ರಜ್ಞೆಯ ಅರಿವಿಗೆ ಬಂದಾಗ. ಹಿಂದೆಯೂ ಅಸಹಿಷ್ಣುತೆ ಇತ್ತು. ಆದರೆ ಅದು ಪ್ರಭುತ್ವದ ನೀತಿಯಾಗಿರಲಿಲ್ಲ.

೭. ಪಾಕಿಸ್ತಾನದಲ್ಲಿದೆಯೆಂದು ನೀವು ನಂಬುವ ಅಸಹಿಷ್ಣುತೆಯನ್ನು ಉಲ್ಲೇಖಿಸಿ ಇಲ್ಲಿನ ಅಸಹಿಷ್ಣುತೆಯನ್ನು ಕ್ಷಮಾರ್ಹಗೊಳಿಸುವ ಪ್ರಯತ್ನ ಹಿಂದೂಧರ್ಮೀಯತೆಗೇ ವಿರುದ್ಧವಾದದ್ದು.

೮. ಭಾರತದ ಹಿಂದೂ ಬಲಪಂಥೀಯತೆಗೆ ಒಂದು ಬೌದ್ಧಿಕ ಪರಂಪರೆ ಇಲ್ಲ ಎಂಬ ಅಭಿಪ್ರಾಯವಿದೆ. ಹೀಗಾಗಿ ಬಾಲಗಂಗಾಧರರ ಮಾರ್ಗದರ್ಶನದಲ್ಲಿ ಅದಕ್ಕೊಂದು ಬೌದ್ಧಿಕತೆಯನ್ನು ಕಟ್ಟಿಕೊಡುವ ಒಂದು ಯೋಜನೆ ಜಾರಿಯಲ್ಲಿದೆ ಎಂದು ಕೇಳಿದ್ದೇನೆ. ನಿಮ್ಮ ಕಿರುಪುಸ್ತಕ ಓದಿದಾಗ ನೀವೂ ಈ ಯೋಜನೆಯ ಕಾರ್ಯಕರ್ತರಂತೆ ನನಗೆ ಕಂಡಿತು.

ಆದರೆ ಹಿಂದೂವಾದಿ ಬಲಪಂಥೀಯ ರಾಜಕಾರಣಕ್ಕೆ ಒಂದು ಬೌದ್ಧಿಕ ಪರಂಪರೆ ಇಲ್ಲ ಎಂದು ನಾನು ನಂಬುವುದಿಲ್ಲ. ಆಧುನಿಕ ಅರ್ಥದ ಬೌದ್ಧಿಕ ಪರಂಪರೆ ಇಲ್ಲ ಎಂದು ಹೇಳಬಹುದಷ್ಟೆ. ಏಕೆಂದರೆ, ನಿಮ್ಮ ಈ ಕಿರುಬರಹದಲ್ಲೂ ಇಣುಕುವ ವರ್ಣಾಶ್ರಮ ಧರ್ಮದ ತಾತ್ವಿಕತೆಯೇನೂ ಕಡಿಮೆ ತೀವ್ರತೆಯ ಬೌದ್ಧಿಕತೆಯಲ್ಲ.

ನಿಮ್ಮ ಕುತೂಹಲಕ್ಕಾಗಿ ನಮ್ಮ 'ಹೊಸ ಮನುಷ್ಯ' ಪತ್ರಿಕೆಯ ಜನವರಿ ಸಂಚಿಕೆಯ ಪಿಡಿಎಫ್ ಕಳಿಸುತ್ತಿರುವೆ. ಅದರಲ್ಲಿರುವ ನನ್ನ 'ಆಧುನಿಕತೆ, ಪ್ರಗತಿಪರತೆ ಮತ್ತು ಸಾಮಾಜಿಕ ನ್ಯಾಯ' ಎಂಬ ಲೇಖನವನ್ನು ಕುತೂಹಲಕ್ಕಾದರೂ ನೀವು ಗಮನಿಸಬಹುದು.

ಮತ್ತೊಮ್ಮೆ ವಂದನೆಗಳು.

ಡಿ.ಎಸ್. ನಾಗಭೂಷಣ

ಗಿರೀಶರ ಉತ್ತರ

೨೦ ಫೆಬ್ರುವರಿ, ೨೦೧೬

ಮಾನ್ಯ ಶ್ರೀ ನಾಗಭೂಷಣ ಅವರಿಗೆ,

ನಮಸ್ಕಾರಗಳು.

ನೀವು ನನ್ನ ಕಿರುಪುಸ್ತಕಕ್ಕೆ ಪ್ರತಿಕ್ರಿಯೆ ನೀಡಿದ್ದಕ್ಕೆ ಕೃತಜ್ಞತೆಗಳು.

ಅಲ್ಲಿ ನೀವು ಹೇಳಿದ ಒಂದೆರಡು ಅಂಶಗಳ ಬಗ್ಗೆ ನನ್ನ ಅಭಿಪ್ರಾಯಗಳನ್ನು ಹೇಳಬೇಕೆನಿಸಿದೆ.

(೧)"ನಮ್ಮ ರಾಷ್ಟ್ರೀಯ ಹೋರಾಟದ ಮೂಲಕ ಇಲ್ಲಿ ಕಟ್ಟಿಕೊಂಡ ಆಧುನಿಕ ರಾಜಕಾರಣ ಎದುರಿಸಬೇಕಾಗಿ ಬಂದ ಬಿಕ್ಕಟ್ಟುಗಳ ಹಿನ್ನೆಲೆಯಲ್ಲಿ ನಮ್ಮದೇ ಎನ್ನಬಹುದಾದ ಸೆಕ್ಯುಲರ್‌ವಾದವೆಂಬುದೊಂದು ಅಸ್ತಿತ್ವದಲ್ಲಿದೆ ಎಂಬುದನ್ನು ನಾವು ಗಮನಿಸದಿರಲಾಗದು. ನಿರ್ದಿಷ್ಟವಾಗಿ, ಕಳೆದ ಶತಮಾನದ ಮುವ್ವತ್ತರ ದಶಕದಿಂದಲೂ ಗಾಂಧಿ ರಾಜಕಾರಣದ ವಿರುದ್ಧ ಹಲವು ನೆಲೆಗಳಲ್ಲಿ ಕೆಲಸ ಮಾಡುತ್ತಾ ಬಂದಿರುವ ಸಂಕುಚಿತ ಹಿಂದೂವಾದಿ ರಾಜಕಾರಣ ಈ ದೇಸಿ ಸೆಕ್ಯಲರ್‌ವಾದದ ಅಗತ್ಯವನ್ನು ಮನಗಾಣಿಸಿದೆ."– ಎಂದಿದ್ದೀರಿ.

ನನಗೂ ಇದು ಸರಿ ಎನ್ನಿಸುತ್ತದೆ. ಆದರೆ ಸಂಕುಚಿತ ಹಿಂದೂವಾದಿ ರಾಜಕಾರಣವು ಗಾಂಧಿ ರಾಜಕಾರಣದ ವಿರುದ್ಧ ಕೆಲಸ ಮಾಡಿದುದು ಕೇವಲ ಗಾಂಧಿ ರಾಜಕಾರಣದ ಕಾರಣದಿಂದ ಮಾತ್ರವೇ? ಅಥವಾ ಇದಕ್ಕೆ ಮುಸ್ಲಿಮ್ ಲೀಗ್ ರಾಜಕಾರಣ ಕೂಡ ಕಾರಣವೇ? ಅದೇನಿದ್ದರೂ ಎಲ್ಲರೂ ಸಮಾನವಾಗಿ ಬಾಳುವ ಸೆಕ್ಯುಲರ್ ಎಂಬ ನೀತಿ ಬೇಕು ಎಂಬುದರಲ್ಲಿ ಎರಡು ಮಾತೇ ಇಲ್ಲ. ಆದರೆ ಪ್ರಶ್ನೆ ಇರುವುದು ಯಾವುದು ಸೆಕ್ಯುಲರಿಸಮ್ ಎಂಬಲ್ಲಿ.

(೨) "ಹಿಂದೂ ಧರ್ಮ ಸೆಮೆಟಿಕ್ ಧರ್ಮಗಳಂತೆ 'ರಿಲಿಜಿಯನ್' ಅಲ್ಲ ಎಂಬುದು ತಾಂತ್ರಿಕವಾಗಿ ಮಾತ್ರ ಸರಿ. ಮೇಲೆ ಪ್ರಸ್ತಾಪಿಸಿದ ಹಿಂದೂವಾದಿ ರಾಜಕಾರಣ ಆರಂಭವಾದ ಕಾಲದಿಂದಲೂ ಹಿಂದೂ ಧರ್ಮವನ್ನು ಒಂದು 'ರಿಲಿಜಿಯನ್' ಆಗಿ ಕಟ್ಟುವ ವ್ಯವಸ್ಥಿತ ಪ್ರಯತ್ನ ನಡೆದೇ ಇದೆ. ಆಧುನಿಕ ಕಾಲದ ನಮ್ಮ ಅನ್ಯಮತ ವಿರೋಧಿ ದಂಗೆಗಳಲ್ಲಿ ತಮ್ಮೆಲ್ಲ ಪ್ರತ್ಯೇಕ ಸಂಪ್ರದಾಯಗಳನ್ನು ಮರೆತು ಎಲ್ಲ ಸಂಪ್ರದಾಯಗಳ ಹಿಂದೂಗಳೂ ಭಾಗವಹಿಸುವುದನ್ನು ನಾವು ನೋಡಿದ್ದೇವೆ. (ಉದಾ: ೧೯೮೪ರ ಸಿಖ್ ಹತ್ಯಾಕಾಂಡ, ೨೦೦೨ರ ಗುಜರಾತ್ ಹತ್ಯಾಕಾಂಡ) ರಾಮಜನ್ಮಭೂಮಿ ಆಂದೋಲನ ರಾಮನನ್ನು ಎಲ್ಲ ಸಂಪ್ರದಾಯಗಳ ದೇವರನ್ನಾಗಿ ಮಾಡಿದ್ದೂ ಇದಕ್ಕೆ ಇನ್ನೊಂದು ಉದಾಹರಣೆ."– ಎಂದಿದ್ದೀರಿ.

ಇದು ಖಂಡಿತ ನಿಜ. ನನ್ನ ಇಡೀ ವಾದವೇ, ಇಂಥ ಯತ್ನ, ಅಂದರೆ ಹೀಗೆ ಯಾಕೆ ಹಿಂದೂವಾದಿ ರಾಜಕಾರಣ ಮತ್ತು ಅದನ್ನು ರಿಲಿಜನ್ ಆಗಿ ಕಟ್ಟುವ ಯತ್ನ ಆರಂಭವಾಯಿತು ಅನ್ನುವುದರ ಶೋಧನೆ ಆಗಬೇಕು ಅಂತ.

(೩) "ಕಾಂಗ್ರೆಸ್ಸಿನ ಅಥವಾ ಸೆಕ್ಯುಲರ್‌ವಾದಿಗಳ ಮುಸ್ಲಿಮರ ತುಷ್ಟೀಕರಣವೇ ಹಿಂದೂವಾದಿ ರಾಜಕಾರಣದ ಉತ್ಕರ್ಷಕ್ಕೆ ಒಂದು ಕಾರಣವೆಂಬುದು ನಿಜವೆಂದ ಮಾತ್ರಕ್ಕೆ, ಅದು ಹಿಂದೂವಾದಿ ರಾಜಕಾರಣದ ಚೇಷ್ಟೆಗಳನ್ನು ಕ್ಷಮಾರ್ಹಗೊಳಿಸುವುದಿಲ್ಲ."–

ಈ ನಿಮ್ಮ ಮಾತು ಕೂಡ ಸರಿಯೇ. ಹಿಂದೂವಾದಿ ರಾಜಕಾರಣದ ಹಿಂದಿನ ರಾಜಕಾರಣವನ್ನು ಹುಡುಕಿದರೆ ಅದನ್ನು ನ್ಯಾಯಬದ್ಧಗೊಳಿಸಿದಂತಲ್ಲ. ಅಥವಾ ಕ್ಷಮಾರ್ಹ ಎಂದಂತೆಯೂ ಅಲ್ಲ.

(೪) "ಇಸ್ಲಾಂ ಒಂದು ಕಠಿಣ ಧರ್ಮ, ಅದು ಹಿಂದೂ ಧರ್ಮದ ರೀತಿಯಲ್ಲಿ ಆಧುನಿಕಗೊಳ್ಳಲು ನಿರಾಕರಿಸುತ್ತದೆ ಎಂಬುದು ನಮ್ಮ ಅಭಿಪ್ರಾಯ. ಅದೇನೇ ಇದ್ದರೂ, ಅದರ ಫಲವನ್ನು ಅದರ ಸದಸ್ಯರು ಉಣ್ಣುತ್ತಾ ಅದು ಒಳಗಿಂದ ಬದಲಾವಣೆಯಾಗಬೇಕಷ್ಟೆ. ಸದ್ಯಕ್ಕೆ ಆ ಧರ್ಮ ನಮ್ಮ ಸಂವಿಧಾನಕ್ಕೆ ಬದ್ಧವಾಗಿ ನಡೆಯುತ್ತಿದೆಯೋ ಇಲ್ಲವೋ ಎಂಬುದು ಇಂದು ನಮಗೆ ಮುಖ್ಯವಾಗಬೇಕು"– ಎಂಬುದು.

ಆಧುನಿಕ ಸಮಾಜದಲ್ಲಿ ಎಲ್ಲ ಸಮುದಾಯಗಳು ಒಟ್ಟಿಗೆ ಬಾಳಬೇಕಾದಾಗ ಅವರವರ ಫಲವನ್ನು ಅದರ ಸದಸ್ಯರು ಉಣ್ಣುತ್ತಾರೆ ಅನ್ನಲಾಗದು. (ಅ)ನೈತಿಕ ಪೋಲೀಸುಗಿರಿ ಹಾಗೂ ಕೋಮು ಸಂಘರ್ಷಕ್ಕೆ ಇದೂ ಕೂಡ ಕಾರಣ. ಇದು ಕಾಮನ್ ಸೆನ್ಸ್ ಮೂಲಕ ಗೊತ್ತಾಗುವ ಸಂಗತಿ ಅಷ್ಟೇ ಅಲ್ಲ, ಕೋಮುಸೂಕ್ಷ್ಮ ಜಿಲ್ಲೆಯ ಇನ್ನಷ್ಟು ಕೋಮುಸೂಕ್ಷ್ಮ ತಾಲೂಕಿನಲ್ಲಿ ಇರುವ ಹಾಗೂ ಕೆಲಸಮಾಡುವ ನನ್ನ ಸ್ವಂತ ಅನುಭವದ ಪ್ರಾಮಾಣ್ಯ ಕೂಡ ಇದಕ್ಕಿದೆ. ಎಂದಾದರೂ ಮುಖತಃ ಭೇಟಿಯಾದಾಗ ಅಂಥ ಅನುಭವಗಳನ್ನು ಹಂಚಿಕೊಂಡೇನು. ಉಡುಪಿಯಂಥ, ಬೆಂಗಳೂರಿನ ಜಯನಗರ ಇತ್ಯಾದಿಯಂಥ ಸೇಫ್ ಜಾಗಗಳಲ್ಲಿ ಇರುವವರಿಗೆ ಇದೆಲ್ಲ ಅರ್ಥವಾಗದಿದ್ದರೆ ಅಚ್ಚರಿಯಿಲ್ಲ. ಈಚೆಗೆ

ರೋಮಿಲಾ ಥಾಪರ್ ಯಾಕೆ ಸಮಾನ ನಾಗರಿಕ ಸಂಹಿತೆ ಅನಿವಾರ್ಯ ಅಂತ ಹೇಳಿದರು? ಮೊದಲಿಂದಲೂ ಅವರು ಹೇಳುತ್ತಾ ಬಂದಿದ್ದರೇ ಎಂದು ನನಗೆ ಗೊತ್ತಿಲ್ಲ.

(೫) "ಹಿಂದೆಯೂ ಅಸಹಿಷ್ಣುತೆ ಇತ್ತು. ಆದರೆ ಅದು ಪ್ರಭುತ್ವದ ನೀತಿಯಾಗಿರಲಿಲ್ಲ"– ಈ ಮಾತು.

ಈಗಲೂ ಅಸಹಿಷ್ಣುತೆ ಪ್ರಭುತ್ವದ ನೀತಿ ಅಂತ ನಾನು ಅಂದುಕೊಂಡಿಲ್ಲ. ಆದರೆ ಕೆಲವು ಸಂಘಟನೆಗಳ ಮಾತುಗಳಿಗೆ ಜನಸಮುದಾಯಗಳ ನಡುವೆ ಹೆಚ್ಚು ಮಾನ್ಯತೆ, ಲೆಜಿಟಿಮೆಸಿ ಬಂದಂತೆ ಕಾಣುತ್ತದೆ. ಇಲ್ಲೂ ಮೋದಿ ಟೀಕಾಕಾರರು ಗಮನಿಸಬೇಕಾದ ಪ್ರಶ್ನೆಯಿದೆ. ಆದರೆ ಅವರು ಗಮನಿಸುವುದಿಲ್ಲ. ಅದೇನೆಂದರೆ, ಮೋದಿ ಅಧಿಕಾರಕ್ಕೆ ಬಂದದ್ದರಿಂದ ಇವರಿಗೆ ಲೆಜಿಟಿಮೆಸಿ ಬಂದದ್ದೇ ಅಥವಾ ಇಂಥ ತಾತ್ವಿಕತೆಗೆ ಸಮುದಾಯಗಳು ತಕ್ಕಮಟ್ಟಿನ ಲೆಜಿಟಿಮೆಸಿ ನೀಡಿದ್ದರಿಂದಾಗಿ ಮೋದಿ ಅಧಿಕಾರಕ್ಕೆ ಬಂದದ್ದೇ?

(೬) "ಪಾಕಿಸ್ತಾನದಲ್ಲಿದೆಯೆಂದು ನೀವು ನಂಬುವ ಅಸಹಿಷ್ಣುತೆಯನ್ನು ಉಲ್ಲೇಖಿಸಿ ಇಲ್ಲಿನ ಅಸಹಿಷ್ಣುತೆಯನ್ನು ಕ್ಷಮಾರ್ಹಗೊಳಿಸುವ ಪ್ರಯತ್ನ ಹಿಂದೂ ಧರ್ಮೀಯತೆಗೇ ವಿರುದ್ಧವಾದದ್ದು."– ಎಂದಿದ್ದೀರಿ.

ಪಾಕಿಸ್ತಾನದಲ್ಲಿ ಅಸಹಿಷ್ಣುತೆ ಇದೆ ಎಂಬುದು ಕೇವಲ ನನ್ನ 'ನಂಬಿಕೆ', ಅದು ವಾಸ್ತವ ಅಲ್ಲ ಅಂತ ನೀವು 'ನಂಬುವುದಾದರೆ' ನನ್ನ ವಾದವಿಲ್ಲ. ಇಲ್ಲಿಯ ಅಸಹಿಷ್ಣುತೆ ಖಂಡಿತಾ ಕ್ಷಮಾರ್ಹವಲ್ಲ. ಆದರೆ ಅದರ ಕಾರಣವನ್ನು ಯಾರಾದರೂ ಶೋಧಿಸಲು ಹೊರಟಾಗ ಯಾಕೆ ಅಸಹಿಷ್ಣುತಾವಾದಿಗಳಿಗೆ ಭಯ? ಕ್ಷಮಾರ್ಹತೆ ಇತ್ಯಾದಿ ನೆಪಗಳು? ಅಷ್ಟೇ ಅಲ್ಲ, ಎಲ್ಲವೂ ಜಾಗತೀಕರಣಕ್ಕೆ ಒಳಗಾಗುವಾಗ ಇತರ ದೇಶಗಳ ಸ್ಥಿತಿಗತಿಗಳು ಕೂಡ ಪ್ರಭಾವಿಸುತ್ತವೆ ಎಂದು ತಿಳಿದುಕೊಳ್ಳುವುದು ಮುಖ್ಯ. ಯಾಕೆಂದರೆ, ನಾವು ನೀವು ಅಪೇಕ್ಷಿಸುವಂತೆ ಜನರೆಲ್ಲಾ ವೈಚಾರಿಕವಾಗಿ ಯೋಚಿಸಿ ಬದುಕುವುದೂ ಇಲ್ಲ, ತಮ್ಮ ಅಭಿಪ್ರಾಯಗಳನ್ನು ರೂಪಿಸಿಕೊಳ್ಳುವುದೂ ಇಲ್ಲ. ಭಾವನೆಗಳು ಜನರಿಗೆ ಮುಖ್ಯವಾಗುತ್ತವೆ, ಭಾವನೆಗಳನ್ನು ಇಡೀ ಜಗತ್ತಿನ ಆಗುಹೋಗುಗಳು ಪ್ರಭಾವಿಸುತ್ತಿರುತ್ತವೆ– ಅವರಿಗೆ ಅಂಥ ಆಗುಹೋಗುಗಳ ಅರಿವು ಇದ್ದಾಗ. ಅರಿವು ಇಲ್ಲದಿದ್ದ ಕಾಲದಲ್ಲಿ ಸಮಸ್ಯೆಯೇ ಇಲ್ಲ.

(೭) "ಭಾರತದ ಹಿಂದೂ ಬಲಪಂಥೀಯತೆಗೆ ಒಂದು ಬೌದ್ಧಿಕ ಪರಂಪರೆ ಇಲ್ಲ ಎಂಬ ಅಭಿಪ್ರಾಯವಿದೆ. ಹೀಗಾಗಿ ಬಾಲಗಂಗಾಧರರ ಮಾರ್ಗದರ್ಶನದಲ್ಲಿ ಅದಕ್ಕೊಂದು ಬೌದ್ಧಿಕತೆಯನ್ನು ಕಟ್ಟಿಕೊಡುವ ಒಂದು ಯೋಜನೆ ಜಾರಿಯಲ್ಲಿದೆ ಎಂದು ಕೇಳಿದ್ದೇನೆ. ನಿಮ್ಮ ಕಿರುಪುಸ್ತಕ ಓದಿದಾಗ ನೀವೂ ಈ ಯೋಜನೆಯ ಕಾರ್ಯಕರ್ತರಂತೆ ನನಗೆ ಕಂಡಿತು".—ಎಂದಿದ್ದೀರಿ.

ಇಲ್ಲಿ ಒಂದು ಸ್ಪಷ್ಟನೆ ನೀಡಬೇಕು ನಾನು. ನನ್ನ ಕಿರುಹೊತ್ತಗೆಯ ವಾದಸರಣಿಯು ನಾನು ಬಾಲು ಅವರನ್ನು ಓದುವುದಿರಲಿ, ಅವರ ಹೆಸರು ಕೇಳುವುದಕ್ಕೂ ಮೊದಲೇ

ಬರೆದಿರುವಂಥದ್ದೇ ಆಗಿದೆ. (೨೦೦೭ರಲ್ಲಿ ನಾನು ಬರೆದ 'ಬುದ್ಧಿಜೀವಿ..' ಪುಸ್ತಕ ನೋಡಬಹುದು. ಅಲ್ಲಿ ಇಷ್ಟು ಸ್ಪಷ್ಟವಾದ ಫೋರ್ಮುಲೇಶನ್ಸ್ ಇಲ್ಲದೇ ಇರಬಹುದು.) ನಾನು ಅವರ ಹೆಸರು ಕೇಳಿದ್ದು ೨೦೦೮ರ ನಂತರ. ಅದೂ ನನ್ನ ಪುಸ್ತಕ ಓದಿದ ಒಬ್ಬರು ಅವರ 'ಹೀದೆನ್ಸ್...' ಪುಸ್ತಕದ ಬಗ್ಗೆ ಹೇಳಿದಾಗ. ಹಾಗೆ ನೋಡಿದರೆ, ನಿಮ್ಮ 'ಆಧುನಿಕತೆ, ಪ್ರಗತಿಪರತೆ ಮತ್ತು ಸಾಮಾಜಿಕ ನ್ಯಾಯ' ಎಂಬ ಲೇಖನವನ್ನು ಓದಿದವರು ಯಾರಾದರೂ (ನೀವು ಬಾಲು ಅವರನ್ನು ಕಟುವಾಗಿ ಟೀಕಿಸಿ ಬರೆದ ಬರಹಗಳನ್ನು ಓದದೇ ಇದ್ದರೆ) ನಿಮ್ಮನ್ನೂ ಕೂಡ ಬಾಲು ಹಿಂಬಾಲಕ ಅಂತ ಪರಿಗಣಿಸುವುದರಲ್ಲಿ ಯಾವುದೇ ಸಂಶಯವಿಲ್ಲ. ಇನ್ನು ಬಾಲಗಂಗಾಧರರ ವಿಚಾರದ ಬಗ್ಗೆ – ನನ್ನ ಪ್ರಕಾರ ರಿಲಿಜನ್ ಬಗ್ಗೆ ಅವರ ಮಾತು ಹೆಚ್ಚು ಒಪ್ಪಬಹುದಾದ್ದು. ಆದರೆ, ಭಾರತದಲ್ಲಿ ಜಾತಿ ಆಧರಿತ ತಾರತಮ್ಯ ಇರಲಿಲ್ಲ ಅಥವಾ ಇಲ್ಲ ಎಂಬ ಮಾತನ್ನು ನಾನು ಖಂಡಿತಾ ಒಪ್ಪುವುದಿಲ್ಲ. ಹೀಗಾಗಿ ಜಾತಿವ್ಯವಸ್ಥೆ ಇದೆಯೇ ಇಲ್ಲವೇ ಎಂಬ ಟೆಕ್ನಿಕಲ್ ವಿಷಯಗಳು ಈ ತಾರತಮ್ಯ ನಿವಾರಣೆ ದೃಷ್ಟಿಯಿಂದ ಅಷ್ಟು ಉಪಯುಕ್ತವಲ್ಲ ಅಂತ ನನ್ನ ನಿಲುವು. ಆದರೆ ಸಂವಿಧಾನದ ಕ್ರಮದಿಂದ ಜಾತಿ ಆಧರಿತ ತಾರತಮ್ಯ ಸ್ವಲ್ಪವಾದರೂ ಕಡಿಮೆಯಾಗಿದೆ ಹಾಗೂ ಕಡಿಮೆಯಾಗುತ್ತಿದೆ ಎಂದು ನನ್ನ ಅಭಿಪ್ರಾಯ. ಮೀಸಲಾತಿ ಬೇಕು ಅಂತಲೇ ನಾನು ಹೇಳೋದು. ಆದರೆ ಪರಿಶಿಷ್ಟರಿಗೂ ಕೆನೆಪದರ ಅನ್ವಯ ಆದರೆ ಮಾತ್ರ ತೀರಾ ಹಿಂದಿರುವ ಗ್ರಾಮೀಣ ಭಾಗಗಳ ಪ.ಜಾ. ಮತ್ತು ಪ.ಪಂಗಡದವರಿಗೆ ಪ್ರಯೋಜನ. (ಬಹಳ ಸಾಮಾಜಿಕ ಕಾಳಜಿಯುಳ್ಳ ಜೆ. ಎನ್. ಯು ಸ್ಕಾಲರ್‌ಗಳಾದರೂ ಹೀಗೆ ಕೆನೆಪದರ ಅನ್ವಯ ಮಾಡಬೇಕು ಅಂತ ಹೇಳುವ ಧೈರ್ಯ ತೋರಿಸಿದಂತೆ ಕಾಣುವುದಿಲ್ಲ.)

(೮) "ನಿಮ್ಮ ಈ ಕಿರುಬರಹದಲ್ಲೂ ಇಣುಕುವ ವರ್ಣಾಶ್ರಮ ಧರ್ಮದ ತಾತ್ವಿಕತೆಯೇನೂ ಕಡಿಮೆ ತೀವ್ರತೆಯ ಬೌದ್ಧಿಕತೆಯಲ್ಲ."–

ನಿಮ್ಮ ಈ ಮಾತು ಮಾತ್ರ ತೀರಾ ಅಚ್ಚರಿ ನನಗೆ. ನನ್ನ ಪುಸ್ತಕದಲ್ಲಿ ಆಶ್ರಮಧರ್ಮದ ತಾತ್ವಿಕತೆ ಎಲ್ಲಿದೆ? ಮತ್ತು ವರ್ಣಧರ್ಮದ ತಾತ್ವಿಕತೆ ಎಲ್ಲಿದೆ ಅಂತ ಹುಡುಕುತ್ತಲೇ ಇದ್ದೇನೆ! ಅಂತರಜಾತಿ ಮದುವೆ ಬಗ್ಗೆ ಹೇಳಿದ್ದೇನೆ ಆದರೆ ಅಂಥ ಮದುವೆ ಆಗಬಾರದು ಅಂತ ನಾನು ಅಲ್ಲಿ ಹೇಳಿಲ್ಲ. ಬಹುಸಂಸ್ಕೃತಿ ಬಗ್ಗೆ ಬೊಬ್ಬೆ ಹಾಕುವವರ ಸಮಸ್ಯೆ ಬಗ್ಗೆ ಅಲ್ಲಿ ಹೇಳಿದ್ದೇನೆ. ನನ್ನ ದೃಷ್ಟಿಯಲ್ಲಿ ಎಲ್ಲ ಸಂಸ್ಕೃತಿಗಳೂ ಆಧುನಿಕ ಬದುಕಿಗೆ ಹೊಂದಿಕೊಳ್ಳುವಾಗ ಅಲ್ಪ ಸ್ವಲ್ಪ ಕಳೆದುಕೊಳ್ಳಬೇಕಾಗುತ್ತದೆ. ಹಾಗೆ ನೋಡಿದರೆ, ಮೇಲಿಂದ ಮೇಲೆ ನೋಡಿದರೂ ನಮ್ಮ ಪ್ರಗತಿಪರರಿಗೆ ನಿಮ್ಮ 'ಆಧುನಿಕತೆ, ಪ್ರಗತಿಪರತೆ ಮತ್ತು ಸಾಮಾಜಿಕ ನ್ಯಾಯ' ಎಂಬ ಲೇಖನದಲ್ಲೂ ವರ್ಣಧರ್ಮ ಕಂಡೀತು! ಇನ್ನು ನನ್ನ ಬರಹದಲ್ಲಿ ವರ್ಣಾಶ್ರಮ ಧರ್ಮ ಹುಡುಕಿದ ನಿಮ್ಮದೇ ಮಾನದಂಡದಿಂದ ನೋಡಿದರೆ ಕೇಳುವುದೇ ಬೇಡ. (ಆದರೆ ನಿಮ್ಮ ಆ ಲೇಖನ ನಿಜವಾಗಿ ತುಂಬಾ ಚೆನ್ನಾಗಿದೆ. ಅಂಥ ಲೇಖನಗಳು ಈಚೆಗೆ ಅಪರೂಪ.) ಮೊದಲು ಜಾತಿವಿನಾಶವಾಗಿ ಬಳಿಕ ಸಮಾನತೆ ಬರುತ್ತದೆ ಎಂದು ನನಗೆ ಅನಿಸುವುದಿಲ್ಲ. ಬದಲಾಗಿ ಜಾತಿಗಳ ಮಧ್ಯೆ ಮೊದಲು ಮೀಸಲಾತಿ ಇತ್ಯಾದಿ ಮೂಲಕ ಸಮಾನತೆ ಸಿದ್ಧಿಸಿದರೆ ಜಾತಿವಿನಾಶವೂ ನಿಧಾನಕ್ಕೆ

ಆದೀತು ಅಂತ ನನ್ನ ನಂಬಿಕೆ. ಜಾತಿಗಳೇ ಇಲ್ಲದಿರುತ್ತಿದ್ದರೆ ಎಷ್ಟು ಒಳ್ಳೆಯದಿತ್ತು ಅಂತ ನನಗೂ ಅನಿಸುತ್ತದೆ, ಆದರೆ ವಾಸ್ತವ ಹಾಗಿಲ್ಲವಲ್ಲ. ಹೀಗಾಗಿ ತಮಗಿರುವ ಒಂದೇ ಜನ್ಮವನ್ನು ತಮ್ಮತಮ್ಮ ಜಾತಿಗಳ ಒಳಗೆ ಮದುವೆಯಾಗಿ ನೆಮ್ಮದಿಯಾಗಿ ಇರೋಣ ಎಂಬುದೇ ಬಹುತೇಕರ ಭಾವನೆ. ಜಾತಿವಿನಾಶ ಮಾಡಲಿಕ್ಕಾಗಿ ಅಂತರ್‌ಜಾತಿ ಮದುವೆ ಆಗಲೇಬೇಕೆಂದು ಹೊರಡುವವರು ಎಷ್ಟಿದ್ದಾರು?

(೯) "ಈ ಪುಸ್ತಕದಲ್ಲಿ ನೀವು ಸೆಕ್ಯುಲರ್‌ವಾದ–ವಾದಿಗಳೆಂದು ಗುರುತಿಸಿ ಎದುರುತ್ತರ ಕೊಡಲು ಯತ್ನಿಸಿರುವ ಪಂಥ/ಪಂಥೀಯರು ಮೂಲತಃ ಮಾರ್ಕ್ಸ್‌ವಾದಿಯಾದದ್ದು/ ಮಾರ್ಕ್ಸ್‌ವಾದಿಗಳು. ಅವರೀಗ ರಾಜಕೀಯವಾಗಿ ಸೋತುಸುಣ್ಣವಾಗಿ ತಮ್ಮ ಭವಿಷ್ಯದ ಬಗ್ಗೆ ತೀರಾ ಅತಂಕಗೊಂಡಿರುವರು. ತಮ್ಮ (ಜಗತ್ತನ್ನು ಭೌತ–ಅಭೌತವೆಂದು ವಿಭಾಗಿಸಿ ನೋಡುವ) ಸಿದ್ಧಾಂತದಲ್ಲೇ ಮೂಲದೋಷವಿದೆ; ಅದೇ ತಮ್ಮ ಅವನತಿಗೆ ಕಾರಣವಾಗಿದೆ ಎಂದು ಇನ್ನೂ ಅರಿಯಲಾಗದ ಈ ಸಿದ್ಧಾಂತಶಠರು, ಸಂಘ ಪರಿವಾರದ ರಾಜಕಾರಣವೇ ತಮ್ಮ ವಿನಾಶಕ್ಕೆ ಕಾರಣವೆಂದು ನಂಬಿ ಅದರ ವಿರುದ್ಧ ನಡೆಸಿರುವ ರಾಜಕೀಯ ಪ್ರಚಾರಾಂದೋಲನದ ಒಂದು ಆಯಾಮವಾಗಿ ಇಂದು ಅಸಹಿಷ್ಣುತೆ ಕುರಿತ ಚರ್ಚೆ ಕಾಣುತ್ತಿರುವುದು ನಿಜ."– ಎಂದಿರುವ ಮಾತು.

ಈಚೆಗೆ ಪ್ರಮುಖ ಮಾಧ್ಯಮಗಳಲ್ಲಿ 'ಜಗತ್ತಿಗೆ ಶ್ರೇಷ್ಠ ವಿದ್ವಾಂಸರನ್ನು ಉತ್ಪಾದಿಸಿ ಕೊಡುವ ವಿ.ವಿ. ಯೇ ಜೆ.ಎನ್.ಯು.' ಎಂದು ಬಹಳ ಜನ ಬರೆಯುತ್ತಿದ್ದಾರೆ. ಈ ವಿ.ವಿ. ತಯಾರಿಸಿದ ಬಹುಮಂದಿ ಇಲ್ಲಿ ನೀವು ಹೇಳಿದ ವರ್ಗಕ್ಕೆ ಸೇರಿದವರೇ ಅಲ್ಲವೇ? 'ದ ಹಿಂದೂ' ವಿನಂಥ ಪತ್ರಿಕೆಗಳ ಅಂಕಣಗಳನ್ನು ಆಳುತ್ತಿರುವವರೂ ಇಂಥವರೇ ಅಲ್ಲವೇ?

ನಮಸ್ಕಾರಗಳು.

ಇತಿ ನಿಮ್ಮ

ಅಜಕ್ಕಳ ಗಿರೀಶ

ನನ್ನ ಉತ್ತರ

ಮಾರ್ಚ್ ೩, ೨೦೧೬

ಪ್ರಿಯ ಗಿರೀಶ್,

ನಿಮ್ಮ ಅಭಿಪ್ರಾಯಗಳನ್ನು ಕುರಿತಂತೆ ನನ್ನ ಟಿಪ್ಪಣಿಗಳನ್ನು ಈ ಮೂಲಕ ಬರೆದಿರುವೆ. ಅವು ಈ ಕ್ರಮದಲ್ಲಿವೆ : ಮೊದಲು ನನ್ನ ಮೂಲ ಪ್ರತಿಕ್ರಿಯೆ (ದಪ್ಪಕ್ಷರಗಳಲ್ಲಿ). ನಂತರ ಅದರ ಬಗ್ಗೆ ನೀವು ಬರೆದ ಅಭಿಪ್ರಾಯ. ತದನಂತರ ಅದನ್ನು ಕುರಿತ ನನ್ನ ಟಿಪ್ಪಣಿಗಳು.. (ವಾಲು ದಪ್ಪಕ್ಷರಗಳಲ್ಲಿ) ಗಮನಿಸಿ.

ನನ್ನ ಪ್ರತಿಕ್ರಿಯೆಗಳ ಬಗ್ಗೆ ನಿಮ್ಮ ಅಭ್ಯಂತರವಿರುವೆಡೆ ಮಾತ್ರ ನನ್ನ ಟಿಪ್ಪಣಿಗಳಿವೆ.

ನನಗೆ ಮತ್ತಷ್ಟು ಯೋಚಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ವಂದನೆಗಳು. ಬಹುಶಃ ನಾವು ಎಲ್ಲಿದ್ದೇವೆ ಎಂಬುದು ಈಗ ಹೆಚ್ಚು ಸ್ಪಷ್ಟವಾಗಿದೆ. ಹಾಗಾಗಿ, ದಯವಿಟ್ಟು ಈ ಮಾತುಕತೆಯ ವಿಸ್ತರಣೆ ಬೇಡ.

ವಂದನೆಗಳೊಂದಿಗೆ,

ವಿಶ್ವಾಸದ

ಡಿ.ಎಸ್. ನಾಗಭೂಷಣ

(೪) ಇಸ್ಲಾಂ ಒಂದು ಕಠಿಣ ಧರ್ಮ, ಅದು ಹಿಂದೂ ಧರ್ಮದ ರೀತಿಯಲ್ಲಿ ಆಧುನಿಕಗೊಳ್ಳಲು ನಿರಾಕರಿಸುತ್ತದೆ ಎಂಬುದು ನಮ್ಮ ಅಭಿಪ್ರಾಯ. ಅದೇನೇ ಇದ್ದರೂ, ಅದರ ಫಲವನ್ನು ಅದರ ಸದಸ್ಯರು ಉಣ್ಣುತ್ತಾ ಅದು ಒಳಗಿಂದ ಬದಲಾವಣೆಯಾಗಬೇಕಷ್ಟೆ. ಸದ್ಯಕ್ಕೆ ಆ ಧರ್ಮ ನಮ್ಮ ಸಂವಿಧಾನಕ್ಕೆ ಬದ್ಧವಾಗಿ ನಡೆಯುತ್ತಿದೆಯೋ ಅಲ್ಲವೋ ಎಂಬುದು ಇಂದು ನಮಗೆ ಮುಖ್ಯವಾಗಬೇಕು.

ಈ ನಿಮ್ಮ ಮಾತು ಪೂರ್ತಿ ಒಪ್ಪತಕ್ಕದ್ದಲ್ಲ. ಯಾಕೆ ಎನ್ನುವುದನ್ನು ನನ್ನ ಪುಸ್ತಕದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. (ಉದಾ: ಅಮರ್ತ್ಯಸೇನ್, ಸಿ.ಎನ್.ಆರ್. ಅಭಿಪ್ರಾಯಗಳನ್ನು ಉಲ್ಲೇಖಿಸಿದ ಭಾಗ). ಆಧುನಿಕ ಸಮಾಜದಲ್ಲಿ ಎಲ್ಲ ಸಮುದಾಯಗಳು ಒಟ್ಟಿಗೆ ಬಾಳಬೇಕಾದಾಗ ಅವರವರ ಫಲವನ್ನು ಅದರ ಸದಸ್ಯರು ಉಣ್ಣುತ್ತಾರೆ ಅನ್ನಲಾಗದು. (ಅ) ನೈತಿಕ ಪೋಲಿಸುಗಿರಿ ಹಾಗೂ ಕೋಮು ಸಂಘರ್ಷಕ್ಕೆ ಇದೂ ಕೂಡ ಕಾರಣ. ಇದು ಕಾಮನ್ ಸೆನ್ಸ್ ಮೂಲಕ ಗೊತ್ತಾಗುವ ಸಂಗತಿ ಅಷ್ಟೇ ಅಲ್ಲ: ಕೋಮು ಸೂಕ್ಷ್ಮ ಜಿಲ್ಲೆಯ ಇನ್ನಷ್ಟು ಕೋಮು ಸೂಕ್ಷ್ಮ ತಾಲೂಕಿನಲ್ಲಿ ಇರುವ ಹಾಗೂ ಕೆಲಸ ಮಾಡುವ ನನ್ನ ಸ್ವಂತ ಅನುಭವದ ಪ್ರಾಮಾಣ್ಯಕೂಡ ಇದಕ್ಕಿದೆ. ಎಂದಾದರೂ ಮುಖತಃ ಭೇಟಿಯಾದಾಗ ಅಂಥ ಅನುಭವಗಳನ್ನು ಹಂಚಿಕೊಂಡೇನು. ಉಡುಪಿಯಂಥ, ಬೆಂಗಳೂರಿನ ಜಯನಗರ ಇತ್ಯಾದಿಯಂಥ ಸೇಫ್ ಜಾಗಗಳಲ್ಲಿ ಇರುವವರಿಗೆ ಇದೆಲ್ಲ ಅರ್ಥವಾಗದಿದ್ದರೆ ಅಚ್ಚರಿಯಿಲ್ಲ. ಈಚೆಗೆ ರೋಮಿಲಾ ಥಾಪರ್ ಯಾಕೆ ಸಮಾನ ನಾಗರಿಕ ಸಂಹಿತೆ ಅನಿವಾರ್ಯ ಅಂತ ಹೇಳಿದರು? ಮೊದಲಿಂದಲೂ ಅವರು ಹೇಳುತ್ತಾ ಬಂದಿದ್ದರೇ ಎಂದು ನನಗೆ ಗೊತ್ತಿಲ್ಲ.

ಅ) ನಾನೂ ಎರಡು ಮೂರು ವರ್ಷ ದ.ಕ.ದಲ್ಲಿ ವಾಸಿಸಿದವನು. ನನ್ನ ಪತ್ನಿಯೂ ದ.ಕ. ದವಳೇ! ನಾನು ನೋಡಿದಂತೆ ಬೇರೆ ಕಡೆ ನೆಲೆಸಿ ಬಂದ ಅನುಭವವಿಲ್ಲದ ದ.ಕ. ದ ಜನ (ಉಡುಪಿ–ಕುಂದಾಪುರ ಇದರಲ್ಲಿ ಸೇರುವುದಿಲ್ಲ) ಅವರು ಯಾವುದೇ ಸಾಮಾಜಿಕ ಹಿನ್ನೆಲೆಯಿಂದ ಬಂದವರಾಗಿದ್ದರೂ, ಮೂಲತಃ ಅಪ್ಪಟ ವ್ಯಾವಹಾರಿಕರು. ಈ ವ್ಯಾವಹಾರಿಕತೆಗಾಗಿ ಪಾರಂಪರಿಕವಾಗಿ ತಮ್ಮದೇ ಒಂದು ಸಾಮಾಜಿಕ ಶಿಸ್ತು ರೂಪಿಸಿಕೊಂಡವರು. ಅದು ಸಾಂಪ್ರದಾಯಿಕ ಅರ್ಥದ 'ಹಿಂದೂ' ಶಿಸ್ತು. ಈ ಪ್ರದೇಶ ಅನ್ಯ ಪ್ರಭಾವಗಳಿಗೆ ಹೆಚ್ಚೆಚ್ಚು ಒಳಗಾಗುತ್ತಿದ್ದಂತೆ ಈ ಶಿಸ್ತು ಶಿಥಿಲವಾಗತೊಡಗಿ, ಈಗ

ಅದರ ವಿರುದ್ಧ ಪರಿಣಾಮಕಾರಿ ಅಸ್ತ್ರವಾಗಿ ಹಿಂದುತ್ವದ ರಾಜಕಾರಣ ಬಳಕೆಯಾಗುತ್ತಿದೆ. ಉದಾ: ಭೂಸುಧಾರಣೆ, ಕೆಳಜಾತಿಗಳು ಆಸ್ತಿವಂತರಾಗಿ ರಾಜಕೀಯ ಬಲಾಢ್ಯತೆ ಗಳಿಸಿಕೊಳ್ಳುತ್ತಾ ಹೋದದ್ದು ಮತ್ತು ಮುಖ್ಯವಾಗಿ ಕೇರಳದ ಮುಸ್ಲಿಮರು ತುಳುನಾಡಿನ (ಮತ್ತು ಕೊಡಗಿನ) ವ್ಯಾಪಾರವನ್ನು ಕ್ರಮೇಣ ತಮ್ಮ ಆಧುನಿಕ ವ್ಯಾಪಾರ ಕೌಶಲಗಳಿಂದ ಕೈವಶ ಮಾಡಿಕೊಳ್ಳತೊಡಗಿದ್ದು ಇತ್ಯಾದಿ. ಹಾಗಾಗಿ ದ.ಕ.ದ ಕೋಮು ಪರಿಸ್ಥಿತಿಯನ್ನು ಈ ನೆಲೆಗಳಿಂದ–ಸಾಮಾಜಿಕ–ರಾಜಕೀಯ ನೆಲೆಗಳಿಂದ– ನೋಡಿ ಪರಿಹಾರ ಕಂಡುಕೊಳ್ಳಬೇಕೇ ಹೊರತು ಹಿಂದೂ–ಮುಸ್ಲಿಂ ವಿಂಗಡಣೆಯ ಆಧಾರದ ಮೇಲಲ್ಲ. ಈ ವಿಂಗಡಣೆ, ಯಾರು ಹೆಚ್ಚು ಮತೀಯವಾದಿ ಎಂಬ ಪ್ರಶ್ನೆಯ ಸುಳಿಗಷ್ಟೇ ನಮ್ಮನ್ನು ದೂಡಬಲ್ಲುದು.

ಆ) ನಾನಂತೂ ಸಮಾನ ನಾಗರಿಕ ಸಂಹಿತೆ ಜಾರಿಗೆ ಬರಬೇಕೆಂದು ಮೊದಲಿಂದಲೂ ಹೇಳುತ್ತಾ ಬಂದವನು. ರೋಮಿಲ್ಲಾ ಥಾಪರ್ ಇತ್ತೀಚೆಗೆ ಅದನ್ನು ಹೇಳುತ್ತಿದ್ದರೆ ಅದಕ್ಕೆ ಕಾರಣವೇನೆಂದು ನನಗೆ ಗೊತ್ತಿಲ್ಲ. ಆದರೆ ಅದೊಂದು ಸಮಾಧಾನದ ಸಂಗತಿಯೆಂದೇಕೆ ತೆಗೆದುಕೊಂಡು ನಾವು ಖುಷಿಪಡಬಾರದು?

(೫) ಹಿಂದೆಯೂ ಅಸಹಿಷ್ಣುತೆ ಇತ್ತು. ಆದರೆ ಅದು ಪ್ರಭುತ್ವದ ನೀತಿಯಾಗಿರಲಿಲ್ಲ.

ಈಗಲೂ ಅಸಹಿಷ್ಣುತೆ ಪ್ರಭುತ್ವದ ನೀತಿ ಅಂತ ನಾನು ಅಂದುಕೊಂಡಿಲ್ಲ. ಆದರೆ ಕೆಲವು ಸಂಘಟನೆಗಳ ಮಾತುಗಳಿಗೆ ಜನಸಮುದಾಯಗಳ ನಡುವೆ ಹೆಚ್ಚು ಮಾನ್ಯತೆ, ಲೆಜಿಟಿಮೆಸಿ ಬಂದಂತೆ ಕಾಣುತ್ತದೆ. ಇಲ್ಲೊ ಮೋದಿ ಟೀಕಾಕಾರರು ಗಮನಿಸಬೇಕಾದ ಪ್ರಶ್ನೆಯಿದೆ. ಆದರೆ ಅವರು ಗಮನಿಸುವುದಿಲ್ಲ. ಅದೇನೆಂದರೆ, ಮೋದಿ ಅಧಿಕಾರಕ್ಕೆ ಬಂದದ್ದರಿಂದ ಇವರಿಗೆ ಲೆಜಿಟಿಮೆಸಿ ಬಂದದ್ದೇ ಅಥವಾ ಇಂಥ ತಾತ್ವಿಕತೆಗೆ ಸಮುದಾಯಗಳು ತಕ್ಕಮಟ್ಟಿನ ಲೆಜಿಟಿಮೆಸಿ ನೀಡಿದ್ದರಿಂದಾಗಿ ಮೋದಿ ಅಧಿಕಾರಕ್ಕೆ ಬಂದದ್ದೇ?

ಈ (ಮೋದಿ) ಸರ್ಕಾರದ ಎರಡು ವರ್ಷಗಳ ಆಡಳಿತ ನೋಡಿದ ಮೇಲೂ ನಿಮಗೆ ಹಾಗೆನಿಸುತ್ತಿಲ್ಲದಿದ್ದಲ್ಲಿ ಅದು ನಿಮ್ಮ ಅಭಿಪ್ರಾಯವೆಂದಷ್ಟೇ ಸ್ವೀಕರಿಸಬಲ್ಲೆ. ಆದರೆ ಒಂದು ಮಾತು: ಇವರಿಂದ ಅವರೋ, ಅವರಿಂದ ಇವರೋ ಅಥವಾ ಅದರಿಂದ ಇದೋ, ಇದರಿಂದ ಅದೋ ಎಂಬ ಪ್ರಶ್ನೆಗಳೇ ವಾಸ್ತವವದಿಂದ ನಮ್ಮನ್ನು ದೂರ ಒಯ್ಯಲು ರೂಪುಗೊಂಡಿರುವಂಥವು. ಅವೆರಡೂ ಒಂದೇ ಎಂದು ತಿಳಿಯಲು ನಿರಾಕರಿಸುವವರೊಂದಿಗೆ ನನ್ನ ವಾದವಿಲ್ಲ.

(೬) ಪಾಕಿಸ್ತಾನದಲ್ಲಿದೆಯೆಂದು ನೀವು ನಂಬುವ ಅಸಹಿಷ್ಣುತೆಯನ್ನು ಉಲ್ಲೇಖಿಸಿ ಇಲ್ಲಿನ ಅಸಹಿಷ್ಣುತೆಯನ್ನು ಕ್ಷಮಾರ್ಹಗೊಳಿಸುವ ಪ್ರಯತ್ನ ಹಿಂದೂಧರ್ಮೀಯತೆಗೇ ವಿರುದ್ಧವಾದದ್ದು.

ಪಾಕಿಸ್ತಾನದಲ್ಲಿ ಅಸಹಿಷ್ಣುತೆ ಇದೆ ಎಂಬುದು ಕೇವಲ ನನ್ನ 'ನಂಬಿಕೆ', ಅದು ವಾಸ್ತವ ಅಲ್ಲ ಅಂತ ನೀವು 'ನಂಬುವುದಾದರೆ' ನನ್ನ ವಾದವಿಲ್ಲ. ಇಲ್ಲಿಯ ಅಸಹಿಷ್ಣುತೆ

ಖಂಡಿತಾ ಕ್ಷಮಾರ್ಹವಲ್ಲ. ಆದರೆ ಅದರ ಕಾರಣವನ್ನು ಯಾರಾದರೂ ಶೋಧಿಸಲು ಹೊರಟಾಗ ಯಾಕೆ ಅಸಹಿಷ್ಣುತಾವಾದಿಗಳಿಗೆ ಭಯ? ಕ್ಷಮಾರ್ಹತೆ ಇತ್ಯಾದಿ ನೆಪಗಳು? ಅಷ್ಟೇ ಅಲ್ಲ, ಎಲ್ಲವೂ ಜಾಗತೀಕರಣಕ್ಕೆ ಒಳಗಾಗುವಾಗ ಇತರ ದೇಶಗಳ ಸ್ಥಿತಿಗತಿಗಳು ಕೂಡ ಪ್ರಭಾವಿಸುತ್ತವೆ ಎಂದು ತಿಳಿದುಕೊಳ್ಳುವುದು ಮುಖ್ಯ. ಯಾಕೆಂದರೆ, ನಾವು ನೀವು ಅಪೇಕ್ಷಿಸುವಂತೆ ಜನರೆಲ್ಲಾ ವೈಚಾರಿಕವಾಗಿ ಯೋಚಿಸಿ ಬದುಕುವುದೂ ಇಲ್ಲ, ತಮ್ಮ ಅಭಿಪ್ರಾಯಗಳನ್ನು ರೂಪಿಸಿಕೊಳ್ಳುವುದೂ ಇಲ್ಲ. ಭಾವನೆಗಳು ಜನರಿಗೆ ಮುಖ್ಯವಾಗುತ್ತವೆ, ಭಾವನೆಗಳನ್ನು ಇಡೀ ಜಗತ್ತಿನ ಆಗುಹೋಗುಗಳು ಪ್ರಭಾವಿಸುತ್ತಿರುತ್ತವೆ– ಅವರಿಗೆ ಅಂಥ ಆಗುಹೋಗುಗಳ ಅರಿವು ಇದ್ದಾಗ.–ಅರಿವು ಇಲ್ಲದಿದ್ದ ಕಾಲದಲ್ಲಿ ಸಮಸ್ಯೆಯೇ ಇಲ್ಲ.

ಅ) ಪಾಕಿಸ್ತಾನ ಅಧಿಕೃತವಾಗಿ ಒಂದು ಮತೀಯ ದೇಶ. ಅದನ್ನೂ, ಸೆಕ್ಯುಲರ್ ಎಂದು ಘೋಷಿಸಿಕೊಂಡಿರುವ ನಮ್ಮ ದೇಶವನ್ನೂ, ಅಸಹಿಷ್ಣುತೆಯ ನೆಲೆಯಲ್ಲಿ ಹೋಲಿಸುವಾಗ ಇದನ್ನೆಲ್ಲ ಮೀರಿ ಯೋಚಿಸಬೇಕಾದ ನಮ್ಮಂಥವರ ಭಾಷೆಯ ಬಳಕೆ ಸ್ವಲ್ಪ ಎಚ್ಚರದಿಂದ ಕೂಡಿರಬೇಕೆಂಬುದೇ ನನ್ನ ಮಾತುಗಳ ಇಂಗಿತ. ಇಂದು ಭಾರತ ಕೂಡ ಪಾಕಿಸ್ತಾನದಂತೆಯೇ ಒಂದು ಮತೀಯ ದೇಶವಾಗಬೇಕೆಂದು ಹಂಬಲಿಸುತ್ತಿರುವವರ ಪ್ರಾಬಲ್ಯ ಹೆಚ್ಚುತ್ತಿರುವಾಗ, 'ಭಾರತವೇ ನೀನೂ ನನ್ನ ದೇಶದಂತೆಯೇ ಆಗಲು ಹೊರಟಿರುವೆಯಾ!' ಎಂದು ಆತಂಕಗೊಂಡಿರುವ ಜನರೂ ಪಾಕಿಸ್ತಾನದಲ್ಲಿದ್ದಾರೆ ಎಂಬುದನ್ನೂ, ನಾವು ಗಮನಿಸಬೇಕೆಂಬುದೂ ನನ್ನ ಈ ಮಾತಿನ ಉದ್ದೇಶ. ನಾವೀಗ ಹೆಮ್ಮೆ ಪಡುವಂತಿರುವುದು, ಅಲ್ಲಿ ನಮ್ಮಲ್ಲಿರುವುದಕ್ಕಿಂತ ಹೆಚ್ಚು ಅಸಹಿಷ್ಣುತೆ ಇದೆ ಎಂದು ಮಾತ್ರ. ಇದು ನಿಜವಾಗಿಯೂ (ನೀವು ಅನುಭವಿಸುತ್ತಿರುವಂತೆ ತೋರುವ) ಹೆಮ್ಮೆ ಪಡುವ ವಿಚಾರ ಹೌದೇ, ನೀವೇ ಯೋಚಿಸಿ.

ಆ) ಅಹಿಷ್ಣುತೆಗೆ ಕಾರಣಗಳ ಶೋಧನೆ ಒಂದೇ ನೆಲೆಯಿಂದ ನಡೆಯಬಾರದು. ಅದು ರಾಜಕಾರಣವಾಗುತ್ತದೆ. ಅದನ್ನು ವಿರೋಧಿಸಲಾಗುತ್ತಿದೆಯೇ ಹೊರತು ಭಯವೆಲ್ಲಿಂದ ಬಂತು? ಅದು ಶೋಧನೆಯ ರಾಜಕಾರಣ ತನ್ನನ್ನು ತಾನು ಸಮರ್ಥಿಸಿಕೊಳ್ಳಲು ಹುಟ್ಟಿಸಿಕೊಳ್ಳುವ ಭ್ರಮೆ ಅಷ್ಟೆ.

ಇ) ಜಾಗತೀಕರಣದ ಪ್ರಭಾವದಿಂದ ಮನುಷ್ಯ ದುಷ್ಟನಾಗತೊಡಗಿದರೆ ಅದನ್ನು ವಿರೋಧಿಸಬೇಕೇ ಹೊರತು ಅದನ್ನು ನಮ್ಮ ವಾದಸರಣಿಗೆ ದತ್ತಾಂಶವನ್ನಾಗಿ ಮಾಡಿಕೊಳ್ಳಬಾರದು. ಜಾಗತೀಕರಣದ ವಿರುದ್ಧ ನಮ್ಮ ಎಚ್ಚರ ಮುಖ್ಯವಾಗುವುದು ಇಲ್ಲಿಯೇ.

(೭) ಭಾರತದ ಹಿಂದೂ ಬಲಪಂಥೀಯತೆಗೆ ಒಂದು ಬೌದ್ಧಿಕ ಪರಂಪರೆ ಇಲ್ಲ ಎಂಬ ಅಭಿಪ್ರಾಯವಿದೆ. ಹೀಗಾಗಿ ಬಾಲಗಂಗಾಧರರ ಮಾರ್ಗದರ್ಶನದಲ್ಲಿ ಅದಕ್ಕೊಂದು ಬೌದ್ಧಿಕತೆಯನ್ನು ಕಟ್ಟಿಕೊಡುವ ಯೋಜನೆ ಜಾರಿಯಲ್ಲಿದೆ ಎಂದು ಕೇಳಿದ್ದೇನೆ. ನಿಮ್ಮ ಕಿರುಪುಸ್ತಕ ಓದಿದಾಗ ನೀವೂ ಈ ಯೋಜನೆಯ ಕಾರ್ಯಕರ್ತರಂತೆ ನನಗೆ ಕಂಡಿತು.

ಇಲ್ಲಿ ಒಂದು ಸ್ಪಷ್ಟನೆ ನೀಡಬೇಕು ನಾನು. ನನ್ನ ಕಿರುಹೊತ್ತಗೆಯ ವಾದ ಸರಣಿಯು ನಾನು ಬಾಲು ಅವರನ್ನು ಓದುವುದಿರಲಿ, ಅವರ ಹೆಸರು ಕೇಳುವುದಕ್ಕೂ ಮೊದಲೇ

ಬರೆದಿರುವಂಥದ್ದೇ ಆಗಿದೆ. (೨೦೦೭ರಲ್ಲಿ ನಾನು ಬರೆದ 'ಬುದ್ಧಿಜೀವಿ..' ಪುಸ್ತಕ ನೋಡಬಹುದು. (ಅಲ್ಲಿ ಇಷ್ಟು ಸ್ಪಷ್ಟವಾದ ಫೋರ್ಮುರ್ಲೇಶನ್ಸ್ ಇಲ್ಲದೇ ಇರಬಹುದು.) ನಾನು ಅವರ ಹೆಸರು ಕೇಳಿದ್ದು ೨೦೦೮ರ ನಂತರ. ಅದೂ ನನ್ನ ಪುಸ್ತಕ ಓದಿದ ಒಬ್ಬರು ಅವರ 'ಹೀದೆನ್ಸ್...' ಪುಸ್ತಕದ ಬಗ್ಗೆ ಹೇಳಿದಾಗ. ಹಾಗೆ ನೋಡಿದರೆ, ನಿಮ್ಮ 'ಆಧುನಿಕತೆ, ಪ್ರಗತಿಪರತೆ ಮತ್ತು ಸಾಮಾಜಿಕ ನ್ಯಾಯ' ಎಂಬ ಲೇಖನವನ್ನು ಓದಿದವರು ಯಾರಾದರೂ (ನೀವು ಬಾಲು ಅವರನ್ನು ಕಟುವಾಗಿ ಟೀಕಿಸಿ ಬರೆದ ಬರಹಗಳನ್ನು ಓದದೇ ಇದ್ದರೆ) ನಿಮ್ಮನ್ನೂ ಕೂಡ ಬಾಲು ಹಿಂಬಾಲಕ ಅಂತ ಪರಿಗಣಿಸುವುದರಲ್ಲಿ ಯಾವುದೆ ಸಂಶಯವಿಲ್ಲ. ಇನ್ನು ಬಾಲಗಂಗಾಧರರ ವಿಚಾರದ ಬಗ್ಗೆ ನನ್ನ ಪ್ರಕಾರ ರಿಲಿಜನ್ ಬಗ್ಗೆ ಅವರ ಮಾತು ಹೆಚ್ಚು ಒಪ್ಪಬಹುದಾದ್ದು. ಆದರೆ, ಭಾರತದಲ್ಲಿ ಜಾತಿ ಆಧರಿತ ತಾರತಮ್ಯ ಇರಲಿಲ್ಲ ಅಥವಾ ಇಲ್ಲ ಎಂಬ ಮಾತನ್ನು ನಾನು ಖಂಡಿತ ಒಪ್ಪುವುದಿಲ್ಲ. ಹೀಗಾಗಿ ಜಾತಿವ್ಯವಸ್ಥೆ ಇದೆಯೇ ಇಲ್ಲವೇ ಎಂಬ ಟೆಕ್ನಿಕಲ್ ವಿಷಯಗಳು ಈ ತಾರತಮ್ಯ ನಿವಾರಣೆ ದೃಷ್ಟಿಯಿಂದ ಅಷ್ಟು ಉಪಯುಕ್ತವಲ್ಲ ಅಂತ ನನ್ನ ನಿಲುವು. ಆದರೆ ಸಂವಿಧಾನದ ಕ್ರಮದಿಂದ ಜಾತಿ ಆಧರಿತ ತಾರತಮ್ಯ ಸ್ವಲ್ಪವಾದರೂ ಕಡಿಮೆಯಾಗಿದೆ ಹಾಗೂ ಕಡಿಮೆಯಾಗುತ್ತಿದೆ ಎಂದು ನನ್ನ ಅಭಿಪ್ರಾಯ. ಮೀಸಲಾತಿ ಬೇಕು ಅಂತಲೇ ನಾನು ಹೇಳೋದು. ಆದರೆ ಪರಿಶಿಷ್ಟರಿಗೂ ಕೆನೆಪದರ ಅನ್ವಯ ಆದರೆ ಮಾತ್ರ ತೀರಾ ಹಿಂದಿರುವ ಗ್ರಾಮೀಣ ಭಾಗಗಳ ಪ.ಜಾ. ಮತ್ತು ಪ.ಪಂಗಡದವರಿಗೆ ಪ್ರಯೋಜನ. (ಬಹಳ ಸಾಮಾಜಿಕ ಕಾಳಜಿಯುಳ್ಳ ಜೆ. ಎನ್. ಯು ಸ್ಕಾಲರ್‌ಗಳಾದರೂ ಹೀಗೆ ಕೆನೆಪದರ ಅನ್ವಯ ಮಾಡಬೇಕು ಅಂತ ಹೇಳುವ ಧೈರ್ಯ ತೋರಿಸಿದಂತೆ ಕಾಣುವುದಿಲ್ಲ.)

ಅ) ನೀವು ಬಾಲು ಅವರನ್ನು ಯಾವಾಗ ಓದಿದಿರಿ ಎಂಬ ಕಾಲ ನಿರ್ದಿಷ್ಟತೆ ನನಗೆ ಮುಖ್ಯವಲ್ಲ. ಬಾಲು ವಿಚಾರಗಳ ಪ್ರಭಾವ ಕರ್ನಾಟಕದಲ್ಲಿ ನನಗೆ ತಿಳಿದಂತೆ ೧೫-೨೦ ವರ್ಷಗಳ ಹಿಂದೆಯೇ ಆರಂಭವಾಗಿತ್ತು. ಅದು ಒಂದು ವಲಯದಲ್ಲಿ ಒಂದು ನಿರ್ದಿಷ್ಟ ಆಲೋಚನಾ ಲಹರಿಯನ್ನೂ ಸೃಷ್ಟಿಸಿತ್ತು. ಅದರ ಲಕ್ಷಣಗಳನ್ನು ನಿಮ್ಮ ಬರಹದಲ್ಲಿ ನಾನು ಕಂಡೆ ಎಂದು ನೀವು ಈ ಸಂಬಂಧದ ನನ್ನ ಮಾತುಗಳನ್ನು ಅರ್ಥೈಸಿಕೊಳ್ಳಬಹುದು.

ಆ) ನನ್ನ ಲೇಖನವನ್ನೋದಿದ ಯಾರೂ ಈವರೆಗೆ ಅದರಲ್ಲಿ ಬಾಲ ಗಂಗಾಧರರ ವಿಚಾರಗಳ ಪ್ರಭಾವವಿದೆ ಎಂದು ಹೇಳಿಲ್ಲ. ಜಾತಿಪದ್ಧತಿ ಕುರಿತಂತೆ ವಿಭಿನ್ನವಾಗಿ ಯೋಚಿಸುವವರೆಲ್ಲರೂ ಬಾಲು ಪ್ರಭಾವಕ್ಕೆ ಒಳಗಾದವರೆಂದು ಹೇಳಲಾಗದು. ಏಕೆಂದರೆ, ಹಿಂದೂ 'ಧರ್ಮ'ವನ್ನು ಮಿಷನರಿಗಳು ನೋಡಿದಂತೆ ನೋಡುವ ಪರಿಪಾಠ ದೋಷಪೂರ್ಣವಾದದ್ದು ಎಂಬುದನ್ನು ಹೇಳಿದವರಲ್ಲಿ ಬಾಲು ಮೊದಲಿಗರೇನಲ್ಲ. ಅಷ್ಟೇ ಅಲ್ಲ, ಅದರ ಆಧಾರದ ಮೇಲೆ ಅವರು ಕಟ್ಟಿಕೊಡುತ್ತಿರುವ ತಾತ್ವಿಕತೆಯ ಸೌಧ ಕುತರ್ಕದಿಂದ ಕೂಡಿದ್ದು, ಸಂಪೂರ್ಣವಾಗಿ ಬ್ರಾಹ್ಮಣವಾದಿಯಾಗಿದೆ. (ಗಮನಿಸಿ: ನಾನು ವೈದಿಕವಾದಿಯಾಗಿದೆ ಎನ್ನುತ್ತಿಲ್ಲ; ಏಕೆಂದರೆ ವೈದಿಕತೆಗೆ ತನ್ನದೇ ಆದ ಘನತೆ-ಸತ್ವ ಇದೆ ಎಂದು ನಂಬಿರುವವನು ನಾನು. ಮಾಸ್ತಿ, ಪುತಿನ ಇದಕ್ಕೆ ಘನವಾದ ಉದಾಹರಣೆಗಳು)

ಮೊನ್ನೆ ಈ ಬಾಲು ಎಂಬುವವರು ಅಂಬೇಡ್ಕರ್ ಬಗ್ಗೆ ಆಡಿರುವ ಮಾತುಗಳು ಇಂತಹ ಕೆಟ್ಟ ಬ್ರಾಹ್ಮಣವಾದದಿಂದ ಮಾತ್ರ ಹೊರಹೊಮ್ಮಬಲ್ಲವು.

ಇ) ಜಾತಿ ಮೀಸಲಾತಿ ಕುರಿತ ನಿಮ್ಮ ಅಭಿಪ್ರಾಯ ನಿಮ್ಮದು. ನನ್ನ ಅಭಿಪ್ರಾಯ ನನ್ನದು. ಅದು ಎಲ್ಲರದೂ ಆಗಬೇಕಿಲ್ಲ. ಆದರೆ ಪರಿಶಿಷ್ಟರರಿಗೂ ಕೆನೆಪದರದ ಅನ್ವಯವಾಗಬೇಕು ಎಂದು ಜೆಎನ್‌ಯು ವಿದ್ವಾಂಸರು ಹೇಳಬೇಕು ಎಂದು ನಿರೀಕ್ಷಿಸುವ ನೀವು ಅದೇ ನಿರೀಕ್ಷೆಯನ್ನು ಸಂಘ ಪರಿವಾರದ ನಾಯಕರಿಂದ ನಿರೀಕ್ಷಿಸದಿರುವುದು ಆಶ್ಚರ್ಯಕರ!

(ಲ) ನಿಮ್ಮ ಈ ಕಿರುಬರಹದಲ್ಲೂ ಇಣುಕುವ ವರ್ಣಾಶ್ರಮ ಧರ್ಮದ ತಾತ್ವಿಕತೆಯೇನೂ ಕಡಿಮೆ ತೀವ್ರತೆಯ ಬೌದ್ಧಿಕತೆಯಲ್ಲ.

ನಿಮ್ಮ ಈ ಮಾತು ಮಾತ್ರ ತೀರಾ ಅಚ್ಚರಿ ನನಗೆ. ನನ್ನ ಪುಸ್ತಕದಲ್ಲಿ ಆಶ್ರಮಧರ್ಮದ ತಾತ್ವಿಕತೆ ಎಲ್ಲಿದೆ? ಮತ್ತು ವರ್ಣಧರ್ಮದ ತಾತ್ವಿಕತೆ ಎಲ್ಲಿದೆ ಅಂತ ಹುಡುಕುತ್ತಲೇ ಇದ್ದೇನೆ! ಅಂತರ್ಜಾತಿ ಮದುವೆ ಬಗ್ಗೆ ಹೇಳಿದ್ದೇನೆ ಆದರೆ ಅಂಥ ಮದುವೆ ಆಗಬಾರದು ಅಂತ ನಾನು ಅಲ್ಲಿ ಹೇಳಿಲ್ಲ. ಬಹುಸಂಸ್ಕೃತಿ ಬಗ್ಗೆ ಬೊಬ್ಬೆ ಹಾಕುವವರ ಸಮಸ್ಯೆ ಬಗ್ಗೆ ಅಲ್ಲಿ ಹೇಳಿದ್ದೇನೆ. ನನ್ನ ದೃಷ್ಟಿಯಲ್ಲಿ ಎಲ್ಲ ಸಂಸ್ಕೃತಿಗಳೂ ಆಧುನಿಕ ಬದುಕಿಗೆ ಹೊಂದಿಕೊಳ್ಳುವಾಗ ಅಲ್ಪ ಸ್ವಲ್ಪ ಕಳೆದುಕೊಳ್ಳಬೇಕಾಗುತ್ತದೆ. ಹಾಗೆ ನೋಡಿಗರೆ, ಮೇಲಿಂದ ಮೇಲೆ ನೋಡಿದರೂ ನಮ್ಮ ಪ್ರಗತಿಪರರಿಗೆ ನಿಮ್ಮ 'ಆಧುನಿಕತೆ, ಪ್ರಗತಿಪರತೆ ಮತ್ತು ಸಾಮಾಜಿಕ ನ್ಯಾಯ' ಎಂಬ ಲೇಖನದಲ್ಲೂ ವರ್ಣಧರ್ಮ ಕಂಡೀತು! ಇನ್ನು ನನ್ನ ಬರಹದಲ್ಲಿ ವರ್ಣಾಶ್ರಮ ಧರ್ಮ ಹುಡುಕಿದ ನಿಮ್ಮದೇ ಮಾನದಂಡದಿಂದ ನೋಡಿದರೆ ಕೇಳುವುದೇ ಬೇಡ. (ಆದರೆ ನಿಮ್ಮ ಆ ಲೇಖನ ನಿಜವಾಗಿ ತುಂಬಾ ಚೆನ್ನಾಗಿದೆ. ಅಂಥ ಲೇಖನಗಳು ಈಚೆಗೆ ಅಪರೂಪ.) ಮೊದಲು ಜಾತಿವಿನಾಶವಾಗಿ ಬಳಿಕ ಸಮಾನತೆ ಬರುತ್ತದೆ ಎಂದು ನನಗೆ ಅನಿಸುವುದಿಲ್ಲ. ಬದಲಾಗಿ ಜಾತಿಗಳ ಮಧ್ಯೆ ಮೊದಲು ಮೀಸಲಾತಿ ಇತ್ಯಾದಿ ಮೂಲಕ ಸಮಾನತೆ ಸಿದ್ಧಿಸಿದರೆ ಜಾತಿವಿನಾಶವೂ ನಿಧಾನಕ್ಕೆ ಆದೀತು ಅಂತ ನನ್ನ ನಂಬಿಕೆ. ಜಾತಿಗಳೇ ಇಲ್ಲದಿರುತ್ತಿದ್ದರೆ ಎಷ್ಟು ಒಳ್ಳೆಯದಿತ್ತು ಅಂತ ನನಗೂ ಅನಿಸುತ್ತದೆ, ಆದರೆ ವಾಸ್ತವ ಹಾಗಿಲ್ಲವಲ್ಲ. ಹೀಗಾಗಿ ತಮಗಿರುವ ಒಂದೇ ಜನ್ಮದಲ್ಲಿ ತಮ್ಮತಮ್ಮ ಜಾತಿಗಳ ಒಳಗೆ ಮದುವೆಯಾಗಿ ನೆಮ್ಮದಿಯಾಗಿ ಇರೋಣ ಎಂಬುದೇ ಬಹುತೇಕರ ಭಾವನೆ. ಜಾತಿವಿನಾಶ ಮಾಡಲಿಕ್ಕಾಗಿ ಅಂತರಜಾತಿ ಮದುವೆ ಆಗಲೇಬೇಕೆಂದು ಹೊರಡುವವರು ಎಷ್ಟಿದ್ದಾರು?

ನಾನು 'ಇಣುಕುವ' ಎಂಬ ಶಬ್ದ ಬಳಸಿದ್ದೇನೆ. ಈಗ ಇದನ್ನು ನಿರ್ದಿಷ್ಟವಾಗಿ ಪುಷ್ಟೀಕರಿಸಲು ನಾನು ಮತ್ತೊಮ್ಮೆ ನಿಮ್ಮ ಬರಹವನ್ನು ಇಡಿಯಾಗಿ ಓದಬೇಕಾಗುತ್ತದೆ. ಅದು ಸದ್ಯಕ್ಕೆ ಆಗುತ್ತಿಲ್ಲ, ಕ್ಷಮೆ ಇರಲಿ. ಆದರೆ ಹಾಗೆ ನನಗೆ ಅನ್ನಿಸಿದ್ದು ನಿಜ. ಅದರ ಪುರಾವೆಗಳು ನನ್ನ ಈ ಮೇಲಿನ ಉತ್ತರಗಳಲ್ಲೂ ಸೂಚಿತವಾಗಿರುವುದನ್ನು ನೀವು ಗಮನಿಸಬಹುದಾಗಿದೆ.

ಜಾತಿಪದ್ಧತಿಯನ್ನು ಜಾತಿ ಬಿಟ್ಟು ಮದುವೆಯಾಗುವ ಮೂಲಕವೇ ಉಲ್ಲಂಘಿಸಬೇಕಿಲ್ಲ. ಏಕೆಂದರೆ ಜಾತಿ ಬಿಟ್ಟು ಮದುವೆಯಾದವರೂ ಜಾತಿವಾದಿಗಳಾಗಿರಬಹುದಾಗಿದೆ. ಜಾತಿ, ಮನುಷ್ಯರನ್ನು ಅವೈಚಾರಿಕವಾಗಿ–ಅಮಾನವೀಯವಾಗಿ ವಿಂಗಡಿಸುತ್ತಿದೆ ಎಂಬ ಅರಿವಿನೊಂದಿಗೆ ಮೈ–ಮನಗಳ ಎಚ್ಚರದಲ್ಲಿ ಬಾಳಿದರೆ ಸಾಕು.

(೯) ಈ ಪುಸ್ತಕದಲ್ಲಿ ನೀವು ಸೆಕ್ಯುಲರ್‌ವಾದ–ವಾದಿಗಳೆಂದು ಗುರುತಿಸಿ ಎದುರುತ್ತರ ಕೊಡಲು ಯತ್ನಿಸಿರುವ ಪಂಥ/ಪಂಥೀಯರು ಮೂಲತಃ ಮಾರ್ಕ್ಸ್‌ವಾದಿಯಾದದ್ದು/ ಮಾರ್ಕ್ಸ್‌ವಾದಿಗಳು. ಅವರೀಗ ರಾಜಕೀಯವಾಗಿ ಸೋತು ಸುಣ್ಣವಾಗಿ ತಮ್ಮ ಭವಿಷ್ಯದ ಬಗ್ಗೆ ತೀರಾ ಅತಂಕಗೊಂಡವರು. ತಮ್ಮ (ಜಗತ್ತನ್ನು ಭೌತ–ಅಭೌತವೆಂದು ವಿಭಾಗಿಸಿ ನೋಡುವ) ಸಿದ್ಧಾಂತದಲ್ಲೇ ಮೂಲದೋಷವಿದೆ; ಅದೇ ತಮ್ಮ ಅವನತಿಗೆ ಕಾರಣವಾಗಿದೆ ಎಂದು ಇನ್ನೂ ಅರಿಯಲಾಗದ ಈ ಸಿದ್ಧಾಂತಶಠರು ಸಂಘ ಪರಿವಾರದ ರಾಜಕಾರಣವೇ ತನ್ನ ವಿನಾಶಕ್ಕೆ ಕಾರಣವೆಂದು ನಂಬಿ ಅದರ ವಿರುದ್ಧ ನಡೆಸಿರುವ ರಾಜಕೀಯ ಪ್ರಚಾರಾಂದೋಲನದ ಒಂದು ಆಯಾಮವಾಗಿ ಇಂದು ಅಸಹಿಷ್ಣುತೆ ಕುರಿತ ಚರ್ಚೆ ಕಾಣುತ್ತಿರುವುದು ನಿಜ.

ಈಚೆಗೆ ಪ್ರಮುಖ ಮಾಧ್ಯಮಗಳಲ್ಲಿ 'ಜಗತ್ತಿಗೆ ಶ್ರೇಷ್ಠ ವಿದ್ವಾಸರನ್ನು ಉತ್ಪಾದಿಸಿ ಕೊಡುವ ವಿ.ವಿ. ಯೇ ಜೆ.ಎನ್.ಯು.' ಎಂದು ಬಹಳ ಜನ ಬರೆಯುತ್ತಿದ್ದಾರೆ. ಈ ವಿ.ವಿ. ತಯಾರಿಸಿದ ಬಹುಮಂದಿ ಇಲ್ಲಿ ನೀವು ಹೇಳಿದ ವರ್ಗಕ್ಕೆ ಸೇರಿದವರೇ ಅಲ್ಲವೇ? 'ದ ಹಿಂದೂ' ವಿನಂಥ ಪತ್ರಿಕೆಗಳ ಅಂಕಣಗಳನ್ನು ಆಳುತ್ತಿರುವವರೂ ಇಂಥವರೇ ಅಲ್ಲವೇ?

ಇವರನ್ನೆಲ್ಲ ಒಂದೇ ಗುಂಪಿಗೆ ಸೇರಿಸಿ ಮಾತಾಡುವುದು ತರವಲ್ಲ ಎಂದೇ ನನ್ನ ಅಭಿಪ್ರಾಯ. ಮೊನ್ನೆ ಲಕ್ಷ್ಮೀಶ ತೋಳ್ಪಾಡಿಯವರೊಂದಿಗೆ ಮಾತಾಡುತ್ತಿದ್ದಾಗ ಅನ್ನಿಸಿದ ಸಂಗತಿ ಇದು. ಖಾಸಗಿ ಆಸ್ತಿ ನಿರ್ಮೂಲನೆಯ ಮಾತನಾಡುವ ಮಾರ್ಕ್ಸ್‌ವಾದವನ್ನು ಬರೀ ಭೌತವಾದಿಯೆಂದು ಕರೆಯುವುದು ಉಚಿತವಲ್ಲ. ಮಾರ್ಕ್ಸ್‌ವಾದ ಒಂದು ರಾಜಕೀಯ ಸಾಧನವಾಗಿ ಸೋತು ಸುಣ್ಣವಾಗಿರಬಹುದು. ಆದರೆ ಒಂದು ತಾತ್ವಿಕತೆಯಾಗಿ ಅದು ತನ್ನ ಸೃಜನಶೀಲತೆಯನ್ನು ಬತ್ತಿಸಿಕೊಂಡಿಲ್ಲ. ಅದರ ಚಿಗುರುಗಳನ್ನು ನಾವಿಂದು 'ಹಿಂದೂ' ಸೇರಿದಂತೆ ಹಲವು ಕಡೆ ನೋಡುತ್ತಿದ್ದೇವೆ. ಈ ತಾತ್ವಿಕತೆ 'ಪುನರ್‌ಜನ್ಮ' ಪಡೆಯುವ ಹವಣಿಕೆಯಲ್ಲಿದ್ದು, ಅದರ ಸಂಸ್ಕರಿತ ಹೊಸ ರೂಪಗಳ ಬಗ್ಗೆ ಈಗಲೇ ಏನೂ ಹೇಳಲಾಗುವುದಿಲ್ಲ. ಆದರೆ ಸದ್ಯದ ಪ್ರಭುತ್ವ ಪ್ರಾಯೋಜಿತ ಕೋಮುವಾದಿ ಮತ್ತು ವಿಕೃತ ರಾಷ್ಟ್ರೀಯತೆಯ ರಾಜಕಾರಣದ ವಿರುದ್ಧದ ಅದರ ಕೆಚ್ಚನ್ನು ಮೆಚ್ಚದಿರಲಾಗದು.

ನಮಸ್ಕಾರಗಳು.

ಶಿವಮೊಗ್ಗದ 'ದಕ್ಷಿಣಾಯನ': ಒಂದು ಸಂವಾದ ಗುಚ್ಛ

೨೦೧೭ರ ಏಪ್ರಿಲ್ ಎಂಟರಂದು ಭಾಷಾ ತಜ್ಞ ಡಾ. ಗಣೇಶ್ ದೇವಿ ಅವರ ಸಂಚಾಲಕತ್ವದಲ್ಲಿ ಬಹು ನಿರೀಕ್ಷೆಯೊಂದಿಗೆ ಶಿವಮೊಗ್ಗದಲ್ಲಿ 'ಅಭಿವ್ಯಕ್ತಿ' ಎಂಬ ಮುಖ್ಯ ಶೀರ್ಷಿಕೆಯಡಿಯಲ್ಲಿ ಕಲಾವಿದರ ಮತ್ತು ಲೇಖಕರದ್ದೆಂದು ಹೇಳಿ ಆಯೋಜಿಸಲಾಗಿದ್ದ 'ದಕ್ಷಿಣಾಯನ' ಸಮಾವೇಶ ಹಲವು ರೀತಿಗಳಲ್ಲಿ ನನಗೆ ನಿರಾಶೆಯನ್ನುಂಟು ಮಾಡಿತು. ಅದನ್ನು ಯಾರಿಗೆ ಹೇಳಬೇಕೆಂದು ತೋಚದೆ ಅದರ ಸಂಚಾಲಕರಾದ ಡಾ. ಗಣೇಶ್ ದೇವಿಯವರಿಗೇ ವಿವರವಾದ ಪತ್ರ(ಈ-ಮೇಲ್ ಮೂಲಕ) ಬರೆದೆ. ಕಾರಣ, ಈ 'ದಕ್ಷಿಣಾಯನ' ಯಾವುದೇ ನಿರ್ದಿಷ್ಟ ರಾಜಕೀಯ ಹಿತಾಸಕ್ತಿಗಳ ಕೈವಶವಾಗಿ ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳದೆ, ದೇಶದಲ್ಲಿ ಸಾರ್ವತ್ರಿಕ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟಂತೆ ಉಂಟಾಗಿರುವ ಆತಂಕದ ಪರಿಸ್ಥಿತಿಯ ವಿರುದ್ಧ ದನಿ ಎತ್ತುವ ಒಂದು ಸಂಘಟಿತ ಪ್ರಯತ್ನವಾಗಬೇಕೆಂಬ ಅದರ ಉದ್ದೇಶ ಚದುರಿಹೋಗಬಾರದೆಂಬ ನನ್ನ ಕಳಕಳಿ. ಹಾಗೇ ಈ ಕಾರಣದಿಂದ, ದೇಶದಲ್ಲಿ ಬಹು ತೀವ್ರಗತಿಯಲ್ಲಿ ಬೆಳೆಯತೊಡಗಿರುವ ಬಹುತಲೆಯ ಬಲಪಂಥೀಯ ರಾಜಕಾರಣದ ವಿರುದ್ಧದ ಹೋರಾಟ ವಿವೇಚನೆ ಕಳೆದುಕೊಂಡು ಹಾದಿ ತಪ್ಪಿ ಮತ್ತಷ್ಟು ಅನಾಹುತವನ್ನು ಉಂಟು ಮಾಡಬಾರದೆಂಬುದು.

ನನ್ನ ಈ ಪತ್ರ ಮತ್ತು ಅದಕ್ಕೆ ದೇವಿ ಅವರು ನೀಡಿದ ಉತ್ತರ ಹಾಗೂ ಈ ಸಮಾವೇಶದಲ್ಲಿ ಮಾತಾಡಿದ ಜಿ. ರಾಜಶೇಖರ್ ಮತ್ತು ದಿನೇಶ್ ಅಮಿನ್‌ಮಟ್ಟು ಅವರೊಡನೆಯ ಪತ್ರ ಸಂವಾದ ಸಾರ್ವಜನಿಕ ಮಹತ್ವವುಳ್ಳ ವಿಷಯಗಳನ್ನು ಒಳಗೊಂಡಿರುವುದರಿಂದ ಇವನ್ನು ಅವರ ಪೂರ್ವಾನುಮತಿ ಪಡೆದು ಆಸಕ್ತರ ಚರ್ಚೆಗೆಂದು ಮಂಡಿಸುತ್ತಿದ್ದೇನೆ. ಗಣೇಶ್ ದೇವಿಯವರಿಗೆ ಕನ್ನಡ ಬರುವುದಿಲ್ಲವಾದ್ದರಿಂದ ಪತ್ರವನ್ನು ಇಂಗ್ಲಿಷ್‌ನಲ್ಲಿ ಬರೆಯಲಾಗಿದೆ.

ಡಿ.ಎಸ್. ನಾಗಭೂಷಣ

ಗಣೇಶ್ ದೇವಿಯವರಿಗೆ ನನ್ನ ಪತ್ರ

9.4.2017

Dear Sri Ganesh Devyji,

I along with my wife Savitha who is also a writer attended 'Dakshinayana' a conclave of artists and writers held yesterday in Shivamogga, expecting it to be more of a cultural event than a political one. But to our despair it turned to be more of a political event organized by ex-communists of all hues (who have stopped thinking in despair and are now only engaged in negative politics) to regroup themselves (under the new banner of Ambedkarism, reinvented by them after their Marxist-Leninist politics and discourses lost all their credibility even in their pocket boroughs) and to trap some disgruntled elements from all possible 'progressive' groups of Karnataka. Of course we cannot blame communists for this, as this has been their wont through their history. But I did not expect it to happen under your stewardship. I hope I am not wrong.

I think your quasi cultural enterprise was hijacked by political elements in disguise. I don't know if my revered friend Sri Chenni was helpless or a voluntary victim of political manipulation of his former comrades who had taken over the organizing part of this meet. Of course, Sri Chenni was smart enough when he presented some obvious things as the 'hidden agenda' of the meet. (Why all this drama at all, if no hidden agenda was there?) But at least a part of his audience was smarter than him to sense that this may be a kind of camouflaging on his part!

But my important question is : Why such a hurry by this conclave to brand Modi's regime as Fascist? Whose agenda is this and why? (Is it psychological because, historically fascists had communists as one of their prime targets?) Are we clear as

to whom we are addressing when we call it as Fascist? It is high time that we stop using terms that are generally unknown or incomprehensible to common people, unless we are convening this kind of meets only to satisfy our pseudo intellectual and political egos. I thought, it is not wise to shout wolf at a dog (no intention of hurting BJP supporters pl.) for our political exigencies. What will you shout when a wolf itself appears? I thought only my friend from Mangalore Sri Rajaram Tolpadi brought some sense back in to deliberations, when he asserted that we are mistaking a deep and complex crisis in our democratic process as rise of fascism. He also indicated that this is due to a culture of intolerance and disengagement that has crept in to whole of our democratic process. It is a matter of common sense I thought that a wrong diagnosis will only complicate and aggravate the disease. (May be it is a symptom of no thinking and no learning on the part of our leftists!) It was sad to see your frequent interventions to make discussions happen in cultural terms and language went unheeded.

I prefer to call Modi's regime as it is now as a Hindu Nationalist party regime showing tendencies to become violent. I dont think, if this trend continues, the people of this country will tolerate it in long run. I also hope that there will be internal churning and revolts in BJP itself over it sooner or later as BJP of today is also a product of our modern democratic process. As such it cannot overrun this legacy without some disturbances inside it. We the 'progressives' and 'leftists' who are not in good books of the common people (at least in electoral terms) these days for various reasons are in condemnation of recent history to learn some lessons and wait for our time i.e till at least the internal contradictions of Sangh Parivar come to fore. I always felt that this early cry of Fascism (the same cry heard in seventies during emergency) is by those who have lost some pre-eminence and privileges because of new political dispensation.

This does not mean that we should be politically inactive now. What I am saying is that we should not overstate the situation. In the meanwhile we have to ask in detail and frankness as to how Modi emerged as a formidable leader as he has become today. We have made a lot of mistakes both in understanding the psychology of our people and in suitably designing our approach to them. We shall not continue to make at least the same mistakes. But I found we are not only doing the same but also exhorting others to follow, in Shivamogga conclave. It is high time that leftists and progressives shed their age old intellectual superiority complex and holier than thou attitude.

Those who came to the meet in search of a new cultural idiom for exploring the contours of new and alternative politics were thoroughly disappointed as the reasoning of a few sane voices were also drowned in the overall din of anti Modi and anti BJP rhetoric. Result: total defocusing of the subject of this conclave.

I am a Lohiate by conviction and as such believe in the Gandhian concept of indivisibility of end and means.

By the way, where was Gandhi in yesterday's deliberations in which Marx, Gramscis, Chomskys, Fukos, Gugis and Bilgramis were in galore!

With regards,

-D.S. Nagabhushana, Shivamogga

PS: 1. How can you brand a regime in a multiparty polity with an independent and fairly robust Election commission in place as Fascist? That too when we have witnessed as recently as one month back elections conducted in a constitutionally accepted democratic way and in which a non-ruling party (Congess) was elected to rule a state (i.e Punjab) with a huge majority and made the then ruling combine (of BJP and Akalis) to eat dust in such a way that this combine did not even get qualified to become an official opposition party in the Assembly? I think we have to

have a balance and a sense of proportion in our political discourse (even while condemning a political foe) at least to have some credibility from the non-partisan public. Let us be practical also.

2. It seems, a common factor between RSS and Shivamogga version of 'Dakshinayana' is that Gandhi is an anathema to both of them. It was made clear in curtain rising write ups by its protagonists before the Shimoga meet and made clearer in the deliberations of the meet. This will prove to be a great indicator of the character of this movement unless you-the only one who made a reference or two to Gandhi in the meet-as the guide and philosopher of this movement intervene effectively and in time.

ಡಾ. ಗಣೇಶ್ ದೇವಿ ಅವರ ಉತ್ತರ

Dear Dr. Nagabhushan ji,

I am truly grateful to you for your mail.

One, for deciding to write it and express your response, two, for alerting me to the dimensions that I had not been so clearly aware of.

Let me add that my teacher Shantinath Desai, who was in his early years a follower of Lohia, through the Chittal connection, made me aware of the relevance of Lohia's thought during the 1970s.

My own perspective on Dakshinayana is that it is, and should remain, a non-party process. I myself have no party affiliation, my primary commitment being work towards bhashas, Indian languages.

In a public space, at times, it becomes difficult to keep tabs on everything happening there.

However, I shall remain mindful of your concerns in future.

With regards,

G N Devy

'ಫ್ಯಾಸಿಸಂ' : ಜಿ. ರಾಜಶೇಖರರೊಡನೆ ಪತ್ರೋತ್ತರ

೯.೪.೨೦೧೭

ಜಿ. ರಾಜಶೇಖರ್ ಅವರಿಗೆ ಪತ್ರ:

ಶ್ರೀಯುತ ರಾಜಶೇಖರ್ ಅವರಲ್ಲಿ,

ನಿನ್ನೆ 'ದಕ್ಷಿಣಾಯನ' ಸಮಾವೇಶದಲ್ಲಿ ನಿಮ್ಮನ್ನು ನಾನು ನೋಡಿದ್ದೇ ನಿಮ್ಮ ಗೋಷ್ಠಿಯಲ್ಲಿ ಮತ್ತು ಆ ಗೋಷ್ಠಿಯ ನಂತರ ನಾನಲ್ಲಿ ಇರಲು ಸಾಧ್ಯವಾಗದ ಕಾರಣ ನಿಮ್ಮನ್ನು ಭೇಟಿ ಮಾಡಿ ಮಾತಾಡಲು ಆಗಲಿಲ್ಲ.

ಲೇಖಕರ ಮತ್ತು ಕಲಾವಿದರ ಸಮಾವೇಶ ಎಂದು ಕರೆಯಲಾಗಿದ್ದ ಈ ಸಮಾವೇಶ ಸಂಪೂರ್ಣ ರಾಜಕೀಯ ಚರ್ಚೆಗಳನ್ನು ನಡೆಸಿದ್ದು, ಅದೂ ಇಂದಿನ ಭಾರತದ ರಾಜಕಾರಣದ ಬಗ್ಗೆ ನಿರ್ಣಾಯಕ ನಿಲುವುಗಳನ್ನು ತೆಗೆದುಕೊಂಡ ಒಂದು ಸರಳೀಕೃತ ನೆಲೆಯಲ್ಲಿ ಅವು ನಡೆದದ್ದು ನನಗೆ ನಿರಾಶೆಯನ್ನೇ ಉಂಟು ಮಾಡಿತೆಂದು ಹೇಳಬೇಕು. ಅಷ್ಟೇ ಅಲ್ಲ, ಈ ಸಮಾವೇಶಕ್ಕೆ ಬಂದು ತಪ್ಪು ಮಾಡಿದೆ ಎಂಬ ಭಾವನೆಯೂ ನನ್ನನ್ನು ಕಾಡಿತು. ಅದಕ್ಕೆ ನಿಮ್ಮ ಮಾತುಗಳ ವೈಖರಿಯ ಕೊಡುಗೆಯೇನೂ ಕಡಿಮೆಯಲ್ಲ ಎಂದು ತಿಳಿಸಲು ಈ ಪತ್ರ ಬರೆಯುತ್ತಿರುವೆ.

ನಾನು ಈ ಹಿಂದೆ ಯಾವುದೋ ಸಂದರ್ಭದಲ್ಲಿ ಕೇಳಿದಾಗ 'ಪ್ರಜಾವಾಣಿ' ಓದಲಾಗುತ್ತಿಲ್ಲ ಎಂದು ಹೇಳಿದ್ದ ತಾವು ನಿನ್ನೆ 'ಪ್ರಜಾವಾಣಿ'ಯಲ್ಲಿ ಮೊನ್ನೆ ಬಂದಿದ್ದ ಪೃಥ್ವಿದತ್ತ ಚಂದ್ರ ಶೋಭಿಯವರ ಅಂಕಣ ಬರಹ ಕುರಿತೇ ತಮ್ಮ ಆಲೋಚನೆಗಳನ್ನು ಕೇಂದ್ರೀಕರಿಸಿ ಮಾತಾಡಿದ್ದು ನನಗೆ ಆಶ್ಚರ್ಯವನ್ನು ತಂದಿತಲ್ಲದೇ, ಇದೇನಾದರೂ 'ಸುಪಾರಿ' ಹತ್ಯೆಯೇ ಎಂಬ ಅನುಮಾನವನ್ನೂ ಉಂಟು ಮಾಡಿತು!

ಅದಿರಲಿ, ಅದೇನೂ ಮುಖ್ಯ ವಿಷಯವಲ್ಲ. ಮುಖ್ಯವಾದದ್ದು ನೀವು ಆಡಿದ ಮಾತುಗಳು. ಮೋದಿ ಪ್ರಭುತ್ವವನ್ನು ಫ್ಯಾಸಿಸ್ಟ್ ಪ್ರಭುತ್ವ ಎಂದು ಕರೆಯುವುದನ್ನು ನಾನು ಒಪ್ಪುವುದಿಲ್ಲ. ಅದಕ್ಕೆ ವ್ಯಾವಹಾರಿಕ ಕಾರಣಗಳೂ ಉಂಟು; ತಾತ್ವಿಕ ಕಾರಣಗಳೂ ಉಂಟು. ನೀವು ಮೊದಲನೆಯದಾಗಿ ಮೋದಿ ಪ್ರಭುತ್ವದ ಬಗ್ಗೆ ಜನ ಸಮುದಾಯಕ್ಕೆ ತಿಳುವಳಿಕೆ ನೀಡಬಯಸಿದ್ದರೆ, ಅದನ್ನು ಅವರಿಗೆ ಚಿರಪರಿಚಿತವಾದ ನುಡಿಗಟ್ಟಿನಲ್ಲಿ, ಭಾಷೆಯಲ್ಲಿ ನೀಡಬೇಕು. ನನ್ನ ಪ್ರಕಾರ ನಮ್ಮ ಬಹಳ ಜನಕ್ಕೆ ಫ್ಯಾಸಿಸಂ ಎಂದರೇನೆಂದೇ ಗೊತ್ತಿಲ್ಲ. ಹಾಗಾಗಿ ಅವರಿಗೆ ಅದೊಂದು ಸ್ಥೂಲ ಬೈಗುಳವಾಗಿ ಕಂಡು ನಿರ್ಲಕ್ಷಿಸುವರಷ್ಟೇ ಅಲ್ಲ, ಇಂದಿನ ಮೋದಿ ಪರವಿರುವ ಸಾರ್ವತ್ರಿಕ ರಾಜಕೀಯ ವಾತಾವರಣದಲ್ಲಿ ನಮ್ಮ ಬಗ್ಗೆಯೇ ಅನುಮಾನ ಪಡುವರು. ಇನ್ನು ಫ್ಯಾಸಿಸಂ ಬಗ್ಗೆ ಕಲ್ಪನೆ ಇರುವ, ಮೋದಿಗೆ ಮತ ನೀಡಿದ; ಆದರೆ ಸಂಘ ಪರಿವಾರದ ಬೆಂಬಲಿಗರಲ್ಲದವರು ಎರಡೂ ಸಂದರ್ಭಗಳನ್ನು ತಾಳೆ ನೋಡಿ ನಮ್ಮ ಮಾತುಗಳನ್ನು ರಾಜಕೀಯ ಉತ್ಪ್ರೇಕ್ಷೆ ಎಂದು ತಿರಸ್ಕರಿಸಿ ನಮ್ಮ ಬಗ್ಗೆಯೇ ಅನುಮಾನ ತಾಳುವರು.

ಐತಿಹಾಸಿಕವಾಗಿ ಫ್ಯಾಸಿಸಂಗೆ ಹಲವು ಆಯಾಮಗಳಿವೆ ಎಂಬುದನ್ನು ತಾವೂ ಬಲ್ಲಿರಿ. ಅದನ್ನು ನಮ್ಮ ಸದ್ಯದ ರಾಜಕೀಯ ಪ್ರಯೋಜನಕ್ಕಾಗಿ ಸರಳಗೊಳಿಸುವುದು ಮುಂದಿನ ದಿನಗಳ ನಮ್ಮ ರಾಜಕೀಯ ಚರ್ಚೆಗಳ ವಿಶ್ವಾಸಾರ್ಹತೆಯನ್ನು ನಾವೇ ಇಂದು ಹಾಳು ಮಾಡಿಕೊಂಡಂತೆ. ನಾಯಿಯನ್ನು ನೋಡಿ ತೋಳ ಎಂದು ಕೂಗಿಕೊಂಡರೆ, ನಿಜವಾಗಿ ತೋಳ ಬಂದಾಗ ಏನೆಂದು ಕೂಗುವಿರಿ? ನನ್ನ ಪ್ರಕಾರ ಇಂದಿನ ಮೋದಿ ಪ್ರಭುತ್ವವನ್ನು ಹೆಚ್ಚೆಂದರೆ, ಹಿಂಸಾತ್ಮಕವಾಗುವ ಪ್ರವೃತ್ತಿ ತೋರುತ್ತಿರುವ ಹಿಂದೂ ರಾಷ್ಟ್ರೀಯವಾದಿ ಪ್ರಭುತ್ವ ಎಂದು ಕರೆಯಬಹುದು. ಅದನ್ನು ಹಾಗೆ ಗುರುತಿಸಿದಾಗ ಮಾತ್ರ ಅದರ ದುಷ್ಟ ಪ್ರವೃತ್ತಿಗಳ ವಿರುದ್ಧ ನಿರ್ದಿಷ್ಟ ಆಲೋಚನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸಬಹುದಷ್ಟೆ. ಆಗ ಜನರೂ ವಿವೇಚನೆ ಮಾಡಿ ನಮ್ಮೊಂದಿಗೆ ಬರಬಹುದು. ಜೊತೆಗೆ ಈ ಪ್ರಭುತ್ವ ಸಾಂವಿಧಾನಿಕ ಆಳ್ವಿಕೆಯ ಮತ್ತು ಪ್ರಜಾತಂತ್ರದ ಭಾಷೆಯಲ್ಲಿ ಮಾತನಾಡುತ್ತಿದೆ ಮತ್ತು ನಮ್ಮ ನ್ಯಾಯಾಂಗ ಮತ್ತು ಚುನಾವಣಾ ಆಯೋಗದ ವ್ಯವಸ್ಥೆ ಇನ್ನೂ ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳದೇ ಇರುವುದರಿಂದ ಪ್ರಭುತ್ವ ಈ ಗಡಿಗೆರೆಗಳನ್ನು ಸ್ಪಷ್ಟವಾಗಿ ಉಲ್ಲಂಘಿಸುವ ಮುನ್ನ ಅದನ್ನು ಫ್ಯಾಸಿಸ್ಟ್ ಎಂದು ಕರೆಯುವುದು ನಮಗೇ ಮುಳುವಾಗುವುದರಲ್ಲಿ ಸಂಶಯವಿಲ್ಲ. ಬಹುಶಃ ಇದನ್ನೇ ಶೋಭಿಯವರೂ ಮೋದಿಯವರ ಪ್ರಜಾತಾಂತ್ರಿಕ ವಾರಸುದಾರಿಕೆಯನ್ನು ಮಾನ್ಯ ಮಾಡುವ ಬಗ್ಗೆ ಹೇಳಿರುವುದು. ಆದರೆ ಅದನ್ನು ನೀವು ಅಪಾರ್ಥಗೊಳಿಸಿ ಟೀಕಿಸಿದ್ದು ನೀವು ಮೊದಲೇ ನಿರ್ಧಾರ ಮಾಡಿಕೊಂಡಿದ್ದ ನಿರ್ಣಯಕ್ಕೆ ಸಮರ್ಥನೆ ಕಂಡುಕೊಳ್ಳಲಷ್ಟೇ ಆಗಿತ್ತು ಎಂದು ನನಗನ್ನಿಸಿತು.

ಇನ್ನು ವಿಶ್ವವಿದ್ಯಾನಿಲಯಗಳಲ್ಲಿನ ಅಕ್ರಮಗಳ ವಿರುದ್ಧ ದನಿ ಎತ್ತಲಾಗದವರು ಪ್ರಭುತ್ವದ ವಿರುದ್ಧ ದನಿ ಎತ್ತತೊಡಗುವ ವಿಪರ್ಯಾಸದ ಬಗ್ಗೆ ಶೋಭಿ ಬರೆದಿರುವುದನ್ನು ಕುರಿತು ನೀವು ಮಾತನಾಡುತ್ತಾ, ಪ್ರಭುತ್ವ ವಿರೋಧಿ ಹೋರಾಟಕ್ಕೆ ಯಾವ ಹೋರಾಟದ ಪೂರ್ವದಾಖಲೆಯೂ ಬೇಕಿಲ್ಲ ಎಂದು ಹೇಳಿದ್ದು ನನಗೆ ಜಾಣ ಮಾತಾಗಿ ಮಾತ್ರ ಕೇಳಿಸಿತು. ಪ್ರಭುತ್ವ ಎಂದರೇನು, ಅದು ದೆಹಲಿಯಲ್ಲಿ ಮಾತ್ರ ಇರುವಂತಹುದೇ? ವಿಶ್ವವಿದ್ಯಾಲಯಗಳೂ ಪ್ರಭುತ್ವದ ಅಂಗ ಸಂಸ್ಥೆಗಳೇ ಅಲ್ಲವೆ? ಹೋಗಲಿ, ಪ್ರಭುತ್ವದ ವಿರುದ್ಧ ಹೋರಾಡುವವರಿಗೆ ದಾಖಲೆಯ ಅರ್ಹತೆ ಬೇಡ; ವಿಶ್ವಾಸಾರ್ಹತೆಯಾದರೂ ಬೇಕಲ್ಲವೆ? ನಿಮ್ಮ ಪ್ರಕಾರ ಏನೂ ಬೇಡವೆ?

ಹಾಗೆ ನೋಡಿದರೆ, ನನ್ನ ನಿರೀಕ್ಷೆಗೆ ವಿರುದ್ಧವಾಗಿ ರಾಜಾರಾಂ ತೋಳ್ಪಾಡಿ ಹೆಚ್ಚು ಜವಾಬ್ದಾರಿಯುತವಾಗಿ ಮಾತನಾಡಿದರು. ಅವರು ಇಂದಿನ ಆತಂಕದ ಪರಿಸ್ಥಿತಿಯನ್ನು ನಾವು ಅನುಸರಿಸುತ್ತಿರುವ ಪ್ರಜಾತಂತ್ರದ ಮಾದರಿಯಲ್ಲಿನ ಬಿಕ್ಕಟ್ಟು ಎಂದು ಗುರುತಿಸಿದ್ದು ವಾಸ್ತವಕ್ಕೆ ಹೆಚ್ಚು ಹತ್ತಿರ ಎನಿಸಿತು. ಜೊತೆಗೆ ನಮ್ಮ ರಾಜಕೀಯ ರಚನೆಗಳ ನಡುವೆ ಪರಸ್ಪರ ಸಂವಾದವೇ ಕಡಿದುಹೋಗಿರುವ ದುರಂತ ಸ್ಥಿತಿಯ ಬಗ್ಗೆ ಅವರು ಗಮನ ಸೆಳೆದದ್ದು ತುಂಬಾ ಉಚಿತ ಎನಿಸಿತು.

ಅಲ್ಲಾ ನೀವೇ ಹೇಳಿ, ಈ ಮೋದಿ ಪ್ರಭುತ್ವ ಎಂತಹ ರಾಜಕಾರಣದ ತಾರ್ಕಿಕ ಉತ್ಪನ್ನ? ಇದಕ್ಕೆ ಯಾರೆಲ್ಲ ಹೊಣೆ? ಇಂತಹ ಒಂದು ಹಿನ್ನೋಟದ ಪರಿಪ್ರೇಕ್ಷ್ಯವಿಲ್ಲದೆ ಮಾಡುವ ರಾಜಕೀಯ ವಿಶ್ಲೇಷಣೆಗಳು ನಮ್ಮ ತಾತ್ವಿಕ ಮತ್ತು ಓದಿನ ಬೌದ್ಧಿಕ ಅಹಂಕಾರಗಳನ್ನು ತಣಿಸಬಹುದೇ ಹೊರತು ಜನರ ಮಾನ್ಯತೆ ಗಳಿಸುವುದಿಲ್ಲ ಎಂದು ನನಗಂತೂ ಅನ್ನಿಸಿದೆ. ಅರುಣ್ ಶೌರಿ ಬಿಜೆಪಿಯನ್ನು 'ಕಾಂಗ್ರೆಸ್ ಪ್ಲಸ್ ಗೋವು' ಎಂದು ಕರೆದದ್ದು ಸರಿಯಾಗಿಯೇ ಇದೆ. ಈ ವರ್ಣನೆಯನ್ನು ನಾವೀಗ ಜವಾಬ್ದಾರಿಯಿಂದ ವಿಸ್ತರಿಸಬೇಕಷ್ಟೆ.

ನೀವು ನನಗಿಂತ ಹಿರಿಯರು ಮತ್ತು ನಿಮ್ಮನ್ನು ಓದಿ, ಚರ್ಚಿಸುತ್ತಾ ಚಿಂತನಾಶೀಲತೆಯನ್ನು ಬೆಳೆಸಿಕೊಂಡವನು ನಾನು. ಆದರೆ ಬರಲಿರುವ ರಾಜಕೀಯ ಅಪಾಯವನ್ನು ನೀವು ಇಷ್ಟು ಒರಟಾಗಿ ಮುನ್ನೋಡುವ ರೀತಿಗಳನ್ನು ಕಂಡು ಆತಂಕಿತನಾಗಿ ಈ ಪತ್ರ ಬರೆದಿರುವೆ.

ವಂದನೆಗಳೊಂದಿಗೆ,

ಡಿ.ಎಸ್. ನಾಗಭೂಷಣ

ಜಿ. ರಾಜಶೇಖರ ಅವರ ಉತ್ತರ

೧೧.೪. ೨೦೧೭

ಪ್ರಿಯರೆ,

ನನ್ನ ಭಾಷಣದ ಬಗ್ಗೆ ಹೇಳುವುದಾದರೆ ಆ ಕಾರ್ಯಕ್ರಮವೇ ನನಗೆ ಅನಿರೀಕ್ಷಿತವಾಗಿತ್ತು. ಸಭಾಂಗಣಕ್ಕೆ ನಾನು ಬಂದ ಹಲವು ಗಂಟೆಗಳ ನಂತರ ನಾನು ಮಾತಾಡಬೇಕೆಂದು ನನಗೆ ತಿಳಿಸಲಾಯಿತು. ಅದರ ಬಗ್ಗೆ ನನ್ನ ಆಕ್ಷೇಪವೇನೂ ಇಲ್ಲ. ನನ್ನ ಯಾವ ಮಾತೂ ಪೂರ್ವ ನಿರ್ಧರಿತವಾಗಿರಲಿಲ್ಲ. ಆದರೆ ನಾನು ತಯಾರಿಮಾಡಿಕೊಂಡೇ ಬಂದು ಮಾತಾಡಿದ್ದರೂ ಹೆಚ್ಚುಕಡಿಮೆ ಅದೇ ಮಾತುಗಳನ್ನು ಹೇಳುತ್ತಿದ್ದೆ.

ಭಾರತದ ಪ್ರಸಕ್ತ ಸನ್ನಿವೇಶ ಪೂರ್ತ ಫ್ಯಾಸಿಸ್ಟ್ ಅಲ್ಲದಿರಬಹುದು ಆದರೆ ಫ್ಯಾಸಿಸಂನ ಜೊತೆಗೆ ಹಲವು ಸಂಗತಿಗಳಲ್ಲಿ ಅದಕ್ಕೆ ಹೋಲಿಕೆ ಇದೆ ಎಂಬುದು ಮಾತ್ರ ನನ್ನ ವಾದವಾಗಿತ್ತು.

ಯಾವುದೇ ರಾಜಕೀಯ ಅಕ್ರಮವನ್ನು ಪ್ರತಿಭಟಿಸಲು ಅಂತಹ ಇತರ ಅಧಿಕಾರ ಕೇಂದ್ರಿತ ಅಕ್ರಮಗಳನ್ನು ವಿರೋಧಿಸಿದ ಹಿನ್ನೆಲೆ ಇರಬೇಕು ಎಂಬ ಒತ್ತಾಯ ನನಗೆ ಒಪ್ಪಿಗೆಯಿಲ್ಲ. More over ಶೋಭಿಯವರ ಲೇಖನದ ಈ ವಾದ ನಮಗೆ ಆಗದವರನ್ನು ಸುಮ್ಮನಾಗಿಸುವ ಮಾತಿನ ವರಸೆ ಎಂದೇ ನನಗೆ ತೋರುತ್ತದೆ.

ತೋಳ್ಪಾಡಿಯವರ ಅಸಹನೆ ಕುರಿತ ಮಾತು ಈಗಲೂ ನನಗೆ ಸಮ್ಮತವಲ್ಲ. ಎಲ್ಲರೂ ಒಂದೇ; ಎಲ್ಲರೂ ದುಷ್ಟರೇ ಎಂಬ ಮಾತು ದೇಶಾವರಿಯ ಹಾಗೆ ಕೇಳಿಸುತ್ತದೆ ಮಾತ್ರವಲ್ಲ ಅದು ಕೇಡುಕನ್ನು ಎದುರಿಸುವುದನ್ನು ಕ್ಷುಲ್ಲಕವಾಗಿ ಕಾಣುತ್ತದೆ.

–ಜಿ. ರಾಜಶೇಖರ

(**ಡಿಎಸ್ಸೆನ್ ಟಿಪ್ಪಣಿ:** ರಾಜಶೇಖರ್, ತಾವು ಸಭೆಗೆ ಬಂದ ಕೆಲವು ಗಂಟೆಗಳ ನಂತರ ಮಾತನಾಡಲು ತಮಗೆ ತಿಳಿಸಲಾಯಿತು ಎಂದಿದ್ದಾರೆ. ಹಾಗಾಗಿ ಅಂದು ತಮ್ಮ ಭಾಷಣಕ್ಕೆ ಆಧಾರ ಮಾಡಿಕೊಂಡ ಹಿಂದಿನ ದಿನದ ಮತ್ತು ಸಾಮಾನ್ಯವಾಗಿ ತಾವು ಓದುವುದಿಲ್ಲವೆಂದು ಹೇಳುವ 'ಪ್ರಜಾವಾಣಿ'ಯನ್ನು ಅವರೇನೂ ತಮ್ಮ ಊರಿಂದ ತಂದಿರಲಾರರು. ಸಂಘಟಕರು ಅದನ್ನು ಅವರಿಗೆ ಕೊಟ್ಟು ಶೋಭಿಯವರ ಅಂಕಣದ ಬಗ್ಗೆ ಮಾತಾಡಲು ಹೇಳಿದ್ದಾರೆಂದೇ ನಾವು ಭಾವಿಸಬೇಕಾಗುತ್ತದೆ. ಇದರರ್ಥ ಹೀಗೇ ಮಾತಾಡಿರೆಂದು ಸಂಘಟಕರು ಹೇಳಿದ್ದಾರೆ ಮತ್ತು ಅದರ ಪ್ರಕಾರ ರಾಜಶೇಖರ್ ಮಾತಾಡಿದ್ದಾರೆಂದು ನಾನು ಹೇಳುತ್ತಿಲ್ಲ. ಹಾಗೆ ಹೇಳುವುದು ರಾಜಶೇಖರ್ ಅವರ ಬುದ್ಧಿಮತ್ತೆಗೆ ಅವಮಾನ ಮಾಡಿದಂತೆ. ಆದರೆ ನಾನು ಹೇಳುತ್ತಿರುವುದು, ಸಮಾವೇಶದ ಬಗ್ಗೆ ನಮ್ಮ ನಡುವಿನ ಒಬ್ಬ ಗೌರವಾರ್ಹ ಚಿಂತಕನ ಆಲೋಚನೆಗಳನ್ನು ಸಮಾವೇಶದ ಸಂಘಟಕರು ಸಹಾನುಭೂತಿಯಿಂದ ಅರಿಯಲು, ಸಹಿಸಲು ಸಿದ್ಧರಿಲ್ಲದಿರುವ ಮತ್ತು ಅಂತಹ ಆಲೋಚನೆಗಳ ವಿರುದ್ಧ ಇರಬಹುದೆಂದು ಭಾವಿಸಲಾದ ಚಿಂತಕನನ್ನು ಹುಡುಕಿ ಅದರ ಖಂಡನೆಯ ವ್ಯವಸ್ಥೆ ಮಾಡಿದ ಮನಃಸ್ಥಿತಿಯ ಬಗ್ಗೆಯಷ್ಟೆ. ಇದರ ಜೊತೆಗೆ ನನಗೆ ಈ ಸಂಬಂಧ ಆಶ್ಚರ್ಯ ತಂದ ಸಂಗತಿ ಎಂದರೆ, ಶೋಭಿಯವರ ಮಾತುಗಳನ್ನು ಆಗದವರನ್ನು ಸುಮ್ಮನಾಗಿಸುವ ಮಾತುಗಳಾಗಿ ಕಾಣಲು ರಾಜಶೇಖರ್‌ಗೆ ಏನು ಆಧಾರವಿತ್ತು ಎಂಬುದು!

ಮಿಕ್ಕಂತೆ ರಾಜಶೇಖರ ಅವರ ಅಭಿಪ್ರಾಯಗಳನ್ನು ನಾನು ನನ್ನ ಪತ್ರದಲ್ಲಿ ಎತ್ತಿರುವ ಪ್ರಶ್ನೆಗಳ ಎದುರಿಗಿಟ್ಟು ತೂಗಿ ನೋಡಿ ಓದುಗರು ತಮ್ಮ ನಿರ್ಧಾರಗಳಿಗೆ ಬರಬಹುದು.)

ಅಭಿವ್ಯಕ್ತಿ ಸ್ವಾತಂತ್ರ್ಯದ ಆತ್ಮಹತ್ಯೆ: ಅಮಿನ್‌ಮಟ್ಟು ಅವರೊಂದಿಗೆ ಸಂವಾದ

(ಶಿವಮೊಗ್ಗದ *ದಕ್ಷಿಣಾಯನ* ಸಮಾವೇಶ ಕುರಿತು ಸಮಾವೇಶದಲ್ಲಿ 'ಅಭಿವ್ಯಕ್ತಿ ಸ್ವಾತಂತ್ರ್ಯ' ಕುರಿತ ಗೋಷ್ಠಿಯಲ್ಲಿ ನಮ್ಮ (ಈಗ ಮಾಜಿ) ಮುಖ್ಯಮಂತ್ರಿಗಳ ಮಾಧ್ಯಮ ಸಲಹಾಕಾರರೂ, ಮಾಜಿ ಪತ್ರಕರ್ತರೂ ಆದ ಗೆಳೆಯ ದಿನೇಶ್ ಅಮಿನ್‌ಮಟ್ಟು ಅವರು ಆಡಿದ ಕೆಲವು ಮಾತುಗಳ ಬಗ್ಗೆ ನಾನು ಕೆಲವು ಪ್ರಶ್ನೆಗಳನ್ನೆತ್ತಿ ಅವರಿಗೆ ಮೇಲ್ ಮಾಡಿದ ಪತ್ರ ಸಮಕಾಲೀನ ರಾಜಕಾರಣ ಕುರಿತ ದೀರ್ಘ ಪತ್ರ ದೀರ್ಘಸಂವಾದಕ್ಕೆ ಕಾರಣವಾಗಿದೆ.)

ದಿನೇಶ್ ಅಮಿನ್‌ಮಟ್ಟು ಅವರಿಗೆ ಪತ್ರ

೯.೪.೨೦೧೭

ಪ್ರಿಯ ದಿನೇಶ್ ಅವರಲ್ಲಿ,

ವಂದನೆಗಳು. ನಿನ್ನೆಯ ದಕ್ಷಿಣಾಯನ ಸಮಾವೇಶಕ್ಕೆ, ಅದೊಂದು ಕಲಾವಿದರ ಮತ್ತು ಲೇಖಕರ ಸಮಾವೇಶವೆಂದು ಭಾವಿಸಿ ಅಲ್ಲಿ ಮುಖ್ಯವಾಗಿ ಸಾಂಸ್ಕೃತಿಕ ಚರ್ಚೆಗಳು ನಡೆಯುವವೆಂದು ನಾನು ಮತ್ತು ಸವಿತಾ ಬಂದೆವು. ಆದರೆ ಚೇತನ್ ಎಂಬ ಎಳಸು ನಟನಿಂದ ಆರಂಭವಾಗಿ ಅಲ್ಲಿನ ಹೆಚ್ಚೂಕಡಿಮೆ ಎಲ್ಲ ನಡಾವಳಿಗಳೂ ಅಪ್ಪಟ ರಾಜಕೀಯ ಉದ್ದೇಶಗಳಿಂದ ಕೂಡಿದ್ದುದನ್ನು ಕಂಡು ಬೇಸರವಾಯಿತು. ಗಣೇಶ್ ದೇವಿ ಮತ್ತು ನಿಮ್ಮ ಮಾತುಗಳು ಮಾತ್ರ ಸಾಂಸ್ಕೃತಿಕ ವಲಯದಲ್ಲಿರಲು ಯತ್ನಿಸಿದವು.

ನೀವು ಅಭಿವ್ಯಕ್ತಿ ಸ್ವಾತಂತ್ರ್ಯದ ಆತ್ಮಹತ್ಯೆ ಬಗ್ಗೆ ಮಾತನಾಡಿದ್ದು ಕುತೂಹಲಕರವಾಗಿತ್ತು. ಆದರೆ ನೀವೇ ಪತ್ರಿಕಾ ವ್ಯವಸಾಯ ಬಿಟ್ಟು ಸರ್ಕಾರಿ ಕಛೇರಿ ಸೇರಿದ್ದನ್ನು ಏನೆಂದು ಅರ್ಥಮಾಡಿಕೊಳ್ಳಬೇಕೋ ತಿಳಿಯದಾಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯ ಅಗತ್ಯವಾಗಿರುವುದು ಕೇವಲ ಮೋದಿ ಅಥವಾ ಸಂಘ ಪರಿವಾರದ ದುರಾಚಾರಗಳ ವಿರುದ್ಧದ ಅಭಿವ್ಯಕ್ತಿಗಳಿಗೆ ಮಾತ್ರ ಅಲ್ಲವಲ್ಲ? ಆದರೆ ನಿಮಗೆ ಬೇರೆ ವೈಯಕ್ತಿಕ ಕಾರಣಗಳೂ ಇದ್ದಿರಬಹುದೇನೋ ಗೊತ್ತಿಲ್ಲ. ನಿನ್ನೆಯ ಗೋಷ್ಠಿಯೊಂದರಲ್ಲಿ ಜಿ. ರಾಜಶೇಖರ ಅವರೇ ಅಪ್ಪಣೆ (ಅವರ ಮಾತಿನ ಶೈಲಿ ಹಾಗೇ ಇತ್ತಲ್ಲ?) ಕೊಡಿಸಲಿಲ್ಲವೆ: ಮೋದಿ ವಿರುದ್ಧ ಮಾತನಾಡಲು ಯಾವುದೇ ವಿಶ್ವಾಸಾರ್ಹತೆ ಅಥವಾ ಅರ್ಹತೆ ಬೇಕಿಲ್ಲ ಎಂದು? ಇನ್ನು ಮುಂದೆ ಮಾತೇಕೆ? (ನೀವು ಪತ್ರಿಕೆಯನ್ನು ಬಿಡಬಾರದಿತ್ತೆಂದೇ ನನ್ನ ವೈಯಕ್ತಿಕ ಅಭಿಪ್ರಾಯ)

ಆದರೆ ನಾನು ಈ ಸಂದರ್ಭದಲ್ಲಿ ನಿಮ್ಮೊಂದಿಗೆ ಗಂಭೀರವಾಗಿ ಚರ್ಚಿಸಲು ಉದ್ದೇಶಿಸಿರುವುದು, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ನಿಜವಾದ ಅಡ್ಡಿಗಳಾಗಿರುವುದು ಧರ್ಮ ಮತ್ತು ಉದ್ಯಮಗಳೆಂಬ ನಿಮ್ಮ ಮಾತು. ಆದರೆ ಮೇಲ್ನೋಟಕ್ಕೆ ಸರಿಯಾಗಿಯೇ ಕಾಣುವ ಈ ವಿವೇಚನೆಯನ್ನು ನೀವು ಮುಂದಕ್ಕೆ ಒಯ್ಯಲಿಲ್ಲ. ನನ್ನ ಪ್ರಕಾರ ಧರ್ಮವನ್ನು ಇಲ್ಲಿ ತರುವ ಅಗತ್ಯವಿಲ್ಲ. ಏಕೆಂದರೆ, ಧರ್ಮ ಅದರ ನಿಜಾರ್ಥದಲ್ಲಿ ಯಾವುದೇ ಮಾನವೀಯ ಸ್ವಾತಂತ್ರ್ಯಗಳಿಗೆ ಅಡ್ಡಿಯಾಗುವುದಿಲ್ಲ. ಅದು ಉದ್ಯಮ ಅಥವಾ ಹಣವಂತರ ಪ್ರಭಾವಕ್ಕೆ ಒಳಗಾದಾದಾಗ ಮಾತ್ರ ದುಷ್ಟವಾಗುವುದು. ಆದುದರಿಂದ ಇಲ್ಲಿ ನಾವು ವಿವೇಚಿಸಬೇಕಾದುದು ಸಾರತಃ ಉದ್ಯಮದ ಪಾತ್ರವನ್ನು ಮಾತ್ರ. ಆದರೆ ಉದ್ಯಮ ನಡೆಯುತ್ತಿರುವುದಾದರೂ ಯಾರಿಂದ? ನಾವು ಅದರ ಎಗ್ಗಿಲ್ಲದ ಗ್ರಾಹಕರಾದುದರಿಂದಲೇ ಅಲ್ಲವೆ ಅದು ಇರುವುದು? ಅಥವಾ ಹಾಗೆ ಬೆಳೆದಿರುವುದು? ಆದ್ದರಿಂದ ಇಂದಿನ ನಿಜವಾದ ಸತ್ಯವೆಂದರೆ, ನಾವು ನಮ್ಮ ಬದುಕಿನ ಮಾದರಿಗೆ

(ಅಥವಾ ನಮ್ಮ 'ಯೋಗ್ಯತೆ'ಗೆ ತಕ್ಕ) ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪಡೆದಿದ್ದೇವೆ ಎಂಬುದು. ನಾವು ಗ್ರಾಹಕವಾದಿ ಸಮಾಜದ ಪ್ರಜೆಗಳೂ ಆಗಬೇಕು ಮತ್ತು ಅನಿರ್ಬಂಧಿತ ಅಭಿವ್ಯಕ್ತಿ ಸ್ವಾತಂತ್ರ್ಯವನ್ನೂ ಅನುಭವಿಸಬೇಕು ಎಂಬುದು ಆತ್ಮದ್ರೋಹದ ಮಾತಾಗುತ್ತದೆ.

ಆದುದರಿಂದ ಅನಿರ್ಬಂಧಿತ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪ್ರತಿಪಾದಿಸುವವರು ಒಂದು ಸಭ್ಯ ಸರಳ ಜೀವನದ ಮಾದರಿಯನ್ನೂ (ವ್ಯಾಪಾರವನ್ನು ಒಂದು ಆಕ್ರಮಣಕಾರಿ ಉದ್ಯಮವನ್ನಾಗಿ ಮಾಡದಂತಹ ಆರ್ಥಿಕತೆಯನ್ನು) ಪ್ರತಿಪಾದಿಸಬೇಕಾಗುತ್ತದೆ. ಇಲ್ಲದಿದ್ದರೆ, ಅಕ್ಕಿಯ ಮೇಲೆ ಪ್ರೀತಿ, ನೆಂಟರ ಮೇಲಿನ ಆಸೆಯನ್ನು ಇಟ್ಟುಕೊಂಡ ಭಂಡ ಗೃಹಸ್ಥನಂತಾಗುತ್ತೇವೆ ನಾವು!

ನಿಮ್ಮ ಅಭಿಪ್ರಾಯ ತಿಳಿಯಲು ಕುತೂಹಲಿಯಾಗಿದ್ದೇನೆ.

ವಂದನೆಗಳೊಂದಿಗೆ,

ಡಿಎಸ್‌ಎನ್

ದಿನೇಶ್ ಅಮಿನ್‌ಮಟ್ಟು ಅವರ ಉತ್ತರ

೨೧.೪.೨೦೧೭

ಹಿರಿಯರಾದ ನಾಗಭೂಷಣ್ ಅವರಿಗೆ ವಂದನೆಗಳು.

ಉತ್ತರ ನೀಡುವಾಗ ಆಗಿರುವ ವಿಳಂಬಕ್ಕೆ ಕ್ಷಮೆ ಇರಲಿ. ಇದಕ್ಕೆ ಸಮಯದ ಅಭಾವ ಒಂದು ಕಾರಣವಾದರೂ ಅದೇ ಕಾರಣ ಅಲ್ಲ ಎನ್ನುವುದನ್ನು ಒಪ್ಪಿಕೊಳ್ಳುವೆ. ನಿಮ್ಮಂತಹ ಹಿರಿಯರ ಜತೆ ವಾಗ್ವಾದ ಬೇಡ ಎಂಬ ಒಳಮನಸ್ಸಿನ ಒತ್ತಡ ಕೂಡ ವಿಳಂಬಕ್ಕೆ ಕಾರಣ ಇರಬಹುದು. ನೀವು ಮತ್ತೊಮ್ಮೆ ಎಚ್ಚರಿಸಿದ ಕಾರಣಕ್ಕೆ ಇದನ್ನು ಬರೆಯುತ್ತಿರುವೆ.

'ಅಭಿವ್ಯಕ್ತಿ ಸ್ವಾತಂತ್ರ್ಯದ ಆತ್ಮಹತ್ಯೆ ಬಗ್ಗೆ ಮಾತನಾಡುವ ನೀವೇ ಪತ್ರಿಕಾ ವ್ಯವಸಾಯ ಬಿಟ್ಟು ಸರ್ಕಾರಿ ಕಚೇರಿ ಸೇರಿದ್ದನ್ನು ಏನೆಂದು ಅರ್ಥಮಾಡಿಕೊಳ್ಳಬೇಕೋ ತಿಳಿಯದಾಗಿದೆ' ಎಂದು ಹೇಳಿದ್ದೀರಿ. ನಿಜ ಹೇಳಬೇಕೆಂದರೆ ಒಮ್ಮೊಮ್ಮೆ ಇಂತಹ ಪ್ರಶ್ನೆಗಳನ್ನು ನನಗೆ ನಾನೇ ಕೇಳಿಕೊಂಡು ಗೊಂದಲಕ್ಕೀಡಾಗುತ್ತೇನೆ. ನಿಮ್ಮ ಅಭಿಪ್ರಾಯ ನನ್ನ ಗೊಂದಲವನ್ನು ಇನ್ನಷ್ಟು ಹೆಚ್ಚಿಸಿತೇ ಹೊರತು ಬಗೆಹರಿಸಲಿಲ್ಲ.

ನಿಮ್ಮ ಪ್ರತಿಕ್ರಿಯೆ ಓದಿದ ಮೇಲೆ ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಮಾತನಾಡಲು ನಿಜವಾದ ಅರ್ಹರು ಯಾರು ಎನ್ನುವ ಇನ್ನೊಂದು ಪ್ರಶ್ನೆ ಹುಟ್ಟಿಕೊಂಡಿದೆ. ಸರ್ಕಾರಿ ಸೇವೆಯಲ್ಲಿರುವ ಮತ್ತು ನಿವೃತ್ತಿಯಾದ ನಂತರವೂ ಪಿಂಚಣಿ ಪಡೆಯುತ್ತಿರುವ ನೌಕರರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಮಾತನಾಡುವ ಅರ್ಹತೆ ಇಲ್ಲ ಎಂದು ನಿಮ್ಮ ಅಭಿಪ್ರಾಯವೇ? ಹೀಗೆ ಮಾಡಿದರೆ ನಿಮ್ಮನ್ನೂ ಒಳಗೊಂಡಂತೆ ಬಹುದೊಡ್ಡ ವರ್ಗವನ್ನು ಹೊರಗಿಟ್ಟಂತೆ ಆಗುವುದಿಲ್ಲವೇ?

ನೀವು ವಾದವನ್ನು ಮುಂದುವರಿಸುತ್ತಾ 'ಗ್ರಾಹಕವಾದಿ ಸಮಾಜದ ಪ್ರಜೆಗಳೂ ಆಗಬೇಕು ಮತ್ತು ಅನಿರ್ಬಂಧಿತ ಅಭಿವ್ಯಕ್ತಿ ಸ್ವಾತಂತ್ರ್ಯವನ್ನೂ ಅನುಭವಿಸಬೇಕು ಎಂಬುದು ಆತ್ಮದ್ರೋಹದ ಮಾತಾಗುತ್ತದೆ. ಸ್ವಾತಂತ್ರ್ಯವನ್ನು ಪ್ರತಿಪಾದಿಸುವವರು ಒಂದು ಸರಳ ಸಭ್ಯ ಜೀವನದ ಮಾದರಿಯನ್ನು ಪ್ರತಿಪಾದಿಸಬೇಕಾಗುತ್ತದೆ' ಎಂದು ಹೇಳುವ ಮೂಲಕ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ಇನ್ನಷ್ಟು ಸಂಕೀರ್ಣಗೊಳಿಸಿದ್ದೀರಿ.

ನಿಮ್ಮ ಮಾತನ್ನು ಒಪ್ಪಿಕೊಂಡರೂ 'ಗ್ರಾಹಕವಾದಿ ಪ್ರಜೆ' ಇಲ್ಲವೇ 'ಸರಳ, ಸಭ್ಯ ಜೀವನ ಮಾದರಿ'ಯನ್ನು ವ್ಯಾಖ್ಯಾನಿಸುವ ಬಗೆ ಹೇಗೆ? ಕೇವಲ ಬಿಪಿಎಲ್ ಕುಟುಂಬದಿಂದ ಬಂದವರು ಮಾತ್ರ ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಮಾತನಾಡಲು ಅರ್ಹರೆಂದಾದರೆ ನಾವು–ನೀವೆಲ್ಲ ಬಾಯಿಗೆ ಬೀಗ ಹಾಕಿಕೊಂಡು ಕೂರಬೇಕಾಗುತ್ತದೆಯಲ್ಲವೇ?

ಇನ್ನು ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣದಲ್ಲಿ ಧರ್ಮದ ಪಾತ್ರವನ್ನು ನಾನು ಉಲ್ಲೇಖಿಸಿದ್ದಕ್ಕಾಗಿ ನಿಮ್ಮ ತಕರಾರಿದೆ. 'ಧರ್ಮ ಅದರ ನಿಜಾರ್ಥದಲ್ಲಿ ಮಾನವೀಯ ಸ್ವಾತಂತ್ರ್ಯಗಳಿಗೆ ಅಡ್ಡಿಯಾಗುವುದಿಲ್ಲ' ಎಂದು ನೀವು ಹೇಳಿರುವುದು ಸರಿಯಾಗಿಯೇ ಇದೆ. ಹಾಗೆಯೇ ರಾಜಕೀಯ, ಉದ್ಯಮ ಯಾವುದೂ ನಿಜಾರ್ಥದಲ್ಲಿ ಮಾನವೀಯ ಸ್ವಾತಂತ್ರ್ಯಗಳಿಗೆ ಅಡ್ಡಿಯಾಗುವುದಿಲ್ಲವಲ್ಲ?

ಗಾಂಧಿ ಕಾಲದ ಟಾಟಾ–ಬಿರ್ಲಾ ಬಿಟ್ಟುಬಿಡಿ, ನಮ್ಮೂರಿನಲ್ಲಿ ತೆಂಗಿನ ನಾರಿನ ಉದ್ಯಮ ನಡೆಸುತ್ತಿದ್ದ ಕೂಕ್ರ ಪೂಜಾರಿ ಕೂಡಾ ಮಾನವೀಯ ಸ್ವಾತಂತ್ರ್ಯಕ್ಕೆ ಅಡ್ಡಿಯಾಗಿರಲಿಲ್ಲ. ಆದರೆ ಇದೇ ಮಾತನ್ನು ಮೋದಿ ಕಾಲದ ಅಂಬಾನಿ–ಅದಾನಿ ಮತ್ತು ನಮ್ಮೂರಿನಲ್ಲಿ ರಿಯಲ್ ಎಸ್ಟೇಟ್ ಉದ್ಯಮ ನಡೆಸುತ್ತಿರುವ ಕೂಕ್ರಪೂಜಾರಿ ಮಗ ಮಹೇಶನಿಗೆ ಅನ್ವಯಿಸಲು ಸಾಧ್ಯ ಇಲ್ಲ.

ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಅವರ ಪಕ್ಷದ ನೀತಿ, ಸರ್ಕಾರದ ನಿರ್ಧಾರಗಳನ್ನು ನೋಡಿದ ನಂತರವೂ ಧರ್ಮ ಮಾನವೀಯ ಸ್ವಾತಂತ್ರ್ಯಕ್ಕೆ ಅಡ್ಡಿಯಾಗುವುದಿಲ್ಲ ಎಂದು ನೀವು ಹೇಳುವಿರೇನು?

ಆದರೆ ಈ ಹಿನ್ನೆಲೆಯನ್ನು ಇಟ್ಟುಕೊಂಡು ನಾನು ಧರ್ಮದ ಪಾತ್ರವನ್ನು ಪ್ರಸ್ತಾಪಿಸಿದ್ದಲ್ಲ. ಭಾರತದಲ್ಲಿ ನಿಷೇಧಕ್ಕೊಳಗಾಗಿರುವ ಪುಸ್ತಕಗಳ ಪಟ್ಟಿಯನ್ನು ನಾನು ಉಲ್ಲೇಖಿಸಿ ಮಾತನಾಡಿದ್ದೆ. ಇವುಗಳಲ್ಲಿ ಸೆಟಾನಿಕ್ ವರ್ಸಸ್, ಡಾವಿಂಚಿ ಕೋಡ್, ಮಿಥ್ ಇಸ್ ಎ ಮಿಥ್ ಗಳಿಂದ ಹಿಡಿದು ಮಹಾಚೈತ್ರ, ಆನುದೇವನು ಹೊರಗಣವನು ವರೆಗೆ ಎಲ್ಲವೂ ನಿಷೇಧಕ್ಕೊಳಗಾಗಿರುವುದು ಧರ್ಮದ ಗುತ್ತಿಗೆದಾರರ ಒತ್ತಡದಿಂದ ಎನ್ನುವುದನ್ನು ನಿರಾಕರಿಸಲಾದೀತೇ?

ಈ ಕಾಲದಲ್ಲಿ ಧರ್ಮ ಎನ್ನುವುದು ಊರಗುಡಿಯಲ್ಲಿ ಭಕ್ತರು ತಟ್ಟೆಗೆ ಹಾಕುವ ದುಡ್ಡಿನಿಂದ ಬದುಕುತ್ತಿದ್ದ ಅರ್ಚಕರ ಕೈಯಲ್ಲಿ ಉಳಿದಿಲ್ಲವೆನ್ನುವುದು ನಿಮಗೆ ಗೊತ್ತು. ಅದು ಪರ್ಯಾಯ ಸರ್ಕಾರದ ರೂಪದಲ್ಲಿ ರಾಜ್ಯಭಾರ ನಡೆಸುತ್ತಿದೆ. ಭಾರತವೇ ಯಾಕೆ,

ವಿಶ್ವಾದ್ಯಂತ ಬಹುತೇಕ ಕಡೆಗಳಲ್ಲಿ ಮಾನವೀಯ ಸ್ವಾತಂತ್ರ್ಯಕ್ಕೆ ಅಡ್ಡಿಯಾಗಿರುವುದು ಧರ್ಮ ಎಂದು ಹೇಳುವುದಕ್ಕೆ ಸಂಶೋಧನೆ ನಡೆಸಬೇಕಾದ ಅಗತ್ಯ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ.

ನಿಮ್ಮ ಉತ್ತರದ ನಿರೀಕ್ಷೆಯಲ್ಲಿದ್ದೇನೆ.

ಗೌರವಪೂರ್ವಕವಾಗಿ

ದಿನೇಶ್ ಅಮಿನ್‌ಮಟ್ಟು.

ಡಿಎಸ್ಸೆನ್ ಮರುಪತ್ರ

೨೪.೪.೨೦೧೭

ಪ್ರಿಯ ದಿನೇಶ್,

ನಿಮ್ಮ ಉತ್ತರ ಬಂದ ದಿನ (೨೧.೪.೨೦೧೭) ನಾನು ಬೆಂಗಳೂರಿನಲ್ಲಿದ್ದೆ. ಆ ಕಾರಣ ಪ್ರತಿಸ್ಪಂದಿಸುವುದು ತಡವಾಗಿದೆ, ಕ್ಷಮೆ ಇರಲಿ. ಈಗ ನೀವು ನೀಡಿರುವ ಉತ್ತರ ನೀವು ಹೇಳಿದ್ದ ಆತ್ಮನಿವೇದನೆಯೇ ಆಗಿದೆ ಎಂದು ಭಾವಿಸುವೆ. ಸತ್ಯದ ಹುಡುಕಾಟದ ಉದ್ದೇಶವುಳ್ಳ ಚರ್ಚೆಗೆ ಹಿರಿ-ಕಿರಿಯರೊಡನೆಯ ವಾಗ್ವಾದಗಳೆಂಬ ಅಡ್ಡಿ-ಆತಂಕಗಳು ಅನಗತ್ಯವೆಂದೇ ನನ್ನ ಭಾವನೆ.

ಅಂದು 'ದಕ್ಷಿಣಾಯನ' ಸಮಾವೇಶದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಆತ್ಮಹತ್ಯೆಯನ್ನು ಇನ್ನೊಬ್ಬರ ಮೇಲೆ ಆರೋಪಿಸಿ ನೀವು ಮಾತನಾಡಿದಾಗ ನನ್ನ ಮನಸ್ಸಿನಲ್ಲಿ ಎದ್ದ ಸಂದೇಹವನ್ನು ಪ್ರಶ್ನೆಯ ರೂಪದಲ್ಲಿ ನಿಮಗೆ ಕೇಳಿದ್ದೆ. ಇದು ನೀವು ಈಗ ಸೂಚಿಸಿರುವಂತೆ ಸಂಕೀರ್ಣವಾದ ಪ್ರಶ್ನೆಯಾದುದರಿಂದಲೇ ಈ ಪ್ರಶ್ನೆಯನ್ನು ನಾನು ಸಮಾವೇಶದಲ್ಲಿ ಕೇಳಲಿಲ್ಲ.

ಇರಲಿ. ನನ್ನ ಪ್ರಶ್ನೆಯ ಮುಖ್ಯ ಭಾಗ ಎಂದರೆ, ನಮ್ಮ ದಿಟ್ಟ ಪತ್ರಕರ್ತರಲ್ಲೊಬ್ಬರಾಗಿದ್ದ ನೀವು ಒಂದು ಸರ್ಕಾರದ ಮುಖ್ಯಸ್ಥರ ಸಲಹಾಕಾರರಾದದ್ದರಿಂದ, ವ್ಯವಸ್ಥೆಯ ಬಗ್ಗೆ ನೀವು ಮಾಡಬಹುದಾಗಿದ್ದ ವಿಮರ್ಶೆಯ ಸಮಗ್ರತೆಗೆ ಭಂಗ ತಂದುಕೊಂಡು ನಿಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನೀವಾಗಿ ನೀವೇ ಕಳೆದುಕೊಂಡಿರಲ್ಲವೆ ಎಂಬುದಾಗಿತ್ತು. ಹಾಗೇ ಈ ಪ್ರಶ್ನೆ ನಿಮ್ಮ ಆಯ್ಕೆಯ ಸರಿತನ ಹಾಗೂ ಈ ಹಿನ್ನೆಲೆಯಲ್ಲಿ ನೀವು ಬಳಸಿದ ಅಭಿವ್ಯಕ್ತಿ ಸ್ವಾತಂತ್ರ್ಯದ ಆತ್ಮಹತ್ಯೆ ಎಂಬ ಮಾತಿನ ಉಗ್ರತೆಯ ಸಾಧುತ್ವದ ಪ್ರಶ್ನೆಗಳನ್ನೂ ಒಳಗೊಂಡಿತ್ತು. ಅಂದರೆ, ಇತರರ ಆಯ್ಕೆಯನ್ನು ಮಾತ್ರ ದೂಷಿಸುವ ಆವೇಶ ನಿಮ್ಮ ಮಾತಿನಲ್ಲಿತ್ತೇನೋ ಎಂಬ ಸಂದೇಹ ನನ್ನದಾಗಿತ್ತು.

ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಸರ್ಕಾರಿ ನೌಕರ ಅಥವಾ ಪಿಂಚಣಿದಾರ ಆಡುವ ಮಾತನ್ನೂ, ಪತ್ರಕರ್ತತನವನ್ನು ಬಿಟ್ಟು ಒಂದು ಸರ್ಕಾರದ ಸಮೀಪ ವಲಯ ಸೇರಿ

(ಪರೋಕ್ಷವಾಗಿಯಾದರೂ) ಅದರ ಹಿಂದಿರುವ ಪಕ್ಷದ ವಕ್ತಾರನಂತೆ ವರ್ತಿಸುವ ವ್ಯಕ್ತಿ ಆಡುವ ಮಾತನ್ನೂ ಒಂದೇ ತಕ್ಕಡಿಯಲ್ಲಿ ತೂಗಲಾಗದಲ್ಲವೆ? ಒಬ್ಬ ಮನುಷ್ಯ ಸರ್ಕಾರಿ ನೌಕರಿ ಸೇರುವುದೇ ಸ್ವ ಇಚ್ಛೆಯಿಂದ ತನ್ನ ಕೆಲವು ರಾಜಕೀಯ ಹಕ್ಕುಗಳನ್ನು ತತ್ಕಾಲೀನವಾಗಿ ತ್ಯಜಿಸಿ. ಆ ವ್ಯಕ್ತಿ ಇತರರನ್ನುದ್ದೇಶಿಸಿ ಅಭಿವ್ಯಕ್ತಿ ಸ್ವಾತಂತ್ರ್ಯದ ಆತ್ಮಹತ್ಯೆಯ ಬಗ್ಗೆ ಮಾತನಾಡಲಾರ. ಇನ್ನು ಪಿಂಚಣಿದಾರನೆಂದರೆ ತತ್ಕಾಲೀನವಾಗಿ ತ್ಯಜಿಸಿದ್ದ ಕೆಲವು ರಾಜಕೀಯ ಹಕ್ಕುಗಳನ್ನು ಮತ್ತೆ ಪಡೆದವನು. ಅವನು ಯಾವುದೇ ನಿರ್ದಿಷ್ಟ ರಾಜಕೀಯ ಚಿಂತನೆಯ ಪಕ್ಷಪಾತಿಯಾಗಿಲ್ಲದಿದ್ದಲ್ಲಿ ಆತ ಅಭಿವ್ಯಕ್ತಿ ಸ್ವಾತಂತ್ರ್ಯದ ಆತ್ಮಹತ್ಯೆಯ ಬಗ್ಗೆ ಮಾತಾಡುವ ಎಲ್ಲ ಹಕ್ಕನ್ನೂ ಪಡೆದಿರುತ್ತಾನೆ.

ನೀವು ವೈಯಕ್ತಿವಾಗಿ ನನ್ನ ವಿಷಯವನ್ನೂ ಪ್ರಸ್ತಾಪ ಮಾಡಿರುವುದರಿಂದ ಇಲ್ಲಿ ನಾನು ಹೇಳಬೇಕಾದ ಮಾತೆಂದರೆ, ನನ್ನ ಸುತ್ತಲೂ ಹಲವಾರು ಕಾರಣಗಳ ಹಿನ್ನೆಲೆಯ ಮತ್ತು ವಿವಿಧ ಭಾವ ಭಂಗಿಗಳ ಅಭಿವ್ಯಕ್ತಿ ಸ್ವಾತಂತ್ರ್ಯದ ಆತ್ಮಹತ್ಯೆಗಳನ್ನು (ನನ್ನದೂ ಸೇರಿ) ನೋಡುತ್ತಿದ್ದೇನೆ. ಆದರೆ ಅದನ್ನು ಏಕಮುಖವಾಗಿ ರಾಜಕೀಯಗೊಳಿಸಲಾರೆ. ಕಾರಣ, ಯಾವುದೇ ಪಕ್ಷ ಅಥವಾ ಸರ್ಕಾರವಿರಲಿ, ನಮ್ಮ ಜೀವನ ಶೈಲಿಯಲ್ಲೇ-ಜಾತಿ ಅಥವಾ ವರ್ಗಬೇಧವಿಲ್ಲದ ಅದರ ಕೊಳ್ಳುಬಾಕ ಸಂಸ್ಕೃತಿಯಲ್ಲೇ-ಅಭಿವ್ಯಕ್ತಿ ಸ್ವಾತಂತ್ರ್ಯದ ಮಿತಿಗಳು ಅಡಗಿವೆ ಎಂದು ನಾನು ನಂಬಿದ್ದೇನೆ. ಏಕೆಂದರೆ ಅಭಿವ್ಯಕ್ತಿ ಸ್ವಾತಂತ್ರ್ಯ ಎನ್ನುವುದು ನಿರ್ವಾತದಲ್ಲಿ ಇರುವ ವಸ್ತುವಲ್ಲ. ಅದು ಹುಟ್ಟುವುದೂ, ಕ್ರಿಯಾಶೀಲವಾಗುವುದೂ ಒಂದು ರಾಜಕೀಯ ಸಮಾಜದಲ್ಲಿ. ಹಾಗಾಗಿ ಅದರ ರಾಜಕೀಯದ ಆರ್ಥಿಕ ನೆಲೆಗಳೇ, ಆಶಯಗಳೇ-ಇತರ ನೆಲೆ ಮತ್ತು ಆಶಯಗಳ ಜೊತೆ ಸೇರಿ-ಅದರ ಅಭಿವ್ಯಕ್ತಿ ಸ್ವಾತಂತ್ರ್ಯದ ಇತಿ ಮಿತಿಗಳನ್ನು ನಿರ್ಧರಿಸುತ್ತವೆ. ಅಂದರೆ, ನಿಮ್ಮ ಅಗತ್ಯಗಳು ಹೆಚ್ಚಿದಷ್ಟೂ ಅವನ್ನು ಪೂರೈಸುವ ವ್ಯವಸ್ಥೆಗಳು ಅಂದರೆ ಉದ್ಯಮಗಳು ಬಲಗೊಳ್ಳುತ್ತಾ ಅವು ತಮ್ಮ ಈ ಹಿತಾಸಕ್ತಿಗನುಗುಣವಾದ ರಾಜಕಾರಣವನ್ನು ಬೆಂಬಲಿಸುತ್ತವೆ. ಆ ಮೂಲಕ ಅವು ಸಮಾಜದ ಅಭ್ಯಾಸ-ಹವ್ಯಾಸಗಳ ಮೇಲೆ ಹಿಡಿತ ಸಾಧಿಸುತ್ತಾ, ತಿರುಗಿ ತನಗೆ ಅನುಕೂಲಕರವಾದ ರಾಜಕಾರಣವನ್ನು ಕಟ್ಟುತ್ತಾ ತನ್ನ ಉದ್ಯಮದ ಬೆಳವಣಿಗೆಗೆ ಅಡ್ಡಿ ಬರುವ ಜನರ ಹಕ್ಕುಗಳನ್ನು ಮೊಟಕುಗೊಳಿಸುತ್ತಾ ಹೋಗುತ್ತವೆ. ಇದನ್ನೇ ನಾವು ಇಂದು ನೋಡುತ್ತಿರುವುದು, ಇದನ್ನಷ್ಟೇ ನಾನು ಹೇಳಿದ್ದು ಕೂಡ. ಅದು ನೀವು ಹೇಳಿದ 'ಉದ್ಯಮಗಳು ರಾಜಕಾರಣದ ಜೊತೆ ಸೇರಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹಾಳುಗೆಡಹುವಲ್ಲಿ ಪಾತ್ರವಹಿಸುತ್ತಿವೆ' ಎಂಬ ನಿಮ್ಮ ಮಾತಿನ ವಿಸ್ತರಣೆ ಅಷ್ಟೆ, ಅಲ್ಲವೆ?

ಇದನ್ನೇ ಗಾಂಧಿಯೂ ಹೇಳಿದ್ದು: ವ್ಯಕ್ತಿಯ ಸ್ವಾಯತ್ತತೆಯೇ(ಅಂದರೆ ನೀವು ಹೇಳುವ ಅನಿರ್ಬಂಧಿತ ಅಭಿವ್ಯಕ್ತಿ ಸ್ವಾತಂತ್ರ್ಯ) ರಾಜಕಾರಣದ ಪರಮ ಗುರಿ ಎಂದು ಅವರು ನಂಬಿದ್ದರು. ಹಾಗಾಗಿ ನಾಗರಿಕ ಸಮಾಜದ ಅಡಿಪಾಯ ಇದೇ ಆಗಿರಬೇಕಾದರೆ, ನಮ್ಮ ಆರ್ಥಿಕ ನೆಲೆಯ ಅಗತ್ಯಗಳನ್ನು ಕಡಿಮೆ ಮಾಡಿಕೊಳ್ಳಬೇಕು

ಎಂದವರು ಭಾವಿಸಿದ್ದರು. ಇದರಿಂದ ಸ್ಫೂರ್ತಿಗೊಂಡೇ ಲೋಹಿಯಾ ಸದಾ ಹೆಚ್ಚುಮಾಡಿಕೊಳ್ಳುತ್ತಾ ಹೋಗುವ ಅಗತ್ಯಗಳ ಜೀವನಶೈಲಿಗೆ ಬದಲಾಗಿ ಒಂದು ಸರಳ ಸಭ್ಯ (decent) ಎಂದು ಕರೆಯಬಹುದಾದ ಜೀವನಶೈಲಿಯನ್ನು ರೂಢಿಸುವ ಸಮಾಜವಾದಿ ರಾಜಕಾರಣವನ್ನು ಪ್ರತಿಪಾದಿಸಿದ್ದು ಎಂದು ನನ್ನ ನಂಬಿಕೆ. ಈ ಸರಳ ಸಭ್ಯ ಜೀವನ ಶೈಲಿ ಎಂದರೆ, ಮಿತಿಗಳನ್ನು ಹಾಕಿಕೊಂಡ ಬದುಕು. ಅಂತಹ ರಾಜಕಾರಣವನ್ನು ಕಟ್ಟುವ ಸರ್ಕಾರ ಬರುವವರೆಗೂ ಕಾಯದೆ, ಅಭಿವ್ಯಕ್ತಿ ಸ್ವಾತಂತ್ರ್ಯದ ಮೌಲಿಕತೆಯ ಬಗ್ಗೆ ಮಾತಾಡುವವರಾದರೂ, ಅದನ್ನು ಪ್ರತಿಪಾದಿಸಬೇಕು. ತಾನೇ ತನ್ನ ಆತ್ಮಸಾಕ್ಷಿಗನುಗುಣವಾಗಿ ಗಡಿಗೆರೆಗಳನ್ನು ಹಾಕಿಕೊಂಡು ಸರಳ ಸಭ್ಯ ಬದುಕಿನ ಮಾದರಿಯನ್ನು ಅನುಸರಿಸುವ ಪ್ರಯೋಗ ಮಾಡಬೇಕು. ಇಂತಹ ಪ್ರಯೋಗಗಳು ನಮ್ಮ ಮಧ್ಯೆಯೇ ನಡೆದಿವೆ. ನಿಮ್ಮನ್ನು ಸಮಾಜವಾದಿ ತತ್ವದಲ್ಲಿ ನಂಬಿಕೆ ಇಟ್ಟಿರುವವರು ಎಂದು ನಾನು ಭಾವಿಸಿದ್ದೇನೆ.

ಈ ಎಲ್ಲ ನನ್ನ ಮಾತುಗಳ ಹಿನ್ನೆಲೆಯಲ್ಲಿ 'ನಿಮ್ಮ ವಾದದ ಪ್ರಕಾರ ಬಿ.ಪಿ.ಎಲ್. ಜನರಿಗೆ ಮಾತ್ರ ಅಭಿವ್ಯಕ್ತಿ ಸ್ವಾತಂತ್ರ್ಯದ ಮಾತಾಡುವ ಹಕ್ಕು ಇರುತ್ತದೆ' ಎಂಬ ನಿಮ್ಮ ಮಾತು ನಿರಾಧಾರವಾದ ಒಂದು ಬಣಗು ವ್ಯಂಗ್ಯದ ಮಾತಾಗಿ ಮಾತ್ರ ನನಗೆ ಕೇಳಿಸುತ್ತದೆ. ಏಕೆಂದರೆ ನಾನು ಚರ್ಚೆ ಎತ್ತಿದ್ದು ಒಂದು ಸಮಾಜದ–ಅದನ್ನು ಕಟ್ಟುತ್ತಿರುವ ರಾಜಕಾರಣಕ್ಕನುಗುಣವಾದ–ಸಮಗ್ರ ಧ್ವನಿಯಾಗಬಲ್ಲ ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆಯೇ ಹೊರತು ಯಾವುದೇ ಒಂದು ವರ್ಗಕ್ಕೆ ಸಂಬಂಧಿಸಿದಂತೆ ಅಲ್ಲ.

೨. ಇನ್ನು ಧರ್ಮ ಕುರಿತ ನಿಮ್ಮ ಮಂಡನೆಗಳ ಬಗ್ಗೆ. ಧರ್ಮ ಮತ್ತು ರಾಜಕಾರಣದ ಸಂಬಂಧವನ್ನು ಗಾಂಧಿ ನಿರ್ವಚಿಸಿದ ಬಗೆ ನಿಮಗೆ ಗೊತ್ತು. ದೀರ್ಘಾವಧಿ ರಾಜಕಾರಣವೇ ಧರ್ಮ; ಅಲ್ಪಾವಧಿ ಧರ್ಮವೇ ರಾಜಕಾರಣ ಎಂದು ಭಾವಿಸಿದ್ದವರು ಅವರು. ಇಂದು ಈ ಸಂಬಂಧಗಳನ್ನು ಕಾಣಲು ಆಗದಷ್ಟು ದಟ್ಟವಾಗಿ ಅವೆರಡೂ ಒಂದಾಗಿಬಿಟ್ಟಿದ್ದರೆ ಅದಕ್ಕೆ ಧರ್ಮ ಕಾರಣವೆಂದು ಹೇಳಲಾಗದು. ಏಕೆಂದರೆ ಧರ್ಮ ಮನುಷ್ಯನ ಒಳಗಿನ ಶಾಶ್ವತ ಸಂಪನ್ಮೂಲ. ಅದನ್ನು ನಾವು ಕಟ್ಟಿಕೊಂಡ ಹೊರಗಿನ ಸಂಪನ್ಮೂಲವಾದ ರಾಜಕಾರಣದಿಂದ ಮಲಿನಗೊಳಿಸಬಹುದೇ ಹೊರತು ಬದಲಾಯಿಸಲಾಗದು. ಆದುದರಿಂದ ನಾವು ಆಡಬೇಕಾದ ಮಾತು, ಧರ್ಮ ರಾಜಕಾರಣವಾಗಿ ಅವನತಿಗೊಂಡಿದೆ ಎಂಬ ಅರ್ಥ ಕೊಡುವಂತಹ ಅದರ ಮಾಲಿನ್ಯದ ಬಗೆಗಿನ ಮಾತುಗಳನ್ನಲ್ಲ. ಬದಲಿಗೆ, ಧರ್ಮವನ್ನು ಮಾಲಿನ್ಯದಿಂದ ಮುಕ್ತಗೊಳಿಸಬೇಕಾದ ತುರ್ತಿನ ಮಾತುಗಳನ್ನು.

ಇಂತಹ ಮಾತನ್ನಾಡುವಾಗ, ಧರ್ಮವನ್ನು ಮಲಿನಗೊಳಿಸಿದ ಪ್ರಕ್ರಿಯೆಯಲ್ಲಿ ಧರ್ಮನಿರಪೇಕ್ಷತಾವಾದಿಗಳದ್ದೂ ಸೇರಿದಂತೆ ಎಲ್ಲರ ಪಾಲೂ–ಪರಸ್ಪರ ಮೇಲಾಟದಲ್ಲಿ ಕೆಲವರದ್ದು ಕಡಿಮೆ, ಕೆಲವರದ್ದು ಜಾಸ್ತಿ–ಇದೆ ಎಂಬ ಅರಿವೂ ಇರಬೇಕು. ಆಗ ಧರ್ಮ ಮಲಿನಗೊಂಡು ಯಾರ್ಯಾರ ಕೈಗೆ ಯಾವ್ಯಾವ ರೂಪದಲ್ಲಿ ಹೇಗೆ ಹೋಯಿತು

ಎಂಬುದರ ಸಮತುಲಿತ ಅರಿವು ಉಂಟಾಗುತ್ತದೆ. ನಿಮ್ಮ ಪಕ್ಷೀಯ ಅಥವಾ ತಥಾಕಥಿತ ಧರ್ಮನಿರಪೇಕ್ಷ ರಾಜಕೀಯ ಬದ್ಧತೆಯ ಕಾರಣದಿಂದಾಗಿ ಧರ್ಮ ಮಾಲಿನ್ಯ ಅಥವಾ ಭ್ರಷ್ಟತೆಯ ಕೆಲವು ಮಾದರಿಗಳನ್ನಷ್ಟೇ ನೀವು ನೋಡುತ್ತಿರುವುದರಿಂದ ಈ ಸಮತುಲಿತ ಅರಿವು ಲಭಿಸದು. ಮತ್ತು ನೀವು ಈಗ ನಂಬಿರುವಂತೆ ತೋರುವ ಪಕ್ಷೀಯ ರಾಜಕೀಯ ಚಿಂತನೆಯ ಮೂಲಕವೂ ಅದನ್ನು ಪರಿಹರಿಸಬಲ್ಲ ಸಮತುಲಿತ ರಾಜಕಾರಣ ಸಾಧ್ಯವಾಗದು.

ಆದ್ದರಿಂದ ಇಂದು ನಾವು ಮಾಡಬೇಕಾದದ್ದು, ಧರ್ಮವನ್ನು ರಾಜಕಾರಣದ ಮಾಲಿನ್ಯದಿಂದ ಪಾರು ಮಾಡುವುದೇ ಆಗಿದೆ. ಇದು ಸಾಧ್ಯವಾಗುವುದು ನಿಜವಾದ ಧರ್ಮವೆಂದರೇನು ಎಂಬುದನ್ನು ಹೇಳುವ ಮೂಲಕ. ಧರ್ಮದ ನಿಜಾರ್ಥ ಪರಿಣಾಮಕಾರಿಯಾಗಿ ವ್ಯಕ್ತಗೊಳ್ಳುವುದು ಇಂದು ರಾಜಕಾರಣವನ್ನು ಭ್ರಷ್ಟಗೊಳಿಸಿ ಸಮಾಜದ ನಿಜವಾದ ಒಳಶಕ್ತಿಯಾದ ಅದರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಸಿದುಕೊಂಡಿರುವ ಹಣದ ದುಷ್ಟಬಲಕ್ಕೆ ಕಾರಣವಾಗಿರುವ ಉದ್ಯಮದ ಲಾಭಕೋರತನವನ್ನು ತಹಬಂದಿಗೆ ತರುವ ಪ್ರತಿ ರಾಜಕಾರಣದ ಮೂಲಕ ಮಾತ್ರ ಎಂಬ ಅರಿವಿನಲ್ಲಿ ಈ ಕೆಲಸ ನಡೆಯಬೇಕು. ಇದು ಅವರನ್ನು ಬೈಯುತ್ತಾ ಮಾಡುವ ರಾಜಕಾರಣದಷ್ಟು ಸುಲಭವಲ್ಲ. ಆದರೆ ನಾವು ಈವರೆಗೆ ಮಾಡುತ್ತಾ ಬಂದಿರುವುದು ಇಂತಹುದೇ–ತನ್ನೊಳಗನ್ನು ನೋಡಿಕೊಳ್ಳಲಾಗದಷ್ಟು ದದ್ದು ಬಿದ್ದು ಹೋಗಿರುವ–ಸ್ವಯಂಘೋಷಿತ ಎಡಪಂಥೀಯತೆಯ ಸುಲಭ ರಾಜಕಾರಣವನ್ನೆ. ಅದನ್ನು ಈಗಲಾದರೂ ಬಿಟ್ಟು ಸಮಗ್ರ ದೃಷ್ಟಿಯ ಸಮತುಲಿತ ರಾಜಕಾರಣವನ್ನು ಕಟ್ಟುವ ಧೃಢ ಮನಸ್ಕತೆಯನ್ನು ಮೆರೆಯೋಣ.

ಇದೆಲ್ಲವನ್ನೂ ನಾನು ಬರೆದಿರುವುದು, ನನ್ನ ಮೂಲತಃ ಬಿಜೆಪಿ ವಿರೋಧಿ ರಾಜಕೀಯ ನಿಲುವುಗಳ (ಅದರ ಪ್ರಖರತೆಗೆ ಸಾಕ್ಷ್ಯ ಬೇಕಾದವರು ನಾನು ಕಳೆದ ಆರು ವರ್ಷಗಳ ಕಾಲ ಸಂಪಾದಿಸುತ್ತಾ ಬಂದ 'ಹೊಸ ಮನುಷ್ಯ' ಪತ್ರಿಕೆಯ ಸಂಪಾದಕೀಯಗಳನ್ನೂ, ಇತರ ಲೇಖನಗಳನ್ನೂ ಗಮನಿಸಬಹುದು) ಹೊರತಾಗಿಯೂ ಎಂಬುದನ್ನು ನೀವು ಗಮನಿಸುವಿರಿ ಎಂದು ಭಾವಿಸುವೆ.

ಇಷ್ಟು ವಿವರವಾಗಿ ಯೋಚಿಸಲು, ಬರೆಯಲು ಕಾರಣವಾದ ಉತ್ತರವನ್ನು ಬರೆದ ನಿಮಗೆ ನನ್ನ ಧನ್ಯವಾದಗಳು.

ಪ್ರೀತಿಯೊಂದಿಗೆ,

ಡಿ.ಎಸ್. ನಾಗಭೂಷಣ

ಅಮಿನ್‌ಮಟ್ಟು ಅವರ ಮಾರುತ್ತರ

೨೫.೪.೨೦೧೭

ಹಿರಿಯರು ಮತ್ತು ಗುರುಸಮಾನರಾದ ನಾಗಭೂಷಣ್ ಅವರಿಗೆ ವಂದನೆಗಳು.

ನಿಮ್ಮ ಉತ್ತರದ ಬಗ್ಗೆ ಸ್ವಲ್ಪ ಭಯ ಇತ್ತು, ನನ್ನ ಅಭಿಪ್ರಾಯವನ್ನು ತಪ್ಪಾಗಿ ಅರ್ಥೈಸಿದರೆ ನಾನೊಲ್ಲದ ಅನಗತ್ಯ ವಾಗ್ವಾದಕ್ಕೆ ಕಾರಣವಾಗಬಹುದೆಂಬ ಭಯ ಅದು. ನಿಮ್ಮ ಪತ್ರ ನೋಡಿ ಮನಸ್ಸು ನಿರಾಳವಾಗಿ ಇನ್ನಷ್ಟು ಧೈರ್ಯದಿಂದ ಈ ಪತ್ರ ಬರೆಯುತ್ತಿರುವೆ.

೧. ಪತ್ರಕರ್ತನ ವೃತ್ತಿಗೆ ವಿರಾಮಕೊಟ್ಟು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರನ ಹುದ್ದೆಯನ್ನು ಒಪ್ಪಿಕೊಂಡ ದಿನ ನಾನು ಅನುಭವಿಸಿದ್ದ ಅಪರಾಧಿ ಪ್ರಜ್ಞೆ ಮತ್ತು ಗೊಂದಲ ಈಗಲೂ ಮುಂದುವರಿದಿದೆ ಎಂದು ಹೇಳಲು ನನಗೆ ಯಾವುದೇ ಮುಜುಗರ ಇಲ್ಲ. ಇಂತಹದ್ದೊಂದು ಸಂಘರ್ಷ ನನ್ನೊಳಗೆ ನಿರಂತರವಾಗಿ ನಡೆಯುತ್ತಿರುವುದನ್ನು ಕೂಡಾ ನಾನು ಮುಚ್ಚಿಟ್ಟುಕೊಳ್ಳುವುದಿಲ್ಲ.

ಅಭಿವ್ಯಕ್ತಿ ಸ್ವಾತಂತ್ರ್ಯ ಎನ್ನುವುದು ಸಂಪೂರ್ಣ ಇಲ್ಲವೆ ಪರಿಪೂರ್ಣವಾಗಿರಲು ಸಾಧ್ಯವೇ ಇಲ್ಲ ಎನ್ನುವುದು ನನ್ನ ಅನುಭವ. ಪತ್ರಕರ್ತರೂ ಸೇರಿದಂತೆ ನಮ್ಮೆಲ್ಲರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕೂಡಾ ಇತಿಮಿತಿಗಳಿವೆ. ಮಾಧ್ಯಮ ಎನ್ನುವುದು ಉದ್ಯಮವಾಗಿರುವುದರಿಂದ ಮತ್ತು ಒಬ್ಬ ಪತ್ರಕರ್ತ ವಾಸ್ತವದಲ್ಲಿ ಒಂದು ಖಾಸಗಿ ಸಂಸ್ಥೆಯ ನೌಕರನಾಗಿರುವುದರಿಂದ ಎಷ್ಟೋ ಸಂದರ್ಭಗಳಲ್ಲಿ ಪತ್ರಕರ್ತನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಿರ್ಧರಿಸುವವರು ಮಾಧ್ಯಮ ಸಂಸ್ಥೆಯ ಮಾಲೀಕರೇ ಹೊರತು ಪತ್ರಕರ್ತನಲ್ಲ ಎನ್ನುವುದು ಕೂಡಾ ನಿಜ. ಹಿಂದಿನಂತೆ ಇಂದು ಕೂಡಾ ನಾನು ಓರ್ವ ಉದ್ಯೋಗದಾತನಡಿಯಲ್ಲಿಯೇ ಕೆಲಸ ಮಾಡುವುದರಿಂದ ನನ್ನ ಅಭಿವ್ಯಕ್ತಿ ಸ್ವಾತಂತ್ರ್ಯ ಅನಿರ್ಬಂಧಿತ ಅಲ್ಲ.

ಇದೇ ರೀತಿ ಪತ್ರಕರ್ತರು ತಮ್ಮ ನಿಲುವಿನಲ್ಲಿ objective ಆಗಿ ಇರಬೇಕೆಂದು ಪತ್ರಿಕೋದ್ಯಮದ ಶಿಕ್ಷಣದ ಸಂದರ್ಭದಲ್ಲಿ ಹೇಳಿಕೊಡುವ ಪಾಠ ಕೂಡಾ ಪ್ರಾಯೋಗಿಕವಾದುದಲ್ಲ. ಕೆಲವು ವರ್ಷಗಳ ಹಿಂದೆ American society for professional journalism ತನ್ನ ನೀತಿ ಸಂಹಿತೆಯಿಂದ objectivity ಎಂಬ ಶಬ್ದವನ್ನೇ ಕಿತ್ತುಹಾಕಿತು. ಈ objectivity ಇಲ್ಲವೆ 'ನಿಷ್ಪಕ್ಷಪಾತತನ'ದ ಹುಡುಕಾಟ ಒಮ್ಮೊಮ್ಮೆ ನಮ್ಮನ್ನು ಸತ್ಯದಿಂದ ದೂರ ಕೊಂಡೊಯ್ಯಬಹುದು (Colambia journalism review) ಎಂಬ ಅಭಿಪ್ರಾಯ ಇದೆ. ಆದ್ದರಿಂದ ನಿಷ್ಪಕ್ಷಪಾತವಾಗಿ ಇಲ್ಲವೆ objective ಆಗಿ ಇರಬೇಕೆಂಬ ಏಕೈಕ ಕಾರಣಕ್ಕಾಗಿ ಪತ್ರಕರ್ತನೊಬ್ಬ ಬಿಜೆಪಿ ವಿರುದ್ಧ ಬರೆದ ವರದಿಯ ಅಕ್ಷರಗಳನ್ನು ಎಣಿಸಿ, ಅಷ್ಟೇ ಅಕ್ಷರಗಳ ಗಾತ್ರದ ವರದಿಯನ್ನು ಕಾಂಗ್ರೆಸ್ ವಿರುದ್ಧ ಬರೆಯಬೇಕೆನ್ನುವುದು ಹಾಸ್ಯಾಸ್ಪದವಾಗುತ್ತದೆ.

ಈ ಹಿನ್ನೆಲೆಯಲ್ಲಿ ನಾನು ನನ್ನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ವಿಮರ್ಶಿಸಿಕೊಳ್ಳಬಯಸುತ್ತೇನೆ. ಮೊದಲನೆಯದಾಗಿ ಪತ್ರಕರ್ತನಾಗಿದ್ದಾಗಲೂ ನನಗೆ ಸಂಪೂರ್ಣವಾದ ಅಭಿವ್ಯಕ್ತಿ ಸ್ವಾತಂತ್ರ್ಯ ಇರಲಿಲ್ಲ ಮತ್ತು ನನ್ನ ವರದಿ-ಅಂಕಣಗಳಲ್ಲಿ ಸಂಪೂರ್ಣವಾದ 'ನಿಷ್ಪಕ್ಷಪಾತತನ' ಇಲ್ಲವೇ objectivity ಇರಲಿಲ್ಲ ಎನ್ನುವವರೂ

ಇದ್ದರು. ನಾನು ನನ್ನ ಅಂಕಣದ ಮೂಲಕವೇ ಹೆಚ್ಚು ಜನರನ್ನು ತಲುಪಿರುವುದು ಮತ್ತು ಆ ಅಂಕಣಗಳು ನನ್ನ ಅಭಿವ್ಯಕ್ತಿಯಾಗಿದ್ದವು.

ನನ್ನ ಅಭಿಪ್ರಾಯ ಪ್ರಾರಂಭದಿಂದಲೂ ಕೋಮುವಾದ, ಜಾತಿವಾದ ಹಾಗೂ ಭ್ರಷ್ಟಚಾರದ ವಿರುದ್ಧವಾಗಿಯೇ ಇತ್ತು. ಇದರಿಂದಾಗಿ ಎದುರುಬಣದಲ್ಲಿ ನಿಂತುನೋಡಿದವರಿಗೆ ನನ್ನದು ಪೂರ್ವಗ್ರಹ ಪೀಡಿತ ಇಲ್ಲವೆ ಪಕ್ಷಪಾತತನದ ಬರವಣಿಗೆ ಎಂದು ಅನಿಸಿರಲೂಬಹುದು. ಈ ಕಾರಣದಿಂದಾಗಿಯೇ ಎಷ್ಟೋಬಾರಿ ನನ್ನ ಅಂಕಣಗಳು ಬಿಜೆಪಿ ವಿರೋಧಿ ಮತ್ತು ಕಾಂಗ್ರೆಸ್ ಪರ ಎಂಬ ವ್ಯಾಖ್ಯಾನಕ್ಕೊಳಗಾಗಿದ್ದು ಕೂಡಾ ನಿಜ.

೨. ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣದಲ್ಲಿ ಧರ್ಮದ ಪಾತ್ರವನ್ನು ನೀವು ಸರಳೀಕರಿಸುತ್ತಿದ್ದೀರಿ. ಧರ್ಮದ ಬಗ್ಗೆ ಗಾಂಧೀಜಿ ನಿಲುವಿನ ಬಗ್ಗೆ ನನಗೆ ತಕರಾರುಗಳಿದ್ದರೂ ಇಂದಿನ ಕೋಮುವಾದದ ವಿರುದ್ಧದ ಹೋರಾಟಕ್ಕೆ ಲೋಹಿಯಾ ಚಿಂತನೆ ಒಂದು ಪ್ರಬಲ ಅಸ್ತ್ರ ಎಂದು ಬಲವಾಗಿ ನಂಬಿದವನು ನಾನು. ಇಷ್ಟು ಹೇಳಿದ ನಂತರವೂ ಅವರಿಬ್ಬರೂ ಆ ಕಾಲದಲ್ಲಿ ಹೇಳಿರುವುದನ್ನು ಈ ಕಾಲದಲ್ಲಿ ವಿಮರ್ಶೆಗೆ ಒಡ್ಡದೆ ಕುರುಡಾಗಿ ಅನುಸರಿಸಲು ಹೊರಟರೆ ಶತ್ರುವಿಗೆ ಬೀಸಿದ ಕತ್ತಿಯಿಂದ ನಮಗೆ ಗಾಯವಾಗುವ ಅಪಾಯವೂ ಇದೆ.

ಬಾಬರಿ ಮಸೀದಿ ಧ್ವಂಸದ ನಂತರ ದೇಶದಲ್ಲಿ ಪ್ರಾರಂಭವಾದ ಕೋಮುವಾದದ ಶಕೆಯ ಕಾಲದಲ್ಲಿ ಅವರಿಬ್ಬರು ಬದುಕಿದ್ದರೆ ಹೇಗೆ ಪ್ರತಿಕ್ರಿಯಿಸುತ್ತಿದ್ದರು ಎನ್ನುವ ಬಗ್ಗೆ ನನಗೆ ಕುತೂಹಲ ಇದೆ. ಅವರಿಬ್ಬರೂ ಕಾಲಕ್ಕೆ ಅನುಗುಣವಾಗಿ ತಮ್ಮ ಅಭಿಪ್ರಾಯವನ್ನು ಬದಲಾಯಿಸುತ್ತಾ ಬಂದಿರುವುದು ನಿಮಗೂ ತಿಳಿದಿದೆ.

ಆದ್ದರಿಂದ ಲೋಹಿಯಾ ಅವರ ಆ ಕಾಲದ ಕಾಂಗ್ರೆಸ್ ವಿರೋಧಿ ನಿಲುವನ್ನು, ಇಂದು ಕೋಮುವಾದಿ ನಿಲುವನ್ನು ಉಸಿರಾಡುತ್ತಿರುವ ಬಿಜೆಪಿ ಜತೆ ಸೇರಿಕೊಳ್ಳಲು ಬಳಸಿಕೊಳ್ಳುವುದು (ಉದಾ: ಜಾರ್ಜ್, ಪಟೇಲ್ ಮೊದಲಾದವರು) ಆತ್ಮವಂಚನೆಯಾಗುತ್ತದೆ.

ಇಂದಿನ ಹಿಂದೂ ಧರ್ಮ ಕೇವಲ ಮುಖವಾಡವಾಗಿ ಉಳಿದು ಅದರ ಹಿಂದೆ ಆರ್‌ಎಸ್‌ಎಸ್ ಎಂಬ ಮುಖ ಇರುವುದು ಮತ್ತು ಈ ದುಷ್ಟಮುಖವೇ ತಥಾಕಥಿತ ಹಿಂದೂ ಧರ್ಮವನ್ನು ನಿಯಂತ್ರಿಸುತ್ತಿರುವುದು ನಿಮಗೆ ತಿಳಿಯದ ಸಂಗತಿಯೇನಲ್ಲ. ಬಿಜೆಪಿಯ ಟೀಕಾಕಾರರಾಗಿರುವುದನ್ನು ಸಲೀಸಾಗಿ ಸಹಿಸಿಕೊಳ್ಳುವ ಈ ದುಷ್ಟಮುಖ ಸಂಘ ಪರಿವಾರದ ಇತರ ಘಟಕಗಳನ್ನು ಮುಟ್ಟಿದರೆ ಮೈಮೇಲೆ ಬೀಳುತ್ತದೆ.

ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಮಾತನಾಡುವಾಗ ಧರ್ಮವನ್ನು ಪ್ರಸ್ತಾಪಿಸಲು ಇದೂ ಒಂದು ಕಾರಣ. ನವಮಾಧ್ಯಮದಲ್ಲಿ ಸಕ್ರಿಯನಾಗಿರುವ ನನ್ನಂತಹವರು ಸಂಘ ಪರಿವಾರ ಮತ್ತು ಮೋದಿ ಭಕ್ತರಿಂದ ಕೂಡಿದ 'ಟ್ರೋಲ್'ಗಳಿಂದ ಪ್ರತಿನಿತ್ಯ ಮಾನಸಿಕ ಹಿಂಸೆಯನ್ನು ಅನುಭವಿಸುತ್ತಿರುವುದು ನಿಮಗೆ ತಿಳಿದಿರಲಾರದು. ಈ ದಾಳಿಗಳ ದುರುದ್ದೇಶ ಅವರನ್ನು

ಸೈದ್ಧಾಂತಿಕವಾಗಿ ವಿರೋಧಿಸುತ್ತಿರುವ ನಮ್ಮಂತಹವರ ಬಾಯಿ ಬಂದ್ ಮಾಡುವುದೇ ಆಗಿದೆ. ನನ್ನ ಮೇಲೆ ಮಾಧ್ಯಮಗಳಲ್ಲಿ ನಡೆಯುತ್ತಿರುವ ದಾಳಿಗಳು ಮತ್ತು ಪೊಲೀಸ್ ದೂರುಗಳ ಬಗೆಗಿನ ಪಟ್ಟಿ ಉದ್ದ ಇದೆ. ಇತ್ತೀಚೆಗೆ ದೇಶಪಾಂಡೆ ಎಂಬ ಸಚಿವರು ನನ್ನ ಮೇಲೆ ಹರಿಹಾಯ್ದಿರುವುದು ನಾನು ಅನುಭವಿಸುತ್ತಿರುವ ಆಂತರಿಕ ಪ್ರತಿರೋಧಕ್ಕೆ ಸಾಕ್ಷಿ. ಇದರ ಹೊರತಾಗಿಯೂ ಸರ್ಕಾರಿ ಹುದ್ದೆಗಾಗಿ ನಾನು ಅಭಿವ್ಯಕ್ತಿ ಸ್ವಾತಂತ್ರ್ಯದ ಆತ್ಮಹತ್ಯೆ ಮಾಡಿಕೊಂಡೆ ಎಂದು ನೀವು ಹೇಳುವುದಾದರೆ ನನ್ನ ಪ್ರತಿಕ್ರಿಯೆ ಇಲ್ಲ.

ನಿಮ್ಮಂತಹವರು ಒಮ್ಮೆ ಈ ನವಮಾಧ್ಯಮದೊಳಗೆ ಇಣುಕಿ ನೋಡಬೇಕು. ಧರ್ಮದ ಹೆಸರಲ್ಲಿ ಇಂತಹ ಪುಂಡರು ತಂದೊಡ್ಡುತ್ತಿರುವ ಅಪಾಯದ ಬಗ್ಗೆ ಅಂದಾಜು ಮಾಡಲಾಗದ ಅಜ್ಞಾನದಿಂದಲೋ ಇಲ್ಲವೆ ಇಂತಹ ಕಿರಿಕಿರಿಯಿಂದ ದೂರ ಇರುವುದೇ ಒಳ್ಳೆಯದು ಎಂಬ ಜಾಣ ನಿಲುವಿನ ಕಾರಣದಿಂದಲೋ ನಿಮ್ಮಂತಹ ಹಿರಿಯರು ಇದನ್ನು ನಿರ್ಲಕ್ಷಿಸುತ್ತಿದ್ದಾರೆ. ಇದು ಒಂದು ರೀತಿಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಆತ್ಮಹತ್ಯೆಯಾಗಿಯೇ ನನಗೆ ಕಾಣುತ್ತಿದೆ.

ಆದರೆ ದೇಶದ ಶೇಕಡಾ ೬೫ರಷ್ಟು ಜನಸಂಖ್ಯೆ ೩೫ ವರ್ಷದೊಳಗಿನ ಯುವಜನರಿಂದಲೇ ತುಂಬಿರುವಾಗ ಮತ್ತು ಹೊಸ ಪೀಳಿಗೆಯ ಈ ಗುಂಪು ನವ-ನವ ಮಾಧ್ಯಮಮಗಳಲ್ಲಿ ತಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಂಡುಕೊಳ್ಳುತ್ತಿರುವಾಗ ಇದನ್ನು ನಿರ್ಲಕ್ಷಿಸಲು ಸಾಧ್ಯವೇ?

ಎದುರಾ ಎದುರು ನಿಂತು ಮನೆಗೆ ಬೆಂಕಿ ಉಂಡೆಗಳನ್ನು ಎಸೆಯುತ್ತಿರುವವರನ್ನು ಬಿಟ್ಟು, ಹಿಂದೆ ಬೆಂಕಿ ಹಾಕಿದವನನ್ನು ಹುಡುಕಿಕೊಂಡು ಹೊರಡುವುದು ಜಾಣತನವಲ್ಲ ಎಂದು ನನ್ನ ನಂಬಿಕೆ. ಮೊದಲು ಈಗಿನ ಬೆಂಕಿಯನ್ನು ನಂದಿಸೋಣ ಮತ್ತು ಇದು ಎಲ್ಲೆಡೆ ಪಸರಿಸದೆ ಹಾಗೆ ನೋಡಿಕೊಳ್ಳೋಣ. ಆಮೇಲೆ ಹಿಂದೆ ಬೆಂಕಿಹಾಕಿ ಈಗ ವಿರಮಿಸುತ್ತಿರುವವರನ್ನು ಹುಡುಕಿಕೊಂಡು ಹೋಗಬೇಕೆಂಬುದು ನನ್ನ ಅಭಿಪ್ರಾಯ.

ತನ್ನ ಏಕಚಕ್ರಾಧಿಪತ್ಯವನ್ನು ಎಂದೋ ಕಳೆದುಕೊಂಡು ದಿನದಿಂದ ದಿನಕ್ಕೆ ರಾಜಕೀಯವಾಗಿ ಕ್ಷೀಣಗೊಳ್ಳುತ್ತಿರುವ ಕಾಂಗ್ರೆಸ್ ಮತ್ತು ಸರ್ವಾಧಿಕಾರಿಯ ಕೊಬ್ಬಿನಿಂದ ಏಕಚಕ್ರಾಧಿಪತಿಯಾಗಲು ಹೊರಟಿರುವ ಬಿಜೆಪಿ ನಡುವೆ ನನ್ನ ಮೊದಲ ಶತ್ರು ಯಾರು ಎನ್ನುವ ಬಗ್ಗೆ ನನಗೆ ಗೊಂದಲಗಳಿಲ್ಲ. ಆದ್ದರಿಂದ ಬಿಜೆಪಿ ವಿರುದ್ಧದ ಕಠಿಣ ನಿಲುವು ಮತ್ತು ಕಾಂಗ್ರೆಸ್ ಬಗೆಗಿನ ಮೆದುನಿಲುವು ನನ್ನ ಕಾರ್ಯತಂತ್ರದ ಭಾಗವೆಂದು ನಾನು ತಿಳಿದುಕೊಂಡಿದ್ದೇನೆ.

ಹಳೆಯ ಸಾಮ್ರಾಜ್ಯ-ವೈಭವಗಳನ್ನೆಲ್ಲ ಕಳೆದುಕೊಂಡು ನೆಲಹಿಡಿದಿರುವ ರಾಜನ ಇತಿಹಾಸವನ್ನು ಕೆದಕಿ ಸಂಭವನೀಯ ಅಪಾಯಗಳ ಬಗ್ಗೆ ಮಾತನಾಡುವುದಕ್ಕಿಂತ, ಹೊಸಸಾಮ್ರಾಜ್ಯವನ್ನು ಕಟ್ಟಿಕೊಂಡು ವರ್ತಮಾನದಲ್ಲಿ ಜನವಿರೋಧಿಯಾಗಿ ಮೆರೆಯುತ್ತಿರುವವರ ಅಪಾಯದ ಬಗ್ಗೆ ಮಾತನಾಡುವುದು ಸರಿಯಾದ ನಿಲುವು ಎಂದು ನಾನು ನಂಬಿದ್ದೇನೆ. ಬಹುಶಃ ಪತ್ರಕರ್ತನಾಗಿದ್ದರೂ ಕೂಡಾ ನಾನು ಇದೇ

ನಿಲುವನ್ನು ಹೊಂದಿರುತ್ತಿದ್ದೆ. ಈ ಬಗ್ಗೆ ನನಗೆ ಗೊಂದಲಗಳಿಲ್ಲ. 'ಕಾಂಗ್ರೆಸ್ ಪಕ್ಷವನ್ನು ನೆಚ್ಚಿಕೊಳ್ಳುವುದೆಂದರೆ ಬಿಜೆಪಿಯನ್ನು ಬೆಳೆಸುವ ರಾಜಕಾರಣವೇ ಆಗುತ್ತದೆ' ಎಂಬ ನಿಮ್ಮ ಅಭಿಪ್ರಾಯವನ್ನು ನನಗೆ ಒಪ್ಪಲು ಕಷ್ಟವಾಗುತ್ತದೆ. ಇದಕ್ಕೆ ಇನ್ನಷ್ಟು ವಿವರಣೆ ಬೇಕಾಗುತ್ತದೆ.

'ಸದಾ ಹೆಚ್ಚುಮಾಡಿಕೊಳ್ಳುತ್ತಾ ಹೋಗುವ ಅಗತ್ಯ ಜೀವನಶೈಲಿಗೆ ಬದಲಾಗಿ ಒಂದು ಸರಳ, ಸಭ್ಯ ಎಂದು ಕರೆಯಬಹುದಾದ ಜೀವನಶೈಲಿಯನ್ನು ರೂಢಿಸುವ ಸಮಾಜವಾದಿ ರಾಜಕಾರಣ'ದ ಬಗ್ಗೆ ಲೋಹಿಯಾ ಪ್ರತಿಪಾದನೆಯನ್ನು ಉಲ್ಲೇಖಿಸಿದ್ದೀರಿ. 'ಅಂತಹದ್ದೊಂದು ರಾಜಕಾರಣವನ್ನು ಕಟ್ಟುವ ಸರ್ಕಾರ ಬರುವವರೆಗೆ ಅಭಿವ್ಯಕ್ತಿ ಸ್ವಾತಂತ್ರ್ಯದ ಮೌಲಿಕತೆಯ ಬಗ್ಗೆ ಮಾತನಾಡುವವರು ಅದನ್ನು ಪ್ರತಿಪಾದಿಸಬೇಕು' ಎಂದು ಹೇಳಿದ್ದೀರಿ.

ಸರಳತೆಯ ವಿಷಯ ಸಾಪೇಕ್ಷವಾದುದು ಮಾತ್ರವಲ್ಲ, ಇದಕ್ಕಾಗಿ ಒಂದು ನಿರ್ದಿಷ್ಟ ಮಾನದಂಡವನ್ನು ಕಂಡುಕೊಳ್ಳುವುದು ಕೂಡಾ ಸುಲಭವಲ್ಲ. ಇದರಿಂದಾಗಿ ಬಹಳಷ್ಟು ಸಂದರ್ಭಗಳಲ್ಲಿ ಸರಳತೆಯ ಬೋಧನೆ ಹಿಪೋಕ್ರೆಟಿಕ್ ಕೂಡಾ ಆಗಿರುತ್ತದೆ ಎಂದಷ್ಟೇ ಹೇಳಬಲ್ಲೆ.

ಇತ್ತೀಚಿನ ದಿನಗಳಲ್ಲಿ ಕಂಠಶೋಷಣೆ ಅತಿಯಾಗುತ್ತಿದೆಯೇನೋ ಎಂಬ ಗುಮಾನಿ ಕಾಡತೊಡಗುತ್ತಿದ್ದಾಗಲೇ ನನ್ನನ್ನು ಒಂದಷ್ಟು ಕೆಣಕಿ ಬರವಣಿಗೆಗೆ ಮರಳುವಂತೆ ಮಾಡಿದ ನಿಮಗೆ ಕೃತಜ್ಞನಾಗಿದ್ದೇನೆ.

ವಿಶ್ವಾಸಪೂರ್ವಕವಾಗಿ,
ದಿನೇಶ್ ಅಮಿನ್‌ಮಟ್ಟು

ಡಿಎಸ್ಸೆನ್ ಪ್ರತಿಕ್ರಿಯೆ

೨೬.೪.೨೦೧೭

ಪ್ರಿಯ ದಿನೇಶ್,

ಇದೇನಿದು! ಹಿರಿಯ, ಗುರು ಸಮಾನರಾದ ಇತ್ಯಾದಿ ಮುಜುಗರದ ಸಂಬೋಧನೆಗಳು? ದಯವಿಟ್ಟು ಇವೆಲ್ಲ ಬೇಡ. ನಾನೂ, ನೀವೂ ಸಮಕಾಲೀನ ಸಾಮಾಜಿಕ–ರಾಜಕೀಯ–ಸಾಂಸ್ಕೃತಿಕ ಪರಿಪ್ರೇಕ್ಷ್ಯವೊಂದರಲ್ಲಿ ಕನಿಷ್ಠ 'ರಾಜಕೀಯ ಸತ್ಯ'ದ ಹುಡುಕಾಟದಲ್ಲಿರುವ ಸಹ ಪ್ರಯಾಣಿಕರು ಮಾತ್ರ.

ಇರಲಿ, ನಿಮ್ಮ ಪರಿಷ್ಕೃತ ದೀರ್ಘ ಉತ್ತರಕ್ಕಾಗಿ ಧನ್ಯವಾದಗಳು. ನಿಮ್ಮ ಕೋಮುವಾದ ವಿರೋಧಿ ಹೋರಾಟದ ತುರ್ತು ಅಗತ್ಯ ಕುರಿತ ವಿವರಣೆಯನ್ನು ನೀವು ಈ ಹೋರಾಟದ ಒಂದು ಬದಿಯ ಸೈನಿಕನಂತೆ ನೀಡಿರುವುದರಿಂದ, ಇದರ ಇಡೀ

ಪರಿಪ್ರೇಕ್ಷ್ಯವೇ ಸರಳೀಕರಿಸಲ್ಪಟ್ಟು ಮಂಡಿತವಾಗಿದೆ ಎಂದು ನನಗನ್ನಿಸಿದೆ. ಯಾವುದೇ ಸಂದರ್ಭದ ರಾಜಕೀಯ ಪರಿಪ್ರೇಕ್ಷ್ಯದಲ್ಲಿ ಎರಡೂ ಬದಿಯ ಸೇನೆಗಳು ಮಾತ್ರವಲ್ಲದೆ, ಈ ಸೇನೆಗಳು ನಡೆಸಿರುವ ಪರಸ್ಪರ ಹೋರಾಟದ ಹಿಂದಿನ ತಾತ್ವಿಕತೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವ ಮತ್ತು ಎರಡೂ ಕಡೆಯ ಸೇನೆಗಳು ಹೇಳುವ ಚರಿತ್ರೆಯ ಆವೃತ್ತಿಗಳನ್ನು ಕೇಳಿ ತಮ್ಮದೇ ತೀರ್ಮಾನಗಳಿಗೆ ಬರಬಲ್ಲ ಪ್ರಜಾವರ್ಗವೂ ಇರುತ್ತದೆ ಎಂಬುದನ್ನೂ ನಾವು ತಿಳಿದಿರಬೇಕು. ಹಾಗೆ ತಿಳಿದಿದ್ದಾಗ ಸಮಕಾಲೀನ ರಾಜಕೀಯ ಚರಿತ್ರೆಯನ್ನು, ನಿರ್ದಿಷ್ಟವಾಗಿ ಕೋಮುವಾದಿ ರಾಜಕಾರಣದ ಚರಿತ್ರೆಯನ್ನು ಕಾಂಗ್ರೆಸ್-ಬಿಜೆಪಿ/ಸಂಘ ಪರಿವಾರದ ದ್ವಂದ್ವ ಹೋರಾಟದಂತೆಯೂ, ಕಾಂಗ್ರೆಸ್ ಈಗ ಮಾಜಿ ಅಪರಾಧಿ/ವಿರಮಿಸಿರುವ ಮುದುಕನಂತಲೂ ನೀವು ಪ್ರಸ್ತುತಪಡಿಸುವಂತೆ ಕಾಣಲು ಸಾಧ್ಯವಾಗುವುದಿಲ್ಲ.

ನಾನು ಈ ಚರಿತ್ರೆಯ ಸಂಕೀರ್ಣತೆಗಳನ್ನು ಇಲ್ಲಿ ವಿವರಿಸುವ ಪ್ರಯತ್ನ ಮಾಡಲಾರೆನಾದರೂ, ಸರಳವಾಗಿ ಹೇಳುವುದಾದರೆ, ಇಂದಿನ ಬಿಜೆಪಿಯ ಕೋಮುವಾದಿ ರಾಜಕಾರಣವನ್ನು ಕಾಂಗ್ರೆಸ್ಸಿನ ಆಂತರಿಕ ಗುಣವೇ ಆಗಿಹೋಗಿರುವಂತೆ ತೋರುವ ಹಣ ಮತ್ತು ಅಧಿಕಾರಗಳ ಪರಮ ಭ್ರಷ್ಟತೆ ಮತ್ತು ಅಷ್ಟೇ ಮುಖ್ಯವಾಗಿ ಅದರ ಹುಸಿ ಜಾತ್ಯತೀತತೆಯ ಚರಿತ್ರೆಗಳ ಫಲ ಮಾತ್ರವೆಂದೂ, ಬಿಜೆಪಿ ರಾಜಕಾರಣವನ್ನು ಶಕ್ತಿ ಮೀರಿ ಪ್ರಯತ್ನಿಸಿ ಹಿಮ್ಮೆಟ್ಟಿಸಿದ ಕೂಡಲೇ ಅಲ್ಲಿ ಬಂದು ಮತ್ತೆ ಕೂರುವುದು ಚರಿತ್ರೆಯಿಂದ ಯಾವ ಪಾಠವನ್ನೂ ಕಲಿಯಲಾಗದಷ್ಟು ದದ್ದು ಬಿದ್ದು ಹೋಗಿರುವ ಪಕ್ಷ ಕಾಂಗ್ರೆಸ್ಸೇ ಎಂದು ಪ್ರಜಾವರ್ಗ ಬಲ್ಲದು ಎಂಬುದನ್ನು ನಾವು ತಿಳಿದಿರಬೇಕು. ಮತ್ತು ಪ್ರಜಾವರ್ಗದ ಈ ತಿಳುವಳಿಕೆಯ ಪರಿಯನ್ನೂ ನಾವು ಅರಿತು ಗೌರವಿಸಬೇಕು. ನಾವು ಮಾಡುವ ಯಾವುದೇ ಹೋರಾಟ ಚರಿತ್ರೆಯ ಮುಂ-ಚಲನೆಗೆ ಕಾರಣವಾಗಬೇಕೇ ಹೊರತು ಹಿಂ-ಚಲನೆಗೆ ಅಲ್ಲ. ಆದುದರಿಂದ ನಾವು ಬಿಜೆಪಿಯನ್ನು ಖಂಡಿಸುವ ಪ್ರಮಾಣದಲ್ಲೇ ಆ ಖಂಡನೆಯ ಶಬ್ದಗಳನ್ನು ಎಣಿಸಿ ಅಷ್ಟೇ ಪ್ರಮಾಣದಲ್ಲಿ ಕಾಂಗೆಸ್ಸನ್ನು ಖಂಡಿಸುವ ಅಂಕಗಣಿತೀಯ ಕಸರತ್ತನ್ನು ಮಾಡುವ ಅಗತ್ಯವೇನೂ ಇಲ್ಲವಾದರೂ, ನೀವು ಪ್ರತಿಪಾದಿಸುವ ಹಾಗೆ ಕಾಂಗ್ರೆಸ್ಸಿನ ಪರವಾದ ಮೃದು ಧೋರಣೆ ಆತ್ಮಹತ್ಯಾಕಾರಿ ಎಂದೇ ನನ್ನ ಅಭಿಪ್ರಾಯ. (ವೈಯಕ್ತಿಕವಾಗಿ ನಿಮ್ಮ ಧೋರಣೆ ಮೃದುವಲ್ಲ; ನಿಮ್ಮ ಸದ್ಯದ ಸ್ಥಾನದ ಕಾರಣದಿಂದಲೋ ಏನೋ, ಅದರ ವಕ್ತಾರಿಕೆಯೇ ಆಗಿಬಿಟ್ಟಿರುವಂತಿದೆ.) ಅದು ಹೋರಾಟದ ವಿಶ್ವಾಸಾರ್ಹತೆಯನ್ನು ಭಂಗೊಳಿಸುತ್ತದೆ ಮತ್ತು ಇಂತಹ ಧೋರಣೆ ಈಗಾಗಲೇ ನಮ್ಮ ಜೊತೆಯಲ್ಲಿರುವವರಿಗೆ ಮೆಚ್ಚುಗೆಯಾಗಬಲ್ಲುದೇ ಹೊರತು, ಅನಿವಾರ್ಯವೆಂಬಂತೆ ಅವರ ಜೊತೆಯಲ್ಲಿರುವವರನ್ನಾಗಲೀ ಅಥವಾ ದ್ವಂದ್ವದಲ್ಲಿ ಅವರತ್ತ ನೋಡುತ್ತಿರುವವರನ್ನಾಗಲೀ ಸೆಳೆಯಲಾರದು. (ಚುನಾವಣೆಗಳು ಬಂದಾಗ ಕಣ್ಣ ನೋಡಿ ಯಾರಿಗೆ-ಕಾಂಗ್ರೆಸ್ಸೂ ಸೇರಿದಂತೆ-ಓಟು ಹಾಕಬೇಕೆಂಬ ನಿರ್ಧಾರವನ್ನು ಸದ್ಯಕ್ಕೆ ಕಾಯ್ದಿರಿಸೋಣ.)

ಇದು ಖಂಡಿತ ನೀವು ಭಾವಿಸಿರುವಂತೆ ಲೋಹಿಯಾ ಅವರ ಪುರಾತನ ಕಾಂಗ್ರೆಸ್ ವಿರೋಧಿ ಧೋರಣೆಯಿಂದ ಹುಟ್ಟಿದ ನಿಲುವಲ್ಲ. ನನ್ನಂತಹ ಲೋಹಿಯಾವಾದಿಗಳನೇಕರು (ಹಾಗೆಂದು ನನ್ನನ್ನು ನೀವು ಗುರುತಿಸುವುದಾದರೆ) ಮಧು ಲಿಮಯೆ ಅವರ 'ಕಾಂಗ್ರೆಸ್ ಉಳಿಸಿ' ಕರೆಯನ್ನೂ ಸಾಕಷ್ಟು ಕಾಲ ಪಾಲಿಸಿದ್ದಾರೆ. ಪಾಲಿಸಿ ನೋಡಿ ಭ್ರಮನಿರಸನಗೊಂಡಿದ್ದಾರೆ. ಗಾಂಧಿ ೧೯೪೭–೪೮ರಲ್ಲೇ ಸುಮ್ಮ ಸುಮ್ಮನೇ ಕಾಂಗ್ರೆಸ್ ಒಂದು ರಾಜಕೀಯ ಪಕ್ಷವಾಗಿ ಬೆಳೆಯದಂತೆ ಅದನ್ನು ವಿಸರ್ಜಿಸಿ ಎಂದು ಕರೆಕೊಡಲಿಲ್ಲ. ಆ ಕರೆಯಲ್ಲಿ ಅಂದಿನ ಕಾಂಗ್ರೆಸ್ ರಾಜಕಾರಣ ಬೆಳೆಯುತ್ತಿದ್ದ ರೀತಿ ನೀತಿಗಳ ಸೂಕ್ಷ್ಮ ಅವಲೋಕನವಿತ್ತು; ಹಾಗೇ ಅದು ಮುಂದೆ ಉಂಟುಮಾಡಲಿರುವ ಭೀಕರ ರಾಜಕೀಯ ಅನಾಹುತದ ಮುನ್ನೋಟವೂ ಇತ್ತು. ಆ ಭೀಕರ ಅನಾಹುತವೇ ಇಂದು ಬಿಜೆಪಿ ರಾಜಕಾರಣದ ರೂಪದಲ್ಲಿ ನಮ್ಮ ಮುಂದಿರುವುದು ಎಂಬುದು ನಮಗೆ ಗೊತ್ತಾದರೆ ಸಾಕು, ನಮ್ಮ ಸದ್ಯದ ಬಿಜೆಪಿ ವಿರೋಧಿ ಹೋರಾಟ ಎಷ್ಟು ಸ್ವಯಂಪರಾಭವದ ಅಪಾಯದಿಂದ ಕೂಡಿದೆ ಎಂಬುದು ಗೊತ್ತಾಗುತ್ತದೆ. ಒಂದು ಕಡೆ ತಮ್ಮ ಕರೆ ಸಫಲವಾಗದಿರುವುದನ್ನೂ, ಇನ್ನೊಂದು ಕಡೆ– ಗಾಂಧಿವಾದಿ ಅರ್ಥಶಾಸ್ತ್ರಜ್ಞ ಜೆ.ಸಿ. ಕುಮಾರಪ್ಪ ಅವರ ಪ್ರಕಾರ–ಆರೆಸ್ಸೆಸ್ ಎಲ್ಲ ಕಡೆ ಬೆಳೆಯುತ್ತಿರುವುದನ್ನೂ ಗಮನಿಸಿದ್ದ ಗಾಂಧಿ, ಕಾಂಗ್ರೆಸ್ಸಿಗೆ ಎಚ್ಚರಿಕೆಯಾಗಿ ಲೋಕಸೇವಕ ಸಂಘವೆಂಬ ಸ್ವಯಂಸೇವಕ ಪಡೆಯನ್ನು ರೂಪಿಸಲು ಪ್ರಯತ್ನಿಸುತ್ತಿರುವಾಗಲೇ ಹತ್ಯೆಗೀಡಾದರೆಂಬುದನ್ನೂ ನಾವು ಗಮನಿಸಬೇಕು).

ಹಾಗಾಗಿ ನಮ್ಮ ಈ ಹೋರಾಟ ಬಿಜೆಪಿ ಮತ್ತು ಕಾಂಗ್ರೆಸ್ ಎರಡರಲ್ಲೂ ಪ್ರಜಾತಾಂತ್ರಿಕತೆಯ ಆತ್ಮಸಾಕ್ಷಿಯನ್ನು ಜಾಗೃತಗೊಳಿಸುವಂತಲ್ಲದಿದ್ದರೂ, ಚುನಾವಣಾ ರಾಜಕೀಯ ನೆಲೆಯಲ್ಲಿ ಕಟು ಎಚ್ಚರವನ್ನು ಉಂಟು ಮಾಡುವಂತಿರಬೇಕು. Since Congress is refusing to die its natural death, we should at least strive to make it to completely reinvent itself. ಹಾಗಾಗಿ ಇಂದಿನ ಸೋನಿಯಾ ಗಾಂಧಿ ಕುಟುಂಬ ಮತ್ತು ಅದರ ಆಸ್ಥಾನ ವಿದೂಷಕರ ಕೂಟದಂತೆ ಕಾಣುವ ಅದರ ರಾಜ್ಯ ನಾಯಕರನ್ನು ನೆಚ್ಚಿಕೊಂಡು ನಿಮ್ಮ ಬಿಜೆಪಿ ವಿರೋಧಿ ರಾಜಕಾರಣವನ್ನು ಮುನ್ನಡೆಸಲಾರಿರಿ ಎಂದೇ ನನ್ನ ಅಭಿಪ್ರಾಯ. ಸಾಮಾಜಿಕ ಮಾಧ್ಯಮಗಳ ಜಾಲದಲ್ಲಿನ ನಿಮ್ಮ ಸಂಕಷ್ಟವನ್ನೂ (ಅದನ್ನು ನಾನೂ ನನ್ನದೇ ಮಿತಿಗಳಲ್ಲಿ ಮತ್ತು ರೀತಿಯಲ್ಲಿ ಅನುಭವಿಸಿದ್ದೇನೆ), ಈ ಸಂಬಂಧ ನೀವು ಅನ್ಯರ ಮೇಲೆ ಮಾಡುವ ಪಲಾಯನವಾದದ ಆರೋಪವನ್ನೂ ನಾನು ಈ ಹಿನ್ನೆಲೆಯಲ್ಲೇ ನೋಡಬಯಸುತ್ತೇನೆ. ಜೊತೆಗೆ, ಅದು ರಣರಂಗವೆಂದು ಗೊತ್ತಿದ್ದೂ ಅದನ್ನು ಹೊಕ್ಕ ಸೈನಿಕ, ವಿರೋಧಿಗಳ ಹೊಡೆತಗಳ ಬಗ್ಗೆ ದೂರಬಾರದು ಅಲ್ಲವೆ? ನನ್ನ ವಾದದ ಸಾರಾಂಶವಾದರೂ ಇಷ್ಟೆ: ಕಾಂಗ್ರೆಸ್ ಇರುವವರೆಗೆ ಬಿಜೆಪಿಯೂ, ಅದರ ರಾಜಕಾರಣವೂ ಇರುತ್ತದೆ. ಏಕೆಂದರೆ ಅವೀಗ ಅವಳಿ–ಜವಳಿಗಳಾಗಿವೆ. ಹಾಗಾಗಿ ಬಿಜೆಪಿಯನ್ನು ಇಲ್ಲವಾಗಿಸಲು ಏನು ಮಾಡಬೇಕು ಅಥವಾ ಬಿಜೆಪಿಯನ್ನು ಬದಲಾಯಿಸಲು ಏನು ಮಾಡಬೇಕು ನೀವೇ ಯೋಚಿಸಿ.

ನನ್ನ ಮೇಲಿನ ಮಾತುಗಳ ಹಿನ್ನೆಲೆಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ, ಅದರ ಆತ್ಮಹತ್ಯೆ, ಇವುಗಳಿಗೂ ಕೊಳ್ಳುಬಾಕ ಸಮಾಜಕ್ಕೂ ಇರುವ ಸಂಬಂಧ, ಈ ಕುರಿತ ನಿಮ್ಮ ನಿಲುವು, ವಿವರಣೆ ಹಾಗೂ ಹಿಂದೂ ಧರ್ಮ ಮತ್ತು ಆರೆಸ್ಸೆಸ್ ಕುರಿತ ವಿಶ್ಲೇಷಣೆಗಳೆಲ್ಲವೂ ನಿಜವಾಗಿಯೂ ಆಳದ ದ್ವಂದ್ವದಲ್ಲಿರುವ; ಆದರೆ ಬಹುದೂರ ಸಾಗಿರುವ ಸಹಜ ಸೈನಿಕ ಆವೇಶದ ಒತ್ತಡಗಳ ಕಾರಣದಿಂದಾಗಿ ಅದನ್ನೊಪ್ಪಿಕೊಳ್ಳಲು ಸಾಧ್ಯವಾಗದ ವ್ಯಕ್ತಿಯ ಸುತ್ತಿಬಳಸಿದ ಸಮಜಾಯಿಷಿಗಳಂತೆ ಮಾತ್ರ ನನಗೆ ಕೇಳಿಸುತ್ತಿವೆ ಎಂದು ಹೇಳಿ ನನ್ನ ಕಡೆಯಿಂದ ಈ ಪತ್ರ ಸಂವಾದವನ್ನು ಮುಗಿಸುತ್ತಿರುವೆ.

ವಂದನೆಗಳೊಂದಿಗೆ,

ಡಿ.ಎಸ್. ನಾಗಭೂಷಣ

ಗಾಂಧಿ ಮತ್ತು ಸಮಾಜವಾದಿಗಳು: ರಾಮಚಂದ್ರ ಗುಹಾ ಅವರೊಂದಿಗೆ ಒಂದು ಸಂವಾದ

ಹೆಸರಾಂತ ಚರಿತ್ರಕಾರ ಶ್ರೀ ರಾಮಚಂದ್ರ ಗುಹಾ ಅವರು ಈ ಬಾರಿಯ (೨೦೧೭ರ ಅಕ್ಟೋಬರ್) ನೀನಾಸಂ ಸಂಸ್ಕೃತಿ ಶಿಬಿರದಲ್ಲಿ ಅಕ್ಟೋಬರ್ ಎರಡರಂದು ಗಾಂಧಿಯ ಬಗ್ಗೆ ಮಾತನಾಡಿದರು. ಇದು ಅಲ್ಲಿದ್ದ ಹೊಸ ತಲೆಮಾರಿಗೆ ಗಾಂಧಿಯನ್ನು ಪರಿಚಯಿಸುವ ತಮ್ಮ ಪ್ರಯತ್ನ ಎಂದು ಹೇಳುತ್ತಾ ಅವರು, ಗಾಂಧಿಯವರು ಜಿನ್ನಾ, ಸಾವರ್ಕರ್-ಭಗತ್‌ಸಿಂಗ್, ನೆಹರೂ ಮತ್ತು ಅಂಬೇಡ್ಕರ್ ಅವರೊಂದಿಗೆ ನಡೆಸಿದ ಸಂವಾದಗಳ ಬಗ್ಗೆ ಮಾತನಾಡಿದರು.

ಇದರ ಮುಂದುವರಿಕೆಯಾಗಿ, ಅಂದೇ ಮಧ್ಯಾಹ್ನ ಗುಹಾ ಅವರೊಂದಿಗೆ ಸಂವಾದ ಗೋಷ್ಠಿಯೂ ಆಯೋಜಿತವಾಗಿತ್ತು. ನೀನಾಸಂನ ಕೆ.ವಿ. ಅಕ್ಷರ ಅವರು, ಈ ಗೋಷ್ಠಿಯಲ್ಲಿ ಗುಹಾ ಅವರನ್ನು ಕೆಲವು ಪ್ರಶ್ನೆಗಳನ್ನು ಕೇಳುವ ಮೂಲಕ ಗೋಷ್ಠಿಯನ್ನು ಆರಂಭಿಸಬೇಕೆಂದು ನನ್ನನ್ನು ಕೋರಿದರು. ಬೆಳಗಿನ ಗೋಷ್ಠಿಯ ಗುಹಾ ಅವರ ಉಪನ್ಯಾಸದ ಬಗ್ಗೆ ನನ್ನದೂ ಕೆಲವು ಪ್ರಶ್ನೆಗಳಿದ್ದುದರಿಂದ ನಾನು ಪ್ರಶ್ನೆಗಳನ್ನು (ಮೂರು ದಶಕಗಳ ಕಾಲ ಬೆಂಗಳೂರಿನಲ್ಲಿದ್ದರೂ ಕನ್ನಡ ಮಾತನಾಡಲಾಗದ ಅವರನ್ನು ಕೆಣಕಲೆಂದೇ, ಕನ್ನಡದಲ್ಲಿ) ಕೇಳಿದೆ. ಅವಕ್ಕೆ ಗುಹಾ ಅವರು ನನ್ನ ಪ್ರಕಾರ ಸಮರ್ಪಕವಾದ ಉತ್ತರಗಳನ್ನು ನೀಡಲಿಲ್ಲ. ಅವರು ಉತ್ತರ ನೀಡಿದ ಶೈಲಿಯೂ ನನ್ನನ್ನು ಸ್ವಲ್ಪ ರೇಗಿಸಿತು ಎಂದೇ ಹೇಳಬೇಕು ಮತ್ತು ಚರಿತ್ರೆ ಕುರಿತ ನನ್ನ ಓದನ್ನು- ಅದೆಷ್ಟೇ ಸೀಮಿತವಾದದ್ದಾದರೂ_ ಅವರು ಕೀಳುಗರೆದಂತಿತ್ತು. ಅವರು ನನ್ನನ್ನು ನನ್ನ ವಾದಕ್ಕೆ ಸಾಕ್ಷ್ಯಗಳನ್ನು ಕೇಳಿದರು. ನಾನು ತಿರುಗಿ ಅವರ ವಾದಕ್ಕೆ ಸಾಕ್ಷ್ಯಗಳನ್ನು ಕೇಳುವಂತಿರಲಿಲ್ಲವಲ್ಲ? ಏಕೆಂದರೆ ಅವರು ಖ್ಯಾತ ಚರಿತ್ರಕಾರರು ಮತ್ತು ಅಂದಿನ ನಮ್ಮ ಅತಿಥಿಗಳು! ಹಾಗಾಗಿ ನಾನು ಊರಿಗೆ ವಾಪಸಾದ ನಂತರ ಸಂಬಂಧಪಟ್ಟ ಚರಿತ್ರೆಯ ಭಾಗವನ್ನು ಇನ್ನೊಮ್ಮೆ ಓದಿ ಅವರಿಗೊಂದು ಪತ್ರ ಮೇಲ್ ಮಾಡಿದೆ.

ಆಶ್ಚರ್ಯವೆಂದರೆ ಅವರಿಂದ ಕೂಡಲೇ ಉತ್ತರ ಬಂತು. ಆದರೆ ಅವರು ಆ ಉಪನ್ಯಾಸದ ದಿನದಂತೆಯೇ ಖಡಕ್ಕಾಗಿ ತಮ್ಮ ವಾದವೇ ಸರಿ ಎಂಬಂತೆ ಉತ್ತರಿಸಿದ್ದರು. ಆದರೆ ನನ್ನ ಓದಿನ ಬಗ್ಗೆ ನನಗೆ ವಿಶ್ವಾಸವಿದ್ದುದರಿಂದ ಮತ್ತು ಅವರ ಚರಿತ್ರೆಯ ಓದಿನ ಬಗ್ಗೆ ನನಗೆ ಮೊದಲಿಂದಲೂ ಕೆಲವು ಸಂದೇಹಗಳು ಮತ್ತು ಆಕ್ಷೇಪಗಳು ಇದ್ದುದರಿಂದ ನಾನು ಸುಮ್ಮನಿರಲು ಸಾಧ್ಯವಾಗದೆ ಅವರನ್ನು ಸ್ವಲ್ಪ ರೇಗಿಸುವಂತೆಯೇ ಉತ್ತರ ಬರೆದೆ. ಅದಕ್ಕೂ ತಕ್ಷಣ ಉತ್ತರ ಬಂತು! ಅದರಲ್ಲೂ–ಅವರು ಸ್ವಲ್ಪ ಹೊರಳಿಕೊಂಡಿದ್ದರಾದರೂ– ತಮ್ಮ ಹಠ ಬಿಟ್ಟಿರಲಿಲ್ಲ. ನಾನೂ ಹಠ ಬಿಡುವವನೇ? ನಾನು ಮತ್ತೆ ಬರೆದೆ.

ಹೀಗೆ ನಮ್ಮ ನಡುವೆ ನಾಲ್ಕು ದಿನಗಳ ಕಾಲ ನಿರಂತರ ಮೇಲ್ ಸಂಚಾರವಾಯಿತು. ಆ ಮೇಲ್‌ಗಳಲ್ಲಿ ಮೂಲ ವಾದ–ವಿಚಾರ ಇನ್ನಷ್ಟು ವಿಷಯಗಳಿಗೆ ವಿಸ್ತರಿಸಿಕೊಂಡು ಚರ್ಚೆ ಬಿಸಿಯೇರಿತು. ಕೊನೆಗೂ ಅವರು ನನ್ನ ವಾದಕ್ಕೆ ಪೂರಕವಾಗಿ ನಾನು ಒದಗಿಸಿದ್ದ ಸಾಕ್ಷ್ಯವನ್ನ–ಅದು ಈವರೆಗೆ ತಮ್ಮ ಗಮನಕ್ಕೆ ಬಾರದಿದ್ದುದರ ಬಗ್ಗೆ ವಿಷಾದ ವ್ಯಕ್ತಪಡಿಸಿ–ಒಪ್ಪಿಕೊಂಡು ನನ್ನ ಮಿತ್ರರೇ ಆದರು. ಅವರು ನನ್ನ ಮಿತ್ರರಾದರು ಎಂಬ ಸಂಗತಿಗಿಂತ ಹೆಚ್ಚಾಗಿ ಈ ವಿಚಾರ ವಿನಿಮಯದ ಸಂದರ್ಭದಲ್ಲಿ ನನ್ನನ್ನು ತಾಕಿದ್ದು, ಸಾರ್ವಜನಿಕವಾಗಿ ತುಂಬ ದೊಡ್ಡ ಹೆಸರು ಮಾಡಿರುವ ಈ ಚರಿತ್ರಕಾರ ನನ್ನಂತಹ ಅನಾಮಿಕನೊಬ್ಬನೊಡನೆ–ಅದೂ ನನ್ನ ಬಹು ದುರ್ಬಲ ಇಂಗ್ಲಿಷ್‌ಗೆ ಮುಖಾಮುಖಿಯಾಗುತ್ತಾ–ಸಂವಾದ ನಡೆಸಲು ತೋರಿದ ಆಸಕ್ತಿ ಮತ್ತು ಅಂತಿಮವಾಗಿ ತನ್ನೆಲ್ಲ ಖ್ಯಾತಿಯನ್ನು ಬದಿಗಿರಿಸಿ ತನ್ನ ವಿಶೇಷಜ್ಞತೆಯ ಹೊರತಾಗಿಯೂ ತನಗರಿವಿಲ್ಲದ ಕೆಲವು ಸಂಗತಿಗಳು ಇವೆ ಎಂಬುದನ್ನು ಒಪ್ಪಿಕೊಳ್ಳುವಲ್ಲಿ ತೋರಿದ ನಮ್ರತೆ.

ಡಿ. ಎಸ್. ನಾಗಭೂಷಣ

ರಾಮಚಂದ್ರ ಗುಹಾ ಅವರಿಗೆ ಪತ್ರ

೯ ಅಕ್ಟೋಬರ್ ೨೦೧೭

ಪ್ರೀತಿಯ ಶ್ರೀ ರಾಮಚಂದ್ರ ಗುಹಾ

ನಾನು ಡಿ.ಎಸ್.ನಾಗಭೂಷಣ. ನೀನಾಸಂ (ಹೆಗ್ಗೋಡು) ಕಾರ್ಯಕ್ರಮದ ಮಧ್ಯಾಹ್ನದ ಗೋಷ್ಠಿಯ ಪ್ರಾರಂಭದಲ್ಲಿ ನಿಮಗೆ ಕನ್ನಡದಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿದ್ದೆ. ನೀವು ನನ್ನ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಿರಲಿಲ್ಲ. ಬಹುಶಃ ಅವು ನಿಮಗೆ ಸಂಪೂರ್ಣವಾಗಿ ಹಾಗೂ ಸಮರ್ಪಕವಾಗಿ ಭಾಷಾಂತರಿಸಲ್ಪಟ್ಟಿರದೇ ಇರಬಹುದು. ಕಾಂಗ್ರೆಸ್ ಸಮಾಜವಾದಿಗಳೊಂದಿಗೆ ಗಾಂಧಿಯವರ ಸಂವಾದದ ಬಗೆಗಿನ ನನ್ನ ಪ್ರಶ್ನೆಯನ್ನು ನೀವು ಉತ್ತರಿಸಿದಿರಿ, ಆದರೆ ನೀವು ನೀಡಿದ ಉತ್ತರ ವಾಸ್ತವಾಂಶಗಳ ಮೇಲೆ ಆಧರಿತವಾಗಿಲ್ಲ ಎಂದು ನನ್ನ ಅನಿಸಿಕೆ. ಸಮಾಜವಾದಿಗಳು ಗಾಂಧಿಯವರ ಸಂಪರ್ಕದ ಹೊರವೃತ್ತದ ಹೊರವೃತ್ತದಿಂದಲೂ ಹೊರಗಿದ್ದವರು ಮತ್ತು ಹಾಗಾಗಿ

ಗಾಂಧಿ ಅವರೊಡನೆ ಹೇಳಿಕೊಳ್ಳುವಂತಹ ಮಾತುಕತೆ ನಡೆಸಿರಲಿಕ್ಕಿಲ್ಲ ಎಂದು ನೀವು ಹೇಳಿದಿರಿ. ಇದಕ್ಕೆ ಪ್ರತಿಯಾಗಿ ನಾನು ಗಾಂಧಿಯವರು ಸಮಾಜವಾದಿಗಳ ನಾಯಕರಾಗಿದ್ದ ಜೆಪಿ ಅವರನ್ನು ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಸೂಚಿಸಿದ್ದು ನಿಮಗೆ ತಿಳಿದಿದೆಯೇ ಎಂದು ಕೇಳಿದ್ದೆ. ಆದರೆ ನೀವು ಇದಕ್ಕೆ ಆಧಾರ ಬೇಕೆಂದು ಕೇಳಿದಿರಿ! ನೀವು ಆ ಬೆಳಿಗ್ಗೆ ಭಾಷಣದಲ್ಲಾಡಿದ ಮಾತುಗಳಿಗೆಲ್ಲ ನಾನು ಕೂಡ ನಿಮ್ಮಲ್ಲಿ ಆಧಾರ ಕೇಳಬಹುದಿತ್ತು. ಆದರೆ ನೀವು ನಮ್ಮ ಅತಿಥಿಯಾಗಿದ್ದರಿಂದ ನಿಮ್ಮನ್ನು ಮುಜುಗರಕ್ಕೀಡುಮಾಡಲು ಬಯಸದೇ ನಾನು ಹಾಗೆ ಕೇಳಲಿಲ್ಲ. ಅಷ್ಟಲ್ಲದೇ ಪ್ರಶ್ನೋತ್ತರ ಸಮಯದ ಹೆಚ್ಚಿನ ಭಾಗವನ್ನು ನಿಮ್ಮೊಡನೆ ವಾಗ್ವಾದಕ್ಕಾಗಿ ಬಳಸಲು ನನಗೆ ಇಷ್ಟವಿರಲಿಲ್ಲ. ನಾವೇ ನಂತರ ನೋಡಿದಂತೆ, ಉಳಿದವರಿಗೂ ಕೂಡ ಬಹಳ ಪ್ರಶ್ನೆಗಳಿದ್ದವು.

ನಾನು ಅಂದು ಕೇಳಿದ ಎಲ್ಲ ಪ್ರಶ್ನೆಗಳನ್ನೂ ಮೊದಲು ಪಟ್ಟಿಮಾಡುತ್ತೇನೆ. ೧. ನೀವು ಸಭಿಕರಿಗೆ ಗಾಂಧಿಯವರನ್ನು ಪರಿಚಯಿಸಲು ಆಯ್ದ ನಾಲ್ಕು ಸಂಭಾಷಣೆಗಳನ್ನು ಆಯಲು ನಿರ್ದಿಷ್ಟ ಕಾರಣಗಳೇನಾದರೂ ಇದ್ದವೇ? ಈ ನಾಲ್ಕು ಸಂಭಾಷಣೆಗಳನ್ನು ಗಾಂಧಿಯವರ ಬದುಕಿನ ಅತ್ಯಂತ ಮುಖ್ಯವಾದ ಸಂಭಾಷಣೆಗಳು ಎಂದು ನೀವು ಭಾವಿಸುತ್ತೀರಾ? ಗಾಂಧಿಯವರು ತಮ್ಮೊಂದಿಗೇ ನಡೆಸಿದ ಹಲವು ಸಂಭಾಷಣೆಗಳು ಅವರು ಇತರರೊಂದಿಗೆ ನಡೆಸಿದ ಸಂಭಾಷಣೆಗಳಿಗಿಂತ ಮುಖ್ಯವಾಗಿವೆಯೆಂದು ನಾನು ಭಾವಿಸಿರುವೆ. ನಾನಾದರೋ ಈ ಕೆಳಗಿನ ಸಂಭಾಷಣೆಗಳು ಗಾಂಧಿಯವರ ಬದುಕಿನ ಅತಿ ಮುಖ್ಯ ಸಂಭಾಷಣೆಗಳೆಂದು ಹೆಸರಿಸಿದ್ದೆ. ೧. ಧರ್ಮ ಮತ್ತು ರಾಜಕೀಯದ ಸಂಬಂಧದ ಕುರಿತಾಗಿ ಗಾಂಧಿಯವರ ಚಿಂತನೆಗಳಿಗೆ ಬುನಾದಿಯಾದ, ಗಾಂಧಿಯವರು ರಸ್ಕಿನ್, ಥೋರೂ, ಟಾಲ್‌ಸ್ಟಾಯ್ ಅವರ ಬರಹಗಳೊಂದಿಗೆ ನಡೆಸಿದ ಸಂಭಾಷಣೆಗಳು. ೨. ಗಾಂಧಿಯವರು ನಿಜವಾದ ಹಿಂದೂ ಧರ್ಮವನ್ನು ಕಂಡುಕೊಳ್ಳಲು ಜೀವನದಾದ್ಯಂತ ಸಾಂಪ್ರದಾಯಿಕ ಹಿಂದೂ ಧರ್ಮದೊಡನೆ ನಡೆಸಿದ ಸಂಭಾಷಣೆ. ಗಾಂಧಿ ಹಾಗೂ ಅಂಬೇಡ್ಕರ್ ಅವರ ನಡುವಿನ ಸಂಧಾನದ ಯಾವುದೇ ಪ್ರಯತ್ನಕ್ಕೆ ತಳಹದಿಯಾಗಬಲ್ಲ ಸಂಭಾಷಣೆ ಇದು ಎನ್ನುವುದು ನನ್ನ ಭಾವನೆ. ೩. ಬೇರೆ ಬೇರೆ ಸನ್ನಿವೇಶಗಳಲ್ಲಿ ಅವರು ವಿಭಿನ್ನ ವಿಚಾರಗಳ ಕುರಿತು ಕಾಂಗ್ರೆಸ್ ಸೋಷಿಯಲಿಸ್ಟ್‌ರು, ಮುಖ್ಯವಾಗಿ ಜೆಪಿ, ಲೋಹಿಯಾ ಮತ್ತು ಕಮಲಾದೇವಿ ಚಟ್ಟೋಪಾಧ್ಯಾಯ ಅವರೊಡನೆ ನಡೆಸಿದ ಸಂಭಾಷಣೆ. ೪. ಅವರು ಡಾ.ಅಂಬೇಡ್ಕರ್ ಅವರೊಡನೆ ನಡೆಸಿದ ಸಂಭಾಷಣೆ.

ಇನ್ನು ನನ್ನ ಕೊನೆಯ ಪ್ರಶ್ನೆ, ಹಿಂದೂ ಧರ್ಮದ ಸಾಂಪ್ರದಾಯಿಕ ಆವೃತ್ತಿಯೊಂದಿಗೆ ಗಾಂಧಿಯವರು ನಡೆಸಿದ ಸಂವಾದಗಳ ಮೂಲಕ ಪುನರನ್ವೇಷಿಕೊಂಡ ಮತ್ತು ಸನಾತನ ಧರ್ಮವೆಂದು ಅವರು ಕರೆದ–ಆದರೆ ಇತರರು ಮಡಿವಂತಿಕೆ ಧರ್ಮವೆಂದು ತಪ್ಪಾಗಿ ಅರ್ಥೈಸಿದ–ನಿಜವಾದ ಹಿಂದೂ ಧರ್ಮವನ್ನು ಹೊರಗಿಟ್ಟು ನೀವು ಇಂದು ಗಾಂಧಿ–ಅಂಬೇಡ್ಕರ್ ನಡುವಿನ ಸಮನ್ವಯಕ್ಕಾಗಿ ಯಾವ (ತಾತ್ವಿಕ) ಆಧಾರದ ಮೇಲೆ ನಿಮ್ಮ ವಾದವನ್ನು ಮಂಡಿಸುತ್ತೀರಿ? ಅದರಲ್ಲಿಯೂ ಅಂಬೇಡ್ಕರ್ ಅವರು ಬರೆದ 'ಕಾಂಗ್ರೆಸ್

ಮತ್ತು ಗಾಂಧಿ ಅಸ್ಪೃಶ್ಯರಿಗೆ ಮಾಡಿದ್ದೇನು?' ಎನ್ನುವ ಗಾಂಧಿಯವರ ಮೇಲೆ ತುಂಬ ರೂಕ್ಷವಾದ ವೈಯಕ್ತಿಕ ದಾಳಿ ಮಾಡಿರುವ ಲೇಖನವನ್ನು ಓದಿದ ನಂತರವೂ? ನಿಮ್ಮ ಭಾಷಣದ ಕುರಿತು ನನ್ನ ಕೊನೆಯ ಆಕ್ಷೇಪಣೆ, ನಿಮ್ಮ ಮೋದಿ ವಿರೋಧಿ ಧೋರಣೆ ಬಹಳ ಸರಳೀಕೃತವಾದದ್ದು ಎಂಬುದಾಗಿತ್ತು. ಏಕೆಂದರೆ, ಮೋದಿಯವರ ವಿರೋಧವು ಬಳಲಿ ತುಕ್ಕು ಹಿಡಿಯುತ್ತಿರುವ ಜಾತ್ಯತೀತತೆಯ ಮೇಲಷ್ಟೇ ನಿಲ್ಲಲು ಸಾಧ್ಯವಿಲ್ಲ ಎಂಬುದು ಮತ್ತು ಇದಕ್ಕೆ ಇನ್ನೂ ಸಧೃಡವಾದ ರಾಜಕೀಯ ವಿವರಣೆಯ ಅಗತ್ಯವಿದೆ ಎಂಬುದು ನನ್ನ ಅನ್ನಿಸಿಕೆ.

ಆದರೆ ನೀವು ಕಾಂಗ್ರೆಸ್ ಸಮಾಜವಾದಿಗಳ ಬಗ್ಗೆಯ ಪ್ರಶ್ನೆಯನ್ನಷ್ಟೇ ವಿವರವಾಗಿ ಉತ್ತರಿಸಲು ಆಯ್ದುಕೊಂಡಿರಿ. ನೀವು ಆಧುನಿಕ ಭಾರತದ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಪರಂಪರೆಗೆ ಸಮಾಜವಾದಿಗಳ ಕೊಡುಗೆಯನ್ನು ಪ್ರಶಂಸಿಸತೊಡಗಿದಿರಿ ಮತ್ತು ಈ ಸಮಾಜವಾದಿ ಪರಂಪರೆಯು ಕಾಣೆಯಾಗಬಾರದಿತ್ತೆಂದು, ವಿಪರೀತಗಳಿಲ್ಲದ ಈ ಪರಂಪರೆಯು ಇವತ್ತಿನ ರಾಜಕೀಯ ವೈಪರೀತ್ಯಗಳ ಸನ್ನಿವೇಶದಲ್ಲಿ ಉಪಯುಕ್ತವಾಗಬಹುದಿತ್ತೆಂಬ ನಿಟ್ಟಿನಲ್ಲಿ, ವಿಷಾದ ವ್ಯಕ್ತಪಡಿಸಿದಿರಿ. ಆದರೆ ಹೀಗೆ ಹೇಳುವಾಗ ಗಾಂಧಿಯವರ ಕಾಲದಲ್ಲಿ ಹಾಗೂ ಅವರನ್ನು ಅನುಸರಿಸುವವರಿಂದ ಪ್ರಾರಂಭವಾದ ಈ ಪರಂಪರೆ/ಚಳುವಳಿ ಗಾಂಧಿಯವರೊಡನೆ ಹೊಂದಿದ ಸಂಬಂಧದ ಬಗ್ಗೆ ನೀವು ಮರುಯೋಚಿಸಬೇಕಿತ್ತು. ಸಮಾಜವಾದಿಗಳು ಗಾಂಧಿಯವರ ಒಡನಾಟದ ಹೊರವೃತ್ತದ ಹೊರವೃತ್ತದಿಂದ ಕೂಡ ಹೊರಗಿದ್ದರು ಎನ್ನುವ ನಿಮ್ಮ ಹೇಳಿಕೆ ನೀವು ಇತಿಹಾಸವನ್ನು ಮಾಲುಗಣ್ಣಿನಿಂದ ಓದಿದ್ದೀರೆಂದು ತೋರಿಸುತ್ತದೆ.

ಗಾಂಧಿಯವರ ಸಮಗ್ರ ಬರಹಗಳ ಸಾವಿರಾರು ಪುಟಗಳ ಸಂಪುಟಗಳನ್ನು ನೀವು ಓದಿದ್ದು, ಅದರಲ್ಲಿ ಗಾಂಧಿಯವರು ಸಮಾಜವಾದಿಗಳೊಡನೆ ಸಂಭಾಷಣೆ ನಡೆಸಿದ್ದರೆಂಬ ಯಾವುದೇ ಕುರುಹೂ ಕೂಡ ಕಾಣಲಿಲ್ಲ ಎಂದು ಹೇಳಿದಿರಿ. ಆದರೆ ಹೇರಳವಲ್ಲದಿದ್ದರೂ ಅದರ ಕುರುಹಂತೂ ಇದೆ. ದಯವಿಟ್ಟು ೧೯೪೭, ಮೇ ೨೭ರ ನಮೂದನೆಯನ್ನು ಗಮನಿಸಿ. ಜೆಪಿ ಅವರ ನಾಯಕತ್ವದಲ್ಲಿ ಸಮಾಜವಾದಿಗಳ ಗುಂಪೊಂದು ಗಾಂಧಿಯವರೊಡನೆ ನಡೆಸಿದ ದೀರ್ಘ (ಸುಮಾರು ೩-೪ ಪುಟಗಳಷ್ಟು) ಸಂಭಾಷಣೆ ಸಿಗುತ್ತದೆ. ಇದು ನನ್ನಂತಹ ಓರ್ವ ಸಾಮಾನ್ಯ ಓದುಗನಿಗೆ ಕಂಡಿದ್ದು, ವೃತ್ತಿಪರರಾದ ನಿಮಗೆ ಇನ್ನೂ ಹೆಚ್ಚಿನ ಉದಾಹರಣೆಗಳು ದೊರೆಯಬಹುದು. (ನಂತರದ ನನ್ನ ಓದಿನ ಪ್ರಕಾರ ಇಂತಹ ಇನ್ನೂ ಹತ್ತಾರಿವೆ.) ಆದರೆ ಇದೇ ಸಮಯದಲ್ಲಿ ಗಾಂಧಿಯವರ ಇತಿಹಾಸವನ್ನು ಅರ್ಥ ಮಾಡಿಕೊಳ್ಳಲು ಗಾಂಧಿಯವರ ಸಮಗ್ರ ಬರಹಗಳಷ್ಟೇ ಆಧಾರವಾಗಲಾರವು ಎಂಬುದನ್ನು ನಾನು ನಿಮಗೆ ನೆನಪಿಸಬೇಕು. ವಿಶೇಷವಾಗಿ ಸಮಾಜವಾದಿಗಳೊಂದಿಗೆ ಗಾಂಧಿಯವರ ಸಂಬಂಧದ ಕುರಿತಾಗಿ ನೀವು ಮರುಯೋಚಿಸಲು ಸಮಾಜವಾದಿ ನಾಯಕರಾಗಿದ್ದ ಜೆಪಿ, ಲೋಹಿಯಾ, ಅಶೋಕ್ ಮೆಹ್ತಾ, ಅಚ್ಯುತ್ ಪಟವರ್ಧನ್ ಮುಂತಾದವರ ಜೀವನಚರಿತ್ರೆ ಹಾಗೂ ಸಂಪೂರ್ಣ ಬರಹಗಳನ್ನು ಕೂಡ ನೀವು ಓದಬೇಕಾಗುತ್ತದೆ.

೧೯೩೪ರಲ್ಲಿ ಸಮಾಜವಾದಿ ಕಾಂಗ್ರೆಸ್ ಪಕ್ಷ ಸ್ಥಾಪಿತವಾದಾಗ ಗಾಂಧಿ ಅದನ್ನು ಸ್ವಾಗತಿಸಿದ್ದರು. ಅವರಿಗೆ ಇದು ಕಾಂಗ್ರೆಸ್‌ನೊಳಗೆ ಹೊಸ ಮಂಥನವೊಂದಕ್ಕೆ ಕಾರಣವಾಗಬಹುದೆಂಬ ಆಶಯ ಇತ್ತು ಹಾಗೂ ಅವರು 'ಸಮಾಜವಾದ' ಎನ್ನುವ ಹೊಸ ಪದದ ಕುರಿತು ಆಕರ್ಷಣೆ ಹೊಂದಿದ್ದರು; ಇದೊಂದು ಸುಂದರ ಪದವೆಂದೂ ಹಾಗೂ ಸಮಾಜವಾದಿ ಪಕ್ಷ ಹುಟ್ಟುವ ಮುನ್ನವೇ ತಾವು ಸಮಾಜವಾದಿಯಾಗಿದ್ದುದಾಗಿಯೂ ಹೇಳಿದ್ದರು. ಹೌದು, ಮಾರ್ಕ್ಸ್‌ವಾದವನ್ನು ಅನುಸರಿಸುವ ಮಟ್ಟಿಗೆ ಅವರು ಸಮಾಜವಾದಿಗಳೊಂದಿಗೆ ಹಲವು ಭಿನ್ನಾಭಿಪ್ರಾಯಗಳನ್ನು ಹೊಂದಿದ್ದರು, ಮುಖ್ಯವಾಗಿ ಅಹಿಂಸೆಯನ್ನು ತತ್ವವಾಗಿ ಒಪ್ಪದಿದ್ದ ಕಾರಣಕ್ಕೆ. ಆದರೆ ಸಮಾಜವಾದಿ ಪಕ್ಷ ಮಾರ್ಕ್ಸ್‌ವಾದವನ್ನು ಕ್ರಮೇಣ ಪಕ್ಷದ ಮೂಲತತ್ವವಾಗಿ (ಇದು ಅಧಿಕೃತವಾಗಿ ಸಂಭವಿಸಿದ್ದು ಮೊದಲ ಮಹಾ ಚುನಾವಣೆಯಲ್ಲಿ ದೊಡ್ಡದಾಗಿ ಸೋತ ಬಳಿಕ) ಕೈ ಬಿಡಲಾರಂಭಿಸಿದಮೇಲೆ ಗಾಂಧಿ ನಿಧಾನವಾಗಿ ಸಮಾಜವಾದಿಗಳೆಡೆಗೆ, ವಿಶೇಷವಾಗಿ ಜೆಪಿ ಮತ್ತು ಲೋಹಿಯಾರೆಡೆಗೆ ವೈಯಕ್ತಿಕ ಹಾಗೂ ತಾತ್ವಿಕ ಒಲವನ್ನು ಬೆಳೆಸಿಕೊಂಡರು. ಇಂತಹ ಸನ್ನಿವೇಶದಲ್ಲಿ ಹಾಗೂ ಕಾಂಗ್ರೆಸ್‌ನ ಹಿರಿಯ ನಾಯಕತ್ವದೊಡನೆ ಭ್ರಮನಿರಸನರಾಗುತ್ತಿದ್ದ ವೇಳೆಯಲ್ಲಿ ಗಾಂಧಿ ೧೯೪೭ರಲ್ಲಿ ನೆಹರೂರವರಿಗೆ ಜೆಪಿ ಅವರನ್ನು ೧೯೪೮ರಲನೇ ಇಸವಿಗೆ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನಕ್ಕಾಗಿ ಸೂಚಿಸಿದರು. ಆದರೆ ನೆಹರೂ ಈ ಸಲಹೆಯನ್ನು ಒಪ್ಪಲಿಲ್ಲವೆಂದು ಹೇಳಲಾಗುತ್ತದೆ. ಇದರ ಬದಲಾಗಿ ಆಚಾರ್ಯ ನರೇಂದ್ರ ದೇವ ಅವರನ್ನು ಸೂಚಿಸಿದರು ಮತ್ತು ಕೊನೆಯಲ್ಲಿ ಪಕ್ಷ ಬಾಬು ರಾಜೇಂದ್ರ ಪ್ರಸಾದ್ ಅವರನ್ನು ಆಯ್ದುಕೊಂಡಿತು. ಈ ನಿಟ್ಟಿನಲ್ಲಿ ನಿಮಗೆ ಯಾವುದೇ ಆಧಾರ ಬೇಕಿದ್ದಲ್ಲಿ ನೀವು ಜೆಪಿ ಅವರ ಜೀವನ ಚರಿತ್ರೆಗಳಲ್ಲಿನ ಈ ಕುರಿತ ಭಾಗಗಳನ್ನು ಓದಬಹುದು. ಉದಾಹರಣೆಗೆ ಅಜಿತ್ ಭಟ್ಟಾಚಾರ್ಯ ಅವರ Unfinished revolution : A biography of JP, ಭಾರತೀಯ ಪುಸ್ತಕ ಪ್ರಾಧಿಕಾರ ಪ್ರಕಟಿಸಿರುವ ಸುಧಾನ್ಶು ರಂಜನ್ ಅವರ Jayaprakash Narayan: Prophet of People's power (ಅಧಿಕೃತ ಜೀವನ ಚರಿತ್ರೆ, ನೀವು ನಿಮ್ಮ ಅಧಿಕೃತ ಇತಿಹಾಸವನ್ನು ಹೇಳಲು 'ಅಧಿಕೃತ/ದೃಢೀಕೃತ ಆಧಾರ'ವಾಗಿ ತೆಗೆದುಕೊಳ್ಳುವಂತಹದ್ದು), ಮಿನೂ ಮಸಾನಿ ಅವರ Is JP the answer? ಹಾಗೂ ಅಲನ್ ಮತ್ತು ವೆಂಡಿ ಸ್ಕಾರ್ಫ್ ಅವರ JP: His biography.

ವಾಸ್ತವವಾಗಿ ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ, ಒಟ್ಟು ದೇಶದ ಸ್ಥಿತಿಗೆ ಮುಖ್ಯವಾದ ಅಹಿಂಸೆ, ಸತ್ಯ ಮತ್ತು ದೇವರು, ಪ್ರಭುತ್ವದ ಮೂಲಭೂತ ಪಾತ್ರ, ತಂತ್ರಜ್ಞಾನ, ಆಧುನಿಕ ಯುದ್ಧ ಮತ್ತು ಶಸ್ತ್ರಗಳು, ವಿಭಜನೆ, ಸಂವಿಧಾನ ಸಭೆಯ ರಚನೆ ಇತ್ಯಾದಿಗಳ ಕುರಿತು ಗಾಂಧಿಯವರು ಅತ್ಯಂತ ಗಹನವಾದ ಸಂಭಾಷಣೆಗಳನ್ನು ನಡೆಸಿದ್ದು ಸಮಾಜವಾದಿಗಳ ಜೊತೆಯಲ್ಲಿ– ಈ ತರಹದ ಸಂವಾದಕ್ಕೆ ಬೌದ್ಧಿಕವಾಗಿ ಸಮರ್ಥರಿದ್ದ ಕೆಲವೇ ಕೆಲವರಲ್ಲಿ ಸಮಾಜವಾದಿಗಳು ಒಬ್ಬರಾಗಿದ್ದರಿಂದ. ಅವರನ್ನು ಹೊರತುಪಡಿಸಿದರೆ, ಗಾಂಧಿಯವರ ಬಹುತೇಕ ಅನುಯಾಯಿಗಳು 'ಹೌದಪ್ಪ'ಗಳು.

ಲೋಹಿಯಾ ಅವರು ಗಾಂಧಿಯವರೊಡನೆ ಯಾವ ತರಹದ ಸಂಬಂಧ ಹೊಂದಿದ್ದರೆಂದು ತಿಳಿಯಲು ನೀವು 'ಹರಿಜನ್' ಪತ್ರಿಕೆಯ ಹಳೆಯ ಸಂಚಿಕೆಗಳನ್ನು ಓದಬೇಕು. ಗಾಂಧಿಯವರು 'ಕಾಂಗ್ರೆಸ್ ಸೋಷಲಿಸ್ಟ್' ಪತ್ರಿಕೆಯಲ್ಲಿನ (ಲೋಹಿಯಾ ಅವರು ಸಂಪಾದಕರಾದ ಪತ್ರಿಕೆ) ಲೋಹಿಯಾ ಅವರ ಹಲವು ಲೇಖನಗಳನ್ನು 'ಹರಿಜನ್' ಪತ್ರಿಕೆಯಲ್ಲಿ ಮರುಪ್ರಕಟಿಸಿದ್ದರು. ಲೋಹಿಯಾ ಅವರು ದೇಶದ್ರೋಹದ ಆರೋಪದ ಮೇಲೆ ಹಾಗೂ ಗೋವಾ ಸ್ವಾತಂತ್ರ್ಯ ಮುಂತಾದ ವಿಷಯಗಳ ಮೇಲೆ ಕೋರ್ಟಿಗೆಳೆಯಲ್ಪಟ್ಟಾಗಲೆಲ್ಲ ಕೋರ್ಟುಗಳಲ್ಲಿನ ಲೋಹಿಯಾ ಅವರ ವಾದದ ಬರಹರೂಪವನ್ನು ಗಾಂಧಿ ಪ್ರಕಟಿಸಿದ್ದರು. ಎಷ್ಟೆಂದರೂ ಲೋಹಿಯಾ ಅವರು ಗಾಂಧಿಯವರ ಸಮೀಪದ ಹಿಂಬಾಲಕರಾಗಿದ್ದ ಹೀರಾಲಾಲ್ ಅವರ ಪುತ್ರ. ಅಂತೆಯೇ ಜೆಪಿ ಗಾಂಧಿಯವರ ಮತ್ತೋರ್ವ ಸಮೀಪದ ಹಿಂಬಾಲಕರಾಗಿದ್ದ ಬ್ರಿಜ್ ಕಿಶೋರ್ ಪ್ರಸಾದ್ ಅವರ ಅಳಿಯರಾಗಿದ್ದರು.

ಸಮಾಜವಾದಿಗಳು ಬಂಧಿತರಾದಾಗ, ಕಿರುಕುಳಕ್ಕೊಳಪಟ್ಟಾಗಲೆಲ್ಲ ಗಾಂಧಿ ಅವರು 'ಹರಿಜನ್'ನಲ್ಲಿ ಬರೆದು ಪ್ರಕಟಿಸಿದ ಪತ್ರಗಳನ್ನು ನೀವು ಓದಬೇಕು. ವಿಶೇಷವಾಗಿ ಅವರು ಜೆಪಿ ಹಾಗೂ ಲೋಹಿಯಾ ಅವರನ್ನು ದೇಶದ ಅಮೂಲ್ಯ ಆಸ್ತಿಯೆಂದೂ, ಅಪೂರ್ವ ಬೌದ್ಧಿಕ ಸಾಮರ್ಥ್ಯ, ವ್ಯಕ್ತಿತ್ವ ಹಾಗೂ ಧೈರ್ಯವುಳ್ಳವರೆಂದೂ ಹೇಳಿದ ಪತ್ರಗಳನ್ನು ನೀವು ಓದಬೇಕು. ಬಿಮಲ್ ಪ್ರಸಾದ್ ಅವರ 'Selected works of JP' ಹಾಗೂ ಮಸ್ತ್‌ರಾಂ ಕಪೂರ್ ಅವರು ಸಂಕಲಿಸಿದ 'Complete works of Dr. Rammanohar Lohia'ದ ಎಲ್ಲ ಪುಟಗಳನ್ನು ಓದುವುದಂತೂ ಸರಿ, ರಾಮ್ ಮನೋಹರ್ ಲೋಹಿಯಾ ಅವರ 'Marx, Gandhi and Socialism'ನ ಕೆಲವು ಅಧ್ಯಾಯಗಳನ್ನಾದರೂ ಓದಬೇಕೆನ್ನುವುದು ನನ್ನ ಸಲಹೆ. ಇಷ್ಟರ ಜೊತೆಗೆ ನಿಮ್ಮ ಅನುಮತಿ ಇದ್ದಲ್ಲಿ, ಗಾಂಧಿ ತಮ್ಮ ನೌಖಾಲಿ ಯಾತ್ರೆ ಮತ್ತು ಅಂದು ಯುದ್ಧಭೂಮಿಯಂತಿದ್ದ ದೆಹಲಿಯ ನಿರಾಶ್ರಿತ ಶಿಬಿರಗಳಿಗೆ ಹೋಗಲು ಜೊತೆಯಾಗಲೆಂದು ಕರೆದಿದ್ದು ಲೋಹಿಯಾ ಅವರನ್ನು ಎಂದು ನೆನಪಿಸಲಿಚ್ಛಿಸುತ್ತೇನೆ. ೨೮ ಜನವರಿ ೧೯೪೮ರಲ್ಲಿ ಗಾಂಧಿ ಹೆಗಲ ಮೇಲೆ ಕೈಯಿಟ್ಟು ಹೇಗೆ ದೇಶದ ರಾಜಕೀಯದಲ್ಲಿ ಹೊಸ ಪಾತ್ರವನ್ನು ವಹಿಸಬೇಕೆಂಬ ಬಗ್ಗೆ ದೀರ್ಘ ಸಂಭಾಷಣೆ ನಡೆಸಿದ್ದು ಲೋಹಿಯಾ ಅವರೊಡನೆ ಎಂದು ನಿಮಗೆ ತಿಳಿಸಲಿಚ್ಛಿಸುತ್ತೇನೆ; ಇದೇ ವಿಷಯದ ಕುರಿತು ಗಾಂಧಿಯವರು ಲೋಹಿಯಾ ಅವರಿಗೆ ಇನ್ನೆರಡು ದಿನಗಳ ನಂತರ ಬರಹೇಳಿದ್ದನ್ನೂ ಕೂಡ.

ಇದನ್ನೆಲ್ಲ ನಿಮಗೆ ವಿವರವಾಗಿ ಬರೆಯಬೇಕೆಂದು ನಿರ್ಧರಿಸಿದ್ದು ಏಕೆಂದರೆ ನೀವು ಇವತ್ತಿನ ಮುಂಚೂಣಿಯಲ್ಲಿರುವ ಸಾರ್ವಜನಿಕ ಬುದ್ಧಿಜೀವಿ ಹಾಗೂ ನೀವು ಸಾರ್ವಜನಿಕ ವೇದಿಕೆಗಳಲ್ಲಿ ಹೇಳುವ ಮತ್ತು ಬರೆಯುವ ಸಂಗತಿಗಳನ್ನು ಜನ ನಂಬುತ್ತಾರೆ. ನೀವು, ಬಹುಶಃ ಉದ್ದೇಶಪೂರ್ವಕವಾಗಿಯಲ್ಲದಿದ್ದರೂ, ನಿಮ್ಮ ಸಾಮಾಜಿಕ ಹಿನ್ನೆಲೆ ಹಾಗೂ ಅದಕ್ಕೆ ತಕ್ಕ ರಾಜಕೀಯ ಧೋರಣೆಗಳ ವಾರಸುದಾರಿಕೆಯ ಕಾರಣದಿಂದ

ಸೃಷ್ಟಿಯಾಗುವ ಅರ್ಧಸತ್ಯಗಳನ್ನು ಹರಡುವುದು ನನಗೆ ಇಷ್ಟವಿಲ್ಲ. ಅಧಿಕೃತ ದಾಖಲೆಗಳ ಮೇಲಷ್ಟೇ ಅವಲಂಬಿತವಾದ ನಿಮ್ಮ ಇತಿಹಾಸದ ವ್ಯಾಖ್ಯಾನ ಪಶ್ಚಿಮದ ಇತಿಹಾಸಲೇಖನಶಾಸ್ತ್ರದ ತತ್ವಗಳ ಮೇಲೆ ಆಧರಿತವಾಗಿದ್ದು, ಗಾಂಧಿಯವರಿಗೆ ಈ ತರಹದ ಇತಿಹಾಸ ಬರವಣಿಗೆ ಇಷ್ಟವಿರಲಿಲ್ಲ. 'ಅಧಿಕೃತ/ದೃಢೀಕೃತ ದಾಖಲೆ'ಗಳನ್ನು ಹೊರತೆಗೆದು ಪ್ರಕಟಿಸುವ ಹಸಿವಿರುವ ಈ ವಿಧಾನ ಯಾವತ್ತೂ ಇತಿಹಾಸದ ತೆರೆದ ಗಾಯಗಳನ್ನು ವಾಸಿಯಾಗದಂತೆ ಇಡುತ್ತದೆ ಎಂದು ಭಾವಿಸಿದ್ದ ಅವರು ಇದನ್ನು ಆಧುನಿಕ ನಾಗರಿಕತೆಯ ಶಾಪ ಎಂದು ಕರೆದಿದ್ದರು.

ಕನ್ನಡವನ್ನು ಮಾತನಾಡುವ ರಾಜ್ಯವಾದ ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ಮೂರು ದಶಕಗಳ ಕಾಲ ಇದ್ದುಕೊಂಡೂ ನೀವು ಕನ್ನಡ ಮಾತನಾಡಲಾಗದಿರುವುದರ ಬಗ್ಗೆಯೂ ನಾನು ಆ ದಿನ ಮಾತನಾಡಿದ್ದೆ. ನೀವು ಬೆಂಗಳೂರಿಗೆ ನಲವತ್ತರ ವಯಸ್ಸಿನಲ್ಲಿ ಬಂದಿರೆನ್ನುವುದೂ ಹಾಗೂ ಬೆಂಗಳೂರಿನಲ್ಲಿ ಕನ್ನಡ ತಿಳಿದಿರದೆಯೂ ಬದುಕುವ ಐಷಾರಾಮ ಇರುವ ಬಗ್ಗೆ ನೀವು ಹೇಳಿದ್ದೂ ಒಬ್ಬ ಸಾರ್ವಜನಿಕ ಬುದ್ಧಿಜೀವಿಗೆ ಶೋಭೆ ತರುವಂತಹ ಮಾತುಗಳಲ್ಲ. ದಯವಿಟ್ಟು ಇದನ್ನು ಅಂಧ ಭಾಷಾಭಿಮಾನದ ಕುರುಹಾಗಿ ತಪ್ಪು ತಿಳಿಯಬಾರದು, ನಾನು ಅದನ್ನು ಸಮರ್ಥಿಸುವವನಲ್ಲ. ಇದು ಸಮಾಜದೊಡನೆಯ ಸಂಪರ್ಕ ಹಾಗೂ ಸಾಂಸ್ಕೃತಿಕ ಬೇರೂರುವಿಕೆಯ ಪ್ರಶ್ನೆ. ಇವುಗಳ ಕೊರತೆ ನಿಮಗೆ ಕನ್ನಡದ ಸಾಹಿತ್ಯ ಪರಂಪರೆಯ ಬಗ್ಗೆ ಇರುವ, ನೀವು ನಿಮ್ಮ ಸಾರ್ವಜನಿಕ ಭಾಷಣಗಳಲ್ಲಿ ತೋರಿಸಿಕೊಳ್ಳುವ, ಸೀಮಿತ ಜ್ಞಾನದಲ್ಲಿ ಕಾಣಬಹುದು. ಈ ಸಂಬಂಧವಾಗಿ ನಿಮಗೆ ಯುಆರ್ ಅನಂತಮೂರ್ತಿ, ಗಿರೀಶ್ ಕಾರ್ನಾಡ್ ಹಾಗೂ ಡಿ ಆರ್ ನಾಗರಾಜ್ ಅವರಷ್ಟೇ ಉಲ್ಲೇಖಾರ್ಹರಾಗುತ್ತಾರೆ ಎಂಬುದು ಇದಕ್ಕೆ ನಿದರ್ಶನ.

ದಯವಿಟ್ಟು ಇನ್ನೂ ಹಲವರು ಈ ತರಹದ ಬರಹಗಾರರಿದ್ದಾರೆಂಬುದನ್ನು ನೀವು ನೆನೆಪಿನಲ್ಲಿಡಬೇಕು. ಇವರಲ್ಲಿ ಹಲವರು ನೀವು ಹೇಳಿದ ಮೂವರಿಗಿಂತ ಕನ್ನಡ ಸಾಹಿತ್ಯ ಪರಂಪರೆಗೆ ಉತ್ತಮ ಕೊಡುಗೆಗಳನ್ನು ನೀಡಿದ್ದಾರೆ. ಕುವೆಂಪು ಮತ್ತು ಶಿವರಾಮ ಕಾರಂತರಂತಹ ಘಟಾನುಘಟಿಗಳನ್ನು ಬಿಡಿ, ಆಧುನಿಕ ಕನ್ನಡದ ಬೌದ್ಧಿಕ ಪರಂಪರೆಯ ಕುರಿತು ಮಾತನಾಡುವಾಗ ಪಿ. ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ಕೆ ವಿ ಸುಬ್ಬಣ್ಣ, ಚಂದ್ರಶೇಖರ ಕಂಬಾರ, ದೇವನೂರ ಮಹದೇವ ಮತ್ತು ಎಚ್ ಎಸ್ ಶಿವಪ್ರಕಾಶ್ ಅವರನ್ನು ಬಿಡುವುದು ಸಾಂಸ್ಕೃತಿಕ ಅಪರಾಧವೇ ಸರಿ! ನಾನು 'ಇಂಗ್ಲಿಷ್ ಬಾವಿಯ ಮುದ್ದು ಕಪ್ಪೆಗಳು' ಎಂದು ಕರೆಯುವ ನಿಮ್ಮಂತಹವರು ನಿಮ್ಮ ಇಂಗ್ಲಿಷ್ ಭಾಷಾ ಪಾಂಡಿತ್ಯ ಪ್ರದರ್ಶನದ ಮೂಲಕ ಈ ಅಪರಾಧವನ್ನು ಮಾಡುವ ಸಾಹಸ ತೋರಿಸುತ್ತೀರಿ. ನನ್ನ ಪ್ರಕಾರ ಭಾರತದವರಾಗಿದ್ದು ಯಾವೊಂದು ಭಾರತೀಯ ಭಾಷೆಯಲ್ಲಿಯೂ ಪರಿಣತಿಯಿಲ್ಲದವರು ನಿಜವಾದ, ನಂಬಿಕಾರ್ಹ ಬುದ್ಧಿಜೀವಿಗಳಾಗಲಾರರು. ನೀವು ಹೇಳಿದಂತೆ ಖಂಡಿತವಾಗಿಯೂ ದೇವಿ ಸರಸ್ವತಿ ಇಂಗ್ಲಿಷ್ ಮಗುವನ್ನು ಕೂಡ ಹೆತ್ತಿದ್ದಾಳೆ. ಆದರೆ ಆ ಕೂಸಿನ ಜನನವಾಗಿದ್ದು ಇಂಗ್ಲೆಂಡಿನಲ್ಲಿ. ನಮ್ಮ ಮಟ್ಟಿಗೆ ಹೇಳುವುದಾದರೆ ನಮಗೆ ಇಂಗ್ಲಿಷ್ ಸಾವಯವ

ಭಾಷೆಯಲ್ಲ ಮತ್ತು ಇದನ್ನು ಭಾರತೀಯ ಭಾಷೆಗಳ ಸಾಂಸ್ಕೃತಿಕ ಸಂವೇದನೆಗಳ ಆಸರೆಯಲ್ಲಷ್ಟೇ ಸಾರ್ವಜನಿಕ ಉದ್ದೇಶಗಳಿಗೆ ಬಳಸಬಹುದು.

ನನ್ನ ಇಂಗ್ಲಿಷ್‌ನ ಸೀಮಿತ ಜ್ಞಾನದೊಂದಿಗೆ ನಿಮ್ಮ ಅವೊತ್ತಿನ ಮಾತುಗಳ ಕುರಿತು ನನ್ನ ನಿಲುವು ಹಾಗೂ ವಿಚಾರಗಳನ್ನು ನಿಮಗೆ ತಲುಪಿಸುವುದರಲ್ಲಿ ಎಷ್ಟು ಯಶಸ್ವಿಯಾಗಿದ್ದೇನೋ ಗೊತ್ತಿಲ್ಲ. ನನ್ನ ಈ ದೀರ್ಘ ಪತ್ರವನ್ನು ಅದಕ್ಕೆ ಅಗತ್ಯವಾದ ಸಹಾನುಭೂತಿಯೊಂದಿಗೇ ನೀವು ಓದಿದ್ದೇರೆಂದು ಆಶಿಸುತ್ತೇನೆ. ನಿಮಗೆ ಉತ್ತರ ಬರೆಯಬೇಕೆಂದೆನಿಸಿದರೆ ದಯವಿಟ್ಟು ಬರೆಯಿರಿ.

ಶುಭ ಹಾರೈಕೆಗಳೊಂದಿಗೆ,

ಡಿ ಎಸ್ ನಾಗಭೂಷಣ

ಶಿವಮೊಗ್ಗ

ಗುಹಾ ಅವರ ಉತ್ತರ:

೯.೧೦.೨೦೧೭

ಪ್ರಿಯ ಪ್ರೊ.ನಾಗಭೂಷಣ ಅವರೆ,

ನಿಮ್ಮ ಇ-ಮೇಲ್‌ಗಾಗಿ ಧನ್ಯವಾದ. ನಾನು, ಅಂದು ನಿಮ್ಮ ಪ್ರಶ್ನೆಗೆ ಉತ್ತರವಾಗಿ ಸ್ವಲ್ಪ ಸುದೀರ್ಘವಾಗಿಯೇ ವಿವರಿಸಿದಂತೆ, ನಾನು ಸಮಾಜವಾದಿ ಪರಂಪರೆಯ ಬಗ್ಗೆ ಬಹಳ ಮೆಚ್ಚುಗೆ ಹೊಂದಿದವನು ಮತ್ತು ಇದು ಸಮಕಾಲಿನ ಮಾಧ್ಯಮಗಳಲ್ಲಿನ ಸಾರ್ವಜನಿಕ ಬದುಕಿನಿಂದ ಕಣ್ಮರೆಯಾದ ಬಗ್ಗೆ ವಿಷಾದಿಸುವವನು. ನನ್ನ ಭಾರತೀಯ ರಾಜಕೀಯ ಚಿಂತಕರನ್ನು ಕುರಿತ ಸಂಗ್ರಹದಲ್ಲಿ ಮಾರ್ಕ್ಸ್‌ವಾದಿಗಳನ್ನು ಸೇರಿಸದೆಯೇ ಜೆಪಿ, ಲೋಹಿಯಾ ಮತ್ತು ಕಮಲಾದೇವಿ ಈ ಮೂವರು ಸಮಾಜವಾದಿಗಳನ್ನು ಸೇರಿಸಿದ್ದು, ಸಮಾಜವಾದಿಗಳನ್ನು ನಾನು ಉನ್ನತ ಸ್ಥಾನದಲ್ಲಿಡುತ್ತೇನೆಂದು ನಿಮಗೆ ಮನವರಿಕೆ ಮಾಡಬಲ್ಲದೆಂದು ನಂಬುತ್ತೇನೆ.

ನೀವು ನಿಮ್ಮ ಪತ್ರದಲ್ಲಿ ಅತಿಶಯೋಕ್ತಿ ಹಾಗೂ ಉತ್ಪ್ರೇಕ್ಷೆಯನ್ನು ಬಳಸಿರುವುದಕ್ಕೆ ನಾನು ವಿಷಾದಿಸುತ್ತೇನೆ. ನಾನು 'ಸಮಾಜವಾದಿಗಳು ಗಾಂಧಿಯವರ ಒಡನಾಟದ ಹೊರವೃತ್ತದ ಹೊರವೃತ್ತದಿಂದಲೂ ಹೊರಗಿದ್ದವರು ಮತ್ತು ಹಾಗಾಗಿ ಗಾಂಧಿ ಅವರೊಡನೆ ಹೇಳಿಕೊಳ್ಳುವಂತಹ ಮಾತುಕತೆ ನಡೆಸಿರಲಿಕ್ಕಿಲ್ಲ' ಎಂದು ಹೇಳಿದೆನೆಂದು ನೀವು ಬರೆದಿದ್ದೀರಿ. ಆದರೆ ನಾನು ಇಂತಹ ಅಸಂಬದ್ಧ ಹೇಳಿಕೆಯನ್ನು ಯಾವತ್ತೂ ಮಾಡಲಿಕ್ಕಿಲ್ಲ. ನಾನು ನಿಜವಾಗಿಯೂ ಹೇಳಿದ್ದು ಇದು: ಗಾಂಧಿಯವರಿಗೆ ವೈಯಕ್ತಿಕವಾಗಿ ಹತ್ತಿರವಾಗಿರುವ ಮಟ್ಟಿಗೆ ಹೇಳುವುದಾದರೆ ಸಮಾಜವಾದಿಗಳು ಅವರ ಸಮೀಪದ ವಲಯದಲ್ಲಿ ಇರಲಿಲ್ಲ. ವಾಸ್ತವಾಂಶಗಳು ಇವು:

ಗಾಂಧಿಯವರ ಅತ್ಯಂತ ಸಮೀಪದ ವಲಯ ಆಶ್ರಮವಾಸಿಗಳದ್ದು; ಮಹದೇವ್, ಮೀರಾ, ವಿನೋಬಾ, ಕುಮಾರಪ್ಪ ಅಂತಹವರದ್ದು. ಗಾಂಧಿಯವರ ಎರಡನೇ ಸಮೀಪದ ವಲಯ ನೆಹರೂ, ಪಟೇಲ್ ಮತ್ತು ರಾಜಾಜಿ; ಕ್ರಮವಾಗಿ ಅವರ ಹೃದಯ, ಕೈ ಮತ್ತು ಮಿದುಳು ಎನ್ನಿಸಿಕೊಂಡವರು ಹಾಗೂ ನಿರ್ವಿವಾದವಾಗಿ ಅವರ ಅತ್ಯಂತ ಸಮೀಪದ ರಾಜಕೀಯ ಜೊತೆಗಾರರು. ಗಾಂಧಿಯವರ ಮೂರನೇ ಸಮೀಪದ ವಲಯ ರಾಜಕೀಯ ಅಥವಾ ಆಶ್ರಮ ಜೀವನದಲ್ಲಿರದ ಅವರ ಸ್ನೇಹಿತರದ್ದು; ಟಾಗೋರ್, ಸಿಎಫ್ ಆಂಡ್ರೂಸ್, ಪ್ರಾಣ್‌ಜೀವನ್ ಮಿತ್ರ, ಪೊಲಕ್, ಕಾಲ್ಲೆನ್ಬಾಕ್ ಇನ್ನಿತರರು. ಗಾಂಧಿಯವರ ನಾಲ್ಕನೇ ಸಮೀಪದ ವಲಯ ಇನ್ನಿತರ ಮುಂಚೂಣಿಯಲ್ಲಿದ್ದ ಕಾಂಗ್ರೆಸ್ಸಿಗರು; ಆಜಾದ್, ರಾಜೇಂದ್ರಬಾಬು, ಕೃಪಲಾನಿ, ಪಂತ್, ಸಿ ಆರ್ ದಾಸ್, ಸರೋಜಿನಿ ನಾಯ್ಡು ಇನ್ನಿತ್ಯಾದಿ.

ಸೋಶಿಯಲಿಸ್ಟರು ಈ ತರಹದ ಗುಂಪುಗಳಲ್ಲಿ ಬಹುಶಃ ಐದನೇ ಸಮೀಪದ ವಲಯದಲ್ಲಿ ಸೇರುವಂತಹವರು. ಗಾಂಧಿ ಅವರೊಡನೆ, ಇತರೆ ಬಹಳ ಜನರೊಡನೆಯಂತೆಯೇ, ಅವಶ್ಯವಾಗಿ ಒಡನಾಡಿದ್ದರು. ನಾನು ನನ್ನ ಭಾಷಣದಲ್ಲಿ ಕಮಲಾದೇವಿ ಅವರೊಡನೆ ಅವರು ಹೊಂದಿದ ಸಾಮೀಪ್ಯದ ಕುರಿತು ಮಾತನಾಡಿದ್ದೆ. ೧೯೩೪ರಲ್ಲಿ ಅವರು ಮಸಾನಿ ಅವರೊಂದಿಗೆ ಸಮಾಜವಾದಿ ಕಾಂಗ್ರೆಸ್ ಪಕ್ಷದ ಬಗ್ಗೆ ಚರ್ಚೆ ಮಾಡಿದ್ದರು. ೧೯೨೦, ೩೦, ೪೦ರ ಚಳುವಳಿಗಳಲ್ಲಿ ಜೈಲಿಗೆ ಹೋದ ನೂರಾರು ಜನರ ಮೇಲಿದ್ದಂತೆ ಗಾಂಧಿಯವರಿಗೆ ಜೆಪಿ ಹಾಗೂ ಲೋಹಿಯಾ ಅವರ ಕುರಿತು ಮಮತೆ ಇತ್ತು ಹಾಗೂ ೪೦ರಲ್ಲಿ ಅವರು ಜೆಪಿ ಹಾಗೂ ಲೋಹಿಯಾ ಅವರನ್ನು ಪ್ರಶಂಸಿಸಿದರು. ಆದರೆ ನೀವು ಗಾಂಧಿಯವರ ಬದುಕನ್ನು ಸಂಪೂರ್ಣ ದೃಷ್ಟಿಯಿಂದ ನೋಡಿದರೆ, ಅವರ ಎಲ್ಲ ಸಂಪರ್ಕಗಳಲ್ಲಿ ಮತ್ತು ಅವರು ನಡೆಸಿದ ಸಂಭಾಷಣೆಗಳಲ್ಲಿ ನಾನು ಈ ಮೇಲೆ ಬರೆದ ನಾಲ್ಕು ಹಂತದ ವಲಯಗಳಲ್ಲಿದ್ದವರು ಯಾವುದೇ ಸಮಾಜವಾದಿಗಳಿಗಿಂತಲೂ ಗಾಂಧಿಯವರಿಗೆ ಬಹಳ ಸಮೀಪವಾಗಿದ್ದರು.

ಮತ್ತು ನಿಮ್ಮ ಪತ್ರದಲ್ಲಿ ನೀವು ಹೀಗೂ ಬರೆದಿದ್ದೀರಿ: 'ಆದರೆ ಸಮಾಜವಾದಿ ಪಕ್ಷ ಮಾರ್ಕ್ಸ್‌ವಾದವನ್ನು ಪಕ್ಷದ ಪ್ರಧಾನ ತಾತ್ವಿಕತೆಯ ಸ್ಥಾನದಿಂದ (ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಸ್ಪಷ್ಟವಾಗಿ ಸೋತ ಬಳಿಕ) ಬಿಟ್ಟಮೇಲೆ ಗಾಂಧಿ ನಿಧಾನವಾಗಿ ಸಮಾಜವಾದಿಗಳೆಡೆಗೆ, ವಿಶೇಷವಾಗಿ ಜೆಪಿ ಮತ್ತು ಲೋಹಿಯಾ, ವೈಯಕ್ತಿಕ ಹಾಗೂ ತಾತ್ವಿಕ ಒಲವನ್ನು ಬೆಳೆಸಿಕೊಂಡರು.' ಮೊದಲ ಚುನಾವಣೆ ನಡೆದಿದ್ದು ೧೯೫೨ರಲ್ಲಿ; ಗಾಂಧಿಯವರು ನಿಧನರಾಗಿದ್ದು ೧೯೪೮ರಲ್ಲಿ. ಯಾವ ವಿಷಯದ ಬಗ್ಗೆ ನಾವಿಲ್ಲಿ ಮಾತನಾಡುತ್ತಿದ್ದೇವೆ?

ಈ ನಿಟ್ಟಿನಲ್ಲಿ ಅಲ್ಪರಾಗುವುದು ಅಥವಾ ವಿಪರೀತ ಸೂಕ್ಷ್ಮವಾಗಿ ನೋಡುವುದು ಅಗತ್ಯವಿಲ್ಲ ಎನ್ನುವುದು ನನ್ನ ಅಭಿಪ್ರಾಯ. ವಾಸ್ತವಾಂಶವೆಂದರೆ ಗಾಂಧಿಯವರಿಗೆ ಜೆಪಿ ಮತ್ತು ಲೋಹಿಯಾ ಅವರಿಗಿಂತ ಬಹಳ, ಬಹಳ ಹತ್ತಿರವಾದ ಹಲವು ಜನರಿದ್ದರು.

ಆದರೆ ಇಷ್ಟನ್ನು ಹೇಳಿಯೂ, ಸಮಾಜವಾದಿಗಳು ಗಾಂಧಿಯವರನ್ನು ಸೃಜನಾತ್ಮಕ ಹಾಗೂ ರಚನಾತ್ಮಕವಾಗಿ ಅರ್ಥೈಸಿದ್ದಾರೆ, ಗಾಂಧಿಯವರು ಬದುಕಿದ್ದಾಗಲೂ ಹಾಗೂ ಅವರು ನಿಧನರಾದ ಬಹಳ ಕಾಲದ ಬಳಿಕವೂ. ಭಾರತದ ಭೂತ, ವರ್ತಮಾನ ಹಾಗೂ ಭವಿಷ್ಯಕ್ಕೆ ಸಮಾಜವಾದದ ಕೊಡುಗೆ ಸಮಾಜವಾದಿಗಳನ್ನು ಸತ್ಯಕ್ಕೆ ದೂರವಾಗಿ, ಗಾಂಧಿಯವರ ಸಮೀಪದ ಜೊತೆಗಾರರಾಗಿ ಮಾಡುವುದರ ಮೇಲೆ ಅವಲಂಬಿಸಿಲ್ಲ.

ಶುಭ ಹಾರೈಕೆಗಳೊಂದಿಗೆ,

ಆರ್. ಗುಹಾ

ನಂತರದ ಟಿಪ್ಪಣಿ : ನಾನು ಇತಿಹಾಸದ ವಾಸ್ತವಾಂಶಗಳಿಗೆ ಬೇಕೆಂತಲೇ ಸೀಮಿತಗೊಳಿಸಿಕೊಂಡಿದ್ದೇನೆ. ಕರ್ನಾಟಕಕ್ಕೆ ಹಾಗೂ ಭಾರತಕ್ಕೆ ನನ್ನ ಬದ್ಧತೆ ಏನು ಎನ್ನುವುದು ನಿಮಗೆ ಹೇಗೋ ಹಾಗೆಯೇ ನನ್ನ ಹಾಗೂ ನನ್ನ ಆತ್ಮಸಾಕ್ಷಿಯ ನಡುವಿನದ್ದು.

ಡಿ.ಎಸ್.ಎನ್.ಅವರ ಉತ್ತರ

೯.೧೦. ೨೦೧೭

ಪ್ರಿಯ ಶ್ರೀ ಗುಹಾ,

ನಿಮ್ಮ ಉತ್ತರಕ್ಕಾಗಿ ಧನ್ಯವಾದ. ಮೊಟ್ಟಮೊದಲನೆಯದಾಗಿ, ಸಮಾಜವಾದಿಗಳು ಗಾಂಧಿಯವರೊಡನೆ ಹೊಂದಿದ್ದ ಸಾಮೀಪ್ಯದ ದರ್ಜೆಯ ಕುರಿತಾಗಿ ನನಗೆ ಯಾವುದೇ ಭ್ರಾಂತಿಗಳಿಲ್ಲ ಎಂದು ಸ್ಪಷ್ಟಪಡಿಸಬಯಸುತ್ತೇನೆ. ಅವರು ಗಾಂಧಿಯ ಅತ್ಯಂತ ಸಮೀಪದ ವೃತ್ತದವರಾಗಿದ್ದರೋ ಅಥವಾ ಗಾಂಧಿಯವರ ಸಂಪರ್ಕದ ಅತ್ಯಂತ ಹೊರವೃತ್ತದ ಪರಿಧಿಯಲ್ಲಿದ್ದರೊ ಎನ್ನುವುದರ ಕುರಿತು ನನಗಂತೂ ಆಸಕ್ತಿ ಇಲ್ಲ. ಅವೊತ್ತು ನಾನು ಹೇಳಲು ಬಯಸುತ್ತಿದ್ದ ಅಂಶ ಗಾಂಧಿಯವರು ಸಮಾಜವಾದಿಗಳೊಂದಿಗೆ, ವಿಶೇಷವಾಗಿ ಜೆಪಿ ಮತ್ತು ಲೋಹಿಯಾ ಅವರೊಂದಿಗೆ, ಮಹತ್ವದ ಸಂಭಾಷಣೆಗಳನ್ನು ನಡೆಸಿದ್ದರು ಎನ್ನುವುದು. ಗಾಂಧಿಯವರ ಸುತ್ತ ಸಾಮೀಪ್ಯದ ವೃತ್ತಗಳನ್ನು ಕಲ್ಪಿಸಿಕೊಳ್ಳುವುದು, ಸೃಷ್ಟಿಸುವುದು ತೀರಾ ಬಾಲಿಶವಾಗಿದ್ದು, ನಿಮ್ಮಂತಹ ಹಿರಿಯ ಇತಿಹಾಸಕಾರರಿಗೆ ಸಲ್ಲುವುದಲ್ಲ. ಹಾಗೂ ಇದು ಗಾಂಧಿಯವರು ಇತರರೊಡನೆ ನಡೆಸಿದ ಸಂಭಾಷಣೆಗಳ ಮಹತ್ವವನ್ನು ಅರ್ಥಮಾಡಿಕೊಳ್ಳಲು ಕೂಡ ಸಹಾಯಕಾರಿ ಅಲ್ಲ. ಮತ್ತು ಈ ತರಹದ ಚಿತ್ರಣಗಳು, ವಾಸ್ತವವೇ ಆಗಿರಲಿ ಕಾಲ್ಪನಿಕವೇ ಆಗಿರಲಿ, ಗಾಂಧಿಯವರ ವ್ಯಕ್ತಿತ್ವವನ್ನು ಎಲ್ಲ ಆಯಾಮಗಳಲ್ಲಿ ಅರ್ಥೈಸಲು ಅಡ್ಡಿಯಾಗುವಂತಹದ್ದು. ನಾನು ಕೇಳಿದ ಓದಿದ ಎಷ್ಟೋ ಘಟನೆಗಳಲ್ಲಿ ಗಾಂಧಿಯವರೊಡನೆ ಭೇಟಿಯಾಗಲು ಹೋದವರು ತಾವೇ

ಗಾಂಧಿಗೆ ಅತಿ ಮುಖ್ಯವಾದ ವ್ಯಕ್ತಿ ಎಂದುಕೊಂಡದ್ದಿದೆ. ಹಾಗೂ ಗಾಂಧಿಯವರು ಎಲ್ಲಿಯೂ ಇತರರೊಂದಿಗೆ ಹೊಂದಿದ್ದ ಸಂಬಂಧದಲ್ಲಿ ದರ್ಜೆಗಳನ್ನು ಹೊಂದಿರುವಂತೆ ವರ್ತಿಸಿಲ್ಲ.

ಆದರೆ ಅಂದು ನೀವು ಮತ್ತೆ ಮತ್ತೆ ಗಾಂಧಿಯವರು ಸಮಾಜವಾದಿಗಳೊಡನೆ ಯಾವುದೇ ಮಹತ್ವದ ಸಂಭಾಷಣೆಗಳನ್ನು ನಡೆಸಿರಲಿಕ್ಕಿಲ್ಲ ಎಂದು ಒತ್ತಿ ಹೇಳಿದಿರಿ. (ಶ್ರೀಮತಿ ಚಟ್ಟೋಪಾಧ್ಯಾಯ ಅವರೊಂದಿಗೆ ರಾಜಕೀಯೇತರ ವಿಷಯಗಳ ಕುರಿತು ಸಂಭಾಷಿಸುವುದರ ಹೊರತಾಗಿ). ಇದಕ್ಕೆ ನೀವು ನೀಡಿದ ಎರಡು ಕಾರಣಗಳು, ಅವರು ಗಾಂಧಿಯವರ ಹೊರವೃತ್ತದಿಂದಲೂ ಹೊರಗಿದ್ದರು ಎನ್ನುವುದು ಮತ್ತು ಈ ಕುರಿತಾಗಿ ಗಾಂಧಿಯವರ ಸಮಗ್ರ ಬರಹಗಳ ಸಂಪುಟಗಳಲ್ಲಿ ಪುರಾವೆ ಇಲ್ಲ ಎನ್ನುವುದು. (ಆದರೆ ನಾನು ನಿಮಗೆ ಈ ಮುಂಚಿನ ಪತ್ರದಲ್ಲಿ ಪುರಾವೆ ನೀಡಿದ್ದೇನೆ). ಆದರೆ ಈಗ ನೀವು ಹಾಗೆಂದು ಹೇಳಿಯೇ ಇಲ್ಲ ಎನ್ನುತ್ತಿದ್ದೀರಿ. ವಾಸ್ತವದಲ್ಲಿ 'ಸಮಾಜವಾದಿಗಳು ಹೊರವೃತ್ತದಿಂದಲೂ ಹೊರಗಿದ್ದರು' ಎನ್ನುವುದನ್ನು ನೀವು ಎರಡನೇ ಬಾರಿ ಧ್ವನಿಯೆತ್ತರಿಸಿ ಪುನರುಚ್ಚರಿಸಿದ್ದಿರಿ! ಪುರಾವೆ ಬೇಕಿದ್ದಲ್ಲಿ, ನೀವು ನಿಮ್ಮ ಭಾಷಣದ ಧ್ವನಿ ಮುದ್ರಣವನ್ನು ಶ್ರೀ ಕೆ.ವಿ.ಅಕ್ಷರ ಅವರಿಂದ ಪಡೆಯಬಹುದು. ನಾನು ನನ್ನ ಕಡೆಯಿಂದ, ಹೆಗ್ಗೋಡಿನಲ್ಲಿದ್ದ ಇಬ್ಬರು ಮಿತ್ರರ ಮೂಲಕ ಅದನ್ನು ಖಚಿತಪಡಿಸಿಕೊಂಡಿದ್ದೇನೆ. ಅದೇನೇ ಇರಲಿ, ನನ್ನನ್ನು ಕದಡಿದ್ದು ಅಕ್ಷರಶಃ ಆ ಪದಗಳಲ್ಲ; ಬದಲಾಗಿ ಅದನ್ನು ಹೇಳುವಲ್ಲಿ ತೋರಲ್ಪಟ್ಟ ಭಾವಾವೇಶ. ನೀವು ಅದರ ಮೂಲಕ, ಗಾಂಧಿ ಮತ್ತು ಅವರ ಇತಿಹಾಸದ ಕುರಿತು ನನ್ನ ಅಧಿಕಾರವನ್ನು ಯಾರೂ ಪ್ರಶ್ನಿಸಲಾರರು ಎನ್ನುತ್ತಿದ್ದಿರಿ ಎಂದು ನನಗೆ ಅನಿಸಿತು.

ಈ ಸಂದರ್ಭದಲ್ಲಷ್ಟೇ ನಾನು, ಗಾಂಧಿಯವರು ಜೆಪಿ ಅವರನ್ನು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕಾಗಿ ಸೂಚಿಸಿದ್ದು ನಿಮಗೆ ತಿಳಿದಿದೆಯೇ? ಎಂದು ಪ್ರಶ್ನಿಸಿದ್ದು. ಆದರೆ ನೀವು ಅದಕ್ಕೆ ಆಧಾರ ಕೇಳಿದಿರಿ ಮತ್ತು ಇದರಿಂದ ನೀವು ಕಾಂಗ್ರೆಸ್‌ನ ಇತಿಹಾಸ ಕುರಿತ ಪರಿಣತರು ಎಂದು ಭಾವಿಸಿದ್ದ ನನಗೆ ನಿಮ್ಮ ಈ ಅ(ಪೂರ್ಣ) ಜ್ಞಾನದಿಂದ ಆಶ್ಚರ್ಯವಾಯಿತು. ನೀವು ಕೇಳಿದ ಈ ಆಧಾರ ಕೊಡುವ ಸಲುವಾಗಿಯೇ ನಾನು ನಿಮಗೆ ಪತ್ರ ಬರೆದಿದ್ದು. ಆದರೆ ನೀವು ಈ ಕುರಿತು ಮೌನವಾಗಿದ್ದೀರಿ. ಬಹುಶಃ ನೀವು ಇದನ್ನು ಪರಿಶೀಲಿಸುತ್ತಿದ್ದೀರಿ ಎಂದು ಭಾವಿಸುತ್ತೇನೆ. ಇದರ ಪರಿಣಾಮವಾಗಿ ಸಮಾಜವಾದಿಗಳು ಗಾಂಧಿಯವರೊಂದಿಗೆ ನಡೆಸುತ್ತಿದ್ದ ಸಂಭಾಷಣೆಗಳ ಗುಣಮಟ್ಟದ ಕುರಿತಾಗಿ ಅಲ್ಲದಿದ್ದರೂ ಅವರು ಹೊಂದಿದ್ದ ಸಾಮೀಪ್ಯದ ಗುಣಮಟ್ಟದ ಕುರಿತಾಗಿ ನಿಮ್ಮ ಮೌಲ್ಯಮಾಪನವನ್ನು ಬದಲಾಯಿಸಿಕೊಳ್ಳುತ್ತೀರಿ ಎಂದು ಆಶಿಸುತ್ತೇನೆ.

ಸಮಾಜವಾದಿ ಪರಂಪರೆ ಕಾಣೆಯಾಗಿದ್ದಕ್ಕೆ ಇಂದು ಪಶ್ಚಾತ್ತಾಪಪಟ್ಟೇನೂ ಉಪಯೋಗವಿಲ್ಲ. ಅದು ಅರ್ಧ ಆತ್ಮಹತ್ಯೆ ಹಾಗೂ ಇನ್ನರ್ಧ ಹೊರಗಿನಿಂದ – ಎರಡು ಮುಖಗಳ ನೆಹರೂ ಪ್ರಣೀತ ರಾಜಕಾರಣದ ಪ್ರತಿಪಾದಕರ ಮೂಲಕ– ನಡೆದ ಕೊಲೆ. ಇವರು ಇನ್ನೂ ಹೊಸ ಅವತಾರಗಳನ್ನು ತೊಟ್ಟು ನಮ್ಮ ನಡುವೆಯೇ

ಇದ್ದಾರೆ. ವಾಸ್ತವದಲ್ಲಿ ಸ್ವಾತಂತ್ರ್ಯಾನಂತರದ ಭಾರತದಲ್ಲಿ ಸಮಾಜವಾದಿಗಳು ಯಾರಿಗೂ ಬೇಕಿರಲಿಲ್ಲ; ಏಕೆಂದರೆ ಸಮಾಜವಾದಿಗಳು, ವಿಶೇಷವಾಗಿ ಲೋಹಿಯಾ ಅವರು, ಸೃಜನಾತ್ಮಕವಾಗಿ ಅರ್ಥೈಸಿದ ನಿಜವಾದ ಗಾಂಧಿ ಯಾರಿಗೂ ಬೇಕಿರಲಿಲ್ಲ. ಲೋಹಿಯಾ ಒಬ್ಬಂಟಿ ಹೋರಾಟಗಾರರಾಗಿದ್ದರು ಮತ್ತು ದುಃಖಿತರಾಗಿಯೇ ಮರಣವನ್ನಪ್ಪಿದರು. ಅವರನ್ನು ವೈವಿಧ್ಯಮಯ ಬೈಗುಳಗಳಿಂದ ಶಪಿಸಿ ಈಗ ಏನೂ ಪ್ರಯೋಜನವಿಲ್ಲ. ಅವರು ಏನೋ, ಅದೇ ಆಗಿದ್ದರು ಮತ್ತು ಅವರನ್ನು ಅಂತೆಯೇ ಸ್ವೀಕರಿಸಬೇಕು. ಅವರೆಂದರೆ ಈಗ ಬುದ್ಧಿಜೀವಿಗಳಿಗೆ ಇಷ್ಟ: ಏಕೆಂದರೆ ಅವರು ಈಗ ಇಲ್ಲವಾದ್ದರಿಂದ; ಆದರೆ ಅದೇ ಸಮಯದಲ್ಲಿ ಬೌದ್ಧಿಕವಾಗಿ ಅವರು ಬಹಳ ಪ್ರಚೋದನಕಾರಿ ವ್ಯಕ್ತಿತ್ವವಾದ್ದರಿಂದ! ಇದು ಇಂದಿನ ಬುದ್ಧಿಜೀವಿಗಳ ಕತೆ! ಸ್ವಾತಂತ್ರ್ಯ ಬರುವ ತನಕ ಹೀರೋ ಆಗಿದ್ದ ಜೆಪಿ ಕೂಡ ನೆಹರೂ ವಿರೋಧಿ ರಾಜಕೀಯಕ್ಕೆ ತೀರಾ ಒಳ್ಳೆಯವರಾಗಿ ಒದಗಿ ಬರಲಾರರಾದರು. ೧೯೫೨ರ ಚುನಾವಣೆಯ ನಂತರ ಅವರು ಕಣ್ಮರೆಯಾದರು. ಕೊನೆಗೆ ೧೯೭೪-೭೭ರಲ್ಲಿ ಭಾರತದ ಪ್ರಜಾತಂತ್ರದ ಸಂರಕ್ಷಕರಾಗಿ ಮರಳಿದರು. ಆದರೆ ರಾಜಕೀಯ ಚಿಂತಕರಾಗಿ ಅವರು ಅಲ್ಲಿಯೂ ಇರಲಿಲ್ಲ, ಇಲ್ಲಿಯೂ ಇರಲಿಲ್ಲ. ಅವರ ನೆರವಿನಿಂದ ರೂಪುಗೊಂಡ ಜನತಾ ಪಕ್ಷ ಇದಕ್ಕೊಂದು ಉತ್ತಮ ನಿದರ್ಶನ. ಆದರೆ ನಮ್ಮ ಬುದ್ಧಿಜೀವಿಗಳಲ್ಲಿ ಎಲ್ಲರೂ ಜೆಪಿ ಅವರನ್ನು ಆರಾಧಿಸುತ್ತಾರೆ ಮತ್ತು ಲೋಹಿಯಾ ಅವರ ವಿರುದ್ಧ ಒಂದಲ್ಲ ಒಂದು ತಕರಾರು ಹೊಂದಿದವರಾಗಿದ್ದಾರೆ! ಭಾರತದ ಬೌದ್ಧಿಕ 'ವರ್ಗ'ದ ಪಿತಾಮಹರಾದ ನೆಹರೂ ಅವರು ಇಂದಿಗೂ ಭಾರತದ ರಾಜಕೀಯ ಮನಸ್ಸನ್ನು ಆಳುತ್ತಿರುವಂತೆ ಕಾಣುತ್ತದೆ! ಇದು ನಿಮ್ಮ ಅಂದಿನ ಭಾಷಣದಲ್ಲಿ ಹಾಗೂ ನೀವು ನನಗೆ ನೀಡಿದ ಉತ್ತರದಲ್ಲಿ ವಿದಿತವಾಗಿತ್ತು. ಹಾಗಾಗಿ ನೀವು ನಿಮ್ಮ ಈ ಮೊದಲಿನ ಮೇಲ್‌ನಲ್ಲಿ ಸಮಾಜವಾದಿಗಳ ಕುರಿತು ಮಾಡುವ ಪ್ರಶಂಸೆ, ವಿಶೇಷವಾಗಿ ಲೋಹಿಯಾ ಹಾಗೂ ಜೆಪಿ ಅವರ ಬಗೆಗಿನ ಪ್ರಶಂಸೆ ಔಪಚಾರಿಕ ಎಂದಷ್ಟೇ ಅನಿಸುತ್ತದೆ.

ಹೌದು, ನಾನು ಮಂಡಿಸಿದ ವಾದದಲ್ಲಿ ನೀವು ತೋರಿಸಿದಂತೆ ಒಂದು ತಾಂತ್ರಿಕ ದೋಷ ಇದೆ. ಇಂಗ್ಲಿಷ್‌ನಲ್ಲಿ ಸಂಯುಕ್ತ ವಾಕ್ಯಗಳನ್ನು ರಚಿಸುವಲ್ಲಿ ನನಗಿರುವ ತೊಂದರೆಯ ಪರಿಣಾಮವದು. ನಾನು ಅಲ್ಲಿ ಹೇಳಬಯಸಿದ್ದೇನೆಂದರೆ, ಸಮಾಜವಾದಿಗಳು ಮಾರ್ಕ್ಸಿಸಂನ ನಿಷ್ಫಲತೆಯನ್ನು ಹೆಚ್ಚು ಹೆಚ್ಚು ಅರಿತಂತೆ ಗಾಂಧಿ ಅವರೆಡೆಗೆ ಹೆಚ್ಚು ವಾಲುತ್ತಾ ಹೋದರು ಮತ್ತು ಈ ಅರಿವು ೧೯೫೨ರ ಮಹಾಚುನಾವಣೆಯ ಸೋಲಿನ ಬಳಿಕ ಎದ್ದುಕಂಡು ಪಂಚಮಡಿ ಸಮಾವೇಶದಲ್ಲಿ ಲೋಹಿಯಾ ಅವರ (ತದನಂತರ 'ಸಮಾಜವಾದದ ಸೈದ್ಧಾಂತಿಕ ಅಡಿಪಾಯ' ಎನಿಸಿಕೊಂಡಂತಹ) ಭಾಷಣದ ರೂಪದಲ್ಲಿ ವ್ಯಕ್ತವಾಯಿತು. ಆದರೆ ನನ್ನ ಈ ತಪ್ಪು, ನನ್ನ ವಾದದ ಸಮಂಜಸತೆಯನ್ನು ಯಾವುದೇ ರೀತಿಯಲ್ಲಿ ಕುಂದಿಸುವುದಿಲ್ಲ ಎಂದು ನಾನು ಭಾವಿಸಿದ್ದೇನೆ.

ನಾನು ನನ್ನ ಪತ್ರದಲ್ಲಿ ಎತ್ತಿದ ಹಲವು ವಿಚಾರಗಳಿಗೆ ನಿಮ್ಮ ಪ್ರತಿಕ್ರಿಯೆಯನ್ನು ಕೇಳಲು ಕೌತುಕನಾಗಿದ್ದೆ. ಆದರೆ ನೀವು ಒಂದೋ ಅವುಗಳನ್ನು ಕಡೆಗಣಿಸಲು ನಿರ್ಧರಿಸಿದ್ದೀರಿ

ಅಥವಾ ಅವನ್ನು ಅಲ್ಪ ಮತ್ತು ವಿಪರೀತ ಸೂಕ್ಷ್ಮವೆಂದು ಕರೆದು ನಿರ್ಲಕ್ಷಿಸಲು ಪ್ರಯತ್ನಿಸಿದ್ದೀರಿ. ಅವು ನಿಜವಾಗಿ ಹಾಗಿದ್ದವೋ ಎಂದು ನಾನು ಯೋಚಿಸುತ್ತಿದ್ದೇನೆ! ಕರ್ನಾಟಕ ಹಾಗೂ ಭಾರತದ ಕುರಿತಾಗಿ ನಿಮ್ಮ ಬದ್ಧತೆಯ ವಿಚಾರ ನಿಮ್ಮ ಮತ್ತು ನಿಮ್ಮ ಆತ್ಮಸಾಕ್ಷಿಯ ನಡುವಿನದ್ದು ಎನ್ನುವುದನ್ನು ಗೌರವಿಸುತ್ತೇನೆ, ಆದರೆ ಕನ್ನಡ ಮತ್ತು ಕರ್ನಾಟಕ ಮೂಲತಃ ಒಂದರಿಂದ ಒಂದು ಬೇರ್ಪಡಿಸಲಾಗದಂತಹವು ಎಂಬ ಒಂದು ಮಾತನ್ನು ಹೇಳುತ್ತಾ.

ನೀವು ಸಂಬೋಧಿಸಿದ ಹಾಗೆ ನಾನು ಪ್ರೊಫೆಸರ್ ಅಲ್ಲ. ನಾನು ಆಕಾಶವಾಣಿ ಕೇಂದ್ರವೊಂದರ (ಆಲ್ಇಂಡಿಯಾ ರೇಡಿಯೋದ) ಸ್ವಯಂ ನಿವೃತ್ತ ನಿರ್ದೇಶಕ. ಮತ್ತು ನಿಮಗೆ ಹೆಚ್ಚಿನ ಮಾಹಿತಿಗಾಗಿ: ನಾನು ತುರ್ತುಪರಿಸ್ಥಿತಿಯ ದಿನಗಳಲ್ಲಿ ದೆಹಲಿಯಲ್ಲಿದ್ದೆ ಮತ್ತು ಆಕಾಶವಾಣಿಯ ವಾರ್ತಾ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೆ! ನಾನು ಜೆಪಿ ಅವರ ಸೆರೆಮನೆಯ ದಿನಚರಿಯನ್ನು ಕನ್ನಡಕ್ಕೆ ಅನುವಾದಿಸಿದ್ದೇನೆ ಹಾಗೂ ಮೈಸೂರಿನ ಒಬ್ಬ ಪ್ರಕಾಶಕ ಮಿತ್ರರ ಮೂಲಕ ಪ್ರಕಟಿಸಿದ್ದೇನೆ. ಡಿ.ಆರ್. ನಾಗರಾಜ್ ನನ್ನ ಪ್ರಿಯ ಮಿತ್ರರಾಗಿದ್ದರು ಮತ್ತು ಕಾಲೇಜಿನ ದಿನಗಳಲ್ಲಿ ನನ್ನ ಜೂನಿಯರ್ ಆಗಿದ್ದರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ನಾನು ಗಣಿತದಲ್ಲಿ ಎಂಎಸ್‌ಸಿ ಮಾಡುತ್ತಿದ್ದಾಗ ಅವರು ಕನ್ನಡದಲ್ಲಿ ಬಿಎ(ಆನರ್ಸ್) ಮಾಡುತ್ತಿದ್ದರು. ದೇವನೂರ ಮಹಾದೇವ ಕೂಡ ನನ್ನ ಮಿತ್ರರೇ.

ಶುಭಹಾರೈಕೆಗಳೊಂದಿಗೆ,

ಡಿ.ಎಸ್. ನಾಗಭೂಷಣ

ಗುಹಾ ಅವರ ಉತ್ತರ :

೯.೧೦.೨೦೧೭

ಪ್ರಿಯಶ್ರೀ ನಾಗಭೂಷಣ,

ಕ್ಷಮೆ ಇರಲಿ, ನಿಮ್ಮ ಈ ಮೇಲಿನ ಮೇಲ್‌ನಲ್ಲಿ ನೀವು ನಾನು ಗಾಂಧಿ ಮತ್ತು ಕಮಲಾದೇವಿಯವರನ್ನು ಕುರಿತು ಹೇಳಿದ್ದನ್ನು ತಪ್ಪಾಗಿ ಬಿಂಬಿಸಿದ್ದೀರಿ. ನಾನು ಸ್ಪಷ್ಟವಾಗಿ ಹಾಗೂ ನಿರ್ದಿಷ್ಟವಾಗಿ ಇವುಗಳನ್ನು ಹೇಳಿದ್ದೆ. ಅ) ಅವರು ಉಪ್ಪಿನ ಸತ್ಯಾಗ್ರಹದ ನಡಿಗೆಯಲ್ಲಿ ಮಹಿಳೆಯರ ಕುರಿತಾಗಿ ಗಾಂಧಿಯವರ ಮನಸ್ಸನ್ನು ಬದಲಾಯಿಸಿದರು; ಆ) ಅವರು ಗಾಂಧಿಯವರ ಸತ್ಯಾಗ್ರಹದ ಆಲೋಚನೆಯನ್ನು ಜನಾಂಗೀಯ ಶೋಷಣೆಯಿದ್ದ ಅಮೆರಿಕದ ದಕ್ಷಿಣ ಭಾಗದವರೆಗೆ ಕೊಂಡೊಯ್ದರು. ಆದರೆ ಈಗ ನೀವು ಗಾಂಧಿ ಮತ್ತು ಅವರು 'ರಾಜಕೀಯೇತರ ವಿಷಯಗಳ ಕುರಿತು' ಮಾತಾನಾಡಿದರೆಂದು ನಾನು ಹೇಳಿದೆ ಎನ್ನುತ್ತಿದ್ದೀರಿ!

ಜೆಪಿ ಮತ್ತು ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ವಿಷಯಕ್ಕೆ ಬಂದರೆ, ಹೆಗ್ಗೋಡಿನಲ್ಲಿ ನೀವು ಇದು ೧೯೪೦ರಲ್ಲಿ ಘಟಿಸಿದ್ದೆಂದು ಹೇಳಿದಿರಿ. ಈಗ ೧೯೪೮ ಎಂದು ಹೇಳುತ್ತಿದ್ದೀರಿ.

ನೀವು ಮೊದಲ ಬಾರಿಗೆ ತಪ್ಪಾಗಿ ಹೇಳಿದಿರಿ ಎಂದುಕೊಳ್ಳೋಣ (ನಾವೆಲ್ಲರೂ ಮಾಡುವಂತೆ); ೧೯೪೦-೪೨ರಲ್ಲಿ ಜಿನ್ನಾ ಅವರ ಸವಾಲಿಗೆ ಪ್ರತಿಯಾಗಿ ಕಾಂಗ್ರೆಸ್‌ಗೆ ಒಬ್ಬ ಮುಸ್ಲಿಂ ಅಧ್ಯಕ್ಷರಾಗುವುದು ಅಗತ್ಯವಿತ್ತು, ಹಾಗಾಗಿ ಜೆಪಿ ಅಧ್ಯಕ್ಷರಾಗುವುದನ್ನು ಕಲ್ಪಿಸಿಕೊಳ್ಳುವುದೂ ಕಷ್ಟವಾಗಿತ್ತು. ಆಜಾದ್ ಮಾತ್ರವೇ ಅಧ್ಯಕ್ಷರಾಗಬಹುದಿತ್ತು. ೧೯೪೮ರ ಹೊತ್ತಿನಲ್ಲಿ ಇದು ನಿಜಕ್ಕೂ ಸಾಧ್ಯವಾಗಿರಬಹುದು. ೧೯೪೮ರ ಹೊತ್ತಿಗೆ ಜೆಪಿ ಅವರ ಶೌರ್ಯ ಎಲ್ಲರ ಮನಸ್ಸಿನಲ್ಲಿಯೂ ನೆಲೆಯೂರಿತ್ತು; ಹಾಗೂ ಅವರು ನೆಹರು ಅವರಿಗೆ ಕೂಡ ಬಹಳ ಸಮೀಪವಾಗಿದ್ದರು. ಹಾಗಾಗಿ ನೀವು ಹೇಳುವುದು ನಿಜಕ್ಕೂ ಘಟಿಸಿರಬಹುದು. ನೆಹರೂ ಅವರೇ ಜೆಪಿ ಕಾಂಗ್ರೆಸ್ ಅಧ್ಯಕ್ಷರಾಗಲೆಂದು ಆಶಿಸಿರಬೇಕು. ಆದರೆ ಇದು ಗಾಂಧಿಯವರ ಸಮಗ್ರ ಬರಹಗಳಲ್ಲಿ ಕಾಣಸಿಗುವುದಿಲ್ಲ. ಮತ್ತು, ಗಾಂಧಿ ಅವರ ಬದುಕಿನ ಕೊನೆಯ ತಿಂಗಳುಗಳಲ್ಲಿ ಹೊಂದಿದ್ದ ಒಂದೇ ಕಾಳಜಿ ಹಿಂದೂ-ಮುಸ್ಲಿಂ ಸಾಮರಸ್ಯ. ಕಾಂಗ್ರೆಸ್‌ನ ಅಧ್ಯಕ್ಷರು ಯಾರಾಗಬೇಕು ಎನ್ನುವುದು ಅವರಿಗೆ ಬಹಳ ಮಹತ್ವದ್ದೇನಾಗಿರಲಿಕ್ಕಿಲ್ಲ.

ಇವತ್ತು ಕೆಲವರು ಲೋಹಿಯಾ ಅವರಿಗಿಂತ ನೆಹರೂ ಮತ್ತು ಜೆಪಿಯನ್ನು ಮೆಚ್ಚುತ್ತಾರೆಂದು ನೀವು ಆಶ್ಚರ್ಯ ತೋರಿಸಿದ್ದೀರಿ. ಒಂದು ಕಾರಣವೆಂದರೆ ಜೆಪಿ ಮತ್ತು ನೆಹರೂ ಇಬ್ಬರೂ ಸಭ್ಯ ಭಾಷೆಯಲ್ಲಿ ಮಾತನಾಡುತ್ತಿದ್ದರು, ತಮ್ಮ ರಾಜಕೀಯ ಎದುರಾಳಿಗಳ ಜೊತೆಗೂ ಕೂಡ. ಆದರೆ ಲೋಹಿಯಾ ಅನವಶ್ಯಕವಾಗಿ ವೈಯಕ್ತಿಕ ಹಾಗೂ ನಿಂದನಾತ್ಮಕ ಭಾಷೆಯನ್ನು ಬಳಸುತ್ತಿದ್ದರು. ನಿಮ್ಮ ಮೊದಲ ಮೇಲ್‌ನಲ್ಲಿ ನೀವು ನನ್ನನ್ನು 'ಇಂಗ್ಲಿಷ್ ಬಾವಿಯ ಮುದ್ದು ಕಪ್ಪೆ' ಎಂದು ಕರೆದಿರಿ; ನೆಹರೂ ಅಥವಾ ಜೆಪಿ (ಅಥವಾ ಗಾಂಧಿ ಅಥವಾ ಕಮಲಾದೇವಿ) ಬೌದ್ಧಿಕ ಹಾಗೂ ರಾಜಕೀಯ ಚರ್ಚೆಯಲ್ಲಿ ಇಂತಹ ಭಾಷೆಯನ್ನು ಬಳಸುತ್ತಿದ್ದರೆಂದು ನನಗನ್ನಿಸುವುದಿಲ್ಲ. ಲೋಹಿಯಾ ಅವರಲ್ಲಿನ ಈ ಚಾಳಿಯು ಅವರ ಅದ್ಭುತ ಬುದ್ಧಿವಂತಿಕೆ ಹಾಗೂ ಸೃಜನಶೀಲತೆಯನ್ನು ಮರೆಮಾಚಿತು ಹಾಗೂ ಮೋಸಗೈದಿತು.

ಆದರೆ ನಿಮ್ಮ ಕೊನೆಯ ಪ್ಯಾರಾ, ನಾನು ಕನ್ನಡ ತಿಳಿದಿಲ್ಲದೆ ಏನು ಕಳೆದುಕೊಂಡಿದ್ದೇನೆಂದು ಮತ್ತೊಮ್ಮೆ ತೋರಿಸಿತು. ನಾನು ದೇವನೂರ ಮಹಾದೇವ ಅವರ ಕುರಿತು ಮತ್ತಷ್ಟು ತಿಳಿಯ ಬಯಸುತ್ತೇನೆ ಹಾಗೂ ಅವರಂತಹವರನ್ನು ಅವರದೇ ಭಾಷೆಯಲ್ಲಿ ಓದಬಯಸುತ್ತೇನೆ. ಆದರೆ ಈ ವಿಚಾರದಲ್ಲಿ ಕೂಡ ನಿಮ್ಮ ತಪ್ಪು ಕಲ್ಪನೆಗಳಲ್ಲೊಂದನ್ನು ನಿವಾರಿಸ ಬಯಸುತ್ತೇನೆ. ನಾನು ಅಧಿಕಾರಯುತವಾಗಿ ನಾಗರಾಜ್, ಅನಂತಮೂರ್ತಿ ಮತ್ತು ಕಾರ್ನಾಡ್ ಅವರ ಹೆಸರುಗಳನ್ನೆಸೆಯುತ್ತೇನೆಂದು ನೀವು ಹೇಳಿದ್ದೀರಿ. ಅದಕ್ಕೆ ಬದಲಾಗಿ ಅವರನ್ನು ಗೆಳೆಯರಾಗಿ ಅರಿಯುವಷ್ಟು ಅದೃಷ್ಟವಂತನಾಗಿದ್ದೇನೆ ಎಂದಷ್ಟೇ ನಾನು ಹೇಳಿದ್ದು. ನನ್ನ ವೈಯಕ್ತಿಕ ಆಭಾರದ ಹೊರತಾಗಿ ನಾನು ಮತ್ತೇನನ್ನೂ ಹೇಳ ಹೋಗಿಲ್ಲ. ಕೆಲವೇ ಗೆಳೆತನಗಳನ್ನಾಧರಿಸಿ ಕನ್ನಡದ ವಿದ್ವತ್ತು ಹಾಗೂ ಸಾಹಿತ್ಯದ ಆಳವಾದ ಜ್ಞಾನವನ್ನು ಹೊಂದಿರುವುದಾಗಿ ನಾನು ಎಲ್ಲಿಯೂ ಹೇಳಿಲ್ಲ. ನಾನು ಅಷ್ಟು ಮೂರ್ಖನೂ ಅಲ್ಲ, ಅಷ್ಟು ದುರಹಂಕಾರಿಯೂ ಅಲ್ಲ. ನನ್ನ ಬದುಕಿನಲ್ಲಿ ಭಾರತದಾದ್ಯಂತ ಹಿಂದಿ, ಬೆಂಗಾಳಿ, ಮಲಯಾಳಂ, ತಮಿಳು

ಮತ್ತು ಒರಿಯಾ ಭಾಷೆಗಳ ಹಲವು ಅಸಾಮಾನ್ಯ ಲೇಖಕರನ್ನು ವೈಯಕ್ತಿಕವಾಗಿ ಸಮೀಪದಲ್ಲಿ ತಿಳಿದುಕೊಳ್ಳುವ ಅದೃಷ್ಟ ನನಗೆ ದೊರೆತಿದೆ. ಈ ಭೇಟಿ, ಮುಖಾಮುಖಿಗಳು ನನ್ನನ್ನು ಈ ಭಾಷಾ ಪರಂಪರೆಗಳೆಡೆಗೆ ನನ್ನ ಸೊಕ್ಕು ಕಡಿಮೆಯಾಗುವಂತೆ ಮಾಡಿದೆ. ಅಂತೆಯೇ ನನ್ನ ಕನ್ನಡ ಗೆಳೆಯರ ವಿಷಯದಲ್ಲೂ ಕೂಡ. ನಿಮ್ಮಿಂದ ಕೂಡ ಬಹಳಷ್ಟು ಕಲಿಯಬಲ್ಲೆ ಎಂದು ನನಗೆ ಖಾತ್ರಿಯಿದೆ.

ಶುಭಹಾರೈಕೆಗಳೊಂದಿಗೆ,

ಆರ್. ಗುಹಾ

ಡಿಎಸ್ಸೆನ್ ಉತ್ತರ :

೯.೧೦.೨೦೦೭

ಪ್ರಿಯ ಶ್ರೀ ಗುಹಾ,

ಕ್ಷಮಿಸಿ. ನೀವು ಪುನಃ ನಾನು ಆ ದಿನ ಆಡಿದ ಮತ್ತು ಕಳೆದೆರಡು ಪತ್ರಗಳಲ್ಲಿ ಹೇಳಿದ ಮಾತುಗಳನ್ನು ತಪ್ಪಾಗಿ ಗ್ರಹಿಸುತ್ತಿರುವಿರಿ.

ನಾನು ಹೇಳುತ್ತಿರುವುದು: ಗಾಂಧಿ ಸಮಾಜವಾದಿಗಳೊಂದಿಗೆ ಯಾವುದಾದರೂ ಮಹತ್ವದ ಸಂಭಾಷಣೆಗಳನ್ನು ನಡೆಸಿದ್ದರೋ? ಇಲ್ಲವೋ? ಎಂಬುದಷ್ಟೇ ಆಗಿತ್ತು. ಈ ಪ್ರಶ್ನೆಗೆ ಆ ದಿನ ನಿಮ್ಮ ಉತ್ತರ 'ಇಲ್ಲ' ಎಂಬುದಾಗಿತ್ತು. ನೀವು ಗಾಂಧಿ ಮತ್ತು ಅವರ ಸಮೀಪವರ್ತಿಗಳೆಂದು ಗುರುತಿಸಿದವರ ಸುತ್ತ ಗಿರಕಿ ಹೊಡೆಯುತ್ತ ನಿಮ್ಮ ಉತ್ತರವನ್ನು ಸಮರ್ಥಿಸಿಕೊಂಡಿರಿ. ಹೌದು, ಕಮಲಾದೇವಿಯವರೊಂದಿಗೆ ಗಾಂಧಿ ನಡೆಸಿದ ಸತ್ಯಾಗ್ರಹದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಕುರಿತಾದ ಸಂಭಾಷಣೆಗಳ ಬಗ್ಗೆ ನೀವು ಪ್ರಸ್ತಾಪಿಸಿದ್ದು ನಿಜ. ಅದೇ ಸಮಯಕ್ಕೆ ಇದನ್ನು ಹೊರತುಪಡಿಸಿ ಗಾಂಧಿ ಸಮಾಜವಾದಿಗಳೊಂದಿಗೆ ಯಾವುದೇ ಬಗೆಯ ಮಹತ್ವದ ಮಾತುಕತೆಗಳನ್ನು ನಡೆಸಿರಬಹುದಾದ ಸಾಧ್ಯತೆ ಇಲ್ಲ ಎಂದೂ ನೀವು ಸ್ಪಷ್ಟವಾಗಿ ಹೇಳಿದಿರಿ. ಆ ದಿನ ನೀವು ಎತ್ತಿಕೊಂಡ ಗಾಂಧಿಯ ನಾಲ್ಕು ಸಂಭಾಷಣೆಗಳಿಗಿಂತ ಮುಖ್ಯವಲ್ಲದಿದ್ದರೂ ಅದರಷ್ಟೇ ಪ್ರಾಮುಖ್ಯವಾದ ಮಾತುಕತೆಗಳು ಗಾಂಧಿ ಮತ್ತು ಸಮಾಜವಾದಿಗಳೊಂದಿಗೆ ನಡೆದಿದೆ ಎಂಬ ನನ್ನ ವಾದಕ್ಕೆ ಪ್ರತ್ಯುತ್ತರವಾಗಿಯಷ್ಟೇ ನೀವು ಕಮಲಾದೇವಿಯವರ ಬಗೆಗಿನ ಈ ಮಾತುಗಳನ್ನಾಡಿದ್ದು. ಅಂದು ಬಹು ಮುಖ್ಯವಾಗಿ ನಮ್ಮ ಚರಿತ್ರಕಾರರ (ವಾರೆಗಣ್ಣಿನ ನೋಟ) ಕುರಿತಾಗಿ ನಾನು ಪ್ರತಿಕ್ರಿಯೆ ನೀಡುತ್ತಿದ್ದೆ. ನೀವು ಎತ್ತಿಕೊಂಡ ಆ ನಾಲ್ಕು ಸಂಭಾಷಣೆಗಳೇ ಬಹುಮುಖ್ಯ ಎಂಬ ನಿಮ್ಮ ಆಯ್ಕೆಯ ಬಗ್ಗೆಯಷ್ಟೆ ನಾನು ಆಕ್ಷೇಪಣೆ ಎತ್ತಿದ್ದೆ. ಶ್ರೀಯುತ ಗುಹಾ ಅಥವಾ ಬೇರೆ ಯಾರಾದರೂ ಗಾಂಧಿ, ಸಮಾಜವಾದಿಗಳೊಂದಿಗೆ ನಡೆಸಿದ ಮಾತುಕತೆಗಳನ್ನು ಮಹತ್ವದ್ದೆಂದು ಪರಿಗಣಿಸುವ ಅಥವಾ ಪರಿಗಣಿಸದಿರುವ ಕುರಿತು ನನಗೆ ಹೆಚ್ಚಿನ ಆಸಕ್ತಿ ಇರಲಿಲ್ಲ.

ಕಮಲಾದೇವಿಯವರು ಗಾಂಧಿಯೊಂದಿಗೆ ನಡೆಸಿದ ಸಂಭಾಷಣೆಗಳನ್ನು ನಾನು 'ರಾಜಕೀಯೇತರ' ಎಂದು ಹೇಳಿದ್ದು ಹೌದು. ಈ ಸಂಭಾಷಣೆಗಳು ನೇರವಾಗಿ ರಾಜ್ಯ ಮತ್ತು ಅದರ ಕಾರ್ಯನೀತಿಗಳಿಗೆ ಸಂಬಂಧಿಸಿಲ್ಲವಾದ್ದರಿಂದ ನಾನು ಹಾಗೆ ಹೇಳಿದೆ. ನೀವು ಆ ಮಾತುಕತೆಗಳನ್ನು ರಾಜಕೀಯವಾದದ್ದು ಎನ್ನುವುದಾದರೆ ಅದನ್ನು ನಾನು ಒಪ್ಪಲು ಸಿದ್ಧನಿದ್ದೇನೆ. ಈ ಸಂಬಂಧ ನಿಮ್ಮನ್ನು ತಪ್ಪಾಗಿ ಅರ್ಥೈಸುವ ಯಾವುದೇ ಉದ್ದೇಶ ನನಗಿಲ್ಲ.

ಲೋಹಿಯಾ ಅವರ ಭಾಷೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಹೌದು, ಅವರ ಮಾತುಗಳು ಕಟುವಾಗಿರುತ್ತಿದ್ದವು– ಕೆಲವೊಮ್ಮೆ ಅಗತ್ಯಕ್ಕಿಂತಲೂ ಹೆಚ್ಚಾಗಿ. ಆದರೆ ಅವರು ಅತ್ಯಂತ ಪ್ರೀತಿ ಸೂಸುವ ಮನುಷ್ಯರೂ ಆಗಿದ್ದರೆಂದು ಅವರ ಸಮೀಪದ ಒಡನಾಡಿಗಳಾದ ಮಧು ಲಿಮಯೆ, ಕಿಶನ್ ಪಟ್ನಾಯಕ್, ಲಾಡ್ಲಿ ಮೋಹನ ನಿಗಂ, ಪ್ರೊ. ಕೇಶವರಾವ್ ಜಾಧವ್, ಶ್ರೀಮತಿಯರಾದ ಇಂದುಮತಿ ಕೇಲ್ಕರ್, ರೋಮಾ ಮಿತ್ರ ಮುಂತಾದವರನ್ನು ಎಪ್ಪತ್ತು–ಎಂಬತ್ತರ ದಶಕಗಳಲ್ಲಿ ದೆಹಲಿ ಮತ್ತಿತರ ಕಡೆಗಳಲ್ಲಿ ಭೇಟಿಯಾದಾಗ ಕೇಳಿ ತಿಳಿದಿದ್ದೇನೆ. ಅವರ ಪ್ರಕಾರ ಮಧ್ಯಮವರ್ಗವನ್ನು ಓಲೈಸುವ ನೆಹರೂ ರಾಜಕಾರಣದ ಆ ದಿನಗಳಲ್ಲಿ ಲೋಹಿಯಾರಿಗೆ ಬಹುಶಃ ಇಂತಹ ಕಠಿಣ ಭಾಷೆಯ ಬಳಕೆ ಅನಿವಾರ್ಯವಾಗಿಬಿಟ್ಟಿತ್ತು. ಅಷ್ಟಕ್ಕೂ ಲೋಹಿಯಾ ಕೆಟ್ಟ ಮನುಷ್ಯನೇನಲ್ಲ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಶ್ರೇಷ್ಠ ಸೇನಾನಿ ಆತ. ಆದರೆ ಈ ನೆಹರೂವಿನ ಪೊಲೀಸರು ಪ್ರತಿಭಟನೆಯ ಸಂದರ್ಭಗಳಲ್ಲಿ ಆತನನ್ನು ನಡೆಸಿಕೊಂಡ ರೀತಿ ಮಾತ್ರ ಹೀನಾಯವಾಗಿತ್ತು.

ಆಗಿನ ಪ್ರಧಾನಿ ನೆಹರೂ ಮತ್ತು ಗೃಹ ಮಂತ್ರಿ ಸರ್ದಾರ್ ಪಟೇಲ್‌ರ ನಡುವಿನ ಪತ್ರಗಳನ್ನೊಮ್ಮೆ ನೀವು ಗಮನಿಸಬೇಕು. (ನೋಡಿ : ಲೋಹಿಯಾರ ಕಲೆಕ್ಟೆಡ್ ವರ್ಕ್ಸ್: ಮಸ್ತ್‌ರಾಂ ಕಪೂರ್) ಅಂತಾರಾಷ್ಟ್ರೀಯ ಸಮ್ಮೇಳನವೊಂದರಲ್ಲಿ ಭಾಗವಹಿಸಲು ಲೋಹಿಯಾರನ್ನು ಜೈಲಿನಿಂದ ಬಿಡುಗಡೆ ಮಾಡಿದರೆ ಆಗಬಹುದಾದ ಒಳಿತು–ಕೆಡುಕುಗಳ ಕುರಿತ ಆ ಪತ್ರ ವ್ಯವಹಾರದಲ್ಲಿನ ಕೆಲ ಕುಚೇಷ್ಟೆಯ ಮಾತುಗಳನ್ನು ನೀವು ಓದಬೇಕು. ಲೋಹಿಯಾ, ತನ್ನ ಕಾಲದ ಇಂಗ್ಲಿಷ್ ಮಾತನಾಡುವ ವರ್ಗದಿಂದ ಇನ್ನೂ ಹೆಚ್ಚಿನ ಸಹಾನುಭೂತಿಯ ಪ್ರತಿಕ್ರಿಯೆಗೆ ಮತ್ತು ಸಂವಾದಕ್ಕೆ ಅರ್ಹರಿದ್ದರು ಎಂದು ನಾನು ಭಾವಿಸುತ್ತೇನೆ. ನೆನಪಿಡಿ. ನೆಹರೂ ಮತ್ತು ಜೆ.ಪಿ ತರದವರು ಚರಿತ್ರೆಯ ಭಾಗವಾಗುತ್ತಾರೆ. ಅದೇ ಲೋಹಿಯಾ ತರದವರು ಸದಾ ನಮ್ಮೊಳಗೆ ಜೀವಂತವಾಗಿರುತ್ತಾರೆ ಮತ್ತು ನಮ್ಮನ್ನು ಸದಾ ಎಚ್ಚರಿಕೆಯಲ್ಲಿಟ್ಟಿರುತ್ತಾರೆ. ಈ ಸಂದರ್ಭದಲ್ಲಿಯೇ ನಾನು ನಿಮ್ಮಂತಹವರನ್ನು 'ಇಂಗ್ಲಿಷ್ ಬಾವಿಯಲ್ಲಿನ ಮುದ್ದು ಕಪ್ಪೆಗಳು' ಎಂದು ಕರೆದಿದ್ದು. ಈ ಮಾತು ಅಪರಾಧವೆನ್ನುವುದಾದರೆ, ಬೆಂಗಳೂರಿನಲ್ಲಿದ್ದೂ ಕನ್ನಡ ಕಲಿಯುವ ಅಗತ್ಯ ನನಗೆ ಕಾಣಲಿಲ್ಲ ಎಂಬ ನಿಮ್ಮ ಸಮರ್ಥನೆ ಕೂಡ ಅಪರಾಧವೇ.

ಇಂತಿ ನಿಮ್ಮ,

ಡಿ ಎಸ್ ನಾಗಭೂಷಣ

ಮರೆತ ಮಾತು: ಜೆಪಿ ಯವರನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ನೇಮಿಸುವಂತೆ ಗಾಂಧಿ ನೀಡಿದ ಪ್ರಸ್ತಾಪದ ಕುರಿತು ನೀವು ಹೇಳಿದ್ದನ್ನು ಬರೆಯಲು ಮರೆತೆ. ನೀವಿದನ್ನ ನೆಹರೂ ಅವರ ಪ್ರಸ್ತಾಪ ಎಂದಿರಿ. ಇಂತಹ ಒಂದು ಪ್ರಸ್ತಾಪದ ಕುರಿತು ನಿಮಗೆ ಖಚಿತ ಅರಿವಿಲ್ಲದಿದ್ದರೂ ಈ ಮಾತನ್ನ ಹೇಳಿದಿರಿ. ನನ್ನ ಓದಿನ ಪ್ರಕಾರ ಇದು ಗಾಂಧಿಯೇ ಮುಂದಿಟ್ಟ ಪ್ರಸ್ತಾಪ. ಗಾಂಧಿ ಮುಂದಿಟ್ಟ ಈ ಪ್ರಸ್ತಾಪವನ್ನು ನೆಹರೂರಿಂದ ಬಂದ ಪ್ರಸ್ತಾಪವೆಂದು ನೀವೇಕೆ ತಿರುಚುವಿರೋ ನನಗೆ ತಿಳಿಯಲಿಲ್ಲ. ಆ ಸಮಯಕ್ಕಾಗಲೇ ಜೆಪಿಯವರ ಸಾಹಸಮಯತೆ ಚೆನ್ನಾಗಿ ಸ್ಥಾಪಿತವಾಗಿತ್ತು ಹಾಗೂ ಜೆಪಿ ನೆಹರೂಗೆ ಹತ್ತಿರವಾಗಿದ್ದರು ಎಂದು ನೀವು ಹೇಳಿದಿರಿ. ಇತಿಹಾಸದ ಕುರಿತ ಈ ಬಗೆಯ ನಿರೂಪಣೆಯ ಕುರಿತೇ ನನಗೆ ನಿಮ್ಮ ಮೇಲೆ ಆಕ್ಷೇಪಣೆಗಳಿರುವುದು. ೧೯೪೮ರ ಬಹು ಮೊದಲೇ ದೇಶವಾಸಿಗಳ ಕಣ್ಣಿಗೆ ಜೆ.ಪಿ ನಾಯಕರಾಗಿದ್ದರು ಎಂಬುದು ನಿಮಗೆ ತಿಳಿದಿರಬೇಕು. ಅವರ ಆ ಹೊತ್ತಿನ ಧೈರ್ಯಕ್ಕೆ ಸಾಕಷ್ಟು ಉದಾಹರಣೆಗಳನ್ನು ಕೊಡಬಹುದು. ೧೯೪೨ರ ನವೆಂಬರಿನಲ್ಲಿ ಹಜಾರಿಬಾಗಿನ ಜೈಲಿನಿಂದ ತಪ್ಪಿಸಿಕೊಂಡದ್ದು ಒಂದು ಅಂತಹ ಉದಾಹರಣೆ. ಜೆಪಿ ಯಾವತ್ತೂ ನೆಹರೂ ಪರವಾಗಿದ್ದರು ಮತ್ತು ಎಂದೂ ಅವರ ವಿರೋಧ ಕಟ್ಟಿಕೊಳ್ಳಲಿಲ್ಲ.

ಇತಿಹಾಸದ ಕುರಿತಾದ ನನ್ನ ಓದು ಕಾಂಗ್ರೆಸ್‌ನ ಹೆಚ್ಚಿನ ನಾಯಕರ ಕಾರ್ಯವೈಖರಿಯಿಂದ ಗಾಂಧಿ ಆ ಹೊತ್ತಿಗೆ ಭ್ರಮನಿರಸನಗೊಂಡಿದ್ದರು ಎಂಬುದನ್ನ ದೃಢಪಡಿಸುತ್ತದೆ. ಸಮಾಜವಾದಿಗಳನ್ನು ಪಳಗಿಸಿ ದೇಶ ಕಟ್ಟುವ ಕೆಲಸದಲ್ಲಿ ಅವರನ್ನು ದುಡಿಸಿಕೊಳ್ಳುವ/ಜವಾಬ್ದಾರಿ ನೀಡುವ ಆಕಾಂಕ್ಷೆಯೂ ಗಾಂಧಿಗಿತ್ತು. ಹಾಗಾಗಿ ಈ ಪ್ರಸ್ತಾಪ ಗಾಂಧಿಯದ್ದು. ಕಾಂಗ್ರೆಸ್ಸಿನೊಳಗಿದ್ದ ಬಲಪಂಥೀಯರಿಂದ ಪ್ರಬಲ ವಿರೋಧ ಎದುರಾಗಬಹುದೆಂಬ ಭಯದಿಂದ ನೆಹರೂ ಈ ಪ್ರಸ್ತಾಪ ಒಪ್ಪಿಕೊಳ್ಳಲಿಲ್ಲ. ಪರಿಣಾಮ ಬಾಬು ರಾಜೇಂದ್ರ ಪ್ರಸಾದರ ಆಯ್ಕೆಯಾಯಿತು. ಗಾಂಧಿಯ ಸಂಗ್ರಹಿತ ಕೃತಿಗಳಾಚೆಯೂ ಸಾಕಷ್ಟು ಇತಿಹಾಸವಿದೆ ಎಂಬುದನ್ನು ನಿಮಗೆ ಹೇಳಬೇಕಾಗಿಲ್ಲ.

ಮರೆತ ಮಾತು ೨: ಕನ್ನಡ ಸಾಹಿತ್ಯ ಪರಂಪರೆಯ ಕುರಿತಾದ ನಿಮ್ಮ ಸೀಮಿತ ತಿಳುವಳಿಕೆಯ ಕುರಿತಾದ ನನ್ನ ಆಕ್ಷೇಪಣೆಗೆ ನಿಮ್ಮ ಸಮರ್ಥನೆಯ ಬಗ್ಗೆ. ಈ ಕುರಿತ ನನ್ನ ಅಭಿಪ್ರಾಯಗಳು ಶಿವಮೊಗ್ಗ ಕರ್ನಾಟಕ ಸಂಘವನ್ನುದ್ದೇಶಿಸಿ ನೀವು ಮಾತನಾಡಿದ ಪತ್ರಿಕಾ ವರದಿಯನ್ನಾಧರಿಸಿದ್ದು. ಈಗಲೂ ನನಗನ್ನಿಸುವುದು, ನೀವು ಕನ್ನಡ ಸಾಹಿತ್ಯ ಪರಂಪರೆಯ ಕುರಿತು ಅಧಿಕಾರಯುತ ಧಾಟಿಯಲ್ಲಿ ಮಾತನಾಡುವುದನ್ನ ಬಿಡಬೇಕು. ಏಕೆಂದರೆ, ಈ ವಿಷಯದ ಕುರಿತಾದ ನಿಮ್ಮ ಜ್ಞಾನ ಸೀಮಿತವಾದದ್ದು ಹಾಗೂ ಈ ಜ್ಞಾನವೂ ಸಹ ಕೆಲವೇ ಸಾಹಿತಿಗಳ ಒಡನಾಟದಿಂದ ಪಡೆದಂತಹದ್ದು; ಅದೂ, ಇಂಗ್ಲಿಷಿನಲ್ಲಿ. ಶೆಲ್ಡನ್ ಪೊಲಾಕ್ ಸಹ ಕನ್ನಡ ಸಾಹಿತ್ಯ ಪರಂಪರೆಯ ಕುರಿತಾದ ತನ್ನ ತಿಳುವಳಿಕೆಯನ್ನು ನಿಮ್ಮ ಹಾಗೆ ಸಾರ್ವಜನಿಕವಾಗಿ ತೋರಿಸಿಕೊಂಡಿಲ್ಲ.

ಗುಹಾ ಅವರ ಉತ್ತರ

೧೦.೧೦.೧೭

ಪ್ರೀತಿಯ ಶ್ರೀ ನಾಗಭೂಷಣ,

ನಮ್ಮ ಈ ಪತ್ರ ವ್ಯವಹಾರ, ಈ ವರ್ಷದ ಮೊದಲಿಗೆ ನಾನು ನಡೆಸಿದ ಇನ್ನೊಂದು ಪತ್ರ ವ್ಯವಹಾರವನ್ನು ನನಗೆ ನೆನಪಿಸಿತು. ಮಧು ಮತ್ತು ಪ್ರಮೀಳಾರ ಮಗ ಉದಯ್ ದಂಡವತೆಯೊಂದಿಗೆ ನಾನು ನಡೆಸಿದ ಮಾತುಕತೆ ಈ ಕೆಳಗಿನ ಕೊಂಡಿಯಲ್ಲಿದೆ. ಅಲ್ಲಿ ಸಮಾಜವಾದಿಗಳ ಕುರಿತಾದ ನನ್ನ ಮೆಚ್ಚುಗೆ ಮತ್ತು ದೇಶಕ್ಕೆ ಅವರ ಕೊಡುಗೆಗಳಿಗೆ ಸರಿಯಾದ ನ್ಯಾಯ ಸಿಗಬೇಕು ಎಂಬ ನನ್ನ ಕಳಕಳಿಯನ್ನು ನೀವು ಈ ಪತ್ರಗಳಲ್ಲಿ ಕಾಣುತ್ತೀರಿ.

ಜೊತೆಗೆ ೨೦೦೫ ರಲ್ಲಿ ನಾನು ಮಧು ದಂಡವತೆಗೆ ಬರೆದಿದ್ದು ಸಹ ಇಲ್ಲಿದೆ.

http://www.thehindu.com/thehindu/mag/೨೦೦೫/೧೧/೨೦/stories/೨೦೦೫೧೧೨೦೦೦೨೪೦೩೦೦.htm

ನಾನಿಲ್ಲಿ ಬರೆದಿದ್ದು 'ಗಮನಾರ್ಹವಾದ ರಾಜಕೀಯ ಪರಂಪರೆಯೊಂದರಲ್ಲಿ ಎದ್ದು ಕಾಣುವ ಹೆಸರು ದಂಡವತೆಯವರದ್ದು. ಸಮಾಜವಾದಿ ಚಳುವಳಿಯ ಕೊಂಬೆಗಳಿಂದ ಬೆಳೆದು ಬಂದ ಕೆಲವೇ ಪ್ರತಿಭಾವಂತರಲ್ಲಿ ದಂಡಾವತೆಯವರು ಆಧುನಿಕ ಭಾರತದ ಅತ್ಯಂತ ಪ್ರಾಮಾಣಿಕ ರಾಜಕಾರಣಿ.'

ಇನ್ನೊಮ್ಮೆ ನಾನು ಒತ್ತಿ ಹೇಳಬಯಸುವುದೆಂದರೆ, ಸಮಾಜವಾದಿಗಳು ಗಾಂಧಿ ಬದುಕಿದ್ದಾಗ ಅವರಿಗೆ ಎಷ್ಟು ಹತ್ತಿರವಾಗಿದ್ದರು ಮತ್ತು ಹತ್ತಿರವಾಗಿರಲಿಲ್ಲ ಎನ್ನುವುದರ ಮೇಲೆ ಅವರ ಮಾತುಕತೆಗಳ ಮಹತ್ವ ನಿಂತಿದೆ. ನನಗಿಂತ ಹೆಚ್ಚು ಓದಿಕೊಂಡಿರುವ ನನ್ನ ಸಹೋದ್ಯೋಗಿಯೊಂದಿಗೆ ಈ ಕುರಿತು ಚರ್ಚಿಸಿದಾಗಲೂ ಗಾಂಧಿ, ಜೆಪಿಯ ಹೆಸರನ್ನು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಪ್ರಸ್ತಾಪಿಸಿದ್ದರ ಕುರಿತು ಯಾವುದೇ ದಾಖಲೆಗಳು ಲಭ್ಯವಿಲ್ಲದಿರುವುದು ತಿಳಿದುಬಂತು. ಆತ ಗಮನಿಸಿದ ಹಾಗೆ ಒಂದೊಮ್ಮೆ ಗಾಂಧಿ, ಜೆಪಿಯ ಹೆಸರನ್ನು ಪ್ರಸ್ತಾಪಿಸಿದ್ದರೂ ಸರ್ದಾರ್ ಪಟೇಲ್ (ನೆಹರೂ ಅಲ್ಲ) ಒಂದೇ ಏಟಿಗೆ ಈ ಪ್ರಸ್ತಾಪವನ್ನು ತಳ್ಳಿಹಾಕಿಬಿಡುತ್ತಿದ್ದರು. ಮತ್ತೂ ರಾಜೆಂದ್ರ ಪ್ರಸಾದ್ ೧೯೪೪೮ರಲ್ಲಿ ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾಗಿದ್ದರೆ ಹೊರತು ಕಾಂಗ್ರೆಸ್ಸಿನದಲ್ಲ. ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದವರು ಬಲಪಂಥೀಯ ಪಟೇಲ್‌ರಿಗೆ ಹತ್ತಿರವಾಗಿದ್ದ ಪಟ್ಟಾಭಿ ಸೀತಾರಾಮಯ್ಯ.

ಉದಯ್ ಅವರೊಂದಿಗೆ ಕಳೆದ ಏಪ್ರಿಲ್‌ನಲ್ಲಿ ನಡೆಸಿದ ಮಾತುಕತೆಯಲ್ಲಿ ನಾನು ಹೇಳಿದ್ದು:

'ಸಮಕಾಲೀನ ಭಾರತದ ಅತಿ ದೊಡ್ಡ ದುರಂತಗಳಲ್ಲಿ ಸಮಾಜವಾದಿ ಚಳುವಳಿಯ ಸಾವು ಸಹ ಒಂದು. ಸಮಾಜವಾದಿಗಳು ಕಮ್ಯುನಿಷ್ಟರಂತಲ್ಲ. ಅವರು

ದೇಶಭಕ್ತರಾಗಿದ್ದರು. ಅವರು ಕಾಂಗ್ರೆಸ್ಸಿನಂತಲ್ಲ. ಅವರು ಪ್ರಾಮಾಣಿಕವಾಗಿ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಗಾಗಿ (ಲಿಂಗ ಸಮಾನತೆಗೂ) ಹೋರಾಡಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಸಮಾಜವಾದಿಗಳ ಪಾತ್ರ ಮತ್ತು ಸ್ವಾತಂತ್ರ್ಯ ನಂತರದ ರಾಜಕೀಯ ಜೀವನದಲ್ಲಿ ಸಮಾಜವಾದಿಗಳ ಕೊಡುಗೆಗಳ ಕುರಿತು ಮಹತ್ವದ ಪುಸ್ತಕವೊಂದು ಸಂಶೋಧನೆಗಾಗಿ ಮತ್ತು ಪ್ರಕಟಣೆಗಾಗಿ ಕಾದು ಕುಳಿತಿದೆ.'

ಇಂತಹ ಪುಸ್ತಕವೊಂದು ಬರೆಯುವ ತುಡಿತ ನಿಮ್ಮೊಳಗೆ ಇರಬಹುದೆಂದು ಭಾವಿಸುವೆ. ಒಂದೊಮ್ಮೆ ಕೈಗೆತ್ತಿಕೊಂಡರೆ ಇದೊಂದು ಮಹತ್ವದ ಕಾರ್ಯವಾದೀತು.

ಇಂತಿ,

ರಾಮಚಂದ್ರ ಗುಹಾ

ಡಿಎಸ್ಸೆನ್ ಉತ್ತರ :

೧೦-೧೦-೧೭

ಶ್ರೀ ಗುಹಾ,

ನಿಮ್ಮ ಪ್ರತಿಕ್ರಿಯೆಗೆ ಧನ್ಯವಾದಗಳು. ಆ ದಿನ ನಿಮ್ಮ ಮಾತಿಗೆ ನನ್ನ ಆಕ್ಷೇಪಣೆ ಇದ್ದದ್ದು ಗಾಂಧಿಯವರ ಪ್ರಮುಖ ಮಾತುಕತೆಗಳ ಪಟ್ಟಿಯಲ್ಲಿ ಸಮಾಜವಾದಿಗಳೊಂದಿಗೆ ನಡೆಸಿದ ಮಾತುಕತೆಗಳನ್ನು ನೀವು ಯಾಕೆ ಪರಿಗಣಿಸಲಿಲ್ಲ ಎಂಬುದಷ್ಟೇ ಆಗಿತ್ತೆಂದು ಮತ್ತೊಮ್ಮೆ ಹೇಳಬಯಸುತ್ತೇನೆ. ನಿಮ್ಮ ಈ ಹಿಂದಿನ ಪತ್ರ(ಮೇಲ್)ಗಳಲ್ಲಿ ಕಾಣುವ ಸಮಾಜವಾದಿಗಳನ್ನು ಕುರಿತು ನಿಮಗಿರುವ ಗೌರವವನ್ನು ಮನಗಂಡ ಮೇಲೆ ನನ್ನ ಆಕ್ಷೇಪಣೆ ಇನ್ನಷ್ಟು ಪ್ರಸ್ತುತವೆಂದು ನನಗನ್ನಿಸುತ್ತಿದೆ. ಗಾಂಧಿಯೊಂದಿಗೆ ವೈಯಕ್ತಿಕ ಸಂಬಂಧವನ್ನೇನೂ ಹೊಂದಿರದ (ಅಂದರೆ ಗಾಂಧಿಯವರೊಂದಿಗೆ ನೀವು ಕಲ್ಪಿಸುವ ಸಾಮೀಪ್ಯದ ಯಾವ ವೃತ್ತದಲ್ಲೂ ಇರದ) ಭಗತ್ ಸಿಂಗ್ ಜೊತೆಗಿನ ಮಾತುಕತೆಯನ್ನು ನೀವು ಮಹತ್ವದ್ದೆಂದು ಪರಿಗಣಿಸುವುದಾದರೆ, ಗಾಂಧಿ ಗೌರವವನ್ನೂ, ವೈಯಕ್ತಿಕ ನೆಲೆಯ ಸಂಬಂಧವನ್ನೂ ಹೊಂದಿದ್ದ ಸಮಾಜವಾದಿಗಳನ್ನು ನೀವು ಯಾಕೆ ಪರಿಗಣಿಸುವುದಿಲ್ಲ? ರಾಮಚಂದ್ರ ಗುಹಾರ ಪ್ರಕಾರ ಸಮಾಜವಾದಿಗಳಿಗೆ ಗಾಂಧಿ ಹತ್ತಿರವಾಗಿದ್ದರೆ ಇಲ್ಲವೆ ಎಂಬುದರ ಬಗ್ಗೆ ನನಗೆ ಹೆಚ್ಚಿನ ಆಸಕ್ತಿ ಇಲ್ಲ ಎಂದು ಮತ್ತೆ ನಿಮಗೆ ತಿಳಿಸಬಯಸುವೆ.

ಹೌದು. ದೇಶ ಸಮಾಜವಾದಿಗಳನ್ನು ಮರೆತಿದೆ. ಆದರೆ ಇತಿಹಾಸಕಾರರೂ ಯಾಕೆ ಅವರನ್ನು ಮರೆಯುತ್ತಿದ್ದಾರೆ? ಅವರು–ಅದೂ ಕೆಲವು ಪ್ರಾಮಾಣಿಕರು ಮಾತ್ರ–ಈ ಬಗ್ಗೆ ಪ್ರಶ್ನೆಗಳನ್ನು ಎತ್ತಿದಾಗ ಮಾತ್ರ ಅವರನ್ನು ನೆನೆಯುತ್ತಾರೆ. ಇದು ನಮ್ಮ ಅನಂತಮೂರ್ತಿ ನಮ್ಮಲ್ಲಿ ಕೆಲವರನ್ನು ಖಾಸಗಿಯಲ್ಲಿ ಮಾತ್ರ ಮೆಚ್ಚಿಕೊಂಡು ಸಾರ್ವಜನಿಕ ವೇದಿಕೆಯಲ್ಲಿ ಅಥವಾ ಬರವಣಿಗೆಯಲ್ಲಿ ಜಾಣ ಮರೆವು ಪ್ರದರ್ಶಿಸಿದ ಹಾಗೆ. ಈ ಸಂದರ್ಭದಲ್ಲಿ

ಅನಂತಮೂರ್ತಿಯವರ ಕೊನೆಯದಾದ ಸ್ವರಾಜ್ ಕುರಿತಾದ ಪುಸ್ತಕದ ಬಗೆಗಿನ ನಿಮ್ಮ ಮೆಚ್ಚುಗೆಯ ಕುರಿತು ನನಗೆ ಅಸಮಾಧಾನವಿದೆ. (ಹಾಗಾಗಿ ಗಾಂಧಿ ಕುರಿತ ನಿಮ್ಮ ಅರಿವಿನ ಬಗ್ಗೆ ಕೂಡ). ಮೋದಿ ಮೇಲಿನ ಅಪ್ರಾಮಾಣಿಕ ದಾಳಿಯ ವ್ಯರ್ಥ ಪ್ರಯತ್ನ ಆ ಪುಸ್ತಕ. ನಾನು ಯಾಕೆ ಇದನ್ನ ಅಪ್ರಾಮಾಣಿಕ ಎನ್ನುತ್ತೇನೆಂದರೆ ೨೦೦೨ರಲ್ಲಿ ಗುಜರಾತಿನಲ್ಲಿ ನರಹತ್ಯೆಗಳು ನಡದಾಗ ಅದರ ವಿರುದ್ಧ ಅನಂತಮೂರ್ತಿ ಸೊಲ್ಲೆತ್ತಿರಲಿಲ್ಲ. ಬಹುಶಃ ಆಗಿನ ಎನ್.ಡಿ.ಎ ಸರ್ಕಾರದ ಋಣ ಅವರ ಬಾಯಿಯನ್ನ ಕಟ್ಟಿಹಾಕಿದ್ದಿರಬಹುದು. ನಾನೇ ಖುದ್ದು ಸಂದರ್ಶನವೊಂದರಲ್ಲಿ ಈ ಬಗ್ಗೆ ಅವರನ್ನು ಪ್ರಶ್ನಿಸಿದ್ದೆ. ಬಹುಶಃ ಅದು ಅವರ ಕೊನೆಯ ಸಂದರ್ಶನವೂ ಇರಬಹುದು. ಅವರ ಮೊದಲ ದಿನಗಳ ಬರವಣಿಗೆಯಿಂದ ಹಿಡಿದು, ಮೋದಿ ಪ್ರಧಾನಿಯಾಗುವ ತನಕದ ಅವರ ಸಾರ್ವಜನಿಕ ಸಂವಾದಗಳವರೆಗಿನ ಈ ದೀರ್ಘ ಸಂದರ್ಶನವನ್ನ ನಾನೇ ಸಂಪಾದಿಸುತ್ತಿರುವ (೨೦೧೬ರವರೆಗೆ ಆರು ವರ್ಷ ನಡೆಸಿ ನನ್ನ ಅನಾರೋಗ್ಯದ ಕಾರಣ ನಿಂತು, ಇದೀಗ ಮತ್ತೆ ಪುನರ್‌ಪ್ರಕಟಗೊಳ್ಳುವ ಹಂತದಲಿರುವ) ಹೊಸ ಮನುಷ್ಯ ಪತ್ರಿಕೆಗಾಗಿ ಮಾಡಿದ್ದೆ.

ಗಾಂಧಿಯವರ ಪ್ರಸ್ತಾಪದ ಕುರಿತು ನಿಮಗಿರುವ ಅನುಮಾನದ ಕುರಿತು. ಈ ವಿಷಯವನ್ನು ನೀವು ದೃಢೀಕರಿಸಿಸಿಕೊಳ್ಳುವಲ್ಲಿ ವಿಫಲವಾಗಿರುವುದಕ್ಕೆ ಸಾಕ್ಷಿಯ ಕುರಿತು ನಿಮ್ಮ ಪರಿಭಾಷೆಯಲ್ಲಿರುವ ಸಮಸ್ಯೆಯೇ ಕಾರಣ. ಅಧಿಕೃತ ಮೊಹರುಳ್ಳ ಕಾಗದದ ಚೂರನ್ನಷ್ಟೇ ನೀವು ಸಾಕ್ಷಿ ಎಂದು ಪರಿಗಣಿಸುತ್ತೀರೆಂದು ಕಾಣುತ್ತದೆ. ಈ ರೀತಿಯಲ್ಲಿ ನಿಮ್ಮ ಇತಿಹಾಸ ಕೇವಲ 'ಪವಿತ್ರೀಕರಿಸಲ್ಪಟ್ಟ' ಇತಿಹಾಸವಾಗುತ್ತದೆಯಷ್ಟೇ. ದಿವಂಗತ ಮಿನೂ ಮಸಾನಿಯವರ ಪ್ರಾಮಾಣಿಕತೆಯನ್ನು ಕುರಿತು ನಿಮಗ್ಯಾವ ಅನುಮಾನವೂ ಇಲ್ಲವೆಂದು ಭಾವಿಸುತ್ತೇನೆ. ೪೦ರ ದಶಕದ ಕೊನೆಯ ದಿನಗಳಲ್ಲಿ ನಡೆದ ರಾಜಕೀಯದಾಟಗಳನ್ನು ನಮ್ಮಿಬ್ಬರಿಗಿಂತ ಹತ್ತಿರದಿಂದ ನೋಡಿದ ಅವರು 'Is JP the answer?' (ಮ್ಯಾಕ್ ಮಿಲನ್, ೧೯೭೩) ಎಂಬ ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ:

'ಅಧಿಕಾರ ಹಸ್ತಾಂತರದ ಮುನ್ನಾ ದಿನಗಳಲ್ಲಿ ನೆಹರೂ-ಪಟೇಲ್‌ರಿಂದ ಅಸಂತುಷ್ಟರಾಗಿದ್ದ ಗಾಂಧಿ, ಜೆಪಿಯನ್ನು ಕಾಂಗ್ರೆಸ್ ಅಧ್ಯಕ್ಷಗಿರಿಗೆ ಪರಿಗಣಿಸುವ ಮೂಲಕ ಕಾಂಗ್ರೆಸ್ ಅನ್ನು ಸಂಭಾಳಿಸುವ ಕುರಿತು ಆಲೋಚಿಸಿದ್ದರು. ಈ ಮೂಲಕ ಹೊಸ ಸರಕಾರದಲ್ಲಿ ಅಧಿಕಾರ ಪಡೆಯಲಿದ್ದ ನೆಹರೂ ಮತ್ತು ಪಟೇಲ್ ಮೇಲೆ ನಿಗಾ ಇರಿಸುವ ಆಲೋಚನೆ ಅವರಿಗಿತ್ತು. ಗಾಂಧಿ, ಜೆಪಿಯ ಹೆಸರನ್ನು ಪ್ರಸ್ತಾಪಿಸಿದಾಗ ನೆಹರೂ ಪ್ರತಿಕ್ರಿಯಿಸಲಿಲ್ಲ. ಬದಲಿಗೆ ತಮಗೆ ಆತ್ಮೀಯರಾಗಿದ್ದ ಆಚಾರ್ಯ ನರೇಂದ್ರ ದೇವ ಹೆಸರನ್ನು ಸೂಚಿಸಿದರು. ನರೇಂದ್ರ ದೇವ, ಸರ್ದಾರ್ ಪಟೇಲ್‌ರಿಂದ ವೀಟೋ ಪಡೆದ ಕಾರಣ ಕೊನೆಯಲ್ಲಿ ಡಾ. ರಾಜೇಂದ್ರ ಪ್ರಸಾದ್ ಅಧ್ಯಕ್ಷರಾಗಿ ನೊಂದಾಯಿತರಾದರು.'

ಮಿನೂ ಮಸಾನಿ ಮಾತ್ರವಲ್ಲ, ಜೆಪಿ ಕುರಿತಾದ ಎಲ್ಲ ಜೀವನ ಚರಿತ್ರಕಾರರೂ (ನನ್ನ ಮೊದಲ ಪತ್ರದಲ್ಲಿ ಪ್ರಸ್ತಾಪಿಸಿರುವಂತೆ) ಗಾಂಧಿಯ ಈ ಪ್ರಸ್ತಾಪವನ್ನು ದಾಖಲಿಸಿದ್ದಾರೆ.

ಇದನ್ನ ನಂಬುವುದು ಬಿಡುವುದು ನಿಮಗೆ ಬಿಟ್ಟದ್ದು. ನಿಮ್ಮ ಹೆಚ್ಚಿನ ಮಾಹಿತಿಗೆ : ಗೂಗಲ್ ಕೂಡ ಈ ಮಾಹಿತಿ ನೀಡುತ್ತದೆ. ನೀವು ಹೇಳಿದಂತೆ ೧೯೪೮ರಲ್ಲಿ ಪಟ್ಟಾಭಿ ಸೀತಾರಾಮಯ್ಯ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದು ಹೌದು. ಆದರೆ ಅವರು ರಾಜೇಂದ್ರ ಪ್ರಸಾದ್ ನಂತರವೇ ಆ ಸ್ಥಾನವನ್ನ ಅಲಂಕರಿಸಿದ್ದು. ರಾಜೇಂದ್ರ ಪ್ರಸಾದ್ ನವೆಂಬರ್ ೧೯೪೭ರಲ್ಲಿ, ಜೆ.ಬಿ ಕೃಪಲಾನಿಯವರ ರಾಜೀನಾಮೆಯ ನಂತರ ಕಾಂಗ್ರೆಸ್ ಅಧ್ಯಕ್ಷ ಗಾದಿಯನ್ನೇರಿದ್ದು.

ನಿಮ್ಮಂತಹ ಇತಿಹಾಸಕಾರರ ಮತ್ತು ರಾಜಕೀಯ ವಿದ್ವಾಂಸರ ಸಮಸ್ಯೆಯೆಂದರೆ ನೀವು ನೆಹರೂಗೆ ವಿರುದ್ಧವಾಗಿ ಬರುವ ಏನನ್ನೂ ನಂಬಲು ಬಯಸುವುದಿಲ್ಲ. ಸ್ವಾತಂತ್ರ್ಯಾನಂತರದ ಇತಿಹಾಸದ ರಚನೆಯ ದೊಡ್ಡ ಸಮಸ್ಯೆ ಇದು. ಇತಿಹಾಸದ ರಚನೆ ಮತ್ತು ಸಮಾಜವಾದಿ ಇತಿಹಾಸ ಇದರ ದೊಡ್ಡ ಬಲಿಪಶು. ಇದೇ ಕಾರಣಕ್ಕೇ– ಆದರೆ ಹೆಚ್ಚಿನ ಅಪಾಯಕಾರಿ ರಾಜಕೀಯ ಉದ್ದೇಶ ಸಾಧನೆಗಾಗಿ ಸಂಘ ಪರಿವಾರವು ಈ ಬಗೆಯ ಒಂದೆಡೆಗೆ ವಾಲಿಕೊಂಡ ಇತಿಹಾಸ ರಚನೆಯ ವಿರುದ್ಧ ಪ್ರಚಾರಾಂದೋಲನ ನಡೆಸುತ್ತಿದೆ. ಈ ಅರ್ಥದಲ್ಲಿ ಹಿಂದುತ್ವದ ಶಕ್ತಿಗಳು ಅಪಾಯಕಾರಿಯಾಗಿ ಬೆಳೆಯಲು ಈ ಇತಿಹಾಸಕಾರರೂ ಕಾರಣರಾಗಿದ್ದಾರೆ.

ಸಮಾಜವಾದಿ ಇತಿಹಾಸ ಬರೆಯಲು ನೀವು ನನಗೆ ಸಲಹೆ ನೀಡಿದ್ದೀರಿ. ನಾನೀಗಾಗಲೇ ಕನ್ನಡದಲ್ಲಿ ಈ ಕುರಿತು ಸಾಕಷ್ಟು ಬರೆದಿದ್ದೇನೆ. ಅದನ್ನ ಇತಿಹಾಸವೆಂದು ಕರಾರುವಾಕ್ಕಾಗಿ ಹೇಳಲಾಗುವುದಿಲ್ಲವೇನೋ! ಜೆಪಿ ಮತ್ತು ಲೋಹಿಯಾ ಕುರಿತೂ ಸಂಕ್ಷಿಪ್ತ ಜೀವನ ಚರಿತ್ರೆಗಳನ್ನು ಬರೆದಿದ್ದೇನೆ. ಇಂಗ್ಲಿಷ್‌ನಲ್ಲಿ ನಾನು ಪರಿಣಿತನಲ್ಲ ಹಾಗಾಗಿ ನಾನು ಬರೆಯಲಾರೆ. ನಮ್ಮ ಈ ಮಾತುಕತೆಯಲ್ಲೇ ನಿಮಗಿದಕ್ಕೆ ಸಾಕಷ್ಟು ಪುರಾವೆ ಸಿಗುತ್ತದೆ. ಇಂಗ್ಲಿಷ್‌ನಲ್ಲಿ ಬರೆಯುವುದು ನನಗೆ ತ್ರಾಸದಾಯಕ. ಈ ಕಾರಣಕ್ಕೆ ನಿಮ್ಮಂತಹವರು ಸ್ಥಳೀಯ ಭಾಷೆಯನ್ನು ಕೊನೆಯ ಪಕ್ಷ ಮಾತನಾಡಲಾದರೂ ಕಲಿಯಬೇಕೆಂದು ನಾನು ಅಪೇಕ್ಷಿಸುತ್ತೇನೆ. ಆಗಲಾದರೂ ನಾವು–ನೀವು ಸ್ಪಷ್ಟವಾಗಿ, ಮುಕ್ತವಾಗಿ ವಿಷಯಗಳನ್ನು ಚರ್ಚಿಸಬಹುದು, ಹಂಚಿಕೊಳ್ಳಬಹುದು.

ಸದ್ಯಕ್ಕೆ ಈ ಮಾತುಕತೆಯನ್ನ ಇಲ್ಲಿಗೆ ನಿಲ್ಲಿಸುವುದು ಒಳಿತೆಂದು ಅಂದುಕೊಳ್ಳುತ್ತೇನೆ. ಈ ಪತ್ರ ವ್ಯವಹಾರದಲ್ಲಿ ನಾನು ಸಾಕಷ್ಟು ಕಲಿತೆ ಮತ್ತು ಸಾಕಷ್ಟನ್ನು ಅರಿತೆ. ನನ್ನ ತಪ್ಪು ತಪ್ಪಾದ ಇಂಗ್ಲಿಷ್‌ನಿಂದ ನಿಮಗೆ ತೊಂದರೆಯಾಗಿದ್ದಲ್ಲಿ ಕ್ಷಮೆ ಇರಲಿ.

ನಿಮ್ಮ,

ಡಿ ಎಸ್ ನಾಗಭೂಷಣ

ಗುಹಾ ಅವರ ಪ್ರತಿಕ್ರಿಯೆ:

೧೦.೧೦.೨೦೧೭

ಪ್ರಿಯ ಶ್ರೀ ನಾಗಭೂಷಣ,

(ಇಂಗ್ಲಿಷ್ ಬಾವಿಯ) ಮುದ್ದು ಕಪ್ಪೆಗಳ ಸ್ಥಾನದಿಂದ ನಾನು ಇದೀಗ ಹಿಂದುತ್ವದ ಉತ್ಥಾನಕ್ಕೆ ಕಾರಣವಾದ ಇತಿಹಾಸಕಾರನಾಗಿಬಿಟ್ಟಿರುವೆ. ನಿಮ್ಮಂತಹ ದಿಟ್ಟ ವಿದ್ವಾಂಸರಿಗೆ ಇಂತಹ ವೈಯಕ್ತಿಕ ನಿಂದನೆಗಳು ಶೋಭೆ ತರುವುದಿಲ್ಲ.

ನಿಮ್ಮ ಇಂಗ್ಲಿಷ್ ಅರ್ಥಸ್ಫುಟತೆಯೊಂದಿಗೆ ಸರಾಗವಾಗಿದೆ. ಲೋಹಿಯಾ, ಜೆಪಿ, ಗಾಂಧಿ, ಅಂಬೇಡ್ಕರ್, ಟಾಗೋರ್‌ರಂತೆ ನಿಮ್ಮ ಮಾತೃಭಾಷೆಯ ಜೊತೆಗೆ ನಮ್ಮನ್ನಾಳಿದವರ ಭಾಷೆಯಲ್ಲೂ ನಿಮ್ಮನ್ನು ಅಭಿವ್ಯಕ್ತಿಸಿಕೊಳ್ಳುವ ಸಾಮರ್ಥ್ಯ ನಿಮಗಿದೆ. ಇವರೆಲ್ಲ ತಮ್ಮ ಸಾಂಸ್ಕೃತಿಕ ಲೋಕದ ಆಚೆಗೆ ಜಿಗಿಯಲು ಇಂಗ್ಲಿಷ್‌ನಲ್ಲಿ ಬರೆದರು. ನೀವು ಸಮಾಜವಾದಿ ಪರಂಪರೆಯ ಕುರಿತಾದ ಜ್ಞಾನ ಮತ್ತು ತಿಳುವಳಿಕೆಯನ್ನು ಪುಸ್ತಕ ರೂಪದಲ್ಲಿ ತಂದರೆ ಅದು ಭಾರತೀಯರಿಗೆ ಮಾಡುವ ದೊಡ್ಡ ಸೇವೆ ಎಂದೇ ನಾನು ಭಾವಿಸುವೆ. ಈ ಸುಕಾರ್ಯಕ್ಕೆ ಮಧ್ಯೆ ನಿಮ್ಮ ಅಭಿಮಾನ ನಡುವೆ ಬಾರದಿರಲಿ.

ಇಂತಿ,

ಆರ್. ಗುಹಾ

ಡಿಎಸ್ಸೆನ್ ಉತ್ತರ :

ಪ್ರಿಯ ಗುಹಾ,

ಕ್ಷಮಿಸಿ. ನನ್ನ ಇಂಗ್ಲಿಷ್ ಎಷ್ಟು ಬಡವಾಗಿದೆಯೆಂದರೆ ನಿಮ್ಮ ಮೇಲಿನ ಪತ್ರದ ಎರಡನೇ ಸಾಲೇ ನನಗೆ ಅರ್ಥವಾಗಲಿಲ್ಲ. ವಿದ್ವಾಂಸನೆನಿಸಿಕೊಳ್ಳುವ ಯಾವ ಅರ್ಹತೆಯೂ ನನ್ನಲ್ಲಿಲ್ಲ ಎಂದು ನೀವು ಹೇಳುತ್ತಿರುವಿರಾದರೆ ನೀವು ಹೇಳುತ್ತಿರುವುದು ಸರಿಯೇ!

ಹೌದು ನಿಮ್ಮಂತಹ ಇತಿಹಾಸಕಾರರಿಂದ ದೇಶದಲ್ಲಿ ಹಿಂದುತ್ವದ ಗುಂಪುಗಳ ಶಕ್ತಿ ಹೆಚ್ಚಿದೆ ಎಂದೇ ನಾನು ಹೇಳುತ್ತಿರುವುದು. ಇದನ್ನು ಒಪ್ಪುವುದು ಅಥವಾ ತಿರಸ್ಕರಿಸುವುದು ನಿಮಗೆ ಬಿಟ್ಟದ್ದು. ಇಂಗ್ಲಿಷ್‌ನಲ್ಲಿ ಬರೆಯುವುದು ತಪ್ಪು ಅಥವಾ ಒಪ್ಪಿತವಲ್ಲ ಎಂದು ನಾನೆಲ್ಲೂ ಹೇಳಿಲ್ಲ. ನಾನು ಹೇಳುತ್ತಿರುವುದು ನೀವು ಇಂಗ್ಲಿಷ್ ಬಿಟ್ಟು ಬೇರೆ ಯಾವುದೇ ಭಾರತೀಯ ಭಾಷೆಯಲ್ಲಿ ಬರೆಯಲಾಗದ ವಿಕಲ ಸ್ಥಿತಿಯಲ್ಲಿರುವ ಕಾರಣ ನಾನು ಇಂಗ್ಲಿಷ್‌ನಲ್ಲಿ ಬರೆಯಬೇಕಾಗಿರುವ ಶೋಚನಿಯ ಸ್ಥಿತಿ ಬಂದಿದೆ ಎಂದಷ್ಟೆ. ಇಂಗ್ಲಿಷ್

ಕಲಿಕೆ ಮತ್ತು ಮಾತೃಭಾಷಾ ಕಲಿಕೆಯ ಕುರಿತಂತೆ ಗಾಂಧಿ ಮತ್ತು ಅವರ ಸ್ನೇಹಿತ ಪೊಲಾಕ್ ನಡುವೆ ನಡೆದ ಸಂಭಾಷಣೆಯನ್ನೊಮ್ಮೆ ಗಾಂಧಿ ಆತ್ಮಕತೆಯಲ್ಲಿ ಓದಿ.

ಇಂತಿ,

ಡಿಎಸ್ಎನ್

ಗುಹಾ ಅವರ ಪ್ರತಿಕ್ರಿಯೆ:

೧. ಶ್ರೀ ನಾಗಭೂಷಣ್.

ಧನ್ಯವಾದಗಳು- ಗಾಂಧಿ ಪೊಲಾಕ್ ಚರ್ಚೆಯ ಬಗ್ಗೆ ನನಗೆ ತಿಳಿದಿದೆ. ಇದರ ಕುರಿತು ೨೦೧೧ ರಲ್ಲಿ ನಾನು ಬರೆದಿರುವೆ.

http://ramachandraguha.in/archives/a-question-of-english-the-telegraph.html

ನಿಮ್ಮಂತಹ ದ್ವಿಭಾಷೀಯ ಭಾರತೀಯರು (ಗಾಂಧಿ ಲೋಹಿಯಾರಂತೆ) ಎರಡೂ ಭಾಷೆಗಳಲ್ಲಿ ಸಂವಹಿಸಬಲ್ಲಿರಿ. ಹಾಗಂತ ನನ್ನ ಮಾತನ್ನು ತಳ್ಳಿಹಾಕಬೇಡಿ.

ಹಿಂದುತ್ವದ ಉತ್ಥಾನದ ಬಗ್ಗೆ ಯಾರ್ಯಾರು ಕಾರಣಕರ್ತರಾಗಿದ್ದಾರೆ ಎಂಬ ಬಗ್ಗೆ-

೧. ಕಾಂಗ್ರೆಸ್ ವಿರೋಧದ ಕುರಿತು ಒಲವು ಹೊಂದಿದ್ದ ಲೋಹಿಯಾ ಸಮಾಜವಾದಿ ಮತ್ತು ಜನಸಂಘದೊಂದಿಗೆ ೧೯೬೦ರಲ್ಲಿ ರಚಿಸಿದ ಒಕ್ಕೂಟ ಹಿಂದುತ್ವದ ಉತ್ಥಾನಕ್ಕೆ ಕಾರಣವಾಯಿತು.

೨. ಇಂದಿರಾ ವಿರೋಧಿ ಚಳುವಳಿಯಲ್ಲಿ ಜೆಪಿ, ಆರ್ಎಸ್ಎಸ್ ಅನ್ನು ಒಳಸೇರಿಸಿಕೊಂಡಿದ್ದು ಮತ್ತವರಿಗೆ ದೇಶಪ್ರೇಮದ ಅರ್ಹತಾ ಪತ್ರ ಕೊಟ್ಟದ್ದು ಹಿಂದುತ್ವ ಉತ್ಥಾನಕ್ಕೆ ಸಹಕಾರಿಯಾಯಿತು.

ಪ್ರತಿಷ್ಠಿತ ಭಾಷೆ ಇಂಗ್ಲಿಷ್‌ನಲ್ಲಿ ಬರೆಯುವ ವಿದ್ವಾಂಸರ ಮಾತುಗಳಿಗಿಂತ ನೀವು ಮೆಚ್ಚುವ ರಾಜಕಾರಣಿಗಳ ಈ ಎರಡು ನಡೆಗಳು ಹೆಚ್ಚು ಅಗತ್ಯವಾಗಿ ವಿಮರ್ಶಿಸಲ್ಪಡಬೇಕಾದ ವಿಷಯ.

ನೀವು ಈ ಅಂಶವನ್ನು ಒತ್ತಿ ಹೇಳಿದ ಕಾರಣ ಇವೊತ್ತಿನ ಪತ್ರಿಕೆಯನ್ನು ದಯಮಾಡಿ ಓದಿ. ಮಲ್ಲೇಶ್ವರಂ ಪೊಲೀಸ್ ಠಾಣೆಯಲ್ಲಿ ಹಿಂದುತ್ವವಾದಿಗಳು ಅವರನ್ನು ನಿಂದಿಸಿದೆನೆಂದು ನನ್ನ ವಿರುದ್ಧ ಮೊಕದ್ದಮೆಯೊಂದನ್ನು ದಾಖಲು ಮಾಡಿದ್ದಾರೆ. ಬಿಜೆಪಿ ಮತ್ತು ಆರ್ಎಸ್ಎಸ್ ಅಂತೂ ನನ್ನನ್ನು ಖಂಡಿತ ತಮ್ಮ ಹಿಂದುತ್ವದ ಸ್ನೇಹಿತನೆಂದು ಒಪ್ಪಿಕೊಳ್ಳಲಾರರು. ಬದಲಿಗೆ ಅವರು ಆಗಾಗ ನನ್ನನ್ನು ಬೆದರಿಸುತ್ತಲಿರುತ್ತಾರೆ.

ಇರಲಿ. ಈ ಮಾತಿನ ಚಕಮಕಿಯನ್ನೆಲ್ಲ ಬಿಟ್ಟು ನಮ್ಮಿಬ್ಬರಿಗೂ ಬೇಕಾದ ವಿಚಾರಗಳ ಕುರಿತು ಯೋಚಿಸೋಣ. ನಮ್ಮ ಯುವ ಮನಸ್ಸುಗಳು ನಮ್ಮ ಸಮಾಜವಾದಿ ಪರಂಪರೆಯ ಇತಿಹಾಸ, ನಡೆದು ಬಂದ ಹಾದಿ, ಸಮಕಾಲೀನ ಪ್ರಸ್ತುತತೆಗಳ ಕುರಿತು ತಿಳಿದುಕೊಳ್ಳಬೇಕೆಂದು ನಾವಿಬ್ಬರೂ ಬಯಸುತ್ತೇವೆ. ಹಾಗಾಗಿ ನಾನು ಹಿಂದಿನ ಪತ್ರದಲ್ಲಿ ವಿವರಿಸಿದ ಪ್ರಸ್ತಾವನೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿ.

ಇಂತಿ,

ರಾ.ಗುಹಾ

೨. ಪ್ರಿಯ ಶ್ರೀ ನಾಗಭೂಷಣ್,

ಈ ಕೆಳಗಿನ ಈ ಮೇಲ್ ನೋಡಿ. ನಾನು ಈ ಯುವ ವಿದ್ವಾಂಸನನ್ನು ನಿಮ್ಮ ಬಳಿ ಕಳುಹಿಸಲೇ? ನಿಮ್ಮ ಸಲಹೆ, ಪ್ರೋತ್ಸಾಹ ಈತ ತೆಗೆದುಕೊಂಡಿರುವ ವಿಷಯಕ್ಕೆ ಸಂಬಂಧಿಸಿದಂತೆ ಈತನಿಗೆ ಸಹಕಾರಿಯಾಗಬಲ್ಲದು.

ಇಂತಿ,

ಗುಹಾ

೩. ಪ್ರಿಯ ಶ್ರೀ ನಾಗಭೂಷಣ್,

ನಿಮ್ಮ ಮಾತುಗಳಿಂದ ಪ್ರೇರಿತನಾಗಿ ನಾನು ಗಾಂಧಿಯವರ ಸಂಗ್ರಹಿತ ಬರಹಗಳನ್ನು ನೋಡಿದೆ. ನೀವು ಹೇಳಿರುವುದು ಸರಿ. ೧೯೪೮ ಜನವರಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಗಾದಿಗೆ ಜೆ.ಪಿ ಹೆಸರು ಚರ್ಚೆಗೆ ಬಂದಿದ್ದು ಹೌದು. ಇದು ನಿಜವಾಗಿ ಆಗಿದ್ದರೆ ನೆಹರೂ ಇದನ್ನು ಸ್ವಾಗತಿಸಿರುತ್ತಿದ್ದರು ಎಂಬ ನನ್ನ ಅನುಮಾನವೂ ನಿಜವಾಗಿದೆ. ನೆಹರೂ ಕಾಂಗ್ರೆಸ್ ಅಧ್ಯಕ್ಷ ಹುದ್ದೆಗೆ ರಾಜಿನಾಮೆ ನೀಡಿದಾಗ ಸಮಾಜವಾದಿ ಮುಖಂಡನೇ ಅಧ್ಯಕ್ಷನಾಗಬೇಕೆಂದು ಬಯಸಿ ನರೇಂದ್ರದೇವ ಅವರ ಹೆಸರನ್ನು ಪ್ರಸ್ತಾಪಿಸಿದಂತೆ ಕಾಣುತ್ತದೆ. ಗಾಂಧಿ ಇದಕ್ಕೆ ಜೆಪಿಯವರನ್ನೇ ಉತ್ತರಾಧಿಕಾರಿಯಾಗಿ ನೇಮಿಸಬಹುದೆಂದು ಪ್ರತಿಕ್ರಿಯಿಸಿದ್ದಾರೆ. (ನರೇಂದ್ರ ದೇವರಿಗಿಂತ ಜೆ.ಪಿ, ನೆಹರೂಗೆ ಹೆಚ್ಚು ಹತ್ತಿರವಾಗಿದ್ದರು.) ನೆಹರೂವಿನ ಈ ಪ್ರಸ್ತಾಪ, ಗಾಂಧಿಯ ತಿದ್ದುಪಡಿಯೊಂದಿಗೆ ಕಾಂಗ್ರೆಸ್‌ನ ಮುಂದೆ ಬಂದಾಗ ಪಟೇಲ್ ಬಣದವರು ನರೇಂದ್ರದೇವ ಅಥವಾ ಜೆಪಿ ಹೀಗೆ ಯಾವುದೇ ಸಮಾಜವಾದಿಯನ್ನು ಅಧ್ಯಕ್ಷನಾಗಿ ನೇಮಿಸುವುದನ್ನ ಬೆಂಬಲಿಸಲಿಲ್ಲ.

ಆಗ ಹಿಂದು-ಮುಸ್ಲಿಂ ಐಕ್ಯತೆಯ ಕುರಿತಾದ ವಿಚಾರದಲ್ಲಿ ನಿರತರಾಗಿದ್ದ ಗಾಂಧಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗಳ ಸಭೆಗಳಲ್ಲಿ ಭಾಗವಹಿಸಲಾಗುತ್ತಿರಲಿಲ್ಲ ಎಂಬ ವಿಚಾರ ಕೆಲವು ಮೂಲಗಳಿಂದ ತಿಳಿದುಬರುತ್ತದೆ. ಪ್ರೇಮಾ ಬೆನ್ ಕಂಟಕ್‌ಗೆ ಬರೆದ ಪತ್ರದಲ್ಲಿ ಗಾಂಧಿ ಹೀಗೆನ್ನುತ್ತಾರೆ : 'ನನಗೆ ತಿಳಿದ ಮಟ್ಟಿಗೆ ಜಯಪ್ರಕಾಶ್‌ರ ನಿಲುವು ಮತ್ತು

ಸಿದ್ಧಾಂತಗಳು ಈ ದೇಶಕ್ಕೆ ಮಾರಕವೇನಲ್ಲ. ಆದರೆ ಅವರ ವಿಧಾನಗಳ ಮಟ್ಟಿಗೆ ಹೀಗೆ ಹೇಳಬರುವುದಿಲ್ಲ. ಒಂದು ವೇಳೆ ಅವರು ಅಧ್ಯಕ್ಷರಾದಲ್ಲಿ ಕಾಂಗ್ರೆಸ್ ಸಿದ್ಧಾಂತಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ. ತಮಗೆ ಬಂದ ವಿರೋಧದ ಕಾರಣದಿಂದ ಅಧ್ಯಕ್ಷ ಗಾದಿಯನ್ನು ಅವರು ತಿರಸ್ಕರಿಸುವುದು ಬುದ್ಧಿವಂತ ನಿರ್ಧಾರ. ಪಕ್ಷದ ಅಧಿಕೃತ ತೀರ್ಮಾನಗಳನ್ನು ಹೊರಗಿನಿಂದ ವಿರೋಧಿಸಿದ ಮನುಷ್ಯನೊಬ್ಬ ಪಕ್ಷದೊಳಗಿನಿಂದ ಇಡೀ ದೇಶದ ಅಧ್ಯಕ್ಷನಾಗಬೇಕಾಗಿ ಬಂದಾಗ ತನ್ನೊಳಗೆ ಸ್ವಲ್ಪ ಮಾತ್ರ ದೇಶಪ್ರೇಮವಿದ್ದರೂ ಆ ಪದವಿಯನ್ನು ಬಿಟ್ಟು ಬಿಡುತ್ತಾನೆ.' ಬೇರೆ ಪದಗಳಲ್ಲಿ ಹೇಳುವುದಾದರೆ ಜೆಪಿ ಕಾಂಗ್ರೆಸ್ ಅಧ್ಯಕ್ಷರಾಗಲು ಒಪ್ಪಿಕೊಂಡಿದ್ದಲ್ಲಿ ತಮ್ಮ ಸಮಾಜವಾದಿ ಸಿದ್ಧಾಂತವನ್ನೇ ಬಿಟ್ಟುಕೊಡಬೇಕಾಗಿ ಬರುತ್ತಿತ್ತು.

ಈ ಪತ್ರದಲ್ಲಿ ಗಾಂಧಿ ಮುಂದುವರೆದು, 'ಸಮಾಜವಾದಿಗಳು ನನ್ನ ಪ್ರಕಾರ ನಿಸ್ವಾರ್ಥಿಗಳು, ಬದ್ಧತೆಯುಳ್ಳವರು ಮತ್ತು ಧೈರ್ಯವಂತರು' ಎಂದು ಹೇಳುತ್ತಾರೆ. ಜೊತೆಗೆ ಈ ಮಾತುಗಳನ್ನೂ ಸೇರಿಸುತ್ತಾರೆ : 'ಅವರೇನು ಮಾಡುತ್ತಿದ್ದಾರೆಂದು ನನಗೆ ತಿಳಿದಿಲ್ಲ. ದಿನಪತ್ರಿಕೆಯಲ್ಲಿ ಬರುವ ಸುದ್ದಿಗಳಷ್ಟೇ ಸಾಕೆಂದು ಭಾವಿಸುವುದಾದರೆ ನನಗೆ ಅವರ ಬಗ್ಗೆ ತಿಳಿದಿರುವುದೂ ಅಷ್ಟೇ.' ಈ ಮಾತು ನಿಮ್ಮನ್ನು ರೇಗಿಸಿದ ನನ್ನ ವಾದಕ್ಕೆ ಪೂರಕವಾಗಿದೆ. ಗಾಂಧಿಗೆ ಸಮಾಜವಾದಿಗಳ ಮೇಲೆ ಗೌರವಾದಾರಗಳಿದ್ದರೂ ಅವರ ಆತ್ಮೀಯ ಬಳಗದಲ್ಲಿ ಅವರಿರಲಿಲ್ಲ. ಮತ್ತೊಂದು ಕಡೆ ಗಾಂಧಿ ಜೀವನದ ಕೊನೆಯ ತಿಂಗಳಿನಲ್ಲಿ ಕಾಂಗ್ರೆಸ್ ಅಧ್ಯಕ್ಷ ಗಾದಿಗೆ ಜೆಪಿ ಒಬ್ಬ ಸ್ಪರ್ಧಿ ಆಗಿದ್ದರು ಎಂಬ ನಿಮ್ಮ ಮಾತು ಸರಿಯಾಗಿದೆ. ಇದು ನನ್ನ ಗಮನಕ್ಕೆ ಬಂದಿರಲಿಲ್ಲ.

ಈ ಹೊಸ ವಿಚಾರವನ್ನು ತಿಳಿಸಿಕೊಟ್ಟದ್ದಕ್ಕಾಗಿ ಧನ್ಯವಾದಗಳು.

ಇಂತಿ,

ರಾ.ಗುಹಾ

ಡಿ ಎಸ್ ಎನ್ ಪ್ರತಿಕ್ರಿಯೆ:

ಅಭಿನಂದನೆಗಳು ಗುಹಾಜಿ! ಕೊನೆಗೂ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಹುದ್ದೆಗೆ ಜೆಪಿಯವರ ಹೆಸರನ್ನು ಗಾಂಧಿ ಪ್ರಸ್ತಾಪಿಸಿದ್ದರು ಎನ್ನುವ ವಿಷಯಕ್ಕೆ ನಿಮಗೆ ಸಾಕ್ಷಿ ಸಿಕ್ಕಿದೆ. ಆ ಸಾಕ್ಷಿಯ ಮೂಲಕ ಗಾಂಧಿ ಸಮಾಜವಾದಿಗಳಿಗೆ, ಅವರೊಂದಿಗೆ ಮಾತುಕತೆ ನಡೆಸುವಷ್ಟು ಹತ್ತಿರವಾಗಿರಲಿಲ್ಲ ಎಂಬ ಮಾತನ್ನು ನಿಮಗೆ ನೀವು ಮನವರಿಕೆ ಮಾಡಿಕೊಂಡಿದ್ದಕ್ಕೂ ಅಭಿನಂದನೆಗಳು ಹಾಗೂ ಧನ್ಯವಾದಗಳು.

ಹೌದು, ಈಗ ನಿಮ್ಮ ಪ್ರಕಾರ ಗಾಂಧಿಯೊಂದಿಗೆ ಮಾತುಕತೆ ನಡೆಸಿದ ಪ್ರಮುಖರಾದ ಭಗತ್ ಸಿಂಗ್/ ಸಾವರ್ಕರ್, ಜಿನ್ನಾ ಮತ್ತು ಅಂಬೇಡ್ಕರ್‌ಗಿಂತ ಅವರೊಡನೆ ಪ್ರಮುಖ

ಮಾತುಕತೆಗಳಲ್ಲಿ ಭಾಗಿಯಾಗದ ಸಮಾಜವಾದಿಗಳು ಗಾಂಧಿಗೆ ಹೆಚ್ಚು ಹತ್ತಿರವಿದ್ದರೋ, ದೂರವಿದ್ದರೋ ಎಂಬುದನ್ನು ನೀವು ತೀರ್ಮಾನಿಸಿಕೊಳ್ಳಲು ಸ್ವತಂತ್ರರಿದ್ದೀರಿ!

ಇಂತಿ,

ಡಿಎಸ್‌ಎನ್

ಗುಹಾ ಅವರ ಪ್ರತಿಕ್ರಿಯೆ:

೧೧.೧೦.೨೦೧೭

ಶ್ರೀ ನಾಗಭೂಷಣ್

ಜಿನ್ನಾ ಮತ್ತು ಅಂಬೇಡ್ಕರ್ ಜೊತೆ ಗಾಂಧಿಯ ಮಾತುಕತೆಗಳು ಈ ದೇಶದ ಹಿತದೃಷ್ಟಿಯಿಂದ ಮಹತ್ವದ್ದೆಂದು ನೀವು ಒಪ್ಪದೇ ಇರಲಾರಿರಿ ಎಂದು ನಂಬಿದ್ದೇನೆ. ನಿಮ್ಮನ್ನು ಆ ದಿನ ಬೇಸರಕ್ಕೊಡ್ಡಿದ ವಿಚಾರ ಬಹುಶಃ ಸಮಾಜವಾದಿಗಳ ಬದಲಿಗೆ, ಗಾಂಧಿ ಶಸ್ತ್ರಸಹಿತ ಕ್ರಾಂತಿಕಾರಿಗಳೊಂದಿಗೆ ನಡೆಸಿದ ವಾದಗಳನ್ನು ನಾನು ಪ್ರಸ್ತಾಪಿಸಿದ್ದು ಆಗಿರಬಹುದು. ಇದಕ್ಕೆ ಕಾರಣ ತೀರ ಸರಳವಾಗಿದೆ. ೨೦೧೭ರ ಭಾರತದಲ್ಲಿ ನಮ್ಮ ಯುವಜನರಿಗೆ ಭಗತ್ ಸಿಂಗ್ ಮತ್ತು ಮಾವೋವಾದಿಗಳ ವಿಧಿ ವಿಧಾನಗಳ ಮೇಲೆ ಒಂದು ಬಗೆಯ ಪ್ರೇಮವಿದೆ. ಈ ಹಿಂಸಾತ್ಮಕ ರಾಜಕೀಯದೆಡೆ ಒಲವು ಹೆಚ್ಚುತ್ತಿರುವ ಹೊತ್ತಿನಲ್ಲಿ ಅಹಿಂಸೆಯ ಮಾರ್ಗಗಳನ್ನು ಸಮರ್ಥನೆ ಮಾಡಿಕೊಳ್ಳುವುದು ಅತ್ಯಗತ್ಯ.

ನಿಮ್ಮ ಅಭಿಮಾನಕ್ಕಾದ ಧಕ್ಕೆಯ ನೋವಿನಿಂದ ನೀವು ಹೊರಬರುತ್ತೀರೆಂದು ಆಶಿಸುತ್ತೇನೆ. ಸಮಾಜವಾದಿಗಳಿಗೆ ಈ ದೇಶದ ಸದ್ಯ ಮತ್ತು ಭವಿಷ್ಯದ ರಾಜಕೀಯ ಪರಿಧಿಯಲ್ಲಿ ಸರಿಯಾದ ನ್ಯಾಯ ಸಿಗಬೇಕೆಂದು ನಿಮ್ಮಂತೆ ನಾನೂ ಬಯಸುತ್ತೇನೆ. ಇದಕ್ಕೆ ನಿಮ್ಮ ನೆರವನ್ನೂ ಬೇಡುತ್ತೇನೆ. ಸಮಾಜವಾದದ ಕುರಿತ ನಿಮ್ಮ ಬರಹಗಳ ಸಂಗ್ರಹವನ್ನ ಇಂಗ್ಲಿಷ್‌ನಲ್ಲಿ ಭಾಷಾಂತರಿಸಿ ಇನ್ನೂ ಹೆಚ್ಚಿನ ಜನರಿಗೆ ತಲುಪಿಸುವ ಕುರಿತು ಯೋಚಿಸುವಿರಾ? ಭಾರತೀಯ ಸಮಾಜವಾದದ ಇತಿಹಾಸದ ಕುರಿತ ಸಂಶೋಧನೆಯಲ್ಲಿ ನಿರತರಾಗಿರುವ ಈ ಯುವಕನ ಬಳಿ ಮಾತನಾಡುತ್ತೀರಾ? ಮೊದಲನೆಯದಾಗದಿದ್ದರೂ ಎರಡನೆಯದು... ಅಥವಾ ಎರಡೂ?

ಇಂತಿ,

ರಾ. ಗುಹಾ

ಡಿ ಎಸ್ ಎನ್ ಪ್ರತಿಕ್ರಿಯೆ:

೧೧.೧೦.೨೦೧೭

ಪ್ರೀತಿಯ ಶ್ರೀ ಗುಹಾ,

ನನ್ನ ಉದ್ದನೆಯ ಪತ್ರಗಳಿಗೆ (ಇದಕ್ಕೆ ನಿಮ್ಮ ಸಹಕಾರವೂ ಇದೆ!) ಏನೇನೋ ಕಾರಣಗಳನ್ನು ಊಹಿಸಬೇಡಿರಿ. ಆ ದಿನ ನನ್ನ ಪ್ರಾಥಮಿಕ ಪ್ರಶ್ನೆ, ಆ ನಾಲ್ಕು ಮಾತುಕತೆಗಳನ್ನೇ ಗಾಂಧಿಯ ಪ್ರಮುಖ ಮಾತೆಗಳೆಂದು ನೀವು ಆಯ್ಕೆ ಮಾಡಿಕೊಂಡಿದ್ದಕ್ಕೆ ಮತ್ತು ಅ ನಾಲ್ಕು ಮಾತುಕತೆಗಳೇ ಅವರ ಜೀವನದ ಪ್ರಮುಖ ಮಾತುಕತೆಗಳೆಂದು ನೀವು ಭಾವಿಸಲು ಏನಾದರೂ ನಿರ್ದಿಷ್ಟ ಕಾರಣಗಳಿವೆಯೇ ಎಂಬುದನ್ನು ತಿಳಿಯುವುದಾಗಿತ್ತು. ಸಮಾಜವಾದಿ ಚಳುವಳಿಯೊಂದಿಗೆ ಸಹಾನುಭೂತಿ ಹೊಂದಿದವನಾಗಿ, ಗಾಂಧಿ ಸಮಾಜವಾದಿಗಳೊಂದಿಗೆ ನಡೆಸಿದ ಮಾತುಕತೆ ನಿಮಗೇಕೆ ಪ್ರಮುಖವಾದದ್ದೆಂದೆನಿಸಲಿಲ್ಲ ಎಂಬುದನ್ನೂ ನಾನು ತಿಳಿದುಕೊಳ್ಳಬಯಸಿದ್ದೆ. ನನ್ನ ಅನುಮಾನಗಳಿಗೆ ವಸ್ತುನಿಷ್ಠವಾಗಿ ಪ್ರತಿಕ್ರಿಯಿಸುವ ಬದಲು ನನ್ನ ಪ್ರಶ್ನೆಯನ್ನು ಆಧುನಿಕ ಭಾರತದ ಇತಿಹಾಸದ ಮೇಲಿನ ನಿಮ್ಮ ಅಧಿಕಾರವನ್ನು ಪ್ರಶ್ನಿಸುತ್ತಿದ್ದೇನೇನೋ ಎಂಬಂತೆ ಭಾವಿಸಿ ನೀವು ವರ್ತಿಸಿದಿರಿ. ಗಾಂಧಿ ಸಮಾಜವಾದಿಗಳೊಂದಿಗೆ ಹತ್ತಿರವಾಗಿರಲಿಲ್ಲ ಎಂಬ ನಿಮ್ಮ ವಾದಕ್ಕೆ ಪುಷ್ಟಿ ನೀಡಲು ಪ್ರಾರಂಭಿಸಿದಿರಿ. ಈ ಮಾತನ್ನು ನಾನೀಗಲೂ ಒಪ್ಪುತ್ತಿಲ್ಲ. ಏಕೆಂದರೆ ಇತಿಹಾಸದ ಕುರಿತ ನನ್ನ ಓದು ನನಗೆ ಬೇರೆಯದೇ ಕತೆ ಹೇಳುತ್ತಿದೆ. ಹಾಗಾಗಿ ಇಲ್ಲಿ ಬೇಸರಗೊಳ್ಳುವ ಅಥವಾ ನೋವುಗೊಳ್ಳುವ ಪ್ರಶ್ನೆ ಎಲ್ಲಿ ಉದ್ಭವಿಸುತ್ತದೆ?

ಇಂಗ್ಲಿಷ್‌ನಲ್ಲಿ ಮಾತ್ರ ಬರೆಯುವ ಲೇಖಕರನ್ನೂ– ಕೆ.ರಾಜಾರಾವ್, ಆರ್.ಕೆ. ನಾರಾಯಣ್, ಮುಲ್ಕ್‌ರಾಜ್ ಆನಂದ್, ವಿಕ್ರಂ ಸೇಠ್, ಅರುಂಧತಿ ರಾಯ್ ಮುಂತಾದವರು– ನಾನು ಓದುತ್ತೇನೆ. ನಿಮ್ಮನ್ನೂ ಸಹ. ಆದರೆ ಅವರು ಇಂಗ್ಲಿಷ್‌ನಲ್ಲಿ ಬರೆಯುತ್ತಾರೆಂಬ ಕಾರಣಕ್ಕೆ ನಾನು ಅವರ ಬರಹಗಳಿಗೆ ಇಲ್ಲದ ಪ್ರಾಮುಖ್ಯತೆ ಕೊಡಲಾರೆ ಮತ್ತು ತಮ್ಮ ಇಂಗ್ಲಿಷ್ ಭಾಷೆಯ ಅಧಿಕಾರ ಆವಾಹನೆಯಿಂದಾಗಿ ಅಹಂಕಾರ ಪ್ರದರ್ಶಿಸಿದಾಗ ಅವರ ಬಗ್ಗೆ ಮರುಕ ಮಾತ್ರ ಪಡುತ್ತೇನೆ. ಆ ದಿನ ಹೆಗ್ಗೋಡಿನಲ್ಲಿ ಜೆ.ಪಿ.ಯನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ನೇಮಿಸುವ ಗಾಂಧಿಯ ಪ್ರಸ್ತಾಪಕ್ಕೆ ನೀವು ಸಾಕ್ಷಿ ಕೇಳಿದಾಗ ನಾನು ನಿಮ್ಮ ಬಳಿ ವಾದ ಮುಂದುವರೆಸಲಿಲ್ಲ. ಏಕೆಂದರೆ ಆ ದಿನ ನೀವು ನಮ್ಮ ಅತಿಥಿಗಳಾಗಿದ್ದಿರಿ. ನಾನೊಬ್ಬ ಸಾಮಾನ್ಯ ಪ್ರೇಕ್ಷಕನಾಗಿದ್ದೆ. (ಆ ದಿನ ನಿಮ್ಮ ಇಂಗ್ಲಿಷ್ ವಾಕ್ಪ್ರವಾಹವೂ ನಾನು ಮುಂದೆ ಮಾತನಾಡದಂತೆ ತಡೆಯಿತು ಎಂಬುದೂ ನಿಜ!)

ಸಮಾಜವಾದಿಗಳೊಂದಿಗೆ ಗಾಂಧಿಯ ಮಾತುಕತೆ ಕುರಿತಂತೆ ಎಲ್ಲದರ ಬೈಬಲ್ ಎಂದು ನೀವು ನಂಬಿರುವ 'ಗಾಂಧಿ ಸಂಗ್ರಹಿತ ಲೇಖನಗಳಿಂದ' ನಿಮಗೆ ಕೆಲವು ಸಾಕ್ಷ್ಯ ನೀಡುವುದು ನನ್ನ ಕರ್ತವ್ಯ ಎಂದಷ್ಟೇ ಭಾವಿಸಿ ನಾನು ನಿಮ್ಮೊಂದಿಗೆ ಪತ್ರ ವ್ಯವಹಾರಕ್ಕಿಳಿದರೆ ಬೇರೆ ಬೇರೆ ಕಾರಣಗಳಿಗಾಗಿ ಈ ಮಾತುಕತೆ ಇಷ್ಟು ಉದ್ದವಾಯ್ತು!

ನೀವು ಸರಿಯಾಗಿ ಗಮನಿಸಿರುವಂತೆ ನಾನೊಬ್ಬ ವಿದ್ವಾಂಸನಲ್ಲ. ಜೊತೆಗೆ ವಿದ್ವದ್ವಲಯಗಳು ಮತ್ತು ವಿಶ್ವವಿದ್ಯಾಲಯಗಳ ಯೋಜನೆಗಳಲ್ಲಿ ಪಾಲ್ಗೊಳ್ಳಬಯಸುವವನೂ ಅಲ್ಲ. ನಿಜ ಹೇಳಬೇಕೆಂದರೆ ಈ 'ಪ್ರಾಜೆಕ್ಟ್'ಗಳೆಂದರೇನೆ ನನಗೆ ಭಯ! ನನ್ನ ಬರವಣಿಗೆಗಳ ಇಂಗ್ಲಿಷ್ ಅನುವಾದದ ಕುರಿತಾದ ನಿಮ್ಮ ಕಳಕಳಿಯ ಬಗ್ಗೆ ಹೇಳುವುದಾದದರೆ, ಅದು ಇಂಗ್ಲಿಷ್ ಬಲ್ಲ ಕನ್ನಡಿಗರಿಂದ ಆಗಬೇಕಾದ ಕೆಲಸ (ಅದಕ್ಕೆ ಆ ಅರ್ಹತೆ ಇದ್ದರೆ.). ನನಗಂತೂ ಅದರಲ್ಲಿ ಆಸಕ್ತಿ ಇಲ್ಲ. ಈ ವಿಷಯದಲ್ಲಿ ನಾನೊಬ್ಬ 'ಸ್ವರಾಜ್ಯವಾದಿ'. ನನ್ನ 'ನೆರೆಹೊರ'ಯಷ್ಟೇ ನನಗೆ ಸಾಕು.

ನನ್ನನ್ನು ಬಿರುಸಾಗಿ ಮುಖಾಮುಖಿಯಾಗುವ ನಿಮ್ಮ ಕೊನೆಯ ಪ್ರಯತ್ನದಂತೆ ಲೋಹಿಯಾ ಮತ್ತು ಜೆಪಿಯವರ ಹೆಸರು ಕೆಡಿಸಲು ಸುಸ್ತಾಗಿರುವ ನಮ್ಮ ಜಾತ್ಯತೀತವಾದಿಗಳು ಮತ್ತು ಮಾರ್ಕ್ಸ್‌ವಾದಿಗಳು ಅವರ ವಿರುದ್ಧ ಮಾಡಲಾರಂಭಿಸಿರುವ ಆ ಹಳೆಯ ತುಕ್ಕು ಹಿಡಿದ ಆರೋಪಗಳನ್ನೇ ನೀವು ಪುನರುಚ್ಚರಿಸಿರುವುದು ಖೇದಕರ. ಲೋಹಿಯಾ ಅವರ ಕಾಂಗ್ರೆಸ್ಸೇತರವಾದವನ್ನೂ ಮತ್ತು ಜೆಪಿಯವರು ತಮ್ಮ 'ಸಂಪೂರ್ಣ ಕ್ರಾಂತಿ' ಆಂದೋಲನಕ್ಕೆ ಜನಸಂಘ ಮತ್ತು ಆರೆಸ್ಸೆಸ್‌ಗಳನ್ನು ಸೇರಿಸಿಕೊಂಡಿದ್ದನ್ನೂ ಆಯಾ ರಾಜಕೀಯ ಘಟ್ಟ ಮತ್ತು ರಾಜಕೀಯ ಅನಿವಾರ್ಯತೆಗಳ ಸಂದರ್ಭದಲ್ಲಿಟ್ಟು ನೋಡಬೇಕು. ಆಗ ಜನಸಂಘವಾಗಲೀ, ಆರೆಸ್ಸೆಸ್ಸಾಗಲೀ ಇಷ್ಟು ಪ್ರಬಲ ಶಕ್ತಿಗಳಾಗಿರಲಿಲ್ಲ. ಜೊತೆಗೆ ಲೋಹಿಯಾ ಮತ್ತು ಜೆಪಿ ಎಂದೂ ತಮ್ಮ ರಾಜಕೀಯ ತತ್ವಗಳೊಂದಿಗೆ ಯಾವುದೇ ರಾಜಿ ಮಾಡಿಕೊಳ್ಳಲಿಲ್ಲ ಎಂಬುದನ್ನ ನೀವು ಮರೆಯಬಾರದು. ಪ್ರೊಫೆಸರ್ ಬ್ರಾಸ್‌ರೊಂದಿಗೆ ಲೋಹಿಯಾರ ಜೀವನದ ಕೊನೆಯ ಸಂದರ್ಶನ (ಆಗಸ್ಟ್ ೧೯೬೭) ವನ್ನು ನೀವು ಓದಿ. ಅಲ್ಲಿ ಹಲವು ಬಗೆಯ ರಾಜಕೀಯ ಧಾರೆಗಳೊಂದಿಗೆ ತಮಗಿದ್ದ ಸಂಬಂಧದ ಕುರಿತು ಲೋಹಿಯಾ ಮಾತನಾಡಿದ್ದಾರೆ. (ಲೋಹಿಯಾ ವಿಶೇಷ ಸಂಚಿಕೆ– ಜನತಾ, ೨೦೧೦). ಜೆಪಿಯ ನಂತರ, ಜನಸಂಘವು ತನ್ನ ಬಿಜೆಪಿ ಎಂಬ ಹೊಸ ಅವತಾರದಲ್ಲಿ ಪ್ರತ್ಯಕ್ಷವಾದಾಗ ೧೯೮೪ರ ಲೋಕಸಭಾ ಚುನಾವಣೆಯಲ್ಲಿ ಕೇವಲ ೨ ಸ್ಥಾನಗಳಿಗಿಳಿದದ್ದನ್ನ ನೀವು ಮರೆತುಬಿಟ್ಟಿರಾ? ಅಲ್ಲಿಂದ ಸಂಘಪರಿವಾರದವರು ತಮ್ಮ ಪಕ್ಷವನ್ನು ಸಂಘಟಿಸಿ ಇಂದಿನ ಈ ಹಂತ ತಲುಪಿದ್ದಾರೆ. ಇನ್ನೊಂದು ಕಡೆ ಈ ತಥಾಕಥಿತ ಜಾತ್ಯತಿತವಾದಿಗಳು ಕೇವಲ ಹಿಂದೂ ಮೂಲಭೂತವಾದ ವಿರೋಧಿ ಘೋಷಣೆಗಳ ಮೇಲೆ (ಮತ್ತು ಸಾಮಾಜಿಕ ನ್ಯಾಯದ ಕೂಗುಗಳ ಮೇಲೆ) ಬೆಳೆಯಲು ಪ್ರಯತ್ನಿಸಿದರು. ತಮ್ಮ ಪಕ್ಷವನ್ನು ಬುಡದಿಂದ ಸಂಘಟಿಸುವ ಕೆಲಸವನ್ನ ಇವರಾರೂ ಮಾಡಲಿಲ್ಲ. ಈಗ ಜನತಾ ನ್ಯಾಯಾಲಯದಲ್ಲಿ ತಮಗಾದ ಮುಖಭಂಗದಿಂದ ಪಾರಾಗಲು ಲೋಹಿಯಾ, ಜೆಪಿಯವರ ಮುಖಕ್ಕೆ ಮಸಿ ಬಳಿಯಲು ನೋಡುತ್ತಿದ್ದಾರೆ. ಅವರಿಗೆ ಒಳ್ಳೆಯದಾಗಲಿ. ಹಾಗೆ ನಿಮಗೂ ಸಹ!

ಇಂತಿ,

ಡಿಎಸ್‌ಎನ್

ಗುಹಾ ಅವರ ಪ್ರತಿಕ್ರಿಯೆ:

೧೧.೧೦.೨೦೧೭

ಶ್ರೀ ನಾಗಭೂಷಣ,

ನಾನು ಈ ಹಿಂದೆ ಹೇಳಿದ ಭಾರತೀಯ ಸೋಶಿಯಲಿಸಂನ ಯುವ ಸಂಶೋಧಕನನ್ನ ನಿಮ್ಮ ಬಳಿ ಕಳುಹಿಸಲೇ?

ಇಂತಿ,

ರಾ. ಗುಹಾ

ಡಿಎಸ್‌ಎನ್ ಪ್ರತಿಕ್ರಿಯೆ:

೧೧.೧೦.೨೦೧೭

ಶ್ರೀ ಗುಹಾ,

ನನ್ನ ಕೈ ತುಂಬಾ ಕೆಲಸವಿದೆ, ಜೊತೆಗೆ ಆಗಾಗ ಕೈ ಕೊಡುವ ಆರೋಗ್ಯವು ಹೊಸ ಜವಾಬ್ದಾರಿ ತೆಗೆದುಕೊಳ್ಳಲು ಅನುವು ಮಾಡಿಕೊಡುತ್ತಿಲ್ಲ.

ನಿಮ್ಮ ಪ್ರೀತಿ ಮತ್ತು ವಿಶ್ವಾಸಗಳಿಗೆ ಕೃತಜ್ಞ

ಡಿಎಸ್‌ಎನ್

೧೨.೧೦.೨೦೧೭

ಶ್ರೀ ಗುಹಾ,

ಲೋಹಿಯಾ ಮೇಲಿನ 'ಇಂಡಿಯನ್ ಎಕ್ಸ್ ಪ್ರೆಸ್'ನಲ್ಲಿನ ಲೇಖನಕ್ಕೆ ಧನ್ಯವಾದಗಳು

ಇಂತಿ,

ಡಿಎಸ್‌ಎನ್

ಗುಹಾ ಅವರ ಪ್ರತಿಕ್ರಿಯೆ:

೧೨.೧೦.೨೦೧೭

ಶ್ರೀ ನಾಗಭೂಷಣ,

ನಾನು ಅರ್ಥ ಮಾಡಿಕೊಳ್ಳಬಲ್ಲೆ. ನೀವು ಕೈಗೆತ್ತಿಕೊಂಡಿರುವ ಕೆಲಸಗಳು ಯಶಸ್ವಿಯಾಗಲಿ. ನಿಮ್ಮ ಆರೋಗ್ಯ ನೂರ್ಕಾಲ ಚೆನ್ನಾಗಿರಲಿ. ನಮ್ಮ ನಡುವಿನ ಈ

ಮಾತುಕತೆಗೆ ನಾನು ನಿಮಗೆ ಧನ್ಯವಾದಗಳನ್ನು ಹೇಳಬೇಕು. ಜೆಪಿ ಅಧ್ಯಕ್ಷತೆ ಕುರಿತು ಮಾತ್ರವಲ್ಲ ಮತ್ತಷ್ಟು ಹಲವು ವಿಷಯಗಳನ್ನು ತಿಳಿದುಕೊಳ್ಳುವಲ್ಲಿ ನಿಮ್ಮೊಡನೆಯ ಈ ಸಂವಾದ ಸಹಕಾರಿಯಾಗಿದೆ. ಟ್ವಿಟರ್ ಮತ್ತು ಫೇಸ್‌ಬುಕ್ಕಿನ ದಿನಗಳಲ್ಲಿ ಈ ಬಗೆಯ ಮಾತುಕತೆ ಅಸಾಧ್ಯವೆನಿಸುವಷ್ಟು ವಿರಳ.

ಹೆಗ್ಗೋಡಿನಲ್ಲಿ ನಿಮಗೆ ಪ್ರತಿಕ್ರಿಯಿಸುವಾಗ ನನ್ನ ಮಾತು ಅಥವಾ ವರ್ತನೆಯಲ್ಲಿ ಗರ್ವ ಅಥವಾ ಹೀಯಾಳಿಕೆ ಇಣುಕಿದ್ದರೆ ದಯವಿಟ್ಟು ಕ್ಷಮಿಸಿ.

ಇಂತಿ,

ರಾಮಚಂದ್ರ ಗುಹಾ

ಮರೆತ ಮಾತು: ನನ್ನ ವೈಯಕ್ತಿಕ ವಿಚಾರಗಳನ್ನು ಇಲ್ಲಿ ಹಂಚಿಕೊಂಡರೆ ತಾವು ತಪ್ಪು ತಿಳಿಯುವುದಿಲ್ಲವೆಂದು ಭಾವಿಸುತ್ತೇನೆ. ನನ್ನ ಪೋಷಕರು ಮನೆಯಲ್ಲಿ ಇಂಗ್ಲಿಷ್ ಮಾತನಾಡುತ್ತಾರೆ. ನಾನು ಡೆಹರಾಡೂನ್‌ನಲ್ಲಿ ಬೆಳೆದಿದ್ದರಿಂದ ಹಿಂದಿಯನ್ನು ಎರಡನೆಯ ಭಾಷೆಯಾಗಿ ಕಲಿತೆ. ನನ್ನ ಮೊದಮೊದಲ ಸಂಶೋಧನೆಗಳಿಗಾಗಿ ಹಿಂದಿ ಭಾಷೆಯ ಮೂಲದಿಂದ ಸಾಕಷ್ಟು ಪಡೆದೆ, ಜೊತೆಗೆ ಹಿಂದಿಯಿಂದ ಇಂಗ್ಲಿಷ್‌ಗೆ ಸಾಕಷ್ಟು ಸಣ್ಣ ಪುಟ್ಟ ಅನುವಾದಗಳನ್ನೂ ಮಾಡಿದೆ. ಜೆಪಿಯವರ ಪ್ರಮುಖ ಪ್ರಬಂಧ 'ನಾಗಲ್ಯಾಂಡ್‌ನಲ್ಲಿ ಶಾಂತಿಯ ಪ್ರಯತ್ನ'ವನ್ನೂ ಭಾಷಾಂತರಿಸಿದೆ. ನಮ್ಮೀ ಮಾತುಕತೆಯಿಂದ ತುಂಬಾ ಹಿಂದಿನಿಂದ ಆಲೋಚಿಸಿದ್ದ ಅನುವಾದವನ್ನು ಈಗ ಪುನಃ ಕೈಗೆತ್ತಿಕೊಳ್ಳುವವನಿದ್ದೇನೆ. ಶೇಖರ್ ಪಾಠಕ್ ಉತ್ತರಾಖಂಡದ ಆಧುನಿಕ ಇತಿಹಾಸದ ಕುರಿತ ಹಿಂದಿ ಗ್ರಂಥವನ್ನು ಇಂಗ್ಲಿಷ್‌ಗೆ ಅನುವಾದಿಸುವ ಯೋಜನೆಯದು.

ಡಿ ಎಸ್ ಎನ್ ಪ್ರತಿಕ್ರಿಯೆ:

೧೨.೧೦.೨೦೧೭

ಶ್ರೀ ಗುಹಾ,

ನಿಮ್ಮ ಪತ್ರಕ್ಕೆ ಧನ್ಯವಾದಗಳು. ನಿಮ್ಮ ಮಾತುಗಳು ನನ್ನನ್ನ ವಿನೀತನನ್ನಾಗಿಸಿವೆ.

ಇಂತಿ,

ಡಿ ಎಸ್ ನಾಗಭೂಷಣ

ನಂತರದ ಟಿಪ್ಪಣಿಗಳು : ಈ ಪತ್ರ ವ್ಯವಹಾರ ಮುಕ್ತಾಯವಾದ ಕೆಲವೇ ದಿನಗಳ ನಂತರದಲ್ಲಿ ಆಶ್ಚರ್ಯವೆಂಬಂತೆ ನನಗೂ, ಗುಹಾರಿಗೂ ಒಟ್ಟಿಗೇ ರಾಜ್ಯ ಸರ್ಕಾರದಿಂದ

ರಾಜ್ಯೋತ್ಸವ ಪ್ರಶಸ್ತಿ ಪ್ರಕಟವಾಯಿತು. ಇದಕ್ಕಾಗಿ ಅವರು ನನ್ನನ್ನು ಅಭಿನಂದಿಸಿದರು ಮತ್ತು ನಾನು ಅವರನ್ನು ಅಭಿನಂದಿಸಿದೆ. ನಾನು ನನ್ನದೇ ತಾತ್ವಿಕ ಕಾರಣಗಳಿಂದಾಗಿ ಆ ಪ್ರಶಸ್ತಿಯನ್ನು ಸ್ವೀಕರಿಸಲಿಲ್ಲ ಎಂಬುದು ಬೇರೆ ವಿಷಯ.

ಈ ಸಂಬಂಧವಾದ ಇನ್ನೊಂದು ಆಶ್ಚರ್ಯಕರ ಸಂಗತಿಯೊಂದಿದೆ. ಗುಹಾ ಅವರು ನನ್ನೊಡನೆ ಮುಖತಃ ಇನ್ನಷ್ಟು ಮಾತನಾಡಲು ಬಯಸಿ ನನ್ನ ಬೆಂಗಳೂರು ಭೇಟಿಯ ಬಗ್ಗೆ (ನಾನಿರುವುದು ಶಿವಮೊಗ್ಗದಲ್ಲಿ) ಪದೇ ಪದೇ ವಿಚಾರಿಸುತ್ತಿದ್ದರು. ಕೊನೆಗೆ ಡಿಸೆಂಬರ್ ೧೧, ೨೦೧೭ರ ಸಂಜೆ ಬೆಂಗಳೂರಿನಲ್ಲಿ ಭೇಟಿಯಾಗಲು ನಿಶ್ಚಯಿಸಿಕೊಂಡಾದ ಮೇಲೆ, ಅದೇ ದಿನ ಸಂಜೆ ಅವರಿಗೆ ಅವರ ಮನೆಯಲ್ಲೇ ಮುಖ್ಯಮಂತ್ರಿಗಳು ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ ಮಾಡುವ ಕಾರ್ಯಕ್ರಮ ನಿಗದಿಯಾಯಿತು. ಆದರೂ ಗುಹಾ ಅವರು ಆ ಸಂಜೆ ಪ್ರಶಸ್ತಿ ಪ್ರದಾನ ಸಮಯಕ್ಕಿಂತ ಮುಂಚೆ ಸ್ವಲ್ಪ ಬಿಡುವು ಮಾಡಿಕೊಂಡು ಬಂದು ನನ್ನನ್ನು ಭೇಟಿಯಾಗಿ ಅನೌಪಚಾರಿಕ ಮಾತುಕತೆ ನಡೆಸಿದರು. ಅವರ ಪ್ರೀತಿ–ವಿಶ್ವಾಸಗಳಿಗೆ ನಾನು ಕೃತಜ್ಞನಾಗಿದ್ದೇನೆ.

–ಡಿ.ಎಸ್. ನಾಗಭೂಷಣ

(ಕನ್ನಡಾನುವಾದ : ಸುಬ್ರಮಣ್ಯ, ತಿರುವನಂತಪುರ)

(ಇಡೀ ಸಂವಾದದ ಇಂಗ್ಲಿಷ್ ಮೂಲ ರೂಪ ಮುಂಬೈನ 'ಜನತಾ' ಪತ್ರಿಕೆಯ ೨೦೦೮ರ ಮಾರ್ಚ್ ೧೮ ಹಾಗೂ ೨೫ರ ಸಂಚಿಕೆಗಳಲ್ಲಿ ಕನ್ನಡ ಅನುವಾದ 'ಮಾತುಕತೆ' ೧೨೫–೧೨೬ ಸಂಯುಕ್ತ ಸಂಚಿಕೆಯಲ್ಲಿ ಪ್ರಕಟವಾಗಿದೆ.)

ಭಾಗ–೫
ಕೆಲವು ಪ್ರತಿಕ್ರಿಯೆಗಳು

ತಾಲಿಬಾನ್ ಮತ್ತು ಭಗವದ್ಗೀತೆ

ಕಳೆದ ವಾರ ಪಾಕಿಸ್ತಾನದ ಪೆಷಾವರ್‌ನಲ್ಲಿ ನಡೆದಿರುವ ದುರಂತ ಕಟುಕ ಹೃದಯಿಗಳ ಎದೆಯನ್ನೂ ನಡುಗಿಸುವಂತಹದು. ೧೩೦ ಮಕ್ಕಳೂ ಸೇರಿದಂತೆ ಒಟ್ಟು ೧೪೦ ಜನರನ್ನು ಪಾಕಿಸ್ತಾದ ತಾಲೀಬಾನಿ ಗುಂಪು ಕೊಂದಿರುವ ಈ ಸುದ್ದಿ ಇನ್ನೊಂದು ಆಘಾತಕಾರಿ ಸುದ್ದಿಯಾಗಿ ಎರಡು ಮೂರು ದಿನ ಜೀವಂತವಿರುವುದು. ಅನುಕಂಪ, ಸಹಾನುಭೂತಿ, ಸಾಂತ್ವನ, ಖಂಡನೆ, ವೀರಾವೇಶದ ಪಣ ಇತ್ಯಾದಿಗಳನ್ನೊಳಗೊಂಡ ಸಾರ್ವಜನಿಕ ಚರ್ಚೆಗಳ ದಾಸ್ತಾನು ಮುಗಿಯುತ್ತಿದ್ದಂತೆ ಕೆಲವೇ ದಿನಗಳಲ್ಲಿ ಇತ್ತೀಚಿನ ಇಂತಹ ಹಲವಾರು ಹಿಂಸಾಚಾರಗಳ ಸುದ್ದಿಗಳಂತೆಯೇ ಸಾರ್ವಜನಿಕ ಸ್ಮೃತಿಯಿಂದ ಕಾಣೆಯಾಗುವುದು. ಆದರೆ ಸದರಿ ಹಿಂಸಾಚಾರ ಭಾವನಾತ್ಮಕತೆಯನ್ನು ಮೀರಿದ ವಿಚಾರಕ್ಕೆ ನಮ್ಮನ್ನು ಕೊಂಡೊಯ್ಯದಿದ್ದರೆ, ಇಂತಹ ಹಿಂಸಾಚಾರ ನಮ್ಮ ದೇಶದೊಳಗೇ ವ್ಯಾಪಕವಾಗಿ ನಮ್ಮ ಮಕ್ಕಳೂ ಸೇರಿದಂತೆ, ನಮ್ಮ ನಿಮ್ಮನ್ನು ಆಹುತಿ ತೆಗೆದುಕೊಳ್ಳುವ ದಿನಗಳು ದೂರವಿಲ್ಲ ಎನಿಸುತ್ತದೆ.

ಈ ತಾಲಿಬಾನಿಗಳು ತಮ್ಮ ಹಿಂಸಾಚಾರವನ್ನು ಯಾವ ಧರ್ಮಭೀರುತನವೂ ಇಲ್ಲದೆ ತಮ್ಮದೇ ಧರ್ಮಕ್ಕೆ ಸೇರಿದ ಮುಗ್ಧ ಮಕ್ಕಳ ಸಾಮೂಹಿಕ ಕೊಲೆಯ ಹಂತಕ್ಕೆ ಕೊಂಡೊಯ್ಯುವ ಮನಃಸ್ಥಿತಿಗೆ ಏಕೆ ಹೋಗಿದ್ದಾರೆ? ಧರ್ಮರಕ್ಷಕರೆಂದು ತಮ್ಮನ್ನು ನಂಬಿಸಿಕೊಂಡು, ಗುರುತಿಸಿಕೊಳ್ಳುವ ಇವರು ತಮ್ಮ ಧರ್ಮದ ಜನತೆಯೂ ಸೇರಿದಂತೆ ಜಗತ್ತಿನ ಸಾಮಾನ್ಯ ಜನತೆ ಅಧರ್ಮವೆಂದು ಪರಿಗಣಿಸುವ ಇಂತಹ ಕೃತ್ಯಗಳನ್ನಾದರೂ ಏಕೆ ಮಾಡುತ್ತಾರೆ? ಇದಕ್ಕೆ ಸರಳ ಕಾರಣ, ಅವರು ಪಡೆದಿರುವ ಧರ್ಮೋಪದೇಶದ ಪ್ರಕಾರ, ಧರ್ಮ ರಕ್ಷಣೆಗಾಗಿ ಮುಗ್ಧರನ್ನು ಕೊಲ್ಲುವುದೂ ಧರ್ಮದ ಕೆಲಸವೇ ಆಗಿರುವುದು. ಅದಕ್ಕೆ ಅವರ ಧರ್ಮಗ್ರಂಥದಲ್ಲಿ ಒಪ್ಪಿಗೆ ಇದೆ ಎಂದೂ ಹೇಳಲಾಗುತ್ತಿರುವುದು. ಈ ಮಾತನ್ನು ಈ ಧರ್ಮದ ಹಲವು ವ್ಯಾಖ್ಯಾನಕಾರರು

ಒಪ್ಪುವುದಿಲ್ಲವಾದರೂ, ಒಪ್ಪಿಗೆ ಇದೆ ಎಂದು ವ್ಯಾಖ್ಯಾನಿಸುವರ ಮತ್ತು ಭಾವಿಸುವವರ ಸಂಖ್ಯೆ ಜಗತ್ತಿನಾದ್ಯಂತ ಗಣನೀಯವಾಗಿಯೇ ಇದೆ ಎಂಬುದು ಇಸ್ಲಾಮಿ ಉಗ್ರಗಾಮಿಗಳಿಂದ ಸಾಮೂಹಿಕ ಹತ್ಯೆಯ ಘಟನೆಗಳು ಯಾವುದೇ ಧಾರ್ಮಿಕ ನೆಲೆಯ ತಡೆಯಿಲ್ಲದೇ, ನಿರಂತರ ನಡೆಯುತ್ತಿರುವುದರಿಂದ ವೇದ್ಯವಾಗುತ್ತಿದೆ.

ಇದಕ್ಕೆ ಸಾಕ್ಷಿಯೆಂಬಂತೆ ಬೆಂಗಳೂರಿನಲ್ಲಿ ಬಂಧಿತನಾಗಿರುವ ಇಸ್ಲಾಮಿಕ್ ಸ್ಟೇಟ್ ಪ್ರಚಾರಕ ಶ್ರೀಮಾನ್ ಮೆಹದಿಯ ಸಂಬಂಧವಾಗಿ ಕೆಲ ದಿನಗಳ ಹಿಂದೆ ಬಿಬಿಸಿ ಪ್ರಸಾರ ಮಾಡಿದ ಮತ್ತು ನಮ್ಮೆಲ್ಲ ಟಿ.ವಿ.ವಾಹಿನಿಗಳಲ್ಲೂ ಮರುಪ್ರಸಾರವಾದ ಸಂದರ್ಶನವೊಂದನ್ನು ಗಮನಿಸಬೇಕು. ಇದರಲ್ಲಿ ಆ ಹಿಂಸೆಗೆ, ಹತ್ಯೆಗಳಿಗೆ ನಿಮ್ಮ ಧರ್ಮದಲ್ಲಿ ಮಾನ್ಯತೆ ಇದೆಯೇ ಎಂಬ ಸಂದರ್ಶಕನ ಪ್ರಶ್ನೆಯೊಂದಕ್ಕೆ ಈ ಪ್ರಚಾರಕ ತನ್ನ ವಿವರಣಾತ್ಮಕ ಉತ್ತರದಲ್ಲಿ ಹೇಳಿದ ಒಂದು ಮಾತು ಯಾರ ಎದೆಯನ್ನಾದರೂ ನಡುಗಿಸುವಂತಹುದು: 'ಹೌದು ಕುರಾನ್‌ನಲ್ಲಿ ಹಲವು ರೀತಿಯ ಶಿಕ್ಷೆಗಳಿಗೆ ಮಾನ್ಯತೆ ಇದೆ... ಶಿರಚ್ಛೇದನಕ್ಕೆ ಅವಕಾಶವಿದೆ.' ಹೀಗೇ ಮುಂದುವರೆದ ಆತನ ಇಡೀ ಉತ್ತರವನ್ನು ನಮ್ಮ ಟಿವಿ ವಾಹಿನಿಗಳು ಪ್ರಸಾರ ಮಾಡಲಿಲ್ಲ. ಅದು ಒಳ್ಳೆಯದೇ.

ಈಗ ಪ್ರಶ್ನೆ. ಆತನ ಮಾತು ನಿಜವೆ? ಈ ಗ್ರಂಥ ಕೊಲ್ಲುವ ವಿವಿಧ ರೀತಿಗಳನ್ನು ಚರ್ಚಿಸುವುದೇ? ಅದು ನಿಜವೇ ಆಗಿದ್ದಲ್ಲಿ ಆ ಗ್ರಂಥವನ್ನು ಸ್ವತಃ ಆ ಧರ್ಮದವರೇ ಹೇಗೆ, ಯಾವ ನೆಲೆಯಲ್ಲಿ ಧರ್ಮಗ್ರಂಥವೆಂದು ಮಾನ್ಯ ಮಾಡುವರು? ಈ ಧರ್ಮದ ಪ್ರತಿಪಾದಕರು, ಅನುಯಾಯಿಗಳು, ವಿಶೇಷವಾಗಿ ಧರ್ಮೋಪದೇಶಕರು ಮತ್ತು ಚಿಂತಕರು ಈ ಬಗ್ಗೆ ಸಾರ್ವಜನಿಕವಾದ ತಮ್ಮ ಅಭಿಪ್ರಾಗಳೊಡನೆ ಹೊರಬರಬೇಕಿದೆ. ಒಂದು ಚರ್ಚೆಯನ್ನು ಹುಟ್ಟುಹಾಕಬೇಕಿದೆ. ಇಲ್ಲದಿದ್ದರೆ ಅವರು ಈ ಧರ್ಮದವರೂ ಸೇರಿದಂತೆ ಶಾಂತಿಯುತ ಸಮಾಜ ಬಯಸುವ ಎಲ್ಲ ಧರ್ಮಗಳ ಸಾರ್ವಜನಿಕರ ಕಣ್ಣಿನಲ್ಲಿ ಅನುಮಾನಾಸ್ಪದ ವ್ಯಕ್ತಿಗಳೇ ಆಗಿಬಿಡುತ್ತಾರೆ.

ಈ ವಿಷಯ ಈ ನಿರ್ದಿಷ್ಟ ಧರ್ಮದಾಚೆಯ ಚರ್ಚೆಗೂ ಕಾರಣವಾಗಬೇಕಾದ ಸಂದರ್ಭವೂ ಒದಗಿಬಂದಿರುವುದು ಇಂದಿನ ಇನ್ನೊಂದು ವಿಶೇಷವಾಗಿದೆ. ಕೇಂದ್ರದ ಸಚಿವರೊಬ್ಬರು 'ಭಗವದ್ಗೀತೆ'ಯನ್ನು ರಾಷ್ಟ್ರೀಯ ಗ್ರಂಥವನ್ನಾಗಿ ಘೋಷಿಸಬೇಕೆಂಬ ಬೇಡಿಕೆಯನ್ನಿಟ್ಟಿದ್ದಾರೆ. ಇದು ಹೊಸದೊಂದು ಚರ್ಚೆಯನ್ನು ಹುಟ್ಟು ಹಾಕಿ, ಈ ಗ್ರಂಥ ಯುದ್ಧವನ್ನು ಪ್ರೋತ್ಸಾಹಿಸುವುದರಿಂದ ಅದು ಸಲ್ಲದು ಎಂದು ಕೆಲವರು ವಾದಿಸುತ್ತಿದ್ದಾರೆ. ಅದಕ್ಕೆ ಪ್ರತಿಕ್ರಿಯೆಯಾಗಿ ಕೆಲವರು, ಶಾಂತಿ ಸಂಧಾನ ವಿಫಲವಾದ ನಂತರವಷ್ಟೇ ಈ ಗ್ರಂಥದಲ್ಲಿ ಯುದ್ಧವನ್ನು ಪ್ರೋತ್ಸಾಹಿಸಲಾಗಿರುವುದರಿಂದ ಅದೇನೂ ತಪ್ಪಲ್ಲ ಎಂದು ವಾದಿಸುತ್ತಿದ್ದಾರೆ. ಆದರೆ ಇಂದು ಜಗತ್ತು ಧರ್ಮವನ್ನು ಅರ್ಥೈಸಿಕೊಳ್ಳುತ್ತಿರುವ ಮತ್ತು ಅದರ ಆಧಾರದ ಮೇಲೆ ರಾಜಕಾರಣವನ್ನು(ಅಂದರೆ ತನ್ನ ಲೌಕಿಕವನ್ನು) ರೂಪಿಸಿಕೊಳ್ಳುತ್ತಿರುವ ಮಾದರಿಗಳನ್ನು ನೋಡಿದರೆ ಧರ್ಮಗ್ರಂಥಗಳೆಂದು ಹೇಳಲಾಗುವ

ಈ ಗ್ರಂಥಗಳನ್ನು ಕುರಿತ ಚರ್ಚೆ ಈ ಸರಳೀಕೃತ ನೆಲೆಗಳನ್ನು ದಾಟಿ ಇನ್ನಷ್ಟು ಗಂಭೀರ ನೆಲೆಯಲ್ಲಿ ನಡೆಯಬೇಕಾಗಿದೆಯೆಂದು ಯಾರಿಗಾದರೂ ಅನ್ನಿಸದಿರದು.

ಉದಾಹರಣೆಗೆ 'ಭಗವದ್ಗೀತೆ'ಯಲ್ಲಿನ ಯುದ್ಧದ ಪ್ರಶ್ನೆಯನ್ನೇ ತೆಗೆದುಕೊಳ್ಳಿ. ದಾಯಾದಿಗಳ ಮಧ್ಯದ ಸಂಧಾನ ವಿಫಲವಾದುದರಿಂದ ಸಂಧಾನವನ್ನು ಒಪ್ಪದ ದಾಯಾದಿಗಳನ್ನು ಕೊಲ್ಲುವುದು ಸಾಧುವೇ ಸರಿ ಎನ್ನುವವರು ತಂತಮ್ಮ ವಾಸ್ತವ ದಾಯಾದಿಗಳೊಂದಿಗೆ ಹೊಂದಿರಬಹುದಾದ ವ್ಯಾಜ್ಯಗಳಿಗೆ ಇದನ್ನು ಅನ್ವಯಿಸಿಕೊಂಡು ಯೋಚಿಸಲಿ. ಇನ್ನೂ ಮುಖ್ಯ ಸಂಗತಿ ಎಂದರೆ, ತನ್ನ ಗುರು ಹಿರಿಯರು, ಬಂಧುಗಳನ್ನು ಕೊಲ್ಲಲಾಗದ ಮಾನವ ಸಹಜ ಭಾವನಾತ್ಮಕತೆಯಿಂದ ವಿಷಾದಯೋಗಕ್ಕೀಡಾಗಿರುವ ಅರ್ಜುನನನ್ನು, ದೇವರ ಅವತಾರವೆಂದು ಕರೆಯಲಾಗುವ ಕೃಷ್ಣ ಯುದ್ಧಕ್ಕೆ (ಅಂದರೆ ಹತ್ಯೆಗೆ) ಪ್ರೇರೇಪಿಸುವುದು ಮುಖ್ಯವಾಗಿ ಈ ಮಾತುಗಳಿಂದ: 'ಕೊಲ್ಲುವವನು ನಿಜವಾಗಿ ನೀನಲ್ಲ; ಹಾಗೇ ಕೊಲ್ಲಲ್ಪಡುವವರೂ ನಿಜವಾಗಿ ಅವರಲ್ಲ. ಈ ಎಲ್ಲವನ್ನೂ ಮಾಡುವವನು ಸಕಲರ ಆತ್ಮಸ್ವರೂಪನಾದ ನಾನು.' ಇದನ್ನು ಯಾರಾದರೂ ಧರ್ಮಾತ್ಮರು ನಮ್ಮ ಇಂದಿನ ಅರಿವಿಗೆ ದಕ್ಕುವಂತೆ ವಿವರಿಸಿ ಹೇಳದ ಹೊರತು, ಇದು ಯುದ್ಧವನ್ನು, ಹತ್ಯೆಯನ್ನು ದೇವರ ಹೆಸರಲ್ಲಿ ನಡೆಸಲು ಪ್ರೇರೇಪಿಸುವ ಉಪಾಯವೇ ಸರಿ ಎಂದು ಹೇಳಬೇಕಾಗುತ್ತದೆ. ಮತ್ತು ಇದು ಸಮಕಾಲೀನ ಸಂದರ್ಭದಲ್ಲಿ ಅಪಾಯಕಾರಿ ಪರಿಣಾಮಗಳಿಗೆ ಆಹ್ವಾನವಿತ್ತಂತಾಗುತ್ತದೆ.

ಏಕೆಂದರೆ, ಇಂತಹ ಗ್ರಂಥ ವೈಯಕ್ತಿಕ ನೆಲೆಯ ಅಧ್ಯಯನ ಗ್ರಂಥವಾಗುಳಿಯದೆ, ಇದಕ್ಕೆ ರಾಷ್ಟ್ರೀಯ ಗ್ರಂಥ ಎಂಬ ಅಧಿಕೃತ ಮಾನ್ಯತೆ ಸಿಕ್ಕರೆ ಇಂದು ರಾಷ್ಟ್ರೀಯತೆ ಎಂಬುದು ಪಡೆದುಕೊಂಡಿರುವ ಅತಿಯಾದ ಅರ್ಥದ ಹಿನ್ನೆಲೆಯಲ್ಲಿ ಬೇರೆ ಬೇರೆ ವ್ಯಾಖ್ಯಾನಗಳಿಗೆ ಸಿಕ್ಕಿ ರಾಷ್ಟ್ರೀಯ ಅನಾಹುತಗಳಿಗೆ ದಾರಿ ಮಾಡಿಕೊಡಬಲ್ಲುದಾಗಿದೆ. ಅದು ಧಾರ್ಮಿಕ ಉದ್ದೇಶಗಳಿಗೆ ಬದಲಾಗಿ, ಧರ್ಮದ ಜೊತೆಗೆ ಕೆಲವರು ತಮ್ಮದೇ ಆವೃತ್ತಿಯ ರಾಷ್ಟ್ರೀಯತೆಯನ್ನು ಬೆರೆಸಿ ಅಧಾರ್ಮಿಕ ಉದ್ದೇಶಗಳಿಗೇ ಅದನ್ನು ಬಳಸುವ ಸಾಧ್ಯತೆ ಇದೆ. ಇದು ರಾಷ್ಟ್ರಾದ್ಯಂತ ದಾಯಾದಿ ಯುದ್ಧಕ್ಕೇ ಕಾರಣವಾಗುವ ಎಲ್ಲ ಸಾಧ್ಯತೆಗಳಿವೆ. ಹಾಗಾಗಿ ಶಂಕರಾಚಾರ್ಯರಿಂದ ಹಿಡಿದು ಮಹಾತ್ಮ ಗಾಂಧಿವರೆಗೆ ಹಲವರ ವ್ಯಾಖ್ಯಾನಗಳಿಗೆ ಇದು ಒಳಗಾಗಿದೆ. ಹೀಗೆ ಹಲವು ದಾರ್ಶನಿಕ ಆವೃತ್ತಿಗಳಲ್ಲಿ ಕಾಣಿಸಿಕೊಂಡಿರುವ ಭಗವದ್ಗೀತೆ ಅವರವರ ಭಾವಕ್ಕೆ ತಕ್ಕಂತೆ ಅವರವರ ದರುಶನವಾಗಿ ವೈಯಕ್ತಿಕ ನೆಲೆಯ ಸ್ವೀಕಾರಕ್ಕೆ ಅರ್ಹವಾದ ಗ್ರಂಥವಾಗಿ ಉಳಿಯಲಿ. ನಿಜವಾಗಿ ಅದು ಪಿತೃ ಗ್ರಂಥವಾಗಿ ಉಳಿಯುವುದು ಆ ನೆಲೆಯಲ್ಲೇ ಎಂಬುದನ್ನು ಪ್ರಜ್ಞಾವಂತರು ಅರಿಯಲಿ.

('ಪ್ರಜಾವಾಣಿ' ಪ್ರಕಟಿಸದ ಬರಹ : ೨೦೧೪ ಡಿಸೆಂಬರ್)

ಅಮೆರಿಕಾದ ಆಯುಧೋದ್ಯಮ ಮತ್ತು ಮುಸ್ಲಿಂ ಯುವಜನತೆ

'ವಿಶ್ಲೇಷಣೆ' ಅಂಕಣದಡಿಯಲ್ಲಿ ಪ್ರಕಟವಾಗಿರುವ ಎಂ.ಎ. ಸಿರಾಜ್ ಎಂಬುವವರ 'ಕನಸಿನ ವ್ಯಾಪಾರಿಗಳ ಬಲೆಯಲ್ಲಿ ಮುಸ್ಲಿಮರು' ಎಂಬ ಲೇಖನಕ್ಕೆ (ಪ್ರವಾ: ೧೪.೩. ೨೦೧೮) ಪ್ರತಿಕ್ರಿಯೆ ಇದು. ಮುಸ್ಲಿಂ ಸಮುದಾಯ ಕಡುಬಡತನ ಮತ್ತು ಅಭದ್ರತೆಗಳನ್ನು ಎದುರಿಸುತ್ತಿದ್ದರೂ ಆ ಸಮುದಾಯದ ಮಧ್ಯೆ ಪ್ರಜಾಪ್ರಭುತ್ವ, ಧರ್ಮನಿರಪೇಕ್ಷತೆ, ಬಹುತ್ವ, ಲಿಂಗ ಸಮಾನತೆ ಇತ್ಯಾದಿ ಆಧುನಿಕ ಮೌಲ್ಯಗಳ ಬಗ್ಗೆ ಕುರುಡು ವಿರೋಧ ವ್ಯಕ್ತಪಡಿಸುವವರ ಸಂಖ್ಯೆ ದೊಡ್ಡದೇ ಇದೆ ಎಂಬ ವಾಸ್ತವವನ್ನು ಒಪ್ಪಿಕೊಂಡ ಮಾತುಗಳೊಂದಿಗೆ ಈ ಲೇಖನ ಕುತೂಹಲ ಹುಟ್ಟಿಸುತ್ತಾ ಆರಂಭವಾಗುತ್ತದೆ. ಆದರೆ ಅದು ಈ ವಾಸ್ತವದ ಹಿಂದಿರುವ ಮೂಲ ಕಾರಣವೇನು ಎಂಬುದರ ಅನ್ವೇಷಣೆಗೆ ಹೋಗದೆ ಸುಲಭ ಉಪದೇಶಾತ್ಮಕತೆಗೆ ತಿರುಗಿಕೊಂಡು ನಿರಾಶೆ ಹುಟ್ಟಿಸುತ್ತದೆ. ಮುಸ್ಲಿಂ ಸಮುದಾಯದ ಕಷ್ಟ ನಷ್ಟಗಳನ್ನು ಕುರಿತ ಲೇಖನಗಳೇ ನಮ್ಮ ಜನಪ್ರಿಯ ಮಾಧ್ಯಮಗಳಲ್ಲಿ ಅಪರೂಪವಾಗುತ್ತಿರುವಾಗ ಈ ಲೇಖನವೂ ಹೀಗೆ ನಿರಾಸೆ ಹುಟ್ಟಿಸಿದ್ದು ಖೇದಕರ.

ಇಸ್ಲಾಂ ಹೆಸರಿನಲ್ಲಿ ನಡೆಯುತ್ತಿರುವ ಭಯೋತ್ಪಾದನೆಗೆ ಅಮೆರಿಕಾವನ್ನು ದೂಷಿಸುವುದು ಒಂದು ಹಳೆಯ ಚಾಳಿ. ಈ ದೂಷಣೆಯಲ್ಲಿ ಸತ್ಯದ ಒಂದು ಭಾಗವೂ ಇರಬಹುದು. ಆದರೆ ಈ ಲೇಖನ ಹೇಳುವ ಹಾಗೆ ಅಮೆರಿಕಾ ತನ್ನ ಆಯುಧೋದ್ಯಮದ ವೃದ್ಧಿಗೆ ಏಜೆಂಟರು ಬೇಕಾಗಿದ್ದರೆ ಅವರು ಮುಸ್ಲಿಂ ಯುವಕರೇ ಏಕಾಗಿರಬೇಕು, ಬೇರೆ ಮತಗಳ ಯುವಜನ ಏಕೆ ಈ ಬಲೆಗೆ ಬೀಳುತ್ತಿಲ್ಲ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳದ ಹೊರತು ಇಸ್ಲಾಂ ಹೆಸರಿನ ಭಯೋತ್ಪಾದನೆಯನ್ನು ಪೂರ್ಣವಾಗಿ ವಿವರಿಸಲು ಸಾಧ್ಯವಿಲ್ಲ ಎಂದೆನಿಸುತ್ತದೆ.

ಸಿರಾಜ್ ಅವರು ಹೇಳುವ, ಮೇಲೆ ಉಲ್ಲೇಖಿಸಿದ ವಾಸ್ತವಕ್ಕೂ ಈ ಪ್ರಶ್ನೆಗೂ ಸಂಬಂಧವಿದೆ ಎನಿಸುತ್ತದೆ. ಇಸ್ಲಾಂ ಮತದ ಅನುಯಾಯಿಗಳು ಇತರೆ ಮತಗಳ ಅನುಯಾಯಿಗಳಿಗೆ ಹೋಲಿಸಿದಂತೆ ಮತಕ್ಕೆ ಹೆಚ್ಚು ಮತ್ತು ಕಡು ನಿಷ್ಠರಾಗಿ ಉಳಿದು ಸಮಾನತೆ, ಬಹುತ್ವ ಇತ್ಯಾದಿ ಸಮಕಾಲೀನ ಮೌಲ್ಯಗಳಿಗೆ ಸುಲಭವಾಗಿ ತೆರೆದುಕೊಳ್ಳುವುದಕ್ಕೆ ನಿರಾಕರಿಸಲು ಮತ್ತು ತಮ್ಮ ಮತ ನಿಯಮಗಳ ಬಗ್ಗೆ ಅತಿ ಸೂಕ್ಷ್ಮವಾಗಿ ಮತ್ತು ಕಠೋರವಾಗಿ ನಡೆದುಕೊಳ್ಳಲು ಏನು ಕಾರಣ? ಇದಕ್ಕೆ ಸದ್ಯದ ಕಾಲಸಂದರ್ಭ ಕಾರಣವೇ? ಅಥವಾ ಅವರ ಮತಶಾಸ್ತ್ರದಲ್ಲೇ ಕಾರಣಗಳು ಅಂತರ್ಗತವಾಗಿವೆಯೇ? ಎಂಬಿತ್ಯಾದಿ ಪ್ರಶ್ನೆಗಳು ಮುಕ್ತವಾಗಿ ಚರ್ಚೆಯಾಗದ

ಹೊರತು ಆ ಸಮುದಾಯದ ಶ್ರೀಸಾಮಾನ್ಯರಿಗೆ ಲೌಕಿಕವಾಗಿ ರಚನಾತ್ಮಕ ದೃಷ್ಟಿಕೋನ ಬೆಳೆಸಿಕೊಳ್ಳುವಂತೆ ಉಪದೇಶಿಸುವುದರಿಂದ ಯಾವ ಪ್ರಯೋಜನವೂ ಇಲ್ಲ.

ಸಿರಾಜ್ ಅವರು ತಾವು ಎತ್ತಿಕೊಂಡಿರುವ ಪ್ರಶ್ನೆಯನ್ನು ಹೀಗೆ ಸರಳೀಕರಿಸಿಕೊಂಡು–ಕೇಳಬೇಕಾದ ಮೂಲ ಪ್ರಶ್ನೆಯನ್ನು ಕೇಳದೆ–ಮುಂದುವರೆದುದರಿಂದಲೇ ಅವರು ಸಮುದಾಯಗಳನ್ನು ನಿಜವಾಗಿ ಕ್ರಿಯಾಶೀಲಗೊಳಿಸಬಲ್ಲವರಿಗೆ ಒಂದು ಕಾಣ್ಕೆ ಇರಬೇಕೆಂದು ಹೇಳುತ್ತಾ ಅಂಬೇಡ್ಕರ್ ಅವರ ಉದಾಹರರಣೆ ಕೊಡುವಾಗ ಚರಿತ್ರೆಯನ್ನು ಸಮೀಪದೃಷ್ಟಿಯಿಂದ ನೋಡುವ ದೋಷಕ್ಕೆ ಒಳಗಾಗಿದ್ದಾರೆ. ಅಂಬೇಡ್ಕರ್ ಸಾರ್ವತ್ರಿಕವಾಗಿ ಭಾರತೀಯ ಸಮಾಜದಲ್ಲಿ ಉಂಟು ಮಾಡಿದ ತಲ್ಲಣ ಮತ್ತು ನಿರ್ದಿಷ್ಟವಾಗಿ ದಲಿತ ಲೋಕದಲ್ಲಿ ಉಂಟು ಮಾಡಿದ ಎಚ್ಚರ ಹಾಗೂ ಅದರಿಂದಾಗಿರುವ ರಚನಾತ್ಮಕ ಬದಲಾವಣೆಗಳು ಚರಿತ್ರಾರ್ಹವಾಗಿವೆ ಎಂಬುದು ನಿಜ. ಆದರೆ ಅದನ್ನು ಹೇಳುವ ಭರದಲ್ಲಿ ಒಂದೇ ಉಸಿರಿನಲ್ಲಿ ಗಾಂಧಿ, ನೆಹರೂ ಅವರನ್ನು ಪ್ರಸ್ತಾಪಿಸುತ್ತಾ ಇವರ ಕಾಣ್ಕೆಗಳೇ ಕಿರಿದಾಗುವಷ್ಟು ಮಟ್ಟಿಗೆ ಇಂದು ಅಂಬೇಡ್ಕರ್ ಬೆಳೆದು ನಿಂತಿದ್ದಾರೆ ಎಂದು ತೀರ್ಮಾನಿಸುವುದು ಕಾಣ್ಕೆ ಎಂಬ ಶಬ್ದದ ಅಪಮೌಲ್ಯೀಕರಣವೇ ಆದೀತು. ಈ ಅಪಮೌಲ್ಯೀಕರಣಕ್ಕೆ, ಗಾಂಧಿ ಮತ್ತು ನೆಹರೂ ಅವರನ್ನು ಒಂದು ಚಾರಿತ್ರಿಕ ಜೋಡಿಯಾಗಿ ಗ್ರಹಿಸುವ, ಚರಿತ್ರೆಯನ್ನು ಬಹು ಸರಳವಾಗಿ (ಏಕ ಮಡಿಕೆಯಲ್ಲಿ) ಮತ್ತು ಸಮೀಪದೃಷ್ಟಿಯಿಂದಷ್ಟೇ ನೋಡುವ ಲೇಖಕರ ದೌರ್ಬಲ್ಯವೇ ಕಾರಣವಾಗಿದೆ. ಏಕೆಂದರೆ ಚರಿತ್ರೆಯಲ್ಲಿ ಅಂಬೇಡ್ಕರ್ ಗಾಂಧಿ ಮತ್ತು ನೆಹರೂ ಮಾಡಿದ ಕೆಲಸಗಳ ನೆಲೆಗಳು ಬೇರೆ ಬೇರೆಯಾಗಿದ್ದು ಅವುಗಳ ಮೌಲ್ಯಮಾಪನ ಬೇರೆ ಬೇರೆ ನೆಲೆಗಳ ಮಾನದಂಡಗಳನ್ನು ಬೇಡುತ್ತವೆ.

ಒಟ್ಟಿನಲ್ಲಿ ಮುಸ್ಲಿಂ ಸಮುದಾಯದಲ್ಲಿ ಲೌಕಿಕ ವ್ಯವಹಾರಗಳಲ್ಲಿ ಮತಾಚಾರಗಳಿಗೆ ಹೆಚ್ಚಿನ ಪ್ರಾಧಾನ್ಯ ನೀಡದಂತಹ ಧರ್ಮನಿರಪೇಕ್ಷ ನಾಯಕತ್ವ ಮೂಡುವವರೆಗೆ ಮುಸ್ಲಿಂ ಸಮುದಾಯದ ಸಂಕಟಗಳು ನಿವಾರಣೆಯಾಗಲಾರವು. ಸಿರಾಜ್ ಅವರು ಈ ಮಾತನ್ನು ನೇರವಾಗಿ ಹೇಳಲಾಗದಿರುವುದೇ ಅವರ ಲೇಖನದ ಮುಖ್ಯ ಸಮಸ್ಯೆಯಾಗಿದೆ.

('ಪ್ರಜಾವಾಣಿ' ಪ್ರಕಟಿಸದ ಪತ್ರ)

ಧರ್ಮ ಸಂಸತ್ ಕುರಿತು

ನಿಮ್ಮೆಲ್ಲ ಪ್ರಶ್ನೆಗಳಿಗೆ ಒಟ್ಟಿಗೆ ಉತ್ತರಿಸುತ್ತಿರುವೆ :

ಧರ್ಮ ಸಂಸತ್ತನ್ನು ನಾನು ನಮ್ಮ ಲೋಕ ಸಂಸತ್ತು (ನಮ್ಮ ಪಾರ್ಲಿಮೆಂಟು) ವಿಫಲವಾಗುತ್ತಿರುವುದರ ಸೂಚನೆಯಾಗಿ ಕಾಣುತ್ತೇನೆ. ಅಂದರೆ ನಮ್ಮ ಪ್ರಜಾಸತ್ತೆ

ಮತ್ತು ಅದರ ಮುಖ್ಯ ಆಧಾರ ಸ್ತಂಭಗಳಾದ ಗಣರಾಜ್ಯ ಮತ್ತು ಸೆಕ್ಯುಲರ್ ತತ್ವಗಳು ಬರೀ ಕ್ಲೀಷೆಗಳಾಗಿ ಅರ್ಥ ಕಳೆದುಕೊಂಡಿರುವುದರ ಪರಿಣಾಮ ಈ ಧರ್ಮ ಸಂಸತ್ತಿನ ಉದಯಕ್ಕೆ, ಕಾರ್ಯಾಚರಣೆಗೆ ಆಟಾಟೋಪಕ್ಕೆ ಕಾರಣವಾಗಿದೆ ಎಂಬುದು ನನ್ನ ಭಾವನೆ. ಆದುದರಿಂದ ಅದನ್ನು ಮತ್ತು ಅದರಲ್ಲಿ ಭಾಗವಹಿಸಿದವರನ್ನು ದೂಷಿಸುವುದರಿಂದ ಹೆಚ್ಚಿನ ಪ್ರಯೋಜನವಿಲ್ಲವೆಂಬುದು ನನ್ನ ಅಭಿಪ್ರಾಯ. ಬದಲಿಗೆ ನಮ್ಮ ಗಣರಾಜ್ಯ ಮತ್ತು ಸೆಕ್ಯುಲರ್ ತತ್ವಗಳು ಏಕೆ ಸ್ವಘೋಷಿತ ಪ್ರಗತಿಪರರು ಮತ್ತು ಎಡಪಂಥಿಯರ ಹೊರತಾಗಿ ಕ್ರಮೇಣ ಇತರ ಬಹುಜನರ ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುತ್ತಿದೆ ಎಂದು ನಿಷ್ಠುರತೆಯಿಂದ ಯೋಚಿಸಿ ಅವುಗಳ ಅರ್ಥವನ್ನು ಪುನರ್‌ನಿರೂಪಿಸುವ ಸವಾಲನ್ನು ಸ್ವೀಕರಿಸುವುದು ನಮ್ಮ ಇಂದಿನ ತುರ್ತು ಅಗತ್ಯವಾಗಿದೆ. ವಿಶೇಷವಾಗಿ ಸೆಕ್ಯುಲರ್ ತತ್ವದ ಪ್ರಗತಿಪರರ ಮತ್ತು ಎಡಪಂಥೀಯರ ಅರ್ಥ ನಿರೂಪಣೆ ಜನರ ಕಣ್ಣಲ್ಲಿ ಅನುಮಾನಾಸ್ಪದವಾಗಿದೆ ಎಂಬುದನ್ನು ಅರಿಯಲು ಇವರು ತಡ ಮಾಡಿದಷ್ಟೂ ಧರ್ಮ ಸಂಸತ್ತುಗಳು ಮತ್ತು ಅವುಗಳ ಮತ ರಾಜಕಾರಣ ಮುಂದುವರೆಯುತ್ತದೆ.

ಧರ್ಮ ಸಂಸತ್ತು ಈಗ ಅದರ ಕಟ್ಟಾ ಬೆಂಬಲಿಗರು (ಅಂದರೆ ಕಟ್ಟರ್ ಹಿಂದುತ್ವವಾದಿಗಳು) ಮತ್ತು ಹಲವು ವರ್ಷಗಳ ವಿಚಾರ ಶ್ರೇಷ್ಠತೆಯ ವ್ಯಸನ ಮತ್ತು ಅದನ್ನು ಆಧರಿಸಿದ 'ಪ್ರತ್ಯೇಕಿತ' ರಾಜಕಾರಣದಿಂದಾಗಿ ಅಲ್ಪಸಂಖ್ಯಾತರಾಗಿ ಹೋಗಿರುವ ಪ್ರಗತಿಪರರ ಹೊರತಾಗಿ ಜನಸ್ತೋಮದ ಇನ್ನಾವ ಭಾಗದ ವಿಶೇಷ ಕುತೂಹಲವನ್ನಾಗಲೀ, ಗಂಭೀರ ಗಮನವನ್ನಾಗಲೀ ಸೆಳೆದಿಲ್ಲ. ಆದುದರಿಂದ, ರಾಜಕಾರಣದ ಎರಡೂ ಅತಿಗಳ ಬೆಂಬಲಿಗರ ಆಡುಂಬೊಲವಾಗಿ ಹಾಸ್ಯಾಸ್ಪದವಾಗಿಬಿಟ್ಟಿರುವ ಸಾಮಾಜಿಕ ಜಾಲತಾಣಗಳ ಹೊರತಾಗಿ ಇತರ ಸಮೂಹ ಮಾಧ್ಯಮಗಳು ಇದರ ಬಗ್ಗೆ ಚರ್ಚಿಸುವ ಗೋಜಿಗೆ ಹೋಗಿಲ್ಲವೆಂದು ಕಾಣುತ್ತದೆ. ಈಗ ಮೊದಲಿದ್ದಂತೆ ಸಮೂಹ ಮಾಧ್ಯಮಗಳೇನೂ ಪ್ರಗತಿಪರತೆಯ ಮುಖವಾಡಗಳನ್ನು ತೊಟ್ಟಿಲ್ಲವಲ್ಲ? ಈ ಮಾತು ನಮ್ಮ ವಿವಿಧ ರಾಜಕೀಯ ಪಕ್ಷಗಳಿಗೂ ಅನ್ವಯಿಸುತ್ತದೆ. ಜೊತೆಗೇ ಇನ್ನೊಂದು ಮಾತು: ಧರ್ಮ ಸಂಸತ್ತಿನ ಬಗ್ಗೆ ಅದರ ವಿರೋಧಿಗಳು ಎಬ್ಬಿಸುತ್ತಿರುವ ಉದ್ವೇಗಭರಿತ ಧೂಳಿನಿಂದಾಗಿಯೇ ಅದು ಹೆಚ್ಚಿನ ಗಮನ ಸೆಳೆದಿದೆ ಎಂದು ನನಗನ್ನಿಸಿದೆ.

ಒಟ್ಟಿನಲ್ಲಿ ಧರ್ಮ ಸಂಸತ್ತು ಎತ್ತಿರುವ ಹಲವು ಪ್ರಶ್ನೆಗಳು ಜನ ಬೆಂಬಲ ಗಳಿಸಿದರೆ ಭಾರತದ ಈವರೆಗಿನ ರಾಜಕೀಯ ಭೂಮಿಕೆಯನ್ನೇ ಬುಡಮೇಲುಗೊಳಿಸುವಷ್ಟು ನಿರ್ಣಾಯಕ ಸ್ವರೂಪದ್ದವಾದರೂ, ಅವನ್ನು ನಮ್ಮ ಪ್ರಗತಿಪರರು ಮತ್ತು ಎಡಪಂಥೀಯರು ತಮ್ಮ ಅಧಿಕಾರ ರಾಜಕಾರಣದ ಆಟ–ಪಾಠಗಳನ್ನು ಬುಡಮೇಲುಗೊಳಿಸುವಂತಹವು ಎಂದಷ್ಟೇ ಭಾವಿಸಿ ಹಾಹಾಕಾರ ಎಬ್ಬಿಸುತ್ತಿರುವುದೇ ನಿಜವಾದ ಸಮಸ್ಯೆಯಾಗಿದೆ. ನನ್ನ ಪ್ರಕಾರ ಧರ್ಮ ಸಂಸತ್ತಿನ ರಾಜಕಾರಣ ನಮ್ಮ ಎಡಪಂಥೀಯ ರಾಜಕಾರಣದ ಜಡತೆಯನ್ನು ನೀಗಿಸುವುದಾದದರೆ, ಅದರ ಕೆಲ

ಮೂಲ ಮತ್ತು ಮೂಢ ನಂಬಿಕೆಗಳನ್ನು ಬದಲಿಸುವುದಾದರೆ, ಅದು ಒಳ್ಳೆಯದಕ್ಕೇ ಎಂದು ನಾನು ಭಾವಿಸುವೆ. ಏಕೆಂದರೆ ಧರ್ಮ ಸಂಸತ್ತಿನ ರಾಜಕಾರಣ ಜನರ ಮಧ್ಯೆ ಬಹುಕಾಲ ಬಾಳಲಾಗದಷ್ಟು ತಾತ್ವಿಕವಾಗಿ ತೆಳುವಾದದ್ದು. ಆದರೆ ಅಷ್ಟರಲ್ಲಿ ಒಂದಷ್ಟು ಅನಾಹುತಗಳು ಸಂಭವಿಸುವುದು ಖಚಿತ. ಇದನ್ನು ಜನ ನಂಬುವ ಭಾಷೆಯಲ್ಲಿ ಹೇಳಲಾಗುವಷ್ಟು ಮಟ್ಟಿಗಾದರೂ ಈ ಪ್ರಗತಿಪರರು ಮತ್ತು ಎಡಪಂಥೀಯರು ಒಳಗಿನಿಂದ ಬದಲಾಗಬೇಕಲ್ಲವೆ? ಮುಖ್ಯವಾಗಿ ಧರ್ಮ ಕಲ್ಪನೆ ಕುರಿತ, ನಿರ್ದಿಷ್ಟವಾಗಿ ಹಿಂದೂ ಧರ್ಮ ಕುರಿತ ಇವರ ತಿಳುವಳಿಕೆ ಮತ್ತು ನಿಲುವುಗಳು ಸರಳೀಕೃತವಾಗಿದ್ದು, ಅನಾಹುತಕಾರಿಯೂ ಆಗಿವೆ. ಇವು ಧರ್ಮ ಸಂಸತ್‌ವಾದಿಗಳು ಮಾಡಲೆಳಸುವ ಅನಾಹುತಗಳಿಗೆ ಇಂಬು ಕೊಡುವಂತಹವಾಗಿವೆ. ಹಾಗಾಗಿ ಸೆಕ್ಯುಲರ್ ಹಣೆ ಗುರುತುಳ್ಳ ಎಡಪಂಥೀಯರು ಧರ್ಮ ಸಂಸತ್ತಿನ ಬಗ್ಗೆ ಸಾರ್ವಜನಿಕವಾಗಿ ಎದೆ ಬಡಿದುಕೊಳ್ಳುವ ಜಿಗುಪ್ಸೆಕರ ಪ್ರದರ್ಶನಗಳನ್ನು ಬಿಟ್ಟು ಸ್ವಲ್ಪ ಸಂಯಮದಿಂದ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ.

ಕೊನೆಯದಾಗಿ, ಧರ್ಮ ಸಂಸತ್ತಿನ ನಿರ್ಣಯಗಳು ಸಂವಿಧಾನವನ್ನು ಬದಲಾಯಿಸುವ ಮಾತಾಡುತ್ತಿವೆ, ಹಾಗಾಗಿ ಅದು ದೇಶದ್ರೋಹವೆಂದು ಕೆಲವರು ಕೂಗಾಡುತ್ತಿದ್ದಾರೆ. ಇದು ಎದುರಾಳಿ ಹಿಂದುತ್ವವಾದಿಗಳು ಇತ್ತೀಚೆಗೆ ನೆಪ ಸಿಕ್ಕರೆ ಸಾಕೆಂಬಂತೆ ಆಡುತ್ತಿರುವ ದೇಶದ್ರೋಹದ ಮಾತಿನಷ್ಟೇ ಟೊಳ್ಳಾದದ್ದು. ಏಕೆಂದರೆ, ಸಂವಿಧಾನವೇನೂ ಪವಿತ್ರ ಗೋವಲ್ಲ. ಅದನ್ನು ನಾವು ನಮಗಾಗಿ ರೂಪಿಸಿಕೊಂಡಿರುವುದು. ಜೊತೆಗೆ ಅದನ್ನು ನಾವು ನೂರಕ್ಕೂ ಹೆಚ್ಚು ಬಾರಿ ತಿದ್ದುಪಡಿಗೆ ಒಳಪಡಿಸಿದ್ದೇವೆ. ಎದುರಾಗುತ್ತಿರುವ ಹೊಸ ಸವಾಲುಗಳ ಕಾರಣದಿಂದಾಗಿ (ಉದಾ: ಮಾತೃಭಾಷಾ ಶಿಕ್ಷಣ, ಒಕ್ಕೂಟ ತತ್ವದ ಸಬಲೀಕರಣ) ಮತ್ತಷ್ಟು ತಿದ್ದುಪಡಿಗಳು ಆಗಬೇಕಿವೆ. ಹಾಗಾಗಿ ಅದರಲ್ಲಿನ ಬದಲಾವಣೆಗಳಿಗಾಗಿ ಯಾರಾದರೂ ಆಗ್ರಹಿಸಿದರೆ ಅದರಲ್ಲಿ ತಪ್ಪೇನು? ಇಂತಹ ತಾವು ಮಾಡಿದ್ದೆಲ್ಲ ರಸಿಕತೆ, ಇತರರು ಮಾಡಿದ್ದೆಲ್ಲ ಅತ್ಯಾಚಾರವೆಂದು ಹೇಳುವ ಪ್ರಗತಿಪರರ ಆತ್ಮದ್ರೋಹದ ಮಾತುಗಳನ್ನು ಯಾರೂ ಗಂಭೀರವಾಗಿ ಪರಿಗಣಿಸಲಾರರು. ಸ್ವತಃ ಅಂಬೇಡ್ಕರ್ ಅವರೇ ಒಮ್ಮೆ ತಾವು ಈ ಸಂವಿಧಾನವನ್ನು ಸುಡಲು ಸಿದ್ಧವೆಂದು ಹೇಳಿರಲಿಲ್ಲವೆ? ಹಾಗಾಗಿ ಧರ್ಮ ಸಂಸತ್‌ವಾದಿಗಳೂ ಯಾಕಾಗಿ ಸಂವಿಧಾನದಲ್ಲಿ ಬದಲಾವಣೆಗಳನ್ನು ಅಪೇಕ್ಷಿಸುತ್ತಿದ್ದಾರೆ ಎಂಬುದನ್ನು ನಿರ್ದಿಷ್ಟವಾಗಿ ತಿಳಿದುಕೊಳ್ಳುವ ಮೊದಲೇ ತಮ್ಮದೇ ಊಹೆಗಳನ್ನು ಹರಿಬಿಟ್ಟು ಹಾಹಾಕಾರ ಮಾಡುವುದನ್ನು ಜನ ರಾಜಕೀಯ ಪ್ರದರ್ಶನಗಳಂತೆ ಮಾತ್ರ ನೋಡಿಯಾರು ಎಂಬ ಎಚ್ಚರಿಕೆ ಇದ್ದರೆ ಒಳ್ಳೆಯದು. ನಾವಿಂದು ನಿಜವಾಗಿ ಮಾತಾಡಬೇಕಾಗಿರುವುದು ಸಹಮನಸ್ಕರ ಗುಂಪಿನ ಹೊರಗಿರುವವರನ್ನು ಉದ್ದೇಶಿಸಿ; ಹಾಗಾಗಿ ಬಹು ಎಚ್ಚರಿಕೆಯಿಂದ ಮಾತಾಡುವ ನೆದರು ನಮಗಿರಬೇಕು.

('ಸಂವಾದ' : ಜನವರಿ, ೨೦೧೮)

'ಸಹನಾ ಧರ್ಮ' ಕುರಿತಂತೆ...

'ಸಹನಾ ಧರ್ಮ-ಸೆಕ್ಯುಲರ್‌ವಾದ' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿರುವ ರಾಜಾರಾಂ ತೋಳ್ಪಾಡಿ-ನಿತ್ಯಾನಂದ ಬಿ.ಶೆಟ್ಟಿ ಅವರ ಬರಹಕ್ಕೆ 'ಸಂಗತ', ಪ್ರವಾ : ಜ. ೩) ಇದು ಪ್ರತಿಕ್ರಿಯೆ.

ತಮ್ಮ ಬರಹದ ಬಹುಭಾಗವನ್ನು ಲೇಖಕರು 'ಸೆಕ್ಯುಲರಿಸಂ' ಅನ್ನು ಅನ್ಯ ರಾಜಕೀಯ ಸಂಸ್ಕೃತಿಯ ಕೊಡುಗೆ ಎಂದು ನಿರಾಕರಿಸಲಾಗುತ್ತಿದೆ ಎಂಬ ಅಂಶವನ್ನಿಟ್ಟುಕೊಂಡೇ ಚರ್ಚಿಸಲು ಬಳಸಿಕೊಂಡಿದ್ದಾರೆ. ಆದರೆ, ಸೆಕ್ಯುಲರಿಸಂ ಕುರಿತ ಪ್ರಚಲಿತ ಚರ್ಚೆ ನಡೆದಿರುವುದು ಅದು ಎಲ್ಲಿಂದ ಬಂತು ಎಂಬ ಪ್ರಶ್ನೆಯ ಮೇಲಲ್ಲ; ಹಾಗೇ ಈ ಎಲ್ಲಿಂದ ಬಂತು ಎಂಬ ಪ್ರಶ್ನೆಯನ್ನು ಎತ್ತುವವರೂ ಕೂಡ ಆ ಪ್ರಶ್ನೆಗೇ ಸೀಮಿತರಾಗದೆ, ಇದು ಹೊರಗಿನಿಂದ ಬಂದ ಕಾರಣದಿಂದಲೇ ನಮ್ಮ ರಾಜಕೀಯ ಚರ್ಚೆಗಳನ್ನು ಹೇಗೆ ದಿಕ್ಕು ತಪ್ಪಿಸುತ್ತಿದೆ ಎಂಬ ವಿಚಾರ ಕುರಿತ ಚರ್ಚೆಗಳನ್ನು ಹುಟ್ಟು ಹಾಕುತ್ತಿದ್ದಾರೆ ಎಂಬುದೂ ಸದರಿ ಲೇಖಕರಿಗೆ ಗೊತ್ತಿರಬಹುದು. ಏಕೆಂದರೆ, ಇಂತಹ ಚರ್ಚೆಗಳ ಫಲವಾಗಿಯೇ ಈ ಲೇಖಕರು ತಮ್ಮ ಬರಹದ ಕೊನೆಯಲ್ಲಿ ಸೆಕ್ಯುಲರಿಸಂ ಎಂಬುದಕ್ಕೆ ನಮ್ಮ ರಾಜಕೀಯ ಸಂಸ್ಕೃತಿಯ ಸಂದರ್ಭದಲ್ಲಿ ದೇವನೂರ ಮಹಾದೇವ ಅವರು ಚಾಲ್ತಿಗೆ ತರಬಯಸಿದ್ದಾರೆಂದು ಹೇಳಲಾಗುವ 'ಸಹನಾ ಧರ್ಮ' ಎಂಬುದು ಸಮಾನಾರ್ಥಕ ಪದವಾಗಬಹುದು ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ. ಆದುದರಿಂದ ಯಾವುದೇ ಚರ್ಚೆಯನ್ನು ಈಗ-ವಸಾಹತುಶಾಹಿ ಮತ್ತು ಸ್ವಾತಂತ್ರ್ಯೋತ್ತರ ಆಧುನಿಕತೆಗಳ ದೀರ್ಘಕಾಲೀನತೆಗಳ ನಂತರವೂ- ಅನ್ಯವೆಂಬುದೇ ಇಲ್ಲ ಎಂಬ ನೆಲೆಯಲ್ಲಿ ವಾದಿಸುವುದು ಅಷ್ಟೇನೂ ಸಾಧುವಲ್ಲದ ನಿಲುವು ಎಂದು ನನಗನ್ನಿಸುತ್ತದೆ.

ಅನ್ಯವೆಂಬುದು ಇಲ್ಲ ಎಂಬುದು ಪಾರಮಾರ್ಥಿಕ ನೆಲೆಯಲ್ಲಿ ಮಾತ್ರ ಸಿದ್ಧವಾದ ಮಾತು. ಆದರೆ ಲೌಕಿಕ ವ್ಯವಹಾರಗಳಲ್ಲಿ ಅದು ವ್ಯಕ್ತಿನಿಷ್ಠ ಅನುಭವಗಳ ಮೂಲಕ ಸಾಧ್ಯವಾಗಬೇಕಾದದ್ದು. ಹಾಗಾಗಿ ಈಗ -ವಸಾಹತುಶಾಹಿ ಮತ್ತು ಸ್ವಾತಂತ್ರ್ಯೋತ್ತರ ಆಧುನಿಕತೆಗಳ ನಂತರವೂ-ಅನ್ಯವು ಇರಲಾರದೆಂಬ ಊಹೆ ವ್ಯಕ್ತಿನಿಷ್ಠವಾದ ಊಹೆ ಮಾತ್ರ ಆಗಿ, ಅದರ ಮೇಲೆ ಸಾರ್ವಜನಿಕ ಮಾನ್ಯತೆಗಾಗಿ ಚರ್ಚೆಗಳನ್ನು ಕಟ್ಟುವುದು ವೈಚಾರಿಕತೆ ಅನ್ನಿಸುವುದಿಲ್ಲ. ಇಂತಹ ಚರ್ಚೆಯ ಭಾಗವಾಗಿ ಈ ಲೇಖಕರು ತಮ್ಮ ವಾದದ ಸಮರ್ಥನೆಯಾಗಿ ನಮ್ಮ ಹೊರಗಿನಿಂದ ಬಂದ ಸಂಸತ್ತೂ, ವಿಶ್ವವಿದ್ಯಾನಿಲಯಗಳೂ ಏಕೆ ಬೇಕು ಎಂದು ಕೇಳಬೇಕಾಗುತ್ತದೆ ಎಂದಿದ್ದಾರೆ. ಈ ಲೇಖಕರು ತಮ್ಮ ಬರಹದಲ್ಲಿ ತಮ್ಮ ವಾದಕ್ಕೊಂದು ಆವರಣ ಸೃಷ್ಟಿಸಿಕೊಳ್ಳಲು ಮತ್ತೆ ಮತ್ತೆ ಬಳಸಿರುವ ದೇಶದ ಇಂದಿನ 'ಪ್ರಕ್ಷುಬ್ಧ' ಪರಿಸ್ಥಿತಿಯು ಇವರ ಇಂತಹ ವಾದಗಳ ಮೂಲಕ ಹೀಗೆ ಮುಂದುವರೆದರೆ, ನಮ್ಮ ಸಂಸತ್ತು ಮತ್ತು ವಿಶ್ವವಿದ್ಯಾಲಯಗಳ ಕಲ್ಪನೆಗಳನ್ನೂ

ಜನ ಪ್ರಶ್ನಿಸುವ ಕಾಲ ಬರಲಿದೆ. ಇಂದು ನಮ್ಮ ಸಂಸದೀಯ ರಾಜಕಾರಣ ಮತ್ತು ವಿಶ್ವವಿದ್ಯಾಲಯಗಳು ತಲುಪಿರುವ ಅಧೋಗತಿಗಳನ್ನು ನೋಡಿದರೆ ಯಾರಿಗಾದರೂ ಆ ಕಾಲವೇನೂ ದೂರವಿಲ್ಲ ಅನ್ನಿಸುವುದಿಲ್ಲವೆ?

ಹಾಗಾಗಿ ಇಂದು ಚರ್ಚೆಯಾಗಬೇಕಾಗಿರುವುದು, ಒಂದು ಚಾರಿತ್ರಿಕ ಸಂದರ್ಭದಲ್ಲಿ ನಾವು ನಮ್ಮ ಒಳತಿಗೆಂದು ಪರಿಭಾವಿಸಿ ಬರಮಾಡಿಕೊಂಡ ಪರಿಕಲ್ಪನೆಗಳನ್ನು ನಾವು ನಮ್ಮದನ್ನಾಗಿ ಮಾಡಿಕೊಳ್ಳುವ ಮೂಲಕ ನಮ್ಮ ಒಳಿತನ್ನು ಸಾಧಿಸಿಕೊಳ್ಳಲು ಸಾಧ್ಯವಾಗಿದೆಯೇ ಎಂಬುದರ ಬಗ್ಗೆ. ಅಂತಹ ಚರ್ಚೆಗಳನ್ನು ಯಾವುದೂ ಅನ್ಯವಲ್ಲ ಎಂಬ ಪಾರಮಾರ್ಥಿಕ ಸತ್ಯವನ್ನು ಮುಂದೊಡ್ಡಿ ತಡೆಯುವುದು ಖಂಡಿತ ನಮ್ಮ ಒಳಿತಿಗಲ್ಲ. ಸೆಕ್ಯುಲರಿಸಮ್ಮನ್ನು ಪ್ರಶ್ನಿಸುವ ಮೂಲಕ ಚರ್ಚೆಯನ್ನು ಹುಟ್ಟು ಹಾಕಿ ಅದಕ್ಕೆ 'ಸಹನಾ ಧರ್ಮ' ಎಂಬ (ಈ ಲೇಖಕರ ಪ್ರಕಾರ) ನಮ್ಮದೇ ಅರ್ಥ ಪಡೆಯಲು ಸಾಧ್ಯವಾದಂತೆ ನಮ್ಮ ಸಮಕಾಲೀನ ಸಾಮಾಜಿಕ-ರಾಜಕೀಯ ಚರ್ಚೆಗಳಲ್ಲಿ ತೊಡಕುಗಳನ್ನು ಸೃಷ್ಟಿಸುತ್ತಿರುವ ಅನೇಕ ಪರಿಕಲ್ಪನೆಗಳ ಬಗ್ಗೆ ಚರ್ಚೆಗಳು ನಡೆಯಬೇಕು. ಅವನ್ನು ಅರಿವಿನ ಎತ್ತರಗಳಲ್ಲಿ ನಿಂತ ಭಾವ-ಭಂಗಿಗಳ ಮೂಲಕ ಕೀಳುಗರೆವ, ತಡೆಯುವ, ದಾರಿ ತಪಿಸುವ ಪ್ರಯತ್ನಗಳು ಚರ್ಚೆಗಳು ಬೀದಿ ಜಗಳಾಗಿ ಮಾರ್ಪಟ್ಟು ಸಲ್ಲದ ಹಗೆತನ ಮತ್ತು ಹಿಂಸೆಗಳಿಗೆ ದಾರಿ ಮಾಡಿಕೊಡುತ್ತವಷ್ಟೆ. ಇಂದು ನಾವು ನೋಡುತ್ತಿರುವುದೂ ಇಂತಹ ಬೆಳವಣಿಗೆಗಳನ್ನೇ.

ಇನ್ನು ಈ ಲೇಖಕರು ಹೇಳುವಂತೆ ಸೆಕ್ಯುಲರಿಸಂ ಎಂಬುದರ ಅರ್ಥ 'ಸಹನಾ ಧರ್ಮ' ಎಂಬುದೇ ಆಗಿದ್ದರೆ, ಸೆಕ್ಯಲರಿಸಂ (ಎಂಬ ಅಪರಿಚಿತ ಶಬ್ದ ಮುಖೇನ) ಪರಿಕಲ್ಪನೆಯ ಪ್ರಸ್ತಾಪವಾದರೂ ನಮ್ಮ ಸಂವಿಧಾನದಲ್ಲಿ ಏಕೆ ಬೇಕಿತ್ತು? ಈ ಸೆಕ್ಯುಲರಿಸಂಗೆ ಸಹನಾ ಧರ್ಮ ಎಂಬುದರಾಚೆಗಿನ ಕೆಲವು-ನಮ್ಮ ಸಾರ್ವಜನಿಕ ಜೀವನ ಪರಂಪರೆಗೆ ಅನ್ಯವೆನಿಸುವ; ಹಾಗಾಗಿ ಅಸಂಬದ್ಧವೆನಿಸುವ-ಅರ್ಥದ ಆಯಾಮಗಳಿರುವುದೇ ಅದರ ಬಗ್ಗೆ ಚರ್ಚೆಗಳು ಶುರುವಾಗಲು ಕಾರಣವಾಗಿತ್ತಲ್ಲವೆ? ಹಾಗೆ ನೋಡಿದರೆ ಸಹನಾ ಧರ್ಮವೆಂಬುದು ಸೆಕ್ಯುಲರಿಸಂನ ಒಂದು ಉದ್ದೇಶ ಅಥವಾ ಲಕ್ಷಣವೇ ಹೊರತು ಅದೇ ಸೆಕ್ಯುಲರಿಸಂ ಅಲ್ಲ ಅಲ್ಲವೆ? ಅದಕ್ಕೆ ಸಹಬಾಳ್ವೆ, ಆಡಳಿತದಿಂದ ಮತ ಸಂಬಂಧವಾದ ನಿಲುವು, ಆಚರಣೆಗಳನ್ನು ದೂರವಿಡುವುದು ಇತ್ಯಾದಿ ಅರ್ಥಗಳೂ ಇವೆ ಅಲ್ಲವೆ? ಇವನ್ನೆಲ್ಲ ಈ ಲೇಖಕರು ಈಗ ನಿರಾಕರಿಸುತ್ತಾರೆಯೇ? ಜೊತೆಗೆ 'ಸೆಕ್ಯುಲರಿಸಂ' ಅನ್ನು 'ಸಹನಾ ಧರ್ಮ'ವೆಂದು ಅನುವಾದಿಸಿಕೊಂಡಾಕ್ಷಣ ಅದನ್ನು ಕುರಿತ ಚರ್ಚೆಗಳಲ್ಲಿನ ತೊಡಕುಗಳು ನಿವಾರಣೆಯಾದಂತೆ ಅಲ್ಲ ಅಲ್ಲವೆ?

ಹೀಗೇ ಇಂದು ನಾವು ಪರಮ ಮೌಲ್ಯಗಳೆಂದು ನಂಬಿರುವ ಸಂಸದೀಯ ಪ್ರಜಾಪ್ರಭುತ್ತ ಮತ್ತು ಅದರ ಆಚರಣೆಯ ಅಂಗವಾಗಿ ಕಟ್ಟಿಕೊಂಡಿರುವ ಅನೇಕಾನೇಕ ಪರಿಕಲ್ಪನೆಗಳು ಮತ್ತು ಸಂಸ್ಥೆಗಳ ಬಗ್ಗೆ ಅವುಗಳೊಡನೆಯ ನಮ್ಮ ದೀರ್ಘಕಾಲೀನ ಅನುಭವಗಳ ಆಧಾರದ ಮೇಲೆ ಚರ್ಚೆಗಳು ಹುಟ್ಟುವುದು ಸಹಜ. ಆ ತರಹದ

ಚರ್ಚೆಗಳು ಈಗ ಆರಂಭವಾಗಿವೆ ಕೂಡ. ಇದರ ಬಗ್ಗೆ ಆತಂಕ ವ್ಯಕ್ತಪಡಿಸುವುದು ಅಥವಾ ಹುಯ್ಲೆಬ್ಬಿಸುವುದು ಪಟ್ಟಭದ್ರ ಹಿತಾಸಕ್ತಗಳ ರಕ್ಷಣೆ ಮಾತ್ರ ಎನಿಸಿಕೊಳ್ಳುತ್ತದೆ. ಅದೀಗ 'ಪ್ರಗತಿಪರತೆ'ಯ ಹೆಸರಿನಲ್ಲಿ ನಡೆಯುತ್ತಿರುವುದಂತೂ ವಿಪರ್ಯಾಸಕರ. ಉದಾಹರಣೆಗೆ, ಇದೇ ಲೇಖಕರು ಪ್ರಸ್ತಾಪಿಸಿರುವ 'ಹೊರಗಿನಿಂದ ವಿದ್ಯೆ ಕಲಿತು ಬಂದಿದ್ದ ಕೆಲವರು ಸೇರಿ ರೂಪಿಸಿದ' ನಮ್ಮ ಸಂವಿಧಾನದ ಸ್ವರೂಪ ಕುರಿತ ಚರ್ಚೆಯಾಗಿರಬಹುದು. ಹಾಗೇ, ಈ ಚರ್ಚೆಗೆ ಇವರು ಭಾವಿಸಿರುವ ಚಿಂತನಾ ಲಹರಿಯೇ ಕಾರಣವಾಗದಿರಬಹುದು. ನಮ್ಮ ಅನುಭವ ಕಾರಣವಾಗಿರಬಹುದು. ಉದಾಹರಣೆಗೆ, ನಮ್ಮ ಮಕ್ಕಳಿಗೆ ಮಾತೃಭಾಷೆಯಲ್ಲಿ ಶಿಕ್ಷಣ ಒದಗಿಸುವುದು ಒಂದು ರಾಷ್ಟ್ರೀಯ ಕರ್ತವ್ಯ ಎಂದು ಜನರಿಂದಲೇ ಆರಿಸಲ್ಪಟ್ಟ ಸರ್ಕಾರವೊಂದು ಭಾವಿಸುವುದು ಸಂವಿಧಾನ ವಿರೋಧಿಯಾಗುವ ವಿಪರ್ಯಾಸ ಏಕೆ ಮತ್ತು ಹೇಗೆ ಸೃಷ್ಟಿಯಾಗುತ್ತದೆ? ಅದನ್ನು ಸರಿಪಡಿಸುವ ಕೆಲಸ ಅಸಾಧ್ಯ ಎನ್ನುವ ಪರಿಸ್ಥಿತಿ ಏಕೆ ನಿರ್ಮಾಣವಾಗುತ್ತದೆ? ಇಂತಹ ಹಲವು ಪ್ರಶ್ನೆಗಳು ಇಂದು ಹುಟ್ಟಿವೆ. ಅವು ಚರ್ಚೆಯಾಗಬೇಡವೆ? ನಮ್ಮ ಪ್ರಜಾಪ್ರಭುತ್ವಕ್ಕೆ ನಿಜವಾದ ಬಲ ನೀಡಿದ ಪಂಚಾಯ್ತ್ ರಾಜ್ ವ್ಯವಸ್ಥೆ ಕುರಿತ ವಿಧಿ ನಮ್ಮ ಸಂವಿಧಾನದಲ್ಲಿ ಬಿಟ್ಟುಹೋಗಿರಲು ಕಾರಣವಾದರೂ ಏನಾಗಿತ್ತು ಎಂದು ನಾವು ಯೋಚಿಸಬೇಕಲ್ಲವೆ? ಹಾಗೇ, ಯಾವ ಪರಿಕಲ್ಪನೆಯ ಆಧಾರದ ಮೇಲೆ ಮಹಾತ್ಮ ಗಾಂಧಿಯವರು ರಾಷ್ಟ್ರೀಯ ಹೋರಾಟವನ್ನು ರೂಪಿಸಿದರೋ ಆ 'ಗ್ರಾಮ ಸ್ವರಾಜ್ಯ'ದ ಕಲ್ಪನೆ ಯಾವ ಮಾಯಕದಲ್ಲಿ ನಮ್ಮ ಸಂವಿಧಾನದ ಕಣ್ಣಳತೆಯ ಆಚೆ ಜಾರಿಹೋಯಿತು? ಅದೇ ಇಂದಿನ ನಮ್ಮ 'ಪ್ರಕ್ಷುಬ್ಧತೆ'ಗೆ ಕಾರಣವಾಗಿರುವ ನಮ್ಮ ಸಂಸದೀಯ ಪ್ರಜಾಪ್ರಭುತ್ವವು ಸರ್ವಾಧಿಕಾರದತದ್ತಲೋ, ಅರಾಜಕತೆಯತ್ತಲೋ ತಿರುಗಿ ಅವನತಿಗೊಳ್ಳುವ (ಕೊಳೆಯುವ) ಪರಿಸ್ಥಿತಿಗೆ ಸಿಲುಕಿ ನಾವು ಪ್ರಜಾಪ್ರಭುತ್ವ ಪದ್ಧತಿಯಲ್ಲಿ ನಂಬಿಕೆ ಕಳೆದುಕೊಳ್ಳಲು ಕಾರಣವಾಗಿದೆಯಲ್ಲವೆ?

ಹಾಗಾಗಿ ಎಲ್ಲ ಸಾರ್ವಜನಿಕ ಚರ್ಚೆಗಳನ್ನೂ ನಮ್ಮ (ರಾಜಕೀಯ ಹಿತಾಸಕ್ತಿಯ) ಮೂಗಿನ ನೇರಕ್ಕೇ ನೋಡಿ ಅರ್ಥ ಮಾಡಿಕೊಳ್ಳುವುದನ್ನು ಮತ್ತು ಯಾವುದೋ ರಾಜಕೀಯ ಪಿತೂರಿಯ ಭಾಗವಾಗಿ ಮಾತ್ರ ನೋಡುವುದನ್ನು ಬಿಟ್ಟು ಮುಕ್ತ ಮನಸ್ಸಿನಿಂದ, ನಾವೇ ಕಟ್ಟಿಕೊಂಡ ಯಾವುದನ್ನೂ ಪವಿತ್ರ ಗೋವು ಎಂದು ಪರಿಗಣಿಸದೆ ಅರಿಯಬೇಕಿದೆ; ಬೆಳೆಸಬೇಕಿದೆ. ಒಟ್ಟಿನಲ್ಲಿ ಇಂತಹ ಚರ್ಚೆಗಳು ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಕೈಗೆ ಸಿಗುವಂತಾಗುವ ಅಸ್ತ್ರಗಳಾಗದೆ, ಮಾನವತೆಯ ಅರ್ಥದ ಅನ್ವೇಷಣೆಯ ಭಾಗವಾಗಿ ಬೆಳೆಯುವಂತಹ ವಾತಾವರಣವನ್ನು ನಿರ್ಮಿಸಬೇಕಿದೆ. ಇದಕ್ಕೆ ಮುಖ್ಯವಾಗಿ ಬೇಕಿರುವುದು ನಾವೆಲ್ಲರೂ ಕಿಟ್ಟ ಕಟ್ಟಿದ ನಮ್ಮ ರಾಜಕೀಯ ಗೂಡುಗಳನ್ನು ಬಿಟ್ಟು ಹೊರಬಂದು ಭಯ-ಅನುಮಾನ-ಆತಂಕಗಳಿಲ್ಲದೆ ಹೊಸ ಗಾಳಿ ಬೆಳಕುಗಳಲ್ಲಿ ನಿಂತು 'ಸಹನಾ ಧರ್ಮ'ದ ಅನುಸರಣೆಯ ಮೂಲಕ ವಾಸ್ತವವನ್ನು ಅರಿತು ಧೈರ್ಯವಾಗಿ ಎದುರಿಸುವ ನಡೆಯೇ ಆಗಿದೆ.

('ಪ್ರಜಾವಾಣಿ' ಪ್ರಕಟಿಸದ ಪತ್ರ: ಜನವರಿ, ೨೦೧೮)

ಅಂತಾರಾಷ್ಟ್ರೀಯ ಅಂಬೇಡ್ಕರ್ ಮೇಳ

ಮೊದಲೇ ಹೇಳಿಬಿಡುತ್ತೇನೆ, ಎಲ್ಲ ಬಗೆಯ ರಾಜಕೀಯ ವ್ಯಾಪಾರಕ್ಕೆ ಸರಕಾಗಿ ಮಾರ್ಪಾಡಾಗಿಬಿಟ್ಟಿರುವ ಬಾಬಾಸಾಹೇಬ್ ಅಂಬೇಡ್ಕರ್ ಬಗ್ಗೆ ಈಗ ಎಷ್ಟು ಚರ್ಚೆ ನಡೆದರೂ ಕಡಿಮೆಯೇ. ಆದರೆ ಚರ್ಚೆ ಯಾರು ಮಾಡುವರು ಮತ್ತು ಏಕೆ ಮಾಡುವರು ಎಂಬುದರ ಚರ್ಚೆಯೂ ಅಷ್ಟೇ ಮುಖ್ಯ. ಈ ಹಿನ್ನೆಲೆಯಲ್ಲಿ ಈ ಬರಹ.

ಅಂಬೇಡ್ಕರ್‌ರನ್ನು ಕುರಿತ ಪುನರಾವಲೋಕನದ ಮೂರು ದಿನಗಳ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ವಿಜೃಂಭಣೆಯಿಂದ ಜರುಗಿ ಈಗ ಮುಕ್ತಾಯ ಕಂಡಿದೆ. ಇದರ ಬಗೆಗಿನ ವರದಿಗಳನ್ನು ಓದಿದಾಗ ಇದು ಕೆಲವರಿಂದ ಕೆಲವರಿಗಾಗಿ ನಿಯೋಜಿಸಲಾಗಿದ್ದ ಕೆಲವರ ಕಾರ್ಯಕ್ರಮವೆಂದು ಯಾರಿಗಾದರೂ ಅನ್ನಿಸಿದ್ದರೆ ಆಶ್ಚರ್ಯವಿಲ್ಲ. ಇದಕ್ಕೆ ಹೋಗಿ ಬಂದ ಕೆಲ ಗೆಳೆಯರ ಪ್ರಕಾರ, ಇದರ ಆಯೋಜನೆಯಲ್ಲಿ ಶ್ರೇಣೀಕರಣ ಮತ್ತು ಅಸ್ಪೃಶ್ಯತೆಯೂ ಸೇರಿದಂತೆ ಜಾತಿಪದ್ಧತಿಯ ಎಲ್ಲ ಲಕ್ಷಣಗಳೂ ಅಂತರ್ಗತವಾಗಿದ್ದವು.

ಏಕೆಂದರೆ ಇದಕ್ಕೆ ಪ್ರವೇಶವನ್ನು ನಿರ್ಬಂಧಿಸಲಾಗಿತ್ತಲ್ಲದೆ ಪ್ರವೇಶ ಪಡೆದವರಲ್ಲೂ ತರತಮಗಳನ್ನು ನಿಗದಿಪಡಿಸಲಾಗಿತ್ತು. ಇನ್ನು, ಈ ಕ್ಷೇತ್ರದಲ್ಲಿ ವಿಶೇಷವಾಗಿ ಕೆಲಸ ಮಾಡಿದವರಾಗಿದ್ದರೂ, ಸದ್ಯದ ವ್ಯವಸ್ಥೆಯ ಟೀಕಾಕಾರರೆಂಬ ಕಾರಣಕ್ಕೆ ಹಲವರನ್ನು ಕಾರ್ಯಕ್ರಮದಿಂದ ಹೊರಗಿಡಲಾಗಿತ್ತು. ಇದೆಲ್ಲವೂ ಈ ಕಾರ್ಯಕ್ರಮದ ಹಿಂದೆ ಕೆಲಸ ಮಾಡಿದವರು ಅಂಬೇಡ್ಕರ್ ಅವರನ್ನು ಅರಿತಿದ್ದ ಬಗೆಯ ಬಗ್ಗೆ ಎಲ್ಲವನ್ನೂ ಹೇಳುತ್ತದೆ. ಮುಖ್ಯವಾಗಿ, ಅಂಬೇಡ್ಕರ್ ಅವರ ಇಡೀ ಸಾಮಾಜಿಕ–ರಾಜಕೀಯ ದರ್ಶನದ ನಿರ್ಣಯಕ ಅಂಶವಾಗಿದ್ದ ಜಾತಿವಿನಾಶ ಆಶಯ ಈ ಕಾರ್ಯಕ್ರಮದಲ್ಲಿ ಎಲ್ಲೂ ಚರ್ಚೆಗೆ ಬರಲಿಲ್ಲ ಮತ್ತು ಈ ಕಾರ್ಯಕ್ರಮದ ಕೊನೆಯಲ್ಲಿ ಪ್ರಕಟಿಸಲಾಗಿರುವ 'ಬೆಂಗಳೂರು ಘೋಷಣೆ' ಎಂಬ ದಾಖಲೆಯಲ್ಲಿಯೂ ನೆಪಮಾತ್ರಕ್ಕೂ ಇದರ ಪ್ರಸ್ತಾಪವಿಲ್ಲ. ಇದಕ್ಕೆ ಈ ಇಡೀ ಕಾರ್ಯಕ್ರಮವನ್ನು ಸದ್ಯದ ರಾಜಕೀಯ ಅಗತ್ಯವೊಂದನ್ನು ಪೂರೈಸಲೆಂದೇ ರೂಪಿಸಿದ್ದುದು ಕಾರಣವೆಂದು ತೋರುತ್ತದೆ.

ಕೊನೆಯ ದಿನದ ಪ್ರಶ್ನೋತ್ತರದ ಸಂದರ್ಭದಲ್ಲಿ ಕೇಳುಗರೊಬ್ಬರ 'ಜಾತಿವಿನಾಶ'ಕ್ಕಾಗಿ ನಿಮ್ಮ ಕಾರ್ಯಕ್ರಮಗಳೇನು ಎಂಬ ಪ್ರಶ್ನೆಗೆ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಾ, ಜಾತಿವ್ಯವಸ್ಥೆ ನಾಶ ಮಾಡಲು ಕೆಳವರ್ಗದ ಜನರಿಗೆ ಆರ್ಥಿಕ ಮತ್ತು ಸಾಮಾಜಿಕ ಶಕ್ತಿ ತುಂಬಬೇಕು. ಜಾತಿವ್ಯವಸ್ಥೆ ಸಡಿಲಗೊಂಡಾಗ ಸಮಾಜ ಚಲನಶೀಲಗೊಳ್ಳುತ್ತದೆ ಎಂದಿದ್ದಾರೆ. ಇದು ಸಾಮಾಜಿಕ ನ್ಯಾಯ ಪರಿಕಲ್ಪನೆ ಕುರಿತಂತೆ ದಶಕಗಳಿಂದ ಹೇಳುತ್ತಾ ಬರಲಾಗುತ್ತಿರುವ ಕಲಿತ ಗಿಳಿಪಾಠವಾಗಿದ್ದು, ಇದಕ್ಕೂ ವಾಸ್ತವದಲ್ಲಿ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ನಡೆಯುತ್ತಿರುವ ಚಟುವಟಿಕೆಗಳಿಗೂ ಮತ್ತು ಅವು ಮಾಡುತ್ತಿರುವ ಪರಿಣಾಮಗಳಿಗೂ ಯಾವುದೇ ಸಂಬಂಧವಿಲ್ಲದಾಗಿದೆ.

ವಾಸ್ತವವಾಗಿ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಸರ್ಕಾರಗಳು ಈ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣದ ಕಾರ್ಯಕ್ರಮಗಳನ್ನು ಹೇಗೆ ಜಾರಿಗೊಳಿಸುತ್ತಿವೆ ಎಂದರೆ, ಈ ಸಬಲೀಕರಣಗಳು ಆಯಾ ಜಾತಿಗಳು ತಮ್ಮೊಳಗೇ ಚಲನಶೀಲವಾಗಿ ಒಳವರ್ಗಗಳನ್ನು ಸೃಷ್ಟಿಸುತ್ತಿವೆಯೇ ಹೊರತು ಒಟ್ಟಾರೆ ಸಮಾಜವನ್ನು ಚಲನಶೀಲಗೊಳಿಸುತ್ತಿಲ್ಲ. ಅವು ಜಾತಿಗಳಾಗಿ ತಮ್ಮದೇ ಜಾತಿಯ ಪುರಾಣಪುರುಷರು, ಲಾಂಛನಗಳೊಂದಿಗೆ ಮತ್ತಷ್ಟು ಭದ್ರವಾಗಿ. ಆಕ್ರಮಣಶೀಲವಾಗಿ ಸಂಘಟಿತಗೊಳ್ಳುತ್ತಿವೆ. ಇದಕ್ಕೆ ಮುಖ್ಯ ಕಾರಣ, ಈ ಜಾತಿಗಳ ಜನರು ಎಷ್ಟೇ ಆರ್ಥಿಕವಾಗಿ ಸಬಲೀಕರಣಗೊಂಡರೂ ಒಟ್ಟು ಸಮಾಜದಲ್ಲಿ, ಅವರ ಸಾಮಾಜಿಕ ಸ್ಥಾನಮಾನದಲ್ಲಿ ಏನೂ ನಿರ್ಣಾಯಕ ಬದಲಾವಣೆ ಆಗುತ್ತಿಲ್ಲ ಎಂಬುದೇ ಆಗಿದೆ. ಉದಾಹರಣೆಗೆ ಬಡ ಅಸ್ಪೃಶ್ಯ, ಬಡ ಉಪ್ಪಾರ ವ್ಯಕ್ತಿಗಳು ಶ್ರೀಮಂತ ಅಸ್ಪೃಶ್ಯ ಮತ್ತು ಶ್ರೀಮಂತ ಉಪ್ಪಾರ ಎನಿಸಿಕೊಳ್ಳಬಹುದಷ್ಟೆ. (ನಮ್ಮ ಕೆಲವು ಶ್ರೇಷ್ಠ ಲೇಖಕರನ್ನು ಈಗಲೂ ದಲಿತ ಲೇಖಕರು ಎಂದೇ ಕರೆಯುತ್ತಿಲ್ಲವೇ, ಹಾಗೆ.) ಬಹಳಷ್ಟು ಜನ ಅಸ್ಪೃಶ್ಯರು ಮತ್ತು ಹಿಂದುಳಿದ ಜಾತಿಗಳ ಜನರು ಇಷ್ಟಕ್ಕೇ ಸಮಾಧಾನಿತರಾಗುತ್ತಿದ್ದರೆ, ಕೆಲವರು ಇದರಿಂದ ವ್ಯಗ್ರರಾಗುತ್ತಿದ್ದಾರೆ. ಇದು ಹೊಸ ಶ್ರೀಮಂತರ ವ್ಯಗ್ರತೆಯಾದುದರಿಂದ ಬಿರುಸು ಜಾಸ್ತಿ. ಇದು ಇಂದಿನ ಸಾಮಾಜಿಕ ನ್ಯಾಯದ ರಾಜಕಾರಣವನ್ನು ಇನ್ನಷ್ಟು ಜಟಿಲಗೊಳಿಸಿದೆ.

ಇದಕ್ಕೆ ಮುಖ್ಯ ಕಾರಣಗಳು ಎರಡು. ಒಂದು ಈ ಸಬಲೀಕರಣ ಕಾರ್ಯಕ್ರಮಗಳನ್ನು ಓಟ್ ಬ್ಯಾಂಕ್ ರಾಜಕಾರಣವಾಗಿ ಜಾರಿಗೊಳಿಸುತ್ತಿರುವುದು. ಮತ್ತೊಂದು ಕಾರಣ, ಹಿಂದುಳಿದ ಜಾತಿಗಳ ನಾಯಕರೂ ಸೇರಿದಂತೆ ನಮ್ಮ ರಾಜಕೀಯ ನಾಯಕರಾರಿಗೂ ಜಾತಿವಿನಾಶದ ಬಗ್ಗೆ ನಂಬಿಕೆ ಇಲ್ಲದಿರುವುದು. ಇದಕ್ಕೆ ಮತ್ತೆಯೂ ಇರುವ ಮುಖ್ಯ ಕಾರಣ ಇವರೆಲ್ಲರೂ ಅವರಿಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ತಮ್ಮ ಅಸ್ತಿತ್ವವನ್ನು ಸಾಮಾಜಿಕವಾಗಿ ಜಾತಿ ಸಂವೇದನೆಗಳ ಮೂಲಕವೇ ಕಟ್ಟಿಕೊಂಡಿರುವುದು. ಇವರಿಗೆ ಜಾತಿವಿನಾಶ ಎಂದರೆ ತಮ್ಮನ್ನು ತಾವೇ ಕಳೆದುಕೊಳ್ಳುವ ಭಯಾನಕ ಅನುಭವವಾಗಿ ಕಾಣುತ್ತದೆ/ಕಾಡುತ್ತದೆ. ಮತ್ತು ಸಹಜವಾಗಿಯೇ ಅದು ಅಸಾಧ್ಯ ಮತ್ತು ಅಸಾಧುವಾಗಿ ತೋರುತ್ತದೆ. ಹಾಗಾಗಿ ಇದಕ್ಕಾಗಿ ಇವರನ್ನು ನಿಂದಿಸಿ ಪ್ರಯೋಜನವಿಲ್ಲ.

ಹಾಗಾದರೆ ಸಾಮಾಜಿಕ ನ್ಯಾಯದ ಬಿಕ್ಕಟ್ಟಿನ–ಜಾತಿವಿನಾಶದ ಗುರಿಯಿಂದ ವಿಮುಖವಾಗಿರುವಂತೆ ಮಾಡಿರುವುದರ–ಮೂಲದಲ್ಲಿರುವ ಸಮಸ್ಯೆ ಯಾವುದು? ಬಹುಶಃ ಜಾತಿಪದ್ಧತಿಯನ್ನು ಅದು ಅರ್ಥಮಾಡಿಕೊಂಡ ಬಗೆಯಲ್ಲೇ ಸಮಸ್ಯಾತ್ಮಕತೆ ಇದ್ದಂತೆ ತೋರುತ್ತದೆ. ಆ ಸಮಸ್ಯಾತ್ಮಕತೆ ಈ ಜಾತಿಪದ್ಧತಿಯನ್ನು ಯಾರೋ ಯಾವಾಗಲೋ ಯಾರನ್ನೋ ಶೋಷಿಸಲು ಯಾರ ಮೇಲೋ ಹೇರಿದ ಪದ್ಧತಿ ಎಂಬ ಸರಳ ಗ್ರಹಿಕೆಯಲ್ಲಿದ್ದಂತಿದೆ. ಇದರಿಂದಾಗಿ ಅದರ ಸಾಂಸ್ಕೃತಿಕ ಆಯಾಮ ಮತ್ತು ಐತಿಹಾಸಿಕ ರೂಪಾಂತರಗಳು ಮುಖ್ಯ ಚರ್ಚೆಗೆ ಬಾರದೇ ಹೋಗಿವೆ. ಅಂಬೇಡ್ಕರ್‌ರ

ಜಾತಿ ಮೀಮಾಂಸೆಯೂ ಸೇರಿದಂತೆ ಜಾತಿ ವಿರೋಧಿಯಾದ ನಮ್ಮ ಬಹಳಷ್ಟು ಆಧುನಿಕ ತತ್ವ ಮೀಮಾಂಸೆಗಳಲ್ಲೂ ಈ ಸಮಸ್ಯಾತ್ಮಕತೆ ಇದ್ದಂತಿದೆ.

ಆದರೆ ಈ ಅಂತಾರಾಷ್ಟ್ರೀಯ ಅಂಬೇಡ್ಕರ್ ಮೇಳ ಈ ಬಗ್ಗೆ ಗಮನವನ್ನೇ ಹರಿಸಲಿಲ್ಲ. ಏಕೆ? ಹರಿಸಿದ್ದರೆ ಬಹುಶಃ ಈಗ ಜಾರಿಯಾಗುತ್ತಿರುವ ಜಾತಿ ಮೀಸಲಾತಿ ಮಾತ್ರವಾಗಿ ಕುಬ್ಜಗೊಂಡಿರುವ ಸಾಮಾಜಿಕ ನ್ಯಾಯ ಕಾರ್ಯಕ್ರಮದ ಒಂದು ಪುನರ್‌ವಿಮರ್ಶೆಯ ಅಗತ್ಯ ಕಂಡುಬಂದು, ಅದನ್ನು ಕೇವಲ ಕೆಲವು ಜಾತಿಗಳ ಹಿತಾಸಕ್ತಿ ರಕ್ಷಣೆ ಮಾತ್ರವಲ್ಲದೆ ಇಡೀ ಸಮಾಜದ ಹಿತರಕ್ಷಣೆಯ ಕಾರ್ಯಕ್ರಮವನ್ನಾಗಿ ನೋಡಿ ಅದರ ವಿವರ-ವಿನ್ಯಾಸಗಳನ್ನೇ ಬದಲಿಸಬೇಕಾಗುತ್ತದೆ. ಇದು ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಬಹು ಧೈರ್ಯವನ್ನು ಬೇಡುವ ಸಾಹಸವೇ ಸರಿ. ಆದರೆ ಇಂತಹ ಸಾಹಸದ ಮೊದಲ ಹೆಜ್ಜೆಯನ್ನಾದರೂ ಇಡಲು ಇಂತಹ ಸಂದರ್ಭಗಳಿಗಿಂತ ಹೆಚ್ಚು ಪ್ರಶಸ್ತವಾದ ಸಂದರ್ಭವಾದರೂ ಯಾವುದು? ಉದಾಹರಣೆಗೆ, ಈ ಸಂದರ್ಭದ ಸಾರ್ಥಕತೆಯ ಸಂಕೇತವಾಗಿ ಹಲವು ವರ್ಷಗಳಿಂದ ಪರಿಶೀಲನೆಯ ಹಂತದಲ್ಲೇ ಸ್ಥಗಿತವಾಗಿರುವ, ಸಾಮಾಜಿಕ ನ್ಯಾಯದ ಹೆಸರಲ್ಲಿ ಆಗಿರುವ ಅನ್ಯಾಯಗಳನ್ನು ಸರಿಪಡಿಸಲು ನೇಮಕವಾದ ಸದಾಶಿವ ಆಯೋಗದ ಶಿಫಾರ್ಸುಗಳನ್ನು ಜಾರಿಗೆ ತರುವ ಘೋಷಣೆಯನ್ನಾದರೂ ಮಾಡಬಹುದಿತ್ತಲ್ಲವೆ? ಏಕೆ ಮಾಡಲಾಗಲಿಲ್ಲ? ಬದಲಿಗೆ ಮಾಡಿದ್ದೇನು? ಬರೀ ಬುರುಗು ಮಾತುಗಳ, ಉದ್ದನೆಯ 'ಬೆಂಗಳೂರು ಘೋಷಣೆ'!

ಆದ್ದರಿಂದ ಈ ಕಾರ್ಯಕ್ರಮದ ಆಯೋಜನೆಯೇ ಅಂಬೇಡ್ಕರ್ ಆರಾಧನೆಯ ಉದ್ದೇಶ ಹೊಂದಿತ್ತು ಎಂದು ಹೇಳಬೇಕಾಗುತ್ತದೆ. ಹಾಗಾಗಿಯೇ, ಬಹುಕಾಲದಿಂದ ತಿಪ್ಪೆ ಸಾರಿಸುವಂತಹ ಪ್ರಯತ್ನಗಳಿಂದಾಗಿಯೇ ಒಂದು ಸುಸಂಗತ ಉತ್ತರ ಕಾಣದಂತಾಗಿರುವ ಜಾತಿಪದ್ಧತಿ ಕುರಿತ ಅಂಬೇಡ್ಕರ್ v/s ಗಾಂಧಿ ವಿವಾದಕ್ಕೆ ಪುನರ್‌ಭೇಟಿ ನೀಡುವ ಒಂದು ಸಣ್ಣ ಪ್ರಯತ್ನವೂ ಇಲ್ಲಿ ನಡೆಯಲಿಲ್ಲ. ಅಂಬೇಡ್ಕರ್ ಅವರ ಐತಿಹಾಸಿಕ ಚಿತ್ರವನ್ನು ಇನ್ನಷ್ಟು ಸ್ಫುಟವಾಗಿ ಬಿಡಿಸಬಹುದಾಗಿದ್ದ ಇಂತಹ ಪ್ರಯತ್ನ ಯಾಕೆ ಯಾರಿಗೂ ಅಗತ್ಯ ಎನಿಸಲಿಲ್ಲ? ಯಾರೋ, ಈ ಕಾರ್ಯಕ್ರಮಕ್ಕಾಗಿ ೨೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದನ್ನು ಟೀಕಿಸಿದವರನ್ನು ಟೀಕಿಸುತ್ತಾ, ಗೊಮ್ಮಟೇಶ್ವರನ ಮಹಾಮಸ್ತಕಾಭಿಷೇಕಕ್ಕೆ ನೂರಾರು ಕೋಟಿ ರೂಪಾಯಿಗಳನ್ನು ಮೀಸಲಿರಿಸುವುದನ್ನು ಇವರೇಕೆ ಟೀಕಿಸುತ್ತಿಲ್ಲ ಎಂದು ಕೇಳಿರುವುದು ಕುತೂಹಲಕಾರಿಯಾಗಿದೆ. ಇದೆಲ್ಲ ನಡೆದಿರುವುದು, ಗಾಂಧೀಜಿಯನ್ನು ಮನಸ್ಸಲಿಟ್ಟುಕೊಂಡು 'ವ್ಯಕ್ತಿಪೂಜೆ ಸಲ್ಲದು; ಅದು ಅಪಾಯಕಾರಿ' ಎಂದು ಎಚ್ಚರಿಸಿದ ಅಂಬೇಡ್ಕರ್ ಹೆಸರಿನಲ್ಲಿ ಎಂಬುದು ಇನ್ನೂ ಕುತೂಹಲಕಾರಿಯಾದ ಅಂಶವೇ ಆಗಿದೆ.

('ಪ್ರಜಾವಾಣಿ' : 'ಸಂಗತ': ಜುಲೈ ೨೭, ೨೦೧೭)

ಕೋರೆಗಾಂವ್ ಯುದ್ಧದ ಹೆಸರಿನಲ್ಲಿ

ಕೋರೆಗಾಂವ್-ಭೀಮಾ ಯುದ್ಧವೆಂದೇ ಈಗ ಪ್ರಸಿದ್ಧವಾಗಿರುವ ಮರಾಠ ರಾಜ್ಯ ಮತ್ತು ಈಸ್ಟ್ ಇಂಡಿಯಾ ಕಂಪನಿಯ ಸೈನ್ಯಗಳ ನಡುವೆ ನಡೆದ ಯುದ್ಧದ ಬಗ್ಗೆ ಈಗ ಎಲ್ಲೆಡೆ ವಿವಾದವೆದ್ದಿದೆ. ಆ ವಿವಾದ ಆರಂಭವಾಗಿರುವುದು ಮಹಾರಾಷ್ಟ್ರದ ಕೆಲವು ದಲಿತ ಸಂಘಟನೆಗಳು ಈ ಯುದ್ಧದ ದ್ವಿಶತಮಾನೋತ್ಸವವನ್ನು ಬ್ರಾಹ್ಮಣಶಾಹಿ ವಿರುದ್ಧದ ದಲಿತರ ವಿಜಯದ ಸಂಕೇತವಾಗಿ ಆಚರಿಸಿದ ಸಂದರ್ಭದಲ್ಲಿ ಅವರ ಮೇಲೆ ಸವರ್ಣೀಯ ಹಿಂದೂಗಳು ಎಂದು ಹೇಳಲಾದ ಜನ ನಡೆಸಿದ ದಾಳಿಯಿಂದಾಗಿ. ಈ ಯುದ್ಧ ನಡೆದದ್ದು, ಪುಣೆ ಬಳಿಯ ಕೋರೆಗಾಂವ್ ಎಂಬ ಊರಿನಲ್ಲಿ, ಭೀಮಾ ನದಿಯ ದಂಡೆಯಲ್ಲಿ, ೧೮೧೮ರ ಡಿಸೆಂಬರ್ ೩೧ ರಂದು. ಮುಗಿದದ್ದು ಮಾರನೆಯ ದಿನ. ಕೊನೆಯ ಆಂಗ್ಲೋ-ಇಂಡಿಯನ್ ಯುದ್ಧವೆಂದು ಕರೆಯಲಾಗುವ ಈ ಯುದ್ಧದಲ್ಲಿ ಮರಾಠ ಸೈನ್ಯ ಸೋತಿತು. ಆ ಮೂಲಕ ಇಡೀ ಭಾರತ ಸಂಪೂರ್ಣವಾಗಿ ಬ್ರಿಟಿಷರ ಅಧೀನಕ್ಕೆ ಬಂತು

ಈಸ್ಟ್ ಇಂಡಿಯಾ ಕಂಪನಿಯ ಸೇನೆಯ ತುಕಡಿಯೊಂದರಲ್ಲಿ ದಲಿತರು-ಅಂದರೆ ಮಹಾರರು ಬಹುಸಂಖ್ಯೆಯಲ್ಲಿದ್ದರು. ಅವರು ಬ್ರಿಟಿಷರ ಪರ ವೀರಾವೇಶದಿಂದ ಹೋರಾಡಿದರು. ಹಾಗೇ ಅವರು ಹೋರಾಡಿದ್ದು ಮರಾಠ ರಾಜ್ಯವನ್ನು ಆಳುತ್ತಿದ್ದ ಪೇಶ್ವೆಯರ ವಿರುದ್ಧವೂ ಆಗಿತ್ತು. ಇತಿಹಾಸ ತಿಳಿಸುವಂತೆ ಪೇಶ್ವೆಗಳ ರಾಜ್ಯ ಕಟ್ಟರ್ ಬ್ರಾಹ್ಮಣರ ರಾಜ್ಯವಾಗಿದ್ದು, ದ್ವಿಜೇತರ ಜಾತಿಗಳು ಜಾತಿಪದ್ಧತಿಯ ಕಟ್ಟುನಿಟ್ಟುಗಳಿಗೆ ಒಳಗಾಗಿ ದಮನಿತರಾಗಿದ್ದರು. ಹಾಗಾಗಿ ಈಗ ಇದನ್ನು ದಲಿತರು ಬ್ರಾಹ್ಮಣಶಾಹಿಯ ವಿರುದ್ಧ ಗಳಿಸಿದ ಜಯದ ಪ್ರತೀಕವೆಂದು ಬಿಂಬಿಸಿ ಕೆಲವರು ಅದರ ದ್ವಿಶತಮಾನೋತ್ಸವದ ಆಚರಣೆಯಲ್ಲಿ ತೊಡಗಿದ್ದಾರೆ. ಇದರ ಫಲವಾಗಿ ವ್ಯಾಪಕ ಹಿಂಸಾಚಾರ ನಡೆದು ಇಡೀ ಮಹಾರಾಷ್ಟ್ರ ಪ್ರಕ್ಷುಬ್ಧವಾಗಿದೆ.

ಆದರೆ ಚರಿತ್ರೆಯ ಘಟನೆಗಳನ್ನು ಈಗ ವರ್ತಮಾನಕ್ಕೆ ಸಂಬಂಧಿಸಿದಂತೆ ಹೀಗೆ ಅರ್ಥೈಸಿ ಜನವರ್ಗಗಳನ್ನು ಸಂಘಟಿಸಹೊರಡುವುದು ಎಷ್ಟು ಸರಿ ಎಂಬ ಪ್ರಶ್ನೆಯನ್ನು ನಾವೀಗ ಕೇಳಿಕೊಳ್ಳಬೇಕಿದೆ. ಈ ಸಂಬಂಧ ಸವರ್ಣೀಯರು ಏನು ಹೇಳಿದರೂ, ಅದನ್ನು ಜಾತಿ ಕಣ್ಣುಗಳ ಹೇಳಿಕೆಯೆಂದು ವರ್ಣಿಸಲು ಇಂದು ಅನೇಕ ದಲಿತ ನಾಯಕರು ಸಜ್ಜಾಗಿ ನಿಂತಿದ್ದಾರೆ. ಹಾಗಾಗಿ ಈ ಸಂಬಂಧವಾಗಿ ಆನಂದ ತೇಲ್ತುಂಬ್ಡೆ ಎಂಬ ದಲಿತ ಚಿಂತಕರ ಮಾತುಗಳನ್ನೇ ಆಧರಿಸಿ ಕೆಲವು ಮಾತುಗಳನ್ನು ಹೇಳಬಹುದಾಗಿದೆ. ತೇಲ್ತುಂಬ್ಡೆಯವರಂತಹ ಅಖಿಲ ಭಾರತ ಚಿಂತಕರು ದಲಿತ ಸಮೂಹದ ಮಧ್ಯೆ ಇರುವುದರಿಂದಲೇ ನಮ್ಮ ದಲಿತ ಚಳುವಳಿ ಜಾತೀಯ ಚಳುವಳಿಯಾಗದೆ ಬಚಾವಾಗಿರುವುದು ಕೂಡ ಎಂದು ನಾನು ನಂಬಿದ್ದೇನೆ. ಇವರು

ಡಾ. ಅಂಬೇಡ್ಕರ್ ಅವರ ಮೊಮ್ಮಗ ಪ್ರಕಾಶ್ ಅಂಬೇಡ್ಕರ್ ಅವರ ಅಳಿಯ ಎಂದು ಕೇಳಿದ್ದೇನೆ.

ತೇಲ್ತುಂಬ್ಡೆಯವರ ಪ್ರಕಾರ ಯುದ್ಧವನ್ನು ಎರಡು ಪಾಳೆಯಗಳ ರಾಜಕೀಯ ಹಿತಾಸಕ್ತಿಗಳ ಘರ್ಷಣೆಯಾಗಿ ಮಾತ್ರ ನೋಡಬೇಕು. ಆ ಪಾಳೆಯಗಳ ಸೈನಿಕರು, ವಿಶೇಷವಾಗಿ ರಾಜಪ್ರಭುತ್ವಗಳ ಕಾಲದ ಯುದ್ಧಗಳಲ್ಲಿ, ತಮ್ಮ ಸ್ವಾಮಿನಿಷ್ಠೆಯ ಪ್ರದರ್ಶನಕ್ಕಾಗಿ ಹೋರಾಡುತ್ತಾರೆ. ಹಾಗೇ ಕುಂಪಣಿ ಸರ್ಕಾರದ ಸೇನೆಯಲ್ಲಿದ್ದ ದಲಿತ ಮಹಾರ ಸೈನಿಕರು ಕುಂಪಣಿ ಸರ್ಕಾರದ ಪರವಾಗಿ ಹೋರಾಡಿದರೆಂದು ಹೇಳಬಹುದೇ ಹೊರತು ಪೇಶ್ವೆಗಳ ಬ್ರಾಹ್ಮಣಶಾಹಿಯ ವಿರುದ್ಧ ಹೋರಾಡಿದರೆಂದು ಹೇಳಲಾಗದು. ಹಾಗೆ ನೋಡಿದರೆ ಕುಂಪಣಿ ಸರ್ಕಾರದ ಸೇನೆಯಲ್ಲಿ ಮೇಲ್ಜಾತಿಗಳ ಸೈನಿಕರೂ ಇದ್ದರು. ಅವರು ಯಾವುದರ ವಿರುದ್ಧ ಹೋರಾಡಿದರೆಂದು ಹೇಳಬಹುದು? ಅದೇ ರೀತಿ ಮರಾಠ ರಾಜ್ಯದ ಸೇನೆಯಲ್ಲಿದ್ದ ದೊಡ್ಡ ತುಕಡಿ ಅರಬ್ಬರದಾಗಿತ್ತು. ಸದರಿ ಯುದ್ಧದಲ್ಲಿ ಬ್ರಿಟಿಷ್ ಸೈನ್ಯದ ವಿರುದ್ಧ ವೀರಾವೇಶದಿಂದ ಹೋರಾಡಿ ಅತಿ ಹೆಚ್ಚು ಸಾವು–ನೋವು ಅನುಭವಿಸಿದ್ದು ಈ ತುಕಡಿಯೇ. ಹಾಗಾದರೆ ಮೂಲತಃ ಮುಸ್ಲಿಮರಾಗಿದ್ದ ಅರಬ್ಬರು ಪೇಶ್ವೆಗಳ ಬ್ರಾಹ್ಮಣಶಾಹಿಯನ್ನು ಉಳಿಸಲು ಹೋರಾಡಿದರು ಎಂದು ಹೇಳಬಹುದೇ?

ತೇಲ್ತುಂಬ್ಡೆಯವರ ಪ್ರಕಾರ, ಈ ಯುದ್ಧದಲ್ಲಿ ಮಹಾರರು ಬ್ರಾಹ್ಮಣಶಾಹಿ ವಿರುದ್ಧ ಹೋರಾಡಿದರೆಂದು ಹೇಳಲು ಯಾವ ಆಧಾರಗಳೂ ಇಲ್ಲ. ಅಲ್ಲದೆ ದಲಿತ ಸಮುದಾಯದಲ್ಲಿ ಆ ಕಾಲದಲ್ಲಿನ್ನೂ ಜಾತಿಪದ್ಧತಿಯ ವಿರುದ್ಧ ಅಂತಹ ಜಾಗೃತಿಯೇನೂ ಉಂಟಾಗಿರಲಿಲ್ಲ. ಹಾಗೆ ನೋಡಿದರೆ ಕುಂಪಣಿ ಸರ್ಕಾರ ಮಹಾರಾಷ್ಟ್ರದಲ್ಲಿ ಮಾತ್ರವಲ್ಲದೆ ಭಾರತದ ಎಲ್ಲ ಕಡೆ ತನ್ನ ಸೇನೆಗೆ ಹೆಚ್ಚು ಹೆಚ್ಚು ದಲಿತರನ್ನು ಸೇರಿಸಿಕೊಳ್ಳುತ್ತಿದ್ದುದು ಆ ಸಮುದಾಯ ಜಾತಿಪದ್ಧತಿಗೆ ಬದ್ಧವಾಗಿ ವಿಧೇಯಗುಣವನ್ನು ರೂಢಿಸಿಕೊಂಡಿತ್ತು ಎಂಬ ಕಾರಣಕ್ಕೆ! ಇನ್ನು ಅಂಕಿ ಅಂಶಗಳ ಪ್ರಕಾರ ಕೋರೆಗಾಂವ್ ಯುದ್ಧದಲ್ಲಿ ಸತ್ತವರಲ್ಲಿ ಮಹಾರ ಸೈನಿಕರಗಿಂತ ಇತರೆ ಜಾತಿಯವರೇ ಹೆಚ್ಚು. ಒಂದು ಜಾತಿಯಾಗಿ ಸತ್ತ ಮಹಾರರ ಸಂಖ್ಯೆ ಹೆಚ್ಚಷ್ಟೆ.

ಹೋಗಲಿ, ತಮ್ಮ ಪರವಾಗಿ ಹೋರಾಡಿದ ಈ ಮಹಾರರಿಗೆ ಬ್ರಿಟಿಷರು ಏನು ಕೊಡುಗೆ ನೀಡಿದರು? ಆ ಹೊತ್ತಿಗೆ ಬ್ರಿಟಿಷ್ ಸರ್ಕಾರ ೧೮೫೭ರ ಸಿಪಾಯಿ ದಂಗೆಯ ಕಹಿ ಅನುಭವದಿಂದಾಗಿ ತನ್ನ ಸೇನೆಗೆ ದಲಿತರನ್ನು ನೇಮಿಸಿಕೊಳ್ಳುವುದರ ಮೇಲೆ ನಿರ್ಬಂಧ ಹೇರಿತ್ತು. ಆ ನಿರ್ಬಂಧವನ್ನು ತೆಗೆಯುವಂತೆ, ಮುಂದಿನ ದಿನಗಳಲ್ಲಿ ಆ ಸೇನೆಯಲ್ಲಿ ಸುಬೇದಾರರಾಗಿದ್ದ ಅಂಬೇಡ್ಕರ್ ಅವರ ತಂದೆಯೂ ಸೇರಿದಂತೆ ಹಲವು ಮಹಾರ್ ಮುಖಂಡರು ಮಾಡಿದ ಮನವಿಯನ್ನು ಬ್ರಿಟಿಷ್ ಸರ್ಕಾರ ಮಾನ್ಯಮಾಡಲಿಲ್ಲ. ಬ್ರಿಟಿಷರು ಸಹ ಈ ಯುದ್ಧದ ಮೂಲಕವೇನೂ ಭಾರತದ ಬ್ರಾಹ್ಮಣಶಾಹಿಯ ವಿರುದ್ಧ ಯುದ್ಧ ಹೂಡಿರಲಿಲ್ಲ!

ಇಂದು ಪ್ರಗತಿಪರರೆಂದು ಹೇಳಿಕೊಳ್ಳುವ ಕೆಲವು ಶಕ್ತಿಗಳು ದಲಿತರನ್ನು ತಮ್ಮ ರಾಜಕೀಯಕ್ಕೆ ಬಳಸಿಕೊಳ್ಳಲು ಒಂದಲ್ಲ ಒಂದು ನೆಪ ಹುಡುಕುವ 'ಸಂಶೋಧನೆ'ಗಳಲ್ಲಿ

ತೊಡಗಿದ್ದಾರೆ. ಹಿಂದುತ್ವ ಶಕ್ತಿಗಳ ವಿರುದ್ಧವೆಂದು ಹೇಳಲಾಗುವ ಈ ಹೋರಾಟ ಇಂತಹ ಹುಸಿ ನೆಪಗಳ, ಐತಿಹಾಸಿಕ ದಾಖಲೆಗಳ ಆಧಾರದ ಮೇಲೆ ರೂಪುಗೊಂಡಷ್ಟೂ ಈ ಹೋರಾಟ ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುತ್ತಾ ಹೋಗುತ್ತದೆ. ಇಡೀ ಹಿಂದುತ್ವ ವಿರೋಧಿ ಹೋರಾಟ, ಯಾವ ಪಾಳೆಯಕ್ಕೂ ಸೇರದ ದೊಡ್ಡ ಪ್ರಮಾಣದ ಜನವರ್ಗಗಳ ಕಣ್ಣಲ್ಲಿ ಅನುಮಾನಾಸ್ಪದವೆನಿಸಿ, ಅದು ಹಿಂದುತ್ವವಾದಕ್ಕೇ ಅನುಕೂಲವಾಗಿ ಪರಿಣಮಿಸಬಹುದಾಗಿದೆ. ಹಾಗಾಗಿ ಕಣ್ಣಮುಂದಿನ ಅನ್ಯಾಯ–ಶೋಷಣೆ–ದಬ್ಬಾಳಿಕೆಗಳ ಹೊರತಾಗಿ ಇನ್ನಾವುದೇ 'ಪೌರಾಣಿಕ' ಕಾರಣದ ಮೇಲೆ ಜನರ ನಡುವೆ ವೈಷಮ್ಯವನ್ನು ಹುಟ್ಟು ಹಾಕಿ ಅದರ ಬೆಂಕಿಯ ಕಾವಿನಲ್ಲಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವಂತಹ ಪ್ರಯತ್ನಗಳ ಬಗ್ಗೆ ಜನ, ವಿಶೇಷವಾಗಿ ದಲಿತರು ಎಚ್ಚರದಿಂದಿರಬೇಕಿದೆ. ಇಲ್ಲದೇ ಹೋದರೆ ಹಿಂದುತ್ವದ ರಾಜಕಾರಣಕ್ಕೂ ಈ ರಾಜಕಾರಣಕ್ಕೂ ಏನು ವ್ಯತ್ಯಾಸ? ಜೊತೆಗೆ ದಲಿತರೂ ಸೇರಿದಂತೆ ಹಿಂದುತ್ವ ವಿರೋಧಿ ಹೋರಾಟಗಾರರು ಅರಿಯಬೇಕಾದ ಇನ್ನೊಂದು ಮುಖ್ಯ ಸಂಗತಿ ಎಂದರೆ, ಹಿಂದುತ್ವವು ಬ್ರಾಹ್ಮಣಶಾಹಿಯನ್ನು ಮೀರಿ ಬೆಳೆದು ಅದು ಬಹುಪಾಲು ಶೂದ್ರ ಮತ್ತು ದಲಿತ ನಾಯಕರನ್ನು ಆಪೋಶನ ತೆಗೆದುಕೊಂಡಿದೆ ಎಂಬುದು. ಹಾಗಾಗಿ ಈ ಹೋರಾಟ ಜಾತಿ ಪರಿಗಣನೆಯನ್ನು ಮೀರಿದ ಹೋರಾಟವಾಗಿ ಬೆಳೆಯಬೇಕಿದೆ.

ಇಂದಿನ ದುರಂತವೆಂದರೆ ನಮ್ಮ ಬಹುಪಾಲು ಸಮುದಾಯ ಮುಖಂಡರು ಮತ್ತು ಚಿಂತಕರು ಎರಡು ಪಾಳೆಯಗಳ ನಡುವೆ ಹಂಚಿಹೋಗಿದ್ದು, ಇವುಗಳ ರಾಜಕಾರಣದ ನ್ಯಾಯಪರತೆಯನ್ನು ಪರಿಶೀಲಿಸಿ ಅದನ್ನು ಜನರಿಗೆ ಹೇಳುವವರೇ ಇಲ್ಲವಾಗಿದ್ದಾರೆ. ಅದೃಷ್ಟವಶಾತ್ ಆನಂದ ತೇಲ್ತುಂಬ್ಡೆ ತಡವಾಗಿಯಾದರೂ ತಮ್ಮ ಹೃದಯದ ಮಾತುಗಳನ್ನು ಆಡಿದ್ದಾರೆ. ಕರ್ನಾಟಕದಲ್ಲಿ ಇಂತಹ ಸಂದರ್ಭಗಳಲ್ಲಿ ದೇವನೂರ ಮಹಾದೇವ ಅವರಂತಹವರು ಸ್ವಲ್ಪ ಧೈರ್ಯ ವಹಿಸಿ ಮಾತಾಡಬೇಕಿದೆ.

ನೇರವಾಗಿ, ನಿಷ್ಠುರವಾಗಿ ಮತ್ತು ಸಕಾಲದಲ್ಲಿ ತಮ್ಮ ಜನಪ್ರಿಯತೆಯನ್ನು ಪಣಕ್ಕೊಡ್ಡಿಯಾದರೂ ಹೃದಯದ ಮಾತನ್ನು ಆಡುವ ಪ್ರವೃತ್ತಿ ನಮ್ಮ ಸಮಾಜದಲ್ಲಿ ರೂಢಿಗತವಾಗದ ಹೊರತು ಇಂತಹ ದುರಂತಗಳು ತಪ್ಪಲಾರವು. ಏಕೆಂದರೆ ಜಾತಿ ಗುರುತನ್ನು ಮೀರಿದ ಯಾರಾದರೂ ಸವರ್ಣೀಯರೋ ಅಥವಾ ದಲಿತರೋ ಈ ಕೋರೆಗಾಂವ್ ಯುದ್ಧದ ಸ್ಮರಣೆ ಇಂದು ಅಸಂಬದ್ಧ, ಅದು ಅಶಾಂತಿ–ಹಿಂಸಾಚಾರಕ್ಕೆ ಎಡೆಗೊಡುತ್ತದೆ ಎಂದು ಎಚ್ಚರಿಸಿ ಈ ಬಗ್ಗೆ ಸಮಾಜದಲ್ಲಿ ಒಂದು ಚರ್ಚೆಯನ್ನು ಹುಟ್ಟುಹಾಕಬಲ್ಲವರಾಗಿದ್ದರೆ ಈ ಹಿಂಸಾಚಾರ ತಪ್ಪುತ್ತಿತ್ತು.

(ಆನಂದ್ ತೇಲ್ತುಂಬ್ಡೆ ಅವರನ್ನೀಗ ಕೋರೆಗಾಂವ್ ಯುದ್ಧ ಸ್ಮರಣೆ ಕುರಿತ ಅಭಿಪ್ರಾಯಕ್ಕಾಗಿ ಕೆಲವು ದಲಿತ ನಾಯಕರು ಅಂಬೇಡ್ಕರ್ ವಿರೋಧಿ, ದಲಿತ ವಿರೋಧಿ, ಕಟ್ಟರ್ ಎಡಪಂಥೀಯ ಎಂದೆಲ್ಲ ದೂಷಿಸುತ್ತಿದ್ದಾರೆ!)

('ಪ್ರಜಾವಾಣಿ' 'ಸಂಗತ': ಜನವರಿ ೧೦, ೨೦೧೮)

ಈ ಮೋದಿವಾದಕ್ಕೆ ಕಾರಣಗಳಿಲ್ಲ

'ಸೂರ್ಯ ನಮಸ್ಕಾರ' ಅಂಕಣದಡಿಯ 'ಹರಳುಗಟ್ಟುತ್ತಿರುವ ಭಾವನೆ ಬಳಸಿದ ಬಗೆ...' ಶೀರ್ಷಿಕೆಯ ಎ. ಸೂರ್ಯಪ್ರಕಾಶ್ ಅವರ ಬರಹ ಓದಿ (ಪ್ರವಾ: ೨೨.೩.೨೦೧೭) ಪ್ರತಿಕ್ರಿಯೆಯಾಗಿ ಈ ಬರಹ. ತಮ್ಮ ಬರಹದಲ್ಲಿ ಅವರು ಮಾಡಿರುವ ವಿಶ್ಲೇಷಣೆಯನ್ನು 'ಮೋದಿ ಅವರು ಅಭಿವೃದ್ಧಿಯ ವಿಚಾರಗಳ ಆಧಾರದಲ್ಲಿ ಚುನಾವಣೆ ಎದುರಿಸಿದರು, ಭಾರಿ ಜನಬೆಂಬಲ ಪಡೆದರು. ಹಾಗಾಗಿ ಸರ್ಕಾರ ಕೂಡ ಈ ಚೌಕಟ್ಟಿನಲ್ಲಿಯೇ ಕೆಲಸ ಮಾಡಬೇಕು. ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ಇದೇ ಮಾರ್ಗಸೂಚಿ ಆಗಿರಬೇಕು' ಎಂಬ ತೀರ್ಮಾನದೊಂದಿಗೆ ಮುಗಿಸಿದ್ದಾರೆ.

ಆದರೆ ಈ ತೀರ್ಮಾನಕ್ಕೆ ಬರುವ ಯಾವ ವಾಸ್ತವಾಂಶಗಳೂ ಅವರ ವಿಶ್ಲೇಷಣೆಯಲ್ಲಿ ಕಾಣಬರುವುದಿಲ್ಲ ಎಂಬುದೇ ಈ ಬರಹದ ವಿಪರ್ಯಾಸದ ಸಂಗತಿಯಾಗಿದೆ. ಏಕೆಂದರೆ ಉತ್ತರಪ್ರದೇಶದ ಚುನಾವಣಾ ಫಲಿತಾಂಶಗಳನ್ನು ಸಮರ್ಪಕವಾಗಿ ಊಹಿಸುವಲ್ಲಿ 'ನೆಹರೂವಾದಿ' ಮತ್ತು 'ಎಡಪಂಥೀಯ' ಎಂದು ಅವರು ಗುರುತಿಸುವ ಮಾಧ್ಯಮ ಮಿತ್ರರು ವಿಫಲರಾಗಲು ಕಾರಣವೆಂದು ಅವರು ಹೇಳುವ ಸೈದ್ಧಾಂತಿಕ ಪೂರ್ವಗ್ರಹಗಳು ಸ್ವತಃ ಸೂರ್ಯಪ್ರಕಾಶರನ್ನೇ ಬಾಧಿಸಿದಂತಿವೆ. ಮೊದಲನೆಯದಾಗಿ ಐದು ರಾಜ್ಯಗಳಲ್ಲಿ ನಡೆದ ಈ ಚುನಾವಣೆಗಳಲ್ಲಿ ಬಿಜೆಪಿ ಜಯಭೇರಿ ಬಾರಿಸಿರುವುದು ಉತ್ತರ ಪ್ರದೇಶ ಮತ್ತು ಈ ಮೊದಲು ಇದೇ ರಾಜ್ಯದ ಭಾಗವಾಗಿದ್ದ ಉತ್ತರಾಖಂಡದಲ್ಲಿ ಮಾತ್ರ. ಅದೇ ವೇಳೆಯಲ್ಲಿ ಪಂಜಾಬ್‌ನಲ್ಲಿ ಕಾಂಗ್ರೆಸ್ ಈ ಎರಡೂ ರಾಜ್ಯಗಳಲ್ಲಿ ಬಿಜೆಪಿ ಗಳಿಸಿದ ಜಯದಷ್ಟೇ ಭಾರಿಯಾದ ಜಯ ಸಾಧಿಸಿದೆ. ಈ ರಾಜ್ಯದಲ್ಲಿ ಬಿಜೆಪಿ ತನ್ನ ಮಿತ್ರಪಕ್ಷ ಅಕಾಲಿದಳದೊಂದಿಗೆ ಹೀನಾಯ ಸೋಲನ್ನು ಅನುಭವಿಸಿದೆ. ಈವರೆಗೆ ಆಡಳಿತಾರೂಢವಾಗಿದ್ದ ಈ ಪಕ್ಷಗಳು ಈ ಚುನಾವಣೆಯಲ್ಲಿ ವಿರೋಧ ಪಕ್ಷದ ಸ್ಥಾನವನ್ನೂ ಉಳಿಸಿಕೊಳ್ಳಲಾಗದೆ ಆ ಜಾಗವನ್ನು ಆಮ್ ಆದ್ಮಿ ಪಕ್ಷಕ್ಕೆ ಬಿಟ್ಟುಕೊಟ್ಟಿವೆ. ಇನ್ನು ಮಿಕ್ಕ ಎರಡು ರಾಜ್ಯಗಳಾದ ಗೋವಾ ಮತ್ತು ಮಣಿಪುರಗಳಲ್ಲಿ ಕಾಂಗ್ರೆಸ್ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದರೂ ನಂತರದ ಎರಡನೇ ಸ್ಥಾನವನ್ನಷ್ಟೇ ಪಡೆದಿದ್ದ ಬಿಜೆಪಿ, ತನ್ನ ರಾಜಕೀಯ ಚಾಣಾಕ್ಷತನದಿಂದಷ್ಟೇ (ಮತ್ತು ಕಾಂಗ್ರೆಸ್‌ನ ಹೇಡಿತನದಿಂದಾಗಿಯೂ) ಅಲ್ಲಿ ಸರ್ಕಾರಗಳನ್ನು ರಚಿಸಿಕೊಂಡಿದ್ದು, ಅದನ್ನು ಕಾಂಗ್ರೆಸ್ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು, ಪ್ರಕರಣ ಇನ್ನೂ ಪೂರ್ಣ ವಿಚಾರಣೆಗೆ ಬರಬೇಕಿದೆ.

ಈ ವಾಸ್ತವಾಂಶಗಳ ಜೊತೆಗೇ ಇನ್ನೂ ಮುಖ್ಯವಾದ ಅಂಕಿ-ಅಂಶವೊಂದನ್ನು ಇಲ್ಲಿ ಗಮನಿಸಬೇಕಿದೆ. ಅದೆಂದರೆ ಉ.ಪ್ರ. ದಲ್ಲಿ ಬಿಜೆಪಿ ಗಳಿಸಿರುವ ಮತ ಪ್ರಮಾಣ ಚಲಾವಣೆಯಾದ ಒಟ್ಟು ಮತಗಳಲ್ಲಿ ಸುಮಾರು ಶೇ. ೪೦ ಮಾತ್ರ. ಇದು ಸಮಾಜವಾದಿ-

ಕಾಂಗ್ರೆಸ್ ಪಕ್ಷಗಳು ಮತ್ತು ಬಿಎಸ್‌ಪಿ ಗಳಿಸಿದ ಒಟ್ಟು ಮತ ಪ್ರಮಾಣಕ್ಕಿಂತ ಶೇ. ೧೦ರಷ್ಟು ಕಡಿಮೆ ಮತ್ತು ಇದೇನೂ ಕಡಿಮೆ ಅಂತರವಲ್ಲ. ಹೀಗೆ ತ್ರಿಮುಖವಾಗಿ (ಕೆಲವೆಡೆ ಬಹುಮುಖವಾಗಿ) ಮತ ಹಂಚಿಹೋದ ಪರಿಣಾಮವಾಗಿಯಷ್ಟೆ ಬಿಜೆಪಿ ಭಾರಿ ಜಯವನ್ನು ಸಾಧಿಸಿದೆ ಎಂಬುದು ನಿಚ್ಚಳ. ಮಾಧ್ಯಮಗಳು ಚುನಾವಣಾ ಫಲಿತಾಂಶಗಳನ್ನು ಸಮರ್ಪಕವಾಗಿ ಊಹಿಸಲಾಗದಿರಲೂ (ಅಥವಾ ಮುನ್ನೋಡಲಾಗದಿರಲು) ಇದೂ ಒಂದು ಕಾರಣವಾಗಿರಬಹುದೇ ಹೊರತು ಅವುಗಳ ಸೈದ್ಧಾಂತಿಕ ಪೂರ್ವಗ್ರಹಗಳಲ್ಲ. ಏಕೆಂದರೆ ಈ ವಿಷಯದಲ್ಲಿ ಅವುಗಳ ಅಳಿವು-ಉಳಿವುಗಳನ್ನು ನಿರ್ಧರಿಸುವ ವಿಶ್ವಾಸಾರ್ಹತೆಯ ಅಂಶವೂ ಅಡಗಿರುತ್ತದೆ.

ಇನ್ನು ಮೋದಿ ಅವರು ಅಭಿವೃದ್ಧಿ ವಿಚಾರಗಳ ಆಧಾರದ ಮೇಲೆ ಚುನಾವಣೆ ಎದುರಿಸಿ ಗೆದ್ದಿದ್ದಾರೆ ಎಂಬ ಸೂರ್ಯಪ್ರಕಾಶರ ಮಾತು ಮೇಲ್ಮೈ ಸತ್ಯ ಮಾತ್ರ ಎಂದೆನಿಸುತ್ತದೆ. ಹೆಚ್ಚೆಂದರೆ ಅರ್ಧ ಸತ್ಯ ಮಾತ್ರ. ಹೀಗೆ ಹೇಳಲು ಎರಡು ಮುಖ್ಯ ಕಾರಣಗಳಿವೆ. ಒಂದು: ಬಿಜೆಪಿ ಈ ಚುನಾವಣೆಗಳಿಗೆ ಅಭ್ಯರ್ಥಿಗಳನ್ನು ಆಯ್ದ ಬಗೆಯ ಬಗ್ಗೆ, ಅದು ನಡೆಸಿದ ಪ್ರಚಾರದ ರೀತಿ ನೀತಿಗಳ ಬಗ್ಗೆ ವಿವಿಧ ಮಾಧ್ಯಮಗಳಲ್ಲಿ ಬಂದ ವರದಿಗಳ ಒಂದು ಸಾಮಾನ್ಯ ಅಂಶವೆಂದರೆ, ಈ ಪಕ್ಷವು, ವಿರೋಧ ಪಕ್ಷಗಳು ಯಾವ ಜಾತಿಗಳ ಬೆಂಬಲವನ್ನು ಸಂಘಟಿಸಹೊರಟಿದ್ದವೋ ಆ ಜಾತಿಗಳ ಹೊರತಾಗಿ ಇತರ ಜಾತಿಗಳ ಬೆಂಬಲದಿಂದ (ಅಂದರೆ 'ಜಾಟವ'ರಲ್ಲದ ದಲಿತ ಮತ್ತು ಯಾದವ-ಮುಸ್ಲಿಮೇತರ) ಜಾತಿಗಳ ಬೆಂಬಲವನ್ನು ಸಂಘಟಿಸುವ ಸುಯೋಜಿತ ಪ್ರಯತ್ನ ಮಾಡಿತು. ಅಂದರೆ ಅಭಿವೃದ್ಧಿಪರ ಘೋಷಣೆಗಳ ಮರೆಯಲ್ಲಿ ಬಿಜೆಪಿ ಮಾಡಿದ್ದೂ ತನ್ನ ವಿರೋಧ ಪಕ್ಷಗಳಂತೆಯೇ ಜಾತಿ ರಾಜಕಾರಣವನ್ನೇ. ಇದೇ ಬಿಜೆಪಿಯ ಭಾರಿ ಗೆಲುವಿನ ಹಿಂದಿನ ಗುಟ್ಟು ಎಂದು ಚುನಾವಣೆಗಳ ಸಾಮಾಜಿಕ ವಿಶ್ಲೇಷಣೆಗಳು ಹೇಳುತ್ತಿವೆ. ಹಾಗಾಗಿ 'ಈ ಚುನಾವಣಾ ಫಲಿತಾಂಶ ವಿಭಜನಕಾರಿ ಶಕ್ತಿಗಳನ್ನು ಉತ್ತೇಜಿಸುವ ಪಕ್ಷಗಳ ವಿರುದ್ಧ ಭಾವನೆ ಹರಳುಗಟ್ಟುತ್ತಿರುವ ಸೂಚನೆಯೂ ಆಗಿದೆ' ಎಂಬ ಲೇಖಕರ ಮಾತು ಅಷ್ಟೇನೂ ವಿಶ್ವಾಸಾರ್ಹವೆನಿಸುವುದಿಲ್ಲ.

ಇನ್ನು ಅಭಿವೃದ್ಧಿ ಎಂಬುದು ಈ ಚುನಾವಣೆಗಳಲ್ಲಿ ಬಿಜೆಪಿಗೆ ತನ್ನ ನಿಜ ಉದ್ದೇಶವನ್ನು ಮರೆಮಾಚುವ ಒಂದು ತಂತ್ರವಾಗಿತ್ತು ಎಂದು ಭಾವಿಸಲು ಇನ್ನೂ ಒಂದು ಕಾರಣವಿದೆ. ಅದೇಂದರೆ, ಆ ಪಕ್ಷ ಚುನಾವಣೆಗೆ ಮುನ್ನ ತನ್ನ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸದೆ, ಚುನಾವಣೆಗಳ ನಂತರ ಎಲ್ಲರ (ಬಿಜೆಪಿಯವರದ್ದೂ ಸೇರಿ) ನಿರೀಕ್ಷೆಯನ್ನೂ ಮೀರಿ ಯೋಗಿ ಆದಿತ್ಯನಾಥ ಎಂಬ ಭಯಂಕರ ಕಟ್ಟರ್ ಹಿಂದುತ್ವವಾದಿಯನ್ನು ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಿರುವುದು. ಈ ಆದಿತ್ಯನಾಥರು ಬಿಜೆಪಿಯಲ್ಲಿರುವುದು ನೆಪಕ್ಕೆ ಮಾತ್ರ. ಅವರು ಎಂದೂ ಅದರ ಶಿಸ್ತನ್ನಾಗಲೀ, ಮಾರ್ಗಸೂಚಿಗಳನ್ನಾಗಲೀ ಮನ್ನಿಸದೆ ಮಾತಾಡುವ ಮತ್ತು ಕಾರ್ಯಾಚರಣೆಗಳನ್ನು ನಡೆಸುವ ಸಾಮಂತಶಾಹಿ ಪ್ರವೃತ್ತಿಯ (ಇವರು ಗೋರಕ್ಷನಾಥ

ಮಠದ ಮಹಂತರೂ ಅಲ್ಲವೆ?) ಮನುಷ್ಯ ಎಂಬುದು ಈತನ ವಿಘಟನಾಕಾರಿ ರಾಜಕೀಯ ಚರಿತ್ರೆಯನ್ನು ಗಮನಿಸಿದವರಿಗೆ ಗೊತ್ತಾಗುತ್ತದೆ. ಹಾಗಾಗಿ, ಸೂರ್ಯಪ್ರಕಾಶರು ಹೇಳುವ ಹಾಗೆ ಮೋದಿಯವರು ಅಭಿವೃದ್ಧಿಯನ್ನೇ ಮುಂದಿಟ್ಟುಕೊಂಡು ಚುನಾವಣಾ ಪ್ರಚಾರ ಮಾಡಿದರೆಂಬುದು ನಿಜವೇ ಆಗಿದ್ದರೆ, ಚುನಾವಣಾ ಕಣದಲ್ಲೇ ಇರದಿದ್ದ ಈ ಆದಿತ್ಯನಾಥರನ್ನೇಕೆ ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಬೇಕಿತ್ತು? ನಿಜವಾಗಿ ಯಾರ ಅಭ್ಯರ್ಥಿ ಇವರು ಎಂಬುದನ್ನು ಸೂರ್ಯಪ್ರಕಾಶರೇ ಹೇಳಬೇಕು. ಹಾಗಾಗಿ ಈ ಆದಿತ್ಯನಾಥರಿಗೆ ಅಭಿವೃದ್ಧಿಯ ಮಾರ್ಗಸೂಚಿ ನೀಡಲಾಗಿದೆ ಎಂಬ ಇವರ ಮಾತು ಸದ್ಯಕ್ಕಂತೂ ಕಣ್ಣೊರೆಸುವ ಮಾತಾಗಿ ಮಾತ್ರ ಕಾಣುತ್ತದೆ. ಇದರ ಪರಿಣಾಮಗಳನ್ನು ಮುಂದೆ ಕಾದು ನೋಡಬೇಕಾಗಿದೆಯಷ್ಟೆ.

ಇನ್ನು ಸೂರ್ಯಪ್ರಕಾಶ್ ಅವರು 'ಮೂರು ದಶಕಗಳ ನಂತರ ಬಲಿಷ್ಠವಾದ, ಎಲ್ಲರನ್ನೂ ಒಳಗೊಳ್ಳುವ, ಬಲಾಢ್ಯ ನಾಯಕನನ್ನು ಹೊಂದಿರುವ ರಾಷ್ಟ್ರೀಯ ಪಕ್ಷದ ಪರವಾಗಿ ದೇಶದ ಮನಸ್ಸು ತಿರುಗುತ್ತಿದೆ' ಎಂಬ ನಿರ್ಣಾಯಕ ಮಾತಿನೊಂದಿಗೆ ತಮ್ಮ ಬರಹವನ್ನು ಮುಗಿಸಿದ್ದಾರೆ. ಆದರೆ ಇಂತಹ ಅಂತಿಮ ತೀರ್ಮಾನಕ್ಕೆ ಬರುವಷ್ಟು ಸಮರ್ಥನೆ ಅವರ ಬರಹದಲ್ಲಿ ಇದ್ದಂತಿಲ್ಲ. ಅವರು ಮೋದಿಯವರನ್ನು ಬಡವರ ಮನ ಹೊಕ್ಕಿರುವ ಬಲಾಢ್ಯ ನಾಯಕನೆಂದು ನಿರೂಪಿಸುತ್ತಾ, ಈ ಸಂಬಂಧ ಅವರನ್ನು ಇಂದಿರಾಗಾಂಧಿಯವರಿಗೆ ಹೋಲಿಸುತ್ತಾ, ಈ ಹೋಲಿಕೆ ಇಲ್ಲಿಗೇ ನಿಲ್ಲುವುದೆಂದು ಹೇಳುತ್ತಾರೆ. ಕಾರಣ, ಅವರ ಪ್ರಕಾರ ಇಂದಿರಾಗಾಂಧಿಯವರ ಬಳಿ ಇಲ್ಲದಿದ್ದ ಬಡತನ ನಿವಾರಣೆಯ ಅಸ್ತ್ರ ಮೋದಿಯವರ ಬಳಿ ಇದೆಯಂತೆ. ಇದನ್ನು ಒಪ್ಪುವ ಕಾಲ ಇನ್ನೂ ಬಂದಿಲ್ಲವೆಂದೇ ಇಲ್ಲಿ ಹೇಳಬೇಕು.

ಮೊದಲಾಗಿ ಈ ಸಂಬಂಧ ಇಂದಿರಾ–ಮೋದಿ ಹೋಲಿಕೆಯೇ ಅಸಮಂಜಸ. ಏಕೆಂದರೆ, ಇಬ್ಬರೂ ಬಹು ಭಿನ್ನ ಆರ್ಥಿಕತೆಗಳಲ್ಲಿ ಕ್ರಿಯಾಶೀಲರಾಗಿದ್ದ ರಾಜಕಾರಣಿಗಳು. ಹಾಗಾಗಿ ಅವರ ರಾಜಕೀಯ ಆರ್ಥಿಕ ಅಸ್ತ್ರಗಳನ್ನು ಜೊತೆಯಾಗಿ ಪರಿಶೀಲಿಸುವುದು ಅಸಮಂಜಸವೆನಿಸುತ್ತದೆ. ಮೋದಿಯವರು ಬಡವರ ಪರವಾಗಿದ್ದಾರೆಂದು ನಿರೂಪಿಸಲು ಲೇಖಕರು ನೀಡುವ ಕಾರ್ಯಕ್ರಮಗಳ ಉದಾಹರಣೆಗಳು (ಇನ್ನೂ ಅಂತಿಮವಾಗಿ ಮೌಲ್ಯಮಾಪನವಾಗಬೇಕಾದ ನೋಟು ಅಮಾನ್ಯೀಕರಣದ ಹೊರತಾಗಿ) ಇವರು ಬಹುವಾಗಿ ದೂಷಿಸುವ ಮನಮೋಹನ ಸಿಂಗ್ ಅವರು ರೂಢಿಸಿದ ಆರ್ಥಿಕತೆಯ ಉಪ ಉತ್ಪನ್ನಗಳೇ ಆಗಿವೆ– ಅದರ 'ಎಲ್ಲರ ಒಳಗೊಳ್ಳುವಿಕೆ'ಯ ನೀತಿಯೂ ಸೇರಿದಂತೆ. ಹಾಗೆ ನೋಡಿದರೆ ಮೋದಿಯವರು ಅನುಸರಿಸುತ್ತಿರುವುದೂ ಮನಮೋಹನ ಸಿಂಗ್ ಅವರ ಮುಕ್ತ ಮಾರುಕಟ್ಟೆ ಆರ್ಥಿಕತೆಯ ಮೂಲ ಮಾದರಿಯನ್ನೇ. ಅದರ ದುಷ್ಟ ಲಕ್ಷಣವಾದ ಬಡತನ ಮತ್ತು ಶ್ರೀಮಂತಿಕೆಯ ಅಂತರಗಳನ್ನು ಹೆಚ್ಚಿಸುತ್ತಾ, ಅದು ಸಮಾಜವನ್ನು ಹೊಸ ಹೊಸ ನೆಲೆಗಳಲ್ಲಿ ಹೆಚ್ಚು ಹೆಚ್ಚು ಒಡೆಯುತ್ತಾ, ಅದರ ಪರಿಣಾಮವಾದ ಹೊಸ

ಬಗೆಯ ತಾರತಮ್ಯಗಳು, ಅಶಾಂತಿ ಮತ್ತು ಹಿಂಸೆಯ ಸೃಷ್ಟಿಯೂ ಮುಂದುವರೆದಿದೆ. ಬಿಜೆಪಿ ಇದನ್ನೆಲ್ಲ ರಾಷ್ಟ್ರೀಯತೆಯ ಮರು ನಿರೂಪಣೆಯ ಅಬ್ಬರದಲ್ಲಿ ಮರೆಮಾಚುವ ಪ್ರಯತ್ನ ಮಾಡುತ್ತಿದೆ.

ಈ ದೃಷ್ಟಿಯಿಂದ ಮೋದಿಯವರ ಪರವಾಗಿ ಈ ಸಂದರ್ಭದಲ್ಲಿ ಹೇಳಬಹುದಾದ ಒಂದು ಶ್ಲಾಘನೆಯ ಮಾತೆಂದರೆ, ಅವರ ಸಚಿವ ಸಂಪುಟದಲ್ಲಿ ಭ್ರಷ್ಟಾಚಾರದ ಸುಳಿವಿಲ್ಲ ಎಂಬುದು. ಆದರೆ ಇದೇ ಮಾತನ್ನು ಅವರ ಆಡಳಿತದ ಬಗ್ಗೆ ಹೇಳಲಾಗದು. ಏಕೆಂದರೆ, ನೋಟು ರದ್ದತಿಯ ನಂತರ ವಿವಿಧ ಇಲಾಖೆಗಳಲ್ಲಿ ನಡೆದ ಕೋಟ್ಯಂತರ ರೂಪಾಯಿಗಳ ನೋಟು ಬದಲಾವಣೆಯ ಹಳವಂಡಗಳು ಇದಕ್ಕೆ ಸಾಕ್ಷಿಯಂತಿವೆ. ಜೊತೆಗೆ ಅವರು ತಮ್ಮ ಅಧಿಕಾರಾವಧಿಯ ಅರ್ಧದಷ್ಟನ್ನು ಪೂರ್ಣಗೊಳಿಸಿದ್ದರೂ, ಈ ಹಿಂದಿನ ಕಾಂಗ್ರೆಸ್ ನೇತೃತ್ವದ ಸರ್ಕಾರ ವಿಫಲವಾಗಿದೆ ಎಂದು ಪ್ರಚಾರ ಮಾಡಿ ಅಧಿಕಾರಕ್ಕೆ ಬಂದ ಯಾವ ವಿಷಯದಲ್ಲೂ (ಉದಾ: ವಿದೇಶಗಳಲ್ಲಿರುವ ಕಪ್ಪು ಹಣ ವಾಪಸ್ ತರುವುದು, ಕಾಶ್ಮೀರ ಮತ್ತು ನಕ್ಸಲ್ ಸಮಸ್ಯೆಗಳನ್ನು ಬಗೆಹರಿಸುವುದು, ಉದ್ಯೋಗ ಸೃಷ್ಟಿ ಮಾಡುವಂತಹ ಬೆಳವಣಿಗೆಯ ಮಾದರಿಯನ್ನು ರೂಪಿಸಿ ಜಾರಿಗೆ ತರುವುದು ಇತ್ಯಾದಿ) ಸಫಲತೆಯ ಸೂಚನೆಗಳನ್ನು ನೀಡಿಲ್ಲ. ಹಾಗಾಗಿ ಮೋದಿಯವರ ರಾಜಕೀಯದ ಗುಣಾತ್ಮಕತೆ ಮತ್ತು ಭವಿಷ್ಯದ ಬಗ್ಗೆ ಯಾವುದೇ ನಿರ್ಣಾಯಕ ಮಾತನ್ನಾಡುವ ಕಾಲ ಇನ್ನೂ ಬಂದಿಲ್ಲವೆಂದೇ ಹೇಳಬೇಕು.

ಕೊನೆಯದಾಗಿ, ಸಂಘ ಪರಿವಾರದವರ ಮಧ್ಯೆ ಉದಾರವಾದಿ ಪ್ರಜಾಪ್ರಭುತ್ವವಾದಿ ರಾಜಕೀಯ ವ್ಯಾಖ್ಯಾನಕಾರರೆಂದೇ ಹೆಸರಾದ ಎ. ಸೂರ್ಯಪ್ರಕಾಶ್ ಅವರ ಲೇಖನದ ಆರಂಭದ ವಾಕ್ಯದ ಹೊರತಾಗಿ ಉದ್ದಕ್ಕೂ ಪಕ್ಷದ ಉಲ್ಲೇಖವಿರಬೇಕಾದೆಡೆಯೆಲ್ಲ ಮೋದಿ ಎಂದೇ ಉಲ್ಲೇಖಿತವಾಗಿರುವುದು ನಿಜವಾಗಿಯೂ ಆತಂಕಕಾರಿ ಸಂಗತಿ.

('ಪ್ರಜಾವಾಣಿ' ಪ್ರಕಟಿಸದ ಪತ್ರ)

'ಪ್ರಜಾವಾಣಿ' ಸಂಪಾದಕರಿಗೆ ಬರೆದ ಪತ್ರ

ಮಾನ್ಯ ಸಂಪಾದಕರೇ,

ಕಳೆದ ತಿಂಗಳ ೨೨ರಂದು ತಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಎ. ಸೂರ್ಯಪ್ರಕಾಶ ಅವರ ಅಂಕಣ ಬರಹಕ್ಕೆ ಅಂದೇ ನಾನೊಂದು ಪ್ರತಿಕ್ರಿಯೆ ಬರೆದು ಕಳಿಸಿದ್ದೆ. ಅದು ಈವರೆಗೆ ಪ್ರಕಟವಾಗಿಲ್ಲ ಮತ್ತು ಮುಂದೆ ಪ್ರಕಟವಾಗುವುದರಿಂದ ಯಾವ ಪ್ರಯೋಜನವೂ ಇಲ್ಲ. ಏಕೆಂದರೆ, ಮೂಲ ಲೇಖನದ ವಿಶ್ಲೇಷಣೆ ಈ ಹೊತ್ತಿಗೆ ಓದುಗರ ಸ್ಮೃತಿಯಿಂದ ಮಸುಕಾಗಿರುತ್ತದೆ.

ಯಾವುದೇ ಬರಹವನ್ನು ಪ್ರಕಟಿಸದಿರುವ ಹಕ್ಕು ಸಂಪಾದಕರಿಗಿರುತ್ತದೆ ಎಂಬುದನ್ನು ಒಪ್ಪಿಯೇ ಈ ಕೆಲವು ಮಾತುಗಳನ್ನು ಬರೆಯುತ್ತಿದ್ದೇನೆ. ಯಾವುದೇ ಪತ್ರಿಕೆಯು ಮಾಲೀಕತ್ವದಿಂದ ಖಾಸಗಿಯಾದರೂ, ಅದೊಂದು ಸಾರ್ವಜನಿಕ ವೇದಿಕೆಯೇ ಆಗಿರುತ್ತದೆ ಎಂಬುದನ್ನು ತಾವೂ ಒಪ್ಪುವಿರಿ ಎಂದು ಭಾವಿಸುವೆ. ಹಾಗಾಗಿ ಅಲ್ಲಿ ಬರುವ ವಿಚಾರಗಳು ಸಾರ್ವಜನಿಕ ಚರ್ಚೆಗೆ ಒಳಗಾಗಬೇಕು ಮತ್ತು ಅದಕ್ಕೆ ಸಂಪಾದಕರು ಅವಕಾಶ ಮಾಡಿಕೊಡಬೇಕು. ವಿಶೇಷವಾಗಿ ಆ ವಿಚಾರವು ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ್ದು, ವಿಷಯದ ಒಂದು ಮುಖವನ್ನು ಮಾತ್ರ ಬಿಂಬಿಸುವಂತಿದ್ದಾಗ.

ನನ್ನ ಹಳೆಯ ಗೆಳೆಯರೂ ಆದ ಸೂರ್ಯಪ್ರಕಾಶರು ತಮ್ಮ ಈ ಅಂಕಣದಲ್ಲಿ ತಮ್ಮ ರಾಜಕೀಯ ಒಲವನ್ನು ಪುಷ್ಟೀಕರಿಸುವಂತಹ ಒಂದು ರಾಜಕೀಯ ವಿಶ್ಲೇಷಣೆಯನ್ನು ಮಂಡಿಸಿದ್ದರು. ಇದನ್ನು ಸಾರ್ವಜನಿಕ ಚರ್ಚೆಗಳಿಗೆ ಸಂಬಂಧಿಸಿದ ಆಧುನಿಕ ಪರಿಭಾಷೆಯಲ್ಲಿ 'ಸತ್ಯ'ದ ಕಾರ್ಖಾನೆಯ ಒಂದು ಉತ್ಪನ್ನ ಎಂದು ಕರೆಯುತ್ತಾರೆ. (ಈ ಪರಿಭಾಷೆಯ ಪ್ರಕಾರ ಎಲ್ಲ ಮಾಧ್ಯಮಗಳೂ 'ಸತ್ಯ'ದ ಕಾರ್ಖಾನೆಗಳೇ!) ಅಂತಹ ಸಂದರ್ಭದಲ್ಲಿ ಇಂತಹ 'ಸತ್ಯ'ದ ಹಿಂದಿರುವ ಉತ್ಪಾದನಾ ದೋಷಗಳನ್ನು ಸೂಚಿಸುವ ಹಕ್ಕು ಸಾರ್ವಜನಿಕರಿಗೆ–ಈ ಸಂದರ್ಭದಲ್ಲಿ ತಮ್ಮ ಓದುಗರಿಗೆ–ಇರುತ್ತದೆ. ಆದರೆ ಅದನ್ನು ನೀವು ನನ್ನ ಪ್ರತಿಕ್ರಿಯೆಯನ್ನು ಪ್ರಕಟಿಸದಿರುವ ಮೂಲಕ ನಿರಾಕರಿಸಿದ್ದೀರಿ ಮತ್ತು ರಾಷ್ಟ್ರ ಜೀವನದ ದಿಕ್ಕು ಬದಲಾಗುತ್ತಿರುವ ಈ ಸಂದರ್ಭದಲ್ಲಿ ಅದಕ್ಕೆ ಸಂಬಂಧಿಸಿದಂತೆ ಒಂದು ಅರ್ಧ ಸತ್ಯಕ್ಕೆ ಪ್ರಚಾರ ನೀಡಿದ್ದೀರಿ. ಇದು ಪತ್ರಿಕಾ ಧರ್ಮವಲ್ಲ ಎಂದು ನಾನು ನಿಮಗೆ ನಮ್ರವಾಗಿ ತಿಳಿಸಲು ಇಚ್ಛಿಸುತ್ತೇನೆ.

ನನ್ನ ಬರಹದ ಗುಣಮಟ್ಟ ಮತ್ತು ಗಾತ್ರದ ಕಾರಣವನ್ನು ತಾವು ನೀಡುವುದಿಲ್ಲ ಎಂದು ಭಾವಿಸುವೆ. ನನ್ನ ಬರಹದ/ವಿಶ್ಲೇಷಣೆಯ ಗುಣಮಟ್ಟವನ್ನು ತಮ್ಮ ಪತ್ರಿಕೆಯಲ್ಲಿ ದಿನನಿತ್ಯವೂ ಪ್ರಕಟವಾಗುವ ಬರಹಗಳ ಗುಣಮಟ್ಟದೊಡನೆ ತೂಗಿ ನೋಡಿಕೊಳ್ಳುವಷ್ಟು ಪ್ರಬುದ್ಧತೆ ನನಗಿದೆ. ಇನ್ನು ಗಾತ್ರದ ಬಗ್ಗೆ ಹೇಳುವುದಾದರೆ, ಇದು ನಿಮ್ಮ ಒಲವು–ನಿಲುವುಗಳ ಪ್ರಕಾರ ಅಪಾರ ಪ್ರಮಾಣದಲ್ಲಿ ರಿಯಾಯಿತಿ ಪಡೆಯುವುದನ್ನು ನಾನು ಗಮನಿಸದೇ ಇಲ್ಲ. ಮೊನ್ನೆ 'ಸ್ವರಾಜ್ ಇಂಡಿಯಾ' ಬಗ್ಗೆ ದೇವನೂರ ಮಹಾದೇವ ಬರೆದುದನ್ನು (ಮತ್ತು ಎಸ್.ಎಂ. ಕೃಷ್ಣ ಅವರ ಪಕ್ಷಾಂತರ ಕುರಿತಂತೆ ತ್ಯಾಗರಾಜ್ ಬರೆದುದನ್ನು) ಪ್ರಕಟಿಸುವ ಮೂಲಕ ತಮಗೆ ಗಾತ್ರವಾಗಲೀ ರಾಜಕೀಯ ಸಮದೂರ ತತ್ವವಾಗಲೀ ಯಾವಾಗಲೂ ಮುಖ್ಯವೇನಲ್ಲ ಎಂಬುದನ್ನು ಸೂಚಿಸಿದ್ದೀರಿ. ಹಾಗಾಗಿ ನನ್ನ ಬರಹವನ್ನು ಪ್ರಕಟಿಸದಿರಲು ನಿಜವಾದ ಕಾರಣವೇನು ಎಂಬುದು ನನಗಿನ್ನೂ ಗೊತ್ತಾಗಿಲ್ಲ. ತಿಳಿಸಬಹುದಾದರೆ ದಯವಿಟ್ಟು ತಿಳಿಸಿ.

ವಂದನೆಗಳೊಂದಿಗೆ,

ಡಿ.ಎಸ್. ನಾಗಭೂಷಣ, ಶಿವಮೊಗ್ಗ

(ಏಪ್ರಿಲ್ ೧, ೨೦೧೭)

ರಾಜಕಾರಣಿಗಳ ಹೊಟ್ಟೆಯ ಹಾಡು-ಪಾಡುಗಳು!

ರಾಜ್ಯ ಸರ್ಕಾರದ ಹಿರಿಯ ಸಚಿವ ಡಿ.ಕೆ. ಶಿವಕುಮಾರ್ ಮತ್ತು ಅವರ ಸಂಬಂಧಿಕರ, ಸ್ನೇಹಿತರ ಹಾಗೂ ಆಪ್ತ ಸಿಬ್ಬಂದಿಯವರ ಮನೆ-ಕಛೇರಿಗಳ ಮೇಲೆ ವರಮಾನ ತೆರಿಗೆ ಇಲಾಖೆಯವರ ದಾಳಿ ನಡೆದಿದೆ. ಮೂರು ದಿನಗಳ ನಿರಂತರ ದಾಳಿಗಳ ನಂತರ ಇಲಾಖೆಯ ಮೂಲಗಳು ಶಿವಕುಮಾರ್ ಬಳಿ ಮುನ್ನೂರು ಕೋಟಿ ರೂಪಾಯಿಗಳ ಅಕ್ರಮ ಆಸ್ತಿ ಪತ್ತೆಯಾಗಿದೆ ಎಂಬ ಸುದ್ದಿ ನೀಡಿವೆ. ಆದರೆ ರಾಜ್ಯದ ಜನತೆ ಈ ಸುದ್ದಿಯನ್ನೋದಿ ನಕ್ಕು ಸುಮ್ಮನಾಗಿದೆ! ಏಕೆಂದರೆ, ರಾಜ್ಯದ ರಾಜಕಾರಣವನ್ನು ಹಲವು ವರ್ಷಗಳಿಂದ ಗಮನಿಸುತ್ತಾ ಬಂದಿರುವ ಸಾಮಾನ್ಯ ಜನತೆಗೆ ಇದು ಬೆಚ್ಚಿಬೀಳಿಸುವಂತಹ ಸುದ್ದಿಯಿರಲಿ, ಸಾಮಾನ್ಯ ಸುದ್ದಿಯೂ ಅಲ್ಲ. ಅವರು ಆಶ್ಚರ್ಯಪಟ್ಟಿದ್ದಾರೆ, ನಿಜ; ಆದರೆ ಆ ಆಶ್ಚರ್ಯ ಬೇರೆ ಎರಡು ಕಾರಣಗಳಿಗಾಗಿ. ಒಂದು, ಅಂತೂ ದಾಳಿ ಮಾಡಿದರಲ್ಲಾ ಎಂದು! ಎರಡು, ಸಿಕ್ಕಿದ್ದು ಮುನ್ನೂರು ಕೋಟಿ ಅಕ್ರಮ ಆಸ್ತಿ ಮಾತ್ರವಾ ಎಂದು! ಈ ಆಶ್ಚರ್ಯಗಳ ಜೊತೆಗೇ ಒಂದು ಸಹಜ ಮತ್ತು ಸಮರ್ಥನೀಯ ಸಿನಿಕತೆಯ ನಿಟ್ಟುಸಿರೂ ಜನತೆಯಿಂದ ಹೊಮ್ಮಿದೆ: ಈ ಪ್ರಕರಣ ನಮ್ಮ ಕಾಲಕ್ಕಂತೂ ಇತ್ಯರ್ಥವಾಗಲಾರದು ಎಂದು!

ಈ ದಾಳಿಯನ್ನು ಕಾಂಗ್ರೆಸ್ ಪಕ್ಷ ಸೇಡಿನ ರಾಜಕಾರಣ ಎಂದಿದೆ. ಅದು ಸಹಜ. ಜನ ಸೇಡೋ ಮತ್ತೊಂದೋ ಈ ರಾಜಕೀಯ ಪಕ್ಷಗಳು ಪರಸ್ಪರ ಸೇಡು ತೀರಿಸಿಕೊಳ್ಳುತ್ತಲಾದರೂ ನಾಶವಾಗಲಿ ಎಂದು ಹಾರೈಸಿದರೆ ಆಶ್ಚರ್ಯವಿಲ್ಲ. ಇರಲಿ. ಕಾಂಗ್ರೆಸ್‌ನವರು ಸೇಡಿನ ಆರೋಪವನ್ನಾದರೂ ಮಾಡಿ ತಮ್ಮ ರಾಜಕೀಯ ಕ್ರಿಯಾಶೀಲತೆಯನ್ನು ಮೆರೆಯುತ್ತಿದ್ದಾರೆ. ನಮ್ಮ ರಾಜ್ಯದ ಬಿಜೆಪಿ ನಾಯಕ ಮಣಿಗಳನ್ನು ನೋಡಿ: ತುಟಿಪಿಟಿಕ್ ಎನ್ನುತ್ತಿಲ್ಲ! ಏಕೆ? (ಡಿಕೆಶಿ ಮುಸ್ಲಿಮರಲ್ಲವಾದ್ದರಿಂದ ಅವರ ರಾಜೀನಾಮೆ ಕೇಳುವ ಅಗತ್ಯವಿಲ್ಲ!) ಡಿಕೆಶಿ ಮಾಯಾಜಾಲ ಸರ್ವಪಕ್ಷಗಳಿಗೂ ಹಬ್ಬಿಕೊಂಡಿದೆ!

ಜನಾರ್ದನ ರೆಡ್ಡಿ ಮಗಳ ಮದುವೆಯ ವೈಭವದ ಅಶ್ಲೀಲತೆಯನ್ನೂ, ನಿರ್ಲಜ್ಜತನವನ್ನೂ ಇಡೀ ರಾಜ್ಯವೇನು, ದೇಶವೇ ಅಸಹ್ಯದಿಂದ ನೋಡುತ್ತಿದ್ದಾಗ ಆ ಮದುವೆಗೆ ಅತಿಥಿಗಳಾಗಿ ಕಾಂಗ್ರೆಸ್ ಕಡೆಯಿಂದ ಹೋಗಿ ಬಂದವರು ಇದೇ ಶಿವಕುಮಾರ್ ಮತ್ತು ಅವರ ಜೊತೆಗೆ ಜಿ. ಪರಮೇಶ್ವರ್! ಈ ಪರಮೇಶ್ವರ್ ಇದೇ ಜನಾರ್ದನ ರೆಡ್ಡಿ 'ಬಳ್ಳಾರಿ ರಿಪಬ್ಲಿಕ್' ರಚಿಸಿಕೊಂಡು ನಡೆಸಿದ್ದನೆಂದು ಹೇಳಲಾಗುವ ಬ್ರಹ್ಮಾಂಡ ಭ್ರಷ್ಟಾಚಾರದ ವಿರುದ್ಧ 'ಬಳ್ಳಾರಿ ಚಲೋ' ಎಂಬ ರಾಜಕೀಯ ಆಂದೋಲನವನ್ನೇ ನಡೆಸಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮತ್ತು ಅದಕ್ಕಿಂತ ಮುಖ್ಯವಾಗಿ ಭ್ರಷ್ಟಾಚಾರ ಪ್ರಕರಣಗಳ ಮೇಲುಸ್ತುವಾರಿ ನೋಡಿಕೊಳ್ಳುವ ಹೊಣೆ ಹೊತ್ತಿದ್ದ ರಾಜ್ಯದ ಗೃಹಮಂತ್ರಿಯಾಗಿದ್ದವರು!

ಇವರಿಬ್ಬರೂ ತಾವು ಮದುವೆಗೆ ಅತಿಥಿಗಳಾಗಿ ಹೋಗಿದ್ದನ್ನು ಸಮರ್ಥಿಸಿಕೊಂಡದ್ದು, ತಾವು ಜನಾರ್ಧನ ರೆಡ್ಡಿಯವರ ವೈಯಕ್ತಿಕ ಸ್ನೇಹಿತರಾಗಿ ಹೋಗಿದ್ದೆವು ಎಂಬ ಕಾರಣ ನೀಡಿ! ಅಂದರೆ, ಈ ಕಾಂಗ್ರೆಸ್ಸಿಗರಿಗೆ ತಾವು ಯಾರ ವಿರುದ್ಧ ರಾಜ್ಯ ಸಂಪನ್ಮೂಲಗಳ ಲೂಟಿಯ ಆರೋಪ ಹೊರಿಸಿ ಜನರ ಗಮನ ಸೆಳೆಯುವ ಮೂಲಕ ಮತ ಪಡೆದು ಅಧಿಕಾರಕ್ಕೆ ಬಂದರೋ, ಆ ಲೂಟಿ-ಆರೋಪಗಳ ಬಗ್ಗೆಯೇ ನಂಬಿಕೆ ಇಲ್ಲ! ಸಿದ್ದರಾಮಯ್ಯ ನಿಜವಾಗಿ ಜನತೆಯ ಮುಖ್ಯಮಂತ್ರಿಯಾಗಿದ್ದರೆ ಅಂದೇ ಈ ಇಬ್ಬರನ್ನೂ ತಮ್ಮ ಸಚಿವ ಸಂಪುಟದಿಂದ ವಜಾ ಮಾಡಬೇಕಿತ್ತು! ಈಗಲಾದರೂ ಮಾಡುತ್ತಾರೋ ಇಲ್ಲವೋ ಗೊತ್ತಿಲ್ಲ! ಶಿವಕುಮಾರ್‌ರ ಅಮ್ಮ, ತಮ್ಮ ಮೇಲೆ ಹರಿಸಿದ್ದ ಆರೋಪ ಮತ್ತು ಬೈಗುಳಗಳ ಸುರಿಮಳೆಯನ್ನು ಬದಿಗೆ ಸರಿಸಲು ಶಿವಕುಮಾರ್ ಅವರ ಕ್ಷಮಾಪಣಾ ಪತ್ರವೊಂದೇ ಅವರಿಗೆ ಸಾಕಾಗಿರಬೇಕು!

ಇದನ್ನೆಲ್ಲ ಬರೆಯಲು ನನಗೆ ನೆಪವಾಗಿದ್ದು, ನಾನು ಸಂಪಾದಿಸುತ್ತಿದ್ದ 'ಹೊಸ ಮನುಷ್ಯ' ಪತ್ರಿಕೆಯ ನನ್ನ ಸಂಪಾದಕೀಯ ಬರಹಗಳ ಸಂಗ್ರಹವಾದ 'ಕಾಲಕ್ರಮ' ಪುಸ್ತಕದ ಮೇಲೆ ಇಂದು ಹೀಗೇ ಕಣ್ಣಾಡಿಸುತ್ತಿದ್ದಾಗ ಆಕಸ್ಮಿಕವಾಗಿ ನನ್ನ ಕಣ್ಣಿಗೆ ಬಿದ್ದ ಕೆಲವು ಸಾಲುಗಳು. ಈ ಪತ್ರಿಕೆಯ ೨೦೧೩ರ ಸೆಪ್ಟೆಂಬರ್ ಸಂಚಿಕೆಯ 'ಸಮಾಜವಾದದ ಬಕಧ್ಯಾನ' ಎಂಬ ಶೀರ್ಷಿಕೆಯ ಮುಖಪುಟ ಸಂಪಾದಕೀಯದಲ್ಲಿ 'ಮೋದಿಯನ್ನು ಅನಿವಾರ್ಯಗೊಳಿಸುತ್ತಿರುವ ಕಾಂಗ್ರೆಸ್' ಎಂಬ ಉಪಶೀರ್ಷಿಕೆಯಡಿ ಹೀಗೆ ಬರೆದಿದ್ದೆ:

'...ಮೋದಿಯವರ ಕೈಗೆ ಈ ದೇಶ ಹೋಗುವುದಾದರೆ, ಅದರ ಪಾಪವನ್ನು ಕಾಂಗ್ರೆಸ್ಸೇ ಹೊರಬೇಕಾಗುತ್ತದೆ. ಇದು ಈ ಪಕ್ಷ ೧೯೭೫ರಲ್ಲಿ ರಾಷ್ಟ್ರದ ಮೇಲೆ ತುರ್ತು ಪರಿಸ್ಥಿತಿಯನ್ನು ಹೇರಿ ಮಾಡಿದ ಪಾಪಕ್ಕಿಂತ ದೊಡ್ಡ ಪಾಪವಾಗುತ್ತದೆ.

ಇತ್ತೀಚಿನ ವಾದ್ರಾ ಹಗರಣವನ್ನೇ ನೋಡಿ. ಅಧಿಕಾರದಲ್ಲಿರುವ ಕುಟುಂಬಗಳ ಸದಸ್ಯರು ಆ ಅಧಿಕಾರಾವಧಿಯ ಕಾಲದಲ್ಲಾದರೂ ದೊಡ್ಡ ವ್ಯಾಪಾರ-ವ್ಯವಹಾರಗಳಿಂದ ದೂರವುಳಿದಿರಬೇಕು ಎಂಬ ಸಾರ್ವಜನಿಕ ಜೀವನದ ಪ್ರಾಥಮಿಕ ನೀತಿ ಸಂಹಿತೆಯನ್ನು ಅಧಿಕಾರದ ಉನ್ನತ ವಲಯಗಳಲ್ಲೂ ಪಾಲಿಸಲಾಗದಿದ್ದರೆ ಗತಿಯೇನು? ಹಾಗಾಗಿಯೇ ನಮ್ಮ ಡಿ.ಕೆ. ಶಿವಕುಮಾರ್‌ರಂತಹವರು 'ರಾಜಕಾರಣಿಗಳಿಗೇನು ಹೊಟ್ಟೆ ಇಲ್ಲವೇ? ಹೊಟ್ಟೆಪಾಡಿಗಾಗಿ ಅವರು ಏನೂ ಮಾಡಬಾರದೆ?' ಎಂದು ಕೇಳುವಂತಾಗಿರುವುದು. ಆದರೆ ಇವರ ಹೊಟ್ಟೆಗಳು ಮನುಷ್ಯ ಮಾತ್ರರಾದವರ ಹೊಟ್ಟೆಗಳಾಗಿರಲಾರವು ಎಂಬುದೇ ಜನತೆಯ ಆಶ್ಚರ್ಯ ಮತ್ತು ಆತಂಕವಾಗಿದೆ!'

(ಫೇಸ್‌ಬುಕ್ ಬರಹ: ಆಗಸ್ಟ್ ೬, ೨೦೧೭)

ಹೊಸ ಪಕ್ಷಕ್ಕೆ ಬಡಿದಿರುವ ಹಳೆಯ ರೋಗ!

ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಕ್ಷೇತ್ರ ವರುಣಾವನ್ನು ವೈದ್ಯವೃತ್ತಿಯಲ್ಲಿರುವ ತಮ್ಮ ಮಗನಿಗಾಗಿ ಬಿಟ್ಟುಕೊಟ್ಟು ಪಕ್ಕದ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಹೋಗಿದ್ದಾರೆ. ಇದನ್ನು ಕಂಡ ಯಡಿಯೂರಪ್ಪನವರು ತಮ್ಮ ಒಬ್ಬ ಮಗ ರಾಜಕೀಯದಲ್ಲಿರುವುದು ಸಾಲದೆಂಬಂತೆ ತಮ್ಮ ಇನ್ನೊಬ್ಬ ಮಗನನ್ನು ವರುಣಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯನ್ನಾಗಿ ಮಾಡಲು ಸಿದ್ಧತೆ ನಡೆಸಿದ್ದಾರೆ. ಇದು ನಮ್ಮ ಸಾಂಪ್ರದಾಯಿಕ ಪಕ್ಷಗಳಿಗೆ ಬಡಿದಿರುವ ಹಳೆಯ ರೋಗವೆಂದು ಬೈದುಕೊಂಡು ಅಸಹಾಯಕವಾಗಿ ಸುಮ್ಮನಾಗಬೇಕಾದ ಅನಿವಾರ್ಯತೆಯ ಸಂದರ್ಭದಲ್ಲೇ ಈ ಕೆಟ್ಟ ರಾಜಕೀಯ ಸಂಸ್ಕೃತಿಗೆ ಪರ್ಯಾಯ ಒದಗಿಸುವುದಾಗಿ ಹೇಳಿಕೊಂಡು ಸ್ಥಾಪಿತವಾದ 'ಸ್ವರಾಜ್ ಇಂಡಿಯಾ'ಕ್ಕೂ ಈ ರೋಗ ಹತ್ತಿರುವ ಸುದ್ದಿ ಬಂದಿದೆ. ಈ ಪಕ್ಷ ತಾನು ಗೆಲ್ಲಬಹುದಾದ ಏಕೈಕ ಕ್ಷೇತ್ರವೆಂದು ನಂಬಿರುವ ಮೇಲುಕೋಟೆ ಕ್ಷೇತ್ರದಲ್ಲಿ ದಿವಂಗತ ಶಾಸಕ ಪುಟ್ಟಣ್ಣಯ್ಯನವರ ಮಗ ದರ್ಶನ್ ಪುಟ್ಟಣ್ಣಯ್ಯ ಅವರನ್ನು 'ಸ್ವರಾಜ್ ಇಂಡಿಯಾ'ದ ಅಭ್ಯರ್ಥಿಯನ್ನಾಗಿ ಘೋಷಿಸಿದೆ. (ಪ್ರವಾ : ೩.೪.೨೦೧೮)

ಪ್ರಜಾತಾಂತ್ರಿಕ ಮೌಲ್ಯಗಳು ಅಪಾಯದಲ್ಲಿವೆ ಎಂದು ಹೇಳುತ್ತಾ ಅವನ್ನು ಸಂರಕ್ಷಿಸಲು ಹುಟ್ಟಿಕೊಂಡ ಪಕ್ಷವೆಂದು ಜನರನ್ನು ನಂಬಿಸತೊಡಗಿದ್ದ ಈ ಪಕ್ಷದ ನಾಯಕರಲ್ಲೊಬ್ಬರಾಗಿದ್ದ ಪುಟ್ಟಣ್ಣಯ್ಯನವರಿಗೆ ದಶಕಗಳ ಕಾಲ ಹೋರಾಟ-ರಾಜಕಾರಣ ಮಾಡಿಯೂ ತಮ್ಮ ಕ್ಷೇತ್ರದಲ್ಲಿ ತಮ್ಮ ಜಾಗವನ್ನು ತುಂಬಬಲ್ಲ ಒಬ್ಬ ಬದಲಿ ನಾಯಕನನ್ನು ಸೃಷ್ಟಿಸಲಾಗಲಿಲ್ಲ ಎಂದರೆ ಏನು ಹೇಳುವುದು? ಕೊನೆಗೆ ದುರ್ಬಲವಾಗತೊಡಗಿದ್ದ ತಮ್ಮ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡೋ ಏನೋ ಕೆಲ ತಿಂಗಳ ಹಿಂದೆ ಅವರು ತಮ್ಮ ಮಗನನ್ನು ಅಮೆರಿಕಾದಿಂದ ಕರೆಸಿಕೊಂಡು ತಮ್ಮ ರಾಜಕೀಯ ಉತ್ತರಾಧಿಕಾರಿಯನ್ನಾಗಿ ತಯಾರು ಮಾಡಿದ ಪರಿ ಮತ್ತು ಅದನ್ನು ನೋಡಿಯೂ ಸಹಿಸಿಕೊಂಡು ಕೊನೆಗೆ ಈಗ ಒಪ್ಪಿಗೆ ನೀಡಿರುವ ಈ ಪಕ್ಷದ ನಾಯಕರ ವರ್ತನೆ ಅವರಲ್ಲಿ ನಂಬಿಕೆ ಇಟ್ಟಿದ್ದ ಜನರಿಗೆ ಬಗೆದ ದ್ರೋಹವೇ ಆಗಿದೆ.

ಇದನ್ನೆಲ್ಲ ನೋಡಿದಾಗ ರಾಜ್ಯದಲ್ಲಿ ಕುಟುಂಬ ರಾಜಕಾರಣದ ಅಧ್ವರ್ಯುಗಳೆನಿಸಿದ ದೇವೇಗೌಡರು ಹಾಸನ ಜಿಲ್ಲೆಯ ತಮ್ಮ ಪಕ್ಷದ ಯಾವ ನಾಯಕರೂ ಜಿಲ್ಲಾ ಮಟ್ಟದ ನಾಯಕರಾಗಲು ಮುಂದೆ ಬರದ ಕಾರಣ ತಮ್ಮ ಮೊಮ್ಮಗ ಪ್ರಜ್ವಲ್‌ರನ್ನೇ ಜಿಲ್ಲಾ ನಾಯಕತ್ವಕ್ಕಾಗಿ ಘೋಷಿಸುವುದಾಗಿ ಸಾರ್ವಜನಿಕವಾಗಿ ಹೇಳಿಕೊಳ್ಳಲು ಯಾವುದೇ ಸಂಕೋಚಪಡದೇ ಇರುವುದು ಸಹಜವೇ ಆಗಿದೆ. ಇನ್ನು ಇವರ ಪಕ್ಷವನ್ನಷ್ಟೇ ಅಪ್ಪ-ಮಕ್ಕಳ ಪಕ್ಷವೆಂದು ಕರೆಯಲು ಯಾರಿಗೂ ಕಾರಣಗಳೇ ಇಲ್ಲ.

ಹಾಗೆ ನೋಡಿದರೆ ಇಂದು ತಮ್ಮ ಮಕ್ಕಳನ್ನು ರಾಜಕಾರಣಕ್ಕೆ ತಂದಿರುವ ಮತ್ತು ತರುತ್ತಿರುವ ಬಹುಪಾಲು ನಾಯಕರು ಎಪ್ಪತ್ತು-ಎಂಬತ್ತರ ದಶಕಗಳಲ್ಲಿ ನೆಹರೂ-ಇಂದಿರಾ ಗಾಂಧಿಯವರ ಕುಟುಂಬ ರಾಜಕಾರಣದ ವಿರುದ್ಧ ಹರಿಹಾಯುತ್ತಾ ತಮ್ಮ ರಾಜಕೀಯ ಜೀವನವನ್ನು ಆರಂಭಿಸಿದವರೇ! ಆಗ ಬಹುಶಃ ಅವರಿಗೆಲ್ಲ ಕುಟುಂಬಗಳಿರಲಿಲ್ಲ ಅಥವಾ ಇದ್ದರೂ ಮಕ್ಕಳು ಸಣ್ಣವಾಗಿದ್ದವು ಮತ್ತು ಅವರೂ ಸಹ ಅಧಿಕಾರ ಅನುಭವಿಸಿ ನಿರ್ವಹಿಸಲಾಗದಷ್ಟು ಆಸ್ತಿಪಾಸ್ತಿ ಮಾಡಿಕೊಂಡಿರಲಿಲ್ಲ. ಆದರೆ ಈಗ ಈ ಮಕ್ಕಳು ದೊಡ್ಡವರಾಗಿ ಅಪ್ಪನ ಅಧಿಕಾರ-ಆಸ್ತಿಯನ್ನು ಬೆಳೆಸಿ ಉಳಿಸಿಕೊಳ್ಳುವ 'ಜವಾಬ್ದಾರಿ' ಹೊರಬೇಕಾದ ಹಂತ ತಲುಪಿದ್ದಾರೆ! ಕುಟುಂಬ ರಾಜಕಾರಣಕ್ಕೆ ಎರಡು ಕಾರಣಗಳಿವೆ. ಒಂದು : ಯಾವುದಕೂ ಸಲ್ಲದ ಮಕ್ಕಳಿಗೆ ಜೀವನೋಪಾಯದ ದಾರಿ ಕಲ್ಪಿಸುವುದು. ಎರಡು : ಅಪ್ಪ ಅಧಿಕಾರದಲ್ಲಿದ್ದು 'ಸಂಪಾದಿಸಿದ' ಸಂಪತ್ತಿಗೆ ಶಾಸಕನೋ, ಮಂತ್ರಿಯೋ ಆಗಿ ಅವಕಾಶವಿರುವಷ್ಟು ಅದಕ್ಕೆ ಶಾಸನಾತ್ಮಕ ರಕ್ಷಣೆ ಒದಗಿಸುವುದು.

ಆದುದರಿಂದ ಇಂದು ನಮ್ಮ ರಾಜಕಾರಣದ ಅವನತಿಗೆ ಹಣ, ಜಾತಿ ಮತ್ತು ಕೋಮುವಾದಿ ಶಕ್ತಿಗಳಷ್ಟೇ ಈ ಊಳಿಗಮಾನ್ಯಶಾಹಿ ಕುಟುಂಬ ರಾಜಕಾರಣವೂ ಕಾರಣವಾಗಿದೆ ಎಂಬುದನ್ನು ನಾವು ಅರಿಯಬೇಕಿದೆ. ಮತ್ತು ಕುಟುಂಬ ರಾಜಕಾರಣ ಪ್ರಜಾತಾಂತ್ರಿಕ ಮೌಲ್ಯಗಳಿಗೆ ಒಡ್ಡುತ್ತಿರುವ ಅಪಾಯದ ಬಗ್ಗೆಯೂ ಜನಜಾಗೃತಿಯ ಆಂದೋಲನಗಳನ್ನು ರೂಪಿಸಬೇಕಿದೆ.

('ಪ್ರಜಾವಾಣಿ'ಯ 'ವಾಚಕರವಾಣಿ' : ಏಪ್ರಿಲ್, ೫. ೨೦೧೮)

ಹಿಂದೂ ಧರ್ಮ ಅಂದರೆ ವೈದಿಕ ಧರ್ಮ ಅಲ್ಲ

ಲಿಂಗಾಯತ ಜಾತಿ ಸಮೂಹಕ್ಕೆ ಸ್ವತಂತ್ರ ಧರ್ಮದ ಸ್ಥಾನಮಾನ ನೀಡಬಹುದೆಂದು ರಾಜ್ಯ ಸರ್ಕಾರಕ್ಕೆ ಶಿಫಾರ್ಸು ಮಾಡಿರುವ ನ್ಯಾಯಮೂರ್ತಿ ನಾಗಮೋಹನ ದಾಸ್ ಅವರ ನೇತೃತ್ವದ ಸಮಿತಿಯ ವರದಿಯ ಮುಖ್ಯಾಂಶಗಳನ್ನು ಮಾರ್ಚ್ ೧೫ರ 'ಪ್ರಜಾವಾಣಿ' ಪ್ರಕಟಿಸಿದೆ. ಇದನ್ನು ಗಮನಿಸಿದರೆ ಸಮಿತಿಯು ಹಿಂದೂ ಧರ್ಮವೆಂದರೆ ವೈದಿಕ ಧರ್ಮವೆಂದು ಭಾವಿಸಿ, ಅನೇಕ ವಿಷಯಗಳಲ್ಲಿ ವೈದಿಕಕ್ಕೂ, ಲಿಂಗಾಯತಕ್ಕೂ ಇರುವ ವ್ಯತ್ಯಾಸಗಳನ್ನು ಎತ್ತಿ ತೋರಿಸುತ್ತಾ ತನ್ನ ಶಿಫಾರ್ಸಿಗೆ ಸಮರ್ಥನೆ ನೀಡಿದಂತಿದೆ. ಆದರೆ ಹಿಂದೂ ಧರ್ಮ ಎಂದರೆ ವೈದಿಕ ಧರ್ಮವಲ್ಲ. ಅದು ವೈದಿಕವೂ ಸೇರಿದಂತೆ ವೈದಿಕಕ್ಕೆ ಕಾಲಾನುಕಾಲದಲ್ಲಿ ಪ್ರತಿಕ್ರಿಯಿಸುತ್ತಾ, ಅದನ್ನು ಪ್ರಶ್ನಿಸುತ್ತಾ ಅದಕ್ಕೆ ಸವಾಲೆಸೆಯುತ್ತಾ ಅದನ್ನು ಮರುನಿರೂಪಿಸುತ್ತಾ ಬಂದಿರುವ ಅವೈದಿಕ-ಅರೆ ವೈದಿಕ, ಜಾನಪದ, ಚಾರ್ವಾಕ, ನಾಸ್ತಿಕ ಮತ್ತು ಬುಡಕಟ್ಟು ಧರ್ಮಗಳ ಒಕ್ಕೂಟವಾಗಿ ಕಾಲಾನುಕಾಲದಿಂದ ತನ್ನದೇ ಚಲನಶೀಲತೆಯೊಂದಿಗೆ ಬದುಕಿ ಬಂದಿದೆ. ಹೀಗೆ ವ್ಯಾಸ-ವಾಲ್ಮೀಕಿಗಳಿಂದ

ಹಿಡಿದು ಶಂಕರಾಚಾರ್ಯ-ಕಬೀರರೂ ಸೇರಿದಂತೆ, ನಮ್ಮ ಕೊಡೇಕಲ್ ಬಸವಣ್ಣ-ಮಂಟೇಸ್ವಾಮಿಯವರೆಗೂ ಹಿಂದೂ ಎಂಬ ಅಭಿದಾನ ಹರಡಿದೆ. ಹಾಗಾಗಿಯೇ ತಮ್ಮನ್ನು ಹೆಮ್ಮೆಯ ಹಿಂದೂ ಎಂದು ಕರೆದುಕೊಳ್ಳುತ್ತಿದ್ದ ಗಾಂಧಿ, ಹಿಂದೂ ಧರ್ಮ ಋಷಿ ಮುನಿಗಳ ಧರ್ಮ ಮಾತ್ರವಾಗಿರದೆ, ಸಾಧು-ಸಂತರ ಪರಂಪರೆಯ ಧರ್ಮವೂ ಆಗಿದೆ ಎಂದು ನಿರೂಪಿಸುತ್ತಾ ಅಸ್ಪೃಶ್ಯತೆ ಮತ್ತು ಜಾತಿಪದ್ಧತಿಯನ್ನು ಧರ್ಮದ ಭಾಗವೆಂದು ಒಪ್ಪಲು ನಿರಾಕರಿಸಿದ್ದು. ಹಿಂದೂ ಎಂಬ ಶಬ್ದ ಚಾಲ್ತಿಗೆ ಬಂದುದೇ ಭಾರತದ ವಾಯುವ್ಯ ಗಡಿಯಾಚೆಯ ಜನ ಭಾರತದ ಉಪಖಂಡದ ಜೀವನ ಕ್ರಮ ಮತ್ತು ನಂಬಿಕೆಗಳನ್ನು ಒಟ್ಟಾಗಿ ಗುರುತಿಸಲು ನಿಗದಿಪಡಿಸಿಕೊಂಡ ಸಿಂಧೂ ನದಿಯಾಚೆಯ ಸಂಸ್ಕೃತಿ ಎಂಬ ಅರ್ಥದಲ್ಲಿ ಎಂಬುದು ಇತಿಹಾಸದ ಪ್ರಾಥಮಿಕ ಪಾಠಗಳನ್ನು ಬಲ್ಲವರಿಗೆ ಗೊತ್ತು. ಆದರೆ ಇದು ಹಲವು ಕ್ಷೇತ್ರಗಳ ವಿದ್ವಾಂಸರನ್ನೂ, ಸಂಸ್ಕೃತಿ ಚಿಂತಕರನ್ನೂ ಒಳಗೊಂಡ ಸಮಿತಿಗೆ ಏಕೆ ತಿಳಿಯಲಿಲ್ಲವೋ ಗೊತ್ತಾಗುತ್ತಿಲ್ಲ.

ಹಾಗಾಗಿ ಲಿಂಗಾಯತ ಆಚರಣೆ ಮತ್ತು ನಂಬಿಕೆಗಳು ವೈದಿಕಕ್ಕೆ ವಿರುದ್ಧವಾದವು ಎಂಬ ಆಧಾರದ ಮೇಲೆ, ಲಿಂಗಾಯತವು ಹಿಂದೂ ಧರ್ಮದ ಭಾಗವಲ್ಲ ಎಂದು ಹೇಳಿ ಅದನ್ನು ಸ್ವತಂತ್ರ ಧರ್ಮ ಎಂದು ಘೋಷಿಸಬಹುದೆಂದು ಶಿಫಾರ್ಸು ಮಾಡುವುದು ಸರಿಯಲ್ಲ. ಹಾಗೆ ಮಾಡುವುದಾದದರೆ ಲಿಂಗಾಯತದ ಜೊತೆಗೆ ಹಲವು ಪಂಗಡಗಳು ಸ್ವತಂತ್ರ ಧರ್ಮಗಳೆಂದು ಘೋಷಿಸಲ್ಪಡಲು ಯೋಗ್ಯವಾಗುತ್ತವೆ. ಅದೇನೇ ಇರಲಿ, ಲಿಂಗಾತವು ಜಾತಿ ಶ್ರೇಣೀಕರಣವನ್ನು ಒಪ್ಪುವುದಿಲ್ಲ ಎಂಬ ಸಮಿತಿಯ ವರದಿಯಲ್ಲಿನ ಹೇಳಿಕೆ ವಾಸ್ತವವನ್ನು ನೋಡಿದರೆ ಹಾಸ್ಯಾಸ್ಪದವೆನ್ನಿಸುತ್ತದೆ. ಏಕೆಂದರೆ ಲಿಂಗಾಯತವು ಹಿಂದೂ ಧರ್ಮದಡಿಯ ಇತರೆಲ್ಲ ಜಾತಿ 'ಒಕ್ಕೂಟ'ಗಳಂತೆಯೇ ಅಸ್ಪೃಶ್ಯತೆಯನ್ನು ಆಚರಿಸುವ ಉಪಜಾತಿಗಳ ಒಂದು ಒಕ್ಕೂಟವೇ ಆಗಿರುವುದು ನಮ್ಮ ಕಣ್ಣು ಕುಕ್ಕುವ ಸತ್ಯವಾಗಿದೆ. ಇವನ್ನು ಬಿಟ್ಟು ಸಾರ್ವಜನಿಕವಾಗಿ ಗೊತ್ತಿಲ್ಲದ ಬೇರೇನಾದರೂ ಕಾರಣಗಳು ಸಮಿತಿಯ ಪರಿಗಣನೆಗೆ ಒಳಗಾಗಿದ್ದರೆ ಅದು ಬೇರೆ ವಿಷಯ. ಹೀಗಾಗಿ ಸಮಿತಿಯ ಸದ್ಯದ ಶಿಫಾರ್ಸು ನಮ್ಮ ಬುದ್ಧಿಜೀವಿಗಳು ಹಿಂದೂ ಧರ್ಮದ ವಿರೋಧಿಗಳಾಗಿದ್ದು ಅದನ್ನು ನಾಶ ಮಾಡುವುದೇ ಅವರ ಗುರಿಯಾಗಿದೆ ಎಂಬ ಹಿಂದೂ ಕೋಮುವಾದದ ಪ್ರಚಾರಕ್ಕೆ ಮತ್ತಷ್ಟು ಕುಮ್ಮಕ್ಕು ಕೊಡುವಂತಿದೆ ಮತ್ತು 'ಹಿಂದುತ್ವ' ಎಂಬ ಧರ್ಮದ ಏಕರೂಪೀಕರಣವನ್ನು ಪ್ರೋತ್ಸಾಹಿಸುವಂತಿದೆ ಎಂದೇ ಹೇಳಬೇಕು.

('ಪ್ರಜಾವಾಣಿ' 'ವಾಚಕರವಾಣಿ': ಮಾರ್ಚ್ ೨೧, ೨೦೧೮)

ನಂತರದ ಟಿಪ್ಪಣಿಗಳು :

ನಾನು ಈ ಪತ್ರವನ್ನು ಬರೆದಾಗ ಕರ್ನಾಟಕ ಸರ್ಕಾರ ಲಿಂಗಾಯತ-ವೀರಶೈವ (ಬಸವತತ್ವ) ಎಂಬ 'ಧರ್ಮ'ಕ್ಕೆ ಪ್ರತ್ಯೇಕ ಧರ್ಮದ ಸ್ಥಾನಮಾನ ನೀಡಬೇಕೆಂದು ಕೇಂದ್ರಕ್ಕೆ

ಶಿಫಾರ್ಸು ಮಾಡಿರುವ ಸುದ್ದಿಯಿನ್ನೂ ಪ್ರಕಟವಾಗಿರಲಿಲ್ಲ. ಈ ಸುದ್ದಿ ಪ್ರಕಟವಾದ ಮೇಲೆ ಪ್ರಕಟವಾಗಬೇಕಾದ ಇನ್ನೊಂದು ದೊಡ್ಡ ಸುದ್ದಿಯೆಂದರೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಒಂದು ಹೊಸ ಧರ್ಮವೊಂದರ ಸ್ಥಾಪಕರಾಗಿದ್ದಾರೆ ಎಂಬುದು! ಏಕೆಂದರೆ ಲಿಂಗಾಯತ–ವೀರಶೈವ (ಬಸವತತ್ವ) ಎಂಬ ಹೆಸರಿನ/ಶೀರ್ಷಿಕೆಯ ಧರ್ಮ ಈವರೆಗೆ ಎಲ್ಲೂ ಅಸ್ತಿತ್ವದಲ್ಲಿರಲಿಲ್ಲ!

ಇರಲಿ. ರಾಜ್ಯ ಸರ್ಕಾರದ ಈ ಶಿಫಾರ್ಸನ್ನು ಕೇಂದ್ರ ಒಪ್ಪಿ ಶಾಸನವಾಯಿತೆಂದೇ ಭಾವಿಸೋಣ. ಆಗ ಈ ಸ್ವತಂತ್ರ ಧರ್ಮದ ಅಧಿಕೃತ (ಅಂದರೆ ಈ ಶಾಸನದ ಪ್ರಕಾರ ಸಂವಿಧಾನಾತ್ಮಕ ಸೌಲಭ್ಯಗಳನ್ನು ಪಡೆಯುವ) ಅನುಯಾಯಿಗಳೆಂದು ತೀರ್ಮಾನಿಸುವ ಮಾನದಂಡವಾದರೂ ಯಾವುದು? ಈ ಹೊಸ ಧರ್ಮದ ಹೆಸರಿನಲ್ಲೇ ಆವರಣ(ಬ್ರಾಕೆಟ್)ಗಳಲ್ಲಿ 'ಬಸವ ತತ್ವ' ಎಂದಿರುವುದರಿಂದ ಸರ್ಕಾರಿ ದಾಖಲೆಗಳಲ್ಲಿ ಲಿಂಗಾಯತ–ವೀರಶೈವ ಎಂದು ಗುರುತಿಸಿಕೊಂಡವರೆಲ್ಲ ಸಾರಾಸಗಟಾಗಿ ಎಲ್ಲರೂ ಈ ಹೊಸ ಧರ್ಮದ ಸದಸ್ಯರಾಗಲಾರರು ಅಲ್ಲವೆ? ಹಾಗಾದರೆ ಈ ಅರ್ಹತೆಗೆ ಯಾವುದನ್ನು ಸಾಕ್ಷ್ಯವಾಗಿ ಪರಿಗಣಿಸಲಾಗುವುದು? ಅಂಗದ ಮೇಲಿನ ಲಿಂಗವೇ? ಹಾಗಿದ್ದಲ್ಲಿ ಲಿಂಗ ಕಟ್ಟಿಕೊಂಡವರೆಲ್ಲ ಈ ಧರ್ಮದ ವ್ಯಾಪ್ತಿಗೆ ಬರುವರೇ? ಮತ್ತು ಲಿಂಗ ಕಟ್ಟಿಕೊಳ್ಳದ ಲಿಂಗಾಯತ/ವೀರಶೈವರು ಇದರಿಂದ ಹೊರಗುಳಿಯುತ್ತಾರೆಯೇ? ಅಥವಾ ಲಿಂಗ ಕಟ್ಟಿಕೊಂಡವರು ಮಾತ್ರ ಬಸವ ತತ್ವದ ಅನುಯಾಯಿಗಳೆಂದು ಸರ್ಕಾರ ಫರ್ಮಾನು ಹೊರಡಿಸುವುದೇ? ನಮ್ಮ ಸಂವಿಧಾನದ ಪ್ರಕಾರ ಇಂತಹ ಆಜ್ಞೆ ಹೊರಡಿಸಲು ಸಾಧ್ಯವೇ? ಇನ್ನು ಮೂಲ ಅಥವಾ ಪರಿಶುದ್ಧ ವೀರಶೈವರೆಂದು ಗುರುತಿಸಿಕೊಳ್ಳಲಾಗುವ ಜಂಗಮರು ಈ ಸ್ವತಂತ್ರ ಧರ್ಮದ ಸದಸ್ಯರಾಗುವರೇ? ಹಾಗೆ ಆಗಬೇಕಾದರೆ ತಾವು ಬಸವ ತತ್ವಗಳ ಅನುಯಾಯಿಗಳೆಂದು ಸಾಬೀತುಪಡಿಸುವ ಬಗೆ ಹೇಗೆ? ಸ್ವಘೋಷಿತ ಅಫಿಡವಿಟ್ ಸಾಕೇ? ಅಥವಾ ಯಾರದ್ದಾದರೂ ಸಾಕ್ಷ್ಯ ಬೇಕೆ? ಅಥವಾ ಆಯ್ದ ಕೆಲ ಮಠಾಧೀಶರ ಸಹಿ ಮತ್ತು ಮುದ್ರೆ ಇರುವ ಅರ್ಹತಾ ಪತ್ರವನ್ನು ನಿಗದಿ ಮಾಡುವರೇ? ಅಥವಾ ಪ್ರತಿ ವರ್ಷ ಬಸವ ತತ್ವದ ಬಗ್ಗೆ ಪರೀಕ್ಷೆ ನಡೆಸಿ ಅದರಲ್ಲಿ ತೇರ್ಗಡೆಯಾದವರನ್ನು ಹೊಸ ಧರ್ಮದೊಳಕ್ಕೆ ಸೇರಿಸುವ ವ್ಯವಸ್ಥೆಯನ್ನಾದರೂ ಮಾಡಲಾಗುವುದೇ?

ಈ ಪ್ರಶ್ನೆಗಳು ಹೊರನೋಟಕ್ಕೆ ಲಘುಶೈಲಿಯವಾಗಿ ಕಂಡರೂ, ಖಂಡಿತ ಹಾಗಲ್ಲ. ಧರ್ಮವೊಂದರ ತಂಟೆಗೆ ಸರ್ಕಾರ ಬಂದಾಗ ಈ ಲೌಕಿಕವಾದ ನಿಯಮಗಳು ಮತ್ತು ಕಾನೂನುಗಳ ಪ್ರಶ್ನೆಗಳು ಬಂದೇ ಬರುತ್ತವೆ. ಇಲ್ಲದಿದ್ದರೆ ಸರ್ಕಾರದ ನಿರ್ಧಾರ ಅಥವಾ ಆದೇಶ ಸ್ಪಷ್ಟ ರೂಪ ಪಡೆಯದೆ ಆ ಸಮೂಹದ ಆಡಳಿತ ಗೊಂದಲಕ್ಕೀಡಾಗುತ್ತದೆ. ಇಷ್ಟು ಹೇಳಿದ ಮೇಲೂ ಈ ಮೇಲಿನ ನನ್ನ ಪ್ರಶ್ನೆಗಳು ಯಾರಿಗಾದರೂ ಲಘುಶೈಲಿಯ ಪ್ರಶ್ನೆಗಳಾಗಿ ಕಂಡರೆ ಅದಕ್ಕೆ ಧರ್ಮವನ್ನು ಕಾನೂನುಗಳ ಮೂಲಕ ನಿರ್ವಹಿಸಲು ಹೋಗಿರುವ ಸರ್ಕಾರದ ಅಸಂಬದ್ಧ ಪ್ರಯತ್ನವೇ ಕಾರಣವಾಗಿದೆ.

ಬಸವ ತತ್ವ ಯಾರ ಸ್ವತ್ತೂ ಅಲ್ಲ. ಹಳೆಯ ಈ ವೀರಶೈವ-ಲಿಂಗಾಯತ ಅಥವಾ ಭಾವಿ ಲಿಂಗಾಯತ-ವೀರಶೈವ(ಬ.ತ.)ದ ವ್ಯಾಪ್ತಿಗೆ ಬರಬಹುದಾದ ಜನಸಮುದಾಯದ ಹೊರಗೆ ಬಸವ ತತ್ವಗಳನ್ನು ಅನುಸರಿಸುವ ನಿಜ ಅನುಯಾಯಿಗಳು ಗಣನೀಯ ಸಂಖ್ಯೆಯಲ್ಲಿದ್ದಾರೆ. ಹಾಗಾಗಿ ಎಲ್ಲ ಜಾತಿಗಳಂತೆ ಕೇವಲ ರೂಢಿಗತ ಮತಾಚಾರಗಳ ಜಾತಿಗಳಾಗಿದ್ದ ಕೆಲವು ಜಾತಿ-ಉಪಗಳಿಗೆ ಮಾತ್ರ ಬಸವ ತತ್ವದ ಬೋರ್ಡು ತಗುಲಿಸಿ ಸರ್ಕಾರ ಅದನ್ನು ಒಂದು ಸರ್ಕಾರಿ ತತ್ವವನ್ನಾಗಿ ಮಾಡಿ ಹಾಸ್ಯಾಸ್ಪದಗೊಳಿಸಿದೆ. ಇದು ಅಕ್ಷಮ್ಯ.

(ಫೇಸ್‌ಬುಕ್ ಬರಹ : ಮಾರ್ಚ್ ೨೫, ೨೦೧೮)

ಪೇಜಾವರರೊಂದಿಗೆ ಸಂದರ್ಶನ : ಕೆಲವು ಪ್ರಶ್ನೆಗಳು

(ಎಂಟು ತಿಂಗಳುಗಳ ಹಿಂದೆ 'ಪ್ರಜಾವಾಣಿ' ಪ್ರಕಟಿಸಿದ ಪೇಜಾವರ ಶ್ರೀಗಳೊಡನೆಯ ಒಂದು ಸಂದರ್ಶನದ ಬಗ್ಗೆ ನಾನು ಬರೆದ ಈ ಪ್ರತಿಕ್ರಿಯೆಯನ್ನು ಆ ಪತ್ರಿಕೆ ಪ್ರಕಟಿಸಲಿಲ್ಲ. ಪೇಜಾವರರು ಉಡುಪಿಯ ಶ್ರೀಕೃಷ್ಣಮಠದಲ್ಲಿ ಇತ್ತೀಚೆಗೆ ನಡೆಸಿದ ಇಫ್ತಾರ್ ಕೂಟದ ಬಗ್ಗೆ ನಡೆಯುತ್ತಿರುವ ಬಿಸಿ ಬಿಸಿ ಚರ್ಚೆಯ ಹಿನ್ನೆಲೆಯಲ್ಲಿ ಈ ನನ್ನ ಪ್ರತಿಕ್ರಿಯೆ ಕೆಲವರ ಕುತೂಹಲವನ್ನಾದರೂ ಕೆರಳಿಸಬಹುದು.)

೨೫.೧೦.೨೦೧೬ರ 'ಪ್ರಜಾವಾಣಿ'ಯಲ್ಲಿ ಉಡುಪಿಯ ಪೇಜಾವಾರ ಶ್ರೀಗಳೊಡನೆಯ ಒಂದು ಸಂದರ್ಶನ ಪ್ರಕಟವಾಗಿದೆ. ಅದರಲ್ಲಿ ಈ ಕೆಳಕಂಡಂತೆ ಅವರು ಕೆಲವು ವಿವಾದಾಸ್ಪದ ಮಾತುಗಳನ್ನಾಡಿದ್ದಾರೆ.

೧. ಎಲ್ಲ ಬುದ್ಧಿಜೀವಿಗಳೂ ಹಿಂದೂ ಧರ್ಮದ ವಿರೋಧಿಗಳು ಎಂದು ಅವರು ಹೇಳಿದ್ದಾರೆ. ಇದರಿಂದಾಗಿ, ಪೇಜಾವರರರರು ಬುದ್ಧಿಜೀವಿಗಳೆಂದು ಯಾರನ್ನು ಕರೆಯುತ್ತಾರೋ ತಿಳಿಯದಾಗಿದೆ. ಸಾಮಾನ್ಯರಿಗಿಂತ ವಿಶೇಷವಾಗಿ ಯೋಚಿಸಬಲ್ಲವರು ಬುದ್ಧಿಜೀವಿಗಳು ಎಂದಾದರೆ, ಇಂತಹವರೆಲ್ಲರೂ ಹಿಂದೂ ಧರ್ಮ ವಿರೋಧಿಗಳಾಗಿರಲಾರರು ಎಂಬುದು ಸಾರ್ವಜನಿಕ ಜೀವನದ ನಿತ್ಯ ನಡಾವಳಿಯನ್ನು ಗಮನಿಸಿದವರಿಗೆ ಗೊತ್ತಾಗುತ್ತದೆ. ಒಂದು ಧರ್ಮದಲ್ಲಿ ಹುಟ್ಟಿದವರು ತಾವು ಹುಟ್ಟಿದ ಧರ್ಮದ ಬಗ್ಗೆ ಆಲೋಚಿಸುವುದು ಮತ್ತು ಅದರ ತತ್ವಗಳು ಮತ್ತು ನಿಯಮಗಳು ಸಮಕಾಲೀನ ಸಾಮಾಜಿಕ ಬದುಕಿಗೆ ಅಡ್ಡಿ ಬರುವಂತಿದ್ದರೆ, ಅದರ ಬಗ್ಗೆ ಮಾತಾಡುವುದು ಹಾಗೂ ಅವನ್ನು ಸರಿಪಡಿಸಲು ಯತ್ನಿಸುವುದು ಪ್ರತಿಯೊಬ್ಬರ ಆಜನ್ಮಸಿದ್ಧ ಹಕ್ಕಾಗಿದೆ. ಜಾತಿ ಪದ್ಧತಿ, ಬ್ರಾಹ್ಮಣ ಪುರೋಹಿತಶಾಹಿ ಮತ್ತು ಅಸ್ಪೃಶ್ಯತೆಯ ಆಚರಣೆ ಹಿಂದೂ ಧರ್ಮದ ಕೆಟ್ಟ ಲಕ್ಷಣಗಳು ಎಂದು ಭಾವಿಸುವವರು ಮತ್ತು ಅದನ್ನು ತೊಡೆದುಹಾಕಲು ಅದರ ವಿರುದ್ಧ ಮಾತನಾಡುವವರನ್ನು ಹಿಂದೂ ಧರ್ಮದ

ರಕ್ಷಕರೆಂದು ಪರಿಗಣಿಸಬೇಕೇ ಹೊರತು ಹಿಂದೂ ಧರ್ಮದ ವಿರೋಧಿಗಳೆಂದಲ್ಲ. ಇದು ಪೇಜಾವವರಂತಹ ವಿಶೇಷ ಬುದ್ಧಿಯ ವ್ಯಕ್ತಿಗಳಿಗೆ ಗೊತ್ತಾಗದಿರುವುದು ಆಶ್ಚರ್ಯಕರ.

ಕೆಲವರು ಹಿಂದೂ ಧರ್ಮದ ಈ ದುರಾಚರಣೆಗಳನ್ನು ಸರಿಪಡಿಸಲಾಗುವುದಿಲ್ಲ ಎಂದು ಭಾವಿಸಿ, ಅವಕ್ಕೆ ಬಲಿಯಾದವರನ್ನು ಅನ್ಯಧರ್ಮಗಳಿಗೆ ಸೇರಲು ಕರೆಕೊಟ್ಟಿರಬಹುದು. ಅದನ್ನು ಪೇಜಾವರರು ಎಚ್ಚರಿಕೆಯ ಕರೆಘಂಟೆ ಎಂದು ಭಾವಿಸಲಾಗದೆ, ಯೋಚಿಸಿ ಮಾತಾಡಬಲ್ಲವರೆಲ್ಲರನ್ನೂ ಹಿಂದೂ ಧರ್ಮದ ವಿರೋಧಿಗಳೆಂದು ಕರೆಯಹೊರಟಿರುವುದು ಹಿಂದೂ ಧರ್ಮ ರಕ್ಷಣೆಯ ಲಕ್ಷಣವಂತೂ ಅಲ್ಲ. ರಾಷ್ಟ್ರಾದ್ಯಂತ ಒಂದು ನಿರ್ದಿಷ್ಟ ರಾಜಕೀಯ ಉದ್ದೇಶದಿಂದ ಆರಂಭಿಸಲಾಗಿರುವ ಬುದ್ಧಿಜೀವಿಗಳೆಂಬ ವಿಶೇಷ ಯೋಚನಾ ಶಕ್ತಿಯುಳ್ಳ ಜನರನ್ನೆಲ್ಲ ಸಾರಾಸಗಟಾಗಿ ದುಷ್ಟರೆಂದು ಸಾರುವ ರಾಜಕೀಯ ಪ್ರಚಾರಾಂದೋಲನಕ್ಕೆ ಪೇಜಾವರ ಶ್ರೀಗಳೂ ಈಗ ಸೇರಿಕೊಂಡಿರುವುದು ದುರದೃಷ್ಟಕರ.

೨. ಪೇಜಾವರರು ಗೋಮಾಂಸ ತಿನ್ನುವುದರ ವಿರುದ್ಧ ಮಾತನಾಡಿದ್ದಾರೆ. ಈಗ ರಾಷ್ಟ್ರಾದ್ಯಂತ ಇದೊಂದು ಸೂಕ್ಷ್ಮ ವಿಷಯವಾಗಿ, ವ್ಯಾಪಕ ಹಿಂಸಾಚಾರಗಳಿಗೂ ಕಾರಣವಾಗಿದೆ. ಈ ದೃಷ್ಟಿಯಿಂದ ಅವರು ಈಗಿನಂತೆ ಸಾರಾಸಗಟಾಗಿ ಮಾತನಾಡದೆ ಈ ಬಗ್ಗೆ ಸ್ವಲ್ಪ ಯೋಚಿಸಿ ಮಾತನಾಡಬೇಕಿತ್ತೆನಿಸುತ್ತದೆ.

ಪಾರಂಪರಿಕವಾಗಿ ಸಾವಿರಾರು ವರ್ಷಗಳಿಂದ ಜೀವನೋಪಾಯಕ್ಕಾಗಿ ದನ ಕರುಗಳನ್ನು ಸಾಕುತ್ತಾ, ಅವುಗಳೊಂದಿಗೆ ಒಡನಾಡುತ್ತಾ ಬಂದವರಿಗೆ ದನ ಮತ್ತು ದನದ ಮಾಂಸ ಒಂದು ಭಾವನಾತ್ಮಕ ವಿಷಯವಾಗಿರುವುದು ಸಹಜ. ಆದರೆ ಇದೇ ಸಾವಿರಾರು ವರ್ಷಗಳಿಂದ ಸಮಾಜದ ದಟ್ಟ ದರಿದ್ರ ಸ್ಥಿತಿಗೆ ದೂಡಲ್ಪಟ್ಟು ದನ ಕರುಗಳನ್ನು ಸಾಕಿಯೇ ಗೊತ್ತಿಲ್ಲದ ಮತ್ತು ಅವು ಸತ್ತಾಗ ಅವುಗಳ ದೇಹಗಳನ್ನು ಮಾಂಸಕ್ಕಾಗಿ ಬಳಸಿ ಅವನ್ನು ಸ್ವಚ್ಛ ಮಾಡುವ ಕೆಲಸಕ್ಕೆ ಧರ್ಮದ ಹೆಸರಿನಲ್ಲೇ ನಿಯೋಜಿತರಾದವರಿಗೆ ಈಗ ಇದ್ದಕ್ಕಿದ್ದಂತೆ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಅವುಗಳ ಮಾಂಸ ತಿನ್ನುವುದನ್ನು ನಿಲ್ಲಿಸಿ ಎಂದು ಆಜ್ಞೆ ಮಾಡುವುದು ಎಷ್ಟು ಸರಿ ಎಂಬುದನ್ನು ತಾವು ಇಡೀ ಹಿಂದೂ ಸಮಾಜದ ಮಾರ್ಗದರ್ಶಿ ಎಂದು ನಂಬಿರುವ ಸ್ವಾಮೀಜಿ ಯೋಚಿಸಿ ಹೇಳಬೇಕು. ಯಾರ ಮನೆಯಲ್ಲೂ ನೀರನ್ನೂ ಕುಡಿಯದ ತಮ್ಮ ಆಹಾರ ಪದ್ಧತಿಯನ್ನು ಯಾವ ಕಾರಣಕ್ಕೂ ಬದಲಾಯಿಸಿಕೊಳ್ಳಲೊಲ್ಲದ ಸ್ವಾಮೀಜಿ ಇತರರ ಆಹಾರ ಪದ್ಧತಿಯನ್ನು ಅವಸರದಲ್ಲೆಂಬಂತೆ ಮತ್ತು ಏಕಪಕ್ಷೀಯವಾಗಿ ಬದಲಾಯಿಸ ಹೊರಟಿರುವುದೇಕೋ ತಿಳಿಯದಾಗಿದೆ. ಅಸ್ಪೃಶ್ಯರೆನಿಸಿಕೊಂಡವರು ದನದ ಮಾಂಸ ತಿನ್ನುವುದು ಅವರ ಆಯ್ಕೆಯಾಗಿರಲಿಲ್ಲ. ಅದನ್ನು ಅವರನ್ನು ಸಿಲುಕಿಸಲಾಗಿದ್ದ ದಾರಿದ್ರ್ಯದ ಕಾರಣದಿಂದಾಗಿ ಅವರ ಮೇಲೆ ಹೇರಲಾಗಿತ್ತು ಎಂಬುದನ್ನೂ ಶ್ರೀಗಳು ಗಮನಿಸಬೇಕಿತ್ತು. ಹಾಗಾಗಿ ಗೋ ರಕ್ಷಣೆ ಮತ್ತು ಗೋಮಾಂಸ ಸೇವನೆಯ ವಿರುದ್ಧದ

ಹಿಂದೂ ಆಂದೋಲನ ನಿಜವಾಗಿ ನಡೆಯಬೇಕಾದದ್ದು ಹಿಂದೂ ಸಮಾಜಕ್ಕೆ ಕಳಂಕಪ್ರಾಯವಾಗಿರುವ ಅಸ್ಪೃಶ್ಯತೆಯನ್ನು ತೊಡೆಯುವ ಪಾಪ ಪ್ರಾಯಶ್ಚಿತ್ತದ ಆಂದೋಲನದ ಮೂಲಕವೇ ಹೊರತು ಭಾವೋದ್ದೀಪಕ ಮಾತು ಹಿಂಸೆಗೆ ಎಡೆ ಮಾಡಿಕೊಟ್ಟಿರುವ ಕಾನೂನು ಜಾರಿಯ ಮೂಲಕ ಅಲ್ಲ. ಪೇಜಾವರರು ಇದಕ್ಕೆ ಟೊಂಕ ಕಟ್ಟಿ ನಿಲ್ಲಲಿ. ಎಲ್ಲ ತರಹದ ಬುದ್ಧಿಜೀವಿಗಳು ಅವರೊಂದಿಗೆ ಇರುತ್ತಾರೆ.

೩. ಮಠಾಧೀಶರ ಚಾರಿತ್ರ್ಯಹನನದ ಬಗ್ಗೆ ಅಲವತ್ತುಕೊಂಡಿರುವ ಪೇಜಾವರರು ಇತ್ತೀಚೆಗೆ ಲೈಂಗಿಕ ಹಗರಣದ ಮೂಲಕ ಸುದ್ದಿ ಮಾಡಿದ ಕರ್ನಾಟಕದ ಮಠಾಧೀಶರೊಬ್ಬರ ಹೆಸರು ಪ್ರಸ್ತಾಪ ಮಾಡುತ್ತಾ, ಅವರು ಅಪರಾಧಿಯಲ್ಲ ಎಂದು ನ್ಯಾಯಾಲಯದಲ್ಲಿ ಸಾಬೀತಾಗಿದೆ ಎಂದಿರುವುದು ತಾಂತ್ರಿಕವಾಗಿ ಮಾತ್ರ ಸರಿಯಾಗಿದೆ. ಏಕೆಂದರೆ, ಸದ್ಗೃಹಸ್ಥರೂ ಓದಲು ಸ್ವಲ್ಪ ಹಿಂಜರಿಯುವಷ್ಟು ಲೈಂಗಿಕ ವಿವರಗಳಿಂದ ಕೂಡಿರುವ ಈ ಸಂಬಂಧದ ನ್ಯಾಯಾಲಯದ ತೀರ್ಪು, ಇದು ಸಮ್ಮತಿಯ ಲೈಂಗಿಕ ವ್ಯವಹಾರವಾಗಿದೆಯೇ ಹೊರತು, ಅತ್ಯಾಚಾರವಲ್ಲ ಎಂದಿದೆಯಷ್ಟೆ. ಇದನ್ನು ಸಂನ್ಯಾಸಿ ಎಂದು ಹೇಳಿಕೊಳ್ಳುವ ಮಠಾಧೀಶರರೊಬ್ಬರ ನಿರಪರಾಧಿತ್ವದ ಸಾಬೀತು ಎಂದು ಪೇಜಾವರರು ಕರೆಯುವುದಾದರೆ, ಮುಂದೆ ಮಾತನಾಡಲಾದರೂ ಏನು ಉಳಿದೀತು?

೪. 'ಉಡುಪಿ ಚಲೋ'ದಲ್ಲಿ ಭಾಗವಹಿಸಿದ ಬುದ್ಧಿಜೀವಿಗಳು ಪ್ರತಿಪಾದಿಸಿದ ವಿಚಾರಗಳನ್ನು ವಿರೋಧಿಸಲು ಅವರು ಓಡಾಡಿದ ದಾರಿಯನ್ನು ಸ್ವಚ್ಛಗೊಳಿಸುವ ಉದ್ದೇಶದ್ದೆಂದು ಹೇಳಲಾದ 'ಕನಕ ನಡಿಗೆ' ಕಾರ್ಯಕ್ರಮದ ಹಿಂದೆ ಇರುವುದೂ ಹಿಂದೂ ಧರ್ಮದ ಎಲ್ಲ ದುರ್ಲಕ್ಷಣಗಳಿಗೆ ಕಾರಣವಾಗಿರುವ 'ಶುದ್ಧಿ–ಅಶುದ್ಧಿ'ಗಳ ಮೂಢ ಮತ್ತು ದುಷ್ಟ ಕಲ್ಪನೆಯೇ ಆಗಿದೆ ಎಂದು ಹೇಳದೆ ವಿಧಿಯಿಲ್ಲ. ತಾನು ಒಪ್ಪದ ವಿಚಾರಗಳನ್ನು ಪ್ರಶ್ನಿಸುವ ವಿಚಾರಶೀಲತೆಯ ಬದಲು ಅವು ಕೀಳು ಎಂದು ಸಾರುವ ಇಂತಹ ಬೀದಿ ಶುದ್ಧೀಕರಣ ಬುದ್ಧಿಗೇಡಿತನದ ಪ್ರತೀಕವಾದ ಭಂಡತನವಿದು. ಏಕೆ, ಪ್ರಕಾಂಡ ಪಂಡಿತರೆನಿಸಿರುವ ಪೇಜಾವವರು ಕನಿಷ್ಟ ವಿಚಾರಶೀಲತೆಯನ್ನೂ ಕಳೆದುಕೊಂಡಿದ್ದಾರೆಯೇ? ಅವರು ಕ್ರುದ್ಧರಾದಂತೆ ಯತಿಗಳೆನಿಸಿಕೊಂಡಿರುವವರೂ ಕ್ರುದ್ಧರಾಗಿರುವುದು ಸೋಜಿಗದ ಸಂಗತಿಯಾಗಿದೆ.

ಹಿರಿಯ ಚಿಂತಕ ಲಕ್ಷ್ಮೀಶ ತೋಳ್ಪಾಡಿವರು ಮೊನ್ನೆ ಸಮಾರಂಭವೊಂದರಲ್ಲಿ ಹೇಳಿದಂತೆ, ಇಷ್ಟೆಲ್ಲ ಪಡಿಪಾಟಲುಗಳ ಬದಲು ಪೇಜಾವರರು, ಈ ಇಡೀ ಪ್ರಸಂಗದ ಹಿಂದೆ ಇದ್ದ ಕೃಷ್ಣ ಮಠದ 'ಮುತ್ತಿಗೆ'ಯ ಬೆದರಿಕೆ ಹಾಕಿದವರನ್ನು 'ಮುತ್ತಿಗೆ ಏಕೆ? ಪ್ರೀತಿಯಿಂದಲೇ ಬನ್ನಿ' ಎಂದು ವಿಶಾಲ ಹೃದಯದಿಂದ ಸ್ವಾಗತಿಸಿದ್ದರೆ ಪರಿಸ್ಥಿತಿ ಬೇರೇಯೇ ಆಗಿರುತ್ತಿತ್ತು.

–ಡಿ.ಎಸ್. ನಾಗಭೂಷಣ, ಶಿವಮೊಗ್ಗ

(ಫೇಸ್‌ಬುಕ್ ಬರಹ, ಜೂನ್ ೧೦. ೨೦೧೬)

ಪೇಜಾವರರಿಗೆ ಮಾಧ್ವ ಪಂಡಿತರೊಬ್ಬರು ಹಾಕಿರುವ ಪ್ರಶ್ನೆಗಳ ಹಾದಿಗುಂಟ...

ಯಾರೋ ಓರ್ವ ಮಾಧ್ವ ಬ್ರಾಹ್ಮಣರಂತೆ. (ಹಾಗೆಂದು ಅವರೇ ಘೋಷಿಸಿಕೊಂಡಿದ್ದಾರೆ.) ಶಾಸ್ತ್ರ-ಶ್ಲೋಕ-ಮಂತ್ರಾದಿಗಳನ್ನು ಅಸ್ಖಲಿತವಾಗಿ ಉಲ್ಲೇಖಿಸಿ ಚತುರ ವಾಗ್ಮಿಯಂತೆ ಆಕರ್ಷಕವಾಗಿ ಮಾತಾಡುತ್ತಾರೆ. ಅವರು, ಪೇಜಾವರ ಸ್ವಾಮಿಗಳು ತಮ್ಮ ಮಠದಲ್ಲಿ ಇಫ್ತಾರ್ ಕೂಟ ನಡೆಸಿದ್ದನ್ನು ಹಲವು ನೆಲೆಗಳಲ್ಲಿ ಪ್ರಶ್ನಿಸಿ ಅವಕ್ಕೆ ಉತ್ತರಿಸುವಂತೆ ವಾಟ್ಸಾಪ್‌ನಲ್ಲಿ ಸಾರ್ವಜನಿಕವಾಗಿ ಒಂದು ಧ್ವನಿ ಕೋಶ (ಆಡಿಯೋ) ದ ಮೂಲಕ ಅವರಿಗೆ ಸವಾಲೆಸಿದಿದ್ದಾರೆ.

ಈ ಸವಾಲೆಸೆದಿರುವವರೇನೂ ಮುಸ್ಲಿಂ ವಿರೋಧಿಯಂತಾಗಲೀ ಅಥವಾ ಮಾದರಿ ಹಿಂದೂ ಕೋಮುವಾದಿಯಂತಾಗಲೀ ಈ ಧ್ವನಿಕೋಶದಲ್ಲಿರುವ ಭಾಷಣದಲ್ಲಿ ಕೇಳಿಸುವುದಿಲ್ಲ. ಏಕೆಂದರೆ ಹಿಂದೂ-ಮುಸ್ಲಿಮರಿಬ್ಬರೂ ಈ ದೇಶದಲ್ಲಿ ಸೋದರರಂತೆ ಬಾಳಬೇಕು ಎಂಬುದು ತಮ್ಮ ಇಚ್ಛೆ ಎಂದು ಅವರು ಹೇಳುತ್ತಾರಲ್ಲದೆ, ಮುಸ್ಲಿಮರು ದನದ ಮಾಂಸ ತಿನ್ನುವುದಾದರೆ ಅವರ ಮನೆಗಳಲ್ಲಿ ತಿಂದುಕೊಳ್ಳಲಿ ಎಂದು ಹೇಳುವಷ್ಟು ಉದಾರಿಗಳೂ ಆಗಿದ್ದಾರೆ. ಜೊತೆಗೆ ಮುಸ್ಲಿಮರು ಶ್ರೀಕೃಷ್ಣ ಮಠಕ್ಕೆ ದೇವರ ದರ್ಶನಾಕಾಂಕ್ಷಿಗಳಾಗಿ ಬಂದು ಪ್ರಸಾದ ಸ್ವೀಕರಿಸಿ ಹೋಗುವ ಬಗ್ಗೆಯೂ ಇವರ ಆಕ್ಷೇಪಣೆ ಇಲ್ಲವಂತೆ. ಅಲ್ಲದೆ. ತಾವು ನರೇಂದ್ರ ಮೋದಿಯನ್ನು ಆರಾಧಿಸುವುದಾಗಿಯೂ, ಆದರೆ ಅವರೇನಾದರೂ ತಪ್ಪೆಸಗಿದರೆ ಅವರನ್ನೂ ಕ್ಷಮಿಸಲಾರೆವು ಎಂಬ ಎಚ್ಚರಿಕೆಯನ್ನೂ ಕೊಡುತ್ತಾರೆ. ಹಾಗಾಗಿಯೇ ರಾಷ್ಟ್ರ ವಿಭಜನೆಗಾಗಿ ಮಹಾತ್ಮ ಗಾಂಧಿಯನ್ನೂ ತಾವು ಕ್ಷಮಿಸಿಲ್ಲ ಎಂದು ಘಂಟಾಘೋಷವಾಗಿ ಹೇಳುತ್ತಾರೆ! ರಾಷ್ಟ್ರ ವಿಭಜನೆಗೆ ಮಹಾತ್ಮ ಗಾಂಧಿ ಕಾರಣರೆಂದು ಇವರಿಗೆ ಯಾರು ಚರಿತ್ರೆ ಹೇಳಿದರೋ ಮತ್ತು ಗಾಂಧಿಯನ್ನು ತಾವು ಕ್ಷಮಿಸಿಲ್ಲ ಎಂಬ ಅವರ ಮಾತಿನ ಗೂಢಾರ್ಥವೇನು ಎಂಬುದು ತಿಳಿಯದಾಗಿದೆ. ಈ ಹಿನ್ನೆಲೆಯಲ್ಲಿ, ಇವರು ಒಡ್ಡಿರುವ ಸವಾಲನ್ನು ಸ್ವೀಕರಿಸುವಲ್ಲಿ ಪೇಜಾವರರು ಸೋತರೆ ಅವರ ಗತಿ ಏನಾಗುವುದೋ ಎಂಬ ಆತಂಕವೂ ಉಂಟಾಗುತ್ತದೆ! ಈ ಎಲ್ಲ ಹಿನ್ನೆಲೆಯಲ್ಲಿ ಪೇಜಾವರರು ಇವರಿಗೆ ಏನು ಉತ್ತರ ಕೊಡುತ್ತಾರೋ ಎಂಬ ಕುತೂಹಲ ಉಂಟಾಗಿದೆ. ವಿಶೇಷವಾಗಿ ಇವರ ಇಫ್ತಾರ್ ಕೂಟವನ್ನು ಬೆಂಬಲಿಸಿದವರಲ್ಲಿ.

ಪೇಜಾವರರ ವಿರುದ್ಧ ಈ ಸವಾಲೆಸಿದಿರುವ ಮಹಾಶಯರ ಮುಖ್ಯ ಪ್ರಶ್ನೆ ಎಂದರೆ ಹರಿ ಸರ್ವೋತ್ತಮತೆಯನ್ನು ಸಾರುವ ಮಾಧ್ವ ಸಂಪ್ರದಾಯವನ್ನು ಎತ್ತಿಹಿಡಿಯುವ ದೀಕ್ಷೆ ಪಡೆದ ಸ್ವಾಮೀಜಿಯಾದ ನೀವು ಅಲ್ಲಾಹು ಹೊರತಾಗಿ ಬೇರೆ ದೇವರನ್ನು ಮಾನ್ಯ ಮಾಡುವುದಿಲ್ಲ ಎಂದು ದಿನವೂ ತಮ್ಮ ಪ್ರಾರ್ಥನೆಯಲ್ಲಿ ಹೇಳುವ ಮುಸ್ಲಿಮರನ್ನು ಮಠಕ್ಕೆ

ಕರೆದು ಏಕೆ ಆದರಿಸಿದಿರಿ ಎಂಬುದು. ಇನ್ನು ಇದರ ಸುತ್ತಲೇ ಹರಿದಾಡುವ ಅವರ ಉಪ ಪ್ರಶ್ನೆಗಳೆಂದರೆ, ಅನ್ಯ ದೇವರನ್ನು ಪ್ರಾರ್ಥಿಸಲು, ಅಂದರೆ ನಮಾಜ್ ಮಾಡಲು, ಅದೂ ಶ್ರೀಕೃಷ್ಣನ ಮುಡಿಯಂತಿರುವ ಮಠದ ಭೋಜನ ಶಾಲೆಯಲ್ಲಿ ಅವರಿಗೇಕೆ ಅವಕಾಶ ಕೊಟ್ಟಿರಿ? ಸಂಧ್ಯಾಕಾಲದಲ್ಲಿ ಆಹಾರ ಸ್ವೀಕರಿಸಬಾರದೆಂಬ ಹಿಂದೂ ಶಾಸ್ತ್ರ ವಾಕ್ಯವನ್ನು ಹೇಗೆ ನೀವು ಉಲ್ಲಂಘಿಸಿದಿರಿ? ನಾಳೆ ಕುರಿ ಒಂಟೆ ಇತ್ಯಾದಿಗಳನ್ನು ಕಡಿದು ಬಕ್ರೀದ್ ಆಚರಿಸಲೂ ನೀವು ಅವರನ್ನು ಮಠಕ್ಕೆ ಆಹ್ವಾನಿಸುವಿರೇನು? ಇತ್ಯಾದಿ. ಅವರ ಸವಾಲಿನ ಒಟ್ಟು ಸಾರಾಂಶವೆಂದರೆ, ಪೇಜಾವರರು ಹಿಂದೂ ಧರ್ಮ-ಶಾಸ್ತ್ರ-ಸಂಪ್ರದಾಯ ಮತ್ತು ಸಂಸ್ಕೃತಿಗಳಿಗೆ ಅಪಚಾರವೆಸಗಿದ್ದಾರೆ ಎಂಬುದು.

ಈ ಸವಾಲೆಸಿದಿರುವ ಪಂಡಿತರು ಮಾಧ್ವ ಮತ, ಬ್ರಾಹ್ಮಣ ಸಂಸ್ಕೃತಿ ಬಗ್ಗೆ ಮಾತ್ರ ಮಾತಾಡಿದ್ದರೆ ಏನೂ ಅಭ್ಯಂತರವಿರಲಿಲ್ಲ. ಅದು ಆ ಜಾತಿ-ಸಂಸ್ಕೃತಿಯವರ ನಡುವಣ ಚರ್ಚೆಯ ವಿಷಯ ಮಾತ್ರವಾಗಿರುತ್ತಿತ್ತು. ಆದರೆ ಅವರು ಹಿಂದೂ ಧರ್ಮ ಮತ್ತು ಸಂಸ್ಕೃತಿಗಳ ಮಾತನ್ನೂ ಆಡಿದ್ದಾರೆ. ಅವರ ಮಾಧ್ವ ಮತ ಮತ್ತು ಬ್ರಾಹ್ಮಣ ಸಂಪ್ರದಾಯಗಳ ವಿಷಯ ನಮಗೆ ಗೊತ್ತಿಲ್ಲ. ಆದರೆ ಈ ಮತ ಮತ್ತು ಸಂಪ್ರದಾಯಗಳನ್ನು ಮೀರಿರುವ ಹಿಂದೂ ಧರ್ಮ ಮತ್ತು ಸಂಸ್ಕೃತಿಗಳಲ್ಲಿ, ಪೇಜಾವರರು ಈಗ ಏನು ಮಾಡಿರುವರೋ-ಏಕೆ ಮಾಡಿದರು ಎಂಬ ಪ್ರಶ್ನೆ ಬೇರೆಯೇ ವಿಷಯ-ಅದಕ್ಕೆ ಅವಕಾಶವಿದೆ ಎಂದು ಯಾರಾದರೂ ಈ ಪಂಡಿತರಿಗೆ ಹೇಳಬೇಕಿದೆ. ಜೊತೆಗೆ ಉಡುಪಿಯ ಶ್ರೀಕೃಷ್ಣನ ಭಕ್ತ ಸಮುದಾಯದಲ್ಲಿ ಮಾಧ್ವ ಮತ ಸಂಪ್ರದಾಯಗಳಿಗೆ ಕಟ್ಟುಬೀಳದವರೇ ಬಹುಸಂಖ್ಯಾತರಾಗಿದ್ದಾರೆ ಎಂಬುದನ್ನೂ ಅವರಿಗೆ ಸೂಚಿಸಬೇಕಿದೆ. ಏಕೆಂದರೆ ಹಿಂದೂ ಧರ್ಮವು ಯಾವ ಪಂಡಿತನ, ಪುರೋಹಿತನ ಶಾಸ್ತ್ರ ನಿಯಮಗಳಿಗೂ ಎಂದೂ ಬಂಧಿಯಾಗಿ ಉಳಿದಿಲ್ಲ. ಇದು ತುಲಸೀದಾಸರ ಧರ್ಮವು ಹೇಗೋ ಕಬೀರರ ಧರ್ಮವೂ ಆಗಿದೆ. ಹಾಗೇ ಗೋವಿಂದ ಭಟ್ಟರ ಧರ್ಮವು ಹೇಗೋ ಶಿಶುನಾಳ ಶರೀಫರ ಧರ್ಮವೂ ಅಗಿದೆ.

ಹಿಂದುತ್ವ ಎಂದರೆ ಒಂದು ಜೀವನ ವಿಧಾನ ಎಂಬ ನ್ಯಾಯಾಲಯದ ತೀರ್ಪನ್ನು ನಿಮ್ಮಂಥವರು ಯಾವಾಗಲೂ ಉಲ್ಲೇಖಿಸುತ್ತೀರಲ್ಲ? ಈ ಜೀವನ ವಿಧಾನದಲ್ಲಿ ಈ ಎಲ್ಲ ಚರಿತ್ರೆಯೂ ಇದೆ! ರಾಮಕೃಷ್ಣ ಪರಮಹಂಸ-ವಿವೇಕಾನಂದರುಗಳೂ ಹಿಂದೂ ಧರ್ಮದ ಆಧಾರಸ್ಥಂಭಗಳು ಎಂಬುದನ್ನು ನೀವು ಒಪ್ಪಿರುವಿರಾದರೆ, ನಮ್ಮ ಕಾಲದ ಅವರ ಪರಮೋನ್ನತ ಶಿಷ್ಯರಲ್ಲೊಬ್ಬರಾದ ಕುವೆಂಪು ಏನು ಹೇಳುತ್ತಾರೆ ಸ್ವಲ್ಪ ಕೇಳಿ : 'ಯಾವ ಶಾಸ್ತ್ರವು ಏನು ಹೇಳಿದರೇನು? ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?... ಹಿಂದಿನಾ ಋಷಿಗಳೂ ಮಾನವರು ನಮ್ಮಂತೆ-ಅವರ ಶಾಸ್ತ್ರವು ಅವರ ಕಾಲಕ್ಕೆ ಮಾತ್ರ-ಕಾಲಕ್ಕೆ ತಕ್ಕಂತೆ ದೇಶಕ್ಕೆ ತಕ್ಕಂತೆ ನಮ್ಮ ಹೃದಯವೇ ಶ್ರೀಧರ್ಮ ಸೂತ್ರ!'

ಹೃದಯವಂತಿಕೆಗಿಂತ ದೊಡ್ಡ ಧರ್ಮವಿಲ್ಲ. ಹಿಂದೂ ಧರ್ಮವೂ ಸೇರಿದಂತೆ ಧರ್ಮಗಳೆನಿಸಿಕೊಳ್ಳಲು ಯೋಗ್ಯವಾದ ಎಲ್ಲ ಧರ್ಮಗಳೂ ಸಾರದಲ್ಲಿ ಇದನ್ನೇ ಹೇಳುವುದು. ನೀವು ಆ ಸಾರವನ್ನು ಬಿಟ್ಟು ಬರಿ ಸಿಪ್ಪೆಯನ್ನೇಕೆ ಹಿಡಿದು ಜಗ್ಗಾಡುವಿರಿ? ಮಸೀದಿಯೊಳಗೆ ಅವರು ಗಣೇಶನಿಗೆ ಪ್ರವೇಶ ನೀಡುವರೋ ಎಂದು ನೀವು ಕೇಳುವಿರಿ. ಗಣೇಶನ ಮೂರ್ತಿಯನ್ನು ಕೂರಿಸುವ, ಗಣೇಶೋತ್ಸವಗಳಲ್ಲಿ ಸಂಭ್ರಮದಿಂದ ಸಕ್ರಿಯವಾಗಿ ಭಾಗವಹಿಸುವ ಮುಸ್ಲಿಮರು ಎಷ್ಟು ಜನವಿಲ್ಲ? ಶ್ರೀಕೃಷ್ಣ ಮಠದಲ್ಲಿ ಇಫ್ತಾರ್ ಕೂಟ ಏರ್ಪಡಿಸಲು ಇಷ್ಟು ದಿನ ಬೇಕಾಯಿತು. ಹಾಗೇ ಮಸೀದಿಗೆ ಗಣೇಶ ಪ್ರವೇಶಿಸಲೂ ಇಂದಿಷ್ಟು ದಿನ ಬೇಕಾಗಬಹುದು. ಧರ್ಮಗಳ ಆಯುಷ್ಯ ದೊಡ್ಡದು. ಅಲ್ಲೇನಾದರೂ ನಿರ್ಣಾಯಕ ಪರಿವರ್ತನೆ ಸಂಭವಿಸಬೇಕಾದರೆ ಸಹನೆಯಿಂದ ಕಾಯಬೇಕು. ಸಹನೆಯೇ ಧರ್ಮವಲ್ಲವೆ?

ಇಷ್ಟು ಮಾತು ಹೇಳಿ ಅವರ ವಾದದ ಕೇಂದ್ರಕ್ಕೆ ಬರಬಹುದು. ಈ ಪಂಡಿತರೇ ಹೇಳಿದ್ದಾರೆ. ಮುಸ್ಲಿಮರು ಹಿಂದೂ ದೇವರುಗಳಿಗೆ ದೇವಸ್ಥಾನಗಳಿಗೆ ಕೃತಜ್ಞತಾಪೂರ್ವಕ, ಭಕ್ತಿಪೂರ್ವಕ ಕಾಣಿಕೆಗಳನ್ನು ನೀಡುವ ಪರಂಪರೆಯೇ ಇದೆಯೆಂದು. ನಿರ್ದಿಷ್ಟವಾಗಿ ಹೇಳುವುದಾದರೆ, ಇಫ್ತಾರ್ ಕೂಟಕ್ಕೆ ಆಹ್ವಾನಿಸಲ್ಪಟ್ಟ ಉಡುಪಿಯ ಮುಸ್ಲಿಮರು ಶ್ರೀಕೃಷ್ಣ ಮಠಕ್ಕೆ ಶ್ರದ್ಧಾಪೂರ್ವಕವಾಗಿ, ನಿಯಮಿತವಾಗಿ ಕಾಣಿಕೆಗಳನ್ನು ನೀಡುತ್ತಾ ಬಂದಿದ್ದಾರೆ ಎಂದರೆ ಇದರರ್ಥ ಏನು ಸ್ವಾಮಿ? ಅವರು ಶ್ರೀಕೃಷ್ಣನನ್ನೂ ದೇವರೆಂದು ಒಪ್ಪಿಕೊಂಡಿದ್ದಾರೆಂದೇ ಅಲ್ಲವೆ? ಅವರ ನಮಾಜ್‌ನಲ್ಲಿ ಅಲ್ಲಾಹು ಬಿಟ್ಟು ಬೇರೆ ದೇವರಿಲ್ಲ ಎಂಬ ಮಾತನ್ನು ಅವರಿಗಿಂತ ನೀವೇ ಜಡವಾಗಿ ಅರ್ಥೈಸುತ್ತಿದ್ದೀರಲ್ಲಾ? ಕೃಷ್ಣನಲ್ಲೂ ಅವರು ಅಲ್ಲಾಹುನನ್ನು ಕಂಡಿದ್ದಕ್ಕೆ ಅಲ್ಲವೇ ಅವರು ಶ್ರೀಕೃಷ್ಣ ಮಠಕ್ಕೆ ಭಕ್ತಿ-ಕಾಣಿಕೆಗಳನ್ನು ಸಲ್ಲಿಸುತ್ತಿರುವುದು? ಇಸ್ಲಾಂ ಧರ್ಮ ಹುಟ್ಟಿದ ದೇಶ ಕಾಲಗಳಲ್ಲಿ ಆ ಮಾತಿಗೆ ಒಂದು ಸಂದರ್ಭಾರ್ಥವಿದ್ದಿರಬಹುದು. ಈಗ ಬೇರೆ ಸಂದರ್ಭಾರ್ಥವಿದೆ. ಅದನ್ನೇ ಉಡುಪಿಯ ಈ ಮುಸ್ಲಿಮರು ವಾಚ್ಯವಾಗಲ್ಲದಿದ್ದರೂ ಸೂಚ್ಯವಾಗಿ ಹೇಳುತ್ತಿರುವುದು. ಆದರೆ ಪಂಡಿತರ ದುರ್ದೈವವೆಂದರೆ ಅವರು ಯಾವಾಗಲೂ ವಾಚ್ಯಗಳ ಜೊತೆಗೆ ಒದ್ದಾಡುತ್ತಿರುವವರು! ಪಂಡಿತರೇ, ಕಾಲ ಬದಲಾಗುತ್ತಿದೆ. ಈಗಲಾದರೂ ವಾಚ್ಯಗಳಿಂದ ಸೂಚ್ಯಗಳ ಕಡೆ ಬನ್ನಿ. ಸಾಮಾನ್ಯ ಜನರ ಜೊತೆ ಸೇರಿ. ತಂತಮ್ಮ ಧರ್ಮಗಳ ಜೊತೆ ಇತರ ಧರ್ಮಗಳೂ ಉದಾರವಾಗಲು ಸಹಾಯ ಮಾಡಿ. ಬರೀ ಉಗ್ರಗಾಮಿ ಅನ್ಯಮತೀಯರತ್ತ ಮಾತ್ರ ನೋಡಬೇಡಿ. ಅದು ಅವರಲ್ಲಿ ನಮ್ಮ ಉಗ್ರಗಾಮಿಗಳತ್ತ ಮಾತ್ರ ನೋಡುವ ಪ್ರವೃತ್ತಿಯನ್ನು ಹುಟ್ಟು ಹಾಕುತ್ತದೆ.

ಕೊನೆಯ ಒಂದೆರಡು ಉಪಮಾತುಗಳು. ಸಂಧ್ಯಾಕಾಲದಲ್ಲಿ ಆಹಾರ ಸೇವಿಸಬಾರದು ಎಂಬುದು ಶಾಸ್ತ್ರ ವಾಕ್ಯವಾಗಿದ್ದರೆ, ಅದು ಮಾಧ್ವ ಮಠದಲ್ಲಿ ಮಾತ್ರ ಏಕೆ ಅನ್ವಯವಾಗಬೇಕು? ಮಾಧ್ವ ಸಮಾಜವು ಸಾರ್ವಜನಿಕ ಉಪಾಹಾರ

ಮಂದಿರಗಳನ್ನು ನಡೆಸುವ ತನ್ನೆಲ್ಲ ಸದಸ್ಯರಿಗೆ ಸಂಜೆ ತಮ್ಮ ಅಂಗಡಿಗಳನ್ನು ಮುಚ್ಚಬೇಕೆಂದು ಸೂಚಿಸಬೇಕು. ಇನ್ನು ಮಠದ ಆವರಣದಲ್ಲಿ ನಮಾಜ್ ಮಾಡಲು ಅನುವು ಮಾಡಿಕೊಟ್ಟ ಬಗ್ಗೆ. ನಾನು ಈ ಹಿಂದೆ ಹೇಳಿದ ಕಾರಣದಿಂದ ಅವರು ಅಲ್ಲಿ ಅಲ್ಲಾಹುಗೆ ಪ್ರಾರ್ಥನೆ ಸಲ್ಲಿಸಿದ್ದರೂ ಅದು ತಲುಪುವುದು ಶ್ರೀಕೃಷ್ಣನಿಗೇ. ಒಂದು ಜನಪ್ರಿಯ ಶ್ಲೋಕವೇ ಇಲ್ಲವೇ, ಯಾರಿಗೆ ನಮಸ್ಕರಿಸಿದರೂ ಅದು ತಲುಪುವುದು ಕೇಶವನಿಗೇ ಅಂತ? ಇನ್ನು ನಿಮ್ಮ ಹರಿಸರ್ವೋತ್ತಮತೆಯ ನಿಮ್ಮ ಉದ್ಘೋಷ. ಹರಿಸರ್ವೋತ್ತಮತೆಯನ್ನು ಸಾರಿದ ದಾಸವರೇಣ್ಯರೇ ತಮ್ಮದೊಂದು ಕೀರ್ತನೆಯಲ್ಲಿ ತಮಗೆ ಹರಿಯಲ್ಲಿ ನಿರಂತರ ಭಕ್ತಿ ಕೊಡೋ ಎಂದು ಬೇಡುವುದು ಕೈಲಾಸವಾಸಿಯಾದ ಶಿವನನ್ನು ಎಂದ ಮೇಲೆ ಹರಿಸರ್ವೋತ್ತಮತೆಯ ನಿಜವಾದ –ಅನುಭಾವಿ ನೆಲೆಯ– ಅರ್ಥ ಏನು ಎಂಬುದು ನಿಮಗೆ ಅರಿವಾಗಬಹುದು!

ಈ ಇಫ್ತಾರ್ ಕೂಟ ಮುಂದೆ ಮಠದಲ್ಲಿಯೇ ಕುರಿ–ಒಂಟೆ ಕಡಿದು ಬಕ್ರೀದ್ ಆಚರಿಸಲು ನಾಂದಿಯಾಗಬಹುದೆ ಎಂಬ ನಿಮ್ಮ ಮಾತು ಅತಿರೇಕದ್ದು. ಯಾರು ಏನೇ ಮಾಡಲಿ, ಆಯಾ ಕಾಲದ ಜನಸಮೂಹದ (ಒಂದು ಜಾತಿಯ ಅಥವಾ ಪಂಥದ ಅಲ್ಲ) ವಿವೇಕವನ್ನನುಸರಿಸಿ ತಮ್ಮ ಕೆಲಸಗಳನ್ನು ಮಾಡುತ್ತಾರೆ ಎಂಬ ಸಾಮಾನ್ಯ ಪರಿವೆ ನಿಮಗಿದ್ದರೆ ಒಳ್ಳೆಯದು. ನಿಮ್ಮ ಮಾತುಗಳೇ ಸೂಚಿಸುವಂತೆ ನೀವು ಹಿಂದೂ ಧರ್ಮದ ಉದಾರವಾದಿ ಧಾರೆಗೆ ಸೇರಿದವರು. ಆದರೆ ಕಾಲದಲ್ಲಿ ಎಲ್ಲೋ ಸ್ಥಗಿತವಾದಂತಿದ್ದೀರಿ. ದಯಪಿಟ್ಟು ಈ ಉದಾರವಾದಿ ಧಾರೆಯ ಜೀವಂತಿಕೆಗೆ ಹಿಂತಿರುಗುವ ಕೃಪೆ ಮಾಡಿರಿ. ಹರಿ ಸರ್ವೋತ್ತಮನು ಸಂತೋಷಪಡುತ್ತಾನೆ.

(ವಾಟ್ಸಾಪ್‌ನ ಪಂಡಿತರ ಧ್ವನಿ ಕೋಶ ಕೇಳಿ ನನಗನ್ನಿಸಿದ ವಿಚಾರಗಳನ್ನು ಇಲ್ಲಿ ದಾಖಲಿಸಿದ್ದೇನೆ. ಪೇಜಾವರರು ಈ ಪಂಡಿತರಿಗೆ ಉತ್ತರ ಕೊಡುವುದೇ ಆದರೆ, ಅವರ ವಾದ ಸರಣಿ ಯಾವ ಹಾದಿ ಹಿಡಿಯುವುದೋ ಕಾದು ನೋಡಬೇಕಿದೆ.)

(ಫೇಸ್‌ಬುಕ್ ಬರಹ, ಜೂನ್ ೨೦, ೨೦೧೭)

ಹಿಂದೂ ಧರ್ಮ ಹರಿಯುವ ನದಿಯಂತೆ

ಉಡುಪಿಯ ಶ್ರೀಕೃಷ್ಣ ಮಠದಲ್ಲಿ ಪೇಜಾವರ ಸ್ವಾಮಿಗಳ ನೇತೃತ್ವದಲ್ಲಿ ನಡೆದ ಇಫ್ತಾರ್ ಕೂಟ ಎಬ್ಬಿಸಿರುವ ವಿವಾದದ ಸಂದರ್ಭದಲ್ಲಿ ಎ. ನಾರಾಯಣ ಅವರು ಬರೆದಿರುವ ಅಂಕಣ (ಪ್ರವಾ: ೩.೭.೧೭) ಅರ್ಥಪೂರ್ಣವೂ ವಿಚಾರಪ್ರಚೋದಕವೂ ಆಗಿದೆ. ಅದು ಹಿಂದೂ ಧರ್ಮದ ಸ್ವರೂಪದ ಮೇಲೆ ವಿಶೇಷ ಬೆಳಕು ಚೆಲ್ಲುವಂತಿದ್ದು, ಈ ಇಫ್ತಾರ್ ಕೂಟ ಏರ್ಪಡಿಸಿದವರು ಮತ್ತು ಅದನ್ನು ಖಂಡಿಸುತ್ತಿರುವವರು ಇಬ್ಬರನ್ನೂ ಯೋಚನೆಗೆ ಹಚ್ಚುವಂತಿದೆ.

ಹಿಂದೂ ಧರ್ಮವೆಂಬುದು ತನ್ನ ಸ್ವರೂಪದಲ್ಲಿ ನಮ್ಮ ಪಶ್ಚಿಮದಿಂದ ಬಂದ ಧರ್ಮಗಳಿಂದ ಭಿನ್ನವಾಗಿದ್ದು, ಅದನ್ನು ಅವಕ್ಕೆ ಹೋಲಿಸಲಾಗದು. ಏಕೆಂದರೆ ಅವಕ್ಕೊಂದು ಖಚಿತ ಸಾಂಸ್ಥಿಕ ಸ್ವರೂಪ ಇದೆ. ಆದರೆ ಹಿಂದೂ ಧರ್ಮ ಕಾಲಾನುಕಾಲದ ವಿವಿಧ ಕುಲ ಸಂಪ್ರದಾಯಗಳ ಪರಂಪರೆಯನ್ನು ಆಧರಿಸಿ ಬೆಳೆದಿರುವ ಸಡಿಲ ರಚನೆಯ ಧರ್ಮವಾಗಿದ್ದು ಬಹುತ್ವವೇ (ನಾಸ್ತಿಕವಾದ, ಅಜ್ಞೇಯತಾವಾದಗಳೂ ಸೇರಿದಂತೆ ಬಹು ನಂಬಿಕೆಗಳ, ಬಹು ದೇವತಾರಾಧನೆಗಳ, ಬಹು ಆರಾಧನಾ ವಿಧಿ ವಿಧಾನಗಳ, ಬಹು ದಾರ್ಮಿಕ ಪಠ್ಯಗಳ ಇತ್ಯಾದಿ) ಜೀವ ಜೀವಾಳವಾಗಿರುವ ವಿಕಾಸಶೀಲ, ಉದಾರವಾದಿ ಧರ್ಮವಾಗಿದೆ. ಇದು ಈಗಾಗಲೇ ಇತಿಹಾಸಕಾರು, ಸಂಸ್ಕೃತಿ ಚಿಂತಕರು ಮತ್ತು ಸಮಾಜಶಾಸ್ತ್ರಜ್ಞರ ನಡುವೆ ಬಹುಚರ್ಚಿತ ಸಂಗತಿಯಾಗಿದೆ. ಈ ಅರ್ಥದಲ್ಲಿಯೇ ಮಹಾತ್ಮ ಗಾಂಧಿ ತಮ್ಮನ್ನು ಸನಾತನ (ಆರಂಭ–ಅಂತ್ಯಗಳಿಲ್ಲದ) ಧರ್ಮಕ್ಕೆ ಸೇರಿದವರೆಂದು ಹೆಮ್ಮೆಯಿಂದ ಎಂದು ಗುರುತಿಸಿಕೊಂಡದ್ದು. ಅಷ್ಟೇ ಅಲ್ಲ, ಅಸ್ಪೃಶ್ಯತೆ, ಜಾತಿ ಪದ್ಧತಿ, ಶೂದ್ರ–ದಲಿತ ಮತ್ತು ಮಹಿಳೆಯರಿಗೆ ವಿದ್ಯೆಯ ಬಹಿಷ್ಕಾರ ಇತ್ಯಾದಿ ಸಾಮಾಜಿಕ ಕೆಡುಕುಗಳ ಸಂಬಂಧವಾಗಿ ಧರ್ಮಶಾಸ್ತ್ರಜ್ಞರು ಸಮಸ್ಯೆ ಉಂಟು ಮಾಡಿದಾಗ ಅವರು ಹಿಂದೂ ಧರ್ಮ ಮೂಲತಃ ಶಾಸ್ತ್ರಗ್ರಂಥಗಳ ಧರ್ಮವಲ್ಲ ಎಂದು ಹೇಳುತ್ತಿದ್ದರು. ಬದಲಿಗೆ, ಹಿಂದೂ ಧರ್ಮವೆಂಬುದು ಅವರ ಪ್ರಕಾರ ಜನಸಾಮಾನ್ಯರ ನಡುವೆ ಬೆರೆತು ಬದುಕು ನಡೆಸುತ್ತಿದ್ದ ಸಾಧು ಸಂತರು ಕಾಲಾನುಕಾಲದಿಂದ ಬೆಳೆಸುತ್ತಾ ಬಂದಿರುವ ಜನಪದ ಧರ್ಮವಾಗಿದೆ.

ಹೀಗೆ, ಹರಿಯುವ ನದಿಯಂತೆ, ಕಾಲ ದೇಶಗಳ ವಿವಿಧ ಘಟ್ಟಗಳಲ್ಲಿ ಬಂದು ಸೇರುತ್ತಾ ಹೋಗುವ ಕಲ್ಮಶಗಳನ್ನು ಸ್ವತಃ ಶುದ್ಧೀಕರಿಸಿಕೊಳ್ಳುವ ಪ್ರಕೃತಿ ಸಹಜ ಗುಣವನ್ನು ಹೊಂದಿ ಸದಾ ವಿಕಾಸಶೀಲವೂ; ಹಾಗಾಗಿ ಸೃಜನಶೀಲವೂ ಆಗಿ ಮುಂದುವರೆದಿರುವ ಈ ಧರ್ಮದೊಳಕ್ಕೆ ಇತ್ತೀಚೆಗೆ ಹಿಂದುತ್ವವಾದಿಗಳೆಂಬ ಧರ್ಮಕಾರಿಣಿಗಳು ಇತರ ಧರ್ಮಗಳ ಅಸಹಿಷ್ಣುತೆಯಿಂದ ಪ್ರಭಾವಿತರಾದಂತೆ ಆ ಅಸಹಿಷ್ಣುತೆಯನ್ನು ಬೆರೆಸಲು ಪ್ರಯತ್ನಿಸುತ್ತಿದ್ದಾರೆ. ಇದರಿಂದಾಗಿ ಹಿಂದೂ ದರ್ಮದ ಸ್ವಯಂಶುದ್ಧೀಕರಣದ ಗುಣ, ವಿಕಾಸಶೀಲತೆ ಮತ್ತು ಸೃಜನಶೀಲತೆಗಳಿಗೆ ಧಕ್ಕೆಯೊದಗಲಾರಂಭಿಸಿದೆ. ಈ ಪ್ರವೃತ್ತಿಯ ವಿರುದ್ಧ ಹಿಂದೂ ಸನಾತನೆಯಲ್ಲಿ ನಂಬಿಕೆ ಇಟ್ಟ ಎಲ್ಲರೂ ಜಾಗೃತರಾಗಬೇಕಿದೆ.

ಈ ಸಂದರ್ಭದಲ್ಲಿ ಆಧುನಿಕ ಕಾಲದ ಹಿಂದೂ ಧರ್ಮದ ಮಹಾ ಸಂತರೆನಿಸಿದ ರಾಮಕೃಷ್ಣ ಪರಮಹಂಸ, ವಿವೇಕಾನಂದ, ಅರವಿಂದ, ರಮಣ ಮಹರ್ಷಿ ಮುಂತಾದವರನ್ನು ಕನ್ನಡ ಓದುಗರಿಗೆ ಮನಮಟ್ಟುವಂತೆ ಪರಿಚಯ ಮಾಡಿಕೊಟ್ಟ ನಮ್ಮ ಕಾಲದ ಮಹಾಕವಿ ಕುವೆಂಪು ಅವರು ಸಂದರ್ಶನವೊಂದರಲ್ಲಿ ಹೇಳಿದ ಈ ಮಾತುಗಳನ್ನು ಉಲ್ಲೇಖಿಸಬಹುದು: 'ಗಂಗಾ, ಗಾಯತ್ರಿ, ಗೋವುಗಳೇ ಪವಿತ್ರ ಅಂತ ಭಾವಿಸೋದೇ ಹಿಂದೂ ಧರ್ಮ ಆದರೆ ನಾನು ಹಿಂದೂವೇ ಅಲ್ಲ. ಗಂಗಾ ಯಾಕೆ

ಪವಿತ್ರ? ನನ್ನೂರ ತುಂಗೆಯೂ ಪವಿತ್ರವಲ್ಲವೇ? ಗಾಯತ್ರಿ ಒಂದು ಪ್ರಾರ್ಥನೆ ಆದ್ರೆ ನಾನು ಹಾಡೋ ಹಾಡೂ ಗಾಯತ್ರಿನೇ. ಇನ್ನು ಗೋವು, ಕಡೀಬಾರದು ಅನ್ನೋದಾದ್ರೆ ಬೇರೆ ಪ್ರಾಣಿಗಳೇನು ಪಾಪ ಮಾಡಿದಾವೆ? ಅವೂ ಅಷ್ಟೇ ಮುಖ್ಯ...' (ಕುವೆಂಪು ಗದ್ಯ ಸಂಪುಟ-೨: ಪು: ೧೦೫೦, ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ)

ನಿಜ ಹಿಂದೂ ಧರ್ಮೀಯರು ಯೋಚಿಸಬೇಕಾದ ಮಾತುಗಳಿವು.

('ಪ್ರಜಾವಾಣಿ'ಗೆ ಬರೆದ; ಆದರೆ ಪ್ರಕಟವಾಗದ ಪತ್ರ : ೩.೭.೨೦೧೭)

ಇದು ಲೋಹಿಯಾಗೆ ಅಪಚಾರ

'ಅಹಿಂದವಾದಿ'ಯಾಗಿ ತಮ್ಮ ಮುಖ್ಯಮಂತ್ರಿತ್ವವನ್ನು ಆರಂಭಿಸಿದ ಸಿದ್ದರಾಮಯ್ಯನವರು ತಮ್ಮ ಅಧಿಕಾರಾವಧಿಯ ಕೊನೆಯ ವರ್ಷ ಸಮೀಪಿಸುತ್ತಿದ್ದಂತೆ ಅಹಿಂದೇತರ ಜಾತಿಗಳ ಓಲೈಕೆಗೆ ತೊಡಗಿದ್ದಾರೆ. ಇದ್ದಕ್ಕಿದ್ದಂತೆ ಅವರಿಗೆ ಬಸವಣ್ಣನ ಬಗ್ಗೆ ಭಕ್ತಿ ಉಮ್ಮಳಿಸಿ ಎಲ್ಲ ಸರ್ಕಾರಿ ಕಛೇರಿಗಳಲ್ಲಿ ಬಸವಣ್ಣನ ಪಟ ತೂಗು ಹಾಕುವಂತೆ ಆದೇಶ ಹೊರಡಿಸಿ ಲಿಂಗಾಯ್ತ ಜಾತಿಯವರನ್ನು ಓಲೈಸಿದ್ದಾದ ಮೇಲೆ ಈಗ ರಾಜ್ಯಾದ್ಯಂತ ಕೆಂಪೇಗೌಡರ ಜನ್ಮ ದಿನಾಚರಣೆಗೆ ಆದೇಶಿಸಿ (ಪ್ರವಾ: ೨೭.೬.೨೦೧೭) ಒಕ್ಕಲಿಗರ ಓಲೈಕೆಯ ಕೆಲಸ ಆರಂಭಿಸಿದ್ದಾರೆ.

ಕೆಂಪೇಗೌಡರು ಮಾಗಡಿ ಎಂಬ ಸಣ್ಣ ಊರೊಂದನ್ನು ರಾಜಧಾನಿಯನ್ನಾಗಿಸಿಕೊಂಡು ಒಂದು ಪುಟ್ಟ ಸಂಸ್ಥಾನವನ್ನು ಆಳುತ್ತಿದ್ದ ಪಾಳೇಗಾರರು. ಅವರು ಇಂದಿನ ಬೆಂಗಳೂರು ನಗರದ ಸಂಸ್ಥಾಪಕರು ಎಂದೂ ಹೇಳಲಾಗುತ್ತಿದೆ. ಇರಬಹುದು. ಜೊತೆಗೆ ಅವರು ತಮ್ಮ ಸಂಸ್ಥಾನದ ಒಳ್ಳೆಯ ಆಡಳಿತಗಾರರೂ ಇರಬಹುದು. ಹಾಗಾಗಿಯೇ ಈಗಾಗಲೇ ಹಲವು ವರ್ಷಗಳಿಂದ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಪ್ರತಿ ವರ್ಷ ಅವರ ಜನ್ಮ ದಿನಾಚರಣೆ ವೈಭವದಿಂದ ನಡೆಯುತ್ತಿದೆ. ಆದರೆ ಈ ಕೆಂಪೇಗೌಡರಿಗೂ ಇಡೀ ರಾಜ್ಯದ ಜನತೆಗೂ ಯಾವ ಭಾವ ಸಂಬಂಧ? ರಾಜ್ಯಾದ್ಯಂತ ಏಕೆ ಅವರ ಅಧಿಕೃತ ಜನ್ಮ ದಿನಾಚರಣೆಯ ಆದೇಶ? ಅದೂ ಈಗ? ಇದು ಪರಮ ಜಾತಿ ರಾಜಕಾರಣವಲ್ಲದೆ ಮತ್ತೇನಲ್ಲ.

ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾದ ಮೇಲೆ ಕನ್ನಡದ ಹಲವು ಪುಣ್ಯಪುರುಷರನ್ನು ಜಾತಿ ನಾಯಕರನ್ನಾಗಿ ಗುರುತಿಸಿ ನಮ್ಮ ಸಂಸ್ಕೃತಿಯಲ್ಲಿ ಅವರ ಮಹತ್ವವನ್ನು ಸಂಕುಚಿತ ವಲಯಗಳಿಗೆ ಸೀಮಿತಗೊಳಿಸಲಾಗಿದೆ. ಅವರನ್ನು ಮತಬ್ಯಾಂಕ್ ರಾಜಕಾರಣದ ಸಾಧನಗಳನ್ನಾಗಿ ಬಳಸಿಕೊಂಡು ಅವಮಾನಿಸಲಾಗುತ್ತಿದೆ.

ಇಂದು ರಾಜ್ಯದ ಯಾವುದೇ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿನ ಜಿಲ್ಲಾಧಿಕಾರಿಗಳ ಅಥವಾ ತಹಸೀಲ್ದಾರರುಗಳ ಕಛೇರಿ ಬಳಿ ಹೋದರೂ, ವಾರದಲ್ಲಿ ಇಂತಹ ಕನಿಷ್ಠ ಒಂದಿಬ್ಬರು 'ಜಾತಿ ನಾಯಕ'ರಾಗಿ ಕುಬ್ಜಗೊಂಡ ಪುಣ್ಯಪುರುಷರ ಮೆರವಣಿಗೆಗಳು ಆಯಾ ಜಾತಿಗಳ ಗಾತ್ರಕ್ಕನುಗುಣವಾದ ಮತ್ತು ಆಯಾ ಜಾತಿ ಬಾಂಧವರ ಉದ್ಘೋಷಗಳ ಸಹಿತವಾಗಿ 'ವೈಭವ'ದೊಂದಿಗೆ ನಡೆದಿರುವ ಕರುಣಾಜನಕ ದೃಶ್ಯವನ್ನು ನೋಡಬಹುದು. ಇದರಿಂದ ಸ್ಥಳೀಯ ವಾದ್ಯವೃಂದದವರಿಗೆ ಮತ್ತು ಜಾನಪದ ಕಲಾವಿದರಿಗೆ ಒಂದಿಷ್ಟು ನಿಯಮಿತ ವರಮಾನ ಸಿಗುತ್ತಿದೆ ಎಂಬುದರ ಹೊರತಾಗಿ ಮತ್ತಾವ ಸಾರ್ವಜನಿಕ ಪ್ರಯೋಜನವೂ ಆಗುತ್ತಿಲ್ಲ.

ಇದೆಲ್ಲ ಜಾತಿ ರಾಜಕಾರಣದ ಜೊತೆಗೇ, ಸಿದ್ದರಾಮಯ್ಯನವರು ಇತ್ತೀಚೆಗೆ ವೀರಶೈವ ಸಮುದಾಯಕ್ಕೆ ಪ್ರತ್ಯೇಕ ಮತವೆಂದು ಸಾಂವಿಧಾನಿಕ ಮಾನ್ಯತೆ ದೊರಕಿಸಿಕೊಡಲು ಶಿಫಾರ್ಸು ಮಾಡುವುದಾಗಿಯೂ ಹೇಳಿ ವಿನಾಶಕಾರಿ ಮತೀಯ ರಾಜಕಾರಣಕ್ಕೂ ಕೈಹಾಕಿದ್ದಾರೆ. ಏಕೆ, ಸಿದ್ದರಾಮಯ್ಯನವರಿಗೆ ಈಗಿರುವ ಮತಗಳು ಮಾಡುತ್ತಿರುವ ಅನಾಹುತಕಾರಿ ರಾಜಕಾರಣದಿಂದ ತೃಪ್ತಿ ಇಲ್ಲವೆ? ಇದೆಲ್ಲವನ್ನೂ ಇವರು ತಮ್ಮ ಚುನಾವಣಾ ಯಶಸ್ಸಿಗಾಗಿ ಮಾಡುತ್ತಿರುವಂತಿದೆ. ಆದರೆ ಯಾರದ್ದೇ ಚುನಾವಣಾ ಯಶಸ್ಸಿಗಿಂತ ಸಮಾಜದ ಒಟ್ಟಾರೆ ಶ್ರೇಯಸ್ಸು ದೊಡ್ಡದು ಎಂಬುದು ಸಿದ್ದರಾಮಯ್ಯನವರಿಗೆ ಆದಷ್ಟು ಬೇಗ ಮನದಟ್ಟಾಗಬೇಕು.

ಇತ್ತೀಚೆಗೆ ಒಂದು ಟಿವಿ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯನವರು ತಾವು ಸಮಾಜವಾದಿ ನಾಯಕ ಡಾ. ರಾಮಮನೋಹರ ಲೋಹಿಯಾರ ವಿಚಾರಗಳಿಂದ ಪ್ರಭಾವಿತರಾಗಿ ರಾಜಕಾರಣವನ್ನು ಪ್ರವೇಶಿಸಿದ್ದಾಗಿ ಹೇಳಿಕೊಂಡರು. ಇದರಿಂದಾಗಿ, ಸಿದ್ದರಾಮಯ್ಯನವರ ಇಂದಿನ ರಾಜಕಾರಣ ನೋಡುತ್ತಿರುವ ಅಮಾಯಕ ಜನರಲ್ಲಿ ಲೋಹಿಯಾ ಎಂದರೆ ಜಾತಿ ರಾಜಕಾರಣವನ್ನು ಪ್ರಚೋದಿಸಿದ ನಾಯಕ ಎಂಬ ತಪ್ಪು ಅಭಿಪ್ರಾಯ ಮೂಡುವ ಸಾಧ್ಯತೆ ಇದೆ. ಆದರೆ ಲೋಹಿಯಾ ಭಾರತದಲ್ಲಿನ ಜಾತಿಪದ್ಧತಿಯ ವಾಸ್ತವವನ್ನು ಅರಿತವರಾಗಿ ಅದರಿಂದಾಗುತ್ತಿರುವ ಸಾರ್ವಜನಿಕ ಅನಾಹುತಗಳನ್ನು ಪರಿಹರಿಸುವ ಮಾರ್ಗವಾಗಿ ತಮ್ಮ ಜಾತಿ ನೀತಿಯನ್ನು ಮಂಡಿಸಿದ್ದರು. ಅವರ ಜಾತಿ ನೀತಿಯ ಉದ್ದೇಶ ಜಾತಿರಹಿತ ಸಮಾಜವನ್ನು ನಿರ್ಮಿಸುವುದಾಗಿತ್ತೇ ಹೊರತು, ಈಗ ಸಿದ್ದರಾಮಯ್ಯನವರು ಮಾಡುತ್ತಿರುವಂತೆ ಜಾತಿಮಯ ಸಮಾಜವನ್ನು ನಿರ್ಮಿಸುವುದಾಗಿರಲಿಲ್ಲ. ಸಿದ್ದರಾಮಯ್ಯನವರು ಈಗ ಹಿಡಿದಿರುವ ಜಾತಿಗಳ ಓಲೈಕೆಯ ಹಾದಿ ತಮ್ಮ ನಾಯಕ ಲೋಹಿಯಾ ವಿಚಾರಗಳಿಗೆ ವಿರುದ್ಧವಾದುದಷ್ಟೇ ಅಲ್ಲ, ಸಾಮಾಜಿಕವಾಗಿ ವಿಘಟನಕಾರಿಯಾಗಿ ಪರಿಣಮಿಸುವಂತಹದ್ದು.

('ಪ್ರಜಾವಾಣಿ'ಯಲ್ಲಿ ಪ್ರಕಟವಾಗದ ಪತ್ರ: ಜೂನ್ ೨೦೧೭)

ರಾಜಕೀಯ ನೈತಿಕತೆ : ಒಂದು ಅಸಂಗತ ಚರ್ಚೆ

ಈ ಬಾರಿಯ ಚುನಾವಣಾ ಸಂದರ್ಭದ ಚರ್ಚೆಗಳ ವಿಶೇಷತೆ ಎಂದರೆ, ಚುನಾವಣಾಪೂರ್ವ ಮತ್ತು ಚುನಾವಣಾ ಸಮಯದ ಚರ್ಚೆಗಳಷ್ಟೇ ಕಾವನ್ನು ಚುನಾವಣೋತ್ತರ ಚರ್ಚೆಗಳೂ ಉಳಿಸಿಕೊಂಡಿರುವುದು. ಆದರೆ ಇವಾವೂ ಈ ರಾಜಕಾರಣದ ಅಥವಾ ಅದಕ್ಕೆ ಆಧಾರವಾಗಿರುವುದೆಂದು ಹೇಳಲಾಗುತ್ತಿರುವ ಪ್ರಜಾಪ್ರಭುತ್ವದ ಘನತೆ-ಗೌರವಗಳನ್ನು ಹೆಚ್ಚಿಸುವಂತಹ ಚರ್ಚೆಗಳಾಗಿರದೆ, ಅವಕ್ಕೆ ಸವಾಲೆಸೆಯುವಂತಹ ಚರ್ಚೆಗಳಾಗಿರುವುದು ಖೇದಕರ. ಉದಾಹರಣೆಗೆ ಒಂದು ಕಡೆಯಿಂದ, ನೀನು ಮಾಡುತ್ತಿರುವುದು ತಪ್ಪು ಎಂಬ ಮಾತು ಹೊರಬೀಳುತ್ತಿದ್ದಂತೆಯೇ ನೀನೂ ಇಂತಹ ಹತ್ತು ತಪ್ಪುಗಳನ್ನು ಮಾಡಿರುವ ದಾಖಲೆ ನನ್ನಲ್ಲಿದೆ ಎಂಬ ಪ್ರತಿಕ್ರಿಯೆ ಸಿದ್ಧವಾಗಿರುತ್ತದೆ. ಯಾರೂ ನೈತಿಕವಾಗಿ ಸರಿ ಎನ್ನಬಹುದಾದ, ಪ್ರಜಾಪ್ರಭುತ್ವದ ನಿಯಮಗಳಿಗೆ ಬದ್ಧವಾದುದರ ಚರ್ಚೆಯನ್ನೇ ಮಾಡುತ್ತಿಲ್ಲ. ಹಾಗಾಗಿ ಈ ಚರ್ಚೆಯಲ್ಲಿ ಒಂದು ಕಡೆ ಸೇರಿಕೊಳ್ಳದೆ ಚರ್ಚೆಯಲ್ಲಿ ಭಾಗವಹಿಸುವುದೆಂದರೆ ಮಾತಿನ ಹೆಬ್ಬಲೆಗೆ ಸಿಕ್ಕಿಕೊಂಡಂತೆಯೇ ಆಗಿದೆ.

ಈ ಅಪಾಯವನ್ನು ಅರಿತೂ ಮುಂದಿನ ಕೆಲವು ಸಂಗತಿಗಳನ್ನು ಹೇಳುವ ದುಸ್ಸಾಹಸವನ್ನು ಮಾಡಬಯಸುತ್ತಿದ್ದೇನೆ. ಈಗ ರಾಜ್ಯಪಾಲರ ನಿರ್ಧಾರದ ಬಗ್ಗೆ ಅದು ರಾಜಕೀಯ ಪ್ರೇರಿತ ನಿರ್ಧಾರ ಎಂದು ಒಂದು ಕಡೆಯಿಂದ ಕೂಗಾಡಲಾಗುತ್ತಿದೆ. ಆದರೆ ಅತಂತ್ರ ವಿಧಾನಸಭೆಯ ಸಂದರ್ಭದಲ್ಲಿ ರಾಜ್ಯಪಾಲರು ಏನು ಮಾಡಬಹುದು ಎಂಬ ಬಗ್ಗೆ ಎರಡು ಮೂರು ದಿನಗಳಿಂದ ನಮ್ಮ ರಾಜ್ಯ ಮತ್ತು ರಾಷ್ಟ್ರೀಯ ಟಿವಿ ವಾಹಿನಿಗಳಲ್ಲಿ ಹಲವು ಉನ್ನೋತೋನ್ನತ ರಾಜ್ಯಾಂಗ ಪರಿಣತರು ನಡೆಸಿರುವ ಚರ್ಚೆಯ ಆಧಾರದ ಮೇಲೆ ಹೇಳುವುದಾದದರೆ, ಈ ಬಗ್ಗೆ ನ್ಯಾಯಾಲಯಗಳೂ ಸೇರಿದಂತೆ ಯಾವುದೇ ಸಾಂವಿಧಾನಿಕ ವೇದಿಕೆಯಿಂದ ಇದಮಿತ್ಥಂ ಎನ್ನುವ ಸ್ಪಷ್ಟ ನಿರ್ದೇಶನವಿದ್ದಂತಿಲ್ಲ. ಹಾಗಾಗಿ ರಾಜ್ಯಪಾಲರು ತಮ್ಮ ಮುಂದಿದ್ದ ಹಲವು ಆಯ್ಕೆಗಳಲ್ಲಿ ಒಂದನ್ನು ತಮಗೆ ಲಭ್ಯವಿದ್ದ ಕಾನೂನು ಸಲಹೆಗಳ ಮೇರೆಗೆ ಮತ್ತು ತಮ್ಮ ಸ್ವಂತ ವಿವೇಚನಾನುಸಾರ ಮಾನ್ಯ ಮಾಡಿ ಯಡಿಯೂರಪ್ಪನವರಿಗೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಬೋಧಿಸಿದ್ದಾರೆ. ಸದ್ಯಕ್ಕೆ ತಾಂತ್ರಿಕವಾಗಿ ಇದರಲ್ಲಿ ಯಾವುದೂ ತಪ್ಪಿಲ್ಲವೆಂದು ಕಾಣುತ್ತದೆ. ನೈತಿಕ ಸರಿತನವೆಂಬುದು ತುಂಬ ವ್ಯಕ್ತಿನಿಷ್ಠವಾದುದರಿಂದ ಅದರ ಆಧಾರದ ಮೇಲೆ ಚರ್ಚೆ ಬೆಳೆಸುವುದು ನಿಷ್ಪ್ರಯೋಜಕವೇ ಸರಿ. ಏಕೆಂದರೆ ಇಂತಹ ಚರ್ಚೆಯಿಂದ ಈ ಮೊದಲು ಹೇಳಿದಂತಹ ಎರಡೂ ಕಡೆಯವರ ಅನೀತಿಯುತ ಕೃತ್ಯಗಳ ಪರಂಪರೆಯ ಪರಸ್ಪರ ಆಪಾದನೆಗಳ ಸುರಿಮಳೆ ಶುರುವಾಗುತ್ತದೆ. ಉದಾಹರಣೆಗೆ ರಾಜ್ಯಪಾಲರ

ಕಛೇರಿಯನ್ನು ಪಕ್ಷ ರಾಜಕಾರಣದ ಕಛೇರಿಯನ್ನಾಗಿ ಮಾರ್ಪಡಿಸಲಾಗಿದೆ ಎಂಬೊಂದು ಕಡೆಯ ಮಾತನ್ನು ರಾಜ್ಯದಲ್ಲಿನ ಇತ್ತೀಚಿನ ಇತಿಹಾಸದಲ್ಲಿನ ಈ ಸಂಬಂಧದ ಉಜ್ವಲ ಉದಾಹರಣೆಗಳೊಂದಿಗೆ ಇನ್ನೊಂದು ಕಡೆಗೆ ಸುಲಭವಾಗಿ ತಿರುಗಿಸಿ ಹೇಳಬಹುದು.

ಆದರೆ ಈ ಸಂಬಂಧದ ಮುಖ್ಯ ವಿಚಾರವೆಂದರೆ, ರಾಜ್ಯಪಾಲರ ನಿರ್ಧಾರ ಹೇಗೂ ನ್ಯಾಯಾಂಗದ ಪರಿಶೀಲನೆಗೆ ಹೋಗುತ್ತಿರುವುದರಿಂದ ಅಲ್ಲಿ ಅದು ಸದ್ಯದಲ್ಲೇ–ಬಹುಶಃ ಒಂದೆರಡು ದಿನಗಳಲ್ಲೇ– ತೀರ್ಮಾನವಾಗಲಿದೆ. ರಾಜ್ಯಪಾಲರ ನಿರ್ಧಾರದಲ್ಲಿನ ಬರಿಗಣ್ಣಿಗೇ ಕಾಣುವ ಒಂದು ಅನುಮಾನಾಸ್ಪದ ಸಂಗತಿಯೂ ಈ ಪರಿಶೀಲನೆಗೆ ಸಿಕ್ಕಿ ಆ ಅನುಮಾನವೂ ಪರಿಹಾರವಾಗುವ ಎಲ್ಲ ನಿರೀಕ್ಷೆ ಇದೆ. ಆ ಅನುಮಾನಾಸ್ಪದ ಅಂಶವೆಂದರೆ ಹೊಸ ಮುಖ್ಯಮಂತ್ರಿಗಳಿಗೆ ಬಹುಮತ ಸಾಬೀತುಪಡಿಸಲು ಹದಿನೈದು ದಿನಗಳಷ್ಟು ವಿನಾಕಾರಣದ ಅವಕಾಶ ನೀಡಿರುವುದು. ಈ ಹಿಂದೆ ಸರ್ವೋನ್ನತ ನ್ಯಾಯಾಲಯ ಇಂತಹ ಅವಧಿಯನ್ನು ಮೊಟಕುಗೊಳಿಸಿರುವ ಉದಾಹರಣೆಗಳು ಇವೆ. ಹಾಗಾಗಿ ನಾನು ನಂಬಿರುವುದೇ ಸರಿ ಎಂದು ವಾದದ ಹುಯ್ಲೆಬ್ಬಿಸುತ್ತಿರುವವರು ರಾಜ್ಯಪಾಲರನ್ನು ಯಾವುದೇ ಕಾರಣದಿಂದ ನಂಬಲಾಗದಿದ್ದರೆ ನ್ಯಾಯಾಂಗದ ಸರ್ವೋನ್ನತ ವೇದಿಕೆಯನ್ನಾದರೂ ನಂಬುವ ವಿವೇಕ ಪ್ರದರ್ಶಿಸಬೇಕಿದೆ. ಈ ನಂಬಿಕೆಯನ್ನೂ ಕಳೆದುಕೊಂಡರೆ ಅರಾಜಕತೆಯೇ ಗತಿ.

ಇನ್ನು ಬಹುಮತವಿಲ್ಲದವರಿಗೆ ಅಧಿಕಾರ ಸ್ಥಾನ ಕೊಟ್ಟು ಬಹುಮತಕ್ಕಾಗಿ ಭ್ರಷ್ಟ ಮಾರ್ಗಗಳಿಗೆ ಅವಕಾಶ ಮಾಡಿಕೊಡಲಾಗಿದೆ ಎಂಬ ಮಾತು. ಮೊದಲೇ ಹೇಳಿದ ಹಾಗೆ ರಾಜಕೀಯ ಸೋಂಕಿರಬಾರದ ಸಾಂವಿಧಾನಿಕ ಅಧಿಕಾರ ಸ್ಥಾನದಲ್ಲಿರುವ ರಾಜ್ಯಪಾಲರು ತಮ್ಮ ವಿವೇಚನೆಗನುಸಾರವಾದ ಒಂದು ಆಯ್ಕೆ ಮಾಡಿಕೊಂಡಿದ್ದಾರೆ. ಅದರ ಪರಿಣಾಮವಾಗಿ ರಾಜಕೀಯ ಭ್ರಷ್ಟತನದ ಅನಾವರಣವಾಗುವ ಸಾಧ್ಯತೆಗಳಿದ್ದರೆ ಅದಕ್ಕೆ ರಾಜಕೀಯ ನಾಯಕರು ಮಾತ್ರ ಕಾರಣವಾಗಬಲ್ಲರು. ಆದುದರಿಂದ ಅಂತಹ ದುಷ್ಕೃತ್ಯಗಳಿಗೆ ಆಸ್ಪದವಾಗದಂತೆ ನೋಡಿಕೊಳ್ಳುವುದು ರಾಜಕೀಯ ನಾಯಕತ್ವಗಳ ಕರ್ತವ್ಯವಾಗಿದೆ. ಇಂದು ತಾವು ಅಧಿಕಾರವಂಚಿತರೆಂದು ಹಾಹಾಕಾರ ಮಾಡುತ್ತಿರುವ ಪಕ್ಷಗಳ ರಾಜಕೀಯ ಶೀಲ ಸರಿಯಿದ್ದರೆ ಬಹುಮತವಿಲ್ಲದವರು ಬಹುಮತವನ್ನು ಹೇಗೆ ಸಾಬೀತುಪಡಿಸಿಯಾರು? ಹಾಗಾಗಿ ಇವರೇಕೆ ಕೆಲವು ದಿನಗಳಮಟ್ಟಿಗಾದರೂ ಕಾದು ತಂತಮ್ಮ ಪಾಲಿನ ಅಧಿಕಾರ ಪಡೆಯಬಾರದು? ಅಷ್ಟರಲ್ಲಿ ಅಧಿಕಾರದ ಯಾವ ಪಾಲು ಸೂರೆ ಹೋದೀತು? ಆದರೆ ಈ ಪಕ್ಷಗಳು ತಮ್ಮೆಲ್ಲ ಶಾಸಕರನ್ನೂ 'ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ' ಎಂಬಂತೆ ರೆಸಾರ್ಟುಗಳ ಆರಾಮ ಜೀವನಕ್ಕೆ ತರುಬಿರುವುದನ್ನು ನೋಡಿದರೆ ಈ ಪಕ್ಷಗಳ ಕಚ್ಚೆ ಭದ್ರವಿರುವ ಬಗ್ಗೆ ಅವಕ್ಕೇ ಗ್ಯಾರಂಟಿಯಿಲ್ಲ. ಇದು ತಾನು ಕಳ್ಳ ಪರರನ್ನು ನಂಬ ಎಂಬ ಗಾದೆಯಂತಹ ಪರಿಸ್ಥಿತಿಯಷ್ಟೆ. ಇದು ಯಾವುದೇ ನಿರ್ದಿಷ್ಟ ಪಕ್ಷದ ಬಗ್ಗೆ ಹೇಳಬಹುದಾದ ಮಾತಲ್ಲ. ಈಗ ಪ್ರಮಾಣವಚನ ಸ್ವೀಕರಿಸಿರುವ

ಪಕ್ಷವೂ ಇದೇ ಸ್ಥಿತಿಯಲ್ಲಿದ್ದಿದ್ದರೆ ಅದು ಮಾಡುತ್ತಿದ್ದುದು ಇದನ್ನೇ ಎಂಬುದು ಕೆಲವೇ ವರ್ಷಗಳ ಹಿಂದಿನ ಇತಿಹಾಸದ ಪುಟಗಳು ಸಾಬೀತುಪಡಿಸುತ್ತವೆ.

ಹಾಗಾಗಿ ಈಗ ನಡೆಯುತ್ತಿರುವುದೆಲ್ಲವೂ ಭ್ರಷ್ಟಾಚಾರ ಅಥವಾ ಅನೈತಿಕತೆ ಕುರಿತ ಅಪ್ರಾಮಾಣಿಕ ಚರ್ಚೆ ಮಾತ್ರ ಆಗುತ್ತದೆ. ಈ ಚರ್ಚೆಗೆ ಈಗ ಇನ್ನೊಂದು ಹೊಸ ಆಯಮವೂ ಬಂದು ಸೇರಿಕೊಂಡಿದೆ. ಇದನ್ನು ಸೇರಿಸಿದ ಕೀರ್ತಿ ಮೊನ್ನೆ ಟಿವಿ ಚರ್ಚೆಗಳಲ್ಲಿ ಭಾಗವಹಿಸಿದ್ದ ಈಗ ಅಧಿಕಾರ ಹಿಡಿದಿರುವ ಪಕ್ಷದ ಚಾಣಾಕ್ಷ ವಕ್ತಾರರೊಬ್ಬರಿಗೆ ಸಲ್ಲುತ್ತದೆ. ಈ ಆಯಾಮವನ್ನು ಸೃಷ್ಟಿಸಿದ ಅವರಾಡಿದ ಎರಡು ಮಾತುಗಳು ಆ ಸಂದರ್ಭದಲ್ಲಾದರೂ ತಲೆದೂಗಿಸುವಂತಿದ್ದವು. ಅವೆಂದರೆ, ಪೂರ್ಣ ಫಲಿತಾಂಶಗಳು ಅಂತಿಮವಾಗಿ ಪ್ರಕಟವಾಗುವವರೆಗೆ ಪರಸ್ಪರ ಗಂಭೀರ ಆರೋಪಗಳ ಕೆಸರೆರಚಾಟದಲ್ಲಿ ತೊಡಗಿದ್ದ ಪಕ್ಷಗಳು ಅಧಿಕಾರ ತಮ್ಮ ಕೈ ತಪ್ಪಿಹೋಗುವ ಆತಂಕ ಸೃಷ್ಟಿಯಾದ ತಕ್ಷಣ ಪರಸ್ಪರ ಹಲ್ಲು ಕಿರಿಯುತ್ತಾ ಕೈಕುಲುಕಿಕೊಂಡು ಮೈತ್ರಿ ಮಾಡಿಕೊಂಡು ಅಧಿಕಾರಕ್ಕೆ ಬರಲು ಹವಣಿಸುವುದು ರಾಜಕೀಯ ನೈತಿಕತೆಯ ಪ್ರಶ್ನೆಯನ್ನು ಎತ್ತಕೂಡದ ಹಾಗಿದ್ದರೆ, ಅಲ್ಲಿಗೆ ನೈತಿಕ ಪ್ರಶ್ನೆಗಳು ಚುಕ್ತಾ ಆಗಿ, ಅಧಿಕಾರಕ್ಕಾಗಿ ನಾವು ಮಾಡುವ ಯಾವ ಪ್ರಯತ್ನವೂ ನೈತಿಕ ಪ್ರಶ್ನೆಗಳನ್ನು ಎತ್ತಬಾರದು. ಇದನ್ನು ಅವರು ಬಹು ಸ್ವಾರಸ್ಯಕರವಾಗಿ ವಿಸ್ತರಿಸಿ ಹೇಳಿದ್ದು ಹೀಗೆ : ಅತ್ಯಂತ ಕಡಿಮೆ ಮತ ಪಡೆದ ಪಕ್ಷವೊಂದರ ನಾಯಕನಿಗೆ ಮುಖ್ಯಮಂತ್ರಿ ಸ್ಥಾನದ ಆಮಿಷವೊಡ್ಡಿ ಇಡೀ ಪಕ್ಷವೊಂದರ ಕುದುರೆ ಬಲವನ್ನು ಖರೀದಿಸುವ ಪ್ರಯತ್ನ ಮಾಡುವುದು ಅನೈತಿಕವಲ್ಲದಿದ್ದರೆ ತಮ್ಮ ಅಭಿಪ್ರಾಯ ಕೇಳದೆ ಕೈಗೊಳ್ಳಲಾಗಿರುವ ತಂತಮ್ಮ ಪಕ್ಷಗಳ ನಿರ್ಧಾರಗಳಿಂದ ಅಸಮಧಾನಗೊಂಡಿರುವ ನಾಲ್ಕಾರು ಶಾಸಕರನ್ನು ಹೇಗೋ ತಮ್ಮೆಡೆಗೆ ಸೆಳೆದುಕೊಳ್ಳುವ ನಮ್ಮ ಪ್ರಯತ್ನ ಹೇಗೆ ಅನೈತಿಕವಾಗುತ್ತದೆ?

ಈ ಪ್ರಶ್ನೆಗೆ ಉತ್ತರ ಯಾರ ಬಳಿ ಇದೆಯೋ ಅವರು ಮಾತ್ರ ಇಂದು ನಡೆಯುತ್ತಿರುವ ರಾಜಕೀಯ ಚರ್ಚೆಯನ್ನು ಮುಂದುವರೆಸಬಲ್ಲರು!

('ಪ್ರಜಾವಾಣಿ'ಯಲ್ಲಿ ಪ್ರಕಟವಾಗದೆ ಫೇಸ್‌ಬುಕ್‌ನಲ್ಲಿ ಪ್ರಕಟ: ಮೇ ೧೬, ೨೦೧೮)

ಗಾಂಧಿ ಭವನಗಳು ಸರ್ಕಾರಿ ಸಂಸ್ಥೆಗಳಾಗದಿರಲಿ

ಕರ್ನಾಟಕ ಸರ್ಕಾರವು ಪ್ರತಿ ಜಿಲ್ಲಾ ಕೇಂದ್ರದಲ್ಲೂ ಗಾಂಧಿ ಭವನವನ್ನು ಸ್ಥಾಪಿಸಲು ಉದ್ದೇಶಿಸಿರುವ ಸುದ್ದಿ ಈಗ ಪ್ರಚಲಿತದಲ್ಲಿದೆ. ಈ ಸಂಬಂಧವಾಗಿ ಸರ್ಕಾರದ ವಾರ್ತಾ ಇಲಾಖೆಯ ಮುಂದಾಳತ್ವದಲ್ಲಿ ಕೆಲವು ಸಮಾಲೋಚನಾ ಸಭೆಗಳು ನಡೆದ ವರದಿಗಳು ಪತ್ರಿಕೆಗಳಲ್ಲಿ ಇತ್ತೀಚೆಗೆ ಪ್ರಕಟವಾಗಿವೆ. ಪ್ರತಿ ಜಿಲ್ಲಾ ಕೇಂದ್ರದ ಗಾಂಧಿ ಭವನದ ಕಟ್ಟಡಕ್ಕೆ

ತಲಾ ಒಂದು ಕೋಟಿ ರೂಪಾಯಿಗಳನ್ನು ಸರ್ಕಾರದ ಕಡೆಯಿಂದ ಮಂಜೂರು ಮಾಡುವುದಾಗಿ ಮುಖ್ಯಮಂತ್ರಿಗಳು ಹೇಳಿರುವುದಾಗಿಯೂ ಈ ವರದಿಗಳು ತಿಳಿಸಿವೆ.

ಸರ್ಕಾರ ಗಾಂಧೀಜಿ ಬಗ್ಗೆ ಈಗ ಆಸಕ್ತಿ ವಹಿಸಿರುವುದು ಸಂತೋಷದ ವಿಷಯವೇ. ಆದರೆ ಈ ಹೊಸ ಆಸಕ್ತಿಗೆ ಕಾರಣಗಳೇನು? ಯಾವ ಉದ್ದೇಶದಿಂದ ಈ ಜಿಲ್ಲಾ ಗಾಂಧಿ ಕೇಂದ್ರಗಳ ಸ್ಥಾಪನೆಯಾಗುತ್ತಿದೆ? ಅವುಗಳ ಸ್ವರೂಪವೇನು ಇತ್ಯಾದಿಗಳ ಬಗ್ಗೆ ಈವರೆಗೆ ಸಾರ್ವಜನಿಕರಿಗೆ ಯಾವ ಮಾಹಿತಿಯೂ ಇಲ್ಲ. ಏಕೆಂದರೆ, ಈಗಾಗಲೇ ಸರ್ಕಾರದ ಅನುದಾನ ಪಡೆಯುವ ಗಾಂಧಿ ಭವನ ಬೆಂಗಳೂರಿನಲ್ಲಿ ಅಸ್ತಿತ್ವದಲ್ಲಿದ್ದು, ಅದು ರಾಜ್ಯಾದ್ಯಂತ ತನ್ನ ಚಟುವಟಿಕೆಗಳನ್ನು ನಡೆಸುತ್ತಿದೆ. ಇನ್ನು ನಮ್ಮ ಪ್ರತಿ ವಿಶ್ವವಿದ್ಯಾಲಯದಲ್ಲೂ ಗಾಂಧಿ ಅಧ್ಯಯನ ಕೇಂದ್ರ/ಪೀಠ/ಭವನಗಳಿದ್ದು, ಅವು ಕೂಡ ಗಾಂಧಿ ವಿಚಾರಗಳ ಕುರಿತು ಸಂಶೋಧನೆ, ಪ್ರಕಟಣೆ ಮತ್ತು ಪ್ರಚಾರ ಕೆಲಸಗಳನ್ನು ಕೈಗೊಂಡಿವೆ. ಇವುಗಳ ಕಾರ್ಯ ಅಥವಾ ಉದ್ದೇಶಗಳ ವ್ಯಾಪ್ತಿಯನ್ನು ಮೀರಿದ ಯಾವ ವಿಶೇಷ ಕಾರ್ಯ ಮತ್ತು ಉದ್ದೇಶಗಳಿಗಾಗಿ ಕೋಟ್ಯಂತರ ರೂಪಾಯಿಗಳ ಸಾರ್ವಜನಿಕರ ಹಣದ ವಿಸರ್ಜನ ಈ ಜಿಲ್ಲಾ ಗಾಂಧಿ ಭವನಗಳ ಸ್ಥಾಪನೆಯ ಕೆಲಸ ಆರಂಭವಾಗಿದೆ ಎಂಬುದು ಸಾರ್ವಜನಿಕರಿಗೆ ತಿಳಿಯಬೇಕಿದೆ.

ನಾನು ಈ ಯೋಜನೆಗೆ ಸಂಬಂಧಪಟ್ಟ ಇಬ್ಬರು ಮೂವರು ಅಧಿಕಾರಿ ಮಹಾಶಯರನ್ನು ಸಂಪರ್ಕಿಸಿದಾಗ, ಈ ಯೋಜನೆಯ ಬಗ್ಗೆ ಈ ಮೇಲಿನ ತಿಳುವಳಿಕೆ ನೀಡಬಲ್ಲ ಯಾವುದೇ ಪೂರ್ವಭಾವಿ ಸಮೀಕ್ಷೆ ಅಥವಾ ಅಧ್ಯಯನ ವರದಿ ಇಲ್ಲವೆಂದು ತಿಳಿಯಿತು. ಗಾಂಧಿ ವಿಚಾರಗಳ ಬಗ್ಗೆ ಆಸಕ್ತಿ ಹೊಂದಿರುವ ಕೆಲವರೊಡನೆ (ಇವರು ಯಾರೆಂಬುದೂ ಸ್ಪಷ್ಟವಿಲ್ಲ) ಸಮಾಲೋಚಿಸಿ ಈ ಯೋಜನೆಯನ್ನು ಜಾರಿಗೆ ತರುವ ಪ್ರಯತ್ನ ನಡೆದಿದೆ ಎಂದು ಗೊತ್ತಾಯಿತು. ಜೊತೆಗೆ, ನಿಮಗೂ ಇದರಲ್ಲಿ ಆಸಕ್ತಿ ಇದ್ದರೆ, ಈ ಸಂಬಂಧವಾದ ನಿಮ್ಮ ಆಲೋಚನೆಗಳನ್ನು ತಿಳಿಸಿ ಎಂದು ಕೇಳಲಾಯಿತು. ಆದರೆ ಇದು ಹೀಗೆ ಮಕ್ಕಳಾಟದಂತೆ 'ಆಯಿತು. ನೀನೂ ಆಟಕ್ಕೆ ಸೇರಿಕೋ' ಎನ್ನುವಂತಹ ಲಘು ಧಾಟಿಯಲ್ಲಿ ನಿರ್ವಹಿಸುವಂತಹ ಅರೆ ಖಾಸಗಿ ಕೆಲಸವಲ್ಲ. ಬದಲಿಗೆ ಅಧಿಕೃತ ಮಾನ್ಯತೆಯನ್ನು ಪಡೆದ ಒಂದು ವ್ಯಾಪಕ ಸಮಾಲೋಚನೆಯನ್ನು ಬೇಡುವ ಸಾರ್ವಜನಿಕ ಜವಾಬ್ದಾರಿಯ ಯೋಜನೆಯೆಂದು ನಾನು ಭಾವಿಸಿದ್ದೇನೆ.

ಈಗಾಗಲೇ ನಮ್ಮ ಜಿಲ್ಲಾ ಕೇಂದ್ರಗಳಲ್ಲಿ ಅಂಬೇಡ್ಕರ್ ಭವನ, ದೇವರಾಜ ಅರಸು ಭವನ, ಶಿಕ್ಷಕರ ಭವನ, ಕುವೆಂಪು ಭವನ ಇತ್ಯಾದಿಯಾಗಿ ಭವ್ಯ ಹೆಸರುಗಳ ಭವನಗಳು ಅಸ್ತಿತ್ವದಲ್ಲಿವೆ. ಅವುಗಳಲ್ಲಿ ನಡೆಯುವ ಚಟುವಟಿಕೆಗಳಿಗೂ ಆ ಹೆಸರುಗಳಿಗೂ ನೆಪ ಮಾತ್ರ ಸಂಬಂಧವಿದ್ದು, ಅವು ಹೆಚ್ಚು ಕಡಿಮೆ ವಾಣಿಜ್ಯೋದ್ದೇಶದ ಕಟ್ಟಡಗಳಾಗಿ ಮಾರ್ಪಾಡಾಗಿ, ಅವುಗಳ ನಿರ್ವಹಣಾ ವೆಚ್ಚ ಅವುಗಳಿಂದ ಬರುವ ವರಮಾನಕ್ಕಿಂತ ಬಹು ಹೆಚ್ಚಾಗಿಯೇ ಇದೆ. ಈ ಹೊಸ ಗಾಂಧಿ ಭವನಗಳೂ ಇಂತಹ ಕಟ್ಟಡಗಳ ಸಾಲಿಗೆ ಸೇರುವ ಕಟ್ಟಡ ಮಾತ್ರವಾಗಲಿವೆಯೇ?

ಹಾಗಿಲ್ಲದಿದ್ದಲ್ಲಿ ಈ ಗಾಂಧಿ ಭವನಗಳ ವಿಶಿಷ್ಟ ಉದ್ದೇಶವಾದರೂ ಏನು? ಅದರ ಕಾರ್ಯ ಚಟುವಟಿಕೆಗಳ ಸ್ವರೂಪವೇನು? ಅವುಗಳ ಆಡಳಿತ ನಡೆಯುವುದು ಯಾರಿಂದ? ಸರ್ಕಾರಿ ಅಧಿಕಾರಿಗಳ ಸುಪರ್ದಿಯಲ್ಲಿ ಇವು ನಡೆಯುವವೇ? ಇಲ್ಲವಾದರೆ ಗಾಂಧಿ ವಿಚಾರಗಳಲ್ಲಿ ಆಸಕ್ತಿ ಹೊಂದಿ ಸಾಕಷ್ಟು ಅಧ್ಯಯನ ಮಾಡಿ, ಆ ಸಂಬಂಧದ ಚಟುವಟಿಕೆಗಳನ್ನು ಸಂಘಟಿಸಿ ಇವುಗಳನ್ನು ನಿಭಾಯಿಸಬಲ್ಲ ಜನ ಜಿಲ್ಲಾಮಟ್ಟದಲ್ಲಿ ಇದ್ದಾರೆಯೇ? ಅವರನ್ನು ಗುರುತಿಸಲಾಗಿದೆಯೇ? ಇಂತಹ ಯಾವ ಪೂರ್ವಭಾವಿ ಅಥವಾ ಪ್ರಾಥಮಿಕ ಸಮೀಕ್ಷೆಯ ಕೆಲಸವನ್ನೂ ಮಾಡದೆ ಏಕಾಏಕಿ ಕಟ್ಟಡಗಳನ್ನು ಕಟ್ಟುವ, ಅವುಗಳಿಗೆ ಕೋಟಿ ಕೋಟಿ ರೂಪಾಯಿಗಳ ಮಂಜೂರಾತಿ ನೀಡುವ ಮಾತಾಡುವುದು ಸಾರ್ವಜನಿಕ ಕೆಲಸಗಳ ಬಗ್ಗೆ ಗಾಂಧಿ ಹೊಂದಿದ್ದ ವಿಚಾರಗಳಿಗೆ ವಿರುದ್ಧವಾದದ್ದು. ಸಾರ್ವಜನಿಕ ಹಣದ ಖರ್ಚಿನ ಒಂದೊಂದು ಪೈಸೆಯ ಹಿಂದೆಯೂ ಸಾರ್ವಜನಿಕ ಹಿತದ ಖಚಿತ ಚಿತ್ರ ಇರಬೇಕೆಂಬುದು ಗಾಂಧಿಯವರ ನಂಬಿಕೆಯಾಗಿತ್ತು. ಇದರ ಅರಿವಿಲ್ಲದೇ ಹೋದರೆ ಈ ಯೋಜನೆಯು ಸರ್ಕಾರದ ಸದರಿ 'ಅಭಿವೃದ್ಧಿ' ಚಟುವಟಿಕೆಗಳ ಭಾಗವಾಗಿ, ಪಿ.ಡಬ್ಲ್ಯು.ಡಿ ಕಂಟ್ರಾಕ್ಟುದಾರರುಗಳಿಗೆ ವರದಾನವಾಗಬಲ್ಲ ಇನ್ನೊಂದು ಬೃಹತ್ ಕಾಮಗಾರಿ ಕಾರ್ಯಕ್ರಮವಾಗಿ ಮಾರ್ಪಾಡಾಗಿ ಗಾಂಧಿ ಹೆಸರನ್ನು ಮತ್ತಷ್ಟು ಕೆಡಿಸಬಲ್ಲುದಷ್ಟೆ

ನಿಜ, ಇಂದು ಗಾಂಧಿ ವಿಚಾರಗಳ ಪುನರುಜ್ಜೀವನ ಅತ್ಯಂತ ಅಗತ್ಯವಾಗಿದೆ. ಗಾಂಧಿಯನ್ನು ಇನ್ನೂ ರಾಷ್ಟ್ರಪಿತನೆಂದು ಕರೆಯಲಾಗುತ್ತಿದ್ದರೂ ಇಂದಿನ ಸಾರ್ವಜನಿಕ ಜೀವನ ನೋಡಿದರೆ, ಅವರ ವ್ಯಕ್ತಿತ್ವದ ಮತ್ತು ವಿಚಾರಗಳ ಅಪಮೌಲ್ಯೀಕರಣ ಸರ್ಕಾರಗಳಿಂದಲೇ ನಡೆದಿದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುವಂತಿದೆ. ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳ ಹೆಸರಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಪಕ್ಷಾತೀತವಾಗಿ ಗಾಂಧಿ ಕಲ್ಪಿಸಿಕೊಂಡಿದ್ದ ಭಾರತಕ್ಕೆ ವಿರುದ್ಧವಾದ ಭಾರತವನ್ನು ಕಟ್ಟಲು ಹೊರಟಿರುವುದು ಎದ್ದು ಕಾಣುತ್ತಿದೆ. ಇಂತಹ ಸಂದರ್ಭದಲ್ಲಿ ಗಾಂಧಿ ಕುರಿತ ಸರ್ಕಾರದ ಈ ಹೊಸ ಒಲವು ಅನುಮಾನಾಸ್ಪದವೆನಿಸುತ್ತದೆ. ಅವರ ಚಿಂತನೆಗಳ ವಿರುದ್ಧದ ಕೆಲಸಗಳನ್ನು ಅವರ ಹೆಸರಿನ ರಕ್ಷಣೆಯಲ್ಲೇ ಮಾಡುವ ಹೊಸ ಪ್ರಯತ್ನದಂತೆ ಇದು ಕಾಣುತ್ತದೆ. ಆದುದರಿಂದ ಇಂದು ಗಾಂಧಿ ಬೇಕಾಗಿರುವುದು ಈವರೆಗೆ ನಮ್ಮ ಸರ್ಕಾರಗಳು ತನ್ನ ಗಾಂಧಿ ಸಂಸ್ಥೆಗಳ ಮೂಲಕ ಪೋಷಿಸಿಕೊಂಡು ಬಂದಂತಹ ಸತ್ಯ–ಅಹಿಂಸೆ–ಸ್ವದೇಶಿ ಎಂಬ ಬಾಯುಪಚಾರದ ಬಡಾಯಿ ಕಾರ್ಯಕ್ರಮಗಳಿಂದ ಸುಪ್ರೀತರಾಗಿ ಸರ್ಕಾರದ ದುಷ್ಟ ಕೆಲಸಗಳ ವಿರುದ್ಧ ಸೊಲ್ಲೆತ್ತುವ ಉಸಿರನ್ನೇ ಕಳೆದುಕೊಂಡ ಆಶ್ರಮವಾಸಿ ಸರ್ಕಾರಿ ಗಾಂಧಿಯಲ್ಲ. ಬದಲಿಗೆ ತನ್ನ ಚಿಂತನೆಗಳಿಗೆ ದ್ರೋಹ ಬಗೆಯುವಂತಹ ಕೆಲಸಗಳನ್ನೇ ಮಾಡುತ್ತಿರುವ ಸರ್ಕಾರದ ಆತ್ಮಸಾಕ್ಷಿಯನ್ನು ಎಚ್ಚರಿಸುವಂತಹ ಕ್ರಿಯಾಶೀಲ ಗಾಂಧಿ; ಸತ್ಯಾಗ್ರಹಿ ಗಾಂಧಿ.

ಇಂದಿನ ನಮ್ಮ ರಾಜ್ಯ ಸರ್ಕಾರ ಗಾಂಧಿ ಆದರ್ಶಗಳನ್ನು ನಂಬಿದ್ದೆಂದು ಹೇಳಿಕೊಳ್ಳುವ ಕಾಂಗ್ರೆಸ್ ಪಕ್ಷದ ಸರ್ಕಾರ. ಅದರ ನೇತೃತ್ವ ವಹಿಸಿರುವವರು ಸರ್ಕಾರಿ ಮತ್ತು ಆಶ್ರಮವಾಸಿ ಗಾಂಧಿ ಮಾದರಿಗಳ ಅಪಾಯಗಳ ವಿರುದ್ಧ ಎಚ್ಚರಿಸಿ ಬಂಡುಕೋರ ಗಾಂಧಿಯನ್ನು ಕಂಡುಕೊಂಡ ಸಮಾಜವಾದಿ ನಾಯಕ ಡಾ. ರಾಮಮನೋಹರ ಲೋಹಿಯಾ ಅವರ ಅನುಯಾಯಿ ಎಂದು ಹೇಳಿಕೊಳ್ಳುವವರು. ಹಾಗಾಗಿ ಈ ನಮ್ಮ ರಾಜ್ಯ ಸರ್ಕಾರಕ್ಕೆ ಗಾಂಧಿ ಬಗ್ಗೆ ನಿಜವಾಗಿಯೂ ಗೌರವವಿದ್ದು ಅವರ ವಿಚಾರಗಳ ಪುನರುಜ್ಜೀವನದ ಆಶಯ ಇದ್ದರೆ, ತಾನು ನಡೆದಿರುವ ಹಾದಿ ಸರಿಯಾದದ್ದೇ ಎಂಬುದರ ಆತ್ಮಪರೀಕ್ಷೆಗೆ ನೆರವಾಗಬಲ್ಲ ಗಾಂಧಿ ಮಾದರಿಯನ್ನು ಕಟ್ಟಬಲ್ಲ ಗಾಂಧಿ ಭವನಗಳ ಕಡೆ ಗಮನ ಹರಿಸಲಿ. ಅದರ ಸಾಧ್ಯತೆಗಳನ್ನು ಪರಿಶೀಲಿಸಿ ಅದರ ಸ್ವರೂಪವನ್ನು ನಿರ್ಧರಿಸಲು ನಾಡಿನಾದ್ಯಂತ ಇರುವ ಗಾಂಧಿ ಚಿಂತಕರ ಮತ್ತು ಕಾರ್ಯಶೀಲರ(ಆಕ್ಟಿವಿಸ್ಟ್‌ಗಳ) ಒಂದು ತಂಡವನ್ನು ರಚಿಸಲಿ. ಅದರ ವರದಿಯ ನಂತರವಷ್ಟೇ ಈ ಹೊಸ ಗಾಂಧಿ ಭವನಗಳ ನಿರ್ಮಾಣದ ಕೆಲಸ ಆರಂಭವಾಗಲಿ. ಮುಖ್ಯವಾಗಿ ಈ ಗಾಂಧಿ ಭವನಗಳು ತನ್ನ ಹಣಕಾಸಿಗಾಗಿ ಸಂಪೂರ್ಣವಾಗಿ ಸರ್ಕಾರವನ್ನು ಅವಲಂಬಿಸದೆ, ಅದರ ಅಗತ್ಯದ ಅರ್ಧದಷ್ಟನ್ನಾದರೂ ತಾನೇ ಕ್ರೋಡೀಕರಿಸಿಕೊಳ್ಳುವಂತೆ ಅವನ್ನು ರೂಪಿಸಿದರೆ ಮಾತ್ರ ಅವುಗಳಿಂದ ಇಂದಿಗೆ ಅಗತ್ಯವಾದ ನಿಜವಾದ ಗಾಂಧಿ ಹೊರಹೊಮ್ಮಬಲ್ಲರೆಂದು ನಾನು ಭಾವಿಸುವೆ.

('ಪ್ರಜಾವಾಣಿ' 'ಸಂಗತ': ೨೧ ಜನವರಿ, ೨೦೧೭)

ಭೂಮಿಯನ್ನು ಉಳಿಸಿಕೊಳ್ಳುವ ಬಗೆ

ಈ ಭೂಮಿಯ ಮೇಲಿನ ಮಾನವರ ಬದುಕು ಇನ್ನೊಂದು ನೂರು ವರ್ಷ ಮಾತ್ರ ಎಂಬ ವಿಜ್ಞಾನಿ ಸ್ಟೀಫನ್ ಹಾಕಿಂಗ್ ಅವರ ಮಾತು ಇಂದು ಜಗತ್ತಿನ ಎಲ್ಲ ಕಡೆ ಅನುರಣಿಸುತ್ತಿದೆ. 'ಪ್ರಜಾವಾಣಿ' ಪತ್ರಿಕೆಯಲ್ಲೇ ಇದು ಕಳೆದೊಂದು ವಾರದಲ್ಲಿ ಪೃಥ್ವಿದತ್ತ ಚಂದ್ರ ಶೋಭಿ ಅವರ 'ನಿಜದನಿ' (೧೨.೫.೨೦೧೭) ಮತ್ತು ನಾಗೇಶ್ ಹೆಗಡೆಯವರ 'ವಿಜ್ಞಾನ ವಿಶೇಷ' (೧೮.೫.೨೦೧೭) ಅಂಕಣಗಳಲ್ಲಿ ವಿಸ್ತಾರವಾಗಿ ಚರ್ಚೆಯಾಗಿದೆ. ಭೂಮಿ ಕುರಿತ ಈ ಆತಂಕಕ್ಕೆ ಪೃಥ್ವಿ ಅವರು ಮುಖ್ಯವಾಗಿ ಮನುಷ್ಯ ಈಗ ಅಭಿವೃದ್ಧಿಪಡಿಸುತ್ತಿರುವ ಕೃತಕ ಬುದ್ಧಿಮತ್ತೆಯನ್ನು ಕಾರಣವಾಗಿ ನೀಡಿದ್ದರೆ, ನಾಗೇಶ್ ಹೆಗಡೆಯವರು ಹೆಚ್ಚುತ್ತಿರುವ ಭೂಮಿಯ ತಾಪಮಾನದ ಕಾರಣ ನೀಡಿದ್ದಾರೆ. ಹೆಗಡೆಯವರು ಈ ಸಂಬಂಧ ತಮ್ಮ ವಿಶ್ಲೇಷಣೆಯನ್ನು ಮುಂದುವರೆಸಿ ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಿಜ್ಞಾನ ವಿರೋಧಿ ರಾಜಕಾರಣದ ಪ್ರಸ್ತಾಪ ಮಾಡಿದ್ದಾರೆ. ಮತ್ತೆ ಇದರ ಮುಂದುವರಿಕೆಯಾಗಿ ಕಳೆದ ಏಪ್ರಿಲ್ ೨೨ರ

ಭೂದಿನಾಚರಣೆಯನ್ನು ಹಲವು ದೇಶಗಳು ವಿಜ್ಞಾನಪರ ದಿನವನ್ನಾಗಿ ಆಚರಿಸಿದ್ದರ ಮಾಹಿತಿ ನೀಡಿದ್ದಾರೆ.

ಆದರೆ ಕೃತಕ ಬುದ್ಧಿಮತ್ತೆ ಅಭಿವೃದ್ಧಿ ಅಥವಾ ಭೂ ತಾಪಮಾನದ ಹೆಚ್ಚಳಕ್ಕೆ ಕಾರಣವಾಗುತ್ತಿರುವ ಚಟುವಟಿಕೆಗಳಿಗೆ ವಿಜ್ಞಾನವನ್ನು ಆಧುನಿಕ ಕಾಲದಲ್ಲಿ ಪರಿಕಲ್ಪಿಸಿಕೊಂಡ ಮತ್ತು ಬಳಸಿದ ರೀತಿ-ನೀತಿಗಳೇ ಕಾರಣವಲ್ಲವೇ ಎಂಬ ಪ್ರಶ್ನೆಯನ್ನೂ ನಾವಿಂದು ಕೇಳಿಕೊಳ್ಳಬೇಕಿದೆ ಎಂದು ನನಗನ್ನಿಸುತ್ತಿದೆ. ಈ ದಿಕ್ಕಿನಲ್ಲಿ ಯೋಚಿಸಿದಾಗ ಡೊನಾಲ್ಡ್ ಟ್ರಂಪ್ ಕೂಡ ಇಂತಹ ವಿಜ್ಞಾನ ಪರಿಗ್ರಹಿಕೆಯ ಉತ್ಪನ್ನವೇ ಎಂಬುದು ಗೊತ್ತಾಗುತ್ತದೆ. ಜ್ಞಾನವು ವಿ-ಘಟಿಸಿಕೊಂಡು ವಿ-ಜ್ಞಾನವಾದದ್ದು ಪಶ್ಚಿಮದ ದೇಶಗಳಲ್ಲಿ ೧೭ನೇ ಶತಮಾನದಲ್ಲಿ ಸಂಭವಿಸಿತೆಂದು ಹೇಳಲಾಗುವ ಪುನರುಜ್ಜೀವನ ಯುಗದಲ್ಲಿ. ಇದಕ್ಕೆ ಮುಂಚೆ ಜಗತ್ತು ಅಜ್ಞಾನದಲ್ಲಿ ತೋಳಲಾಡುತ್ತಿತ್ತೇನೋ ಎಂಬಂತೆ ಇದನ್ನು ಜ್ಞಾನಯುಗವೆಂದೂ ಕರೆಯಲಾಗುತ್ತದೆ. ಅದೇನೇ ಇರಲಿ, ಈ ಯುಗವು ತಾನು ಪಡೆದುಕೊಂಡ ಹೊಸಜ್ಞಾನವನ್ನು ಜೀವ ವಿಕಾಸದ ಹಾದಿಯಲ್ಲಿ ತನಗೆ ಜನ್ಮ ಕೊಟ್ಟ 'ತಾಯಿ'ಯೆಂದು ಪರಿಗ್ರಹಿಸದೆ ತಾನು ಅರಿತು ಗೆಲ್ಲಬೇಕಾದ, ಸೂರೆ ಮಾಡಬೇಕಾದ 'ವಸ್ತು' ಮಾತ್ರವೆಂದು ಪರಿಗಣಿಸಿ, ಅದನ್ನು (ಆಧುನಿಕ) ವಿಜ್ಞಾನವೆಂದು ಕರೆಯಿತು.

ಅಂದಿನಿಂದ ಇಂದಿನವರೆಗೆ ವಿಜ್ಞಾನವೆಂಬ ಆಧುನಿಕ ಜ್ಞಾನವು ಮನುಷ್ಯನ ಬದುಕನ್ನು ಹೆಚ್ಚು ಹೆಚ್ಚು ಸುಖಮಯಗೊಳಿಸುವ ನೆಪದಲ್ಲಿ (ಇದನ್ನು ಆಧುನಿಕ ನಾಗರಿಕತೆ ಎಂದೂ ಕರೆಯಲಾಗಿದೆ.) ಭೂಮಿಯ ಮೇಲೆ ಪರಿ ಪರಿಯ ದೌರ್ಜನ್ಯವೆಸಗುತ್ತಿದೆ. ಇದೆಲ್ಲವನ್ನೂ ಎಸಗಲಾಗುತ್ತಿರುವುದು ಮನುಷ್ಯನ ಆಜನ್ಮಸಿದ್ಧ ಹಕ್ಕೆಂದು ಹೇಳಲಾಗುತ್ತಿರುವ ಪರಿಮಿತವಾದ ಸುಖಜೀವನವನ್ನು ಅವನಿಗೆ ಕಲ್ಪಿಸುವ ಸದುದ್ದೇಶದ ಹೆಸರಿನಲ್ಲಿ. ಇದಕ್ಕಾಗಿ, ವಿಜ್ಞಾನ ಒಂದು ಸರ್ವಜ್ಞ ಜ್ಞಾನವಾಗಿದ್ದು ಮನುಷ್ಯ ಎದುರಿಸಬೇಕಾಗಿ ಬರುವ ಎಲ್ಲ ತೊಂದರೆಗಳಿಗೂ ಇದರಲ್ಲಿ ಪರಿಹಾರವಿದ್ದೇ ಇದೆ ಎಂಬ ಒಂದು ಆಧುನಿಕ ಮೌಢ್ಯವನ್ನು ಸೃಷ್ಟಿಸಲಾಗಿದೆ. ಇದು, ಭೂಮಿಯ ಮೇಲೆ ಎಸಗಲಾಗುತ್ತಿರುವುದು ದೌರ್ಜನ್ಯವೆಂಬ ಅರಿವೇ ಉಂಟಾಗದಷ್ಟು ನಮ್ಮ ಸಂವೇದನೆಗಳನ್ನು ಜಡಗೊಳಿಸಿಬಿಟ್ಟಿದೆ. ವಿಜ್ಞಾನದ ಹೆಸರಿನಲ್ಲಿ ಬೆಳೆಸಲಾದ ಇಂತಹ ಚಿಂತನೆಯ ಸದ್ಯದ ಫಲವೇ ಡೊನಾಲ್ಡ್ ಟ್ರಂಪ್ ಎಂದು ಹೇಳಬಹುದು. ಈತನನ್ನು ಆಧುನಿಕ ನಾಗರಿಕತೆಯ ತರ್ಕದನುಸಾರ ಮೂಡಿದ ರಾಜಕಾರಣದ ಒಂದು ದುಷ್ಫಲವೆಂದೂ ಕರೆಯಬಹುದೇನೋ!

ಆದರೆ ಆಧುನಿಕ ನಾಗರಿಕತೆಯ ಮರುಳು ಎಂತಹದೆಂದರೆ, ಅದರ ಹೆಮ್ಮೆಯ ಪ್ರಜೆಗಳಾಗಿ ನಮ್ಮ ಪ್ರತಿಯೊಬ್ಬರಲ್ಲೂ ಒಬ್ಬ ಟ್ರಂಪ್ ಇರುವುದು ಸಹಜವೇ ಆಗಿಬಿಟ್ಟಿದೆ! ಹಾಗಾಗಿಯೇ ಕಳೆದ ಅರವತ್ತು ವರ್ಷಗಳಿಂದೀಚೆಗೆ ಜೀವ ಪರಿಸರ ವಿಜ್ಞಾನವೆಂಬ ಹೊಸ ಜ್ಞಾನಶಿಸ್ತು ಬೆಳೆದು, ಜೀವಜಗತ್ತಿಗೆ ಮಾರಕವಾಗುತ್ತಿರುವ ರೀತಿಯಲ್ಲಿ

ಜಗತ್ತಿನ ಜೀವ ಪರಿಸರ ಸಮತೋಲನ ನಾಶವಾಗುತ್ತಿರುವ ಬಗ್ಗೆ ಎಚ್ಚರಿಕೆಗಳನ್ನು ನೀಡುತ್ತಿದ್ದರೂ, ನಮಗಾರಿಗೂ ನಮ್ಮ ಬದುಕಿನ ಸುಖ-ಸಂಪತ್ತುಗಳ ಬಗ್ಗೆ ಹೊಸ ಎಚ್ಚರವೇ ಮೂಡದಾಗಿದೆ. ಇದರ ಭಾಗವಾಗಿಯೇ ನಾಗೇಶ್ ಹೆಗಡೆಯವರು (ಉದಾಹರಣೆಯಾಗಿ 'ಪಾತಾಳ ಗಂಗೆ' ವಿಷಯದಲ್ಲಿ) ಹೇಳುವ ನಮ್ಮ ವಿಜ್ಞಾನಿಗಳ ವರ್ತನೆಯನ್ನು ಅರ್ಥಮಾಡಿಕೊಳ್ಳಬೇಕಿದೆ. ಹಾಗೇ ಸಚಿವ ಕಾಗೋಡು ತಿಮ್ಮಪ್ಪನವರು ನೀಡಿದ 'ಅರಣ್ಯ ಇಲಾಖೆ ನೆಟ್ಟ ಸಸಿಗಳನ್ನು ಕಿತ್ತು ಬಿಸಾಡಿ' ಎಂಬ 'ಜನಪರ' ಕರೆಯನ್ನೂ ಅರ್ಥ ಮಾಡಿಕೊಳ್ಳಬೇಕಿದೆ. (ಈ ಮಹಾಶಯರ ಪ್ರಕಾರ ಈ ಭೂಮಿ ಇರುವುದು ಮೊದಲು ಮನುಷ್ಯನಿಗಾಗಿ; ಆನಂತರ ಪ್ರಾಣಿ ಪಕ್ಷಿಗಳಿಗಾಗಿ! ವಿಜ್ಞಾನ ಕೊಟ್ಟ ಸುಖ ಮನುಷ್ಯನಲ್ಲಿ ವಿಕಾಸದ ಕ್ರಮವನ್ನೇ ಹೇಗೆ ತಿರುಗುಮುರುಗಾಗಿಸಿದೆ!!) ನಮ್ಮ ವಿಜಾನಿಗಳೂ, ನಮ್ಮ ರಾಜಕಾರಣಿಗಳೂ ನಮ್ಮಂತೆಯೇ ಮನುಷ್ಯರು ತಾನೆ? ಅವರಿಬ್ಬರೂ ಸೇರಿಯೇ ಆಧುನಿಕ ಕಾಲದ 'ಭಲೇ ಜೋಡಿ' ಆಗಿದೆ.

ಈ ಎಲ್ಲ ಹಿನ್ನೆಲೆಯಲ್ಲಿ ನೋಡಿದಾಗ ಈ ವಿಜ್ಞಾನದ, ಈ ರಾಜಕಾರಣದ ಅತಿಗಳಾಗಲೀ, ಜೀವ ಪರಿಸರಶಾಸ್ತ್ರವೆಂಬುದರ ಹೆಸರಾಗಲೀ ಇಲ್ಲದ ಕಾಲದಲ್ಲಿ- ಸುಮಾರು ನೂರು ವರ್ಷಗಳ ಹಿಂದೆಯೇ- ಮಹಾತ್ಮ ಗಾಂಧಿ ಈ ಎಲ್ಲ ಆತಂಕಗಳನ್ನು ಮುನ್ನೋಡಿದಂತೆ ಪ್ರವಾದಿತ್ವ ಜ್ಞಾನದ್ದು ಎನ್ನಬಹುದಾದ ಒಂದು ಮಾತನ್ನಾಡಿದ್ದರು. ಅದೇ, 'ಈ ಭೂಮಿ ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲುದೇ ಹೊರತು ಎಲ್ಲರ ಆಸೆಗಳನ್ನಲ್ಲ'. ಗಾಂಧಿಯವರ ಈ ಮಾತನ್ನು ನಾವೆಲ್ಲ ಆಗಾಗ್ಗೆ ಸರಳ ಜೀವನದ ಆದರ್ಶದ ಒಣ ಮಾತನ್ನಾಡಲು ಉಲ್ಲೇಖಿಸುತ್ತೇವೆಯೇ ಹೊರತು, ಅದರಲ್ಲಿ ಅಡಗಿದ್ದ ಆಧುನಿಕ ನಾಗರಿಕತೆ, ಆಧುನಿಕ ಜ್ಞಾನವೆನಿಸಿದ ವಿಜ್ಞಾನ ಮತ್ತು ಅವು ಪ್ರಚೋದಿಸುವ ಆಧುನಿಕ ಬದುಕಿನ ಮಾದರಿ ಹಾಗೂ ಅದು ಅನಿವಾರ್ಯ ಮಾಡುವ 'ಅಭಿವೃದ್ಧಿ'ಯ ಪರಿಕಲ್ಪನೆಗಳನ್ನು ಕುರಿತ ಅಪೂರ್ವವೆನಿಸುವ ವೈಚಾರಿಕ ಒಳನೋಟ-ರಚನಾತ್ಮಕ ವಿಮರ್ಶೆಗಳನ್ನು ಗಮನಿಸಲು ನಿರಾಕರಿಸಿದ್ದೇವೆ. ಅವರನ್ನು ಜಗತ್ತನ್ನು ಹಿಂದಕ್ಕೆಳೆಯಬಯಸುವ 'ಸನಾತನಿ' ಎಂದೂ ಟೀಕಿಸುತ್ತಾ ಬಂದಿದ್ದೇವೆ.

ಆದರೆ ಗಾಂಧಿ ಇಂದು ಭೂಮಿಯ ಮೇಲಿನ ಬದುಕಿಗೇ ಆತಂಕ ತಂದೊಡ್ಡಿರುವ ವಿದ್ಯಮಾನವನ್ನು ಒಂದು ಶತಮಾನದಷ್ಟು ಹಿಂದೆಯೇ ಹೇಗೆ ಮುನ್ನೋಡಬಲ್ಲವರಾಗಿದ್ದರು ಎಂಬುದರ ಬಗ್ಗೆ ನಾವ್ಯಾರೂ ಚಿಂತಿಸಿಯೇ ಇಲ್ಲ. ಗಾಂಧಿ ಈ ಮಾತನ್ನಾಡಿದ್ದು ಮುಗಿಯದ ತರ್ಕಕ್ಕೆ ಕಾರಣವಾಗುವ ವೈಜ್ಞಾನಿಕ ಚಿಂತನೆಯಿಂದಲೂ ಅಲ್ಲ; ಅಥವಾ ನೈತಿಕತೆಯನ್ನು ಕುರಿತ ಸಿನಿಕ ಚರ್ಚೆಗೆ ಕಾರಣವಾಗುವ ಧಾರ್ಮಿಕ ಚಿಂತನೆಯಿಂದಲೂ ಅಲ್ಲ. ಬದಲಿಗೆ ಆ ಮಾತುಗಳು ಮೂಡಿದ್ದು, ಅವರಿಗೆ ವೈಯಕ್ತಿಕ ಅನುಭವವಾಗಿದ್ದ, ಬಹು ಹಿಂಸೆಗೆ ಕಾರಣವಾಗಿದ್ದ ವ್ಯಕ್ತಿಯ ಸ್ವಾಯತ್ತತೆಯ (ಅಂದರೆ ಅವನ ಆಜನ್ಮಸಿದ್ಧ- ದಿವ್ಯ-ಸ್ವಾತಂತ್ರ್ಯಗಳ) ನಾಶದ ಪ್ರಶ್ನೆ ಕುರಿತು ಅವರು ಮಾಡಿದ ಚಿಂತನೆಯ ಭಾಗವಾಗಿ.

ಅವರು ಆ ಪ್ರಶ್ನೆಯ ಹಿಂದೆ ಬಿದ್ದು, ಆ ಹಿಂಸೆಯ ಕಾರಣಗಳನ್ನು ಹುಡುಕುತ್ತಾ ಹೋಗಿ, ಅವನ್ನು ಅಂತಿಮವಾಗಿ ಕಂಡದ್ದು 'ಪ್ರಭುತ್ವ' ಎಂಬ ರಚನೆಯ ಸ್ವರೂಪದಲ್ಲಿ. ಗಾಂಧಿಯವರ ಅಹಿಂಸೆಯ ಚಿಂತನೆಗೆ ಆಧಾರವಾದ ಮೂಲಪ್ರಮೇಯವಿದು. ಅವರು ವಸಾಹತುಶಾಹಿಯ ವಿರುದ್ಧ ರೂಪಿಸಿದ (ಸ್ವಾತಂತ್ರ್ಯ) ಹೋರಾಟಕ್ಕೂ ಅದೇ ಕಾರಣ: ಅದು ಹಿಂಸಾತ್ಮಕವಾಗಿದೆ ಎಂಬುದು. ಅದರ ಈ ಹಿಂಸಾತ್ಮಕತೆಗೆ ಕಾರಣ, ಅದು ಆಧುನಿಕ ವಿಜ್ಞಾನ ಪ್ರೇರಿತ ತಂತ್ರಜ್ಞಾನವನ್ನು ತನ್ನ ಸಾಧನವನ್ನಾಗಿ ಬಳಸಿಕೊಂಡೇ ತನ್ನ ಪ್ರಭುತ್ವವನ್ನು ರಚಿಸಿಕೊಂಡಿದೆ, ಅದೇ ಮನುಷ್ಯನ ಅಗತ್ಯ ಮತ್ತು ಆಸೆಗಳ ಗಡಿಗೆರೆಗಳನ್ನು ನಾಶ ಮಾಡಿರುವುದು ಎಂಬುದು. ಗಾಂಧಿಯವರ 'ಸ್ವರಾಜ್ಯ' ಕಲ್ಪನೆ ಇಂತಹ ಪ್ರಭುತ್ವವನ್ನು ಮುರಿದು (ಅಧಿಕಾರದ ಗರಿಷ್ಠ ವಿಕೇಂದ್ರೀಕರಣದ ಮೂಲಕ ಅಹಿಂಸಾತ್ಮಕ ಪ್ರಭುತ್ವವನ್ನು) ಕಟ್ಟುವ ಪ್ರಯೋಗವಾಗಿತ್ತು ಎಂಬುದನ್ನೂ ನಾವು ಗಮನಿಸಬೇಕು.

ಇದು ಗಾಂಧಿಯವರ ಆಧುನಿಕ ವಿ(ಒಡೆದು ನೋಡುವ)–ಜ್ಞಾನಕ್ಕೆ ಬದಲಿಯಾಗಿ ಅಳವಡಿಸಿಕೊಂಡ ಸ(ಸಮಗ್ರ ಅಥವಾ ಸಮ್ಯಕ್)–ಜ್ಞಾನದಿಂದ ಪಡೆದ ದ್ರಷ್ಟಾರತೆ. ಹಾಗಾಗಿ ನಾವಿಂದು ವಿಜ್ಞಾನವನ್ನು ಸಮ್ಯಕ್ ಜ್ಞಾನದ ಭಾಗವಾಗಿ ಮಾಡುವ ಬಗೆಗಳಾವುವು ಎಂಬುದರ ಬಗ್ಗೆ ಯೋಚಿಸಬೇಕಿದೆ. ಅಂದರೆ ಇದು, ವಿಜ್ಞಾನಕ್ಕೆ ಗಾಂಧಿ ಕಲ್ಪಿಸಿಕೊಟ್ಟ ಅಹಿಂಸೆಯ ದೀಕ್ಷೆ ಕೊಡುವುದೇ ಆಗಿದೆ. ಆಗ ಬಹುಶಃ (ಈಗ ಜಡವಾಗಿರುವ) ವಿಜ್ಞಾನಕ್ಕೂ ಒಂದು ಆತ್ಮ ಮೂಡಿ, ಅದಕ್ಕೆ ಆತ್ಮಸಾಕ್ಷಿ ಎಂಬ ಸಂವೇದನೆಯೊಂದು ಜಾಗೃತವಾಗಿ ಮನುಷ್ಯನಿಗೆ ಆಸೆ ಮತ್ತು ಅಗತ್ಯಗಳ ದ್ವಂದ್ವವನ್ನು ಪರಿಹರಿಸಿಕೊಳ್ಳುವ ಒಂದು ಒರೆಗಲ್ಲನ್ನೂ ಒದಗಿಸಬಹುದು.

ಹಾಗಾಗಿ ಭೂದಿನದಂದು ವಿಜ್ಞಾನವನ್ನು ನೆನಪಿಸಿಕೊಳ್ಳುವುದಕ್ಕಿಂತ ಗಾಂಧಿಯನ್ನು ನೆನಪಿಸಿಕೊಳ್ಳುವುದು ಹೆಚ್ಚು ಅರ್ಥಪೂರ್ಣ ಎಂದು ನನ್ನ ಭಾವನೆ. ಅದು ಭೂಮಿಯನ್ನು ಉಳಿಸಿಕೊಳ್ಳುವ ಕೊನೆಯ ಪ್ರಯತ್ನವಾಗಬಹುದು.

('ಪ್ರಜಾವಾಣಿ' ಪ್ರಕಟಿಸದ ಪತ್ರ : ಜೂನ್ ೧೯, ೨೦೧೮)

ಆರೋಗ್ಯ ಸೇವೆ ಎಂಬ ವಿಷವ್ಯೂಹ!

ಇತ್ತೀಚೆಗೆ ರಾಜ್ಯ ಸರ್ಕಾರ ಖಾಸಗಿ ವೈದ್ಯರು ಮತ್ತು ಆಸ್ಪತ್ರೆಗಳ ಮೇಲೆ ನಿಯಂತ್ರಣ ಸಾಧಿಸುವ ಮಸೂದೆಯೊಂದನ್ನು ಮಂಡಿಸಿ ಖಾಸಗಿ ವೈದ್ಯರಿಂದ ದೊಡ್ಡ ಪ್ರತಿಭಟನೆಯನ್ನೇ ಎದುರಿಸಿತು. ಕೊನೆಗೆ ಅವರ ಕೆಲವು ಬೇಡಿಕೆಗಳಿಗೆ ಮಣಿದು ಒಂದು ರಾಜಿ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಂಡಿತು.

ಆದರೆ ಇದರಿಂದ ಜನಸಾಮಾನ್ಯರು ಖಾಸಗಿ ಆರೋಗ್ಯ ವಲಯದ ಅಧಿಪತಿಗಳ ಸ್ವೇಚ್ಛಾಚಾರಗಳಿಂದ ಪಾರಾಗಿದ್ದಾರೆ ಎಂದು ಹೇಳಬಹುದೆ? ಹಾಗೆ ನೋಡಿದರೆ ನಮ್ಮ ಸರ್ಕಾರಿ ಆರೋಗ್ಯ ವಲಯದ, ಅಂದರೆ ಸರ್ಕಾರಿ ಆಸ್ಪತ್ರೆಗಳ ನಿರ್ದಯತೆ ಕಡಿಮೆ ಎಂದೇನೂ ಹೇಳುವಂತಿಲ್ಲ. ಏಕೆಂದರೆ ಅಲ್ಲಿನ ಅವ್ಯವಸ್ಥೆ, ಕೊಳಕು, ದುರಾಡಳಿತ ಮತ್ತು ಭ್ರಷ್ಟಾಚಾರಗಳ ಕಥೆಗಳು ಸಾಕಷ್ಟು ವ್ಯಾಪಕವಾಗಿವೆ. ಇದು ನಮ್ಮ ಉತ್ಸಾಹಿ ಮತ್ತು ಜನಪರರಾದ ಆರೋಗ್ಯ ಸಚಿವರಿಂದಲೂ ಸದ್ಯಕ್ಕೆ ಪರಿಹರಿಸಲಾಗದಷ್ಟು ಜಟಿಲವಾಗಿದೆ.

ಹಾಗಾದರೆ ಇದಕ್ಕೆಲ್ಲ ಪರಿಹಾರವೇ ಇಲ್ಲವೆ? ತುಂಬ ದೊಡ್ಡ ಪ್ರಶ್ನೆ ಇದು. ಏಕೆಂದರೆ ಇದು ನಮ್ಮ ಕಾಲದ ಅತ್ಯಂತ ದೊಡ್ಡ ಉದ್ಯಮದ ಆಕ್ರಮಣಶೀಲತೆಯನ್ನು ಎದುರಿಸುವ ಪ್ರಶ್ನೆ. ಈ ಉದ್ಯಮ ಮನುಷ್ಯನ ಆರೋಗ್ಯವನ್ನು ಅಥವಾ ಅನಾರೋಗ್ಯವನ್ನು ಒಂದು ಬೃಹತ್ ಲಾಭೋದ್ಯಮದ ಮೂಲ ಸರಕನ್ನಾಗಿ ಮಾಡಿಕೊಂಡು, ತನ್ನ ಇರುವಿಕೆಯನ್ನು ಅನಿವಾರ್ಯ ಎಂಬಂತೆ ಮಾಡಿಬಿಟ್ಟಿದೆ. ಇದನ್ನು ವಿವರಿಸಲು, 'ಸಣ್ಣದು ಸುಂದರ' (ಸ್ಮಾಲ್ ಈಸ್ ಬ್ಯೂಟಿಫುಲ್) ಖ್ಯಾತಿಯ ಜರ್ಮನ್ ಅರ್ಥಶಾಸ್ತ್ರಜ್ಞ ಶೂಮಾಕರ್ ಕೆಲವು ವರ್ಷಗಳ ಹಿಂದೆ ವಾರಾಣಸಿಯಲ್ಲಿನ ಗಾಂಧಿ ಅಧ್ಯಯನ ಕೇಂದ್ರದಲ್ಲಿ ನೀಡಿದ ಗಾಂಧಿ ಸ್ಮಾರಕ ಉಪನ್ಯಾಸವನ್ನು ಈ ಕೆಲವು ಪ್ರಶ್ನೆಗಳನ್ನು ಕೇಳುವ ಮೂಲಕ ಇಲ್ಲಿ ಉಲ್ಲೇಖಿಸಬೇಕು:

ನಮ್ಮ ಪುರಾತನರು ತಮ್ಮ ಮುಂದಿನ ಪೀಳಿಗೆಯ ಪ್ರಗತಿಯ ಬಗ್ಗೆ ಕುತೂಹಲ ತಾಳಿ ಈಗ ಈ ಜಗತ್ತಿಗೆ ಮರಳಿ ಬಂದಲ್ಲಿ, ಅವರು ಆಶ್ಚರ್ಯ ಪಡುವುದು ಯಾವುದನ್ನು ಕಂಡು? ನಮ್ಮ ಆಸ್ಪತ್ರೆಗಳಲ್ಲಿನ ವೈವಿಧ್ಯಮಯ ಅತ್ಯಾಧುನಿಕ ಉಪಕರಣಗಳು ಮತ್ತು ಔಷಧಿಗಳನ್ನು ಕಂಡೋ ಅಥವಾ ವೈವಿಧ್ಯಮಯ ಮತ್ತು ಭಯಾನಕ ಹೊಸ ರೋಗಗಳಿಂದ ಬಾಧಿತವಾಗಿರುವ ಜನಜಂಗುಳಿಯನ್ನು ಕಂಡೋ? ದಂತ ಚಿಕಿತ್ಸಾಲಯಗಳಲ್ಲಿ ನಮ್ಮ ದಂತವೈದ್ಯರ ಕೌಶಲ್ಯ ಹಾಗೂ ಅವರ ಸೂಕ್ಷ್ಮ ಉಪಕರಣಗಳನ್ನು ಕಂಡೋ ಅಥವಾ ನಮ್ಮ ಜನರ ಹಲ್ಲುಗಳು ಇಷ್ಟು ಮತ್ತು ಹೀಗೇಕೆ ಹುಳುಕಾಗಿವೆ ಎಂದೋ? ಚಂದ್ರನ ಮೇಲೆ ಕಾಲಿಟ್ಟಿರುವ ನಮ್ಮ ವೈಜ್ಞಾನಿಕ-ತಾಂತ್ರಿಕ ಮುನ್ನಡೆಯನ್ನು ಕಂಡೋ ಅಥವಾ ದುಡಿಮೆಯ ಸ್ಥಳಗಳಿಗಾಗಿ ಸಿಕ್ಕ ಸಿಕ್ಕ ವಾಹನಗಳಲ್ಲಿ ತಾರಾಡುವ ನಮ್ಮ ಅವಸರ-ಉದ್ವೇಗಗಳನ್ನು ಕಂಡೋ? ನಮ್ಮ ಯಂತ್ರ ವ್ಯವಸ್ಥೆಗಳ ಸಾಮರ್ಥ್ಯ-ದಕ್ಷತೆಯನ್ನು ಕಂಡೋ ಅಥವಾ ಅವುಗಳನ್ನು ನಿರ್ವಹಿಸುವ ನಮ್ಮ ವ್ಯವಸ್ಥೆಯ ಅರಾಜಕತೆ-ಅಸಾಮರ್ಥ್ಯಗಳನ್ನು ಕಂಡೋ?

ಅಂದರೆ ಏನು? ನಾವು ಇಲ್ಲದ ಹೊಸ ಹೊಸ ರೋಗಗಳನ್ನು ತಂದುಕೊಂಡು ಅವುಗಳ ಚಿಕಿತ್ಸೆಗಳಿಗಾಗಿ ಪರದಾಡುತ್ತಿದ್ದೇವೆ! ಆದರೆ ಈ ಹೊಸ ಹೊಸ ರೋಗಗಳನ್ನು ನಾವು ನಾವಾಗಿ ತಂದುಕೊಂಡೆವೇ? ಸಮಾಜದಲ್ಲಿನ ಎಲ್ಲ ವಿದ್ಯಮಾನಗಳಂತೆ ಇದಕ್ಕೆ ನಾವು ಅರ್ಧ ಕಾರಣರಾಗಿದ್ದರೆ, ಇನ್ನರ್ಧ ಕಾರಣ ನಾವು ನಂಬಿರುವ ಸಮಾಜದ

ನಾಯಕರು ಅಥವಾ ಅವರು ನಂಬಿರುವ ಸಾಮಾಜಿಕ ತತ್ವ ಕಾರಣ. ಹಾಗೆ ನೋಡಿದರೆ, ಅದು ನಾವು ನಂಬಿರುವ ಸಾಮಾಜಿಕ ತತ್ವವೇ! ಅದೇ ನಾವು ಪರಿಶುದ್ಧ(ಅಕಳಂಕ ಮಹಿಮೆಯ!) ಜ್ಞಾನವೆಂದು ಸ್ವೀಕರಿಸಿಬಿಟ್ಟಿರುವ ಪಶ್ಚಿಮದ ವೈಜ್ಞಾನಿಕತೆ ಮತ್ತು ಅದರ ಜೊತೆಗಿನ ತಾಂತ್ರಿಕತೆಯನ್ನು ಆಧರಿಸಿದ ಆಧುನಿಕತೆ ಮತ್ತು ಆ ಮೂಲಕ ಅದು ಪ್ರಚುರಪಡಿಸುವ ಜೀವನ ದೃಷ್ಟಿ. ಅದು ಮನುಷ್ಯರಿರುವುದೇ ಸುಖಪಡಲು ಎಂದು ನಂಬುತ್ತದೆ. ಸುಖ ಅಂದರೆ ಹೆಚ್ಚೆಚ್ಚು ಸುಖ, ಹೊಸ ಹೊಸ ತೆರನ ಸುಖ! ಇದರಿಂದ ಆಗುವ ಅನಾಹುತಗಳಿಗೆಲ್ಲ ತನ್ನಲ್ಲಿ ಪರಿಹಾರವಿದೆ ಎಂದು ಅದು ನಂಬಿಸುತ್ತದೆ ಮತ್ತು ನಾವೂ ನಂಬಿದ್ದೇವೆ! ನಂಬಿ ಆ ಪರಿಹಾರಗಳ ಹುದಲಲ್ಲಿ, ಕ್ರೌರ್ಯದಲ್ಲಿ ಸಿಕ್ಕಿ ಹಾಕಿಕೊಂಡಿದ್ದೇವೆ ಮತ್ತು ಅದನ್ನು ಕಡಿಮೆ ಮಾಡಿಕೊಳ್ಳಲು (ಉದಾ: ಖಾಸಗಿ ವೈದ್ಯರ ದರಗಳನ್ನು ಮತ್ತು ಸರ್ಕಾರಿ ವೈದ್ಯರ ಲಂಚ ರುಷುವತ್ತುಗಳನ್ನು) ಯತ್ನಿಸುತ್ತಿದ್ದೇವೆಯೇ ಹೊರತು, ಈ ವ್ಯವಸ್ಥೆಯಲ್ಲೇ ಅಂತರ್ಗತವಾಗಿರುವ ಮೂಲ ದೋಷದ ಬಗ್ಗೆ ಚಿಂತಿಸುತ್ತಲೇ ಇಲ್ಲ!

ದಿನೇ ದಿನೇ ಹೊಸ ಹೊಸ ರೋಗಗಳು ಬರುತ್ತಲೇ ಇವೆ, ಅವುಗಳ ಪರಿಹಾರಕ್ಕಾಗಿ ಹೊಸ ಹೊಸ ಅಧ್ಯಯನ, ಸಂಶೋಧನೆ, ಅಭಿವೃದ್ಧಿಗಾಗಿ ಅಂದರೆ, ರೋಗ ನಿದಾನ ಮತ್ತು ಚಿಕಿತ್ಸೆಗಾಗಿ ಹೊಸ ಹೊಸ ವಿಧಾನಗಳು, ಯಂತ್ರಗಳು ಮತ್ತು ಔಷಧಿಗಳ ತಯಾರಿಕೆಗೆಂದು, ಕೋಟ್ಯಂತರ ರೂಪಾಯಿಗಳ ಬಂಡವಾಳವನ್ನು ಜಗತ್ತಿನ ದೊಡ್ಡ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳು ಹೂಡುತ್ತಲೇ ಇವೆ. ಬಂಡವಾಳ ಹೂಡುವವರು ಸೇವೆಗಾಗಿ ಹೂಡುತ್ತಾರೆಯೇ? ಬಂಡವಾಳ ಯಾವತ್ತೂ ಅಧಿಕಾಧಿಕ ಲಾಭಕ್ಕಾಗಿ ಹಪಹಪಿಸುತ್ತದೆ ಮತ್ತು ಅದನ್ನು (ಆಧುನಿಕ) ವ್ಯಾಪಾರ ಧರ್ಮವೆಂದು ಕರೆದುಕೊಂಡು ಅದನ್ನು ನ್ಯಾಯಸಮ್ಮತವನ್ನಾಗಿಯೂ ಮಾಡಿಕೊಂಡಿದೆ! ಆ ಲಾಭೋದ್ಯಮದ ಜಾಗತಿಕ ಜಾಲವನ್ನೇ ಇಂದು ಆರೋಗ್ಯ ಸೇವೆ ಎಂದು ಕರೆದುಕೊಂಡು ಅದರ ದಕ್ಷತೆಗಾಗಿ, ಮಾನವೀಯತೆಗಾಗಿ ನಾವು ಹಪಹಪಿಸುತ್ತಿದ್ದೇವೆ! ಸರ್ಕಾರ ಇದನ್ನು ಸಾಧಿಸಬೇಕೆಂದು ನಿರೀಕ್ಷಿಸುತ್ತಿದ್ದೇವೆ! ನೆನಪಿರಲಿ, ನಮ್ಮ ವೈದ್ಯರೂ, ಅವರ ಆಸ್ಪತ್ರೆಗಳೂ, ಅವುಗಳಿಗೆ ಬಂಡವಾಳ ಹೂಡಿರುವ ಅವರ ಗೆಣೆಕಾರರೂ ಈ ಜಾಗತಿಕ ಬೃಹತ್ ಜಾಲದ ಏಜೆಂಟರೂ, ಪಾಲುದಾರರೂ ಆಗಿದ್ದಾರೆ. ಸರ್ಕಾರವೇ ಆರೋಗ್ಯ ಸೇವೆಯ ಹೆಸರಿನಲ್ಲಿ ಇದನ್ನು ಪೋಷಿಸುತ್ತಿದೆ. ಅಷ್ಟೇ ಅಲ್ಲ, ನಾವೂ ಹೊಸ ಹೊಸ ರೋಗಗಳ ವಾರಸುದಾರರಾಗಿ ಅದನ್ನು ಪೋಷಿಸುತ್ತಿದ್ದೇವೆ. ಹಾಗೆ ನೋಡಿದರೆ, ಹೊಸ ಹೊಸ ಸುಖಗಳ ಸಹಜ ಹಕ್ಕುದಾರರೆಂದು ಭಾವಿಸಿ ಹೆಮ್ಮೆಯ 'ಆಧುನಿಕ'ರಾಗಿಬಿಟ್ಟಿರುವ ನಾವೇ ಇದರ ಮೂಲ ಪೋಷಕರು.

ಇಲ್ಲಿ ಅಲೋಪತಿ ಎಂದು ಕರೆಯಲಾಗುವ ಆಧುನಿಕ ವೈದ್ಯಪದ್ಧತಿಯ ಬಗ್ಗೆ ಗಾಂಧಿ ಮಾಡಿರುವ ಟೀಕೆಯನ್ನು ಗಮನಿಸಬೇಕು. ಆಧುನಿಕ ಬದುಕಿನ ಮಾದರಿಯನ್ನು ನಾಗರಿಕತೆ ಎಂದು ಕರೆಯಲು ನಿರಾಕರಿಸಿರುವ ಅವರು ಅದನ್ನು 'ರೋಗ' ಎಂದು

ಕರೆದಿದ್ದಾರೆ. ಆ ರೋಗವೇ ಈ ಹೊಸ ಹೊಸ ರೋಗಗಳ ಜನಕನಾಗಿದ್ದಾನೆ ಎಂದು ಸೂಚಿಸುತ್ತಾರೆ. ಅವರು ಹೇಳುತ್ತಾರೆ: ಈ ಅಲೋಪತಿ ವೈದ್ಯಪದ್ಧತಿ ಎಂಬುದು ತಾನು ಮನುಷ್ಯ ದೇಹವನ್ನು ಸಂಪೂರ್ಣವಾಗಿ ಅರಿತುಕೊಳ್ಳುವ ಜ್ಞಾನವನ್ನು ಪಡೆದಿದ್ದೇನೆಂದೂ, ಅದಕ್ಕೆ ತಗುಲುವ ಎಂತಹ ರೋಗಗಳಿಗೂ ತನ್ನಲ್ಲಿ ಔಷಧಿ ಇದೆಯೆಂದೂ ಅಥವಾ ಕಂಡು ಹಿಡಿಯಬಲ್ಲೆನೆಂದೂ ಸರ್ವಜ್ಞ ಗರ್ವದಿಂದ ಹೇಳಿಕೊಂಡು ವೈದ್ಯಕೀಯ ರಂಗವನ್ನು ಪ್ರವೇಶಿಸುವ ತನಕ ಮನುಷ್ಯ ತನ್ನ ಬದುಕಿನಲ್ಲಿ ಕೆಲವು ಸಂಯಮಗಳನ್ನು ಕಾಪಾಡಿಕೊಂಡು, ಕೆಲವು ಪರಿಪಾಠಗಳನ್ನು ರೂಢಿಸಿಕೊಂಡು ಒಂದು ಶಿಸ್ತಿನ ಜೀವನ ನಡೆಸುವ ಮೂಲಕ ತನ್ನ ದೇಹಾರೋಗ್ಯವನ್ನು ತಾನೇ ಕಾಪಾಡಿಕೊಳ್ಳುತ್ತಿದ್ದ. ಯಾವಾಗಲಾದರೂ, ಸಣ್ಣಪುಟ್ಟ ಏರುಪೇರುಗಳಾದರೆ ಊರಿನ ದೇಸಿ ವೈದ್ಯರಿಂದ ಮದ್ದು ಪಡೆದು ಅದನ್ನು ಸರಿ ಮಾಡಿಕೊಳ್ಳುತ್ತಿದ್ದ. ಆದರೆ ಈ ಆಧುನಿಕ ವೈದ್ಯಪದ್ಧತಿ ಬಂದು ತನ್ನಲ್ಲಿ ಎಲ್ಲಕ್ಕೂ ಮದ್ದಿದೆ ಎಂಬ ನಂಬಿಕೆಯನ್ನು ಯಾವಾಗ ಜನರಲ್ಲಿ ಹುಟ್ಟಿಸಿತೋ, ಆಗ ಮನುಷ್ಯ ತನ್ನ ಸಂಯಮ, ಪರಿಪಾಠ ಮತ್ತು ಶಿಸ್ತುಗಳನ್ನೆಲ್ಲ ಗಾಳಿಗೆ ತೂರಿ ತನ್ನ ದೇಹವನ್ನು ಹೊಸ ಹೊಸ ಸುಖಗಳಿಗೆ ಒಡ್ಡುತ್ತಾ ಬಹುರೋಗಗಳ ಸಮಾಜವನ್ನು ನಿರ್ಮಿಸಿದ.

ಮಿತಿ ಇಲ್ಲದ ಸುಖ ಎಂದರೆ ಮಿತಿ ಇಲ್ಲದ ರೋಗಗಳು, ಮಿತಿ ಇಲ್ಲದ ಔಷಧಗಳ, ಚಿಕಿತ್ಸಾ ಕ್ರಮಗಳ, ಚಿಕಿತ್ಸಾ ಉಪಕರಣಗಳ ಸಂಶೋಧನೆ ಮತ್ತು ಅದಕ್ಕಾಗಿ ಮಿತಿಯಿಲ್ಲದ ಬಂಡವಾಳ ಹೂಡಿಕೆ ಮತ್ತು ಅದು ಬೇಡುವ ಮಿತಿಯಿಲ್ಲದ ಲಾಭೋತ್ಪತ್ತಿ! ಈ ವಿಷವ್ಯೂಹವನ್ನು ತಡೆಯುವವರಾರು? ಸರ್ಕಾರದ ಮಸೂದೆಯೊಂದರ ಮೂಲಕ ತಡೆಯಬಹುದೇ? ಯೋಚಿಸಲು ಬಹಳ ಸರಕಿದೆ ಇದರಲ್ಲಿ. ಯೋಚಿಸಿ. ಉತ್ತರ ಕಂಡುಕೊಳ್ಳಬೇಕಾದವರು ನೀವೇ! ಸರ್ಕಾರವಲ್ಲ!! ಸರ್ಕಾರದಿಂದ ಈ ವಿಷಯದಲ್ಲಿ ನಾವು ಕೇಳಬೇಕಾದದ್ದು ಬೇರೆಯೇ ಇದೆಯಲ್ಲವೆ? ಆ ವಿವೇಕ, ಸಂಕಲ್ಪ ನಮಗಿದೆಯೇ?

(ಫೇಸ್‌ಬುಕ್ ಬರಹ : ಡಿಸೆಂಬರ್ ೭, ೨೦೧೭)

ಅಪ್ಪಟ ಕವಿ ಎಸ್. ಮಂಜುನಾಥ್

'ಜೀವಯಾನ'ದ ಎಸ್. ಮಂಜುನಾಥ್ ಎಂದೇ ಇತ್ತೀಚೆಗೆ ಪ್ರಸಿದ್ಧರಾದ ಕವಿ ಎಸ್. ಮಂಜುನಾಥ್ ಇನ್ನಿಲ್ಲ ಎಂಬ ಸುದ್ದಿ ಬಂದಿದೆ. ಇವರ ನಿಧನದಿಂದ ಕನ್ನಡ ಕಾವ್ಯ ಅಕ್ಷರಶಃ ಬಡವಾಗಿದೆ ಎಂದರೆ ಕಿಂಚಿತ್ತೂ ಅತಿಶಯೋಕ್ತಿಯಾಗಲಾರದು. ಕಾವ್ಯದ ಬಗ್ಗೆ ತಮ್ಮದೇ ಆದ ಒಂದು ನಿರ್ದಿಷ್ಟ ಮತ್ತು ಕಟ್ಟುನಿಟ್ಟಾದ ಕಲ್ಪನೆ ಇಟ್ಟುಕೊಂಡಿದ್ದ ಮಂಜುನಾಥ್, ಆ ಕಲ್ಪನೆಯೊಂದಿಗೆ ಎಂದೂ ರಾಜಿ ಮಾಡಿಕೊಳ್ಳದೆ ಅಪ್ಪಟ ಕಾವ್ಯ ಬರೆದ ಕನ್ನಡದ ವಿಶಿಷ್ಟ ಕವಿ. ಕವನ ತಾನು ಬಳಸುವ ಭಾಷೆ ಮತ್ತು ತಾನು

ಮುಟ್ಟಬಯಸುವ ಮನಸ್ಸನ್ನು ತುಸುವಾದರೂ ಹಿಗ್ಗಿಸದಾದದರೆ ಅದು ಕವನವೇ ಅಲ್ಲ ಎಂಬ ಧೀರ ನಿಲುವು ಹೊಂದಿದ್ದ ಅವರು, ಕನ್ನಡಕ್ಕೆ ನೂರಾರು ಅನನ್ಯ ಕವನಗಳನ್ನು ನೀಡಿದ್ದಾರೆ. ಅವುಗಳಲ್ಲಿ ಪ್ರತಿಯೊಂದೂ 'ಬೆಸ್ಟ್' ಅನ್ನುವಂಥದ್ದೇ. ಹೀಗಾಗಿ ಅವರು ಕೊನೆಯುಸಿರೆಳೆದಿದ್ದರೂ, ಅವರ ಕಾವ್ಯ ಕನ್ನಡದಲ್ಲಿ ಅಮರವಾಗಿರುತ್ತದೆ.

ಇಂತಹ ಕವಿಯನ್ನು ನಮ್ಮ ಸರ್ಕಾರಿ ಅಥವಾ ಅರೆ ಸರ್ಕಾರಿ ಸಾಹಿತ್ಯ ಸಂಸ್ಥೆಗಳಾವುವೂ ಗುರುತಿಸಲಿಲ್ಲ, ಪುರಸ್ಕರಿಸಲಿಲ್ಲ ಎಂಬ ದಟ್ಟ ವಿಷಾದ ಕನ್ನಡ ಕಾವ್ಯದ ನಿಜ ಅಭಿಮಾನಿಗಳನ್ನು ಬಹುಕಾಲ ಕಾಡುವುದಂತೂ ಸತ್ಯ.

('ಪ್ರಜಾವಾಣಿ'ಗೆ ಬರೆದ;ಆದರೆ ಪ್ರಕಟವಾಗದ ಪತ್ರ : ಫೆಬ್ರುವರಿ ೧, ೨೦೧೭)

ಕನ್ನಡದ ಪರ ವ್ಯರ್ಥ ತಾಕೀತುಗಳು, ಆಕ್ರೋಶಗಳು

'ಕನ್ನಡ ಕಲಿಯಲು ಅಧಿಕಾರಿಗಳಿಗೆ ತಾಕೀತು' ಎಂಬ ವರದಿ ('ಪ್ರಜಾವಾಣಿ': ೮.೮.೨೦೧೭) ಓದಿ ವಾಸ್ತವಾಂಶ ಬಲ್ಲ ಯಾರಿಗಾದರೂ ನಗು ಬರದಿರದು. ಈ ವರದಿಯ ಪ್ರಕಾರ ನಮ್ಮ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ರಾಷ್ಟ್ರೀಕೃತ ಮತ್ತು ಖಾಸಗಿ ಬ್ಯಾಂಕುಗಳ ಅಧಿಕಾರಿಗಳು ಒಂದು ನಿರ್ದಿಷ್ಟ ಅವಧಿಯಲ್ಲಿ ಕನ್ನಡ ಕಲಿಯಬೇಕು ಎಂದು ತಾಕೀತು ಮಾಡಿದ್ದಾರಲ್ಲದೆ, ಕನ್ನಡದಲ್ಲಿ ವ್ಯವಹಾರ ನಡೆಸದಿರುವ ಬ್ಯಾಂಕುಗಳ ಸೇವೆಯಿಂದ ಗ್ರಾಮೀಣ ಜನತೆ ವಂಚಿತರಾಗುತ್ತಿದ್ದಾರೆ ಎಂದು ಆಕ್ರೋಶವನ್ನೂ ವ್ಯಕ್ತಪಡಿಸಿದ್ದಾರೆ. ಜೊತೆಗೆ ಕನ್ನಡ ಅನುಷ್ಠಾನದ ವಾರ್ಷಿಕ ವರದಿ ಸಲ್ಲಿಸಲೂ ಬ್ಯಾಂಕುಗಳಿಗೆ ಸೂಚಿಸಿದ್ದಾರೆ.

ಆದರೆ ತಮ್ಮ ಈ ತಾಕೀತು, ಆಕ್ರೋಶ ಮತ್ತು ಸೂಚನೆಗಳಿಗೆ ಅಧಿಕೃತವಾಗಿ ಈ ಬ್ಯಾಂಕುಗಳ ಆಡಳಿತಾತ್ಮಕ ನಿಯಾಮವಳಿಯಲ್ಲಿ ಯಾವ ಬೆಲೆ ಇದೆ ಎಂಬುದು ಕನ್ನಡ ಪ್ರಾಧಿಕಾರದ ಅಧ್ಯಕ್ಷರಿಗೆ ಗೊತ್ತಿದೆಯೋ ಇಲ್ಲವೋ ತಿಳಿಯದು. ಏಕೆಂದರೆ ಇದೇ ಪ್ರಾಧಿಕಾರದ ಈ ಹಿಂದಿನ ಅಧ್ಯಕ್ಷರುಗಳೂ ಬ್ಯಾಂಕುಗಳಲ್ಲಿನ ಕನ್ನಡ ಬಳಕೆಯ ಬಗ್ಗೆ ಇದೇ ತಾಕೀತು, ಆಕ್ರೋಶ ಮತ್ತು ಸೂಚನೆಗಳನ್ನು ಮಾಡಿದ್ದನ್ನೋ ಪ್ರದರ್ಶಿಸಿದ್ದನ್ನೋ ಕನ್ನಡಿಗರು ಈ ಹಿಂದೆ ಹಲವು ಸಲ ಓದಿದ್ದಾರೆ, ನೋಡಿದ್ದಾರೆ. ಆದರೆ ಏನು ಪ್ರಯೋಜನವಾಗಿದೆ? ಬದಲಿಗೆ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ. ಬ್ಯಾಂಕ್ ಸಿಬ್ಬಂದಿ ನೇಮಕಾತಿ ವ್ಯವಸ್ಥೆಯಲ್ಲೇ, ನಿಯಮಗಳಲ್ಲೇ ಮಾರ್ಪಾಡು ಮಾಡಿ ಮೊದಲು ರಾಜ್ಯವಾರು, ಪ್ರದೇಶವಾರು ಇದ್ದ ನೇಮಕಾತಿಯನ್ನು ಅಖಿಲಭಾರತ ನೇಮಕಾತಿಯನ್ನಾಗಿ ಪರಿವರ್ತಿಸಲಾಗಿದೆ. ಇದು ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಮಾತ್ರ ಅಲ್ಲ, ಕೇಂದ್ರ ಸರ್ಕಾರದ ಅಧೀನದ ಎಲ್ಲ ಇಲಾಖೆಗಳಲ್ಲೂ ನಡೆದಿದೆ.

ಇಂತಹ ಬದಲಾವಣೆಗಳು, ತಿದ್ದುಪಡಿಗಳು ನಿನ್ನೆ ಮೊನ್ನೆಯ ಕಥೆಯೇನಲ್ಲ. ಕೆಲ ವರ್ಷಗಳ ಹಿಂದೆ ರಾಜ್ಯಸಭೆಗೆ ಯಾವುದೇ ರಾಜ್ಯದಿಂದ ಆಯ್ಕೆಯಾಗಲು ಆಯಾ ರಾಜ್ಯದ ನಿವಾಸಿ ಆಗಿರಬೇಕು ಎಂಬ ಕಾನೂನನ್ನೇ ಸಾಂವಿಧಾನಿಕ ತಿದ್ದುಪಡಿ ಮಾಡಿ ಬದಲಾಯಿಸಿದ್ದರಿಂದ ಹಿಡಿದು ಇತ್ತೀಚೆಗಿನ ವೈದ್ಯಕೀಯ ಸೀಟುಗಳ ಆಯ್ಕೆಗೆ ಕೇಂದ್ರೀಯ ಆಯ್ಕೆ ವ್ಯವಸ್ಥೆ ಮಾಡುವ ಆಜ್ಞೆಯವರೆಗೆ ಈ ಕೇಂದ್ರೀಕರಣದ ಪ್ರಕ್ರಿಯೆ ನಿರಂತರವಾಗಿ ನಡೆದಿದೆ. ಇದೆಲ್ಲ ನಡೆದಿರುವುದು ರಾಷ್ಟ್ರೀಯ ಹಿತದೃಷ್ಟಿಯಿಂದ ಎಂಬ ಪ್ರಚಾರ ಬೇರೆ ಇದರೊಡನೆ ಸಾಗಿದೆ.

ರಾಜ್ಯಗಳ, ಅದರ ಭಾಷಿಕರ ಹಿತಾಸಕ್ತಿಗಳಿಗೆ ಮಾರಕವಾಗುವಂತೆ ಇಂತಹ ತಿದ್ದುಪಡಿ ಮತ್ತು ಮಾರ್ಪಾಡುಗಳು ನಡೆಯುವಾಗ (ನಾವು ಮತ್ತು ನಮ್ಮ ಪ್ರತಿನಿಧಿಗಳು) ಸುಮ್ಮನಿದ್ದು, ಈಗ ತಾಕೀತು, ಆಕ್ರೋಶಗಳನ್ನು, ಪ್ರದರ್ಶಿಸಿದರೆ ಏನು ಪ್ರಯೋಜನ? ನಾವು ಶಿವಮೊಗ್ಗ-ಬೆಂಗಳೂರು ರೈಲುಗಳಲ್ಲಿ ಟಿಕೆಟ್ ತಪಾಸಣಾಕಾರರು ಹಿಂದಿಯಲ್ಲಿ ಕೇಳುವ ಪ್ರಶ್ನೆಗಳಿಗೆ ಅವರಿಗೆ ಅರ್ಥವಾಗುವ ಏಕೈಕ ಭಾಷೆಯಾದ ಹಿಂದಿಯಲ್ಲಿ ಉತ್ತರಕೊಡಲು ಸಿದ್ಧರಾಗುತ್ತಿದ್ದೇವೆ; ಹಾಸನ ರೈಲ್ವೇ ನಿಲ್ದಾಣದಲ್ಲಿನ ರೈಲ್ವೇ ಸಿಬ್ಬಂದಿಯೊಂದಿಗೆ ಹಿಂದಿಯಲ್ಲಿ ವ್ಯವಹರಿಸಲು ತಯಾರಾಗುತ್ತಿದ್ದೇವೆ. ವಿಪರ್ಯಾಸವೆಂದರೆ ರಾಷ್ಟ್ರೀಯತೆಯ ತಪ್ಪು ಕಲ್ಪನೆಯಲ್ಲಿ ಈ ಬಗ್ಗೆ ನಾಚಿಕೆಪಡಬೇಕಾದ ಪರಿಸ್ಥಿತಿಯಿಂದಲೂ ನಮ್ಮನ್ನು ನಾವು ಪಾರಾಗಿಸಿಕೊಂಡು, ಇದಕ್ಕೆ ಪ್ರತಿಯಾಗಿ ಹೆಮ್ಮೆ ಪಡುವುದನ್ನು ಕಲಿತಿದ್ದೇವೆ! ಅಥವಾ ಇಲ್ಲೆಲ್ಲ ಹಿಂದಿ ಫಲಕಗಳನ್ನು ಹಾಕುವವರೆಗೂ ಕಾದು, ನಂತರ ಅವಕ್ಕೆ ಮಸಿಬಳಿಯುವ ವೀರಾವೇಶಕ್ಕೆ ದಾರಿ ಮಾಡಿಕೊಂಡು, ನೋಡಿದವರ ಕಣ್ಣಿಗೆ ಅನಾಗರಿಕರಂತೆ, ಜಗಳಗಂಟರಂತೆ ಕಾಣುವ ಪರಿಸ್ಥಿತಿಯನ್ನು ಸ್ವಂತ ನಿರ್ಮಿಸಿಕೊಂಡಿದ್ದೇವೆ!

ನಮ್ಮ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು, ತಾವು ಮಾಡಿದ ತಾಕೀತು, ವ್ಯಕ್ತಪಡಿಸಿದ ಆಕ್ರೋಶ ಮತ್ತು ನೀಡಿದ ಸೂಚನೆಗಳನ್ನು ಲೆಕ್ಕಿಸದೆ ಬ್ಯಾಂಕುಗಳು ತಮ್ಮ ಇದೇ ನೀತಿಯನ್ನು ಮುಂದುವರೆಸಿದರೆ ಏನು ಕ್ರಮ ಕೈಗೊಳ್ಳುವ ಸ್ಥಿತಿಯಲ್ಲಿದ್ದಾರೆ-ಇನ್ನೊಂದು ಸುತ್ತಿನ ತಾಕೀತು, ಆಕ್ರೋಶ, ಸೂಚನೆಗಳನ್ನು ಹೊರಡಿಸುವುದರ ಹೊರತಾಗಿ? ಏಕೆಂದರೆ, ರಾಜ್ಯ ಸರ್ಕಾರದ ಈ ಪ್ರಾಧಿಕಾರಕ್ಕೆ ತನ್ನ ತಾಕೀತು, ಸೂಚನೆಗಳನ್ನು ಕೇಂದ್ರ ಸರ್ಕಾರದ ಅಧೀನದಲ್ಲಿರುವ ಸಂಸ್ಥೆಗಳು ಕಡ್ಡಾಯವಾಗಿ ಪಾಲಿಸುವಂತೆ ಮಾಡುವ ಯಾವ ಅಧಿಕಾರವೂ ಇಲ್ಲ. ಹಾಗಾಗಿಯೇ ಇದರ ಅಧ್ಯಕ್ಷರು ಈಗ ಕೊಸರಾಡಿಕೊಂಡು ಈ ನಿಯಮದಲ್ಲಿ ಆ ಅವಕಾಶವಿದೆ, ಆ ನಿಯಮದಲ್ಲಿ ಈ ಅವಕಾಶವಿದೆ ಇತ್ಯಾದಿ ಔಪಚಾರಿಕ ಸಲಹೆಗಳ ರೂಪದಲ್ಲೇ ತಮ್ಮ ತಾಕೀತನ್ನು ವ್ಯಕ್ತಪಡಿಸುವ ಸ್ಥಿತಿಗೆ ಈಡಾಗಿದ್ದಾರೆ. ಪ್ರಾಧಿಕಾರದ ಅಧ್ಯಕ್ಷರು ತಮ್ಮ ಔಪಚಾರಿಕ ಕರ್ತವ್ಯವನ್ನು ಸ್ವಲ್ಪ ಅನೌಪಚಾರಿಕವಾಗಿ ನಿರ್ವಹಿಸಿದ್ದಾರೆ ಅಷ್ಟೆ! ಇದಕ್ಕೆ ಪ್ರತಿಯಾಗಿ ಬ್ಯಾಂಕ್ ಅಧಿಕಾರಿವರ್ಗವೂ ಹೆಚ್ಚೆಂದರೆ ಪ್ರಾಧಿಕಾರದ ಅಧ್ಯಕ್ಷರ ಈ ತಾಕೀತು-ಸೂಚನೆ

ಇತ್ಯಾದಿಗಳನ್ನು ಒಂದು ಸುತ್ತೋಲೆಯ ಮುಖೇನ ತನ್ನ ಎಲ್ಲ ಕಛೇರಿಗಳ ಗಮನಕ್ಕೆ ತರಬಹುದು ಮತ್ತು ಇದನ್ನು ತಮ್ಮ ಸೂಚನೆಯ ಬಗ್ಗೆ ಕೈಗೊಳ್ಳಲಾಗುತ್ತಿರುವ 'ಸೂಕ್ತ ಕ್ರಮ'ವೆಂದು ಪ್ರಾಧಿಕಾರಕ್ಕೆ ವರದಿ ಸಲ್ಲಿಸಬಹುದು! ಅಲ್ಲಿಗೆ ಕನ್ನಡ ಸೇವೆಯೆಂಬ ಸರ್ಕಾರಿ ನಾಟಕದ ಮತ್ತೊಂದು ಪ್ರದರ್ಶನ ಮುಗಿದಂತೆ!

ಕ್ರಮೇಣ ಕೇಂದ್ರ ಸರ್ಕಾರವೆಂದರೆ ಹಿಂದಿ ಸರ್ಕಾರವಾಗುತ್ತಿದ್ದು, ನಿಧಾನವಾಗಿ ಹಿಂದಿಯೇತರ ರಾಜ್ಯಗಳನ್ನು ಸಾಂಸ್ಕೃತಿಕವಾಗಿಯಾದರೂ ಈ ಹಿಂದಿ ಪ್ರಭುತ್ವದ ವಸಾಹತು ರಾಜ್ಯಗಳನ್ನಾಗಿ ಪರಿವರ್ತಿಸುವ ಪ್ರಯತ್ನ ನಡೆಯುತ್ತಿದೆ. ದ್ರಾವಿಡ ರಾಜ್ಯಗಳ ಕಪ್ಪು ಜನರನ್ನು ನಮ್ಮೊಂದಿಗೆ ಬಾಳಲು ಅವಕಾಶ ಮಾಡಿಕೊಟ್ಟಿಲ್ಲವೆ ಎಂದು ಕೇಳುವ ಮೂಲಕ ತಮ್ಮ ಸಮಾನತೆಯ ಕಲ್ಪನೆಯನ್ನು ಅಖಿಲ ಭಾರತ ಪಕ್ಷವೊಂದರ ಹಿಂದಿ ಭಾಷಾ ಪ್ರದೇಶದ ಸಾಂಸ್ಕೃತಿಕ ನಾಯಕರೊಬ್ಬರು ಇತ್ತೀಚೆಗೆ ತಾನೇ ಹೊರಗೆಡಹಿರಲಿಲ್ಲವೇ? ಅದೇ ಮನಸ್ಸು ಕೇಂದ್ರ ಸರ್ಕಾರದಲ್ಲಿ ಇಂದು ಕೆಲಸ ಮಾಡುತ್ತಿರುವುದು. ಎಲ್ಲ ಕಡೆ ಹಿಂದಿಯನ್ನು ಹೇರುವುದು ಈ ಕೇಂದ್ರ ಸರ್ಕಾರದ ಅಧಿಕೃತ ನೀತಿಯೇ ಆಗಿದೆ ಮತ್ತು ಅದನ್ನೂ ಈಗ ಅದು ಬಿರುಸಾಗಿಯೇ ನಡೆಸಿರುವ ಸೂಚನೆಗಳು ಕಾಣತೊಡಗಿವೆ. ಈಗ ಪಾಸ್‌ಪೋರ್ಟ್, ವರಮಾನ ತೆರಿಗೆ ದಾಖಲೆಗಳಲ್ಲೂ ಹಿಂದಿಯ ಪ್ರವೇಶವಾಗಿದೆ. ಇನ್ನೇನು ನಮ್ಮ ಕೆಲವು ನೋಟುಗಳ ಮೇಲಿರುವ ಕನ್ನಡ ಇತ್ಯಾದಿ ಹಿಂದಿಯೇತರ ಭಾಷೆಗಳನ್ನೂ ಅಲ್ಲಿಂದ ತೆಗೆಯುವ ಕಾಲ ದೂರವಿಲ್ಲ.

ಈ ಪ್ರವೃತ್ತಿಯನ್ನು ತಡೆಯಲು ಈಗಾಗಲೇ ತಡವಾಗಿದೆ. ಆದರೆ ಈಗಲಾದರೂ, ತಮಿಳುನಾಡು ಮತ್ತು ಪ. ಬಂಗಾಳ ಸರ್ಕಾರಗಳ ಮಾದರಿಯಲ್ಲಿ ಇದನ್ನು ತಡೆಯಲು ದೃಢ ನಿಶ್ಚಯ ಮಾಡುವಂತೆ ಮತ್ತು ಅಗತ್ಯವಾದರೆ ಸೂಕ್ತ ಶಾಸನಾತ್ಮಕ ಕ್ರಮಗಳನ್ನು ಕೈಗೊಳ್ಳುವಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರವೂ ಸೇರಿದಂತೆ ಕನ್ನಡದ ಎಲ್ಲ ಸಂಘ ಸಂಸ್ಥೆಗಳೂ ರಾಜ್ಯ ಸರ್ಕಾರದ ಮೇಲೆ ಸಂಘಟಿತ ಒತ್ತಡ ಹೇರಬೇಕಿದೆ. ಏಕೆಂದರೆ, ನಮ್ಮ ಜನ ಪ್ರತಿನಿಧಿಗಳು ತಾವಾಗಿ ತಾವೇ ರಾಜ್ಯದ ಜನ, ಭಾಷೆ, ಸಂಸ್ಕೃತಿಗಳ ಹಿತಾಸಕ್ತಿಗಳನ್ನು ಕಾಪಾಡುವ 'ಸ್ಥಿತಿ'ಯಲ್ಲಿಲ್ಲವೆಂದು ಈಗಾಗಲೇ ಖಚಿತವಾಗಿದೆ. ಆಯಾ ರಾಜ್ಯಗಳಲ್ಲಿನ ಕೇಂದ್ರ ಸರ್ಕಾರದ ಕಛೇರಿಗಳಿಗೆ ಒಂದು ನಿರ್ದಿಷ್ಟ ಹಂತದವರೆಗಾದರೂ ನೇಮಕಾತಿಗಳನ್ನು, ಆಯಾ ರಾಜ್ಯದ ಅಧಿಕೃತ ಭಾಷೆಯನ್ನು ಮೆಟ್ರಿಕ್ಯುಲೇಷನ್‌ವರೆಗಾದರೂ ತಮ್ಮ ಶಿಕ್ಷಣ ಕ್ರಮದ ಒಂದು ಭಾಷೆಯಾಗಿ ಕಲಿತಿರುವವರಿಗೇ ಸರ್ಕಾರಿ ಹುದ್ದೆಗಳನ್ನು ಸೀಮಿತಗೊಳಿಸಬೇಕೆಂಬ ಕಾನೂನನ್ನು ಜಾರಿಗೆ ತರುವೆಡೆಗೆ ನಾವು ಕೆಲಸ ಮಾಡದಿದ್ದರೆ ನಮ್ಮ ಯಾವ ಪ್ರಾಧಿಕಾರಗಳೂ, ಅಕಾಡೆಮಿಗಳೂ, ಸಾಂಸ್ಕೃತಿಕ ನೀತಿಗಳೂ ಕೆಲಸಕ್ಕೆ ಬಾರವು.

ಇದಕ್ಕಾಗಿ ಮೊದಲು ಸಾಮಾನ್ಯ ಜನರಲ್ಲಿರುವ, ಕೇಂದ್ರ ಸರ್ಕಾರವೆಂದರೆ ರಾಜ್ಯಗಳ ಉಸಾಬರಿಯಿಲ್ಲದ ಅಚ್ಚ ರಾಷ್ಟ್ರ ಸರ್ಕಾರ ಎಂಬ ತಪ್ಪು ಕಲ್ಪನೆಯನ್ನು ಹೋಗಲಾಡಿಸಬೇಕಿದೆ. ಕೇಂದ್ರ ಸರ್ಕಾರವೆಂದರೆ ಎಲ್ಲ ರಾಜ್ಯಗಳ ಜನರ ಪ್ರಾತಿನಿಧಿಕ

ಸರ್ಕಾರವಾಗಿದ್ದು, ಅದು ಪ್ರತಿ ರಾಜ್ಯದ ಜನ ನೀಡಿದ ಅಧಿಕಾರ ಮತ್ತು ಹಣದ ಮೇಲೆ ನಡೆಯುತ್ತಿದ್ದು, ಅದು ಯಾವುದೇ ರಾಜ್ಯದ ಭಾಷೆ-ಸಂಸ್ಕೃತಿಗಳನ್ನು ರಾಷ್ಟ್ರದ ಮೇಲೆ ಹೇರುವ ಅಧಿಕಾರವನ್ನು ಹೊಂದಿಲ್ಲ ಎಂಬುದನ್ನು ಜನರಿಗೆ ಸ್ಪಷ್ಟಪಡಿಸಬೇಕಿದೆ. ಮತ್ತು ಹಾಗೆ ಹೇರುವ ಪ್ರಯತ್ನ ಮಾಡಿದಾಗ ಅದನ್ನು ವಿರೋಧಿಸುವುದು ರಾಷ್ಟ್ರೀಯತೆಯನ್ನು ಬಲಪಡಿಸುವ ಕೆಲಸವೇ ಆಗಿದೆಯೆಂದು ನಮ್ಮ ಜನಕ್ಕೆ ಮನವರಿಕೆ ಮಾಡಿಸಬೇಕಿದೆ

(ಇದು 'ಪ್ರಜಾವಾಣಿ'ಯಲ್ಲಿ ಪ್ರಕಟವಾಗದ್ದರಿಂದ ನನ್ನ ಫೇಸ್‌ಬುಕ್‌ನಲ್ಲಿ ಪ್ರಕಟವಾಯಿತು.)

ಕೇಂದ್ರ ಸರ್ಕಾರ ಅಂದರೆ ಹಿಂದಿ ಸರ್ಕಾರವಲ್ಲ

ಬೆಂಗಳೂರು ನಗರದ 'ನಮ್ಮ ಮೆಟ್ರೋ'ವಿನಲ್ಲಿ ಹಿಂದಿ ಭಾಷೆಯ ಬಳಕೆ ಕುರಿತಂತೆ ನಡೆದಿರುವ ವಿವಾದದಲ್ಲಿ ಕೇಳಿ ಬಂದಿರುವ ಒಂದು ಮಾತೆಂದರೆ, ಕೇಂದ್ರ ಸರ್ಕಾರ ಅಂದರೆ ಭಾರತ ಸರ್ಕಾರ ಈ ಯೋಜನೆಗೆ ಹಣ ಕೊಟ್ಟಿರುವುದರಿಂದ ಇಲ್ಲಿ ಹಿಂದಿ ಭಾಷೆಯನ್ನು ಬಳಸುವುದು ಕಡ್ಡಾಯವಾಗಿದೆ ಎಂಬುದು. ಈ ಮಾತನ್ನು ಮೆಟ್ರೋದ ಆಡಳಿತಾಧಿಕಾರಿಯೊಬ್ಬರು ಹೇಳಿದ್ದಾರಂತೆ. ಇದು ನಿಜವಾಗಿದ್ದರೆ, ಇದು ಭಾರತವೆಂಬ ರಾಷ್ಟ್ರ ಹೇಗೆ ರಚನೆಯಾಗಿದೆ ಎಂಬುದರ ಒಂದು ವಿಕೃತ ವ್ಯಾಖ್ಯಾನವೇ ಆಗುತ್ತದೆ.

ಭಾರತವೆಂಬ ರಾಷ್ಟ್ರ ಅಸ್ತಿತ್ವದಲ್ಲಿರುವುದು ಮೂಲತಃ ಅದರ ರಾಜ್ಯ ಘಟಕಗಳಿಂದಾಗಿ. ಈ ರಾಜ್ಯಗಳಿಲ್ಲದೆ ಭಾರತ ಎಂಬ ರಾಷ್ಟ್ರಕ್ಕೆ ಅಸ್ತಿತ್ವವೇ ಇಲ್ಲ. ಇನ್ನು ರಾಜ್ಯ ಎಂದರೆ ಅದರ ಜನ, ಭಾಷೆ, ಸಂಸ್ಕೃತಿ ಎಲ್ಲ ಸೇರುತ್ತದೆ. ಹಾಗಾಗಿ ಕೇಂದ್ರ ಸರ್ಕಾರ ಅಥವಾ ಭಾರತ ಸರ್ಕಾರವೆಂದರೆ ಈ ಎಲ್ಲ ಜನರ, ಅವರ ಭಾಷೆ, ಸಂಸ್ಕೃತಿಗಳ ಹೊಣೆ ಹೊತ್ತಿರುವ ಸರ್ಕಾರ. ಹಾಗಾಗಿಯೇ ಈ ಹೊಣೆಗಳನ್ನು ನಿರ್ವಹಿಸಲು ಕೇಂದ್ರ ಸರ್ಕಾರದ ಬೊಕ್ಕಸಕ್ಕೆ ಈ ಎಲ್ಲ ಜನರ ಪರವಾಗಿ ಆಯಾ ರಾಜ್ಯ ಸರ್ಕಾರಗಳು ತಮ್ಮ ಆದಾಯದ ಪಾಲನ್ನು ಕೊಟ್ಟು ಆ ಬೊಕ್ಕಸವನ್ನು ರೂಪಿಸಿವೆ. ಈ ಪಾಲುಗಳು ಮತ್ತು ಕೇಂದ್ರ ಸರ್ಕಾರವೇ ಈ ರಾಜ್ಯಗಳ ಜನರಿಂದ ನೇರವಾಗಿ ವಸೂಲು ಮಾಡುವ ತೆರಿಗೆ ಹಣವಿಲ್ಲದೆ ಕೇಂದ್ರ ಸರ್ಕಾರದ ಹಣ ಎಂಬುದು ಪ್ರತ್ಯೇಕವಾಗಿ ಇರುವುದಿಲ್ಲ.

ಹಾಗಾಗಿ ಕೇಂದ್ರ ಸರ್ಕಾರ ಎಂದರೆ ಹಿಂದಿ ಮತ್ತು ಅದನ್ನಾಡುವ ಜನರ ಸಂಸ್ಕೃತಿಗಳಿಗೆ ಮಾತ್ರ ಸಂಬಂಧಪಟ್ಟ ಆಡಳಿತವಲ್ಲ. ಅದರ ವ್ಯಾಪ್ತಿಯಲ್ಲಿ ಕನ್ನಡ ಸೇರಿದಂತೆ ಇತರ ಭಾರತೀಯ ಭಾಷೆಗಳ ಜತೆಗೆ ಹಿಂದಿಯೂ ಒಂದು ಭಾಷೆ ಅಷ್ಟೆ. ಆದರೆ ಕನ್ನಡ ಆಡಳಿತ ಭಾಷೆಯಾಗಿರುವ ಕರ್ನಾಟಕದ ವಿಷಯ ಬಂದಾಗ ಅದು ಕೇಂದ್ರ ಸರ್ಕಾರದ ಹಣದ ಖರ್ಚಿನ ಬಾಬತ್ತೇ ಆದರೂ ಅಲ್ಲಿ ಅದು ಕನ್ನಡಕ್ಕೆ ಮಾಡುವ ಖರ್ಚೇ ಆಗಿರುತ್ತದೆ ಮತ್ತು ಆಗಿರಬೇಕು ಕೂಡ. ದುರದೃಷ್ಟಕರ ಸಂಗತಿ ಎಂದರೆ, ಬಹಳಷ್ಟು ಕನ್ನಡಿಗರು ಭಾರತವೆಂದಾಕ್ಷಣ ಕನ್ನಡದ ಹಿತಾಸಕ್ತಿಯನ್ನೂ ತ್ಯಾಗ

ಮಾಡಿ ಉಳಿಸಿಕೊಳ್ಳಬೇಕಾದ ಉನ್ನತ ಧ್ಯೇಯವೆಂದು ಅಸಂಬದ್ಧವಾಗಿ ಯೋಚಿಸುವ ವಿಪರ್ಯಾಸಕರ ರಾಷ್ಟ್ರಭಕ್ತರಾಗಿದ್ದಾರೆ. ಹಾಗಾಗಿಯೇ ಇಂದು ಕರ್ನಾಟಕದಲ್ಲಿ ನಾವು ಓಡಾಡುವ ರೈಲುಗಳ ಬೋಗಿಗಳಲ್ಲಿರಲಿ ಟಿಕೆಟ್‌ಗಳ ಮೇಲಿಂದಲೂ ನಮ್ಮದೇ ಭಾಷೆ ಕನ್ನಡ ಮಾಯವಾಗಿದೆ. (ತಮಿಳ್ನಾಡು ಮತ್ತು ಬಂಗಾಳಗಳಲ್ಲಿ ಆಯಾ ರಾಜ್ಯಗಳ ಭಾಷೆಗಳಿಗೆ ಈ ಗತಿ ಒದಗಿಲ್ಲ!) ನಾವು ಬಳಸುವ ಅಂಚೆ ಮತ್ತು ಬ್ಯಾಂಕ್ ವ್ಯವಹಾರಗಳ ಸಾಮಗ್ರಿಗಳ ಮೇಲಿಂದ ಕನ್ನಡ ಮಾಯವಾಗಿದೆ. ಇಂತಹ ಸಂದರ್ಭಗಳಲ್ಲಿ ಕರ್ನಾಟಕ ಭಾರತದಲ್ಲಿದೆಯೇ ಅಥವಾ ನಾವು ನಮಗೆ ದಕ್ಕಬೇಕಾದ ಸಾಂಸ್ಕೃತಿಕ ಮರ್ಯಾದೆಗಳು ದಕ್ಕುವಂತಹ ರಾಷ್ಟ್ರದಲ್ಲಿದ್ದೇವೆಯೇ ಎಂಬ ಮುಜುಗರದ ಪ್ರಶ್ನೆಗಳನ್ನು ನಮ್ಮನ್ನು ಕಾಡಬೇಕಿತ್ತು. ಆದರೆ ಕಾಡಿಲ್ಲ. ಹಾಗಾಗಿಯೇ ಈ ಭಾರತ ನಮ್ಮ ರಾಜಧಾನಿಯ ರೈಲುಗಳಲ್ಲಿ ಹಿಂದಿಯನ್ನು ಹೇರುವ ಧೈರ್ಯ ವಹಿಸಿದೆ.

ಕನ್ನಡಿಗರು ಎಂದಿನವರೆಗೆ ಕೇಂದ್ರ ಸರ್ಕಾರದ ಪ್ರತೀಕವಾಗಿರುವ ಭಾರತವೆಂದರೆ ಕರ್ನಾಟಕದ ಮೇಲೆ ಸವಾರಿ ಮಾಡುವ ಸಹಜ ಹಕ್ಕು-ಅಧಿಕಾರಗಳನ್ನು ಹೊಂದಿರುವ ಪವಿತ್ರ ಶಕ್ತಿಯಾಗಿದೆ ಎಂಬ ಕೀಳರಿಮೆಯ ಅಪಕಲ್ಪನೆಯಲ್ಲಿ ಸಿಕ್ಕಿರುತ್ತಾರೋ ಅಲ್ಲಿಯವರೆಗೆ ಇಂತಹ ಹೇರಿಕೆಗಳು ಎಗ್ಗಿಲ್ಲದೆ ನಡೆದಿರುತ್ತವೆ.

('ಪ್ರಜಾವಾಣಿ'ಗೆ ಬರೆದ; ಆದರೆ ಪ್ರಕಟವಾಗದ ಪತ್ರ : ೧೬ ಜೂನ್, ೨೦೧೭)

ನುಡಿ ಕಳೆದುಕೊಳ್ಳುತ್ತಿರುವ ನಾಡಿಗೆ ಧ್ವಜದ ಬಡಿವಾರವೇಕೆ?

ಕರ್ನಾಟಕಕ್ಕೆಂದು ಪ್ರತ್ಯೇಕ ಧ್ವಜವನ್ನು ರೂಪಿಸಿರುವ ಸರ್ಕಾರ, ಅದರ ವಿನ್ಯಾಸಕ್ಕೆ ಕನ್ನಡ ಸಾಹಿತಿಗಳು ಮತ್ತು ಕನ್ನಡಪರ ಸಂಘಟನೆಗಳ ಅನುಮೋದನೆ ಪಡೆದಿದ್ದು, ಅದರ ಅಧಿಕೃತ ಬಳಕೆಗೆ ಅನುಮತಿ ಕೋರಿ ಪ್ರಸ್ತಾವನೆಯೊಂದನ್ನು ಕೇಂದ್ರಕ್ಕೆ ಕಳಿಸುವುದಾಗಿ ಮುಖ್ಯಮಂತ್ರಿಗಳು ಹೇಳಿದ್ದಾರೆ. (ಪ್ರವಾ: ೯.೩.೨೦೧೮) ಇದು ನಿಜವಾಗಿಯೂ ಸಂತೋಷದ ಮತ್ತು ಪ್ರತಿಯೊಬ್ಬ ಕನ್ನಡಿಗನೂ ಹೆಮ್ಮೆ ಪಡಬಹುದಾದ ಸುದ್ದಿ. ಹಾಗೇ ಭಾರತ ಒಂದು ಕೇಂದ್ರೀಕೃತ ರಾಷ್ಟ್ರವಲ್ಲ, ಒಂದು ಒಕ್ಕೂಟ ರಾಷ್ಟ್ರ ಎಂಬ ಸಂದೇಶವನ್ನು ಕೇಂದ್ರಕ್ಕೆ ರವಾನಿಸುವ ಪ್ರಯತ್ನವೂ ಆಗಿ ಸಕಾಲಿಕವಾದ ಕ್ರಮ ಎಂದು ಕೂಡ ಅನ್ನಿಸುತ್ತಿದೆ. ಏಕೆಂದರೆ ಸದ್ಯದ ಕೇಂದ್ರ ಸರ್ಕಾರ ಇತ್ತೀಚೆಗೆ ರಾಷ್ಟ್ರೀಯತೆಯ ತಪ್ಪು ಅರ್ಥವನ್ನು ಪ್ರತಿಪಾದಿಸುತ್ತಾ ಜಿಎಸ್‌ಟಿ, ಹಿಂದಿ ಹೇರಿಕೆ, ವಿವಿಧ ಕೇಂದ್ರ ಇಲಾಖೆಗಳ ಸೇವೆಗೆ ರಾಜ್ಯವಾರು ಪರೀಕ್ಷೆ/ನೇಮಕಾತಿ ವ್ಯವಸ್ಥೆ ಮತ್ತು ಉನ್ನತ ಶಿಕ್ಷಣ ಪ್ರವೇಶಕ್ಕಾಗಿ ವಿವಿಧ ರಾಜ್ಯಗಳಲ್ಲಿ ನಡೆಯುತ್ತಿದ್ದ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆ ವ್ಯವಸ್ಥೆಗಳನ್ನು ರದ್ದುಗೊಳಿಸಿ ಅವನ್ನು ಅಖಿಲಭಾರತ ಮಟ್ಟಕ್ಕೆ ಬದಲಾಯಿಸಿರುವುದೂ ಸೇರಿದಂತೆ ಅಧಿಕಾರ ಕೇಂದ್ರೀಕರಣದ ಹಲವು ಕ್ರಮಗಳನ್ನು ಪ್ರಕಟಿಸುತ್ತಿದೆ.

ಆದರೆ ಇದಾವುದರ ಬಗ್ಗೆಯೂ ಪ್ರತಿಭಟನೆ ಇರಲಿ, ಚಕಾರವನ್ನೂ ಎತ್ತದ ಸರ್ಕಾರ ಈ ನಾಡ ಧ್ವಜದ ಪ್ರಸ್ತಾವನೆಯನ್ನು ಇಷ್ಟು ಆದ್ಯತೆಯ ಮೇರೆಗೆ ಕೈಗೆತ್ತಿಕೊಂಡಿದೆ! ಇದು ಚುನಾವಣೆಗಳ ಹೊತ್ತಿಗೆ ಕನ್ನಡದ ಹೆಮ್ಮೆಯನ್ನು ಉದ್ದೇಶಪೂರ್ವಕವಾಗಿ ಕೆರಳಿಸುವ ಪ್ರಯತ್ನದಂತೆಯೂ ಕಂಡು ನಿರಾಸೆಯನ್ನು ಹುಟ್ಟಿಸುತ್ತದೆ. ಏಕೆಂದರೆ, ಕನ್ನಡಿಗ ಎಂಬ ಪರಿಕಲ್ಪನೆಯ ಕೇಂದ್ರದಲ್ಲಿರುವ ಕನ್ನಡ ಭಾಷೆ ಕರ್ನಾಟಕದಲ್ಲಿ ಎರಡನೆಯ ಮತ್ತು ಮೂರನೆಯ ಆದ್ಯತೆಯ ಭಾಷೆಯಾಗಿ ಸಾರ್ವಜನಿಕ ಜೀವನದಲ್ಲಿ ಹಿನ್ನೆಲೆಗೆ ಸರಿಯುತ್ತಿರುವುದರ ಬಗ್ಗೆ ಯಾವುದೇ ಕಾಳಜಿ ವಹಿಸದ ಸರ್ಕಾರ ನಾಡಧ್ವಜದ ಬಳಕೆಯ ಜಾರಿಗೆ ಇಷ್ಟು ಆದ್ಯತೆ ನೀಡಿರುವುದು 'ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು' ಎಂಬ ಗಾದೆಯನ್ನು ನೆನಪಿಗೆ ಬರುವಂತೆ ಮಾಡಿದೆ. ಸದ್ಯಕ್ಕಂತೂ ನಾಡಧ್ವಜ ಕೇಂದ್ರದಿಂದ ಅನುಮೋದನೆ ಪಡೆದು ರಾಜ್ಯದಲ್ಲಿ ಹಾರಾಡುವ ಸಾಧ್ಯತೆ ಇಲ್ಲ. ಹಾಗಾಗಿ ಚುನಾವಣೆಗಳ ನಂತರ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಈ ವಿಷಯ ರಾಜ್ಯ ಸರ್ಕಾರಕ್ಕೆ–ಅದು ಯಾರದ್ದೇ ಆಗಿರಲಿ–ಮರೆತೇ ಹೋದರೂ ಆಶ್ಚರ್ಯವಿಲ್ಲ. ಹಾಗಾಗಿ, ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣವಾದರೂ ಕಡ್ಡಾಯವಾಗಿ ಕನ್ನಡದಲ್ಲಿ ನಡೆದು ಸಾರ್ವಜನಿಕ ಜೀವನದಲ್ಲಿ ಕನ್ನಡವು ಜೀವಂತವಾಗಿ ಉಳಿದು ಬೆಳೆಯುವಂತಹ ದಾರಿಗೆ ಎದುರಾಗಿರುವ ಅಡ್ಡಿ–ಆತಂಕಗಳನ್ನು ನಿವಾರಿಸುವಂತಹ ಕ್ರಮಗಳನ್ನು ಇದುವರೆಗೂ ಕೈಗೊಳ್ಳದ ಸರ್ಕಾರ ಈಗ ಈ ನಾಡಧ್ವಜದ ಮೂಲಕ ನಾಡು–ನುಡಿಯ ಅಭಿಮಾನವನ್ನು ರಾಜಕೀಯ ಲಾಭಕ್ಕೆ ಬಳಸಿಕೊಳ್ಳಲೆತ್ನಿಸುತ್ತಿರುವುದು ಎದ್ದುಕಾಣುತ್ತಿದೆ.

ಪ್ರಾಥಮಿಕ ಶಿಕ್ಷಣವನ್ನು ಕನ್ನಡದ ಎಲ್ಲ ಮಕ್ಕಳಿಗೂ ಕಡ್ಡಾಯ ಮಾಡುವ ರಾಜ್ಯ ಸರ್ಕಾರದ ಆಜ್ಞೆಯನ್ನು ಸಾಂವಿಧಾನಿಕವಾಗಿ ಅಸಿಂಧು ಎಂದು ನಮ್ಮ ಸರ್ವೋನ್ನತ ನ್ಯಾಯಾಲಯ ತೀರ್ಪು ನೀಡಿ ಎರಡು ವರ್ಷಗಳಿಗೂ ಮೇಲಾಯಿತು. ಕಳೆದ ಎರಡು ರಾಜ್ಯೋತ್ಸವಗಳ ಸಂದರ್ಭಗಳಲ್ಲೂ ಈ ತೀರ್ಪನ್ನು ಅಪ್ರಸ್ತುತಗೊಳಿಸಲು ರಾಜ್ಯದ ಪರವಾಗಿ ಸಂವಿಧಾನ ತಿದ್ದುಪಡಿ ಸೇರಿದಂತೆ ಏನೆಲ್ಲ ಪ್ರಯತ್ನಗಳನ್ನು ಮಾಡಬಹುದು ಎನ್ನುವುದನ್ನು ಕುರಿತಂತೆ ಚಿಂತನೆಯನ್ನು ಸರ್ಕಾರ ನಡೆಸಿದೆ ಎಂದು ಮುಖ್ಯಮಂತ್ರಿಗಳು ಹೇಳಿದ್ದರು. ಆದರೆ ಅದರ ಇಂತಹ ಪ್ರಯತ್ನಗಳ ಯಾವ ಸೂಚನೆಯೂ ಈವರೆಗೆ ಸಾರ್ವಜನಿಕವಾಗಿ ಕಂಡುಬಂದಿಲ್ಲ. ಹಾಗಾಗಿ ಮುಖ್ಯಮಮಂತ್ರಿಗಳ ಈ ಮಾತುಗಳೆಲ್ಲ ಸಂದರ್ಭಕ್ಕೆ ತಕ್ಕಂತೆ ಮೂಗಿಗೆ ತುಪ್ಪ ಸವರಿಬಿಡುವ ರಾಜಕೀಯ ತಂತ್ರದಂತೆಯೇ ಕಾಣುತ್ತವೆ. ನಾಡಧ್ವಜವನ್ನು ಅನುಮೋದಿಸಲು ಕರೆದಿದ್ದ ಸಭೆಯಲ್ಲಿ ಭಾಗವಹಿಸಿದ್ದ ಸಾಹಿತಿಗಳು ಮತ್ತು ಕನ್ನಡಪರ ಸಂಘಟನೆಗಳ ಯಾರೂ ಈ ಪ್ರಸ್ತಾಪವನ್ನೂ ಮಾಡಿಲ್ಲದಿರುವುದೂ ಖೇದಕರ. ಇದು ಕನ್ನಡಪರತೆ ಎಂಬುದು ಇಂದು ಏನಾಗಿದೆ, ಯಾವ ಅರ್ಥವನ್ನು ಪಡೆದಿದೆ ಎಂಬುದರ ದ್ಯೋತಕ ಆಗಿದೆ ಎಂದೂ ಹೇಳಬಹುದು.

ಹಾಗೇ ಇದರಿಂದ ಸರ್ಕಾರಕ್ಕೆ ಕನ್ನಡ ಶಿಕ್ಷಣ ಮಾಧ್ಯಮದ ಪ್ರಶ್ನೆಯನ್ನು ಲಘುವಾಗಿ ಪರಿಗಣಿಸಲು ಕುಮ್ಮಕ್ಕು ಕೊಟ್ಟಂತೆಯೂ ಆಗಿದೆ ಎಂದೂ ಅರ್ಥೈಸಿಕೊಳ್ಳಬಹುದು.

ನಾಡಧ್ವಜದ ಪ್ರಶ್ನೆಯನ್ನು ವೈಯಕ್ತಿಕ ಬದ್ಧತೆಯಂತೆ ಸ್ವೀಕರಿಸಿರುವಂತೆ ತೋರುವ ಮುಖ್ಯಮಂತ್ರಿಗಳು ಕನ್ನಡ ಶಿಕ್ಷಣ ಮಾಧ್ಯಮದ ಪ್ರಶ್ನೆಯನ್ನೂ ವೈಯಕ್ತಿಕ ಬದ್ಧತೆಯಾಗಿ ಸ್ವೀಕರಿಸಿ ರಾಜ್ಯೋತ್ಸವಗಳ ಸಂದರ್ಭದಲ್ಲಿ ಕನ್ನಡಿಗರಿಗೆ ನೀಡಿದ ವಚನವನ್ನು ಪಾಲಿಸುವ ದಿಸೆಯಲ್ಲಿ ನಾಡಧ್ವಜದ ವಿಷಯದಲ್ಲಿ ತೆಗೆದುಕೊಂಡಂತಹ ಆದ್ಯತೆಯ ಮತ್ತು ಕ್ಷಿಪ್ರ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಮೂಲಕ ಆಗ್ರಹಿಸಬಯಸುತ್ತೇನೆ.

ಅಥವಾ ಇದು ಆಗಹೋಗದ ಕೆಲಸವೆಂದು ಭಾವಿಸಿ ಈ ದಿಸೆಯ ಪ್ರಯತ್ನಗಳನ್ನು ಕೈಬಿಡುವ ನಿರ್ಧಾರಕ್ಕೆ ಸರ್ಕಾರ ಬಂದಿದ್ದರೆ, ಅದನ್ನಾದರೂ ಬಹಿರಂಗವಾಗಿ ಹೇಳಬೇಕು ಎಂದು ಕೋರುತ್ತೇನೆ.

('ಪ್ರಜಾವಾಣಿ' : 'ಸಂಗತ' ಜುಲೈ ೧೦, ೨೦೧೭)

ಯಾವುದು ಜ್ಞಾನ? ಯಾವುದು ಜ್ಞಾನದ ಭಾಷೆ?

ಗೆಳೆಯರಾದ ರಾಜಾರಾಂ ತೋಳ್ಪಾಡಿ ಮತ್ತು ನಿತ್ಯಾನಂದ ಬಿ. ಶೆಟ್ಟಿಯವರು ಇತ್ತೀಚೆಗೆ 'ಪ್ರಜಾವಾಣಿ'ಯಲ್ಲಿ ನಿಯಮಿತವಾಗಲ್ಲದಿದ್ದರೂ ಆಗಾಗ್ಗೆ ಅಂಕಣ ಬರಹಗಳನ್ನು ಪ್ರಕಟಿಸುತ್ತಿದ್ದಾರೆ. ಮುಖ್ಯವಾಗಿ ಸಾರ್ವಜನಿಕ ಬದುಕಿನ ಸಮಕಾಲೀನ ವಿದ್ಯಮಾನಗಳ ಬಗ್ಗೆ ರಾಜಕೀಯಶಾಸ್ತ್ರದ ಪರಿಭಾಷೆಯಲ್ಲಿ ಈ ಬರಹಗಳು ಬರೆಯಲ್ಪಡುತ್ತಿವೆ. ಸಾಂಪ್ರದಾಯಿಕ ಎಡಪಂಥೀಯರ ನಡುವೆ ಅಷ್ಟೇನೂ ಜನಪ್ರಿಯವೆನಿಸಿಕೊಳ್ಳಲಾರದ ಇಲ್ಲಿನ ಅವರ ನಿಲುವುಗಳ ಬಗ್ಗೆ ಕೆಲವು ವಲಯಗಳಿಂದ ಕಟು ಟೀಕೆಗಳು ವ್ಯಕ್ತವಾಗಿರುವುದನ್ನೂ ನಾನು ಗಮನಿಸಿರುವೆ. ಸಮಾಜವಾದಿ ವಿಚಾರಗಳಲ್ಲಿ ನಂಬಿಕೆ ಇರುವ ನನ್ನನ್ನೂ ಎಡಪಂಥೀಯ ಎಂದು ಗುರುತಿಸುವುದು ಸಾಮಾನ್ಯವಾದರೂ, ಕಳೆದ ಕೆಲವು ವರ್ಷಗಳಲ್ಲಿ ಈ ಎಡಪಂಥವೆನ್ನುವುದು ಚರಿತ್ರೆಯ ಯಾವ ಪಾಠಗಳನ್ನೂ ಕಲಿಯದೆ ಅದೇ ಹಳೆಯ ಎಡಪಂಥೀಯ ಗಿಳಿಪಾಠಗಳಿಗೆ ಅನುಸಾರವಾಗಿ ಮತ್ತು ಅದೇ ಪರಿಭಾಷೆಯಲ್ಲಿ ಸಮಕಾಲೀನ ವಿದ್ಯಮಾನಗಳಿಗೆ ಪ್ರತಿಕ್ರಿಯಿಸುತ್ತಾ ಇರುವುದನ್ನು ಕಂಡು ನನ್ನನ್ನು ನಾನು ಎಡಪಂಥೀಯ ಎಂದು ಗುರುತಿಸಿಕೊಳ್ಳುವುದು ಸಾಧುವೇ ಎಂದೂ ಬಹುಬಾರಿ ಯೋಚಿಸಿದ್ದೇನೆ. ಹಾಗಾಗಿ ಈ ಇಬ್ಬರು ಗೆಳೆಯರ ವಿಚಾರಗಳನ್ನು ಟೀಕಿಸುವ ಎಡಪಂಥೀಯ ಗೆಳೆಯರಿಗೆ ನಾನು ಹಲವು ಬಾರಿ ಇವರ ವಿಚಾರಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿ, ಸಹಾನುಭೂತಿಯಿಂದ ಪ್ರತಿಕ್ರಿಯಿಸಿ ಎಂದು ಕೋರಿರುವೆ. ಜೊತೆಗೆ, ಇಂದು ಅಲ್ಪಸಂಖ್ಯಾತವಾಗಿರುವ ಎಡಪಂಥೀಯ ಗುಂಪು

ಸ್ವಲ್ಪವೂ ಉದಾರವಾಗದೆ ತನ್ನ ಬಲವನ್ನು ಇನ್ನಷ್ಟು ಕಳೆದುಕೊಂಡು ಒಂದು ಕರ್ಮಠ ತಾತ್ವಿಕ ಗುಂಪಾಗಿ ಪರಿವರ್ತಿತವಾಗಬಾರದೆಂಬುದೂ ಈ ಕೋರಿಕೆಯ ಹಿಂದಿನ ಒಂದು ಇರಾದೆಯಾಗಿತ್ತು.

ರಾಜಾರಾಂ ತೋಳ್ಪಾಡಿ ಮತ್ತು ನಿತ್ಯಾನಂದ ಶೆಟ್ಟಿಯವರ ಅಂಕಣ ಬರಹಗಳ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಕಟು ವ್ಯಂಗ್ಯ-ಟೀಕೆಗಳು ವ್ಯಕ್ತವಾಗುತ್ತಿದ್ದುದರ ಹಿಂದೆ, ನಾನು ಗಮನಿಸಿದಂತೆ, ಇವರೀರ್ವರು ತಮ್ಮ ವಾದ ಮಂಡಿಸಲು ಬಳಸುತ್ತಿದ್ದ ಭಾಷೆಯ ಅಪರಿಚಿತತೆ ಮತ್ತು ಅದು ಸೃಷ್ಟಿಸುತ್ತಿದ್ದ ಜಟಿಲತೆಗಳು ಮತ್ತು ಅನರ್ಥಗಳೂ ಇದ್ದವು ಎಂದು ನಾನು ಭಾವಿಸಿದ್ದೇನೆ. ನಾನು ಈ ಇಬ್ಬರು ಲೇಖಕರ ಬಗ್ಗೆ ಸಹಾನುಭೂತಿಯ ನಿಲುವನ್ನು ಪ್ರಕಟಿಸುತ್ತಿರುವಾಗಲೆಲ್ಲ ನಾನು ಅವರಿಗೆ ಅವರ ಭಾಷೆಯ ಬಳಕೆಯ ಕ್ರಮದ ಬಗ್ಗೆ ನನ್ನ ಅಸಮಾಧಾನವನ್ನೂ, ಎಚ್ಚರಿಕೆಯನ್ನೂ ರವಾನಿಸುತ್ತಿದ್ದೆ. ವಿಶೇಷವಾಗಿ, ನನ್ನ ಹಳೆಯ ಗೆಳೆಯರೂ ಮತ್ತು ನಮ್ಮ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ ಆಯೋಜಿಸುವ ಅಧ್ಯಯನ ಶಿಬಿರಗಳ ಖಾಯಂ ಸಂಪನ್ಮೂಲ ವ್ಯಕ್ತಿಯೂ ಆಗಿರುವ ತೋಳ್ಪಾಡಿಯವರಿಗೆ ನಾನು ಎಂದಿನಿಂದಲೂ-ಲೋಹಿಯಾ ಕುರಿತ ಅವರು ಪುಸ್ತಕವೊಂದನ್ನು ಬರೆದಂದಿನಿಂದಲೂ-ಅವರ ಭಾಷೆಯ ಬಗ್ಗೆ, ಅದರ ಅತಿಯಾದ ಪಾರಿಭಾಷಿಕತೆಯ ಬಗ್ಗೆ, ಇಂಗ್ಲಿಷ್ ಅನುವಾದಗಳಂತೆ ಕಾಣುವ ಅದರ ನುಡಿಗಟ್ಟುಗಳ ಬಗ್ಗೆ ಹೇಳುತ್ತಲೇ ಬಂದಿರುವೆ. ಅದನ್ನು ನಾನು ಅತಿಗೆ ಹೋಗಿ, ಇಂಗ್ಲಿಷ್‌ನಲ್ಲಿ ಯೋಚಿಸಿ ಕನ್ನಡದಲ್ಲಿ ಮಾತಾಡುವ/ಬರೆಯುವ ದೌರ್ಬಲ್ಯ ಎಂದು ಕರೆದು ಅವರನ್ನು ರೇಗಿಸಿದ್ದೂ ಉಂಟು! ಇತ್ತೀಚೆಗೆ ಅವರು ನಮ್ಮ ಅಧ್ಯಯನ ಶಿಬಿರಗಳಲ್ಲಿ ತಮ್ಮ ಭಾಷೆಯನ್ನು ಸ್ವಲ್ಪವಾದರೂ ಸಾಮಾನ್ಯತೆಗೆ(ಅದರ ಒಳ್ಳೆಯ ಅರ್ಥದಲ್ಲಿ) ಪಳಗಿಸಿಕೊಳ್ಳುವ ಗಂಭೀರ ಪ್ರಯತ್ನ ಮಾಡಿದಂತಿತ್ತು.

ಆದರೆ ನನ್ನ ಆಶ್ಚರ್ಯಕ್ಕೆ ಮೊನ್ನೆ, ಅಂದರೆ ನವೆಂಬರ್ ೧೩ರಂದು ತೋಳ್ಪಾಡಿಯವರು ನಿತ್ಯಾನಂದ ಶೆಟ್ಟಿಯವರ ಜೊತೆಗೂಡಿ 'ಪ್ರಜಾವಾಣಿ'ಯ ತಮ್ಮ ಅಂಕಣ ಬರಹದಲ್ಲಿ ಭಾಷೆ ಕುರಿತ ತಮ್ಮ ಅಸಲಿ ವಿಚಾರಗಳನ್ನು ಜ್ಞಾನದ ವಿಚಾರಕ್ಕೆ ಜೋಡಿಸಿ ಕನ್ನಡವನ್ನು ಬೆಳೆಸುವ ಸವಾಲಿನ ಬಗ್ಗೆ ಚರ್ಚೆ ಮಾಡಿದ್ದಾರೆ. ಈ ಲೇಖನದ ಬಗ್ಗೆ ನನ್ನ ಗಂಭೀರ ಭಿನ್ನಾಭಿಪ್ರಾಯಗಳಿವೆ. ಏಕೆಂದರೆ, ಜ್ಞಾನವು ಭಾಷೆಯ ಮೂಲಕ ಪ್ರವಹಿಸುವ ಪ್ರಕ್ರಿಯೆಯಲ್ಲಿ ಆ ಜ್ಞಾನವೆಂಬುದು ಯಾವ ರೂಪ ಪಡೆಯುತ್ತದೆ ಎಂಬ ಜಿಜ್ಞಾಸೆ ಇಲ್ಲಿ ಕಾಣೆಯಾಗಿದೆ. ಜೊತೆಗೆ ಪಾರಮಾರ್ಥಿಕ ಜ್ಞಾನವೆಂಬುದಕ್ಕೆ ಹೊರತಾಗಿ ಜ್ಞಾನವೆಂದು ಕರೆಯಲಾಗುವುದೆಲ್ಲವನ್ನೂ ನಾವು ಜ್ಞಾನವೆಂದು ಒಪ್ಪಿಕೊಂಡು ಚರ್ಚಿಸಬೇಕೆ ಎಂಬ ಬಹು ನಿರ್ಣಾಯಕ ಪ್ರಶ್ನೆಯ ಗೈರುಹಾಜರಿಯೂ ಇಲ್ಲಿ ಎದ್ದು ಕಾಣುತ್ತದೆ- ವಿಶೇಷವಾಗಿ ನಮ್ಮ ವಸಾಹತುಶಾಹಿ ಅನುಭವದ ಹಿನ್ನೋಟದಲ್ಲಿ. ಹಾಗಾಗಿ ನಾನು ೧೩ರಂದೇ ಒಂದು ಪ್ರತಿಕ್ರಿಯೆ ಬರೆದೆ. ಅದು ಅಪೂರ್ಣ ಎನಿಸಿದ್ದರಿಂದ,

ಅದನ್ನು ವಿಸ್ತರಿಸಿ ೧೪ರಂದು ಮತ್ತೆ ಬರೆದು ಕಳಿಸಿದೆ. ಅದು ಪ್ರಕಟವಾಗುವ ಯಾವ ಸೂಚನೆಗಳೂ ಇಂದಿನವರೆಗೆ ಕಂಡಿಲ್ಲ. ಬಹುಶಃ ತನ್ನ ಅಂಕಣಕಾರರ ವಿಚಾರಗಳನ್ನು ಯಾರೂ ಪ್ರಶ್ನಿಸುವಂತಿಲ್ಲ ಎಂಬುದು ಆ ಪತ್ರಿಕೆಯ ಧೋರಣೆಯಾಗಿರಬಹುದೆಂಬುದು, ನಾನು ಹೀಗೇ ಈ ಹಿಂದೆ ಬರೆದ ಪ್ರತಿಕ್ರಿಯೆಗಳು ಪ್ರಕಟವಾಗದ ಹಿನ್ನೆಲೆಯಲ್ಲಿನ ನನ್ನ ಅನುಭವವಾಗಿದೆ. ಹಾಗಾಗಿ ಅದನ್ನು ನನ್ನ ಫೇಸ್‌ಬುಕ್ ಗೆಳೆಯ ಗೆಳತಿಯರ ಅವಗಾಹನೆಗಾಗಿ ಇಲ್ಲಿ ಪ್ರಕಟಿಸುತ್ತಿರುವೆ.

(ಫೇಸ್‌ಬುಕ್ ಬರಹ: ೨೫.೧೧. ೨೦೧೭

'ಪ್ರಜಾವಾಣಿ' ಗೆ ಬರೆದ ಪ್ರತಿಕ್ರಿಯೆ

'ಜ್ಞಾನದ ಭಾಷೆಯಾಗಿ ಬೆಳೆಯಬೇಕಿದೆ ಕನ್ನಡ' ಎಂಬ ಶೀರ್ಷಿಕೆಯ ರಾಜಾರಾಂ ತೋಳ್ಪಾಡಿ ಮತ್ತು ನಿತ್ಯಾನಂದ ಬಿ ಶೆಟ್ಟಿಯವರ ಲೇಖನ (ಪ್ರವಾ: ೧೩, ನವೆಂಬರ್ ೨೦೧೭) ಕುತೂಹಲಕಾರಿಯಾಗಿ ಓದಿಸಿಕೊಂಡು ಹೋಗುತ್ತಾ, ಕೊನೆಗೆ ಅಪಾಯಕಾರಿ ತೀರ್ಮಾನಗಳಿಗೆ ಬರುತ್ತದೆ ಎಂದೇ ನನಗನ್ನಿಸುತ್ತಿದೆ. ಕನ್ನಡ ಜ್ಞಾನದ ಭಾಷೆಯಾಗಿ ಬೆಳೆಯಬೇಕು ಎಂಬ ಕರೆ ಕನ್ನಡಿಗರಿಗೆ ಹೊಸದೇನಲ್ಲ. ಅದು, ಕನ್ನಡ ಅನ್ನದ ಭಾಷೆಯಾಗಿ ಬೆಳೆಯಬೇಕು ಎಂಬ ಕರೆಯಷ್ಟೇ ಹಳೆಯದು. ಆದರೆ ಈ ಕರೆಗಳಲ್ಲಿರುವ ಜ್ಞಾನ ಮತ್ತು ಅನ್ನ ಎಂಬ ಶಬ್ದಗಳ ಅರ್ಥವೇನು ಎಂಬುದು ಮಾತ್ರ ಸಾಕಷ್ಟು ಚರ್ಚೆಯಾಗಿಲ್ಲ.

ಭೌತಶಾಸ್ತ್ರದ ಅಧ್ಯಾಪಕರಾಗಿದ್ದ ಬೆಳ್ಳಾವೆ ನಾರಾಯಣಪ್ಪನವರ ಪ್ರಯತ್ನದಿಂದ ಆರಂಭವಾದಂತೆ ಕಳೆದ ಅರವತ್ತು-ಎಪ್ಪತ್ತು ವರ್ಷಗಳಲ್ಲಿ ವಿಜ್ಞಾನದ ಹೊಸ ಹೊಸ ಪರಿಕಲ್ಪನೆಗಳ ಜೊತೆಗೆ ಕಲೆ, ಮಾನವಿಕ ಹಾಗೂ ವಾಣಿಜ್ಯ ಕ್ಷೇತ್ರಗಳ ಹೊಸ ಹೊಸ ಪರಿಕಲ್ಪನೆಗಳನ್ನು ಕನ್ನಡದಲ್ಲಿ ವಿವರಿಸುವ ಮತ್ತು ಚರ್ಚೆಗಳಿಗೆ ಅನುವು ಮಾಡಿಕೊಡುವ ಪ್ರಯತ್ನಗಳು ಕುವೆಂಪು ಕಾಲಕ್ಕೆ ಮೈಸೂರು ವಿಶ್ವವಿದ್ಯಾಲಯದಲ್ಲಿ ವ್ಯಾಪಕವಾಗಿ ನಡೆದವು. ಶಿವರಾಮ ಕಾರಂತರ ವಿಜ್ಞಾನ ಪ್ರಪಂಚ ಈ ದಿಕ್ಕಿನ ಪ್ರಯತ್ನಗಳ ಉತ್ತುಂಗ ಉದಾಹರಣೆ. ಆದರೆ ಕನ್ನಡದಲ್ಲಿ ಹೊಸ ಜ್ಞಾನ ಮತ್ತು ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸುವ ಪ್ರಯತ್ನಗಳು, ಮುಖ್ಯವಾಗಿ ಸರ್ಕಾರದ ದೃಢವಲ್ಲದ ಭಾಷಾ ನೀತಿಯಿಂದಾಗಿ, ನಂತರದ ದಿನಗಳಲ್ಲಿ ನಿಂತೇ ಹೋದುದರಿಂದ ಈ ಪ್ರಯತ್ನಗಳೂ ಸ್ಥಗಿತಗೊಂಡವು. ಆದುದರಿಂದ ಕನ್ನಡವನ್ನು ಜ್ಞಾನದ ಭಾಷೆಯಾಗಿ ಬೆಳೆಸಬೇಕಾಗಿದೆ ಎಂದು ಇದ್ದಕ್ಕಿದ್ದಂತೆ ಈಗ ಹೇಳುವುದರ ಉದ್ದೇಶ, ವಿಶೇಷವಾಗಿ ಅದು ಈ ಕೆಲಸವನ್ನು ಏಕೆ ಮತ್ತು ಹೇಗೆ ಮಾಡಬೇಕಿದೆ ಎಂದು ವಿವರಿಸುವ ಧಾಟಿಯಿಂದಾಗಿ ಅನುಮಾನಾಸ್ಪದವೆನಿಸುತ್ತದೆ.

ಸದರಿ ಲೇಖಕರ ಇಡೀ ಲೇಖನವನ್ನು ಓದಿದಾಗ ಅವರು ಕನ್ನಡವನ್ನು ಹೊಸದಾಗಿ ಯಾವುದಕ್ಕಾಗಿ ಸಜ್ಜುಗೊಳಿಸಬೇಕೆಂದು ಹೇಳುತ್ತಿರುವರೋ ಆ ಜ್ಞಾನದ ಪರಿಚಯ ಮತ್ತು ಅದನ್ನು ಕುರಿತ ಚರ್ಚೆಗಳು ಇವರು ಆ ಜ್ಞಾನವನ್ನು ಯಾವ ಭಾಷೆಯಲ್ಲಿ ಕಲಿತರೋ ಆ (ಪರ)ಭಾಷೆಯ ಅಭಿವ್ಯಕ್ತಿ ಕ್ರಮದಲ್ಲೇ, ಅಂದರೆ ಆ ವಾಕ್ಯ ರಚನಾ ಕ್ರಮಗಳ, ನುಡಿಗಟ್ಟುಗಳ ಅನುವಾದಿತ ರೂಪಗಳಲ್ಲೇ ಇದ್ದರೆ ಮಾತ್ರ ಜ್ಞಾನದ ನಿಜವಾದ ಸಂವಹನ ಸಾಧ್ಯವಾಗುತ್ತದೆ ಎಂದು ನಂಬಿದಂತಿದೆ. ಇದು ಪರೋಕ್ಷವಾಗಿ ಈ ಹಿಂದಿನ ಇಂತಹ ಪ್ರಯತ್ನಗಳು ವಿಫಲವಾದದ್ದರ ಬಗೆಗಿನ ಒಂದು ಟೀಕೆಯಂತೆಯೂ ಕಾಣುತ್ತದೆ. ಅಲ್ಲದೆ ಇದು ನಮ್ಮ ಭಾಷೆಯ ಹೊರಗಿಂದ ಪಡೆದ ಜ್ಞಾನವನ್ನು ನಮ್ಮ (ಭಾಷಾ) ಸಂಸ್ಕೃತಿಯ ಎರಕದ ಅಗ್ನಿದಿವ್ಯಕ್ಕೊಳಪಡಿಸದೆ ತದ್ವತ್ ಹಾಗೆ ನಮ್ಮ ಬದುಕಿನ/ಶಿಕ್ಷಣದ ಆವರಣದೊಳಕ್ಕೆ ರಫ್ತು ಮಾಡಿಕೊಳ್ಳುವ ವ್ಯಾಪಾರಾನುಸಂಧಾನದಂತೆ ನನಗೆ ಕಾಣುತ್ತದೆ.

ಇದು ಇನ್ನೊಂದು ಅರ್ಥದಲ್ಲಿ ಕಳೆದ ಕೆಲವು ಶತಮಾನಗಳಲ್ಲಿ ಅಜ್ಞಾತ ರೂಪಗಳಲ್ಲಿ ಸಂಭವಿಸಿದ ಇಂತಹ 'ಜ್ಞಾನ' ಚಾಲಿತವಾದ ವಸಾಹತೀಕರಣದ ಪ್ರಜ್ಞಾಪೂರ್ವಕ ಹೊಸ ಆವೃತ್ತಿಯಂತೆಯೂ ನನಗೆ ಕಾಣುತ್ತದೆ. ಈ ಲೇಖಕರ ಇಡೀ ಲೇಖನದಲ್ಲಿ ವಾದಿಸಿರುವ ರೀತಿ ನೋಡಿದರೆ, ಈವರೆಗೆ ಹೊಸ ಅಥವಾ ಆಧುನಿಕ ಜ್ಞಾನವಾವುದೂ ಕನ್ನಡದಲ್ಲಿ ಸಮರ್ಪಕವಾಗಿ ಘನೀಭವಿಸಿಲ್ಲವೇನೋ ಎಂಬಂತಿದೆ! ಅದಕ್ಕೆ ಕಾರಣ, ಈ ಲೇಖಕರಿಗೆ ಅವರು ಕಲಿತ ಜ್ಞಾನ ಎಂತಹ ಬೌದ್ಧಿಕ ಮಂಕು ಹಿಡಿಸಿದೆ ಎಂದರೆ, ಅವರಿಗೆ ತಾವು ಜನರ ಮಧ್ಯೆ ಕಲಿತ ಕನ್ನಡವೇ ಬಡವಾಗಿ/ಜಡವಾಗಿ ಕಾಣತೊಡಗಿದಂತಿದೆ ಮತ್ತು ಅದು ನಿಜವಾದ ಜ್ಞಾನದ ಭಾಷೆಯಾಗಲು ತಮ್ಮಿಂದ ಪುನರುಜ್ಜೀವನಗೊಳ್ಳಬೇಕಿದೆ ಎಂಬ ಒತ್ತಾಯವನ್ನು ಅವರಲ್ಲಿ ಹುಟ್ಟಿಸಿದೆ!

ಯಾವುದೇ ಜ್ಞಾನ ನಿಜವಾಗಿ ನಮಗೆ ಜ್ಞಾನವಾಗಿ ತಾಕುವುದು ಅದರ ಸಂವಹನಶೀಲತೆಯ ಮೂಲಕ. ಅದು ಸಿದ್ಧಿಸುವುದು ಇಲ್ಲಿನ ಜನರ 'ಭಾಷೆ'ಯಲ್ಲಿ ಸಂವಹನಗೊಳ್ಳಬಲ್ಲ ಅದರ ಸಾಮರ್ಥ್ಯದ ಮೂಲಕ. ಇಲ್ಲದಿದ್ದರೆ ಅದು ನಮಗೆ ಜ್ಞಾನವೇ ಅಲ್ಲ; ಅಂದರೆ ಅದು ನಮ್ಮ ಅರಿವನ್ನಾಗಲೀ, ಬದುಕನ್ನಾಗಲೀ ವಿಸ್ತರಿಸುವುದಿಲ್ಲ. ಅದನ್ನು ಬಲವಂತವಾಗಿ ಅದು ಅವತರಿಸಿದ ಭಾಷಾ ವಿನ್ಯಾಸ ಮತ್ತು ಕ್ರಮಗಳಲ್ಲೇ ಪಾರಿಭಾಷಿಕವಾಗಿ ಅನುವಾದಿಸಿಕೊಂಡು ಆಮದು ಮಾಡಿಕೊಳ್ಳುವುದು ಮನಸ್ಸಿನ ವಸಾಹತೀಕರಣದ ಪ್ರಯತ್ನ ಮಾತ್ರವೆನಿಸಿಕೊಳ್ಳುತ್ತದೆ. ನಮ್ಮ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣದ ಹೆಸರಿನಲ್ಲಿ ನಡೆಯುತ್ತಿರುವುದು ಬಹುತೇಕ ಇದೇ ದಂಧೆಯಾಗಿದೆ. ಕನ್ನಡ ಅನ್ನದ ಭಾಷೆಯಾಗಬೇಕು ಎಂಬ ಮೇಲ್ನೋಟಕ್ಕೆ ಸದುದ್ದೇಶಿತವಾಗಿ ಕಾಣುವ ಕೂಗಿನ ಹಿಂದಿನ ದುರುದ್ದೇಶದ ಮೂಲವೂ ಇಲ್ಲಿಯೇ ಇದೆ. ಇದು ನನಗೆ ತಿಳಿದ ಮಟ್ಟಿಗೆ ಅನ್ಯದೇಶ ಸಮಾಜಗಳಲ್ಲಿ ಕಾಣದ, ಜನರ ಮತ್ತು ಬುದ್ಧಿಜೀವಿ ವರ್ಗದ ನಡುವಣ ನಿರ್ಣಾಯಕ ಒಡಕಿನ ದುರ್ಲಕ್ಷಣ. ಇದು ನಮಗೆ ಗೊತ್ತಾಗದಿರುವುದಕ್ಕೆ

ಅಥವಾ ಗೊತ್ತಾದರೂ ಅದು ಸಹಜ ಎಂದು ಭಾವಿಸಿರುವುದಕ್ಕೆ ನಮ್ಮ ಮನಸ್ಸು ಜಾತಿಪದ್ಧತಿಯಿಂದ ವಸಾಹತೀಕರಣಕ್ಕೆ ಒಳಪಟ್ಟಿರುವುದೇ ಕಾರಣವಿರಬಹುದೆಂಬ ಅನುಮಾನ ನನಗಿದೆ.

ಈ ಲೇಖಕರೇ ನೀಡಿರುವ ಎರಡು ಉದಾಹರಣೆಗಳನ್ನೇ ನೋಡೋಣ. ಇವರು ಪೇಟ್ರಿಯಾಟಿಸಂಗೆ ದೇಶಭಕ್ತಿಗಿಂತ ಮಲಯಾಳಂನ ದೇಶಸ್ನೇಹ ಎಂಬ ಶಬ್ದ ಹೆಚ್ಚು ಸೂಕ್ತ ಎನ್ನುತ್ತಾರೆ. ಯಾಕೆ ಹೆಚ್ಚು ಸೂಕ್ತ? ಮೊದಲಿಗೆ ಪೇಟ್ರಿಯಾಟಿಸಂ ಎಂಬ ಪಶ್ಚಿಮದ ಶಬ್ದವನ್ನು ಇವರು ಅರ್ಥಮಾಡಿಕೊಂಡಿರುವ ಹಿನ್ನೆಲೆ/ರೀತಿ ಸರಿ ಎನ್ನಲು ಏನು ಆಧಾರ? ಜೊತೆಗೆ ಆ ಪೇಟ್ರಿಯಾಟಿಸಮ್ಮೇ ಇಲ್ಲಿನ ದೇಶಭಕ್ತಿ ಏಕಾಗಬೇಕು? ಹಾಗೇ ದೇಶಭಕ್ತಿ ಶಬ್ದ ಕುರಿತ ಇವರ ಅತೃಪ್ತಿಗೆ ಅದರಲ್ಲಿರುವ ಭಕ್ತಿ ಎಂಬ ಶಬ್ದವೇ ಕಾರಣವಾಗಿದ್ದಲ್ಲಿ, ಕನ್ನಡಿಗರು ದೇಶಭಕ್ತಿ ಎಂಬ ಶಬ್ದವನ್ನು ಬಳಸುವಾಗ ಭಕ್ತಿ ಎಂಬ ಶಬ್ದಕ್ಕೆ ಇರುವ ವಿಸ್ತಾರಮಯ ಅರ್ಥಗಳು ಅವರ ಗಮನದಲ್ಲಿರುವುದಿಲ್ಲ ಎಂದು ಹೇಗೆ ಹೇಳುವಿರಿ? ಪ್ರತಿಯೊಂದು ಶಬ್ದವೂ ಒಂದು ಭಾಷೆಯಲ್ಲಿ ಚಲಾವಣೆಗೆ ಬಂದಾಗ ಅದಕ್ಕೊಂದು ಚಾರಿತ್ರಿಕ ಸಂದರ್ಭದ ಅರ್ಥವೂ ಇರುತ್ತದೆ ಎಂಬುದೇಕೆ ಇವರ ಗಮನಕ್ಕೆ ಬರುವುದಿಲ್ಲ? ಪೇಟ್ರಿಯಾಟಿಸಂ ಕುರಿತ ಇವರ ವಿದ್ವತ್ ಚರ್ಚೆಗಳಿಗೆ ಒಂದು ಪಾರಿಭಾಷಿಕ ಶಬ್ದವಾಗಿ ಒದಗುವುದಿಲ್ಲವೆಂದು ದೇಶಭಕ್ತಿ ಎಂಬ ಈ ಶಬ್ದದ 'ಚರಿತ್ರೆ'ಯನ್ನೇ ಅನುಮಾನಾಸ್ಪದಗೊಳಿಸುವ ಪ್ರಯತ್ನವೇಕೆ? ನಮ್ಮ ಜನ ದೇಶಭಕ್ತಿಗೆ ಪರ್ಯಾಯವಾಗಿ ದೇಶಪ್ರೇಮ ಎಂಬ ಶಬ್ದವನ್ನೂ ಬಳಸುತ್ತಿದ್ದಾರೆ ಮತ್ತು ಅದನ್ನು ಅವರು ದೇಶಭಕ್ತಿ ಎಂಬ ಶಬ್ದದ ಬಗ್ಗೆ ತಕರಾರೇನನ್ನೂ ದಾಖಲಿಸಿದೆ ಬಳಸುತ್ತಿದ್ದಾರೆ ಎಂಬುದೇಕೆ ಈ ಲೇಖಕರ ಗಮನಕ್ಕೆ ಬರುವುದಿಲ್ಲ? ಇಂದು ಏನಾದರೂ ಭ್ರಷ್ಟವಾಗಿದ್ದರೆ ದೇಶಭಕ್ತಿ ಎಂಬ ಶಬ್ದವಲ್ಲ; ಅದರ ಅರ್ಥ ನಿರೂಪಣೆ ಎನ್ನಬೇಕಾಗುತ್ತದೆ. ಅದನ್ನು ಬೇಕಾದರೆ ಈ ಲೇಖಕರು ಹೇಳಲಿ. ಭಾಷೆಯ ಭವಿಷ್ಯವನ್ನು ಕಟ್ಟಬಯಸುವವರಿಗೆ ಅದರ ಚರಿತ್ರೆಯ ಬಗೆಗೂ ಗೌರವವಿದ್ದರೆ ಮಾತ್ರ ಆ ಭವಿಷ್ಯ ಭವಿಷ್ಯವಾಗುಳಿಯುತ್ತದೆ; ಇಲ್ಲದಿದ್ದರೆ ಬಹುಬೇಗ ಭೂತದ ಭಾಗವಾಗುತ್ತದೆ.

ಇನ್ನು ಸೆಕ್ಯುಲರ್‌ವಾದ ಕುರಿತ ಪರ್ಯಾಯ ಪದದ ಬಗೆಗಿನ ಈ ಲೇಖಕರ ಮಾತುಗಳನ್ನು ನೋಡೋಣ. ಕನ್ನಡದಲ್ಲಾಗಲೀ, ಇತರ ಭಾರತೀಯ ಭಾಷೆಗಳಲ್ಲಾಗಲೀ, ಇದಕ್ಕೆ ಸಮನಾರ್ಥಕ ಪದ ಇಷ್ಟು ವರ್ಷಗಳ ನಂತರವೂ ಟಂಕಿತವಾಗಿಲ್ಲ ಎಂದರೆ, ಆ ಸೆಕ್ಯುಲರ್‌ವಾದ ಎಂಬುದು ನಮ್ಮ ಬದುಕಿನಲ್ಲಿನ್ನೂ ಅದರ ಪೂರ್ಣಾರ್ಥದಲ್ಲಿ ಸ್ವೀಕೃತವಾಗಿಲ್ಲ ಎಂದೇ ಅರ್ಥವಲ್ಲವೆ? ಅದು ಏಕೆ ಸ್ವೀಕೃತವಾಗಿಲ್ಲ ಎಂಬುದನ್ನು ತಿಳಿಯಲು ಪ್ರಯತ್ನಿಸದೆ ತಾವು ಹೊರಭಾಷೆಯ ಮೂಲಕ ಕಲಿತ ಇಂತಹ ಪರಿಕಲ್ಪನೆಗಳನ್ನು ಕುರಿತ ವಿದ್ವತ್ ಚರ್ಚೆಗೆ ಅನುಕೂಲವಾಗುವಂತೆ ಜನರ ಬದುಕಿನ ಭಾಷಾ ಕ್ರಮವನ್ನೇ/ಜಾಯಮಾನವನ್ನೇ ಬದಲಾಯಿಸಬೇಕಾಗಿದೆ ಎಂದು ಕರೆ ಕೊಡುವುದು ನಮ್ಮ ಬುದ್ಧಿಜೀವಿ ವರ್ಗದ ಲಾಗಾಯ್ತಿನ ಲಕ್ಷಣವೇ ಆಗಿದೆ.

ನಮಗೆ ಹೊಸ ಜ್ಞಾನ ಬೇಕು. ಆದರೆ ಅದು ಅಸಹಜ ಕಸರತ್ತುಗಳ ಮೂಲಕ ಕನ್ನಡದ ಕನ್ನಡಿಯಲ್ಲಿ ಮೂಡಬಲ್ಲ ಪ್ರತಿಬಿಂಬವಾಗಿ ಅಲ್ಲ. ನಿಜವಾದ ಕನ್ನಡದಲ್ಲೇ; ಅದರ ಉಸಿರಾಟದ ಲಯದಲ್ಲೇ; ಅದು ಹೀರಿಕೊಂಡಷ್ಟೇ. ಇಲ್ಲಿ ಲೇಖಕರು ಲೋಹಿಯಾ ಅವರ 'ಭಾಷೆಗಳ ಪ್ರಜಾತಾಂತ್ರಿಕ ಪುನರುಜ್ಜೀವನ'ದ ಮಾತನ್ನು ಪ್ರಸ್ತಾಪಿಸಿದಾಗ ಅವರು 'ಪ್ರಜಾತಾಂತ್ರಿಕ' ಎಂಬ ಶಬ್ದದಲ್ಲಿನ 'ಪ್ರಜಾ' ಎನ್ನುವುದನ್ನೇ ಮರೆತಂತಿದೆ.

ರಾಜಾರಾಂ ತೋಳ್ಪಾಡಿ ಮತ್ತು ನಿತ್ಯಾನಂದ ಶೆಟ್ಟಿಯವರು ಕನ್ನಡವನ್ನು ವಿಶ್ವಭಾಷೆಯಾಗಿ ಮಾಡುವ ಮಾತಾಡಿದ್ದಾರೆ. ದೊಡ್ಡ ಮಾತದು. 'ಕವಿರಾಜ ಮಾರ್ಗ'ದ ಈ ಒಂದು ಮಾತನ್ನು ಅವರಿಗೆ ನೆನಪಿಸುವ ಅಗತ್ಯವಿಲ್ಲವೆಂದು ಭಾವಿಸುವೆ– 'ಕನ್ನಡವು ವಿಶ್ವದಲ್ಲಿರುವಂತೆ, ಕನ್ನಡದಲ್ಲಿ ವಿಶ್ವವಿದೆ'. ವಿಶ್ವ ಎಂದರೆ ನಿಜವಾಗಿ ಏನೆಂದು ಈ ಲೇಖಕರು ಅರ್ಥ ಮಾಡಿಕೊಳ್ಳಲು ಈ ಮಾತು ಸಾಕಾದೀತು ಎಂದು ಭಾವಿಸುವೆ.

(**ಟಿಪ್ಪಣಿ:** ಕೊನೆಗೂ 'ಪ್ರಜಾವಾಣಿ' ಈ ಪತ್ರಿಕೆಯನ್ನು ಡಿಸೆಂಬರ್ ಮೊದಲ ವಾರದಲ್ಲಿ– ವಿಷಯ ಯಾರಿಗೂ ನೆನಪಾಗದಷ್ಟು ದಿನಗಳ ನಂತರ– ತನ್ನ 'ಸಂಗತ' ಅಂಕಣದಲ್ಲಿ ಪ್ರಕಟಿಸಿತು.)

ಮಾರ್ಕ್ಸ್‌ವಾದ : ಹೊಗಲಾರದ ಬೌದ್ಧಿಕ ಅರಣ್ಯ!

(ಕಾರ್ಲ್ ಮಾರ್ಕ್ಸ್‌ನ ದ್ವಿಶತಮಾನೋತ್ಸವ ಸಂದರ್ಭದಲ್ಲಿ 'ಸಂವಾದ' ಮಾಸಿಕ ಕೇಳಿದ್ದ ಪ್ರಶ್ನೆಗಳಿಗೆ ಒಟ್ಟಾಗಿ ನೀಡಿದ ಉತ್ತರ)

ಮಾರ್ಕ್ಸ್‌ವಾದವನ್ನು ನಾನು ಸಂಪೂರ್ಣ ಅರಿತಿದ್ದೇನೆ ಎಂದು ಹೇಳಲಾರೆ. ಅದಕ್ಕೆ ಮುಖ್ಯವಾಗಿ ಎರಡು ಕಾರಣಗಳು. ಒಂದು : ಅದರ ಎರಡು ಮೂಲ ಮುಖ್ಯ ಕೃತಿಗಳೆಂದು ಹೇಳಲಾಗುವ 'ದಾಸ್ ಕ್ಯಾಪಿಟಲ್' ಮತ್ತು 'ಕಮ್ಯೂನಿಸ್ಟ್ ಮ್ಯಾನಿಫೆಸ್ಟೋ'ಗಳಲ್ಲಿ ಮೊದಲನೆಯದನ್ನು ಬಹು ಹಿಂದೆಯೇ ಎರಡು ಮೂರು ಬಾರಿ ಓದಲು ಪ್ರಯತ್ನಿಸಿ ಬಹು ದೂರ ಸಾಗಲಾರದೆ, ಅದು ನನ್ನ ಅಳವಿಗೆ ಮೀರಿದ್ದೆಂದು ಕೈಬಿಟ್ಟೆ. (ಇದರ ಓದನ್ನು ಪೂರ್ತಿ ಮಾಡಿದವರ ಸಂಖ್ಯೆ ಇಡೀ ಇಂಡಿಯಾದಲ್ಲಿ ಬೆರಳೆಣಿಕೆಯನ್ನು ಮೀರಿರಲಾರದೆಂದು ನನ್ನ ಅನುಮಾನ!) ಎರಡನೆಯದನ್ನು ಪೂರ್ತಿ ಓದಿದ್ದೇನಾದರೂ, ಅದೊಂದು ಕಾಲ್ಪನಿಕ ಕೃತಿಯೆಂದೇ ನನಗೆ ಭಾಸವಾಯಿತು. ಇನ್ನು ಎರಡನೆಯ ಕಾರಣವೆಂದರೆ, ಈ ಎರಡು ಕೃತಿಗಳ ಹೊರತಾಗಿ ಇತರ ಮೂಲಗಳಿಂದ ಈ ಸಿದ್ಧಾಂತ ಮತ್ತು ರಾಜಕೀಯ ಕಾರ್ಯಾಚರಣೆಗಳ ಬಗ್ಗೆ ಪಡೆದ ಮಾಹಿತಿಯ ಬಗ್ಗೆ ನಾನು ನನ್ನ ಅಭಿಪ್ರಾಯಗಳನ್ನು ಮಾತಿನಲ್ಲೋ, ಬರವಣಿಗೆಯಲ್ಲೋ ವ್ಯಕ್ತಪಡಿಸಿದಾಗಲೆಲ್ಲ ನನ್ನ ಮಾರ್ಕ್ಸ್‌ವಾದಿ ಸ್ನೇಹಿತರು ನಿಮ್ಮ ಓದು ಅಥವಾ ಮಾಹಿತಿ ಅಪೂರ್ಣ, ಇತ್ತೀಚಿನ ಹೊಸ ಅಧ್ಯಯನಗಳನ್ನು, ವ್ಯಾಖ್ಯಾನಗಳನ್ನು ನೀವು ಗಮನಿಸಿಲ್ಲ

ಎಂದು ಸದಾ ಹೇಳುತ್ತಲೇ ಬಂದು, ಯಾವುದು ಅಥೆಂಟಿಕ್ ಮಾರ್ಕ್ಸ್‌ವಾದ ಎಂಬುದು ನನಗೆ ತಿಳಿಯದೇ ಹೋಗಿದೆ! ಒಟ್ಟಿನಲ್ಲಿ ಮಾರ್ಕ್ಸ್‌ವಾದ ನಾನು ಸುಲಭವಾಗಿ ಹೊಗಲಾರದ ದಟ್ಟ ಬೌದ್ಧಿಕ ಅರಣ್ಯದಂತೆ ನನಗೆ ಕಂಡಿದೆ.

ಆದರೆ ನನ್ನ ಮಾರ್ಕ್ಸ್‌ವಾದಿ ಸ್ನೇಹಿತರ ಮಾತುಗಳೆಲ್ಲ ತಾವು ತಮ್ಮದೇ ಕಾರಣಗಳಿಗಾಗಿ (ಅವು ಹಲವಿವೆ) ನಂಬಿಬಿಟ್ಟಿರುವ ಸಿದ್ಧಾಂತ ಮತ್ತು ರಾಜಕಾರಣವನ್ನು ಸಮರ್ಥಿಸಿಕೊಳ್ಳಲು ಕಂಡುಕೊಂಡ ದಾರಿಗಳೆಂದು ನನಗೆ ಅನ್ನಿಸಿದೆ. ಏಕೆಂದರೆ ಇವರು ಹೇಳುವ ಹೊಸ ಅಧ್ಯಯನಗಳು ಮಾರ್ಕ್ಸ್‌ವಾದದ ಮೂಲತತ್ವಗಳ ವಿರುದ್ಧವೇನಿರುವುದಿಲ್ಲ. ಹಾಗೇನಾದರೂ ಇದ್ದರೆ ಅವು ಅದರ ಅಧ್ಯಯನಗಳು ಎನಿಸಿಕೊಳ್ಳುವುದಿಲ್ಲ. ಇನ್ನೂ ಮುಖ್ಯವಾಗಿ, ಅವು ಮಾರ್ಕ್ಸ್‌ವಾದದ ಆಧಾರದ ಮೇಲೆ ಸ್ಥಾಪಿತವಾಗಿದ್ದವೆಂದು ಹೇಳಲಾಗುವ ಕಮ್ಯೂನಿಸ್ಟ್ ಪ್ರಭುತ್ವಗಳ ಆಡಳಿತ ವೈಖರಿ ಮತ್ತು ಪತನಗಳ ಚಾರಿತ್ರಿಕ ವಾಸ್ತವಗಳನ್ನೇನೂ ಸುಳ್ಳು ಮಾಡುವುದಿಲ್ಲ. ಹಾಗಾಗಿ ಮಾರ್ಕ್ಸ್‌ವಾದ ಕುರಿತು ನನ್ನದೇ ಮಿತಿಗಳಲ್ಲಿ ನಾನು ಮಾಡಿದ ಅಧ್ಯಯನಗಳ ಆಧಾರದ ಮೇಲೆ ಅದರ ಕುರಿತು ಈ ಕೆಳಗಿನ ಮಾತುಗಳನ್ನು ಹೇಳಬಹುದು :

೧. ಭೌತ-ಅಭೌತಗಳು ದೃಷ್ಟಿಕೋನಗಳೇ ಹೊರತು ಅವು ಪ್ರತ್ಯೇಕ ವಿದ್ಯಮಾನಗಳಲ್ಲ ಎಂಬ ಅದ್ವಯ ಅರಿವಿನ ಕೊರತೆಯಿಂದಾಗಿ ಅದು ಲೋಕವನ್ನು ತನ್ನ ದ್ವಂದ್ವಾತ್ಮಕ ದೃಷ್ಟಿಯಲ್ಲಿ, ಮೂಲತಃ ಭೌತವಾದಿಯಾಗಿ ನೋಡಿದೆ. ಇದರ ಪರಿಣಾಮವಾಗಿ ಅದಕ್ಕೆ ಮಾನವ ಚರಿತ್ರೆ ಎಂದರೆ ವರ್ಗ ಸಂಘರ್ಷಗಳ ಚರಿತ್ರೆಯಾಗಿ ಮಾತ್ರ ಕಂಡಿದೆ.

೨. ಯಾವುದೇ ಕಾಲ ಮತ್ತು ಸ್ಥಳ ನಿರ್ದಿಷ್ಟತೆ ಇಲ್ಲದೆ ಇಡೀ ಮಾನವ ಕುಲದ ಚರಿತ್ರೆಯನ್ನು ಸಾರಾ ಸಗಟಾಗಿ ಸಾಮಾನ್ಯ ನಿಯಮಗಳ ಒರೆಯಲ್ಲಿ ಪರೀಕ್ಷಿಸಿ ವ್ಯಾಖ್ಯಾನಿಸುವ ಅದರ ಮಹತ್ವಾಕಾಂಕ್ಷೆಯಿಂದಾಗಿ ಸ್ಥಳ ಮತ್ತು ಕಾಲಜನ್ಯವಾದ ಅನೇಕ ಆಯಾಮಗಳು ಅದರ ಅಧ್ಯಯನವನ್ನು ನಿರ್ಣಾಯಕವಾಗಿ ಊನಗೊಳಿಸಿವೆ.

೩. ಅದರ ಮೂಲತಃ ಭೌತವಾದಿ ದೃಷ್ಟಿಕೋನದಿಂದಾಗಿ ಮಾನವನ ಪ್ರಜ್ಞೆಯ ಸ್ವಾಯತ್ತ ಗುಣವನ್ನು ಅದು ಮಾನ್ಯ ಮಾಡದೇ ಹೋಗಿದೆ. ಇದರಿಂದಾಗಿ ಅದರ ತರ್ಕ ಹಾಗೂ ಮುನ್ನೋಟ ಪಂಡಿತಮಯವಾಗಿದೆಯೇ ಹೊರತು ದಾರ್ಶನಿಕವಾಗಿಲ್ಲ.

೪. ಈ ಎಲ್ಲದರ ಪರಿಣಾಮವಾಗಿ ಅದು ಯಾವುದೇ 'ಮೌಲ್ಯ'ವನ್ನು ನಿರಪೇಕ್ಷ ಎಂದು ಮಾನ್ಯ ಮಾಡದೆ ಎಲ್ಲವೂ ವರ್ಗ ಸಮಾಜದ ಉತ್ಪನ್ನಗಳು ಎಂದು ವಾದಿಸುವುದರಿಂದ ಮನುಷ್ಯನ ಬದುಕನ್ನು ಗುರಿ ರಹಿತವಾಗಿ ಮಾಡಿ ಅವನನ್ನು ತನ್ನ ಸಿದ್ಧಾಂತ ಶರತ್ವ ಅಥವಾ ಕಮ್ಯೂನಿಸ್ಟ್ ಪಕ್ಷದ/ಗಳ ಅಡಿಯಾಳನ್ನಾಗಿ ಮಾಡಿಕೊಳ್ಳುವ ಗುಣ ಅದರಲ್ಲಿ ಸಹಜವಾಗಿ ಸೇರಿಕೊಂಡಿದೆ.

೫. ನನ್ನ ಪ್ರಕಾರ ಜಗತ್ತಿನಲ್ಲಿ ಈ ಮಾರ್ಕ್ಸ್‌ವಾದದ ಅನ್ವಯವಾಗಿ ಯಾವುದೇ ಸರ್ಕಾರ ರಚಿತವಾಗಿಲ್ಲ. ಆ ಹೆಸರಿನಲ್ಲಿ ಆದವುಗಳೆಲ್ಲ ಅದರ ಹೆಸರಿನಲ್ಲಿ ಆದವುಗಳು ಅಷ್ಟೆ. ಹಾಗಾಗಿಯೇ ಅವು, ತಾವು ಅಧಿಕಾರಕ್ಕೆ ಬಂದ ನಂತರ ತಮ್ಮದೇ ಮೂಗಿನ ನೇರಕ್ಕೆ ಸಿದ್ಧಾಂತದ ತಿದ್ದುಪಡಿ ಮಾಡಿದವು ಮತ್ತು ಜಗತ್ತಿನ ಇತರೆಲ್ಲ ಚಕ್ರಾಧಿಪತ್ಯಗಳಂತೆಯೇ(ನಮ್ಮ ಪ. ಬಂಗಾಲದ ಕಮ್ಯೂನಿಸ್ಟ್ ಸರ್ಕಾರದಂತೆ) ಕಾಲಕ್ರಮೇಣ ಪತನವೂ ಆದವು. ಉಳಿದಿರುವವುಗಳಲ್ಲಿ ಚೀನಾವನ್ನು ಕಮ್ಯೂನಿಸ್ಟ್ ದೇಶವೆಂದು ಕರೆದರೆ ನಮ್ಮ ಮಾರ್ಕ್ಸ್‌ವಾದಿಗಳು ಅದನ್ನು ಹೇಗೆ ಸಮರ್ಥಿಸಿಕೊಂಡಾರೆಂಬ ಕುತೂಹಲ ನನಗಿದೆ. ಇನ್ನು ಕ್ಯೂಬಾ ತನ್ನ ಪ್ರಭುತ್ವದ ಕಮ್ಯೂನಿಸ್ಟ್ ಸ್ವರೂಪವನ್ನು ಉಳಿಸಿಕೊಳ್ಳಲು ವಂಶಪಾರಂಪರಿಕ ಆಡಳಿತದ ಮೊರೆ ಹೋಗಬೇಕಾಗಿದೆ ಎಂಬುದು ಅದರ ನಿಜ ಸ್ವರೂಪದ ಬಗ್ಗೆ ಎಲ್ಲವನ್ನೂ ಹೇಳುವಂತಿದೆ.

೬. ಮಾರ್ಕ್ಸ್‌ವಾದ ಜಗತ್ತಿನ ವೈಚಾರಿಕ/ವೈಜ್ಞಾನಿಕ ಯುಗದ (ಎಲ್ಲ ಉತ್ಪನ್ನಗಳಂತೆ ಒಂದು ಐರೋಪ್ಯ) ಉತ್ಪನ್ನ. ಆ ಯುಗದ ಮತ್ತು ಆ ಲೋಕದೃಷ್ಟಿಗಳ ಎಲ್ಲ ಅಪೂರ್ಣತೆ/ದೋಷಗಳು ಅದರಲ್ಲಿ ಅಂತರ್ಗತವಾಗಿವೆ. ಆ ಯುಗದ ಆರಂಭದ ಹುರುಪಿನಲ್ಲಿ ಅದೂ ಆ ಯುಗದ ಇತರ ಉತ್ಪನ್ನಗಳಂತೆ ಬಳಕೆಯಾಗಿ (ರಾಜಕೀಯ ಮಾರುಕಟ್ಟೆಯಲ್ಲಿ) ಮೆರೆಯಿತು. ಆ ಯುಗದ/ಆ ಲೋಕ ದೃಷ್ಟಿಗಳ ಅಪೂರ್ಣತೆ ಮತ್ತು ದೋಷಗಳು ಗೊತ್ತಾಗುತ್ತಾ, ಆ ಯುಗ ತನ್ನ ಹಲವು ಅನುಮಾನಾಸ್ಪದತೆಗಳಿಂದಾಗಿ ಹಿನ್ನೆಲೆಗೆ ಸರಿಯುತ್ತಿದ್ದಂತೆ ಇದೂ ಮಸುಕಾಗಿ ಹಿನ್ನೆಲೆಗೆ ಸರಿಯುತ್ತಿದೆ. ಜಗತ್ತಿನ ಎಲ್ಲ ಪಂಥೀಯರಂತೆಯೇ ಇದರ ಪಂಥೀಯರೂ ಇದನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಾ ಅದನ್ನು ತಡೆಯಲು ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಅದು ಸಹಜ ಕೂಡ.

೭. ಕೈಗಾರಿಕಾ ಕ್ರಾಂತಿಯ ಸಂದರ್ಭದಲ್ಲಿ ಹುಟ್ಟಿಕೊಂಡ 'ದುಡಿಯುವ ವರ್ಗ'ದ ಕಲ್ಪನೆಗೇ ಜೋತು ಬಿದ್ದು ಅದರ ಚಲನಶೀಲತೆಯ ಸೂಕ್ಷ್ಮಗಳನ್ನು ಗಂಭೀರ ಪರಿಗಣನೆಗೆ ತೆಗೆದುಕೊಳ್ಳದಿರುವ ಸಿದ್ಧಾಂತವಾದಿಗಳು ಮಾತ್ರ ಈ ಸಿದ್ಧಾಂತದಿಂದ ಈಗಲೂ ಸ್ಫೂರ್ತಿ ಪಡೆದು ರಾಜಕಾರಣ ಮಾಡಬಹುದೆಂದು ನಂಬಿದ್ದಾರೆ. ಅವರಿಗೆ ಶುಭವಾಗಲಿ!

('ಸಂವಾದ' : ಜುಲೈ, ೨೦೧೮)

ಅನುಬಂಧ – ೧

ಜಾತಿ ಗಣತಿ ಮತ್ತು ಅಂತರ್ಜಾತಿ ವಿವಾಹ : ಒಂದು ಪತ್ರ

ಪ್ರಿಯ ಶ್ರೀ-------------ಅವರೇ,

ನಿಮ್ಮ ಮೇಲ್-ಪತ್ರವನ್ನು ಓದಿದೆ. ದೀರ್ಘ ದೋಷಾರೋಪ ಪಟ್ಟಿಯನ್ನೇ ಸಲ್ಲಿಸಿದ್ದೀರಿ. ಇದು ನಿರೀಕ್ಷಿತವಾದದ್ದೇ. ಏಕೆಂದರೆ ನಿಮ್ಮ ಸಮಾಜವಾದದಲ್ಲಿ ಜಾತಿ ಅಂಶವೇ ಪ್ರಮುಖವಾಗಿದ್ದುದನ್ನು ಗಮನಿಸಿದ್ದ ನಾನು ಇದನ್ನು ಸಾಕಷ್ಟು ಹಿಂದೆಯೇ ನಿರೀಕ್ಷಿಸಿದ್ದೆ. ಅದು ಈಗ 'ಹೊಸ ಮನುಷ್ಯ' ಪತ್ರಿಕೆಯಲ್ಲಿನ ಜಾತಿ ಪ್ರಶ್ನೆ ಕುರಿತ ಚರ್ಚೆಯ ಸಂದರ್ಭದಲ್ಲಿ ಪ್ರತ್ಯಕ್ಷವಾಗಿದೆ. ನಾನು ಇಲ್ಲಿ ದೋಷಾರೋಪ ಪಟ್ಟಿಗೆ ಅಂಶವಾರೇನೂ ಉತ್ತರಿಸುವುದಿಲ್ಲ. ಅದು ನನ್ನ ಪ್ರಕಾರ ಅಗತ್ಯವೂ ಇಲ್ಲ. ಏಕೆಂದರೆ ಹಲವು ವಿಷಯಗಳ ಬಗ್ಗೆ ಈಗಾಗಲೇ ನೀವು ಒಂದು ಅಂತಿಮ ನಿರ್ಧಾರಕ್ಕೆ ಬಂದಂತಿದೆ. ಅದನ್ನು ಯಾರೂ ಹೊರಗಿನಿಂದ ಬದಲಿಸಲಾರರೆಂದೇ ನನ್ನ ಅಭಿಪ್ರಾಯ. ನಿಮಗೆ ಒಳ್ಳೆಯದಾಗಲಿ.

ಇನ್ನು ನಿಮ್ಮ ಮುಖ್ಯ ಆರೋಪಗಳ ಬಗ್ಗೆ ಮಾತಾಡುವುದಾದರೆ, ನೀವು ಜಾತಿ ಕುರಿತ ಚರ್ಚೆಯಿಂದ ಎಷ್ಟು ವಿಚಲಿತರಾಗಿದ್ದೀರಿ ಎಂದರೆ, ನೀವು ಇತರರು ಬರೆದುದನ್ನು ಸ್ಫುಟವಾಗಿ ಓದುವ ಸೈರಣೆಯನ್ನೇ ಕಳೆದುಕೊಂಡಿದ್ದೀರಿ. ಇನ್ನೊಬ್ಬರು ಬರೆದುದನ್ನು ಮೊದಲೇ ಊಹಿಸಿಕೊಂಡು ಓದಿಕೊಳ್ಳುವ ಧಾವಂತವೇ ನಿಮ್ಮ ಮನಃಸ್ಥಿತಿಯನ್ನು ಸೂಚಿಸುತ್ತದೆ. ನಿಮ್ಮ ಸದರಿ ಪತ್ರದ ತುಂಬ ಹರಿದಾಡಿರುವ ಸಿಟ್ಟಿನ ಹಿಂದೆ, ನಾನು ನಿಮ್ಮ ಮಾತುಗಳ ಬಗ್ಗೆ ಬರೆಯುತ್ತಾ 'ಆಲೋಚನೆ ಹಠವಾದಾಗ' ಎಂಬುದನ್ನು ನೀವು 'ಆಲೋಚನೆ ಹತವಾದಾಗ' ಎಂದು ಓದಿಕೊಂಡು ಮಾಡಿರುವ ತಪ್ಪಿದೆ ಎಂಬುದನ್ನು ನಿಮ್ಮ ಗಮನಕ್ಕೆ ತರಬಯಸುವೆ. ನಿಮಗೆ ರೂಢಿಯಾಗಿರುವ ಭಾಷೆಯನ್ನು ನನ್ನಿಂದ ಊಹಿಸಿಕೊಂಡು ನೀವು ಪಟ್ಟಿರುವ ಪಾಡಿಗೆ ನೀವೇ ಹೊಣೆ.

ನಿಮ್ಮ ಅಭಿಪ್ರಾಯಕ್ಕೆ ವಿರುದ್ಧವಾಗಿರುವವರನ್ನು ಮೃಗಗಳಿಗೆ ಹೋಲಿಸುವ ನಿಮ್ಮ ಮಾತಿಗೆ ನೀವು ನೀಡಿರುವ ಅರ್ಥ ನಿಮ್ಮ ಮಾತುಗಳನ್ನು ಓದಿದ ನನ್ನನ್ನೂ ಸೇರಿದಂತೆ ಇನ್ನಾರಿಗೂ ಹೊಳೆಯದಿರುವುದು ಆಶ್ಚರ್ಯ! ಏಕೆಂದು ಯೋಚಿಸಿ. ನಿಮ್ಮ ಮೃಗದ ಮಾತುಗಳು ನೀವು ಯಾವ ಮನಃಸ್ಥಿತಿಯಲ್ಲಿ ಪ್ರತಿಕ್ರಿಯೆ ಬರೆದಿದ್ದೀರಿ ಎಂಬುದನ್ನು ಸೂಚಿಸುತ್ತವೆ ಎಂದಷ್ಟೆ ನಾನು ಹೇಳಬಯಸುವೆ. ನಿಮ್ಮ ಅರ್ಥ ಅಷ್ಟು ಅಮಾಯಕವಾಗಿದ್ದರೆ ನಿಮ್ಮ ಮೃಗಗಳ ಪಟ್ಟಿಯಲ್ಲಿ ನರಿ ನಾಯಿಗಳು ಸೇರಿರುತ್ತಿರಲಿಲ್ಲ.

ಇನ್ನು ಪತ್ರಿಕೆಯಲ್ಲಿ ಜಾತಿ ಕುರಿತ ಸಂವಾದವನ್ನು ನಾನು ನಿರ್ವಹಿಸಿದ ರೀತಿ ಕುರಿತ ನಿಮ್ಮ ಆರೋಪ. ನಾನು ಯಾವ ಚರ್ಚೆಯನ್ನೂ ಆರಂಭಿಸಿಲ್ಲ ಮತ್ತು ಯಾವ ಚರ್ಚೆಯನ್ನೂ ನಿರ್ವಹಿಸಿಲ್ಲ ಎಂದು ಇಲ್ಲಿ ತಿಳಿಸಬಯಸುತ್ತೇನೆ. ಜೂನ್ ಸಂಚಿಕೆವರೆಗೆ ಬಂದ ಎಲ್ಲ ಪತ್ರಗಳನ್ನು ಅವುಗಳ ಸತ್ವ ಮತ್ತು ಪತ್ರಿಕೆಯ ಸ್ಥಳಾವಕಾಶಕ್ಕೆ ತಕ್ಕಂತೆ ಪ್ರಕಟಿಸಿದ್ದೇನೆ. ಮತ್ತು ಈ ಸಂವಾದ ಮಂಜುನಾಥ್–ಸ್ನೇಹಾ ಓಂಕಾರ್‌ರ ಪತ್ರಗಳ ಮುಖೇನ ರಾಜೇಶ್ ಬರಹದ ಮೂಲಕ ಎತ್ತಲ್ಪಟ್ಟಿದ್ದ ಎಲ್ಲ ಅಂಶಗಳ ಬಗ್ಗೆ ಎರಡೂ ಕಡೆಗಳಿಂದ ಸಾಕಷ್ಟು ಬೆಳಕು ಚೆಲ್ಲಿದೆ ಎಂಬ ಮತ್ತು ಇದನ್ನು ಇಲ್ಲಿಗೇ ಮುಗಿಸದಿದ್ದರೆ ಯಾವುದೇ ಹಂತದಲ್ಲಿ ನಿಲ್ಲಿಸುವುದು ಕಷ್ಟ ಎಂಬ ಅರಿವಿನೊಂದಿಗೆ ನನ್ನ ಮಾತುಗಳೊಂದಿಗೆ ಮುಕ್ತಾಯ ಹಾಡಿರುವೆ. ಮಂಜುನಾಥ್ ಪತ್ರ ಪ್ರಕಟಿಸುವುದು ನನಗೆ ಇಷ್ಟವಿರಲಿಲ್ಲ ಎಂದು ನೀವು ಆಡಿರುವ ಮಾತಿಗೆ ಏನು ಆಧಾರ? ಇದು ಮತ್ತೆ ನಿಮ್ಮ ಅಭದ್ರ ಮನಃಸ್ಥಿತಿಯನ್ನು ಸೂಚಿಸುತ್ತದೆ. ಸಂಚಿಕೆಯ ತಯಾರಿ ಮುಗಿದಿದ್ದಾಗ ಮತ್ತು ನಾನು ಪರಸ್ಥಳದಲ್ಲಿದ್ದಾಗ ಅವರು ಲೇಖನ ಕಳಿಸಿ ಪ್ರಕಟಿಸಲು ಹೇಳಿದರು. ಆಗ ಅವರ ಪತ್ರವನ್ನು ಪ್ರಕಟಿಸವುದು ಕಷ್ಟ ಎಂದು ಹೇಳಿದೆ, ನಿಜ. ಆದರೆ ಊರಿಗೆ ಬಂದು ಅದರ ಹೂರಣ ನೋಡಿ ಪತ್ರಿಕೆಗೆ ಆ ವೇಳೆಗಾಗಲೇ ಅಳವಡಿಸಲಾಗಿದ್ದ ಲೇಖನವೊಂದನ್ನು ತೆಗೆದು ಅದನ್ನು ಅಳವಡಿಸಿದೆ. ಬಹುಶಃ ನೀವು ಕೆಲವರು ಒಂದು ಗುಂಪಾಗಿ ಆಲೋಚಿಸುತ್ತಿರುವುದರಿಂದ ನಿಮಗೆ ಎಲ್ಲವೂ ಪಿತೂರಿಯಾಗಿ ಕಾಣತೊಡಗಿದೆ. ಅದಕ್ಕೆ ನಾನೇನೂ ಮಾಡಲಾರೆ. ಅದು ನಿಮ್ಮ ಪಾಡು. ಸಮಾಜವಾದಿಗಳಿಗೆ ಜಾತಿ ಪ್ರಶ್ನೆ ಬಿಟ್ಟು ಬೇರೆ ಚರ್ಚೆಯ ಸಂಗತಿಗಳೇ ಇಲ್ಲ ಎಂಬ ವ್ಯಾಪಕ ಆರೋಪಕ್ಕೂ ಮತ್ತೆ ಎಡೆಕೊಡಲೂ ನನಗೆ ಇಷ್ಟವಿರಲಿಲ್ಲ ಎಂದೂ ಇಲ್ಲಿ ತಿಳಿಸಬಯಸುವೆ. ಆರ್ಥಿಕ ನೀತಿಯ ಬಗ್ಗೆ, ಧರ್ಮನಿರಪೇಕ್ಷತೆಯ ಬಗ್ಗೆ, ಅಭಿವೃದ್ಧಿ ಮಾದರಿ ಬಗ್ಗೆ, ಪರಿಸರ ನಾಶದ ಬಗ್ಗೆ ಪತ್ರಿಕೆಯಲ್ಲಿ ಎಷ್ಟೊಂದು ಬರಹಗಳು ಬಂದಿವೆ! ಆದರೆ ಯಾವೊಬ್ಬ ವೀರ ಸಮಾಜವಾದಿಯೂ ಈ ಯಾವೊಂದು ವಿಷಯದ ಬಗ್ಗೆಯೂ ಒಂದಕ್ಷರ ಬರೆದಿಲ್ಲ ಏಕೆ? ಜಾತಿ ಹಿಡಿದುಕೊಂಡ ಸಮಾಜವಾದಿಗಳಲ್ಲದೆ, ನಮ್ಮ ಪತ್ರಿಕೆಯಿಂದಾಗಿ ಸಮಾಜವಾದದ ಬಗ್ಗೆ ಹೊಸ ಕುತೂಹಲ ತಾಳಿರುವ ನೂರಾರು ಓದುಗರನ್ನೂ ಸಂಪಾದಕನಾಗಿ ಗಮನದಲ್ಲಿಟ್ಟುಕೊಳ್ಳುವ ಜವಾಬ್ದಾರಿ ನನಗಿದೆ ಎಂಬುದೂ ನಿಮಗೆ ತಿಳಿದಿರಲಿ.

ಜೊತೆಗೆ ಇನ್ನೊಂದು ಮಾತು. ಸಮಾಜವಾದಕ್ಕೆ ಸಂಬಂಧಪಟ್ಟಂತೆ ಪತ್ರಿಕೆಯಲ್ಲಿ ಚರ್ಚಾಕೂಟ ಏರ್ಪಡಿಸಿ ಅಂಪೈರಿಂಗ್ ಮಾಡಲು ನಾನು ಪತ್ರಿಕೆಯನ್ನು ನಡೆಸುತ್ತಿಲ್ಲ. ಸಮಾಜವಾದ ಏಕೆ ಸಾರ್ವಜನಿಕವಾಗಿ ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಂಡಿದೆ ಎಂದು ಸಾಕಷ್ಟು ಯೋಚನೆ ಮಾಡಿ, ನಮ್ಮ ಗೆಳೆಯರ ಆಟಪಾಠಗಳನ್ನು ಗಮನಿಸಿ ನಾನು ಕೆಲ ನಿರ್ಧಾರಗಳಿಗೆ ಬಂದಿದ್ದೇನೆ. ಆ ನಿರ್ಧಾರಗಳನ್ನು ಬದಲಿಸಬಲ್ಲ ಮಾತುಗಳು ನನಗೆ ಮುಟ್ಟುವವರೆಗೂ ನನ್ನ ನಿರ್ಧಾರಗಳನ್ನು ಪತ್ರಿಕೆಯ ಮೂಲಕ ಹೇಳುವ ಹಕ್ಕನ್ನು ಸಂಪಾದಕನಾಗಿ ನಾನು ಪಡೆದಿದ್ದೇನೆ. ಒಪ್ಪುವುದು ಬಿಡುವುದು ನಿಮಗೆ ಬಿಟ್ಟದ್ದು.

ಕೇಜ್ರಿವಾಲ್‌ರನ್ನು ನಮಗಾಗದವರು ಬೆಂಬಲಿಸುತ್ತಿದ್ದಾರೆಂದು, ನನಗೆ ಸರಿ ಕಂಡರೂ ಬೆಂಬಲಿಸದಿರುವ ಮೂರ್ಖತನವನ್ನು ನಾನು ತೋರಲಾರೆ. ಇತ್ತೀಚಿನವರೆಗೆ ಕೇಜ್ರಿವಾಲ್, ಕೇಜ್ರಿವಾಲ್ ಮಾತ್ರ ಆಗಿರಲಿಲ್ಲ. ಅದೊಂದು ತತ್ವ ಪ್ರಣಾಳಿಕೆಯಾಗಿತ್ತು ಎಂದು ನಾನೇನು, ದೇಶವೇ ಭಾವಿಸಿತ್ತು. (ನೀವು ಹಾಗೆ ಭಾವಿಸಿರದಿದ್ದರೆ ಅದು ನಮ್ಮಂತವರಿಗೆ ಇಲ್ಲದ ನಿಮ್ಮ 'ಪ್ರತಿಭೆ'.) ಆದರೆ ಆ ಕನಸು ಕುಸಿಯಿತು, ಅದು ಬೇರೆ ವಿಷಯ. ಆ ಬಗ್ಗೆಯೂ ಬರೆದಿರುವೆ. ೨೦೧೪ರ ಮೇ ಸಂಚಿಕೆಯಲ್ಲಿ ನಾನು ಈ ಬಗ್ಗೆ ಮೊದಲೇ ಬರೆದುದನ್ನೂ ಓದಿದ್ದರೆ ಇಂತಹ ಮಾತುಗಳನ್ನು ನೀವು ಆಡುತ್ತಿರಲಿಲ್ಲ.

ಇನ್ನು ಮೋದಿ ಬಗ್ಗೆ ನಾನೆಷ್ಟು ಕಟುವಾಗಿ ಬರೆದರೂ–ಕೋಮು ಹಿಂಸೆ, ಭೂಸ್ವಾಧೀನ ಕಾಯಿದೆ, ಸರ್ಕಾರಿ ಸಂಸ್ಥೆಗಳ ಕೇಸರೀಕರಣ ಇತ್ಯಾದಿಗಳೂ ಸೇರಿದಂತೆ–ನಿಮಗೆ ತೃಪ್ತಿಯಿಲ್ಲ. ಈ ವಿಷಯದಲ್ಲಿ ನಿಮ್ಮದು ರಾಕ್ಷಸ ದಾಹ. ನಾನೇನೂ ಮಾಡಲಾರೆ. ಕಳೆದ ಹದಿನೈದು ವರ್ಷಗಳಿಂದ ಮನಮೋಹನ ಸಿಂಗ್ ಎಂಬ ವಿಶ್ವಬ್ಯಾಂಕ್ ಏಜೆಂಟನೊಬ್ಬ ಸುಳ್ಳು ವಿಳಾಸಕೊಟ್ಟು ಹಿಂಬಾಗಿಲಿನ ಮೂಲಕ ರಾಜ್ಯಸಭೆಗೆ ಆಯ್ಕೆಯಾಗಿ ನಮ್ಮ ಹಣಕಾಸು ಮಂತ್ರಿಯಾಗಿ, ನಂತರ ಪ್ರಧಾನ ಮಂತ್ರಿಯಾಗಿ ನಮ್ಮ ರಾಜಕಾರಣವನ್ನೇ ಕುಲಗೆಡಿಸಿದ್ದರ ವಿಷಾದದ ಹಿನ್ನೆಲೆಯಲ್ಲಿ, ಮೋದಿ ಜನರಿಂದ ನೇರವಾಗಿ ಆಯ್ಕೆಯಾದ ನೇತಾರನೆಂದು ಬರೆದುದನ್ನೂ ನೀವು ಸಹಿಸಲಾರಿರಿ ಎಂದರೆ ಪ್ರಜಾಪ್ರಭುತ್ವ ಕುರಿತ ನಿಮ್ಮ ಬದ್ಧತೆ ಎಷ್ಟೆಂಬುದನ್ನೂ ತೋರಿಸುತ್ತದಷ್ಟೆ. ನಾವು ಇತರರನ್ನು ಟೀಕಿಸುವ ಹಕ್ಕು ಇತರರ ಬಗ್ಗೆ ನಾವು ಮೊದಲು ನಿಷ್ಪಕ್ಷಪಾತವಾಗಿರುವುದರಿಂದ ಮಾತ್ರ ದೊರಕುತ್ತದೆ ಎಂದು ನಂಬಿರುವವನು ನಾನು. ನಿಮ್ಮ ಬಗ್ಗೆ ಗೊತ್ತಿಲ್ಲ.

ಸಿದ್ದರಾಮಯ್ಯ ನಿಮಗೆ ದೇವತಾಸ್ವರೂಪಿಯೇ ಆಗಿರಬಹುದು. ನನಗೆ ಅಲ್ಲ. ಎಲ್ಲ ಕಡೆಯ ಭ್ರಷ್ಟತೆ ಎದ್ದು ಕಾಣುತ್ತಿರುವಾಗ ದ್ವಿದಳ ರಾಜಕಾರಣದಲ್ಲಿ (ಅಂದರೆ, ಅದು ಅಥವಾ ಇದು) ನಂಬಿಕೆ ಇಟ್ಟುಕೊಳ್ಳುವುದು ಭ್ರಷ್ಟತೆಯಲ್ಲಿ ಪಾಲ್ಗೊಂಡಂತೆಯೇ ಸರಿ ಎಂದು ನಂಬಿರುವವನು ನಾನು. ಇಂದು ಮೋದಿ ಬಂದು ಭದ್ರವಾಗಿ ಕೂತಿದ್ದರೆ ಅದಕ್ಕೆ ಕಾಂಗ್ರೆಸ್ಸಿನ ಭ್ರಷ್ಟ ಮತ್ತು ಬೇಜವಾಬ್ದಾರಿ ರಾಜಕಾರಣ ಕಾರಣವಾಗಿದ್ದು, ಇಂತಹ ಕಾಂಗ್ರೆಸ್ಸನ್ನು ಸಾರಾಸಗಟಾಗಿ ಬೆಂಬಲಿಸುವುದೆಂದರೆ ಮೋದಿ ಸ್ಥಾನವನ್ನು

ಭದ್ರಗೊಳಿಸುವುದೇ ಎಂಬುದು ನಿಮಗೆ ಗೊತ್ತಾದರೆ ಒಳಿತು. ಜನವೇನೂ ಅವನು ಎಡ, ಇವನು ಬಲ ಎಂದು ನಿಮ್ಮಂತೆ ಲೆಕ್ಕ ಹಾಕಿ ತಮ್ಮ ನಿಲುವುಗಳನ್ನು ರೂಪಿಸಿಕೊಳ್ಳುವುದಿಲ್ಲ. ನೀವು ಆದಷ್ಟು ಬೇಗ ಪರಿಭಾಷೆಗಳ ಸಂಕೋಲೆಯಿಂದ ಹೊರಬರುವುದೊಳಿತು.

ಎಡ-ಬಲ ರಾಜಕಾರಣದ ಪರಿಭಾಷೆ ಇಂದು ತುಕ್ಕು ಹಿಡಿದುಹೋಗಿದೆ. ಆ ಪರಿಭಾಷೆಯಲ್ಲಿಯೇ ನೀವು ಮಾತನಾಡುತ್ತಾ ನನ್ನನ್ನು ಅಳೆಯುವಿರಾದರೆ ನನ್ನ ಆಕ್ಷೇಪಣೆ ಏನೂ ಇಲ್ಲ. ನಾನು ನಿಮ್ಮನ್ನಾಗಲೀ, ಇನ್ನಾರನ್ನಾಗಲೀ ಮೆಚ್ಚಿಸಲು ಬದುಕು ನಡೆಸುತ್ತಿಲ್ಲ. ನನ್ನ ಆತ್ಮಸಾಕ್ಷಿಯನ್ನು ಕಾಪಾಡಿಕೊಳ್ಳುವುದಷ್ಟೇ ನನ್ನ ಧರ್ಮ. ಈ ಧರ್ಮವೇ ನನ್ನ ರಾಜಕಾರಣ ಕೂಡ.

ಚಿಕ್ಕದಾಗಿ ಬರೆಯಲು ಹೊರಟು. ಇಷ್ಟು ದೊಡ್ಡದಾಯಿತು, ಕ್ಷಮಿಸಿ. ನಿಮ್ಮ ಮನಸ್ಸು ಕೆಟ್ಟಿದೆ; ಕ್ರೋಧಗೊಂಡಂತಿದೆ. ಹಾಗಾಗಿ ನಿಮಗೆ ನನ್ನ ಬಗ್ಗೆ ಎಲ್ಲೆಡೆ ತಪ್ಪುಗಳು ಕಾಣತೊಡಗಿವೆ; ನಾನೇನೂ ಮಾಡಲಾರೆ. ನನ್ನ ಬಗ್ಗೆ, ಪತ್ರಿಕೆಯ ಬಗ್ಗೆ ಯಾವುದೇ ತೀರ್ಮಾನ ತೆಗೆದುಕೊಳ್ಳಲು ನೀವು ಸ್ವತಂತ್ರರು ಎಂದು ನಾನು ಹೇಳುವ ಅಗತ್ಯವಿಲ್ಲವಷ್ಟೆ?

ನಿಮ್ಮ ಶ್ರೀಮತಿಗೆ ನಮ್ಮ ನೆನಪು, ವಂದನೆ ತಿಳಿಸಿ.

೨೧.೬.೨೦೧೫ **ಡಿ.ಎಸ್. ನಾಗಭೂಷಣ**

ಅನುಬಂಧ - ೨

ಜಾತಿ ಗಣತಿ ಮತ್ತು ಅಂತರ್ಜಾತಿ ವಿವಾಹ : ಇನ್ನೊಂದು ಪತ್ರ

ಪ್ರಿಯ ಶ್ರೀಮತಿ__________ ಅವರೇ,

ನಿಮ್ಮ ಪತ್ರ ಓದಿದೆ. ಆ ಬಗ್ಗೆ ನೀವು ಕರೆ ಮಾಡಿದಾಗಲೂ ಅದಕ್ಕೆ ಪ್ರತಿಕ್ರಿಯಿಸಿದೆ. ಆದರೂ ನಿಮಗೆ ಸಮಾಧಾನವಾದಂತೆ ಕಾಣುವುದಿಲ್ಲ. ನೀವು ಪತ್ರಿಕೆಯ ಈ ತಿಂಗಳ ಸಂಚಿಕೆಯಲ್ಲಿನ ನನ್ನ 'ಸಂಪಾದಕರ ಮಾತು'ಗಳನ್ನು ಗಮನವಿಟ್ಟು ಓದಿದ್ದರೆ ನೀವು ಹಾಗೆ ನನ್ನೊಂದಿಗೆ ವಾದ ಮಾಡುತ್ತಿರಲಿಲ್ಲವೆಂದೇ ನನ್ನ ಭಾವನೆ. ಇರಲಿ. ಇನ್ನೊಮ್ಮೆ ಇಲ್ಲಿ ನಿಮಗೆ ಕೆಲ ಮಾತುಗಳನ್ನು ಹೇಳಬಯಸುವೆ. ಆಸಕ್ತಿ ಇದ್ದರೆ ಓದಿ:

ಪತ್ರಿಕೆಯಲ್ಲಿ ನಡೆದ ಚರ್ಚೆ ಜಾತಿ ವ್ಯವಸ್ಥೆಯ ಕುರೂಪಗಳ ಬಗ್ಗೆಯಾಗಲೀ ಅಥವಾ ಅಸ್ಪೃಶ್ಯತೆಯ ಅವಮಾನಗಳ ಬಗ್ಗೆಯಾಗಲೀ ಅಲ್ಲ. ಅಥವಾ ಜಾತಿ ವಿನಾಶದ

ಸಾಧ್ಯಾಸಾಧ್ಯತೆಗಳ ಬಗೆಗೂ ಅಲ್ಲ. ಅವು ಆನುಷಂಗಿಕವಾಗಿ ಪ್ರಸ್ತಾಪಕ್ಕೆ ಬಂದಿವೆ ಅಷ್ಟೆ. ಹಾಗೆ ನೋಡಿದರೆ, ಈ ಎಲ್ಲವೂ ನಾನು ಕಂಡಂತೆಯೇ ಕಳೆದ ಐವತ್ತು ವರ್ಷಗಳಲ್ಲಿ ಸಾಕಷ್ಟು ಬಾರಿ ಚರ್ಚೆಯಾಗಿ ಸಮಾಜವಾದಿ ಸಮಾವೇಶಗಳಲ್ಲಿ ಮುಕ್ಕಾಲುಪಾಲು ಸಮಯವನ್ನು ತಿಂದು ಹಾಕಿವೆ. ಆದರೂ ಚರ್ಚೆ ಅಂತ್ಯಗೊಂಡಿಲ್ಲ. ಅದು ಬೇರೆ ವಿಷಯ.

ಆದರೆ ನಮ್ಮ ಪತ್ರಿಕೆ ಬಿ. ರಾಜೇಶ್‌ರ ಬರಹದ ಮೂಲಕ ಎತ್ತಿಕೊಂಡಿದ್ದು ಒಂದು ಸೀಮಿತ ಪ್ರಶ್ನೆಯನ್ನು ಮಾತ್ರ– ಮಾನವ ಮಂಟಪದ ಮುಖಂಡರು ನೀಡಿದ ಸೂಚನೆ ಮತ್ತು ಅದನ್ನು ಒಪ್ಪದ ಕೆಲ ಸದಸ್ಯರ ವಾದದಲ್ಲಿನ ಸಂದಿಗ್ಧತೆಗಳು ಮತ್ತು ವರ್ತನೆಗಳನ್ನು. ಅಂದರೆ, ಜಾತಿ ನಿರ್ಮೂಲನೆಯ ತತ್ವ ಬದ್ಧತೆಯಿಂದ ಅಂತರ್ಜಾತಿ ವಿವಾಹವಾದವರು ಯಾವುದೇ ಕಾರಣಕ್ಕೆ ಮತ್ತೆ ತಂತಮ್ಮ ಹುಟ್ಟು ಜಾತಿಗಳೊಂದಿಗೆ ಗುರುತಿಸಿಕೊಳ್ಳುವುದು 'ಮಾನವ ಮಂಟಪ'ದ ನಿರ್ಮಾಣದ ಉದ್ದೇಶವನ್ನೇ ಭಂಗಗೊಳಿಸುವುದು ಎಂಬುದು 'ಮಾನವ ಮಂಟಪ'ದವರ ನಿಲುವಾಗಿತ್ತು. ಈ ನಿಲುವಿನ ಜೊತೆಗೇ ಮಾನವ ಮಂಟಪದ ಮುಖಂಡರು, ಅಂತರ್ಜಾತಿ ವಿವಾಹವಾದವರು ತಂತಮ್ಮ ಮೂಲ ಜಾತಿಗಳನ್ನು ದಾಖಲಿಸಲು ಸ್ವತಂತ್ರರು; ಆದರೆ ಮಾನವ ಮಂಟಪ ಜಾತಿ ದಾಖಲಿಸಿ ಎಂದು ಸೂಚಿಸಲು ಸಾಧ್ಯವಿಲ್ಲ. ಏಕೆಂದರೆ ಅದು ಅದರ ಸ್ಥಾಪನೋದ್ದೇಶಕ್ಕೆ ತದ್ವಿರುದ್ಧವಾದದ್ದು ಎಂದೂ ಅವರು ಸ್ಪಷ್ಟಪಡಿಸಿದ್ದಾರೆ. ಇದು ಕೆಲವರಿಗೆ ಒಪ್ಪಿಗೆಯಾಗದಿದ್ದರೆ ಅವರು 'ಮಾನವ ಮಂಟಪ'ದಿಂದ ದೂರವಾಗಲು ಸ್ವತಂತ್ರರಿದ್ದರು. ಹಾಗೇ 'ಮಾನವ ಮಂಟಪ'ದ ನಿಲುವನ್ನು ಸಾರ್ವಜನಿಕವಾಗಿ ಟೀಕಿಸಲೂ ಸ್ವತಂತ್ರರಿದ್ದರು. ಅದನ್ನು ಬಿಟ್ಟು ಈ ಕೆಲವರು ಬೆಂಗಳೂರಿಂದ ಬಂದು ಮಾನವ ಮಂಟಪದ ಹೆಸರಿನಲ್ಲಿಯೇ 'ಮಾನವ ಮಂಟಪ'ದ ಘೋಷಿತ ನಿಲುವಿಗೆ ವಿರುದ್ಧವಾದ ಹೇಳಿಕೆ ನೀಡಿದ್ದು ಉದ್ಧಟತನವೇ ಸರಿ. ಇಂತಹ ವರ್ತನೆಗಳಿಂದಲೇ ನಮ್ಮಂತಹ ಪ್ರಗತಿಪರರನ್ನು ಮತ್ತು ಅವರು ಕಟ್ಟಿದ ವೇದಿಕೆ–ಸಂಸ್ಥೆಗಳನ್ನು ಯಾರೂ ಗಂಭೀರವಾಗಿ ಪರಿಗಣಿಸದ ಹಾಗೆ ಆಗಿದೆ.

ಇವರ ಸರಿಯಾದ ಹಾದಿ, 'ಮಾನವ ಮಂಟಪ'ದಿಂದ ನಾವು ದೂರಾಗಿದ್ದೇವೆ ಎಂದು ಸಾರ್ವಜನಿಕವಾಗಿ ಘೋಷಿಸಿಕೊಂಡು, ಬೇಕಾದರೆ (ವಿಧ್ಯುಕ್ತವಾಗಿ) ತಮ್ಮದೇ 'ಮಾನವ ಮಂಟಪ' ಸ್ಥಾಪಿಸಿಕೊಂಡು ತಮಗೆ ಸರಿಯೆನಿಸಿದ ಹೇಳಿಕೆಗಳನ್ನು ನೀಡಬಹುದಿತ್ತು. ಬದಲಿಗೆ ನಿಮ್ಮ ಗೆಳೆಯರು ತುಮಕೂರಿನಿಂದ 'ಮಾನವ ಮಂಟಪ'ದ ಹೆಸರಿನಲ್ಲಿಯೇ ತಮ್ಮ ವಾದಕ್ಕನುಸಾರವಾದ ಹೇಳಿಕೆ ನೀಡಿದರು. ನಂತರ ತುಮಕೂರು ಮಾನವ ಮಂಟಪ ಎಂಬ ಹೆಸರಿನಲ್ಲಿ ಬೆಂಗಳೂರಿನಿಂದ ಮತ್ತೊಂದು ಹೇಳಿಕೆ ನೀಡಿದರು. 'ಮಾನವ ಮಂಟಪ'ದ ಸ್ಥಾಪಕ ಸದಸ್ಯನೂ, 'ಒಲವು' ಎಂಬ ಅದರ ಮೊದಲ ಸಮಾವೇಶದ ಸ್ಮರಣ ಸಂಚಿಕೆಯ ಸಂಪಾದಕನೂ ಆಗಿರುವ ನಾನೀಗ ನನ್ನದೇ ಕಾರಣಗಳಿಂದಾಗಿ ಅದರಿಂದ ದೂರಾಗಿರುವೆನಾದರೂ, ನಾವು ಸ್ಥಾಪಿಸಿದ

ಸಂಸ್ಥೆಯ ನಿಲುವು–ಆಶಯಗಳ ಬಗ್ಗೆ ಗೊಂದಲ ಸೃಷ್ಟಿಸಿದರೆ, ಸಾರ್ವಜನಿಕರ ಕಣ್ಣಲ್ಲಿ ಅದರ ಬಿಂಬ ಏನಾದೀತು ಎಂಬ ಪರಿವೆಯ ಹಿನ್ನೆಲೆಯಲ್ಲಿ ನಾನು ಈ ಮಾತುಗಳನ್ನು ಆಡುತ್ತಿದ್ದೇನೆ, ಅಷ್ಟೆ.

ನೆನಪಿರಲಿ: 'ಮಾನವ ಮಂಟಪ'ವನ್ನು ರಚಿಸಿದವರು ಸಮಾಜವಾದಿಗಳು. ಹಾಗಾಗಿಯೇ ನನಗೆ ಈ ಬೆಳವಣಿಗೆ ಹೆಚ್ಚಿನ ಜಿಗುಪ್ಸೆ ಉಂಟುಮಾಡಿದೆ. ಸಮಾಜವಾದಿಗಳು (ನಿರ್ದಿಷ್ಟವಾಗಿ ಲೋಹಿಯಾ ಅನುಯಾಯಿಗಳು) ತಮ್ಮ ಇತಿಹಾಸದುದ್ದಕ್ಕೂ ಇಂತಹ ಅಶಿಸ್ತಿನ ವಿನಾಶಕಾರಿ ಚಟುವಟಿಕೆಗಳಲ್ಲೇ ತೊಡಗಿಕೊಂಡು ಬಂದು ಎಲ್ಲ ವಿಶ್ವಾಸಾರ್ಹತೆಯನ್ನೂ ಕಳೆದುಕೊಂಡಿದ್ದಾರೆ. ಹೊಸ ತಲೆಮಾರಿನವರಾದರೂ ಹೊಸ ವಿಶ್ವಾಸಾರ್ಹತೆಯನ್ನು ಕಟ್ಟಿಕೊಳ್ಳುತ್ತಾರೇನೋ ಎಂದು ಆಶಿಸುವ ಹೊತ್ತಿನಲ್ಲಿ ಮತ್ತೆ ಅದೇ ವರ್ತನೆ ಕಂಡು ಬರುತ್ತಿರುವುದು ನನಗೆ ನಿರಾಶೆ ಉಂಟು ಮಾಡಿದೆ.

ಆದರೂ ಪತ್ರಿಕೆಯಲ್ಲಿ ನಾನು ಎರಡೂ ಕಡೆಯ ವಾದಗಳನ್ನು ವಿವರವಾಗಿಯೇ ಪ್ರಕಟಿಸಿದ್ದೇನೆ ಮತ್ತು ಕೊನೆಯಲ್ಲಿ ನನಗನ್ನಿಸಿದ್ದನ್ನೂ ದಾಖಲಿಸಿರುವೆ. ಇದನ್ನು ಈವರೆಗಿನ ಮೂರು ಸಂಚಿಕೆಗಳನ್ನೂ ಮೀರಿ ಇನ್ನು ಮುಂದುವರೆಸಲು ಸಾಧ್ಯವಿಲ್ಲ. ಸಮಾಜವಾದದ ಬೇರೆ ಪ್ರಸ್ತುತ ಆಯಾಮಗಳ ಮಂಡನೆ, ಚರ್ಚೆ, ಪರಿಶೀಲನೆಗೂ ಅವಕಾಶವಾಗಬೇಕು. ಮೊದಲೇ ಸಮಾಜವಾದಿಗಳೆಂದರೆ (ನಮ್ಮದು ಸಮಾಜವಾದಿ ಮಾಸಿಕ ಎಂಬುದು ನೆನಪಿರಲಿ) ಜಾತಿವ್ಯಸನಗ್ರಸ್ತರು ಎಂದೇ ಪ್ರಸಿದ್ಧರಾಗಿದ್ದಾರೆ. ಇದಕ್ಕೆ ತಕ್ಕಂತೆ, ಕಳೆದ ನಾಲ್ಕು ವರ್ಷಗಳಲ್ಲಿ ನಮ್ಮ ಪತ್ರಿಕೆ ಬರುತ್ತಿದೆಯೋ ಇಲ್ಲವೋ ಎಂದೂ ವಿಚಾರಿಸದವರು ಮತ್ತು ಈವರೆಗೆ ಪತ್ರಿಕೆಯಲ್ಲಿ ಬಂದ ಬೇರಾವುದೇ ಸಮಾಜವಾದಿ ಬರಹಗಳಿಗೆ ಒಂದು ಸಾಲೂ ಪ್ರತಿಕ್ರಿಯಿಸದವರು ಈ ಜಾತಿ ಸಂವಾದ ಆರಂಭವಾಗುತ್ತಿದ್ದಂತೆ ಪತ್ರಿಕೆಯ ಬಗ್ಗೆ ಕಾಳಜಿ ವಹಿಸಿ, ವಿಚಾರಿಸಿ, ಕೆಲವರು ತಮ್ಮ ಚಂದಾ ನವೀಕರಿಸಿ ಈ ಸಂವಾದದಲ್ಲಿ ಪಾಲ್ಗೊಳ್ಳಲು ಉತ್ಸಾಹ ತೋರುತ್ತಿದ್ದಾರೆ! ಇವರಿಗೆ ಒಂದು ಮಾತು ಹೇಳಬಯಸುವೆ: ಸಮಾಜವಾದಕ್ಕೆ ಜಾತಿ ಪ್ರಶ್ನೆಯ ಆಯಾಮ ಮಾತ್ರವಿಲ್ಲ. ಅದು ತಂತ್ರಜ್ಞಾನ, ವಿಕೇಂದ್ರೀಕರಣ, ರಾಜ್ಯ ತತ್ವ ಮತ್ತು ಪ್ರಜಾಪ್ರಭುತ್ವದ ಪರಿಕಲ್ಪನೆಗಳ ಬಹುತ್ವ, ಪರಿಸರದ ಪ್ರಶ್ನೆ, ಬದಲಾಗುತ್ತಿರುವ ಸಮಾನತೆಯ ಅರ್ಥ, ಸಾಧ್ಯ ಸಮಾನತೆಯ ಸಾಧನೆಯ ಉಪಾಯಗಳು, ಧರ್ಮ ನಿರಪೇಕ್ಷತೆಯ ಅರ್ಥ, ಮಾನವ ಜನಾಂಗದ ಹೊಸ ಅನುಸಂಧಾನ ಮತ್ತು ಐಕ್ಯತೆಯ ತತ್ವ, ಗುರಿ ಮತ್ತು ಮಾರ್ಗಗಳ ಅಭಿನ್ನತೆ ಇತ್ಯಾದಿಗಳ ಚರ್ಚೆಗಳನ್ನೂ ಒಳಗೊಂಡಿದ್ದು ಅವೆಲ್ಲವೂ ಪತ್ರಿಕೆಯ ಈವರೆಗಿನ ೪೭ ಸಂಚಿಕೆಗಳಲ್ಲಿ ಒಂದಲ್ಲ ಒಂದು ನೆಲೆಯಲ್ಲಿ ಮತ್ತು ರೂಪದಲ್ಲಿ ಮಂಡಿಸಲ್ಪಟ್ಟಿವೆ. ಆದರೆ ಇವರಾರಿಗೂ ಅದು ಬೇಕಿಲ್ಲವಾಗಿದೆ. ಅಂತವರಿಗೆ ಹೇಳಬೇಕಾದ ಒಂದು ಮಾತು: ಸಮಾಜವಾದ ಒಂದು ಸಮಗ್ರ ತತ್ವವಾಗಿದ್ದು, ಒಂದು ಆಯಾಮವನ್ನು ಬಿಟ್ಟು ಇನ್ನೊಂದಿಲ್ಲ. ಹಾಗಾಗಿ, ಇತರ ಆಯಾಮಗಳ ಚರ್ಚೆಯ

ಜೊತೆಗೇ ಜಾತಿ ಪ್ರಶ್ನೆಯ ಚರ್ಚೆ ಬಂದಾಗ ಮಾತ್ರ ಅದಕ್ಕೊಂದು ಪ್ರಸ್ತುತತೆ ಬರುತ್ತದೆ. ಇದು ಪತ್ರಿಕೆಯ ಒಟ್ಟು ನಿಲುವು.

* * *

ಇನ್ನು ನೀವು ದೂರವಾಣಿ ಮೂಲಕ ನನ್ನೊಂದಿಗೆ ಮಾಡಿದ ವಾದದ ಬಗ್ಗೆ. ಇದು 'ಮಾನವ ಮಂಟಪ'ದ ಜಗಳ ಕುರಿತ ನನ್ನ ವೈಯಕ್ತಿಕ ನಿಲುವನ್ನೂ ನಿಮಗೆ ಸ್ಪಷ್ಟಪಡಿಸಬಹುದು: ಸಮಾಜವಾದಿಗಳು ಮತ್ತು ದಲಿತ ಸಂಘರ್ಷ ಸಮಿತಿ (ಹಾಗೂ ರೈತ ಸಂಘದ) ಗೆಳೆಯರ ಜೊತೆ ಕಳೆದ ನಲವತ್ತು ವರ್ಷಗಳಿಂದ ಅಭಿನ್ನವಾಗಿ ಬೆರೆಯುತ್ತಾ ಬಂದಿರುವ ನಾನು ಅಸ್ಪೃಶ್ಯ ಜಾತಿಗಳಿಗೆ (ಮತ್ತು ಕೆಲ ಶೂದ್ರ ಜಾತಿಗಳಿಗೆ) ಸೇರಿದ ಗೆಳೆಯರ ವಿಷಯದಲ್ಲಿ ಎರಡು ಪ್ರವೃತ್ತಿಗಳನ್ನು ಗಮನಿಸಿದ್ದೇನೆ. ಕೆಲವರು ಜಾತಿ ಮತ್ತು ಅಸ್ಪೃಶ್ಯತೆಯ ಹೆಸರಿನಲ್ಲಿ ಸಮಾಜ ಇತಿಹಾಸದುದ್ದಕ್ಕೂ ಮಾಡಿಕೊಂಡ ಬಂದ ಅನ್ಯಾಯದ ಅರಿವು ಸಮಾಜಕ್ಕೆ ಆಗಿದೆ ಮತ್ತು ಅದು ಹಲವು ಪಶ್ಚಾತ್ತಾಪ ರೂಪದ ಪರಿಹಾರಗಳನ್ನೂ ಕಂಡುಕೊಂಡಿದೆ ಎಂಬುದನ್ನು ಸಹಾನುಭೂತಿಯಿಂದ ಅರಿತು ಸಮಾಜದ ಮುಖ್ಯವಾಹಿನಿಯೊಂದಿಗೆ ಬೆರೆತು ಜಾತಿ ನಿರ್ಮೂಲನೆಯ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದರೆ, ಇನ್ನು ಕೆಲವರು ಈ ಪರಿಹಾರ ಕ್ರಮಗಳ ಪ್ರಯೋಜನ ಪಡೆದೂ, ಈ ಪ್ರಕ್ರಿಯೆ ಸಹಜವಾಗಿಯೇ ಬಹು ದೀರ್ಘಕಾಲಿಕವಾದದ್ದು ಎಂಬ ಪರಿವೆ ಮತ್ತು ತಾಳ್ಮೆ ಇಲ್ಲದೆ, ಸದಾ ಗೋಳು ಕರೆಯುತ್ತಾ ನೆಪ ಸಿಕ್ಕಾಗಲೆಲ್ಲ ಜಾತಿ ವ್ಯವಸ್ಥೆಯ ಕರಾಳತೆಯನ್ನು ನೆನೆಪಿಸಿಕೊಡುತ್ತಾ ಜಾತಿ ಪದ್ಧತಿಗೆ ಅಂತ್ಯವಿಲ್ಲ ಎಂದು ಸ್ವಯಂ ಮರುಕದಿಂದ ಹಾಹಾಕಾರ ಮಾಡುತ್ತಿರುತ್ತಾರೆ. ಅವರಿಗೆ ಅದೊಂದು ಸಮಾಧಾನ, ಮಾನಸಿಕ ಸಮತೋಲನ ನೀಡಬಹುದೇನೋ ತಿಳಿಯದು.

ನಿಜ, ಸಮಾಜದಲ್ಲಿ ಈಗಲೂ ಜಾತಿ ಇದೆ; ಅದರ ಕರಾಳ ಆಚರಣೆಗಳೂ ಇವೆ. ಜೊತೆಯಲ್ಲೇ ಅದನ್ನು ವಿರೋಧಿಸುವವರೂ, ಅದರ ನಿರ್ಮೂಲನೆಗೆ ಪ್ರಯತ್ನಪಡುತ್ತಿರುವವರೂ ಇದ್ದಾರೆ. ಇದನ್ನು ಈ ಎರಡನೇ ಪ್ರವೃತ್ತಿಯವರು ಗಮನಿಸಬೇಕು ಮತ್ತು ಅವರಿಗೆ ಇವರು ಬೆಂಬಲವಾಗಿ ನಿಲ್ಲಬೇಕು. ಬದಲಿಗೆ ಇವರು ತಮ್ಮ ಈ ಪ್ರವೃತ್ತಿಯನ್ನು ಪ್ರೋತ್ಸಾಹಿಸುವಂತಹ (ಶಾಶ್ವತವಾದ) ಜನಸಂಖ್ಯಾಧರಿತ ಜಾತಿ ಮೀಸಲಾತಿಯೊಂದೇ ಜಾತಿ ವಿರುದ್ಧದ ಪರಿಣಾಮಕಾರಿ ಅಸ್ತ್ರ ಎಂದು ನಂಬಿರುವ (ಪರೋಕ್ಷ) ಜಾತಿವಾದಿ ಶಕ್ತಿಗಳ ಜೊತೆ ಗುರುತಿಸಿಕೊಳ್ಳಲು ಉತ್ಸುಕರಾಗುವುದು ವಿಷಾದನೀಯ.

ಪತ್ರಿಕೆಯಲ್ಲಿನ 'ಸಂಪಾದಕರ ಮಾತು'ಗಳಲ್ಲಿ ನಾನು ತಿಳಿಸಿದಂತೆ ಇದಕ್ಕೆ ಇನ್ನೊಂದು ಕಾರಣವೂ ಇದೆ: ಜಾತಿ ವಿರೋಧಿ ಗುಂಪುಗಳು ಮತ್ತೆ ಮತ್ತೆ ಪರಸ್ಪರ ಸೇರುವುದಿಲ್ಲ. ವಿಚಾರ ವಿನಿಮಯ ಮಾಡಿಕೊಂಡು ತಮ್ಮದೇ ಸಾಮಾಜಿಕತೆಯನ್ನು ಕಟ್ಟಿಕೊಳ್ಳುತ್ತಿಲ್ಲ. ಹಾಗಾಗಿದ್ದರೆ, ಈ ಸಮುದಾಯದ ಆತ್ಮವಿಶ್ವಾಸ ಹೆಚ್ಚುತ್ತಿತ್ತು. ಬದಲಿಗೆ ಇವರೂ

ಜಾಗತೀಕರಣದ ಸುಳಿಗೆ ಸಿಕ್ಕು ತಾವಾಯಿತು, ತಮ್ಮ ಕುಟುಂಬದ ಉನ್ನತಿಯಾಯಿತೆಂದು ಸ್ವಾರ್ಥಿಗಳಾಗಿ ದ್ವೀಪಗಳಾಗಿ ಹೋಗಿದ್ದಾರೆ. ಈ ದ್ವೀಪತ್ವವೇ ಇಂತಹ ನಿರ್ಣಾಯಕ ಸಂದರ್ಭಗಳಲ್ಲಿ ನಾವು ನಮ್ಮ ಘನ ಮೂಲೋದ್ದೇಶವನ್ನೇ ಮರೆತು ಕೇವಲ ಅಲ್ಪಕಾಲಿಕ ಲಾಭ-ಪ್ರಯೋಜನ ಬುದ್ಧಿಯವರಾಗಲು ಕಾರಣವೆಂದು ತೋರುತ್ತದೆ.

ಎರಡು ಮೂರು ವರ್ಷಗಳ ಹಿಂದೆ ತುಮಕೂರಿನಲ್ಲಿ ನಡೆದ (ಸಮೃದ್ಧ) ಮದುವೆಯೊಂದರಲ್ಲಿ ಎರಡು ಸಮಾಜವಾದಿ ಮತ್ತು ಅಂತರ್ಜಾತಿ ವಿವಾಹಿತ ಕುಟುಂಬಗಳ ಹೆಂಗಸರ ಮಧ್ಯೆ ನಾನು ಕೇಳಿದ ಮಾತು: 'ಅಯ್ಯೋ ನಿಮ್ಮನ್ನು ನೋಡಿ ಎಷ್ಟು ಕಾಲವಾಯಿತು! ಅಂದಹಾಗೆ ನೀವು ಈಗ ಆ ಬಡಾವಣೆಯಲ್ಲಿ ಇಲ್ಲವಾ? ನಿಮ್ಮ ಮನೆಗೊಮ್ಮೆ ಬರಬೇಕು!'

ವಿಶ್ವಾಸಪೂರ್ವಕ ವಂದನೆಗಳೊಂದಿಗೆ,

೨೫.೬. ೨೦೧೫

ಡಿ.ಎಸ್. ನಾಗಭೂಷಣ

ಇದೇ ಲೇಖಕರ ಇತರ ಕೃತಿಗಳು

ಗಮನ (ಸಾಹಿತ್ಯ ವಿಮರ್ಶೆ–ವಿಚಾರ)

ಅನೇಕ (ಸಾಹಿತ್ಯ ವಿಮರ್ಶೆ–ವಿಚಾರ)

ಕುವೆಂಪು ಸಾಹಿತ್ಯ ದರ್ಶನ (ಕುವೆಂಪು ಸಾಹಿತ್ಯಾವಲೋಕನ)

ಈ ಭೂಮಿಯಿಂದ ಆ ಆಕಾಶದವರೆಗೆ (ಸಾಹಿತ್ಯ ವಿಮರ್ಶೆ–ವಿಚಾರ)

ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ (ವ್ಯಕ್ತಿ ಹಾಗೂ ಸಾಹಿತ್ಯ ಪರಿಚಯ)

ಸಮತೆಯ ಸಾಕಾರಮೂರ್ತಿ ರಮಣ ಮಹರ್ಷಿ (ರಮಣ ದರ್ಶಿಕೆ)

ರೂಪರೂಪಗಳನು ದಾಟಿ (ಈವರೆಗಿನ ಸಾಹಿತ್ಯ ವಿಮರ್ಶೆಗಳ ಸಂಗ್ರಹ)

ಭೂಮಿಯನ್ನು ಹಂಚಿಕೊಳ್ಳುವ ಬಗೆಗಳು (ಆಧುನಿಕತೆ, ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ ಕುರಿತ ಲೇಖನಗಳು)

ಕನ್ನಡ ಮನಸ್ಸು ಮತ್ತು ಇತರ ಲೇಖನಗಳು (ಸಂಕೀರ್ಣ)

ಇಂದಿಗೆ ಬೇಕಾದ ಗಾಂಧಿ (ಗಾಂಧಿ ಪ್ರಸ್ತುತತೆ ಕುರಿತ ಬರಹಗಳು)

ಕಾಲಕ್ರಮ ('ಹೊಸ ಮನುಷ್ಯ' ಪತ್ರಿಕೆಯ ಸಂಪಾದಕೀಯ ಮತ್ತು ಕೆಲ ಪೂರಕ ಬರಹಗಳು)

ನೀರೆಲ್ಲವೂ ತೀರ್ಥ (ಸಾಹಿತ್ಯಿಕ–ಸಾಂಸ್ಕೃತಿಕ ಟಿಪ್ಪಣಿಗಳು)

ಲೋಹಿಯಾ ಸಮಾಜವಾದ ದರ್ಶನ (ಸಮಾಜವಾದ ಪರಿಚಯ, ವಿಶ್ಲೇಷಣೆ)

ಮರಳಿ ಬರಲಿದೆ ಸಮಾಜವಾದ! (ಸಮಾಜವಾದಿ ವಿಚಾರ ವೈವಿಧ್ಯ)

ಬೇರು ಬಿಳಲು (ಸಮಾಜವಾದಿ ಸಂಕಥನಗಳು–೧)

ಇದು ಭಾರತ! ಇದು ಭಾರತ!! (ಸಮಾಜವಾದಿ ಸಂಕಥನಗಳು–೨)

ವಸಿಷ್ಠರು ಮತ್ತು ವಾಲ್ಮೀಕಿಯರು (ಸಮಾಜವಾದಿ ಸಂಕಥನಗಳು–೩)

ಇಲ್ಲಿ ಯಾವುದೂ ಅಮುಖ್ಯವಲ್ಲ (ಸಮಾಜವಾದಿ ಸಂಕಥನಗಳು–೪)

ಕಂಡದ್ದು ಕಾಡಿದ್ದು (ಸಮಾಜವಾದಿ ಸಂಕಥನಗಳು–೫)

ಲೋಹಿಯಾ ಜೊತೆಯಲ್ಲಿ (ಲೋಹಿಯಾ-ಗಾಂಧಿ-ಅಂಬೇಡ್ಕರ್-ಮಾರ್ಕ್ಸ್ ಚಿಂತನೆಗಳು)

ಕನ್ನಡ-ಕರ್ನಾಟಕ: ಸಂಕಥನಗಳು (ಕನ್ನಡ ನಾಡು ನುಡಿ ಚಿಂತನೆಗಳು)

ರೈತ ಭಾರತ: ಅವಸಾನದ ಅಂಚಿನಲ್ಲಿ (ರೈತರ ಆತ್ಮಹತ್ಯೆ ವಿಶ್ಲೇಷಣೆ)

ಒಂದನೇ ತರಗತಿಯಿಂದ ಇಂಗ್ಲಿಷ್ ಏಕೆ ಬೇಡ? (ಭಾಷಾ ನೀತಿ ಜಿಜ್ಞಾಸೆ)

ಲೋಹಿಯಾ ಕೈಪಿಡಿ

ಲೋಹಿಯಾ ವಾಣಿ

ಜೆಪಿ ಕೈಪಿಡಿ

ಸಂಪಾದನೆ:

ನಮ್ಮ ಸಮಾಜವಾದಿಗಳು (ಸಮಾಜವಾದಿ ನಾಯಕರ ಪರಿಚಯ ಲೇಖನಗಳು)

ಲೋಹಿಯಾ: ವ್ಯಕ್ತಿ-ವಿಚಾರ-ವಿಮರ್ಶೆ (ಲೋಹಿಯಾ ಕುರಿತ ಅಧ್ಯಯನ)

ಕುವೆಂಪು: ಒಂದು ಪುನರನ್ವೇಷಣೆ (ಶತಮಾನೋತ್ಸವ ಸಂಪುಟ)

ಆ ಗಣರಾಜ್ಯ ಈ ಕರ್ನಾಟಕ (ಸುವರ್ಣ ಕರ್ನಾಟಕ ಸಂಪುಟ)

ಒಲವು (ಅಂತರ್ಜಾತಿ ವಿವಾಹಿತರ ಮೊದಲ ಸಮಾವೇಶದ ಸ್ಮರಣ ಸಂಪುಟ)

'ಹೊಸ ಮನುಷ್ಯ' ಮಾಸಿಕ (ಸಮಾಜವಾದಿ ಚಿಂತನೆಯ ನಿಯತಕಾಲಿಕ)

ಸಹ ಸಂಪಾದನೆ:

ಕಾಡಿನ ಹುಡುಗ ಕೃಷ್ಣ (ಶ್ರೀಕೃಷ್ಣ ಆಲನಹಳ್ಳಿ ನೆನಪಿನ ಸಂಪುಟ)

ಮಾಸ್ತಿ ಸಾಹಿತ್ಯ: ಸಮಗ್ರ ದರ್ಶನ (ಶತಮಾನೋತ್ಸವ ಸಂಪುಟ)

ಹಣತೆ (ಡಾ. ಜಿ. ಎಸ್ ಶಿವರುದ್ರಪ್ಪ ಅಭಿನಂದನ ಗ್ರಂಥ)


ಉರಿದ ಪಂಜು (ಕೆ. ರಾಮದಾಸ್ ಸ್ಮರಣ ಸಂಪುಟ)

ನಮ್ಮ ಶಾಮಣ್ಣ (ಕಡಿದಾಳು ಶಾಮಣ್ಣ ಗೌರವ ಗ್ರಂಥ)

ಸಾಹಿತ್ಯ ಸಂವಾದ (ಸಾಹಿತ್ಯ ದ್ವೈಮಾಸಿಕ)

ಅನುವಾದ:

ಜೆಪಿ ಸೆರೆಮನೆ ದಿನಚರಿ



“...ನಾನು ನನ್ನ ಪತ್ನಿ, ಅಣ್ಣನ ಮಗ, ಸೊಸೆ, ಮೊಮ್ಮಗಳೊಂದಿಗೆ ನನ್ನೂರ ಚೆಲುವನ್ನು ವರ್ಣಿಸುತ್ತಾ ವಾಹನವೊಂದರಲ್ಲಿ ಪ್ರವೇಶಿಸುತ್ತಿದ್ದಂತೆ ನಾನು ನನ್ನೂರನ್ನು ಪ್ರವೇಶಿಸಿದ್ದೇನೆ ಎಂಬುದೇ ಗೊತ್ತಾಗದಷ್ಟು ಅದು ಕಳೆಗುಂದಿತ್ತು. ಕೆರೆ ಕೋಡಿಯಿಂದ ಆರಂಭವಾಗುತ್ತಿದ್ದ ಎರಡೂ ಬದಿಯ ಕಾಲುವೆಗಳ ನೀರು, ಅದರ ಸನಿಹದ ಗದ್ದೆ-ತೋಟಗಳ ಮತ್ತು ಗಿಡಗಂಟೆಗಳ ಹಸಿರು ಕಾಣೆಯಾಗಿ, ಕಾಲುವೆ ಮಠ ಇತ್ಯಾದಿ ಊರಾರಂಭದ ಕಟ್ಟಡಗಳೆಲ್ಲ ಹಾಳು ಬಿದ್ದಂತೆ ಕಂಡು ನನ್ನೂರನ್ನು ನನ್ನ ಕುಟುಂಬಕ್ಕೆ ತೋರಿಸುವ ಉತ್ಸಾಹವೆಲ್ಲ ಇಳಿದುಹೋಯಿತು. ಸೀದಾ ನಮ್ಮ ಪ್ರಾಥಮಿಕ ಶಾಲೆಗೆ ಹೋದರೆ ನಮ್ಮ ತಂದೆ ಸಹೋದ್ಯೋಗಿಗಳು ಮತ್ತು ವಿದ್ಯಾರ್ಥಿಗಳ ಸಹಕಾರದಲ್ಲಿ ಶಾಲೆಯ ಆವರಣದಲ್ಲಿ ಸೊಂಪಾಗಿ ಬೆಳೆಸಿದ್ದ ಹೂವಿನ ತೋಟ ಮತ್ತು ಅದರ ಮಧ್ಯೆ ಇದ್ದ ದೊಡ್ಡ ಹಲಸಿನ ಮತ್ತು ಸಂಪಿಗೆಮರಗಳು ಹೇಳಹೆಸರಿಲ್ಲದೆ ಕಾಣೆಯಾಗಿದ್ದವು. ಇದಕ್ಕೆ ಸಾಂಕೇತಿಕವೆಂಬಂತೆ ನಮ್ಮ ತಂದೆ ಪಾಠ ಮಾಡುತ್ತಿದ್ದ ಶಾಲಾಕೊಠಡಿ ಕುಸಿತದ ಅಪಾಯ ಎದುರಿಸುತ್ತಾ ಬೀಗ ಜಡಿದುಕೊಂಡಿತ್ತು. ಮೂಲೆಯಲ್ಲೊಂದು ಸಿಮೆಂಟಿನ ಗಣೇಶನ ಮಂಟಪ ಭಣಗುಟ್ಟುತ್ತಾ ಅಲ್ಲಿನ ಇತಿಹಾಸದ ದುರಂತ ಕಥೆಯನ್ನು ಹೇಳುತ್ತಿತ್ತು. ಸ್ವಲ್ಪ ಪಕ್ಕಕ್ಕೆ ಹೋಗಿ ನೋಡಿದರೆ ನಾವು ಬೇಸಿಗೆಯಲ್ಲಿ ಮರಕೋತಿಯಾಟವಾಡುತ್ತಿದ್ದ ಮತ್ತು ವಾರದ ಸಂತೆಗೆ ಆಶ್ರಯ ನೀಡುತ್ತಿದ್ದ ದಟ್ಟ ಮಾವಿನ ತೋಪು ಅವನತಿಯ ಹಂತದಲ್ಲಿತ್ತು. ಅದರ ಹಿಂದೆ ದಪ್ಪ ಮತ್ತು ವಿಶಾಲ ಕೆಸವಿನ ಎಲೆಗಳಿಂದ ಆವೃತವಾಗಿರುತ್ತಿದ್ದ ದೊಡ್ಡ ಕಾಲುವೆ ಎಷ್ಟೋ ಕಾಲದಿಂದ ನೀರಿನ ಪಸೆಯೇ ಕಾಣದಂತೆ ಒಣಗಿ ನಿಂತಿತ್ತು. ಊರಿಗೆ ಇಂಗ್ಲಿಷ್ ಶಾಲೆಗಳ ರೋಗ ಬಡಿದಿದೆ ಎಂಬುದು ನನಗೆ ಖಚಿತವಾಗತೊಡಗಿತ್ತು...”

(ನೆಲಮಂಗಲ ತಾಲ್ಲೂಕು ಸಾಹಿತ್ಯ ಸಮ್ಮೇಳನದ ಭಾಷಣದಿಂದ)

ISBN 978-93-81885-52-9

ರೂಪ ಪ್ರಕಾಶನ

